ಶ್ರೀಮದ್ವಾಲ್ಮೀಕಿರಾಮಾಯಣ

ಭಾರತ ದರ್ಶನ ಪ್ರಕಾಶನ

ಶ್ರೀರಾಮಃ ಶರಣಂ ಮಮ



ಶ್ರೀರಾಮಃ ಶರಣಂ ಮಮ

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್॥

ಯುದ್ಧ ಕಾಂಡ

ಸಂಪುಟ ೮

ಭಾರತ ದರ್ಶನ ಪ್ರಕಾಶನ

ಶ್ರೀಮದ್ವಾಲ್ಮೀಕಿರಾಮಾಯಣ

ವಾಲ್ಮೀಕಿಗಿರಿಸಂಭೂತಾ
ರಾಮಸಾಗರಗಾಮಿನೀ ।
ಪುನಾತು ಭುವನಂ ಪುಣ್ಯಾ
ರಾಮಾಯಣಮಹಾನದೀ ॥

ಸಂಪುಟ 8

ಮುದ್ರಕರು:
ಭಾರತ ದರ್ಶನ ಮುದ್ರಣಾಲಯ
163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ: **080-26765381**

ಪ್ರಥಮ ಇ-ಮುದ್ರಣ ಜನವರಿ ೨೦೧೪

ಆದಿ ಅಧ್ಯಕ್ಷರು:

ಪರಮಪೂಜ್ಯ ಶ್ರೀ ಶ್ರೀ
ರಂಗಪ್ರಿಯಮಹಾದೇಶಿಕಸ್ವಾಮಿಗಳವರು

ಆದಿ ವ್ಯವಸ್ಥಾಪಕ ಸಂಪಾದಕರು:

ದಿ|| ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')

ಆದಿ ಸಂಪಾದಕರು:

ದಿ|| ವಿದ್ವಾನ್ ಹೆಚ್.ಎನ್. ರಂಗಸ್ವಾಮೀ

ಆದಿ ಸಂಪಾದಕರು:

ದಿ|| ವಿದ್ವಾನ್ ರಾಮೇಶ್ವರಾವಧಾನೀ

ಸಂಪಾದಕ ಮಂಡಲಿ:

ಶ್ರೀ ಶ್ರೀಹರಿ
ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ವಿ. ಸೂರ್ಯನಾರಾಯಣ್,M.A. B.Com., B.L.,
ಕೋಶಾಧ್ಯಕ್ಷರು

ವಿನಮ್ರವಚನಗಳು

ದಯಾಮಯನಾದ ಪರಮಾತ್ಮನ ಕರುಣೆಯಿಂದಲೂ, ಸದ್ಗುರುವಿನ ದಿವ್ಯಾಶೀರ್ವಾದಗಳಿಂದಲೂ, ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ಶ್ರೀಮದ್ವಾಲ್ಮೀಕಿರಾಮಾಯಣದ ಎಂಟನೆಯ ಈ ಕುಸುಮವನ್ನು ಭಗವಂತನ ಪಾದಾರವಿಂದಗಳಲ್ಲಿ ಸಮರ್ಪಿಸಿ ಪ್ರಸಾದರೂಪವಾದ ಈ ದಿವ್ಯಕುಸುಮ ವನ್ನು ನಮ್ಮ ಪ್ರಿಯಗ್ರಾಹಕರ ಅಂಜಲಿಪುಟಗಳಲ್ಲಿ ಇಡುತ್ತಿದ್ದೇವೆ.

ಈ ಎಂಟನೆಯ ಸಂಪುಟವೂ ಪರಮಾತ್ಮನ ದಯೆಯಿಂದಲೇ ಹೊರ ಬಂದಿದೆ. ಉಳಿದ ಮೂರು ಸಂಪುಟಗಳೂ ಅವನ ದಯೆಯಿಂದಲೇ ಹೊರ ಬರಬೇಕಾಗಿದೆ. ಕಾಗದದ ಬೆಲೆಯು ಅತ್ಯಧಿಕವಾಗಿರುವುದರಿಂದ ಈ ಸಂಪುಟವು ಇಷ್ಟು ಬೇಗ ಹೊರಬರುವುದೆಂದು ನಾವೇ ನಿರೀಕ್ಷಿಸಿರಲಿಲ್ಲ. ಏಕೆಂದರೆ: ಸಂಪುಟಕ್ಕೆ ಬೇಕಾಗುವ ಕಾಗದವನ್ನು ಒದಗಿಸಿಕೊಳ್ಳುವುದೇ ಮಹಾಪ್ರಯಾಸದ ಕೆಲಸವಾಗಿದೆ. ಹೆಚ್ಚು ಬೆಲೆಯು ಮಾತ್ರವಲ್ಲದೇ–ಕೆಲವು ವೇಳೆ ಕಾಗದವೇ ಸಿಕ್ಕುವುದಿಲ್ಲ. ಅಂತಹ ಒಂದು ದುರ್ಭರ ಪರಿಸ್ಥಿತಿಯನ್ನು ಈಗ ನಾವು ಎದುರಿಸಬೇಕಾಗಿ ಬಂದಿದೆ. ಕಳೆದ ಸುಮಾರು 18 ವರ್ಷಗಳಲ್ಲಿ ಇಂತಹ ಪರಿಸ್ಥಿತಿಯನ್ನು ಯಾವಾಗಲೂ ಎದುರಿಸಿರಲಿಲ್ಲ. ಹೇಗೋ ಅವನ ದಯೆಯಿಂದ ಈ ಸಂಪುಟವು ಹೊರಬಂದಿದೆ. ಮುಂದಿನ ಸಂಪುಟಗಳೂ ಅವನ ದಯೆಯಿಂದಲೇ ಹೊರಬರುತ್ತವೆಯೆಂಬ ಪರಮವಿಶ್ವಾಸವನ್ನೂ ಹೊಂದಿದ್ದೇವೆ. ಇದು ಅವನ ಕೆಲಸವೇ ಆಗಿದೆ. ಆದುದರಿಂದ ಇದನ್ನು ಅವನೇ ಆಗುಮಾಡಿಸುತ್ತಾನೆ. ಇದರಲ್ಲಿ ಸಂಶಯವಿಲ್ಲ.

ನಾವು ಈ ಹಿಂದೆ ನಿರೀಕ್ಷಿಸಿದ್ದಂತೆ ರಾಮಾಯಣವು ಹತ್ತು ಸಂಪುಟ ಗಳಲ್ಲಿ ಮುಗಿಯುವುದಿಲ್ಲ. ಹನ್ನೊಂದು ಸಂಪುಟಗಳಾಗುತ್ತವೆ. ಹೆಚ್ಚಿನ ಒಂದು ಸಂಪುಟದ ಬೆಲೆಯನ್ನು ಗ್ರಾಹಕರು ಕಳುಹಿಸಿಕೊಟ್ಟು ಸಹಕರಿಸುವರೆಂಬ ವಿಶ್ವಾಸವು ನಮಗಿದೆ.

ಈ ಸಂಪುಟದಲ್ಲಿ ಯುದ್ಧಕಾಂಡದ ೯೯ನೆಯ ಸರ್ಗದಿಂದ ೭೨ನೆಯ ಸರ್ಗಪೂರ್ತಿಯಾಗಿ ಕಥಾಭಾಗವಿದೆ. ಮುಂದಿನದು ಶ್ರೀರಾಮಪಟ್ಟಾಭಿಷೇಕ ಸಂಪುಟ. ಪರಮಪವಿತ್ರವಾದ ಸಂಪುಟ. ಗ್ರಾಹಕರ ಸಹಕಾರದಿಂದ

ಪಟ್ಟಾಭಿಷೇಕ ಸಮಾರಂಭವನ್ನು ಇಟ್ಟುಕೊಳ್ಳುವ ಆಶಯವಿದೆ. ಈ ಬಗೆಗೆ ಪತ್ರಮುಖೇನ ಎಲ್ಲರಿಗೂ ತಿಳಿಯಪಡಿಸಲಾಗುವುದು. ಅನಂತರ ಉತ್ತರ ಕಾಂಡವು ಎರಡು ಸಂಪುಟಗಳಲ್ಲಿ ಬರುತ್ತದೆ.

ಕಾಗದದ ಬೆಲೆಯ ಹೆಚ್ಚಳದ ಬಗೆಗೆ ಈ ಹಿಂದೆಯೇ ಎಲ್ಲರಿಗೂ ಪತ್ರ ಮುಖೇನ ನಿವೇದನಮಾಡಿಕೊಂಡಿದ್ದೇವೆ. ಕಾಗದವು ರಿಯಾಯಿತಿ ದರದಲ್ಲಿ ಸಿಕ್ಕಿದ ಕಾಲವೂ ಒಂದಿತ್ತು. 1984ನೇ ವರ್ಷದಿಂದ ಅದು ನಿಂತು ಹೋಯಿತು. ನಮಗೆ ಮಾತ್ರವಲ್ಲ ; ಯಾರಿಗೂ ಈಗ ರಿಯಾಯಿತಿ ದರ ದಲ್ಲಿ ಕಾಗದವು ಸಿಗುತ್ತಿಲ್ಲ. ನಮಗೆ ಕಾಗದದ ಕಾರ್ಖಾನೆಯಿಂದಲೇ ನೇರ ವಾಗಿ ಕೊಳ್ಳುವ ಸೌಲಭ್ಯವು ಈಗಲೂ ಇದೆ. ಆದರೆ ಒಂದೇ ವರ್ಷದಲ್ಲಿ ಕಾಗದದ ಬೆಲೆ ಬಹಳವಾಗಿ ಏರಿಹೋಗಿದೆ. ಕೇವಲ ಆರೆಂಟು ತಿಂಗಳ ಹಿಂದೆ ಐದು ಟನ್ ಕಾಗದದ ಬೆಲೆ 58 ಸಾವಿರ ರೂ.ಗಳಿದ್ದುದು ಈಗ ನಾಲ್ಕು ಟನ್‌ಗಳಿಗೇ 70 ಸಾವಿರ ರೂ.ಗಳಾಗಿದೆ. ಇದರಿಂದ ಕಾಗದದ ಬೆಲೆಯು ಎಷ್ಟು ಏರಿರುವುದೆಂಬುದನ್ನು ಗ್ರಾಹಕರೇ ಊಹಿಸಿಕೊಳ್ಳಬಹುದಾಗಿದೆ. ವೃತ್ತಪತ್ರಿಕೆಗಳ ಬೆಲೆಯೂ ಸುಮಾರು ಶೇ. 30 ರಷ್ಟು ಹೆಚ್ಚಿರುವುದು ಗ್ರಾಹಕರ ಅನುಭವಕ್ಕೆ ಬಂದಿರಬಹುದು. ವೃತ್ತಪತ್ರಿಕೆಗಳ ಕಾಗದದ ಬೆಲೆಗಿಂತಲೂ ಟನ್ 1ಕ್ಕೆ (13,500 ರೂ.ಗಳು) ನಾವು ಉಪಯೋಗಿಸು ತ್ತಿರುವ ಕಾಗದದ ಬೆಲೆ ಬಹಳಷ್ಟು ಹೆಚ್ಚಿದೆ. ಟನ್ 1ಕ್ಕೆ (17,500/- ರೂ.ಗಳು) ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ನಾವು ಗ್ರಾಹಕರಿಂದ ತೆಗೆದುಕೊಂಡಿರುವ ಹಣವು ಸರಿಸುಮಾರು ಕಾಗದದ ಬೆಲೆ ಮಾತ್ರವಾಗುತ್ತದೆ. ಇದರ ಬಗೆಗೆ ಗ್ರಾಹಕರು ಮನಗಂಡು ಯಥೋಚಿತವಾದ ಸಹಕಾರವನ್ನು ಯಥಾಶಕ್ತಿ ನೀಡಬೇಕಾಗಿ ಪ್ರಾರ್ಥಿಸುತ್ತೇವೆ.

ಶ್ರೀಮದ್ವಾಲ್ಮೀಕಿರಾಮಾಯಣದ ಮೊದಲನೆಯ ಸಂಪುಟದ ಪ್ರಕಾಶನ ಸಮಾರಂಭದಲ್ಲಿ ಆಶ್ವಾಸನೆಯಿತ್ತಿದ್ದಂತೆ ಸುಪ್ರಸಿದ್ಧ ನಾಟಕಕಾರರಾದ ಹಿರಣ್ಣಯ್ಯ ಮಿತ್ರಮಂಡಲಿ, ಬೆಂಗಳೂರು ಇವರು 4-6-89ನೇ ಭಾನುವಾರ ಸಾಯಂಕಾಲ ರವೀಂದ್ರಕಲಾಕ್ಷೇತ್ರದಲ್ಲಿ ಭಾರತ ದರ್ಶನ ಸಹಾಯಾರ್ಥವಾಗಿ 'ಭ್ರಷ್ಟಾಚಾರ' ಎಂಬ ನಾಟಕವನ್ನು ನಡೆಸಿಕೊಟ್ಟರು. ನಮ್ಮ ಗೌ॥ ಪ್ರತಿನಿಧಿ ಗಳ ಶ್ರಮದ ಫಲವಾಗಿ ಮತ್ತು ಬೆಂಗಳೂರಿನ ನಮ್ಮ ಪ್ರಿಯಗ್ರಾಹಕರ

ನೆರವಿನಿಂದಾಗಿ ಈ ನಾಟಕದಿಂದ ಖರ್ಚುಕಳೆದು ಸುಮಾರು ಇಪ್ಪತ್ತು ಸಾವಿರ ರೂ.ಗಳ ಉಳಿತಾಯವಾಯಿತು. ಸಹಾಯಾರ್ಥ ನಾಟಕವನ್ನು ನಡೆಸಿ ಕೊಟ್ಟುದಕ್ಕಾಗಿ ಶ್ರೀ ಹಿರಣ್ಣಯ್ಯ ಮಿತ್ರಮಂಡಲಿಯವರಿಗೂ, ಶ್ರಮವಹಿಸಿ ಟಿಕೆಟ್‌ಗಳನ್ನು ಮಾರಿಕೊಟ್ಟುದಕ್ಕಾಗಿ ನಮ್ಮ ಹಲವಾರು ಮಂದಿ ಗೌ|| ಪ್ರತಿನಿಧಿ ಗಳಿಗೂ, ಉದಾರತೆಯಿಂದ ನೆರವು ನೀಡಿದುದಕ್ಕಾಗಿ ನಮ್ಮ ಬೆಂಗಳೂರಿನ ಗ್ರಾಹಕರಿಗೂ ಹೃತ್ಪೂರ್ವಕ ವಂದನೆಗಳು, ಟಿಕೆಟ್ ಪಡೆಯದ ಕೆಲವರು ದೇಣಿಗೆ ರೂಪದಲ್ಲಿ ಹಣ ಕೊಟ್ಟಿರುತ್ತಾರೆ. ಅವರಿಗೂ ನಮ್ಮ ಅಭಿನಂದನೆಗಳು.

ಈ ಮಧ್ಯದಲ್ಲಿ ಮಹಾಭಾರತದ 11-12ನೇ ಸಂಪುಟಗಳೂ ಮುದ್ರಣವಾಗಿ ಹೊರಬಂದಿವೆ. ಪ್ರಸಕ್ತ ಮಹಾಭಾರತದ 13ನೇ ಸಂಪುಟವು ಪುನರ್ಮುದ್ರಣವಾಗುತ್ತಿದೆ. ಮಹಾಭಾರತ ವಿಭಾಗದಲ್ಲಿ 15 ಸಂಪುಟಗಳು ಸಿಕ್ಕುತ್ತವೆ. ರಾಮಾಯಣ ವಿಭಾಗದಲ್ಲಿ 7 ಸಂಪುಟಗಳು ಸಿಕ್ಕುತ್ತವೆ. 3ನೆಯ ಸಂಪುಟವು ಮುಗಿದು ಪುನರ್ಮುದ್ರಣವಾಗಬೇಕಾಗಿದೆ.

ಇನ್ನೂ 3 ಸಂಪುಟಗಳು ಪ್ರಕಟವಾಗಬೇಕಾಗಿದ್ದರೂ ನಮ್ಮ ಪ್ರಿಯ ಗ್ರಾಹಕರು ಮುಂದಿನ ಯೋಜನೆ ಏನೆಂದು ಕೇಳುತ್ತಲೇ ಇದ್ದಾರೆ. ಯಾವುದೇ ಪ್ರಕಟನೆಗೂ ನಾವು ಸದಸ್ಯರಾಗುತ್ತೇವೆಂದು ಆಶ್ವಾಸನೆ ಕೊಡು ತ್ತಿದ್ದಾರೆ. ಗ್ರಾಹಕರ ಈ ಅಭಿಮಾನವೇ ನಮ್ಮ ಬಂಡವಾಳವಾಗಿದೆ. ಮುಂದಿನ ಯೋಜನೆಯ ಬಗೆಗೆ ಮುಂದಿನ ಸಂಪುಟದ ವೇಳೆಗೆ ನಿರ್ಧಾರಕ್ಕೆ ಬಂದು ಗ್ರಾಹಕರಿಗೆ ತಿಳಿಯಪಡಿಸಲಾಗುವುದು.

ಸಂಪುಟಗಳ ಬೆಲೆಯನ್ನು ಮತ್ತು ಪೂರ್ಣಮಾಲೆಯ ಚಂದಾಹಣ ವನ್ನು ಹೆಚ್ಚಿಸುವುದು ಅನಿವಾರ್ಯ. ಆದರೆ ಒಬ್ಬಿಬ್ಬ ಧರ್ಮಾತ್ಮರಾದ ಆಢ್ಯರು ಒಂದು ಸಂಪುಟವನ್ನೇ ತಮ್ಮ ನಾಮಾಂಕಿತದಲ್ಲಿ ಪ್ರಕಟಿಸುವ ಬಗೆಗೆ ವಿಚಾರಿಸಿದ್ದಾರೆ. ಪರಮಾತ್ಮನ ಪ್ರೇರಣೆಯಂತೆ ಯಾರಾದರೊಬ್ಬರು ಒಂದು ಸಂಪುಟವನ್ನು ಹೊರತರುವ ಭಾರವನ್ನು ವಹಿಸಿಕೊಂಡಲ್ಲಿ ಅಥವಾ ಇಬ್ಬರು ಅರ್ಧ-ಅರ್ಧ ಭಾಗದಷ್ಟು ಹೊರೆಯನ್ನು ವಹಿಸಿದಲ್ಲಿ ಪ್ರಕಾಶನಕ್ಕೆ ಅನು ಕೂಲವಾಗುವುದು. ನಮ್ಮ ಗ್ರಾಹಕರಲ್ಲಿ ಅಥವಾ ನಮ್ಮ ಕನ್ನಡನಾಡಿನಲ್ಲಿ ಹಲವಾರು ಕೋಟಿಪತಿಗಳಿದ್ದಾರೆ. ಲಕ್ಷಪತಿಗಳಿದ್ದಾರೆ. ಅವರಲ್ಲಿ ಕೆಲವರು ಮನಸ್ಸುಮಾಡಿದರೂ ಈ ಪವಿತ್ರ ಕಾರ್ಯವು ಸುಲಲಿತವಾಗಿ ನಿರ್ವಾಹ

ವಾಗುವುದು. ಮನಸ್ಸಿರಬೇಕು. ಯೋಜಕರಿರಬೇಕು. ದೈವಪ್ರೇರಣೆಯಾಗ ಬೇಕು. ಋಣಾನುಬಂಧವೂ ಇರಬೇಕು.

ನಮ್ಮ ಗೌ॥ ಪ್ರತಿನಿಧಿಗಳಾದ ಶ್ರೀ ಪರಮಾನಂದ ಹೆಗ್ಡೆ– ಪತ್ರಿಕಾವರದಿಗಾರರು, ಬೈರುಂಬೆ–ಇವರು ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಎಲ್ಲ ಪ್ರೌಢಶಾಲೆಗಳಿಗೂ ಮಹಾಭಾರತ-ರಾಮಾಯಣಗಳ ದಾನಿಗಳನ್ನು ಒದಗಿಸಿ ಕೊಡುವುದಾಗಿ ಸಂಕಲ್ಪಿಸಿ, ಕಾರ್ಯಮಾಡುತ್ತಿದ್ದಾರೆ. ಈಗಾಗಲೇ ಹಲವಾರು ಶಾಲೆಗಳಿಗೆ ಇವರು ದಾನಿಗಳನ್ನು ಒದಗಿಸಿಕೊಟ್ಟಿದ್ದಾರೆ. ಇವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು. ಇವರ ಸತ್ಸಂಕಲ್ಪವು ಕೈಗೂಡಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.

ಶ್ರೀಮದ್ವಾಲ್ಮೀಕಿರಾಮಾಯಣದ 7ನೇ ಸಂಪುಟದ ಪ್ರಕಾಶನವು ನಗರದ ಶ್ರೀ ನಿಜಗುಣ ಕಲ್ಯಾಣಮಂಟಪದಲ್ಲಿ ಪುಷ್ಯ ಕೃಷ್ಣ ಚತುರ್ದಶೀ 4-2-89ರ ಶನಿವಾರದಂದು ಸಂಜೆ 6-30ಕ್ಕೆ ನಡೆಯಿತು. ಅತಿಥಿಗಳನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಿ ವೇದಿಕೆಗೆ ಕರೆತರಲಾದ ಬಳಿಕ ವೇದಮೂರ್ತಿಗಳು ಸ್ವಸ್ತಿವಾಚನಗೈದರು. ಕು॥ ಉಮಾ ಪ್ರಾರ್ಥನೆಗೈದ ಬಳಿಕ ತುಮಕೂರಿನ ಶ್ರೀ ಟಿ. ಎನ್. ಪ್ರಭಾಕರರವರು ಸರ್ವರನ್ನೂ ಸ್ವಾಗತಿಸಿ ಭಾರತ ದರ್ಶನದ ಕನ್ನಡಭಾಷಾ ಸೇವೆಯ ಬಗೆಗೆ ಪರಿಚಯಿಸಿದರು. ಸಂಪುಟವನ್ನು ಪ್ರಕಾಶನಗೊಳಿಸಲು ಆಗಮಿಸಿದ್ದ ಕರ್ನಾಟಕ ರಾಜ್ಯದ ಶಿಕ್ಷಣ ಸಚಿವ ಸನ್ಮಾನ್ಯ ಶ್ರೀ ಎಂ. ಚಂದ್ರಶೇಖರ್‌ರವರು ರಾಮಾಯಣ ಸರಸ್ವತಿಗೆ ಪೂಜೆ ಸಲ್ಲಿಸಿ ಸಂಪುಟವನ್ನು ಬಿಡುಗಡೆ ಮಾಡಿ ವೇದಿಕೆಯನ್ನು ಅಲಂಕರಿಸಿದ್ದ ಗಣ್ಯರಿಗೆ ನೀಡಿದರು. ಶ್ರೀಮತಿ ಪೂರ್ಣಿಮಾ-ಗೋವಿಂದರವರು ಪ್ರಕಾಶಿತ ಸಂಪುಟದಿಂದ ಆಯ್ದಶ್ಲೋಕಗಳನ್ನು ವಾಚಿಸಿದರು.

ಜೀವನದ ನೀತಿಸಂಹಿತೆ

ಅನಂತರ ಮಾತನಾಡಿದ ಶಿಕ್ಷಣಸಚಿವ ಸನ್ಮಾನ್ಯ ಶ್ರೀ ಚಂದ್ರಶೇಖರ್‌ರವರು "ಭಾರತೀಯ ಋಷಿಸಂಸ್ಕೃತಿಯು ಇಂದು ನಿನ್ನೆಯದಾಗಿರದೇ ಇದಕ್ಕೆ ಕನಿಷ್ಠ 5,000 ವರ್ಷಗಳ ಭವ್ಯ ಇತಿಹಾಸವಿದೆ. ಭಾರತಜಾತರಿಗೆಲ್ಲರಿಗೂ ಅನ್ವಯಿಸುವಂತಹ ಜೀವನದ ನೀತಿಸಂಹಿತೆಯನ್ನೇ ರಾಮಾಯಣದಲ್ಲಿ ಕಾಣ

ಬಹುದು. ರಾಮಾಯಣದ ಕಥಾನಾಯಕನಾದ ಶ್ರೀರಾಮನನ್ನು ದೇವರೆಂದಾದರೂ ಭಾವಿಸಬಹುದು. ಆದರ್ಶಪುರುಷನೆಂದಾದರೂ ಭಾವಿಸಬಹುದು. ಒಟ್ಟಿನಲ್ಲಿ ಅವನ ಜೀವನದ ಉದಾತ್ತಮೌಲ್ಯಗಳನ್ನು ನಾವು ಮೈಗೂಡಿಸಿಕೊಳ್ಳಬೇಕು. ಇದಕ್ಕಾಗಿಯೇ ನಾವಿಂದು ರಾಮಾಯಣವನ್ನು ಓದಬೇಕು." ರಾಜ್ಯದ ಪ್ರೌಢಶಾಲೆಗಳ ಶಿಕ್ಷಕ-ವಿದ್ಯಾರ್ಥಿವೃಂದದ ಬೌದ್ಧಿಕವಿಕಾಸಕ್ಕಾಗಿ ರಾಮಾಯಣದ ಪ್ರತಿಗಳು ಶಾಲೆಗಳನ್ನು ತಲುಪುವಂತೆ ಮಾಡಲು ತಾವು ತೀವ್ರವಾಗಿ ಪ್ರಯತ್ನಿಸುವುದಾಗಿ ಸರ್ಕಾರದ ಪರವಾಗಿ ಭರವಸೆ ನೀಡಿದರು.

'ಏಳರ ಮಹತ್ತ್ವ'

ಸಮಾರಂಭದ ಅಧ್ಯಕ್ಷತೆ ವಹಿಸಿ ಆಶೀರ್ವಚನಗಳನ್ನು ನೀಡಿದ ಉಡುಪಿಯ ಪುತ್ತಿಗೆ ಮಠದ ಶ್ರೀ ಶ್ರೀ ಸುಗುಣೇಂದ್ರತೀರ್ಥಶ್ರೀಪಾದಂಗಳವರು 'ಏಳು' ಎಂಬ ಸಂಖ್ಯೆಯು ರಾಮಾಯಣದ ದೃಷ್ಟಿಯಿಂದ ಮಹತ್ತ್ವಪೂರ್ಣವಾಗಿದೆ. ವಿಶ್ವದ ರಹಸ್ಯಗಳಾದ ಪರ್ವತ, ಲೋಕ, ಸಾಗರ, ಋಷಿ, ಸ್ವರ–ಇವೆಲ್ಲದರ ಸಂಖ್ಯೆಗಳೂ ಏಳಾಗಿವೆ. ವಿಷ್ಣುವಿನ ದಶಾವತಾರಗಳಲ್ಲಿ ರಾಮಾವತಾರವು ಏಳನೆಯದು. ರಾಮಾಯಣದ ಕಥಾಧಾರೆಯೂ ಏಳು ಕಾಂಡಗಳಲ್ಲಿ ಹರಿದುಬಂದಿದೆ.

ಯಾವುದೇ ಗ್ರಂಥದ ಆಯುಸ್ಸು ಅದರ ಅಂತಸ್ಸತ್ತ್ವವನ್ನು ಅವಲಂಬಿಸಿದೆ. ರಾಮಾಯಣವು ರಚಿತವಾಗಿ ಒಂದೂಮುಕ್ಕಾಲು ಕೋಟಿ ವರ್ಷಗಳು ಸಂದಿವೆಯೆಂಬುದು ಸಾಂಪ್ರದಾಯಿಕರ ಮತ. ನವೀನ ವಿಮರ್ಶಕರ ದೃಷ್ಟಿಯಿಂದ ರಾಮಾಯಣವು ಕನಿಷ್ಠ ಎರಡೂವರೆ ಸಾವಿರ ವರ್ಷಗಳಷ್ಟು ಹಳೆಯದು. ಈ ಗ್ರಂಥದ ಸಂದೇಶವು ಸಾರ್ವಕಾಲಿಕವಾಗಿರುವುದರಿಂದಲೇ ಇದು ಈವರೆಗೂ ಉಳಿದಿದೆ ; ಮುಂದೆಯೂ ಉಳಿಯುತ್ತದೆ. ನಮ್ಮ ದೇಶ ಹಾಗೂ ರಾಜ್ಯಸರ್ಕಾರಗಳು ಉತ್ತಮ ಶಿಕ್ಷಣ ನೀತಿಯನ್ನು ರೂಪಿಸುವಾಗ ರಾಮಾಯಣದಿಂದ ಆಕರಗಳನ್ನು ಪಡೆಯಬೇಕು" ಎಂದು ತಿಳಿಸಿದರು.

ಮಠ–ಸರ್ಕಾರಗಳ ಕರ್ತವ್ಯ ಭಾರತ ದರ್ಶನದಿಂದ

"ಸಂಸ್ಕೃತಮಾಧ್ಯಮದಲ್ಲಿರುವ ರಾಮಾಯಣ–ಮಹಾಭಾರತಗಳೆಂಬ ರಾಷ್ಟ್ರೀಯಕಾವ್ಯಗಳ ಅನುವಾದ–ಪ್ರಕಾಶನಕಾರ್ಯವನ್ನು ಕೈಗೊಂಡು

ಸುಲಭಬೆಲೆಯಲ್ಲಿ ಜನಸಾಮಾನ್ಯರಿಗೆ ಹಂಚಬೇಕಾದ ಗುರುತರ ಜವಾಬ್ದಾರಿಯು ಮಠ ಹಾಗೂ ಸರ್ಕಾರಕ್ಕೆ ಸಂಬಂಧಿಸಿರುತ್ತದೆ. ಅವರು ಮೌನವಾಗಿರುವುದನ್ನು ಕಂಡು, ಭಾರತ ದರ್ಶನವು ಮೈತಾಳಿರುವುದು ಕನ್ನಡಿಗರ ಭಾಗ್ಯೋದಯವೆಂದೂ ಪೂಜ್ಯ ಶ್ರೀ ಶ್ರೀಯವರು ಮೆಚ್ಚುಗೆ ವ್ಯಕ್ತಪಡಿಸಿದರು."

ಪ್ರಕಾಶಿತ ಸಂಪುಟವನ್ನು ಪರಿಚಯಿಸುತ್ತಾ ವಿದ್ವಾನ್ ಎಚ್. ಎಸ್. ವರದದೇಶಿಕಾಚಾರ್ಯ ರಂಗಪ್ರಿಯರವರು "ಸುಂದರಕಾಂಡದ ಭಾಗವನ್ನೊಳಗೊಂಡ ಈ ಸಂಪುಟದಲ್ಲಿ ಎಲ್ಲವೂ ಸುಂದರವಾಗಿದೆ. ಇದರಲ್ಲಿನ ರಾಮ ಸುಂದರ ; ಆಂಜನೇಯ ಸುಂದರ ; ಸೀತೆ ಸುಂದರಿ–ಎಂಬ ಅರ್ಥವುಳ್ಳ ಶ್ಲೋಕವನ್ನು ವ್ಯಾಖ್ಯಾನಿಸಿದರು. ನಷ್ಟವಾದ ವಸ್ತುವಿನ ಪುನಃಪ್ರಾಪ್ತಿಯನ್ನೇ ಸುಂದರವೆಂದು ವ್ಯಾಖ್ಯಾನಿಸಿದ ಅವರು ರಾಮ-ಲಕ್ಷ್ಮಣರಿಂದ ದೂರಳಾಗಿದ್ದ ಸೀತೆಯ ವಿಷಯವನ್ನು ಇಲ್ಲಿ ತಿಳಿಸಲಾಗಿದೆ. ದೂತನೊಬ್ಬನು ಅಪರಿಚಿತದೇಶವನ್ನು ತಲುಪಿ, ಅಪರಿಚಿತವ್ಯಕ್ತಿಯನ್ನು ಹುಡುಕಿ, ಆತನೊಂದಿಗೆ ಸಂಬಂಧವನ್ನು ಯಾವ ರೀತಿ ಮಾಡಬೇಕೆಂಬುದನ್ನು ಅತಿ ಸುಂದರವಾಗಿ ತಿಳಿಸಲಾಗಿದೆ. ಆಂಜನೇಯನಲ್ಲಿರುವ ಕಾರ್ಯತತ್ಪರತೆ, ವಿನಯ, ಸಮಯಸ್ಫೂರ್ತಿ, ಉತ್ಸಾಹ, ಧೈರ್ಯ, ಪರಾಕ್ರಮಗಳು ನಮ್ಮ ಯುವಜನಾಂಗಕ್ಕೆ ಮಾದರಿಯಾಗಿದೆ"–ಎಂದೂ ತಿಳಿಸಿದರು.

ಶ್ರೀ ರಾಮಚಂದ್ರಾಪುರಮಠದ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಶ್ರೀಮದ್ರಾಘವೇಂದ್ರಭಾರತೀಸ್ವಾಮಿಗಳವರು ಸಂಪಾದಕಮಂಡಲಿಯ ವಿದ್ವಾಂಸರಿಗೆ ಅನುಗ್ರಹಿಸಿದ್ದ ಸುವರ್ಣಮಂತ್ರಾಕ್ಷತೆಗಳನ್ನು ಪುತ್ತಿಗೆ ಮಠದ ಪೂಜ್ಯ ಶ್ರೀ ಶ್ರೀಯವರು ವಿದ್ವಾಂಸರಿಗೆ ಅನುಗ್ರಹಿಸಿದರು.

ಶಾಂತಿಪಾಠದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಸಂಪಾದಕ ಕೇ. ಸು. ಕೌಶಿಕರು ಕಾರ್ಯಕ್ರಮವನ್ನು ಸಂಯೋಜಿಸಿದ್ದರು.

ರಾಮಾಯಣ-ಮಹಾಭಾರತಗಳ ಪ್ರಚಾರಕಾರ್ಯವು ಸಾಧಾರಣ ರೀತಿಯಲ್ಲಿ ನಡೆಯುತ್ತಿದೆ. ಊರು-ಊರುಗಳಿಗೆ ಹೋದರೆ ಪ್ರಚಾರ ವೇನೋ ಆಗುತ್ತದೆ. ಗ್ರಾಹಕರೂ ಆಗುತ್ತಾರೆ. ಅದಕ್ಕೆ ನಿಃಸ್ಪೃಹತೆಯಿಂದ ಕಾರ್ಯಮಾಡುವ ಕಾರ್ಯಕರ್ತರು ಬೇಕು. ಸದ್ಯಕ್ಕೆ ನಮ್ಮ ಪ್ರಿಯಗೆಳೆಯ

ರಾದ ವಿದ್ವಾನ್ ಟಿ. ಎನ್. ಪ್ರಭಾಕರ್ ಇವರು–ಇವರ ತಂದೆ ವಿದ್ವಾನ್ ಟಿ. ನಾರಾಯಣಶಾಸ್ತ್ರಿಗಳಂತೆಯೇ ಇಂತಹ ಪ್ರಚಾರಕಾರ್ಯವನ್ನು ಕೈಗೊಂಡಿದ್ದಾರೆ. ಇವರು ಮಾಡಿರುವ ರಾಮಾಯಣದ ಸದಸ್ಯಸಂಖ್ಯೆಯು ಐನೂರನ್ನೂ ಮೀರಿದೆ.

ಆಯಾ ಊರುಗಳಲ್ಲಿಯೇ ಕೆಲವು ಮಹನೀಯರು ಸದಸ್ಯರನ್ನು ಮಾಡಿಕೊಟ್ಟು ಒತ್ತಾಸೆ ನೀಡುತ್ತಿದ್ದಾರೆ. ಇಂತಹ ಧರ್ಮಪ್ರಚಾರಕರೆಲ್ಲರಿಗೂ ನಮ್ಮ ಅನಂತಾನಂತ ವಂದನೆಗಳು.

ಬೆಂಗಳೂರಿನಲ್ಲಿಯೂ ಅನೇಕಮಹನೀಯರು ಹೊಸ ಸದಸ್ಯರನ್ನು ಮಾಡಿಕೊಡುತ್ತಿದ್ದಾರೆ. ಬೆಂಗಳೂರೊಂದರಲ್ಲೇ ೨,೫೦೦ಕ್ಕಿಂತಲೂ ಹೆಚ್ಚು ಗ್ರಾಹಕರಿದ್ದಾರೆ. ಇದು ನಮ್ಮ ನಿಃಸ್ಪೃಹರಾದ ಕಾರ್ಯಕರ್ತರ ಪ್ರಚಾರದ ಫಲವಾಗಿದೆ. ಇವರ ಕಾರ್ಯನಿಷ್ಠೆಯು ಅನುಪಮವಾದುದು. ಗ್ರಾಹಕರಾಗುವಂತೆ ಬಂಧುಗಳನ್ನೋ ಗೆಳೆಯರನ್ನೋ ಒಪ್ಪಿಸುತ್ತಾರೆ. ಅವರಿಂದ ಚಂದಾ ಹಣವನ್ನು ತಂದು ಕಾರ್ಯಾಲಯಕ್ಕೆ ಕೊಟ್ಟು ಪಾವತಿಹಾಕಿಸಿ, ಸಿದ್ಧವಾಗಿ ರುವ ಸಂಪುಟಗಳನ್ನು ನೂತನ ಗ್ರಾಹಕರಿಗೆ ತಲುಪಿಸುತ್ತಾರೆ. ಇಷ್ಟಕ್ಕೇ ಅವರ ಕಾರ್ಯವು ಮುಗಿಯುವುದಿಲ್ಲ. ಮುಂದೆ ಪ್ರಕಟವಾಗುವ ಸಂಪುಟಗಳನ್ನೆಲ್ಲಾ ಕಾರ್ಯಕರ್ತರೇ ಕಾರ್ಯಾಲಯದಿಂದ ಒಯ್ದು ತಾವು ಮಾಡಿರುವ ಗ್ರಾಹಕರಿಗೆ ತಲುಪಿಸುತ್ತಾರೆ. ಮಧ್ಯ-ಮಧ್ಯದಲ್ಲಿ ಬೀಳುವ ಬಸ್-ಆಟೋ ವೆಚ್ಚವನ್ನೂ ಅವರೇ ಭರಿಸುತ್ತಾರೆ. ಇಂತಹ ನಿಷ್ಠರಾದ, ಸತ್ಪುರುಷರ ಸಹಕಾರವಿರುವುದರಿಂದಲೇ ಮಹಾಭಾರತ-ರಾಮಾಯಣಗಳು ಸರ್ವತ್ರ ಪ್ರಚಾರವಾಗುತ್ತಿವೆ. ನಾಟಕವು ಯಶಸ್ವಿಯಾದುದೂ ಇಂತಹ ಮಹನೀಯರಿಂದಲೇ. ಇದೊಂದು ಪರಮಾತ್ಮನ ಸೇವೆಯೆಂದೇ ಬಗೆದು ಕಾರ್ಯಮಾಡುತ್ತಿರುವ ಇಂತಹ ಸತ್ಪುರುಷರ ನೆರವನ್ನು ಒದಗಿಸಿಕೊಟ್ಟು ಪರಮಾತ್ಮನು ಈ ಕಾರ್ಯವನ್ನು ಆಗುಮಾಡಿಸುತ್ತಿದ್ದಾನೆ. ದಯಾಮಯನಾದ ಪರಮಾತ್ಮನು ಇವರೆಲ್ಲರಿಗೂ ಆಯುರಾರೋಗ್ಯ-ಐಶ್ವರ್ಯಾದಿಗಳನ್ನಿತ್ತು ಸಂರಕ್ಷಿಸಲಿ.

ಸಂಪಾದಕ ಮಂಡಲಿಯ ಅಧ್ಯಕ್ಷರಾದ ವಿದ್ವಾನ್ ಹೆಚ್. ಎಸ್. ವರದ ದೇಶಿಕಾಚಾರ್ಯರಂಗಪ್ರಿಯರು ಶರಣಾಗತಿಯ ವಿಷಯವಾಗಿ ವಿದ್ವತ್ಪೂರ್ಣವಾದ ಲೇಖನವನ್ನು ಬರೆದುಕೊಟ್ಟು ಉಪಕರಿಸಿರುತ್ತಾರೆ. ಅಂತೆಯೇ

ಹೊಳೇನರಸೀಪುರದ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ ಸಂಪಾದಕರಾದ ಅಧ್ಯಾತ್ಮವಿದ್ಯಾಪ್ರವೀಣ ವಿದ್ವಾನ್ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಯವರು ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರುತ್ತಾರೆ. ಇವರಿಗೆ ನಮ್ಮ ಹೃತ್ಪೂರ್ವಕ ವಂದನೆಗಳು.

ಎಂದಿನಂತೆಯೇ ಸಂಪಾದಕಮಂಡಲಿಯ ವಿದ್ವಾಂಸರು ಬಹಳವಾಗಿ ಶ್ರಮವಹಿಸಿ ಸಕಾಲಕ್ಕೆ ಸಂಪುಟವನ್ನು ಸಂಪಾದಿಸಿಕೊಟ್ಟಿರುತ್ತಾರೆ. ಇಂತಹ ನಿಃಸ್ಪೃಹರಾದ ಮಹಾನುಭಾವರ ಅಮೋಘಸಹಕಾರವು ಕೇವಲ ದೈವಕೃಪೆಯಿಂದ ಲಭ್ಯವಾಗಿದೆ. ಇವರೆಲ್ಲರಿಗೂ ಪರಮಾತ್ಮನು ಆಯುರಾರೋಗ್ಯಗಳನ್ನು ದಯಪಾಲಿಸಲೆಂದೂ, ಇವರ ಅಮೂಲ್ಯ ಸಹಕಾರವು ಭಾರತ ದರ್ಶನ ಪ್ರಕಾಶನಕ್ಕೆ ಅನವರತವಾಗಿ ಸಿಕ್ಕುವಂತಾಗಲೆಂದೂ ಪರಮಾತ್ಮನನ್ನು ಒಕ್ಕೊರಳಿನಿಂದ ನಾವೆಲ್ಲರೂ ಪ್ರಾರ್ಥಿಸೋಣ.

ತೆರೆಮರೆಯಲ್ಲಿ ಸಹಕಾರ ನೀಡುತ್ತಿರುವ ಸಮಸ್ತರಿಗೂ ದೇವರು ಒಳ್ಳೆಯದನ್ನು ಮಾಡಲಿ.

ಶಾನ್ತಿಃ ಪುಷ್ಟಿಸ್ತುಷ್ಟಿಶ್ಚಾಸ್ತು ಸಮಸ್ತಸನ್ಮಙ್ಗಲಾನಿ ಭವನ್ತು.

—ಪ್ರಕಾಶಕರು.

|| ಶ್ರೀರಾಮ ||

ಮುನ್ನುಡಿ

ಶ್ರೀಮದ್ರಾಮಾಯಣಕ್ಕೆ ಮುನ್ನುಡಿಯನ್ನು ಬರೆಯುವುದೇ ಒಂದು ಸುಯೋಗವೆಂದು ಭಾವಿಸಿರುತ್ತೇನೆ. ಈ ಸುಯೋಗವು ಬಹಳ ಅವಸರದಲ್ಲಿ ನನಗೆ ಪ್ರಾಪ್ತವಾಯಿತು. ಬರೆಯಬೇಕಾದ ವಿಷಯಗಳನ್ನು ಆಲೋಚಿಸುವುದಕ್ಕಾಗಲೀ, ಈವರೆಗಿನ ಹಿಂದಿನ ಸಂಪುಟಗಳಿಗೆ ವಿದ್ವಾಂಸರುಗಳು ಬರೆದಿರುವುದನ್ನಾದರೂ ಓದಿ ಒಮ್ಮೆ ಮನನಮಾಡುವುದಕ್ಕಾಗಲೀ–ಕಾಲಾವಕಾಶವು ಸಿಗಲಿಲ್ಲ. ಆದರೂ ಪ್ರಕಾಶಕರು ಈ ಬಾರಿ ಈ ಸೇವೆಯು ನಿಮ್ಮಿಂದಲೇ ಆಗಬೇಕೆಂದು ಆಗ್ರಹಮಾಡಿದ್ದರಿಂದ ಇದು ಕೂಡ ಸತ್ಯವ್ರತನೂ ಸತ್ಯಸಂಕಲ್ಪನೂ ಆದ ಶ್ರೀರಾಮಚಂದ್ರನ ಆಜ್ಞೆಯೇ ಸರಿ–ಎಂದು ಭಾವಿಸಿ ಈ ಮುನ್ನುಡಿಯನ್ನು ಸಿದ್ಧಗೊಳಿಸಿರುತ್ತೇನೆ. ಸಹೃದಯರಾದ ಓದುಗರು ಇದರಲ್ಲಿ ಬಹುದಾದ ಲೋಪ-ದೋಷಗಳನ್ನು ಮನ್ನಿಸಬೇಕೆಂದು ಪ್ರಾರ್ಥನೆ.

ಶ್ರೀಮದ್ರಾಮಾಯಣವು ಇತಿಹಾಸಗ್ರಂಥವಾಗಿದೆ. ಪುರಾಣೇತಿಹಾಸಗಳೆರಡೂ ವೇದಾರ್ಥೋಪಬೃಂಹಣಕ್ಕಾಗಿಯೇ ಮೀಸಲಾಗಿವೆಯಾದರೂ ಇತಿಹಾಸವು ಮಾನವನ ಜೀವನಕ್ಕೆ ಅತಿಹತ್ತಿ ರವಾದ ಘಟನೆಗಳಿಂದಕೂಡಿದ್ದು ಅದನ್ನು ಓದುವಾಗ ಒಂದು ರೀತಿಯ ತಾದಾತ್ಮ್ಯಭಾವನೆಯುಂಟಾಗಿ ನಾವೂ ಆ ಕಥೆಯಲ್ಲಿ ಸೇರಿದ್ದೇವೆಯೋ ಎಂದೆನಿಸುವುದು. ಹೀಗೆ ಸಾಕ್ಷಾತ್ ಪರಿಣಾಮವನ್ನುಂಟುಮಾಡುವ ಇತಿಹಾಸವು ಪುರಾಣಗಳಿಗಿಂತಲೂ ಜನಪ್ರಿಯವಾಗಿರುವುದು ಸ್ವಭಾವವೇ ಆಗಿದೆ. ಜನರು ಪುರಾಣಗಳನ್ನು ಓದುವುದೇ ಕಡಿಮೆ. ಓದಿದ ಮೇಲೂ ಮರೆತುಬಿಡುವವರೇ ಹೆಚ್ಚು. ಇತಿಹಾಸವು ಹಾಗಲ್ಲ. ಅದು ಓದುವವನ ಅಂತಃಕರಣದ ಮೇಲೆ ಮುದ್ರೆಯೊತ್ತಿ ಮರೆಯದಂತೆ ಮಾಡಿಬಿಡುತ್ತದೆ. ನಮ್ಮ ಭರತಖಂಡದ ಸುಪ್ರಸಿದ್ಧ ಇತಿಹಾಸಗ್ರಂಥಗಳೆಂದರೆ ರಾಮಾಯಣ-ಮಹಾಭಾರತಗಳೇ ಆಗಿವೆ. ಅದರಲ್ಲಿಯೂ ತ್ರೇತಾಯುಗದಲ್ಲಿ ಸೂರ್ಯವಂಶದ ಅತಿಶ್ರೇಷ್ಠರತ್ನವಾದ ಶ್ರೀರಾಮಚಂದ್ರನ ಕಥೆಯು ಮಹಾಭಾರತ ಕಥೆಗಿಂತಲೂ ಹೆಚ್ಚು ಪರಿಣಾಮಕಾರಿಯೂ, ಪರಿಶುದ್ಧವೂ, ಅಡಕವೂ ಆಗಿದ್ದು ಎಲ್ಲ ಕಾಲಕ್ಕೂ ಎಲ್ಲ ಜನರಿಗೂ ಅತ್ಯುನ್ನತಮಾರ್ಗದರ್ಶಿಯಾಗಿದೆ.

ಶ್ರೀಮದ್ರಾಮಾಯಣದ ಕಥಾನಾಯಕನನ್ನು ಚಿತ್ರಿಸಿರುವ ವಾಲ್ಮೀಕರು ಒಂದು ಚಮತ್ಕಾರವನ್ನು ಮಾಡಿದ್ದಾರೆ. ನಾರದ-ವಾಲ್ಮೀಕಿಗಳ ಸಂವಾದದಲ್ಲಿ

ಮರ್ಯಾದಾಪುರುಷೋತ್ತಮನಾದ ಶ್ರೀರಾಮನ ಪ್ರಸ್ತಾಪವು ಬಂದಾಗ– ಅವನ ಕಲ್ಯಾಣಗುಣಗಳನ್ನು ಉಲ್ಲೇಖಮಾಡಿದ ಅನಂತರ "ಸಾಕ್ಷಾತ್ ವಿಷ್ಣುರಿವ ಶ್ರೀಮಾನ್" ಎಂದು ನಾರದರು ತಿಳಿಸಿದಂತೆ ಬರೆದಿದ್ದಾರೆ. ಕಡೆಯಲ್ಲಿ ಯುದ್ಧಕಾಂಡದ ಅಂತ್ಯಸರ್ಗದಲ್ಲಿ ಶ್ರೀರಾಮನು ಯಾರೆಂಬುದನ್ನು ತಿಳಿಸುತ್ತಾ "ಸ ಹಿ ವಿಷ್ಣುಃ ಸನಾತನಃ" ಎಂದು ಆತನು ವಿಷ್ಣುವೇ ಎಂದು ಅವಧಾರಣೆಮಾಡಿರುತ್ತಾರೆ. ಇದನ್ನು ಮನನಮಾಡಿದ ಬಲ್ಲವರು ಹೇಳುವುದೇನೆಂದರೆ : ಕಥಾಪ್ರಾರಂಭಕಾಲಕ್ಕೇ ಆತನು ವಿಷ್ಣುವೆಂದು ಹೇಳಿಬಿಟ್ಟಿದ್ದರೆ ಕೇಳುವವರು ಮುಂದಿನ ಕಥೆಯನ್ನೆಲ್ಲ ಕೇಳಿದ ಮೇಲೆ "ರಾಮನು ವಿಷ್ಣು (ದೇವರು) ವಾದ್ದರಿಂದ ಹಾಗೆ ಸತ್ಯಸಂಧನಾಗಿ ನಡೆದುಕೊಳ್ಳುವುದು ಸಾಧ್ಯವಾಯಿತು ; ಮಾನವರಾದ ನಮಗೆ ಸಾಧ್ಯವಾದೀತೇ?"–ಎಂದುಕೊಂಡು ಸತ್ಯ-ಧರ್ಮಗಳ ಆದರ್ಶದ ಬಗೆಗೆ ಉದಾಸೀನರೇ ಆಗಿಬಿಡುತ್ತಿದ್ದರು ಅಥವಾ ದೇವರಿಂದ ಸಾಧ್ಯವಾಗಬಹುದಾದದ್ದು ಮನುಷ್ಯರಿಂದಾಗಲಾರದೆಂದು ಪ್ರಯತ್ನವನ್ನೇ ಕೈಬಿಡುತ್ತಿದ್ದರು. ಹಾಗಾಗಬಾರದೆಂದು ವಾಲ್ಮೀಕರು ಭಾವಿಸಿ ಶ್ರೀರಾಮನು ವಿಷ್ಣುವೆಂಬುದನ್ನು ಸೀತಾದೇವಿಯು ಅಗ್ನಿಪ್ರವೇಶಮಾಡಿದ ಘಟನೆಯವರೆಗೂ ತಡೆದಿಟ್ಟು ಅಲ್ಲಿ ಬ್ರಹ್ಮನ ಬಾಯಿಂದ "ಭವಾನ್ ನಾರಾಯಣೋ ದೇವಃ" ಎಂದು ನುಡಿಸಿರುತ್ತಾರೆ– ಹೀಗೆಂಬುದು ಬಲ್ಲವರ ಅಭಿಪ್ರಾಯವಾಗಿದೆ. ಆದ್ದರಿಂದ ಶ್ರೀಮದ್ರಾಮಾಯಣವನ್ನು ಓದಲಾರಂಭಿಸಿದ ಪ್ರತಿಯೊಬ್ಬನಿಗೂ ಶ್ರೀರಾಮನು ಮನುಷ್ಯನೆಂದೂ– ಅವನೂ ಕೂಡ ನಮ್ಮಂತೆಯೇ ವ್ಯವಹಾರವನ್ನು ಕೈಗೊಂಡವನಾಗಿ ಜೀವನದಲ್ಲಿ ಆಯಾ ಕಾಲಕ್ಕೆ ಒದಗಿದ ಧರ್ಮಸಂಕಟಗಳಲ್ಲಿ ಧರ್ಮವನ್ನೇ ಅವಲಂಬಿಸಿ ಮಹಾಪುರುಷನೆನಿಸಿ ಪಾಪಹರವಾದ ಆಚಂದ್ರಾರ್ಕವಾದ ಕೀರ್ತಿಯನ್ನು ಸ್ಥಾಪಿಸಿರುತ್ತಾನೆಂದೂ ಮನವರಿಕೆಯಾಗುತ್ತದೆ. ಇಷ್ಟೇ ಅಲ್ಲ. ಶ್ರೀರಾಮನ ಪರಿವಾರದಲ್ಲಿ ಸೇರಿರುವ ಹಾಗೂ ವಾಲ್ಮೀಕಿಗಳಿಂದ ಚಿತ್ರಿಸಲ್ಪಟ್ಟಿರುವ ಯಾವ ವ್ಯಕ್ತಿಯೇ ಆಗಲಿ–ಅವನು ಮನುಷ್ಯನಾಗಿರಲಿ, ಮೃಗವಾಗಿ ರಲಿ, ರಾಕ್ಷಸನಾಗಿರಲಿ, ಪಕ್ಷಿಯಾಗಿರಲಿ–ಪ್ರತಿಯೊಬ್ಬನೂ ತನ್ನ ಜೀವನದಲ್ಲಿ ಧರ್ಮಸಂಕಟವುಂಟಾದಾಗಲೆಲ್ಲ ಧರ್ಮವನ್ನೇ ಬೆಂಬಲಿಸಿ, ಧರ್ಮಮಾರ್ಗದಲ್ಲಿಯೇ ನಡೆದು ಶ್ರೀರಾಮಚಂದ್ರನ ಕೃಪಾಪಾತ್ರನೂ, ಭಕ್ತನೂ, ಪ್ರಾತಃಸ್ಮರಣೀಯನೂ ಆಗಿರುತ್ತಾನೆ. ಹೀಗೆ ಲೋಕದ ಜನರಿಗೆ ರಾಮಾಯಣದಲ್ಲಿ

ಸಿಗುವಂತಹ ಧರ್ಮದ ಮೇಲುಪಂಕ್ತಿಯು ಇನ್ನು ಯಾವ ಗ್ರಂಥದಲ್ಲಿಯೂ ಇಷ್ಟು ಓಜಸ್ವಿಯಾಗಿ ಹೃದಯಸ್ಪರ್ಶಿಯಾಗಿ ಸಿಗಲಾರದು.

ನಮ್ಮ ದೇಶದಲ್ಲಿ ಅಧ್ಯಾತ್ಮತತ್ತ್ವಗಳನ್ನೂ, ಧರ್ಮ-ಕರ್ಮಗಳ ವಿಚಾರವನ್ನೂ ಒಬ್ಬರು ಮತ್ತೊಬ್ಬರಿಗೆ ಬೋಧಿಮಾಡುವ ಪದ್ಧತಿಯು ಪ್ರಚುರವಾಗಿದೆ. ಪುರಾಣಗಳಲ್ಲಿ ಇಂತಹ ನೂರಾರು ಸಂವಾದಗಳಿವೆ. ಇದು ಒಂದು ರೀತಿಯಿಂದ ಜನರನ್ನು ಧರ್ಮಮಾರ್ಗಕ್ಕೆ ಒಯ್ಯಲು ಸಹಕಾರಿಯಾಗಿರುವುದೂ ನಿಜ. ಆದರೆ ಹೇಳುವುದು–ಕೇಳುವುದಕ್ಕಿಂತಲೂ ತನ್ನ ನಡೆಯಲ್ಲಿಯೇ ಸತ್ಯ-ಧರ್ಮಗಳನ್ನು ಆಚರಿಸಿ ತೋರಿಸುವುದೆಂಬುದು ಇನ್ನೂ ಪರಿಣಾಮಕಾರಿಯೂ ಉತ್ತೇಜಕವೂ ಆಗಿರುತ್ತದೆ. ಶ್ರೀಮದ್ರಾಮಾಯಣದಲ್ಲಿ ಮಾತ್ರವೇ ಈ ವೈಶಿಷ್ಟ್ಯವಿದೆ. ಇಲ್ಲಿ ಶ್ರೀರಾಮನು ಯಾರಿಗೂ ಹೆಚ್ಚಾಗಿ ಧರ್ಮೋಪದೇಶ ಮಾಡಿದ ಸಂದರ್ಭವಿಲ್ಲ. ಅದಕ್ಕೆ ಬದಲು ಆ ಕಾಲಕ್ಕೆ ಶ್ರೀರಾಮನೊಡನೆ ಇದ್ದ ಜನರು ರಾಮನ ನಡತೆಯನ್ನೇ ನೋಡಿ ನೋಡಿ ತಾವೂ ಹಾಗೆಯೇ ಆಚರಿಸಿ ಕೃತಾರ್ಥರಾಗುತ್ತಿದ್ದರು. 'ರಾಮನು ಇಂತಹ ಸಂದರ್ಭದಲ್ಲಿ ಹೀಗೆ ನಡೆದುಕೊಂಡನು'–ಎಂದರೆ ಮುಗಿಯಿತು–ಅದಕ್ಕಿಂತಲೂ ಮಿಗಿಲಾದ ಧರ್ಮವೇ ಇಲ್ಲ–ಎಂಬಿದು ಜನರ ಭಾವನೆಯಾಗಿತ್ತು. ಆ ಆಚರಣೆಯು ತ್ರೇತಾಯುಗಕ್ಕೆ ಮಾತ್ರ ಮೀಸಲಾಗಿರಲಿಲ್ಲ. ಅದು ಸಾರ್ವಕಾಲಿಕವೂ, ಸರ್ವಸಂಮತವೂ ಆಗಿರುವುದು ಈಗಲೂ ನಮಗೆಲ್ಲ ತಿಳಿದೇ ಇದೆ. ಯಾರೋ ಅಜ್ಞರು ಈಗ ಶ್ರೀರಾಮನ ಕೆಲವು ನಡವಳಿಕೆಗಳನ್ನು ದೂರಬಹುದು. ಅದು ಅಂಥವರ ಕ್ಷುದ್ರಬುದ್ಧಿಯ ಫಲವೇ ಹೊರತು ಮತ್ತೇನಲ್ಲ. ಹಾಗೆ ದೂರುವವರು ರಾಮನಂತಹ ಮತ್ತೊಬ್ಬ ವ್ಯಕ್ತಿಯನ್ನು ತೋರಿಸಲಿ ಅಥವಾ ಚಿತ್ರಿಸಲಿ–ಎಂಬಿದೇ ನಮ್ಮ ಸವಾಲು. ಇರಲಿ; ರಾಮರಾಜ್ಯವು ಭರತಖಂಡದಲ್ಲಿ ಪ್ರತಿಷ್ಠಿತವಾಗಿದ್ದ ಕಾಲಕ್ಕೆ ಜನರು ಹೀಗಿದ್ದರೆಂದು ವಾಲ್ಮೀಕರು ತಿಳಿಸುತ್ತಾರೆ.

ರಾಮೋ ರಾಮೋ ರಾಮ ಇತಿ ಪ್ರಜಾನಾಮಭವನ್ ಕಥಾಃ ।
ರಾಮಭೂತಂ ಜಗದಭೂತ್ ರಾಮೇ ರಾಜ್ಯಂ ಪ್ರಶಾಸತಿ ॥

ಇಲ್ಲಿ "**ರಾಮಭೂತಂ ಜಗತ್**" ಎಂಬ ಮಾತಿನಿಂದ ಮಹರ್ಷಿಗಳು ರಾಮನೇ ಜಗತ್ತಾಗಿಬಿಟ್ಟಿದ್ದನು– ಎಂಬ ತತ್ತ್ವವನ್ನು ಹೊರಗೆಡವಿ ರಾಮ

ನಿಗೂ–ಪ್ರಜೆಗಳಿಗೂ ಭಿನ್ನಾಭಿಪ್ರಾಯವಾಗಲಿ, ವೈಮನಸ್ಯವಾಗಲಿ–ಇರಲೇ ಇಲ್ಲವೆಂದು ಸಾರಿರುತ್ತಾರೆ. ಹೀಗಿರುವಲ್ಲಿ ಧರ್ಮಾತಿಕ್ರಮವಾಗಲೀ–ಸ್ವೇಚ್ಛಾ ಚಾರವಾಗಲಿ ಎಲ್ಲಿ ಬಂದಾವು? ಈಗಲೂ ರಾಮಾಯಣದ ನೀತಿತತ್ತ್ವಗಳೇ ಜಾರಿಗೆ ಬಂದಲ್ಲಿ ನಮ್ಮ ದೇಶದಲ್ಲಿ ಎದ್ದುಕೊಂಡಿರುವ ಎಲ್ಲ ಸಮಸ್ಯೆಗಳೂ ಪರಿಹಾರವಾದಾವು–ಎನಿಸುತ್ತದೆ.

ಶ್ರೀಮದ್ರಾಮಾಯಣವು ನೀತಿಪ್ರಧಾನವಾದ ಇತಿಹಾಸವೆನಿಸಿದೆ. ಈ ನೀತಿಯು ಸಂಪೂರ್ಣವಾಗಿ ಧರ್ಮದ ತಳಹದಿಯ ಮೇಲೆಯೇ ಕಟ್ಟಲ್ಪಟ್ಟ ಗೋಪುರವಾಗಿದೆ. ಎಲ್ಲಿ ಭಗವಂತನಿರುವನೋ ಅಲ್ಲಿ "ಧ್ರುವಾನೀತಿ" ಯು ನೆಲೆಸಿರುವುದೆಂಬ ವೇದವ್ಯಾಸರ ವಾಕ್ಯವನ್ನು ಕೇಳಿದವರಿಗೆ ರಾಮಾಯಣವು ಇಂತಹ ನೀತಿ-ಸೌಂದರ್ಯಗಳ ಆಕರವೆಂಬುದು ಕೂಡಲೇ ಹೊಳೆಯುತ್ತದೆ. ನೀತಿಯು ತತ್ತ್ವದ ವಿಭೂತಿಯೇ ಎಂದರೆ ತಪ್ಪಾಗಲಾರದು. ಈ ನೀತಿ ಶಬ್ದವು ಸದಾಚಾರ, ಸದ್ವಿಚಾರ, ಸಜ್ಜೀವನಗಳ ಸಾರವನ್ನೆಲ್ಲ ಒಳಗೊಂಡಿದೆ. ವಾಲ್ಮೀಕರು ತಮ್ಮ ಈ ಕಾವ್ಯದಲ್ಲಿ ನೀತಿನಿಷ್ಠರನ್ನೂ ನೀತಿಭ್ರಷ್ಟರನ್ನೂ ಚಿತ್ರಿಸಿ ನೀತಿವಂತರು ಹೇಗೆ ಸಕಲಸಂಕಟಗಳಿಂದಲೂ ಪಾರಾಗಿ ಕೃತಾರ್ಥ ರಾಗುತ್ತಾರೆಂಬುದನ್ನು ತಿಳಿಸಿದ್ದಾರೆ. ನೀತಿಯ ಹೃದಯವೇ ಶ್ರೀರಾಮಚಂದ್ರ ಪ್ರಭುವು–ಎಂಬುದನ್ನೂ ಮನಗಾಣಿಸಿದ್ದಾರೆ. "**ನಾವಿರತೋ ದುಶ್ಚರಿ ತಾತ್**" ಎಂದು ಉಪನಿಷತ್ತಿನಲ್ಲಿ ತಿಳಿಸಿರುವಂತೆ ದುಶ್ಚರಿತಗಳನ್ನು ಗೆಲ್ಲದವನು ಎಂದಿಗೂ ಪೂಜ್ಯನಲ್ಲ–ಎಂಬುದನ್ನು ರಾವಣನ ಪಾತ್ರದಿಂದ ತಿಳಿಸಿದ್ದಾರೆ. ರಾವಣನ ಬಲವೂ, ಐಶ್ವರ್ಯವೂ, ಪರಾಕ್ರಮವೂ, ವಿಜಯವೂ ಮಿಗಿಲಾದುದೆಂದು ಕಂಡುಬಂದರೂ ಹನುಮಂತನು ಹೇಳುವಂತೆ "**ಯದ್ಯ ಧರ್ಮೋ ನ ಬಲವಾನ್**' ಎಂಬ ಮಾತು ರಾವಣನ ನೀತಿಭ್ರಷ್ಟತೆಯನ್ನೂ, ಅವನ ದೌರ್ಬಲ್ಯವನ್ನೂ, ರಾಮಚಂದ್ರನ ಔನ್ನತ್ಯವನ್ನೂ, ಘನವ್ಯಕ್ತಿತ್ವವನ್ನೂ ಎತ್ತಿತೋರಿಸುತ್ತದೆ. ಜನಸಾಮಾನ್ಯರನ್ನು ಉದ್ಧರಿಸಲು ಈಗ ನೀತಿಯನ್ನೇ ಮೊದಲು ಕಲಿಸಬೇಕಾಗಿದೆ. ಅನಂತರ ಧರ್ಮ-ತತ್ತ್ವಗಳನ್ನು ಉಪದೇಶಿಸಬಹುದಾಗಿದೆ. ಹೀಗೆ ಶ್ರೀಮದ್ರಾಮಾಯಣವು ಆದರ್ಶವಾದ ನೀತಿಯನ್ನು ತಿಳಿಸುವುದರಿಂದ ಶ್ರೀರಾಮನಂತೆ ನಡೆದುಕೊಳ್ಳುವವನು ಸರ್ವರೀತಿಯಿಂದಲೂ ಶ್ರೇಯಸ್ಸನ್ನು ಹೊಂದುವುದರಲ್ಲಿ ಸಂಶಯವೇ ಇಲ್ಲ.

ಈಗ ಪ್ರಕೃತಸಂಪುಟದ ವಿಷಯಭಾಗದ ಕಡೆಗೆ ತೆರಳೋಣ. ಇದರಲ್ಲಿ ಯುದ್ಧಕಾಂಡದ 19 ರಿಂದ 72ರ ವರೆಗಿನ ಸರ್ಗಗಳು ಅಡಕವಾಗಿವೆ. ರಾಮಾಯಣದಲ್ಲಿ ಯುದ್ಧಕಾಂಡವೇ ಬಹಳ ದೊಡ್ಡ ಕಾಂಡವಾಗಿದೆ. ಈ ಭಾಗದಲ್ಲಿ ವಿಭೀಷಣನ ಶರಣಾಗತಿ, ವಾನರ-ರಾಕ್ಷಸರ ಯುದ್ಧ, ಕುಂಭಕರ್ಣನ ವಧೆ, ಅತಿಕಾಯನ ಸಂಹಾರದವರೆಗಿನ ಕಥಾಭಾಗವಿದೆ. ವಿಭೀಷಣನ ವಿಚಾರವೂ ಹಿಂದಿನ ಸಂಪುಟಕ್ಕೇ ಸೇರಿದೆ. ಆದ್ದರಿಂದ ಈ ಭಾಗದಲ್ಲಿ ರಾವಣನ ಕಡೆಯ ಕೆಲವು ಮುಖ್ಯ ರಾಕ್ಷಸರಿಗೂ ಕಪಿಗಳಿಗೂ ನಡೆದ ಯುದ್ಧವೇ ಪ್ರಧಾನಕಥಾಭಾಗವಾಗಿದೆ. ದೇವಾಸುರಯುದ್ಧವು ಅನೇಕ ಪುರಾಣಗಳಲ್ಲಿ ವರ್ಣಿತವಾಗಿದೆ. ಬೃಹದಾರಣ್ಯಕೋಪನಿಷತ್ತಿನಲ್ಲಿಯೂ ಇದರ ಪ್ರಸ್ತಾಪವಿದ್ದು ಅಲ್ಲಿ ಮಾನವನ ಅಂತಃಕರಣದಲ್ಲಿ ಪ್ರತಿದಿನವೂ ನಡೆಯುತ್ತಿರುವ ಶುಭಾಶುಭವೃತ್ತಿಗಳ ಘರ್ಷಣೆಯನ್ನೇ ದೇವಾಸುರಯುದ್ಧವೆಂದು ಕರೆಯಲಾಗಿದೆ. ಇಂತಹ ವೃತ್ತಿಗಳಲ್ಲಿ ಶುಭವೃತ್ತಿಗಳ ಸಂಖ್ಯೆ ಅಶುಭವೃತ್ತಿಗಳ ಸಂಖ್ಯೆಗಿಂತಲೂ ಕಡಿಮೆಯದಾಗಿರುವುದು. ಕದಾಚಿತ್ ದೇವತೆಗಳು ಗೆಲ್ಲುತ್ತಾರೆ. ಹಾಗೆ ಗೆಲ್ಲುವಾಗ ಅವರಿಗೆ ಭಗವಂತನ ಬೆಂಬಲವೇ ಕಾರಣವಾಗಿರುತ್ತದೆ. ದೇವತೆಗಳೆಂಬ ಶುಭವೃತ್ತಿಗಳಿಗೆ ಜಯವಾದಾಗ ಮನುಷ್ಯನು ಶ್ರೇಯೋಮಾರ್ಗದಲ್ಲಿ ಗೆಲುವನ್ನು ಸಂಪಾದಿಸಿದವನಾಗುವನು. ಈ ತತ್ತ್ವವನ್ನೇ ಇಲ್ಲಿಯೂ ಅನುಸಂಧಾನಮಾಡಿಕೊಳ್ಳಬೇಕು. ರಾಕ್ಷಸರು ಯಾವಾಗಲೂ ಬಲಿಷ್ಠರು. ಅವರು ಕಾಮ್ಯತಪಸ್ಸುಗಳನ್ನಾದರೂ ಆಚರಿಸಿ ಬ್ರಹ್ಮನಿಂದ ವರಗಳನ್ನು ಪಡೆದುಕೊಂಡು ದಂಭ-ಮಾನ-ಮದಾನ್ವಿತರಾಗಿ ಲೋಕಕಂಟಕರಾಗಿರುತ್ತಾರೆ. ಅವರಿಗೆ ಭಗವದ್ದ್ವೇಷವೂ ಕ್ರೌರ್ಯವೂ ಬಂಡವಾಳವಾಗಿರುವುದು. ಅಂಥವರಿಗೂ ಭಗವಂತನ ಹಾಗೂ ಭಗವದ್ಭಕ್ತರ ಸಂಸ್ಪರ್ಶದಿಂದ ಉತ್ತಮಗತಿಯಾಗುವುದು. ಅದನ್ನೂ ಇಲ್ಲಿ ಪ್ರಸ್ತಾಪಿಸಲಾಗಿದೆ. ವಾನರಸೈನ್ಯವು ಶ್ರೀರಾಮನನ್ನು ನಾಯಕನನ್ನಾಗಿ ಉಳ್ಳದ್ದಾಗಿರುವುದು ಗಮನಿಸಬೇಕಾದ ವಿಚಾರವಾಗಿದೆ. ಕಪಿಗಳು ಬಹಳ ಚಾಂಚಲ್ಯಸ್ವಭಾವದವುಗಳಾದರೂ ಇಲ್ಲಿ ಶ್ರೀರಾಮನ ದೃಷ್ಟಿಪಾತದಿಂದ ಚಾಂಚಲ್ಯವು ನಾಶವಾಗಿ ಅವುಗಳ ಬಲವು ವೃದ್ಧಿಯಾಗಿದೆ. ನಮ್ಮಲ್ಲಿಯೂ ಅಧ್ಯಾತ್ಮವಾಗಿ ನೋಡಿಕೊಂಡರೆ ಮನಸ್ಸಿನಲ್ಲಿ ಏಳುವ ಶುಭವೃತ್ತಿಗಳೆಂಬ ಕಪಿಗಳಿಗೆ ಹಿನ್ನೆಲೆಯಾಗಿ ಆತ್ಮತತ್ತ್ವವು ಇರುವುದು ಅನುಭವಾರೂಢವಾದಲ್ಲಿ ಕಪಿಗಳಿಗೆ ಜಯವಾದಂತೆ ಶುಭವೃತ್ತಿಗಳಿಗೇ

ಜಯವು ದೊರಕುವುದು. ಆಗ ಜೀವನಸಂಗ್ರಾಮದಲ್ಲಿ ರಾಗ-ದ್ವೇಷಾದಿ ರಾಕ್ಷಸರಿಗೆ ಸೋಲಾಗಿ ಸತ್ಯ, ಧರ್ಮ, ಅಹಿಂಸೆ, ಸಮತೆ, ತುಷ್ಟಿ, ವಿವೇಕ, ವೈರಾಗ್ಯಗಳೇ ಮುಂತಾದ ದೇವತೆಗಳಿಗೆ ವಿಜಯವಾಗುವುದು. ಇದೇ ಯುದ್ಧಕಾಂಡದಲ್ಲಿ ಕಂಡುಬರುವ ತತ್ತ್ವವಾಗಿದೆ.

ಯುದ್ಧಕಾಂಡಭಾಗವನ್ನು ಪ್ರಶ್ನಶಾಸ್ತ್ರಕಾರರು ಶುಭಾಶುಭಗಳ ನಿರ್ಣಯಕ್ಕೆ ಪ್ರಮಾಣವಾಗಿಯೂ ಬಳಸುತ್ತಾರೆ. ಹೇಗೆಂದರೆ : ಯಾರಾದರೂ ತಮ್ಮ ಮನಸ್ಸಿನಲ್ಲಿರುವ ಬಯಕೆಯು ನೆರವೇರುವುದೇ ಹೇಗೆ? ಎಂದು ಕೇಳಿದಾಗ–ಶ್ರೀಮದ್ರಾಮಾಯಣಗ್ರಂಥವನ್ನು ಪೂಜಿಸಿ ಯುದ್ಧಕಾಂಡಭಾಗದಲ್ಲಿ ಪುಟಗಳನ್ನು ತಟ್ಟನೆ ತೆರೆಯುತ್ತಾರೆ. ಆ ಪುಟದಲ್ಲಿ ಕಪಿಗಳ ಜಯವನ್ನು ತಿಳಿಸುವ ಕಥೆಯಿದ್ದರೆ ಇಷ್ಟಾರ್ಥಸಿದ್ಧಿಯಾಗುವುದೆಂದೂ–ರಾಕ್ಷಸರ ಜಯದ ಭಾಗವಿದ್ದರೆ ಕಾರ್ಯಸಿದ್ಧಿಯಾಗದೆಂದೂ ಭವಿಷ್ಯವನ್ನು ನುಡಿಯುತ್ತಾರೆ. ಇದನ್ನು ಶ್ರದ್ಧೆಯುಳ್ಳವರು ಮಾತ್ರ ಅನುಸರಿತಕ್ಕದ್ದು–ಎಂದು ಹೇಳಬೇಕಾಗಿಲ್ಲ. ಹೀಗೆ ರಾಮಾಯಣವು ಅವರವರ ಭಾವಾನುಗುಣವಾಗಿಯೂ ಫಲಪ್ರದವಾಗಿದೆ.

ಶ್ರೀಮದ್ರಾಮಾಯಣದ ವಿಷಯದಲ್ಲಿ ಈಗಾಗಲೇ ರಸಭರಿತವೂ, ಸುಂದರವೂ, ಪರಿಪೂರ್ಣವೂ ಆದ ಮುನ್ನುಡಿಗಳನ್ನು ಅನೇಕ ಮಹನೀಯರು ಬರೆದಿರುವುದರಿಂದ ಅಲ್ಪಜ್ಞನಾದ ನಾನು ಹೆಚ್ಚಾಗಿ ಬರೆಯಬೇಕಾದದ್ದೇನೂ ಇರುವುದಿಲ್ಲ. ಆದರೆ ಈ ಸೇವೆಯು ನನ್ನ ಕಡೆಯಿಂದ ಆಗಬೇಕೆಂದು ದೃಢವಾಗಿ ನಿಶ್ಚಯಿಸಿ ಅವಕಾಶವನ್ನು ಕಲ್ಪಿಸಿಕೊಟ್ಟ ಪ್ರಕಾಶಕರಿಗೆ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತಾ ಈ ಪ್ರಕಾಶನ ಕಾರ್ಯವು ಯಶಸ್ವಿಯಾಗಿ ಮುಂದುವರೆಯಲೆಂದು ಶ್ರೀರಾಮಚಂದ್ರದೇವರ ಅಡಿದಾವರೆಗಳಲ್ಲಿ ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಇತಿ, ಸಜ್ಜನವಿಧೇಯ,
ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,
ಪಂಡಿತ್,
ಅಧ್ಯಾತ್ಮಪ್ರಕಾಶ ಕಾರ್ಯಾಲಯ,
ಹೊಳೆನರಸೀಪುರ.

ಹೊಳೆನರಸೀಪುರ,
ತಾ|| 22-6-1989.

ಶ್ರೀಮದ್ವಾಲ್ಮೀಕಿರಾಮಾಯಣ–ಎಂಟನೆಯ ಸಂಪುಟ
ಯುದ್ಧಕಾಂಡದ ಮೂಲಶ್ಲೋಕಗಳ ಸರ್ಗಾನುಕ್ರಮಣಿಕೆ
ಮತ್ತು ವಿಷಯಾನುಕ್ರಮಣಿಕೆ

(ವಿ. ಸೂ. - ಮೊದಲನೆಯದು : ಮೂಲಶ್ಲೋಕಗಳ ಸರ್ಗಗಳ ಪುಟಸಂಖ್ಯೆ–
ಎರಡನೆಯದು : ವಿಷಯಗಳ ಪುಟಸಂಖ್ಯೆ)

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೧೯	ವಿಭೀಷಣನ ಶರಣಾಗತಿ : ವಿಭೀಷಣನಿಂದ ರಾವಣನ ಶಕ್ತಿಯ ಪರಿಚಯ : ರಾವಣನ ವಧೆಗೆ ಶ್ರೀರಾಮನಿಂದ ಪ್ರತಿಜ್ಞೆ : ವಿಭೀಷಣನಿಗೆ ಲಂಕಾರಾಜ್ಯದ ಅಭಿಷೇಕ : ಸಮುದ್ರತೀರದಲ್ಲಿ ಶ್ರೀರಾಮನ ಪ್ರಾಯೋಪವೇಶ	.... ೧೫೧೧	2565
೨೦	ಗುಪ್ತಚಾರನಾದ ಶಾರ್ದೂಲನು ಸಮುದ್ರದ ಉತ್ತರತೀರದಲ್ಲಿ ನಡೆಯುತ್ತಿರುವ ಸೇನಾ ಸನ್ನಾಹವನ್ನು ತಿಳಿಸಿದಾಗ–ರಾವಣನು ಶುಕನನ್ನು ಸಂಧಾನಕ್ಕಾಗಿ ಸುಗ್ರೀವನ ಬಳಿಗೆ ಕಳುಹಿಸಿಕೊಟ್ಟುದು : ಅದನ್ನು ತಿಳಿದ ವಾನರರು ಶುಕನನ್ನು ಹಿಂಸಿಸಿದುದು : ಶ್ರೀರಾಮನ ಕೃಪೆಯಿಂದ ಶುಕನ ಬಿಡುಗಡೆ : ಸುಗ್ರೀವನು ಶುಕನ ಮೂಲಕವಾಗಿ ರಾವಣನಿಗೆ ಉತ್ತರವನ್ನು ಹೇಳಿಕಳುಹಿಸಿದುದು	.... ೧೫೧೫	2571
೨೧	ಸಮುದ್ರತೀರದಲ್ಲಿ ಶ್ರೀರಾಮನ ಪ್ರಾಯೋಪವೇಶ : ಸಮುದ್ರರಾಜನು ಬಾರದಿರಲು ಕುಪಿತನಾಗಿ ಸಮುದ್ರನ ಮೇಲೆ ಬಾಣಪ್ರಯೋಗ	.... ೧೫೧೯	2577
೨೨	ಸಮುದ್ರರಾಜನ ಸಲಹೆಯಂತೆ ನಲನಿಂದ ಸಮುದ್ರದ ಮೇಲೆ ನೂರು ಯೋಜನಗಳ ಉದ್ದದ ಸೇತುವೆಯ ನಿರ್ಮಾಣ : ಅದರ ಮೂಲಕವಾಗಿ ಶ್ರೀರಾಮನೇ ಮೊದಲಾದವರು ಸಮುದ್ರವನ್ನು ದಾಟಿ ಆಚೆಯ ದಡದಲ್ಲಿ ಬೀಡುಬಿಟ್ಟುದು	.... ೧೫೨೨	2582

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೨೩	ಶ್ರೀರಾಮನು ಲಕ್ಷ್ಮಣನಿಗೆ ಉತ್ಪಾತಸೂಚಕವಾದ ಲಕ್ಷಣಗಳನ್ನು ವಿವರಿಸಿ ಹೇಳಿದುದು : ಲಂಕೆಯ ಆಕ್ರಮಣ	೧೫೩೧	2595
೨೪	ಶ್ರೀರಾಮನಿಂದ ಲಂಕಾಪಟ್ಟಣದ ವರ್ಣನೆ : ವ್ಯೂಹಕ್ರಮದಲ್ಲಿ ನಿಲ್ಲಲು ಸೈನ್ಯಕ್ಕೆ ಆದೇಶ : ಶ್ರೀರಾಮನಿಂದ ಬಿಡುಗಡೆ ಹೊಂದಿದ ಶುಕನು ರಾವಣನ ಬಳಿಗೆ ಹೋಗಿ ಶ್ರೀರಾಮನ ಸೈನ್ಯ ಶಕ್ತಿಯನ್ನು ವಿವರಿಸಿ ಹೇಳಿದುದು : ರಾವಣನಿಂದ ತನ್ನ ಬಲದ ಬಗೆಗೆ ಪ್ರಶಂಸೆ	೧೫೩೨	2598
೨೫	ರಾವಣನು ಪುನಃ ಶುಕ-ಸಾರಣರನ್ನು ಗುಟ್ಟಿನಲ್ಲಿ ವಾನರರ ಸೈನ್ಯಸಮೂಹಕ್ಕೆ ಕಳುಹಿಸಿದುದು : ವಿಭೀಷಣನು ಅವರನ್ನು ಗುರುತಿಸಿದುದು : ಶ್ರೀರಾಮನ ಕೃಪೆಯಿಂದ ಅವರು ಪುನಃ ಬಿಡುಗಡೆ ಹೊಂದಿ ಸಂದೇಶವನ್ನು ಹೊತ್ತು ಲಂಕೆಗೆ ಹಿಂದಿರುಗಿ ರಾವಣನಿಗೆ ಸಮಾಧಾನ ಹೇಳಿದುದು	೧೫೩೭	2604
೨೬	ಸಾರಣನು ರಾವಣನಿಗೆ ವಾನರದಂಡನಾಯಕರ ಪರಿಚಯವನ್ನು ಮಾಡಿಕೊಟ್ಟುದು	೧೫೪೦	2609
೨೭	ಸಾರಣನು ರಾವಣನಿಗೆ ವಾನರಸೈನ್ಯದಲ್ಲಿ ಪ್ರಧಾನರಾದ ದಳಪತಿಗಳ ಪರಿಚಯವನ್ನು ಮಾಡಿಕೊಟ್ಟುದು	೧೫೪೪	2615
೨೮	ಶುಕನು ಶ್ರೀರಾಮನೇ ಮೊದಲಾದ ಪ್ರಧಾನರನ್ನು ರಾವಣನಿಗೆ ಪರಿಚಯಮಾಡಿ ಕೊಟ್ಟುದು	೧೫೪೯	2621
೨೯	ರಾವಣನು ಶುಕ-ಸಾರಣರನ್ನು ಮೂದಲಿಸಿ ಹೊರಕ್ಕಟ್ಟಿದುದು : ರಾವಣನಿಂದ ಕಳುಹಿಸಲ್ಪಟ್ಟಿದ್ದ ಇತರ ಗುಪ್ತಚಾರರೂ		

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
	ಶ್ರೀರಾಮನ ಕೃಪೆಯಿಂದ ವಾನರರ ಉಪಟಳ ವನ್ನು ತಪ್ಪಿಸಿಕೊಂಡು ಲಂಕೆಗೆ ಹಿಂದಿರುಗಿದುದು..	೧೫೫೩	2627
೩೦	ಗೂಢಚಾರರು ರಾವಣನಿಗೆ ವಾನರಸೇನೆಯ ಸ್ವರೂಪವನ್ನು ತಿಳಿಸಿ ಮುಖ್ಯರಾದವರ ಪರಿಚಯಮಾಡಿಕೊಟ್ಟುದು	೧೫೫೬	2631
೩೧	ಮಾಯಾರಚಿತವಾದ ಶ್ರೀರಾಮನ ತಲೆಯನ್ನು ತೋರಿಸಿ ಸೀತೆಯನ್ನು ವಿಮೋಹಗೊಳಿಸಲು ರಾವಣನ ಪ್ರಯತ್ನ	೧೫೬೦	2636
೩೨	ಶ್ರೀರಾಮನು ಮೃತನಾದನೆಂದೇ ಭಾವಿಸಿದ ಸೀತೆಯ ವಿಲಾಪ : ಮಂತ್ರಿಗಳ ಸಲಹೆಯಂತೆ ರಾವಣನಿಂದ ಯುದ್ಧದ ಸಿದ್ಧತೆ	೧೫೬೪	2642
೩೩	ಸರಮೆಯು ಸೀತೆಯನ್ನು ಸಂತೈಸಿ ಎಲ್ಲವೂ ರಾವಣನ ಮಾಯೆಯೆಂದು ಸಮಾಧಾನ ಹೇಳಿದುದು : ಶ್ರೀರಾಮನು ಬಂದಿರುವನೆಂಬ ಶುಭಸಮಾಚಾರವನ್ನೂ ಹೇಳಿ ಶ್ರೀರಾಮನೇ ಜಯಿಸುವನೆಂಬ ಬಗೆಗೆ ಸೀತೆಯಲ್ಲಿ ವಿಶ್ವಾಸವನ್ನು ಹುಟ್ಟಿಸಿದುದು	೧೫೬೯	2649
೩೪	ಸೀತೆಯ ಇಷ್ಟದಂತೆ ಸರಮೆಯು ಮಂತ್ರಿಗಳೊಡನೆ ರಾವಣನು ಚರ್ಚಿಸಿ ನಿರ್ಧರಿಸಿದ ವಿಷಯವನ್ನು ಹೇಳಿದುದು	೧೫೭೨	2654
೩೫	ಮಾಲ್ಯವಂತನು ರಾವಣನಿಗೆ ಶ್ರೀರಾಮನೊಡನೆ ಸಂಧಿಮಾಡಿಕೊಳ್ಳುವ ಸಲಹೆಯನ್ನಿತ್ತುದು	೧೫೭೫	2658
೩೬	ರಾವಣನು ಮಾಲ್ಯವಂತನನ್ನು ಆಕ್ಷೇಪಿಸಿ ನಗರರಕ್ಷಣೆಯ ವ್ಯವಸ್ಥೆಯನ್ನು ಏರ್ಪಡಿಸಿ ಅಂತಃಪುರಕ್ಕೆತೆರಳಿದುದು	೧೫೭೯	2664

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೩೭	ರಾವಣನು ಲಂಕೆಯ ರಕ್ಷಣೆಗಾಗಿ ಮಾಡಿರುವ ವ್ಯವಸ್ಥೆಯನ್ನು ವಿಭೀಷಣನು ಶ್ರೀರಾಮನಿಗೆ ವಿವರಿಸಿ ಹೇಳಿದುದು : ಶ್ರೀರಾಮನು ತನ್ನ ಕಡೆಯ ಸೇನಾನಾಯಕರಿಗೆ ನಾಲ್ಕು ದ್ವಾರ ಗಳನ್ನೂ ಆಕ್ರಮಿಸಲು ಆದೇಶವನ್ನಿತ್ತುದು	.... ೧೫೮೧	2667
೩೮	ಶ್ರೀರಾಮನು ಪ್ರಮುಖವಾನರರೊಡನೆ ಸುವೇಲಪರ್ವತವನ್ನು ಹತ್ತಿ ಅಲ್ಲಿಯೇ ಬಿಡಾರಮಾಡಿದುದು	.... ೧೫೮೪	2672
೩೯	ಶ್ರೀರಾಮನು ವಾನರನಾಯಕರೊಡನೆ ಸುವೇಲಪರ್ವತದಲ್ಲಿ ನಿಂತು ಲಂಕಾಪಟ್ಟಣವನ್ನು ನಿರೀಕ್ಷಿಸಿದುದು	.... ೧೫೮೬	2675
೪೦	ಸುಗ್ರೀವ - ರಾವಣರ ದ್ವಂದ್ವಯುದ್ಧ	.... ೧೫೮೯	2680
೪೧	ದುಃಸಾಹಸಕ್ಕೆ ಕೈಹಾಕದಂತೆ ಶ್ರೀರಾಮನು ಸುಗ್ರೀವನನ್ನು ಎಚ್ಚರಿಸಿ ನಾಲ್ಕು ಮಹಾದ್ವಾರ ಗಳನ್ನು ಆಕ್ರಮಿಸಲು ವಾನರಸೈನ್ಯವನ್ನು ವಿಭಜಿಸಿ ಕಳುಹಿಸಿದುದು : ವಾನರರ ಆಕ್ರಮಣದಿಂದ ರಾಕ್ಷಸರ ಭಯ	.... ೧೫೯೨	2686
೪೨	ವಾನರರಿಂದ ಲಂಕೆಯ ಆಕ್ರಮಣ : ರಾಕ್ಷಸರೊಡನೆ ಯುದ್ಧ	.... ೧೬೦೨	2699
೪೩	ದ್ವಂದ್ವಯುದ್ಧದಲ್ಲಿ ರಾಕ್ಷಸರ ಪರಾಜಯ	.... ೧೬೦೬	2705
೪೪	ರಾತ್ರಿಯಲ್ಲಿ ವಾನರರಿಗೂ ರಾಕ್ಷಸರಿಗೂ ಘೋರಯುದ್ಧ : ಅಂಗದನಿಂದ ಇಂದ್ರಜಿತುವಿನ ಪರಾಜಯ : ಅದೃಶ್ಯನಾದ ಇಂದ್ರಜಿತುವಿನಿಂದ ರಾಮ-ಲಕ್ಷ್ಮಣರ ಬಂಧನ	.... ೧೬೧೧	2709

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೪೫	ಇಂದ್ರಜಿತುವಿನ ಬಾಣದಿಂದ ರಾಮ-ಲಕ್ಷ್ಮಣರ ಮೂರ್ಛೆ : ವಾನರರ ದುಃಖ	.....೧೬೧೪	2714
೪೬	ರಾಮ-ಲಕ್ಷ್ಮಣರು ಮೂರ್ಛಿತರಾಗಿ ಬಿದ್ದಿರುವುದನ್ನು ನೋಡಿ ವಾನರರ ಶೋಕ : ಇಂದ್ರಜಿತುವಿನ ಹರ್ಷೋದ್ಗಾರ : ವಿಭೀಷಣನಿಂದ ಸುಗ್ರೀವನ ಸಮಾಧಾನ : ಇಂದ್ರಜಿತುವಿನಿಂದ ಶತ್ರುವಧೆಯ ವೃತ್ತಾಂತವನ್ನು ತಿಳಿದ ರಾವಣ ನಿಂದ ಪುತ್ರನಿಗೆ ಅಭಿನಂದನೆ	.....೧೬೧೭	2717
೪೭	ವಾನರರಿಂದ ರಾಮ-ಲಕ್ಷ್ಮಣರ ರಕ್ಷಣೆ : ರಾವಣನ ಆಜ್ಞೆಯಂತೆ ರಾಕ್ಷಸಿಯರು ರಣ ಭೂಮಿಯಲ್ಲಿ ಮೂರ್ಛಿತರಾಗಿದ್ದ ರಾಮ-ಲಕ್ಷ್ಮಣರನ್ನು ಸೀತೆಗೆ ತೋರಿಸಿದುದು : ಸೀತೆಯ ವಿಲಾಪ	.... ೧೬೨೨	2724
೪೮	ಸೀತೆಯ ವಿಲಾಪ : ರಾಮ-ಲಕ್ಷ್ಮಣರು ಜೀವಿಸಿರುವರೆಂದು ತ್ರಿಜಟೆಯು ಸೀತೆಯನ್ನು ಸಂತೈಸುತ್ತಾ ಅಶೋಕವನಕ್ಕೆ ಪುನಃ ಕರೆತಂದುದು	.... ೧೬೨೪	2727
೪೯	ಶ್ರೀರಾಮನು ಮೂರ್ಛೆಯಿಂದ ಎಚ್ಚರಗೊಂಡು ಮೂರ್ಛಿತನಾಗಿದ್ದ ಲಕ್ಷ್ಮಣನನ್ನು ನೋಡಿ ವಿಲಪಿಸಿದುದು : ತಾನೂ ಪ್ರಾಣತ್ಯಾಗಮಾಡಲು ನಿಶ್ಚಯಿಸಿ ವಾನರರಿಗೆ ಕಿಷ್ಕಿಂಧೆಗೆ ಹಿಂದಿರುಗಲು ಆಜ್ಞಾಪಿಸಿದುದು	.....೧೬೨೮	2735
೫೦	ವಾನರರ ಪಲಾಯನ : ಜಾಂಬವಂತನಿಂದ ಸೈನಿಕರಿಗೆ ಸಾಂತ್ವನ : ವಿಭೀಷಣನ ವಿಲಾಪ : ಸುಗ್ರೀವನ ಸಾಂತ್ವನ : ಗರುಡನ ಆಗಮನ : ನಾಗಪಾಶದಿಂದ ರಾಮ-ಲಕ್ಷ್ಮಣರ ಬಿಡುಗಡೆ : ಗರುಡನ ನಿಷಮಣ	.... ೧೬೩೧	2739

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೫೧	ಶ್ರೀರಾಮ-ಲಕ್ಷ್ಮಣರು ಬಂಧಮುಕ್ತರಾದರೆಂಬ ವಾರ್ತೆಯನ್ನು ಕೇಳಿ ಚಿಂತಿತನಾದ ರಾವಣನು ಧೂಮ್ರಾಕ್ಷನನ್ನು ಯುದ್ಧಕ್ಕೆ ಕಳುಹಿಸಿಕೊಟ್ಟುದು	೧೬೩೭	2748
೫೨	ವಾನರ-ಧೂಮ್ರಾಕ್ಷರ ಯುದ್ಧ : ಹನುಮಂತನಿಂದ ಧೂಮ್ರಾಕ್ಷನ ವಧೆ	೧೬೪೧	2752
೫೩	ವಜ್ರದಂಷ್ಟ್ರನು ಸೇನಾಸಹಿತನಾಗಿ ಯುದ್ಧಕ್ಕೆ ಹೊರಟುದು : ವಾನರ - ರಾಕ್ಷಸರ ಯುದ್ಧ : ವಜ್ರದುಷ್ಟ್ರನು ವಾನರರನ್ನೂ ಅಂಗದನು ರಾಕ್ಷಸರನ್ನೂ ಸಂಹರಿಸಿದುದು	೧೬೪೫	2756
೫೪	ಅಂಗದ-ವಜ್ರದಂಷ್ಟ್ರರ ಯುದ್ಧ : ವಜ್ರದಂಷ್ಟ್ರನ ಸಂಹಾರ	೧೬೪೮	2760
೫೫	ಅಕಂಪನನೇ ಮೊದಲಾದ ರಾಕ್ಷಸರ ಮತ್ತು ವಾನರರ ಭೀಕರಯುದ್ಧ	೧೬೫೨	2765
೫೬	ಹನುಮಂತನಿಂದ ಅಕಂಪನನ ಸಂಹಾರ	೧೬೫೫	2768
೫೭	ಪ್ರಹಸ್ತನು ರಾವಣನ ಆಜ್ಞೆಯಂತೆ ವಿಶಾಲವಾದ ಸೈನ್ಯದೊಡನೆ ಯುದ್ಧಕ್ಕೆ ಹೊರಟುದು....	೧೬೫೯	2773
೫೮	ನೀಲನಿಂದ ಪ್ರಹಸ್ತನ ವಧೆ	೧೬೬೩	2779
೫೯	ಯುದ್ಧಕ್ಕೆ ರಾವಣನ ಪ್ರಸ್ಥಾನ : ಅವನ ಜೊತೆಗಾರರ ಪರಿಚಯ : ರಾವಣನ ಪ್ರಹಾರದಿಂದ ಸುಗ್ರೀವನ ಮೂರ್ಛೆ : ಲಕ್ಷ್ಮಣ-ರಾವಣರ ಯುದ್ಧ : ಹನುಮಂತ-ರಾವಣರ ಮುಷ್ಟಿಯುದ್ಧ : ನೀಲ-ಲಕ್ಷ್ಮಣರ ಮೂರ್ಛೆ : ಶ್ರೀರಾಮನಿಂದ ಪರಾಜಿತನಾದ ರಾವಣನ ಲಂಕಾಭಿಗಮನ	೧೬೬೯	2785

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೬೦	ಪರಾಜಯದಿಂದ ದುಃಖಿತನಾದ ರಾವಣನು ಕುಂಭಕರ್ಣನನ್ನು ಎಚ್ಚರಗೊಳಿಸಿದುದು : ಅಣ್ಣನನ್ನು ಕಾಣಲು ಹೋಗುತ್ತಿದ್ದ ಕುಂಭಕರ್ಣನನ್ನು ನೋಡಿ ವಾನರಸೈನಿಕರು ಭಯಗೊಂಡುದು	೧೬೮೭	2808
೬೧	ವಿಭೀಷಣನು ಶ್ರೀರಾಮನಿಗೆ ಕುಂಭಕರ್ಣನ ಪರಿಚಯ ಮಾಡಿಕೊಟ್ಟುದು : ಶ್ರೀರಾಮನ ಆಜ್ಞೆಯಂತೆ ವಾನರಸೈನಿಕರು ಲಂಕಾಪಟ್ಟಣದ ಹೆಬ್ಬಾಗಿಲುಗಳನ್ನು ಆಕ್ರಮಿಸಿದುದು	೧೬೯೭	2819
೬೨	ರಾವಣನು ಅರಮನೆಗೆ ಬಂದ ಕುಂಭಕರ್ಣನಿಗೆ ರಾಮನಿಂದ ಉಂಟಾಗಿರುವ ಭಯವನ್ನು ತಿಳಿಯ ಪಡಿಸಿ ಶತ್ರುಸೈನ್ಯವನ್ನು ವಿನಾಶಗೊಳಿಸಲು ಪ್ರೇರಿಸಿದುದು	೧೭೦೧	2824
೬೩	ರಾವಣನ ಕುತ್ಸಿತಕಾರ್ಯಕ್ಕಾಗಿ ಕುಂಭಕರ್ಣನ ನಿಂದನೆ : ಆದರೂ ಯುದ್ಧದ ವಿಷಯವಾಗಿ ಪ್ರೋತ್ಸಾಹಿಸಿದುದು	೧೭೦೪	2827
೬೪	ಮಹೋದರನು ಕುಂಭಕರ್ಣನ ಮಾತಿಗೆ ಆಕ್ಷೇಪವನ್ನೆತ್ತಿ ಯುದ್ಧಮಾಡದೆಯೇ ಇಷ್ಟಾರ್ಥ ವನ್ನು ಪಡೆಯುವ ಉಪಾಯವನ್ನು ಹೇಳಿದುದು..	೧೭೦೯	2836
೬೫	ಕುಂಭಕರ್ಣನ ರಣಯಾತ್ರೆ	೧೭೧೩	2841
೬೬	ಕುಂಭಕರ್ಣನ ಭಯದಿಂದ ಓಡಿಹೋದ ವಾನರರಿಗೆ ಅಂಗದನಿಂದ ಪ್ರೋತ್ಸಾಹ : ಕುಂಭಕರ್ಣನಿಂದ ವಾನರರ ಸಂಹಾರ : ವಾನರರ ಪಲಾಯನ : ಅಂಗದನ ಪ್ರೋತ್ಸಾಹ ದಂತೆ ಮತ್ತೆ ವಾನರರ ಆಗಮನ	೧೭೧೮	2848

ಸರ್ಗ	ವಿಷಯಗಳು	ಪುಟಸಂಖ್ಯೆ	ಪುಟಸಂಖ್ಯೆ
೬೭	ಕುಂಭಕರ್ಣನ ಘೋರಯುದ್ಧ : ಶ್ರೀರಾಮನಿಂದ ಕುಂಭಕರ್ಣನ ವಧೆ	.... ೧೭೨೨	2853
೬೮	ಕುಂಭಕರ್ಣನ ಮರಣದಿಂದ ರಾವಣನ ದುಃಖ	....೧೭೪೧	2874
೬೯	ರಾವಣನ ಮಕ್ಕಳೂ ಮತ್ತು ಸಹೋದರರೂ ಯುದ್ಧಕ್ಕೆ ಹೋದುದು : ಅಂಗದನಿಂದ ನರಾಂತಕನ ಸಂಹಾರ	.....೧೭೪೪	2877
೭೦	ದೇವಾಂತಕ-ತ್ರಿಶಿರಸ-ಮಹೋದರ-ಮಹಾಪಾರ್ಶ್ವರ ಸಂಹಾರ	.... ೧೭೫೪	2887
೭೧	ಲಕ್ಷ್ಮಣನಿಂದ ಅತಿಕಾಯನ ಸಂಹಾರ	.... ೧೭೬೧	2894
೭೨	ರಾವಣನ ಚಿಂತೆ : ಲಂಕಾಪಟ್ಟಣವನ್ನು ಸುರಕ್ಷಿತವಾಗಿಡಲು ಆದೇಶ	.... ೧೭೭೨	2906
	ಪರಿಶಿಷ್ಟ	.... I to XXIV	

--

ತೃತೀಯ ಮುದ್ರಣದ ಪ್ರಸ್ತಾವನೆ

ದಯಾಮಯನಾದ ಭಗವಂತನ ಅಪಾರವಾದ ಕರುಣೆಯಿಂದಲೂ ಶ್ರೀರಂಗ ಮಹಾಗುರುವಿನ ಆಶೀರ್ವಾದದಿಂದಲೂ ರಾಮಾಯಣದ 8ನೇ ಸಂಪುಟದ 3ನೇ ಮುದ್ರಣವನ್ನು ಮುಗಿಸುತ್ತಿದ್ದೇವೆ. ಈ ಮುದ್ರಣವು ಸೇರಿ ವಾಲ್ಮೀಕಿರಾಮಾಯಣದ 8ನೇ ಸಂಪುಟದ 15 ಸಾವಿರ ಪ್ರತಿಗಳನ್ನು ಮುದ್ರಿಸಿದಂತಾಗಿದೆ. ಹಿಂದೊಮ್ಮೆ ಮಾಡಿದ ನಮ್ಮ ಸತ್ಸಂಕಲ್ಪದಂತೆ ರಾಮಾಯಣದ 24 ಸಾವಿರ ಪುಸ್ತಕಗಳನ್ನು ಮುದ್ರಿಸಿ ವಿತರಣೆಮಾಡಬೇಕೆಂದು ಸಂಕಲ್ಪಿಸಲಾಗಿತ್ತು. ಅದರಲ್ಲಿ ಸುಮಾರು 2/3 ಭಾಗವನ್ನು ಮುದ್ರಿಸಲಾಗಿದೆ. ಈ ನಮ್ಮ ಸತ್ಸಂಕಲ್ಪವು ನಮ್ಮ ಹಳೆಯ ಗ್ರಾಹಕರ ಮೂಲಕವು ಭಗವಂತನ ಮತ್ತು ಸದ್ಗುರುಗಳ ಅನುಗ್ರಹದಿಂದಲೂ ಸಾಧಿತ ವಾಗಬೇಕಾಗಿದೆ. ಸತ್ಪುರುಷರಾದ ನಮ್ಮ ಗ್ರಾಹಕರ ಸದಾಶಯ ಸಹಕಾರಗಳಿಂದಲೇ ನಾವು ಈ ಅಗಾಧವಾದ ಕಾರ್ಯವನ್ನು ಮುಗಿಸಿರುತ್ತೇವೆ. ಆದುದರಿಂದ ಮಹಾಭಾರತ, ರಾಮಾಯಣ, ಭಾಗವತ, ಹರಿವಂಶಗಳ ಪ್ರಚಾರಕಾರ್ಯಕ್ಕೆ ಬೆಂಬಲಿಗರಾಗಿ ನಿಂತು ಈ ನಮ್ಮ ಕಾರ್ಯವನ್ನು ಸಫಲಗೊಳಿಸಬೇಕಾಗಿ ಕಳಕಳಿಯಿಂದ ವಿನಂತಿಸುತ್ತೇವೆ.

–ಪ್ರಕಾಶಕರು.

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ
ಶ್ರೀಮದ್ರಾಮಚಂದ್ರಾಪುರಮಠಸ್ಥ

ಶ್ರೀಮದ್ರಾಘವೇಂದ್ರಭಾರತೀ ಶ್ರೀಸ್ವಾಮಿಭಿಃ

ಅಸ್ಮದತ್ಯಂತಪ್ರಿಯಶಿಷ್ಯರಾದ ಬೆಂಗಳೂರು ತ್ಯಾಗರಾಜನಗರದಲ್ಲಿರುವ
ಭಾರತ ದರ್ಶನ ಸಂಪಾದಕ ಕೇಶವ ಸುಬ್ರಹ್ಮಣ್ಯ ಕೌಶಿಕರಿಗೆ

॥ ಶ್ರೀಮನ್ನಾರಾಯಣಸ್ಮರಣಪುರಸ್ಸರಂ
ಸಂದಿಷ್ಟೋಽಯಂ ಸಂದೇಶಃ ॥

ಅದಾಗಿ : ಶ್ರೀಸವಾರಿಯು ಆರಾಧ್ಯ ದೇವತಾದಿವ್ಯಸನ್ನಿಧಿಯಲ್ಲಿ ಸಮಸ್ತಜನತೆಯ ಯೋಗ-ಕ್ಷೇಮಗಳನ್ನು ಸಂಪ್ರಾರ್ಥಿಸುತ್ತಾ ಸದ್ಯ ಈ ಮುಕ್ಕಾಮಿನಲ್ಲಿ ಕ್ಷೇಮದಿಂದ ವಸತಿಮಾಡಿದೆ.

ಶ್ರೀಮದ್ರಾಮಾಯಣದ ಕನ್ನಡಾನುವಾದವನ್ನು ಸಂಪುಟ-ಸಂಪುಟವಾಗಿ ಹೊರತರಲಿರುವ ಸಂಗತಿ ತಿಳಿದು ಸಂತೋಷವಾಯಿತು.

ಈ ಸಂಪುಟದಲ್ಲಿ ವಿಭೀಷಣನು ಶ್ರೀರಾಮನಲ್ಲಿ ಆಶ್ರಯಪಡೆದ, ಸಮುದ್ರಕ್ಕೆ ಸೇತುಬಂಧಮಾಡಿದ, ಯುದ್ಧನೀತಿಯನ್ನು ವಿವರಿಸಿದ, ಯುದ್ಧವನ್ನಾರಂಭಿಸಿದ, ಕುಂಭಕರ್ಣನನ್ನು ವಧಿಸಿದ, ಇಂದ್ರಜಿತುವು ನಾಗಪಾಶದಿಂದ ರಾಮ-ಲಕ್ಷ್ಮಣರನ್ನು ಬಂಧಿಸಿದಾಗ ಗರುಡನು ಬಂದು ಪಾಶವಿಮೋಚನೆಯಾದ, ರಾವಣನನ್ನು ಪರಾಭವಗೊಳಿಸುವ–ಇವೇ ಮೊದಲಾದ ಅನೇಕ ಮಹತ್ತ್ವದ ವಿಷಯಗಳು, ಬಂದಿವೆ.

ಕಾಗದ ಮೊದಲಾದ ವಸ್ತುಗಳ ಬೆಲೆಯು ಹೆಚ್ಚಿ ಮುದ್ರಣಕಾರ್ಯವು ದುರ್ಭರವಾಗುತ್ತಿರುವ ಈ ಸಂದರ್ಭದಲ್ಲಿಯೂ ನೀವು, ನಿಗದಿತ ಬೆಲೆಯಲ್ಲಿ–ಸಮಯದಲ್ಲಿ, ಸುಂದರವಾಗಿಯೂ ಸ್ಖಾಲಿತ್ಯರಹಿತವಾಗಿಯೂ, ಸಂಪುಟಗಳನ್ನು ಹೊರತರುತ್ತಲಿರುವುದು, ನಿಮ್ಮ ಯತ್ನಕ್ಕೆ ದೈವಬಲವಿರುವುದನ್ನು ಸೂಚಿಸುತ್ತದೆ.

ಮುಂದಿನ ಸಂಪುಟಗಳೂ ಹೀಗೆಯೇ ಸುಂದರವಾಗಿಯೂ, ಮನೋಹರವಾಗಿಯೂ ಪ್ರಕಾಶಗೊಂಡು ಕನ್ನಡಿಗರೆಲ್ಲ ಇವುಗಳ ಪ್ರಯೋಜನ ಪಡೆಯುವಂತಾಗಲೆಂದೂ, ನೀವೆಲ್ಲ ಸುಖ-ಶಾಂತಿ-ಸಮೃದ್ಧಿಗಳನ್ನೂ ಶ್ರೀರಾಮಾನುಗ್ರಹವನ್ನೂ ಸಹ ಪಡೆವಂತಾಗಲೆಂದೂ ಹಾರೈಸಿ ಇದರ ಜೊತೆಗೆ ಸುವರ್ಣಮಂತ್ರಾಕ್ಷತೆಯಿತ್ತು ಹರಸಲಾಗಿದೆ.

ಇತಿ ಶ್ರೀಮನ್ನಾರಾಯಣಸ್ಮೃತಯಃ

ಮಿತಿಃ :- ಶ್ರೀ ಶುಕ್ಲನಾಮ ಸಂವತ್ಸರದ ಜ್ಯೇಷ್ಠಶುಕ್ಲ ನವಮಿಯು
(12-6-89) ಇಂದುವಾಸರೇ

ವಸತಿ :- ಶ್ರೀ ತುಂಗಾತೀರಸ್ಥಿತ ತೀರ್ಥರಾಜಪುರವಿರಾಜಿತ ತೀರ್ಥಹಳ್ಳಿ
ಶ್ರೀರಾಮಚಂದ್ರಾಪುರಮಠೇ

ಶ್ರೀಮಹಾಗಣಪತಯೇ ನಮಃ   ಶ್ರೀಮಹಾಸರಸ್ವತ್ಯೈ ನಮಃ   ಶ್ರೀಸದ್ಗುರವೇ ನಮಃ

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಮ್ ॥

ಅಷ್ಟಮಃ ಸಂಪುಟಃ
ಶ್ರೀಮದ್ವಾಲ್ಮೀಕಿರಾಮಾಯಣೇ ಯುದ್ಧಕಾಣ್ಡೇ

ಏಕೋನವಿಂಶಃ ಸರ್ಗಃ

ರಾಘವೇಣಾಭಯೇ ದತ್ತೇ ಸಂನತೋ ರಾವಣಾನುಜಃ ।
ವಿಭೀಷಣೋ ಮಹಾಪ್ರಾಜ್ಞೋ ಭೂಮಿಂ ಸಮವಲೋಕಯತ್ ॥೧॥

ಖಾತ್ಪಪಾತಾವನೀಂ ಹೃಷ್ಟೋ ಭಕ್ತೈರನುಚರೈಃ ಸಹ ।
ಸ ತು ರಾಮಸ್ಯ ಧರ್ಮಾತ್ಮಾ ನಿಪಪಾತ ವಿಭೀಷಣಃ ।
ಪಾದಯೋಃ ಶರಣಾನ್ವೇಷೀ ಚತುರ್ಭಿಃ ಸಹ ರಾಕ್ಷಸೈಃ ॥೨॥

ಅಬ್ರವೀಚ್ಚ ತದಾ ರಾಮಂ ವಾಕ್ಯಂ ತತ್ರ ವಿಭೀಷಣಃ ।
ಧರ್ಮಯುಕ್ತಂ ಚ ಯುಕ್ತಂ ಚ ಮನಸಃ ಸಂಪ್ರಹರ್ಷಣಮ್ ॥೩॥

ಅನುಜೋ ರಾವಣಸ್ಯಾಹಂ ತೇನ ಚಾಸ್ಮ್ಯವಮಾನಿತಃ ।
ಭವನ್ತಂ ಸರ್ವಭೂತಾನಾಂ ಶರಣ್ಯಂ ಶರಣಂ ಗತಃ ॥೪॥

ಪರಿತ್ಯಕ್ತಾ ಮಯಾ ಲಙ್ಕಾ ಮಿತ್ರಾಣಿ ಚ ಧನಾನಿ ಚ ।
ಭವದ್ಗತಂ ಮೇ ರಾಜ್ಯಂ ಚ ಜೀವಿತಂ ಚ ಸುಖಾನಿ ಚ ॥೫॥

ತಸ್ಯ ತದ್ವಚನಂ ಶ್ರುತ್ವಾ ರಾಮೋ ವಚನಮಬ್ರವೀತ್ ।
ವಚಸಾ ಸಾನ್ತ್ವಯಿತ್ವೈನಂ ಲೋಚನಾಭ್ಯಾಂ ಪಿಬನ್ನಿವ ॥೬॥

ಆಖ್ಯಾಹಿ ಮಮ ತತ್ತ್ವೇನ ರಾಕ್ಷಸಾನಾಂ ಬಲಾಬಲಮ್ ।
ಏವಮುಕ್ತೋ ತದಾ ರಕ್ಷೋ ರಾಮೇಣಾಕ್ಲಿಷ್ಟಕರ್ಮಣಾ ॥೭॥

ರಾವಣಸ್ಯ ಬಲಂ ಸರ್ವಮಾಖ್ಯಾತುಮುಪಚಕ್ರಮೇ ॥೮॥

ಅವಧ್ಯಃ ಸರ್ವಭೂತಾನಾಂ ದೇವದಾನವರಕ್ಷಸಾಮ್ ।
ರಾಜಪುತ್ರ ದಶಗ್ರೀವೋ ವರದಾನಾತ್ಸ್ವಯಂಭುವಃ ॥೯॥

ರಾವಣಾನನ್ತರೋ ಭ್ರಾತಾ ಮಮ ಜ್ಯೇಷ್ಠಶ್ಚ ವೀರ್ಯವಾನ್ ।
ಕುಮ್ಭಕರ್ಣೋ ಮಹಾತೇಜಾಃ ಶಕ್ರಪ್ರತಿಬಲೋ ಯುಧಿ ॥೧೦॥

ರಾಮ ಸೇನಾಪತಿಸ್ತಸ್ಯ ಪ್ರಹಸ್ತೋ ಯದಿ ವಾ ಶ್ರುತಃ ।
ಕೈಲಾಸೇ ಯೇನ ಸಂಗ್ರಾಮೇ ಮಣಿಭದ್ರಃ ಪರಾಜಿತಃ ॥೧೧॥

ಬದ್ಧಗೋಧಾಙ್ಗುಲಿತ್ರಾಣಸ್ತ್ವವಧ್ಯಕವಚೋ ಯುಧಿ ।
ಧನುರಾದಾಯ ತಿಷ್ಠನ್ಸ ತ್ವದೃಶ್ಯೋ ಭವತೀನ್ದ್ರಜಿತ್ ॥೧೨॥

ಸಂಗ್ರಾಮೇ ಸ ಮಹಾವ್ಯೂಹೇ ತರ್ಪಯಿತ್ವಾ ಹುತಾಶನಮ್ ।
ಅನ್ತರ್ಧಾನಗತಃ ಶತ್ರೂನಿನ್ದ್ರಜಿದ್ಧನ್ತಿ ರಾಘವ ॥೧೩॥

ಮಹೋದರಮಹಾಪಾರ್ಶ್ವೌ ರಾಕ್ಷಸಶ್ಚಾಪ್ಯಕಮ್ಪನಃ ।
ಅನೀಕಸ್ಥಾಸ್ತು ತಸ್ಯೈತೇ ಲೋಕಪಾಲಸಮಾ ಯುಧಿ ॥೧೪॥

ದಶಕೋಟಿಸಹಸ್ರಾಣಿ ರಕ್ಷಸಾಂ ಕಾಮರೂಪಿಣಾಮ್ ।
ಮಾಂಸಶೋಣಿತಭಕ್ಷಾಣಾಂ ಲಙ್ಕಾಪುರನಿವಾಸಿನಾಮ್ ॥೧೫॥

ಸ ತೈಃ ಪರಿವೃತೋ ರಾಜಾ ಲೋಕಪಾಲಾನಯೋಧಯತ್ ।
ಸಹ ದೇವೈಸ್ತು ತೇ ಭಗ್ನಾ ರಾವಣೇನ ಮಹಾತ್ಮನಾ ॥೧೬॥

ವಿಭೀಷಣವಚಃ ಶ್ರುತ್ವಾ ರಾಮೋ ದೃಢಪರಾಕ್ರಮಃ ।
ಅನ್ವೀಕ್ಷ್ಯ ಮನಸಾ ಸರ್ವಮಿದಂ ವಚನಮಬ್ರವೀತ್ ॥೧೭॥

ಯಾನಿ ಕರ್ಮಾಪದಾನಾನಿ ರಾವಣಸ್ಯ ವಿಭೀಷಣ ।
ಆಖ್ಯಾತಾನಿ ಚ ತತ್ತ್ವೇನ ಹ್ಯವಗಚ್ಛಾಮಿ ತಾನ್ಯಹಮ್ ॥೧೮॥

ಅಹಂ ಹತ್ವಾ ದಶಗ್ರೀವಂ ಸಪ್ರಹಸ್ತಂ ಸಹಾನುಜಮ್ ।
ರಾಜಾನಂ ತ್ವಾಂ ಕರಿಷ್ಯಾಮಿ ಸತ್ಯಮೇತದ್ಬ್ರವೀಮಿ ತೇ ॥೧೯॥

ರಸಾತಲಂ ವಾ ಪ್ರವಿಶೇತ್ಪಾತಾಲಂ ವಾಪಿ ರಾವಣಃ ।
ಪಿತಾಮಹಸಕಾಶಂ ವಾ ನ ಮೇ ಜೀವನ್ಪ್ರಮೋಕ್ಷ್ಯತೇ ॥೨೦॥

ಅಹತ್ವಾ ರಾವಣಂ ಸಂಖ್ಯೇ ಸಪುತ್ರಬಲಬಾನ್ಧವಮ್ ।
ಅಯೋಧ್ಯಾಂ ನ ಪ್ರವೇಕ್ಷ್ಯಾಮಿ ತ್ರಿಭಿಸ್ತೈರ್ಭ್ರಾತೃಭಿಃ ಶಪೇ ॥೨೧॥

ಶ್ರುತ್ವಾ ತು ವಚನಂ ತಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ ।
ಶಿರಸಾ ವನ್ದ್ಯ ಧರ್ಮಾತ್ಮಾ ವಕ್ತುಮೇವೋಪಚಕ್ರಮೇ ॥೨೨॥

ರಾಕ್ಷಸಾನಾಂ ವಧೇ ಸಾಹ್ಯಂ ಲಙ್ಕಾಯಾಶ್ಚ ಪ್ರಧರ್ಷಣೇ ।
ಕರಿಷ್ಯಾಮಿ ಯಥಾಪ್ರಾಣಂ ಪ್ರವೇಕ್ಷ್ಯಾಮಿ ಚ ವಾಹಿನೀಮ್ ॥೨೩॥

ಇತಿ ಬ್ರುವಾಣಂ ರಾಮಸ್ತು ಪರಿಷ್ವಜ್ಯ ವಿಭೀಷಣಮ್ ।
ಅಬ್ರವೀಲ್ಲಕ್ಷ್ಮಣಂ ಪ್ರೀತಃ ಸಮುದ್ರಾಜ್ಜಲಮಾನಯ ॥೨೪॥

ತೇನ ಚೈನಂ ಮಹಾಪ್ರಾಜ್ಞಮಭಿಷಿಞ್ಚ ವಿಭೀಷಣಮ್ ।
ರಾಜಾನಂ ರಕ್ಷಸಾಂ ಕ್ಷಿಪ್ರಂ ಪ್ರಸನ್ನೇ ಮಯಿ ಮಾನದ ॥೨೫॥

ಏವಮುಕ್ತಸ್ತು ಸೌಮಿತ್ರಿರಭ್ಯಷಿಞ್ಚದ್ವಿಭೀಷಣಮ್ ।
ಮಧ್ಯೇ ವಾನರಮುಖ್ಯಾನಾಂ ರಾಜಾನಂ ರಾಜಶಾಸನಾತ್ ॥೨೬॥

ತಂ ಪ್ರಸಾದಂ ತು ರಾಮಸ್ಯ ದೃಷ್ಟ್ವಾ ಸದ್ಯಃ ಪ್ಲವಂಗಮಾಃ ।
ಪ್ರಚುಕ್ರುಶುರ್ಮಹಾತ್ಮಾನಂ ಸಾಧು ಸಾಧ್ವಿತಿ ಚಾಬ್ರುವನ್ ॥೨೭॥

ಅಬ್ರವೀಚ್ಚ ಹನೂಮಾಂಸ್ತಂ ಸುಗ್ರೀವಶ್ಚ ವಿಭೀಷಣಮ್ ।
ಕಥಂ ಸಾಗರಮಕ್ಷೋಭ್ಯಂ ತರಾಮ ವರುಣಾಲಯಮ್ ।
ಸೈನ್ಯೈಃ ಪರಿವೃತಾಃ ಸರ್ವೇ ವಾನರಾಣಾಂ ಮಹೌಜಸಾಮ್ ॥೨೮॥

ಉಪಾಯಂ ನಾಧಿಗಚ್ಛಾಮೋ ಯಥಾ ನದನದೀಪತಿಮ್ ।
ತರಾಮ ತರಸಾ ಸರ್ವೇ ಸಸೈನ್ಯಾ ವರುಣಾಲಯಮ್ ॥೨೯॥

ಏವಮುಕ್ತಸ್ತು ಧರ್ಮಜ್ಞಃ ಪ್ರತ್ಯುವಾಚ ವಿಭೀಷಣಃ ।
ಸಮುದ್ರಂ ರಾಘವೋ ರಾಜಾ ಶರಣಂ ಗನ್ತುಮರ್ಹತಿ ॥೩೦॥

ಖಾನಿತಃ ಸಗರೇಣಾಯಮಪ್ರಮೇಯೋ ಮಹೋದಧಿಃ ।
ಕರ್ತುಮರ್ಹತಿ ರಾಮಸ್ಯ ಜ್ಞಾತೇಃ ಕಾರ್ಯಂ ಮಹೋದಧಿಃ ॥೩೧॥

ಏವಂ ವಿಭೀಷಣೇನೋಕ್ತೋ ರಾಕ್ಷಸೇನ ವಿಪಶ್ಚಿತಾ ।
ಆಜಗಾಮಾಥ ಸುಗ್ರೀವೋ ಯತ್ರ ರಾಮಃ ಸಲಕ್ಷ್ಮಣಃ ॥೩೨॥

ತತಶ್ಚಾಖ್ಯಾತುಮಾರೇಭೇ ವಿಭೀಷಣವಚಃ ಶುಭಮ್ ।
ಸುಗ್ರೀವೋ ವಿಪುಲಗ್ರೀವಃ ಸಾಗರಸ್ಯೋಪವೇಶನಮ್ ॥೩೩॥

ಪ್ರಕೃತ್ಯಾ ಧರ್ಮಶೀಲಸ್ಯ ರಾಘವಸ್ಯಾಪ್ಯರೋಚತ ।
ಸ ಲಕ್ಷ್ಮಣಂ ಮಹಾತೇಜಾಃ ಸುಗ್ರೀವಂ ಚ ಹರೀಶ್ವರಮ್ ॥೩೪॥

ಸತ್ಕ್ರಿಯಾರ್ಥಂ ಕ್ರಿಯಾದಕ್ಷಃ ಸ್ಮಿತಪೂರ್ವಮಭಾಷತ ।
ವಿಭೀಷಣಸ್ಯ ಮನ್ತ್ರೋಽಯಂ ಮಮ ಲಕ್ಷ್ಮಣ ರೋಚತೇ ॥೩೫॥

ಸುಗ್ರೀವಃ ಪಣ್ಡಿತೋ ನಿತ್ಯಂ ಭವಾನ್ಮನ್ತ್ರವಿಚಕ್ಷಣಃ ।
ಉಭಾಭ್ಯಾಂ ಸಂಪ್ರಧಾರ್ಯಾರ್ಥಂ
ರೋಚತೇ ಯತ್ತದುಚ್ಯತಾಮ್ ॥೩೬॥

ಏವಮುಕ್ತೌ ತು ತೌ ವೀರಾವುಭೌ ಸುಗ್ರೀವಲಕ್ಷ್ಮಣೌ ।
ಸಮುದಾಚಾರಸಂಯುಕ್ತಮಿದಂ ವಚನಮೂಚತುಃ ॥೩೭॥

ಕಿಮರ್ಥಂ ನೌ ನರವ್ಯಾಘ್ರ ನ ರೋಚಿಷ್ಯತಿ ರಾಘವ ।
ವಿಭೀಷಣೇನ ಯಚ್ಚೋಕ್ತಮಸ್ಮಿನ್ಕಾಲೇ ಸುಖಾವಹಮ್ ॥೩೮॥

ಅಬದ್ಧ್ವಾ ಸಾಗರೇ ಸೇತುಂ ಘೋರೇಽಸ್ಮಿನ್ವರುಣಾಲಯೇ ।
ಲಙ್ಕಾ ನಾಸಾದಿತುಂ ಶಕ್ಯಾ ಸೇನ್ದ್ರೈರಪಿ ಸುರಾಸುರೈಃ ॥೩೯॥

ವಿಭೀಷಣಸ್ಯ ಶೂರಸ್ಯ ಯಥಾರ್ಥಂ ಕ್ರಿಯತಾಂ ವಚಃ ।

ಅಲಂ ಕಾಲಾತ್ಯಯಂ ಕೃತ್ವಾ
ಸಮುದ್ರೋಽಯಂ ನಿಯುಜ್ಯತಾಮ್ ।
ಯಥಾ ಸೈನ್ಯೇನ ಗಚ್ಛಾಮಃ ಪುರೀಂ ರಾವಣಪಾಲಿತಾಮ್ ॥೪೦॥

ಏವಮುಕ್ತಃ ಕುಶಾಸ್ತೀರ್ಣೇ ತೀರೇ ನದನದೀಪತೇಃ ।
ಸಂವಿವೇಶ ತದಾ ರಾಮೋ ವೇದ್ಯಾಮಿವ ಹುತಾಶನಃ ॥೪೧॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಏಕೋನವಿಂಶಃ ಸರ್ಗಃ

ವಿಂಶಃ ಸರ್ಗಃ

ತತೋ ನಿವಿಷ್ಟಾಂ ಧ್ವಜಿನೀಂ ಸುಗ್ರೀವೇಣಾಭಿಪಾಲಿತಾಮ್ ।
ದದರ್ಶ ರಾಕ್ಷಸೋಽಭ್ಯೇತ್ಯ ಶಾರ್ದೂಲೋ ನಾಮ ವೀರ್ಯವಾನ್ ॥

ಚಾರೋ ರಾಕ್ಷಸರಾಜಸ್ಯ ರಾವಣಸ್ಯ ದುರಾತ್ಮನಃ ।
ತಾಂ ದೃಷ್ಟ್ವಾ ಸರ್ವತೋಽವ್ಯಗ್ರಾಂ ಪ್ರತಿಗಮ್ಯ ಸ ರಾಕ್ಷಸಃ ।
ಪ್ರವಿಶ್ಯ ಲಙ್ಕಾಂ ವೇಗೇನ ರಾವಣಂ ವಾಕ್ಯಮಬ್ರವೀತ್ ॥೨॥

ಏಷ ವಾನರಋಕ್ಷೌಘೋ ಲಙ್ಕಾಂ ಸಮಭಿವರ್ತತೇ ।
ಅಗಾಧಶ್ಚಾಪ್ರಮೇಯಶ್ಚ ದ್ವಿತೀಯ ಇವ ಸಾಗರಃ ॥೩॥
ಪುತ್ರೌ ದಶರಥಸ್ಯೇಮೌ ಭ್ರಾತರೌ ರಾಮಲಕ್ಷ್ಮಣೌ ।
ಉತ್ತಮಾಯುಧಸಂಪನ್ನೌ ಸೀತಾಯಾಃ ಪದಮಾಗತೌ ॥೪॥

ಏತೌ ಸಾಗರಮಾಸಾದ್ಯ ಸಂನಿವಿಷ್ಟೌ ಮಹಾದ್ಯುತೀ ।
ಬಲಮಾಕಾಶಮಾವೃತ್ಯ ಸರ್ವತೋ ದಶಯೋಜನಮ್ ॥೫॥

ತತ್ತ್ವಭೂತಂ ಮಹಾರಾಜ ಕ್ಷಿಪ್ರಂ ವೇದಿತುಮರ್ಹಸಿ ॥೬॥

ತವ ದೂತಾ ಮಹಾರಾಜ ಕ್ಷಿಪ್ರಮರ್ಹನ್ತ್ಯವೇಕ್ಷಿತುಮ್ ।
ಉಪಪ್ರದಾನಂ ಸಾನ್ತ್ವಂ ವಾ
ಭೇದೋ ವಾತ್ರ ಪ್ರಯುಜ್ಯತಾಮ್ ॥೭॥

ಶಾರ್ದೂಲಸ್ಯ ವಚಃ ಶ್ರುತ್ವಾ ರಾವಣೋ ರಾಕ್ಷಸೇಶ್ವರಃ ।
ಉವಾಚ ಸಹಸಾ ವ್ಯಗ್ರಃ ಸಂಪ್ರಧಾರ್ಯಾರ್ಥಮಾತ್ಮನಃ ।
ಶುಕಂ ನಾಮ ತದಾ ರಕ್ಷೋ ವಾಕ್ಯಮರ್ಥವಿದಾಂ ವರಮ್ ॥೮॥

ಸುಗ್ರೀವಂ ಬ್ರೂಹಿ ಗತ್ವಾ ತ್ವಂ ರಾಜಾನಂ ವಚನಾನ್ಮಮ ।
ಯಥಾ ಸಂದೇಶಮಕ್ಲೀಬಂ ಶ್ಲಕ್ಷ್ಣಯಾ ಪರಯಾ ಗಿರಾ ॥೯॥

ತ್ವಂ ವೈ ಮಹಾರಾಜ ಕುಲಪ್ರಸೂತೋ
ಮಹಾಬಲಶ್ಚರ್ಕ್ಷರಜಃಸುತಶ್ಚ ।
ನ ಕಶ್ಚಿದರ್ಥಸ್ತವ ನಾಸ್ತ್ಯನರ್ಥ-
ಸ್ತಥಾ ಹಿ ಮೇ ಭ್ರಾತೃಸಮೋ ಹರೀಶ ॥೧೦॥

ಅಹಂ ಯದ್ಯಹರಂ ಭಾರ್ಯಾಂ ರಾಜಪುತ್ರಸ್ಯ ಧೀಮತಃ ।
ಕಿಂ ತತ್ರ ತವ ಸುಗ್ರೀವ ಕಿಷ್ಕಿನ್ಧಾಂ ಪ್ರತಿ ಗಮ್ಯತಾಮ್ ॥೧೧॥

ನ ಹೀಯಂ ಹರಿಭಿರ್ಲಙ್ಕಾ ಶಕ್ಯಾ ಪ್ರಾಪ್ತುಂ ಕಥಂಚನ ।
ದೇವೈರಪಿ ಸಗನ್ಧರ್ವೈಃ ಕಿಂ ಪುನರ್ನರವಾನರೈಃ ॥೧೨॥

ಸ ತಥಾ ರಾಕ್ಷಸೇನ್ದ್ರೇಣ ಸಂದಿಷ್ಟೋ ರಜನೀಚರಃ ।
ಶುಕೋ ವಿಹಙ್ಗಮೋ ಭೂತ್ವಾ ತೂರ್ಣಮಾಪ್ಲುತ್ಯ ಚಾಮ್ಬರಮ್ ॥

ಸ ಗತ್ವಾ ದೂರಮಧ್ವಾನಮುಪರ್ಯುಪರಿ ಸಾಗರಮ್ ।
ಸಂಸ್ಥಿತೋ ಹ್ಯಮ್ಬರೇ ವಾಕ್ಯಂ ಸುಗ್ರೀವಮಿದಮಬ್ರವೀತ್ ।
ಸರ್ವಮುಕ್ತಂ ಯಥಾದಿಷ್ಟಂ ರಾವಣೇನ ದುರಾತ್ಮನಾ ॥೧೪॥

ತಂ ಪ್ರಾಪಯನ್ತಂ ವಚನಂ ತೂರ್ಣಮಾಪ್ಲುತ್ಯ ವಾನರಾಃ ।
ಪ್ರಾಪದ್ಯನ್ತ ದಿವಂ ಕ್ಷಿಪ್ರಂ ಲೋಪ್ತುಂ ಹನ್ತುಂ ಚ ಮುಷ್ಟಿಭಿಃ ॥೧೫॥

ಸ ತೈಃ ಪ್ಲವಙ್ಗೈಃ ಪ್ರಸಭಂ ನಿಗೃಹೀತೋ ನಿಶಾಚರಃ ।
ಗಗನಾದ್ಭೂತಲೇ ಚಾಶು ಪರಿಗೃಹ್ಯ ನಿಪಾತಿತಃ ॥೧೬॥
ವಾನರೈಃ ಪೀಡ್ಯಮಾನಸ್ತು ಶುಕೋ ವಚನಮಬ್ರವೀತ್ ।
ನ ದೂತಾನ್ಘ್ನನ್ತಿ ಕಾಕುತ್ಸ್ಥ ವಾರ್ಯನ್ತಾಂ ಸಾಧು ವಾನರಾಃ ॥೧೭॥

ಯಸ್ತು ಹಿತ್ವಾ ಮತಂ ಭರ್ತುಃ ಸ್ವಮತಂ ಸಂಪ್ರಭಾಷತೇ ।
ಅನುಕ್ತವಾದೀ ದೂತಃ ಸನ್ಸ ದೂತೋ ವಧಮರ್ಹತಿ ॥೧೮॥

ಶುಕಸ್ಯ ವಚನಂ ಶ್ರುತ್ವಾ ರಾಮಸ್ತು ಪರಿದೇವಿತಮ್ ।
ಉವಾಚ ಮಾ ವಧಿಷ್ಟೇತಿ ಘ್ನತಃ ಶಾಖಾಮೃಗರ್ಷಭಾನ್ ॥೧೯॥

ಸ ಚ ಪತ್ರಲಘುರ್ಭೂತ್ವಾ ಹರಿಭಿರ್ದರ್ಶಿತೇ ಭಯೇ ।
ಅನ್ತರಿಕ್ಷಸ್ಥಿತೋ ಭೂತ್ವಾ ಪುನರ್ವಚನಮಬ್ರವೀತ್ ॥೨೦॥

ಸುಗ್ರೀವ ಸತ್ತ್ವಸಂಪನ್ನ ಮಹಾಬಲಪರಾಕ್ರಮ ।
ಕಿಂ ಮಯಾ ಖಲು ವಕ್ತವ್ಯೋ ರಾವಣೋ ಲೋಕರಾವಣಃ ॥೨೧॥

ಸ ಏವಮುಕ್ತಃ ಪ್ಲವಗಾಧಿಪಸ್ತದಾ
ಪ್ಲವಙ್ಗಮಾನಾಮೃಷಭೋ ಮಹಾಬಲಃ ।
ಉವಾಚ ವಾಕ್ಯಂ ರಜನೀಚರಸ್ಯ
ಚಾರಂ ಶುಕಂ ದೀನಮದೀನಸತ್ತ್ವಃ ॥೨೨॥

ನ ಮೇಽಸಿ ಮಿತ್ರಂ ನ ತಥಾನುಕಮ್ಪ್ಯೋ
ನ ಚೋಪಕರ್ತಾಸಿ ನ ಮೇ ಪ್ರಿಯೋಽಸಿ ।
ಅರಿಶ್ಚ ರಾಮಸ್ಯ ಸಹಾನುಬನ್ಧ-
ಸ್ತತೋಽಸಿ ವಾಲೀವ ವಧಾರ್ಹ ವಧ್ಯಃ ॥೨೩॥

ನಿಹನ್ಮ್ಯಹಂ ತ್ವಾಂ ಸಸುತಂ ಸಬನ್ಧುಂ
ಸಜ್ಞಾತಿವರ್ಗಂ ರಜನೀಚರೇಶ ।
ಲಙ್ಕಾಂ ಚ ಸರ್ವಾಂ ಮಹತಾ ಬಲೇನ
ಕ್ಷಿಪ್ರಂ ಕರಿಷ್ಯಾಮಿ ಸಮೇತ್ಯ ಭಸ್ಮ ॥೨೪॥

ನ ಮೋಕ್ಷ್ಯಸೇ ರಾವಣ ರಾಘವಸ್ಯ
ಸುರೈಃ ಸಹೇನ್ದ್ರೈರಪಿ ಮೂಢ ಗುಪ್ತಃ ।
ಅನ್ತರ್ಹಿತಃ ಸೂರ್ಯಪಥಂ ಗತೋ ವಾ
ತಥೈವ ಪಾತಾಲಮನುಪ್ರವಿಷ್ಟಃ ॥೨೫॥

ತಸ್ಯ ತೇ ತ್ರಿಷು ಲೋಕೇಷು ನ ಪಿಶಾಚಂ ನ ರಾಕ್ಷಸಮ್ ।
ತ್ರಾತಾರಮನುಪಶ್ಯಾಮಿ ನ ಗನ್ಧರ್ವಂ ನ ಚಾಸುರಮ್ ॥೨೬॥

ಅವಧೀರ್ಯಜ್ಜರಾವೃದ್ಧಂ ಗೃಧ್ರರಾಜಾನಮಕ್ಷಮಮ್ ।
ಕಿಂ ನು ತೇ ರಾಮಸಾನ್ನಿಧ್ಯೇ ಸಕಾಶೇ ಲಕ್ಷ್ಮಣಸ್ಯ ವಾ ।
ಹೃತಾ ಸೀತಾ ವಿಶಾಲಾಕ್ಷೀ ಯಾಂ ತ್ವಂ ಗೃಹ್ಯ ನ ಬುಧ್ಯಸೇ ॥೨೭॥

ಮಹಾಬಲಂ ಮಹಾಪ್ರಾಜ್ಞಂ ದುರ್ಧರ್ಷಮಮರೈರಪಿ ।
ನ ಬುಧ್ಯಸೇ ರಘುಶ್ರೇಷ್ಠಂ ಯಸ್ತೇ ಪ್ರಾಣಾನ್ಹರಿಷ್ಯತಿ ॥೨೮॥

ತತೋಽಬ್ರವೀದ್ವಾಲಿಸುತಸ್ತ್ವಙ್ಗದೋ ಹರಿಸತ್ತಮಃ ।
ನಾಯಂ ದೂತೋ ಮಹಾರಾಜ ಚಾರಿಕಃ ಪ್ರತಿಭಾತಿ ಮಾ ॥೨೯॥

ತುಲಿತಂ ಹಿ ಬಲಂ ಸರ್ವಮನೇನಾತ್ರೈವ ತಿಷ್ಠತಾ ।
ಗೃಹ್ಯತಾಂ ಮಾ ಗಮಲ್ಲಙ್ಕಾಮೇತದ್ಧಿ ಮಮ ರೋಚತೇ ॥೩೦॥

ತತೋ ರಾಜ್ಞಾ ಸಮಾದಿಷ್ಟಾಃ ಸಮುತ್ಪ್ಲುತ್ಯ ವಲೀಮುಖಾಃ ।
ಜಗೃಹುಸ್ತಂ ಬಬನ್ಧುಶ್ಚ ವಿಲಪನ್ತಮನಾಥವತ್ ॥೩೧॥

ಶುಕಸ್ತು ವಾನರೈಶ್ಚಣ್ಡೈಸ್ತತ್ರ ತೈಃ ಸಂಪೀಡಿತಃ ।
ವ್ಯಾಕ್ರೋಶತ ಮಹಾತ್ಮಾನಂ ರಾಮಂ ದಶರಥಾತ್ಮಜಮ್ ।
ಲುಪ್ಯತೇ ಮೇ ಬಲಾತ್ಪಕ್ಷೌ ಭಿದ್ಯೇತೇ ಚ ತಥಾಕ್ಷಿಣೀ ॥೩೨॥
ಯಾಂ ಚ ರಾತ್ರಿಂ ಮರಿಷ್ಯಾಮಿ
ಜಾಯೇ ರಾತ್ರಿಂ ಚ ಯಾಮಹಮ್ ।
ಏತಸ್ಮಿನ್ನನ್ತರೇ ಕಾಲೇ ಯನ್ಮಯಾ ಹ್ಯಶುಭಂ ಕೃತಮ್ ।
ಸರ್ವಂ ತದುಪಪದ್ಯೇಥಾ ಜಹ್ಯಾಂ ಚೇದ್ಯದಿ ಜೀವಿತಮ್ ॥೩೩॥

ನಾಘಾತಯತ್ತದಾ ರಾಮಃ ಶ್ರುತ್ವಾ ತತ್ಪರಿದೇವನಮ್ ।
ವಾನರಾನಬ್ರವೀದ್ರಾಮೋ ಮುಚ್ಯತಾಂ ದೂತ ಆಗತಃ ॥೩೪॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ವಿಂಶಃ ಸರ್ಗಃ

ಏಕವಿಂಶಃ ಸರ್ಗಃ

ತತಃ ಸಾಗರವೇಲಾಯಾಂ ದರ್ಭಾನಾಸ್ತೀರ್ಯ ರಾಘವಃ ।
ಅಞ್ಜಲಿಂ ಪ್ರಾಙ್ಮುಖಃ ಕೃತ್ವಾ ಪ್ರತಿಶಿಶ್ಯೇ ಮಹೋದಧಿಮ್ ॥೧॥

ಬಾಹುಂ ಭುಜಗಭೋಗಾಭಮುಪಧಾಯಾರಿಸೂದನಃ ।
ಜಾತರೂಪಮಯೈಶ್ಚೈವ ಭೂಷಣೈರ್ಭೂಷಿತಂ ಪುರಾ ॥೨॥

ವರಕಾಞ್ಚನಕೇಯೂರಮುಕ್ತಾಪ್ರವರಭೂಷಣೈಃ ।
ಭುಜೈಃ ಪರಮನಾರೀಣಾಮಭಿಮೃಷ್ಟಮನೇಕಧಾ ॥೩॥

ಚನ್ದನಾಗರುಭಿಶ್ಚೈವ ಪುರಸ್ತಾದಧಿವಾಸಿತಮ್ ।
ಬಾಲಸೂರ್ಯಪ್ರತೀಕಾಶೈಶ್ಚನ್ದನೈರುಪಶೋಭಿತಮ್ ॥೪॥

ಶಯನೇ ಚೋತ್ತಮಾಙ್ಗೇನ ಸೀತಾಯಾಃ ಶೋಭಿತಂ ಪುರಾ ।
ತಕ್ಷಕಸ್ಯೇವ ಸಂಭೋಗಂ ಗಙ್ಗಾಜಲನಿಷೇವಿತಮ್ ॥೫॥

ಸಂಯುಗೇ ಯುಗಸಂಕಾಶಂ ಶತ್ರೂಣಾಂ ಶೋಕವರ್ಧನಮ್ ।
ಸುಹೃದಾನನ್ದನಂ ದೀರ್ಘಂ ಸಾಗರಾನ್ತ ವ್ಯಪಾಶ್ರಯಮ್ ॥೬॥

ಅಸ್ಯತಾ ಚ ಪುನಃ ಸವ್ಯಂ ಜ್ಯಾಘಾತವಿಘತತ್ವಚಮ್ ।
ದಕ್ಷಿಣೋ ದಕ್ಷಿಣಂ ಬಾಹುಂ ಮಹಾಪರಿಘಸನ್ನಿಭಮ್ ॥೭॥

ಗೋಸಹಸ್ರಪ್ರದಾತಾರಮುಪಧಾಯ ಮಹದ್ಭುಜಮ್ ।
ಅದ್ಯ ಮೇ ಮರಣಂ ವಾಥ ತರಣಂ ಸಾಗರಸ್ಯ ವಾ ॥೮॥

ಇತಿ ರಾಮೋ ಮತಿಂ ಕೃತ್ವಾ ಮಹಾಬಾಹುರ್ಮಹೋದಧಿಮ್ ।
ಅಧಿಶಿಶ್ಯೇ ಚ ವಿಧಿವತ್ಪ್ರಯತೋ ನಿಯತೋ ಮುನಿಃ ॥೯॥

ತಸ್ಯ ರಾಮಸ್ಯ ಸುಪ್ತಸ್ಯ ಕುಶಾಸ್ತೀರ್ಣೇ ಮಹೀತಲೇ ।
ನಿಯಮಾದಪ್ರಮತ್ತಸ್ಯ ನಿಶಾಸ್ತಿಸ್ರೋ ವ್ಯತಿಕ್ರಮುಃ ॥೧೦॥

ಸ ತ್ರಿರಾತ್ರೋಷಿತಸ್ತತ್ರ ನಯಜ್ಞೋ ಧರ್ಮವತ್ಸಲಃ ।
ಉಪಾಸತ ತದಾ ರಾಮಃ ಸಾಗರಂ ಸರಿತಾಂ ಪತಿಮ್ ॥೧೧॥

ನ ಚ ದರ್ಶಯತೇ ಮನ್ದಸ್ತದಾ ರಾಮಸ್ಯ ಸಾಗರಃ ।
ಪ್ರಯತೇನಾಪಿ ರಾಮೇಣ ಯಥಾರ್ಹಮಭಿಪೂಜಿತಃ ॥೧೨॥

ಸಮುದ್ರಸ್ಯ ತತಃ ಕ್ರುದ್ಧೋ ರಾಮೋ ರಕ್ತಾನ್ತಲೋಚನಃ ।
ಸಮೀಪಸ್ಥಮುವಾಚೇದಂ ಲಕ್ಷ್ಮಣಂ ಶುಭಲಕ್ಷಣಮ್ ॥೧೩॥

ಅವಲೇಪಃ ಸಮುದ್ರಸ್ಯ ನ ದರ್ಶಯತಿ ಯತ್ಸ್ವಯಮ್ ।
ಪ್ರಶಮಶ್ಚ ಕ್ಷಮಾ ಚೈವ ಆರ್ಜವಂ ಪ್ರಿಯವಾದಿತಾ ।
ಅಸಾಮರ್ಥ್ಯಂ ಫಲನ್ತ್ಯೇತೇ ನಿರ್ಗುಣೇಷು ಸತಾಂ ಗುಣಾಃ ॥೧೪॥

ಆತ್ಮಪ್ರಶಂಸಿನಂ ದುಷ್ಟಂ ಧೃಷ್ಟಂ ವಿಪರಿಧಾವಕಮ್ ।
ಸರ್ವತ್ರೋತ್ಸೃಷ್ಟದಣ್ಡಂ ಚ ಲೋಕಃ ಸತ್ಕುರುತೇ ನರಮ್ ॥೧೫॥

ನ ಸಾಮ್ನಾ ಶಕ್ಯತೇ ಕೀರ್ತಿರ್ನ ಸಾಮ್ನಾ ಶಕ್ಯತೇ ಯಶಃ ।
ಪ್ರಾಪ್ತುಂ ಲಕ್ಷ್ಮಣ ಲೋಕೇಽಸ್ಮಿಞ್ಜಯೋ ವಾ ರಣಮೂರ್ಧನಿ ॥೧೬॥

ಅದ್ಯ ಮದ್ಬಾಣನಿರ್ಭಿನ್ನೈರ್ಮಕರೈರ್ಮಕರಾಲಯಮ್ ।
ನಿರುದ್ಧತೋಯಂ ಸೌಮಿತ್ರೇ ಪ್ಲವದ್ಭಿಃ ಪಶ್ಯ ಸರ್ವತಃ ॥೧೭॥

ಭೋಗಿನಾಂ ಪಶ್ಯ ನಾಗಾನಾಂ ಮಯಾ ಭಿನ್ನಾನಿ ಲಕ್ಷ್ಮಣ ।
ಮಹಾಭೋಗಾನಿ ಮತ್ಸ್ಯಾನಾಂ ಕರಿಣಾಂ ಚ ಕರಾನಿಹ ॥೧೮॥

ಸಶಙ್ಖಶುಕ್ತಿಕಾಜಾಲಂ ಸಮೀನಮಕರಂ ಶರೈಃ ।
ಅದ್ಯ ಯುದ್ಧೇನ ಮಹತಾ ಸಮುದ್ರಂ ಪರಿಶೋಷಯೇ ॥೧೯॥

ಕ್ಷಮಯಾ ಹಿ ಸಮಾಯುಕ್ತಂ ಮಾಮಯಂ ಮಕರಾಲಯಃ ।
ಅಸಮರ್ಥಂ ವಿಜಾನಾತಿ ಧಿಕ್ ಕ್ಷಮಾಮೀದೃಶೇ ಜನೇ ॥೨೦॥

ನ ದರ್ಶಯತಿ ಸಾಮ್ನಾ ಮೇ ಸಾಗರೋ ರೂಪಮಾತ್ಮನಃ ।
ಚಾಪಮಾನಯ ಸೌಮಿತ್ರೇ ಶರಾಂಶ್ಚಾಶೀವಿಷೋಪಮಾನ್ ॥೨೧॥

ಸಾಗರಂ ಶೋಷಯಿಷ್ಯಾಮಿ ಪದ್ಭ್ಯಾಂ ಯಾನ್ತು ಪ್ಲವಙ್ಗಮಾಃ ॥೨೨॥

ಅದ್ಯಾಕ್ಷೋಭ್ಯಮಪಿ ಕ್ರುದ್ಧಃ ಕ್ಷೋಭಯಿಷ್ಯಾಮಿ ಸಾಗರಮ್ ।
ವೇಲಾಸು ಕೃತಮರ್ಯಾದಂ ಸಹಸೋರ್ಮಿಸಮಾಕುಲಮ್ ॥೨೩॥

ನಿರ್ಮರ್ಯಾದಂ ಕರಿಷ್ಯಾಮಿ ಸಾಯಕೈರ್ವರುಣಾಲಯಮ್ ।
ಮಹಾರ್ಣವಂ ಕ್ಷೋಭಯಿಷ್ಯೇ ಮಹಾನಕ್ರಸಮಾಕುಲಮ್ ॥೨೪॥

ಏವಮುಕ್ತ್ವಾ ಧನುಷ್ಪಾಣಿಃ ಕ್ರೋಧವಿಸ್ಫಾರಿತೇಕ್ಷಣಃ ।
ಬಭೂವ ರಾಮೋ ದುರ್ಧರ್ಷೋ ಯುಗಾನ್ತಾಗ್ನಿರಿವ ಜ್ವಲನ್ ॥೨೫॥

ಸಂಪೀಡ್ಯ ಚ ಧನುರ್ಘೋರಂ ಕಮ್ಪಯಿತ್ವಾ ಶರೈರ್ಜಗತ್ ।
ಮುಮೋಚ ವಿಶಿಖಾನುಗ್ರಾನ್ವಜ್ರಾನಿವ ಶತಕ್ರತುಃ ॥೨೬॥

ತೇ ಜ್ವಲನ್ತೋ ಮಹಾವೇಗಾಸ್ತೇಜಸಾ ಸಾಯಕೋತ್ತಮಾಃ ।
ಪ್ರವಿಶನ್ತಿ ಸಮುದ್ರಸ್ಯ ಸಲಿಲಂ ತ್ರಸ್ತಪನ್ನಗಮ್ ॥೨೭॥

ತೋಯವೇಗಃ ಸಮುದ್ರಸ್ಯ ಸನಕ್ರಮಕರೋ ಮಹಾನ್ ।
ಸಂಬಭೂವ ಮಹಾಘೋರಃ ಸಮಾರುತರವಸ್ತದಾ ॥೨೮॥

ಮಹೋರ್ಮಿಜಾಲವಿತತಃ ಶಙ್ಖಶುಕ್ತಿಸಮಾವೃತಃ ।
ಸಧೂಮಪರಿವೃತ್ತೋರ್ಮಿಃ ಸಹಸಾಸೀನ್ಮಹೋದಧಿಃ ॥೨೯॥

ವ್ಯಥಿತಾಃ ಪನ್ನಗಾಶ್ಚಾಸನ್ದೀಪ್ತಾಸ್ಯಾ ದೀಪ್ತಲೋಚನಾಃ ।
ದಾನವಾಶ್ಚ ಮಹಾವೀರ್ಯಾಃ ಪಾತಾಲತಲವಾಸಿನಃ ॥೩೦॥

ಊರ್ಮಯಃ ಸಿನ್ಧುರಾಜಸ್ಯ ಸನಕ್ರಮಕರಾಸ್ತದಾ ।
ವಿನ್ಧ್ಯಮನ್ದರಸಂಕಾಶಾಃ ಸಮುತ್ಪೇತುಃ ಸಹಸ್ರಶಃ ॥೩೧॥

ಆಘೂರ್ಣಿತತರಙ್ಗೌಘಃ ಸಂಭ್ರಾನ್ತೋರಗರಾಕ್ಷಸಃ ।
ಉದ್ವರ್ತಿತಮಹಾಗ್ರಾಹಃ ಸಂವೃತ್ತಃ ಸಲಿಲಾಶಯಃ ॥೩೨॥

ತತಸ್ತು ತಂ ರಾಘವಮುಗ್ರವೇಗಂ
ಪ್ರಕರ್ಷಮಾಣಂ ಧನುರಪ್ರಮೇಯಮ್ ।
ಸೌಮಿತ್ರಿರುತ್ಪತ್ಯ ಸಮುಚ್ಛ್ವಸನ್ತಂ
ಮಾಮೇತಿ ಚೋಕ್ತ್ವಾ ಧನುರಾಲಲಮ್ಬೇ ॥೩೩॥

ಏತದ್ವಿನಾಪಿ ಹ್ಯುದಧೇಸ್ತವಾದ್ಯ
ಸಂಪತ್ಸ್ಯತೇ ವೀರತಮಸ್ಯ ಕಾರ್ಯಮ್ ।
ಭವದ್ವಿಧಾಃ ಕೋಪವಶಂ ನ ಯಾನ್ತಿ
ದೀರ್ಘಂ ಭವಾನ್ಪಶ್ಯತು ಸಾಧುವೃತ್ತಮ್ ॥೩೪॥

ಅನ್ತರ್ಹಿತೈಶ್ಚೈವ ತಥಾನ್ತರಿಕ್ಷೇ
ಬ್ರಹ್ಮರ್ಷಿಭಿಶ್ಚೈವ ಸುರರ್ಷಿಭಿಶ್ಚ ।
ಶಬ್ದಃ ಕೃತಃ ಕಷ್ಟಮಿತಿ ಬ್ರುವದ್ಭಿಃ
ಮಾಮೇತಿ ಚೋಕ್ತ್ವಂ ಮಹತಾ ಸ್ವರೇಣ ॥೩೫॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಏಕವಿಂಶಃ ಸರ್ಗಃ

ದ್ವಾವಿಂಶಃ ಸರ್ಗಃ

ಅಥೋವಾಚ ರಘುಶ್ರೇಷ್ಠಃ ಸಾಗರಂ ದಾರುಣಂ ವಚಃ ।
ಅದ್ಯ ತ್ವಾಂ ಶೋಷಯಿಷ್ಯಾಮಿ ಸಪಾತಾಲಂ ಮಹಾರ್ಣವ ॥೧॥

ಶರನಿರ್ದಗ್ಧತೋಯಸ್ಯ ಪರಿಶುಷ್ಕಸ್ಯ ಸಾಗರ ।
ಮಯಾ ಶೋಷಿತಸತ್ತ್ವಸ್ಯ ಪಾಂಸುರುತ್ಪದ್ಯತೇ ಮಹಾನ್ ॥೨॥

ಮತ್ಕಾರ್ಮುಕವಿಸೃಷ್ಟೇನ ಶರವರ್ಷೇಣ ಸಾಗರ ।
ಪಾರಂ ತೇಽದ್ಯ ಗಮಿಷ್ಯನ್ತಿ ಪದ್ಭಿರೇವ ಪ್ಲವಂಗಮಾಃ ॥೩॥

ವಿಚಿನ್ವನ್ನಾಭಿಜಾನಾಸಿ ಪೌರುಷಂ ವಾಪಿ ವಿಕ್ರಮಮ್ ।
ದಾನವಾಲಯ ಸಂತಾಪಂ ಮತ್ತೋ ನಾಧಿಗಮಿಷ್ಯಸಿ ॥೪॥

ಬ್ರಾಹ್ಮೇಣಾಸ್ತ್ರೇಣ ಸಂಯೋಜ್ಯ ಬ್ರಹ್ಮದಣ್ಡನಿಭಂ ಶರಮ್ ।
ಸಂಯೋಜ್ಯ ಧನುಷಿ ಶ್ರೇಷ್ಠೇ ವಿಚಕರ್ಷ ಮಹಾಬಲಃ ॥೫॥

ತಸ್ಮಿನ್ವಿಕೃಷ್ಟೇ ಸಹಸಾ ರಾಘವೇಣ ಶರಾಸನೇ ।
ರೋದಸೀ ಸಂಪಫಾಲೇವ ಪರ್ವತಾಶ್ಚ ಚಕಮ್ಪಿರೇ ॥೬॥

ತತಶ್ಚ ಲೋಕಮಾವವ್ರೇ ದಿಶಶ್ಚ ನ ಚಕಾಶಿರೇ ।
ಪರಿಚುಕ್ಷುಭಿರೇ ಚಾಶು ಸರಾಂಸಿ ಸರಿತಸ್ತಥಾ ॥೭॥

ತಿರ್ಯಕ್ಚ ಸಹ ನಕ್ಷತ್ರೈಃ ಸಂಗತೌ ಚನ್ದ್ರಭಾಸ್ಕರೌ ।
ಭಾಸ್ಕರಾಂಶುಭಿರಾದೀಪ್ತಂ ತಮಸಾ ಚ ಸಮಾವೃತಮ್ ॥೮॥

ಪ್ರಚಕಾಶೇ ತದಾಕಾಶಮುಲ್ಕಾಶತವಿದೀಪಿತಮ್ ।
ಅನ್ತರಿಕ್ಷಾಚ್ಚ ನಿರ್ಘಾತಾ ನಿರ್ಜಗ್ಮುರತುಲಸ್ವನಾಃ ॥೯॥

ಪುಸ್ಫುರುಶ್ಚ ವನಾ ದಿವ್ಯಾ ದಿವಿ ಮಾರುತಪಙ್ಕ್ತಯಃ ।
ಬಭಞ್ಜ ಚ ತದಾ ವೃಕ್ಷಾಞ್ಜಲದಾನುದ್ವಹನ್ನಪಿ ।
ಅರುಜಶ್ಚೈವ ಶೈಲಾಗ್ರಾನ್ ಶಿಖರಾಣಿ ಪ್ರಭಞ್ಜನಃ ॥೧೦॥

ದಿವಿಸ್ಪೃಶೋ ಮಹಾಮೇಘಾಃ ಸಂಗತಾಃ ಸಮಹಾಸ್ವನಾಃ ।
ಮುಮುಚುರ್ವೈದ್ಯುತಾನಗ್ನೀಂಸ್ತೇ ಮಹಾಶನಯಸ್ತದಾ ॥೧೧॥

ಯಾನಿ ಭೂತಾನಿ ದೃಶ್ಯಾನಿ ಚುಕ್ರುಶುಶ್ಚಾಶನೇಃ ಸಮಮ್ ।
ಅದೃಶ್ಯಾನಿ ಚ ಭೂತಾನಿ ಮುಮುಚುರ್ಭೈರವಸ್ವನಮ್ ॥೧೨॥

ಶಿಶ್ಯಿರೇ ಚಾಪಿ ಭೂತಾನಿ ಸಂತ್ರಸ್ತಾನ್ಯುದ್ವಿಜನ್ತಿ ಚ ।
ಸಂಪ್ರವಿವ್ಯಥಿರೇ ಚಾಪಿ ನ ಚ ಪಸ್ಪನ್ದಿರೇ ಭಯಾತ್ ॥೧೩॥

ಸಹ ಭೂತೈಃ ಸತೋಯೋರ್ಮಿಃ ಸನಾಗಃ ಸಹ ರಾಕ್ಷಸಃ ।
ಸಹಸಾಭೂತ್ತತೋ ವೇಗಾದ್ಭೀಮವೇಗೋ ಮಹೋದಧಿಃ ॥೧೪॥

ಯೋಜನಂ ವ್ಯತಿಚಕ್ರಾಮ ವೇಲಾಮನ್ಯತ್ರ ಸಂಪ್ಲವಾತ್ ॥೧೫॥

ತಂ ತದಾ ಸಮತಿಕ್ರಾನ್ತಂ ನಾತಿಚಕ್ರಾಮ ರಾಘವಃ ।
ಸಮುದ್ಧತಮಮಿತ್ರಘ್ನೋ ರಾಮೋ ನದನದೀಪತಿಮ್ ॥೧೬॥

ತತೋ ಮಧ್ಯಾತ್ಸಮುದ್ರಸ್ಯ ಸಾಗರಃ ಸ್ವಯಮುತ್ಥಿತಃ ।
ಉದಯನ್ಹಿ ಮಹಾಶೈಲಾನ್ಮೇರೋರಿವ ದಿವಾಕರಃ ॥೧೭॥

ಪನ್ನಗೈಃ ಸಹ ದೀಪ್ತಾಸ್ಯೈಃ ಸಮುದ್ರಃ ಪ್ರತ್ಯದೃಶ್ಯತ ।
ಸ್ನಿಗ್ಧವೈಡೂರ್ಯಸಂಕಾಶೋ ಜಾಮ್ಬೂನದವಿಭೂಷಿತಃ ॥೧೮॥

ರಕ್ತಮಾಲ್ಯಾಮ್ಬರಧರಃ ಪದ್ಮಪತ್ರನಿಭೇಕ್ಷಣಃ ।
ಸರ್ವಪುಷ್ಪಮಯೀಂ ದಿವ್ಯಾಂ ಶಿರಸಾ ಧಾರಯನ್ಸ್ರಜಮ್ ॥೧೯॥

ಜಾತರೂಪಮಯೈಶ್ಚೈವ ತಪನೀಯವಿಭೂಷಿತೈಃ ।
ಆತ್ಮಜಾನಾಂ ಚ ರತ್ನಾನಾಂ ಭೂಷಿತೋ ಭೂಷಣೋತ್ತಮೈಃ ॥೨೦॥

ಧಾತುಭಿರ್ಮಣ್ಡಿತಃ ಶೈಲೋ ವಿವಿಧೈರ್ಹಿಮವಾನಿವ ।
ಏಕಾವಲೀಮಧ್ಯಗತಂ ತರಲಂ ಪಾಟಲಪ್ರಭಮ್ ।
ವಿಪುಲೇನೋರಸಾ ಬಿಭ್ರತ್ಕೌಸ್ತುಭಸ್ಯ ಸಹೋದರಮ್ ॥೨೧॥

ಆಘೂರ್ಣಿತತರಙ್ಗೌಘಃ ಕಾಲಿಕಾನಿಲಸಂಕುಲಃ ।
ಗಙ್ಗಾಸಿನ್ಧುಪ್ರಧಾನಾಭಿರಾಪಗಾಭಿಃ ಸಮಾವೃತಃ ॥೨೨॥

ಉದ್ವರ್ತಿತಮಹಾಗ್ರಾಹಃ ಸಂಭ್ರಾನ್ತೋರಗರಾಕ್ಷಸಃ ।
ದೇವತಾನಾಂ ಸರೂಪಾಭಿಃ ನಾನಾರೂಪಾಭಿರೀಶ್ವರಃ ॥೨೩॥

ಸಾಗರಃ ಸಮುಪಕ್ರಮ್ಯ ಪೂರ್ವಮಾಮನ್ತ್ರ್ಯ ವೀರ್ಯವಾನ್ ॥೨೪॥

ಅಬ್ರವೀತ್ಪ್ರಾಞ್ಜಲಿರ್ವಾಕ್ಯಂ ರಾಘವಂ ಶರಪಾಣಿನಮ್ ॥೨೫॥

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ರಾಘವ ।
ಸ್ವಭಾವೇ ಸೌಮ್ಯ ತಿಷ್ಠನ್ತಿ ಶಾಶ್ವತಂ ಮಾರ್ಗಮಾಶ್ರಿತಾಃ ॥೨೬॥

ತತ್ಸ್ವಭಾವೋ ಮಮಾಪ್ಯೇಷ ಯದಗಾಧೋಽಹಮಪ್ಲವಃ ।
ವಿಕಾರಸ್ತು ಭವೇದ್ಗಾಧ ಏತತ್ತೇ ವೇದಯಾಮ್ಯಹಮ್ ॥೨೭॥

ನ ಕಾಮಾನ್ನ ಚ ಲೋಭಾದ್ವಾ ನ ಭಯಾತ್ಪಾರ್ಥಿವಾತ್ಮಜ ।
ಗ್ರಾಹನಕ್ರಾಕುಲಜಲಂ ಸ್ತಮ್ಭಯೇಯಂ ಕಥಂಚನ ॥೨೮॥

ವಿಧಾಸ್ಯೇ ರಾಮ ಯೇನಾಪಿ ವಿಷಹಿಷ್ಯೇ ಹ್ಯಹಂ ತಥಾ ।
ಗ್ರಾಹಾ ನ ಪ್ರಹರಿಷ್ಯನ್ತಿ ಯಾವತ್ಸೇನಾ ತರಿಷ್ಯತಿ ।
ಹರೀಣಾಂ ತರಣೇ ರಾಮ ಕರಿಷ್ಯಾಮಿ ಯಥಾ ಸ್ಥಲಮ್ ॥೨೯॥

ತಮಬ್ರುವೀತ್ತದಾ ರಾಮ ಉದ್ಯತೋ ಹಿ ನದೀಪತೇ ।
ಅಮೋಘೋಽಯಂ ಮಹಾಬಾಣಃ ಕಸ್ಮಿನ್ದೇಶೇ ನಿಪಾತ್ಯತಾಮ್ ॥೩೦॥

ರಾಮಸ್ಯ ವಚನಂ ಶ್ರುತ್ವಾ ತಂ ಚ ದೃಷ್ಟ್ವಾ ಮಹಾಶರಮ್ ।
ಮಹೋದಧಿರ್ಮಹಾತೇಜಾ ರಾಘವಂ ವಾಕ್ಯಮಬ್ರವೀತ್ ॥೩೧॥

ಉತ್ತರೇಣಾವಕಾಶೋಽಸ್ತಿ ಕಶ್ಚಿತ್ಪುಣ್ಯತಮೋ ಮಮ ।
ದ್ರುಮಕುಲ್ಯ ಇತಿ ಖ್ಯಾತೋ ಲೋಕೇ ಖ್ಯಾತೋ ಯಥಾ ಭವಾನ್ ॥

ಉಗ್ರದರ್ಶನಕರ್ಮಾಣೋ ಬಹವಸ್ತತ್ರ ದಸ್ಯವಃ ।
ಆಭೀರಪ್ರಮುಖಾಃ ಪಾಪಾಃ ಪಿಬನ್ತಿ ಸಲಿಲಂ ಮಮ ॥೩೩॥

ತೈಸ್ತು ಸಂಸ್ಪರ್ಶನಂ ಪ್ರಾಪ್ತೈರ್ನ ಸಹೇ ಪಾಪಕರ್ಮಭಿಃ ।
ಅಮೋಘಃ ಕ್ರಿಯತಾಂ ರಾಮ ತತ್ರ ತೇಷು ಶರೋತ್ತಮಃ ॥೩೪॥

ತಸ್ಯ ತದ್ವಚನಂ ಶ್ರುತ್ವಾ ಸಾಗರಸ್ಯ ಸ ರಾಘವಃ ।
ಮುಮೋಚ ತಂ ಶರಂ ದೀಪ್ತಂ ವೀರಃ ಸಾಗರದರ್ಶನಾತ್ ॥೩೫॥

ತೇನ ತನ್ಮರುಕಾನ್ತಾರಂ ಪೃಥಿವ್ಯಾಂ ಖಲು ವಿಶ್ರುತಮ್ ।
ನಿಪಾತಿತಃ ಶರೋ ಯತ್ರ ದೀಪ್ತಾಶನಿಸಮಪ್ರಭಃ ॥೩೬॥

ನನಾದ ಚ ತದಾ ತತ್ರ ವಸುಧಾ ಶಲ್ಯಪೀಡಿತಾ ।
ತಸ್ಮಾದ್ವ್ರಣಮುಖಾತ್ತೋಯಮುತ್ಪಪಾತ ರಸಾತಲಾತ್ ॥೩೭॥

ಸ ಬಭೂವ ತದಾ ಕೂಪೋ ವ್ರಣ ಇತ್ಯಭಿವಿಶ್ರುತಃ ।
ಸತತಂ ಚೋತ್ಥಿತಂ ತೋಯಂ ಸಮುದ್ರಸ್ಯೇವ ದೃಶ್ಯತೇ ॥೩೮॥

ಅವದಾರಣಶಬ್ದಶ್ಚ ದಾರುಣಃ ಸಮಪದ್ಯತ ।
ತಸ್ಮಾತ್ತದ್ಬಾಣಪಾತೇನ ತ್ವಪಃ ಕುಕ್ಷಿಷ್ವಶೋಷಯತ್ ॥೩೯॥

ವಿಖ್ಯಾತಂ ತ್ರಿಷು ಲೋಕೇಷು ಮರುಕಾನ್ತಾರಮೇವ ತತ್ ।
ಶೋಷಯಿತ್ವಾ ತತಃ ಕುಕ್ಷಿಂ ರಾಮೋ ದಶರಥಾತ್ಮಜಃ ॥೪೦॥

ವರಂ ತಸ್ಮೈ ದದೌ ವಿದ್ವಾನ್ಮರವೇಽಮರವಿಕ್ರಮಃ ॥೪೧॥

ಪಶವ್ಯಶ್ಚಾಲ್ಪರೋಗಶ್ಚ ಫಲಮೂಲರಸಾಯುತಃ ।
ಬಹುಸ್ನೇಹೋ ಬಹುಕ್ಷೀರಸುಗನ್ಧಿರ್ವಿವಿಧೌಷಧಃ ॥೪೨॥

ಏವಮೇತೈರ್ಗುಣೈರ್ಯುಕ್ತೋ ಬಹುಭಿಃ ಸತತಂ ಮರುಃ ।
ರಾಮಸ್ಯ ವರದಾನಾಚ್ಚ ಶಿವಃ ಪನ್ಥಾ ಬಭೂವ ಹ ॥೪೩॥

ತಸ್ಮಿನ್ದಗ್ಧೇ ತದಾ ಕುಕ್ಷೌ ಸಮುದ್ರಃ ಸರಿತಾಂ ಪತಿಃ ।
ರಾಘವಂ ಸರ್ವಶಾಸ್ತ್ರಜ್ಞಮಿದಂ ವಚನಮಬ್ರವೀತ್ ॥೪೪॥

ಅಯಂ ಸೌಮ್ಯ ನಲೋ ನಾಮ ತನುಜೋ ವಿಶ್ವಕರ್ಮಣಃ ।
ಪಿತ್ರಾ ದತ್ತವರಃ ಶ್ರೀಮಾನ್ಪ್ರತಿಮೋ ವಿಶ್ವಕರ್ಮಣಾ ॥೪೫॥

ಏಷ ಸೇತುಂ ಮಹೋತ್ಸಾಹಃ ಕರೋತು ಮಯಿ ವಾನರಃ ।
ತಮಹಂ ಧಾರಯಿಷ್ಯಾಮಿ ತಥಾ ಹ್ಯೇಷ ಯಥಾ ಪಿತಾ ॥೪೬॥

ಏವಮುಕ್ತ್ವೋದಧಿರ್ನಷ್ಟಃ ಸಮುತ್ಥಾಯ ನಲಸ್ತದಾ ।
ಅಬ್ರವೀದ್ವಾನರಶ್ರೇಷ್ಠೋ ವಾಕ್ಯಂ ರಾಮಂ ಮಹಾಬಲಃ ॥೪೭॥

ಅಹಂ ಸೇತುಂ ಕರಿಷ್ಯಾಮಿ ವಿಸ್ತೀರ್ಣೇ ಲವಣಾಲಯೇ ।
ಪಿತುಃ ಸಾಮರ್ಥ್ಯಮಾಸ್ಥಾಯ ತತ್ತ್ವಮಾಹ ಮಹೋದಧಿಃ ॥೪೮॥

ದಣ್ಡ ಏವ ವರೋ ಲೋಕೇ ಪುರುಷಸ್ಯೇತಿ ಮೇ ಮತಿಃ ।
ಧಿಕ್ ಕ್ಷಮಾಮಕೃತಜ್ಞೇಷು ಸಾನ್ತ್ವಂ ದಾನಮಥಾಪಿ ವಾ ॥೪೯॥

ಅಯಂ ಹಿ ಸಾಗರೋ ಭೀಮಃ ಸೇತುಕರ್ಮದಿದೃಕ್ಷಯಾ ।
ದದೌ ದಣ್ಡಭಯಾದ್ಗಾಧಂ ರಾಘವಾಯ ಮಹೋದಧಿಃ ॥೫೦॥

ಮಮ ಮಾತುರ್ವರೋ ದತ್ತೋ ಮನ್ದರೇ ವಿಶ್ವಕರ್ಮಣಾ ।
ಮಯಾ ತು ಸದೃಶಃ ಪುತ್ರಸ್ತಸ್ಯ ದೇವಿ ಭವಿಷ್ಯತಿ ॥೫೧॥

ಔರಸಸ್ತಸ್ಯ ಪುತ್ರೋಽಹಂ ಸದೃಶೋ ವಿಶ್ವಕರ್ಮಣಾ ।
ಸ್ಮಾರಿತೋಽಸ್ಮ್ಯಹಮೇತೇನ ತತ್ತ್ವಮಾಹ ಮಹೋದಧಿಃ ।
ನ ಚಾಪ್ಯಹಮನುಕ್ತೋ ವೈ ಪ್ರಬ್ರೂಯಾಮಾತ್ಮನೋ ಗುಣಾನ್ ॥

ಸಮರ್ಥಶ್ಚಾಪ್ಯಹಂ ಸೇತುಂ ಕರ್ತುಂ ವೈ ವರುಣಾಲಯೇ ।
ಕಾಮಮದ್ಯೈವ ಬಧ್ನನ್ತು ಸೇತುಂ ವಾನರಪುಂಗವಾಃ ॥೫೩॥

ತತೋಽವಸೃಷ್ಟಾ ರಾಮೇಣ ಸರ್ವತೋ ಹರಿಯೂಥಪಾಃ ।
ಅಭಿಪೇತುರ್ಮಹಾರಣ್ಯಂ ಹೃಷ್ಟಾಃ ಶತಸಹಸ್ರಶಃ ॥೫೪॥

ತೇ ನಗಾನ್ನಗಸಂಕಾಶಾಃ ಶಾಖಾಮೃಗಗಣರ್ಷಭಾಃ ।
ಬಭಞ್ಜುರ್ವಾನರಾಸ್ತತ್ರ ಪ್ರಚಕರ್ಷುಶ್ಚ ಸಾಗರಮ್ ॥೫೫॥

ತೇ ಸಾಲೈಶ್ಚಾಶ್ವಕರ್ಣೈಶ್ಚ ಧವೈರ್ವಂಶೈಶ್ಚ ವಾನರಾಃ ।
ಕುಟಜೈರರ್ಜುನೈಸ್ತಾಲೈಸ್ತಿಲಕೈಸ್ತಿಮಿಶೈರಪಿ ॥೫೬॥

ಬಿಲ್ವೈಶ್ಚ ಸಪ್ತಪರ್ಣೈಶ್ಚ ಕರ್ಣಿಕಾರೈಶ್ಚ ಪುಷ್ಪಿತೈಃ ।
ಚೂತೈಶ್ಚಾಶೋಕವೃಕ್ಷೈಶ್ಚ ಸಾಗರಂ ಸಮಪೂರಯನ್ ॥೫೭॥

ಸಮೂಲಾಂಶ್ಚ ವಿಮೂಲಾಂಶ್ಚ ಪಾದಪಾನ್ಹರಿಸತ್ತಮಾಃ ।
ಇನ್ದ್ರಕೇತೂನಿವೋದ್ಯಮ್ಯ ಪ್ರಜಹ್ರುರ್ಹರಯಸ್ತರೂನ್ ॥೫೮॥

ತಾಲಾನ್ದಾಡಿಮಗುಲ್ಮಾಂಶ್ಚ ನಾರಿಕೇಲಾನ್ವಿಭೀತಕಾನ್ ।
ವಕುಲಾನ್ಖಾದಿರಾನ್ನಿಮ್ಬಾನ್ಸಮಾಜಹ್ರುಃ ಸಮನ್ತತಃ ॥೫೯॥

ಹಸ್ತಿಮಾತ್ರಾನ್ಮಹಾಕಾಯಾಃ ಪಾಷಾಣಾಂಶ್ಚ ಮಹಾಬಲಾಃ ।
ಪರ್ವತಾಂಶ್ಚ ಸಮುತ್ಪಾಟ್ಯ ಯನ್ತ್ರೈಃ ಪರಿವಹನ್ತಿ ಚ ॥೬೦॥

ಪ್ರಾಕ್ಷಿಪ್ಯಮಾಣೈರಚಲೈಃ ಸಹಸಾ ಜಲಮುದ್ಧತಮ್ ।
ಸಮುತ್ಪತಿತಮಾಕಾಶಮುಪಾಸರ್ಪತ್ತತಸ್ತತಃ ॥೬೧॥

ಸಮುದ್ರಂ ಕ್ಷೋಭಯಾಮಾಸುರ್ವಾನರಾಶ್ಚ ಸಮನ್ತತಃ ।
ಸೂತ್ರಾಣ್ಯನ್ಯೇ ಪ್ರಗೃಹ್ಣನ್ತಿ ವ್ಯಾಯತಂ ಶತಯೋಜನಮ್ ॥೬೨॥

ನಲಶ್ಚಕ್ರೇ ಮಹಾಸೇತುಂ ಮಧ್ಯೇ ನದನದೀಪತೇಃ ।
ಸ ತಥಾ ಕ್ರಿಯತೇ ಸೇತುರ್ವಾನರೈರ್ಘೋರಕರ್ಮಭಿಃ ॥೬೩॥

ದಣ್ಡಾನನ್ಯೇ ಪ್ರಗೃಹ್ಣನ್ತಿ ವಿಚಿನ್ವನ್ತಿ ತಥಾ ಪರೇ ।
ವಾನರಾಃ ಶತಶಸ್ತತ್ರ ರಾಮಸ್ಯಾಜ್ಞಾಪುರಃಸರಾಃ ॥೬೪॥

ಮೇಘಾಭೈಃ ಪರ್ವತಾಗ್ರೈಶ್ಚ ತೃಣೈಃ ಕಾಷ್ಠೈರ್ಬಬನ್ಧಿರೇ ।
ಪುಷ್ಪಿತಾಗ್ರೈಶ್ಚ ತರುಭಿಃ ಸೇತುಂ ಬಧ್ನನ್ತಿ ವಾನರಾಃ ॥೬೫॥

ಪಾಷಾಣಾಂಶ್ಚ ಗಿರಿಪ್ರಖ್ಯಾನ್ಗಿರೀಣಾಂ ಶಿಖರಾಣಿ ಚ ।
ದೃಶ್ಯನ್ತೇ ಪರಿಧಾವನ್ತೋ ಗೃಹ್ಯ ವಾರಣಸಂನಿಭಾಃ ॥೬೬॥

ಶಿಲಾನಾಂ ಕ್ಷಿಪ್ಯಮಾಣಾನಾಂ ಶೈಲಾನಾಂ ಚ ನಿಪಾತ್ಯತಾಮ್ ।
ಬಭೂವ ತುಮುಲಃ ಶಬ್ದಸ್ತದಾ ತಸ್ಮಿನ್ಮಹೋದಧೌ ॥೬೭॥

ಕೃತಾನಿ ಪ್ರಥಮೇನಾಹ್ನಾ ಯೋಜನಾನಿ ಚತುರ್ದಶ ।
ಪ್ರಹೃಷ್ಟೈರ್ಗಜಸಂಕಾಶೈಸ್ತ್ವರಮಾಣೈಃ ಪ್ಲವಂಗಮೈಃ ॥೬೮॥

ದ್ವಿತೀಯೇನ ತಥಾ ಚಾಹ್ನಾ ಯೋಜನಾನಿ ತು ವಿಂಶತಿಃ ।
ಕೃತಾನಿ ಪ್ಲವಗೈಸ್ತೂರ್ಣಂ ಭೀಮಕಾಯೈರ್ಮಹಾಬಲೈಃ ॥೬೯॥

ಅಹ್ನಾ ತೃತೀಯೇನ ತಥಾ ಯೋಜನಾನಿ ಕೃತಾನಿ ತು ।
ತ್ವರಮಾಣೈರ್ಮಹಾಕಾಯೈರೇಕವಿಂಶತಿರೇವ ಚ ॥೭೦॥

ಚತುರ್ಥೇನ ತಥಾ ಚಾಹ್ನಾ ದ್ವಾವಿಂಶತಿರಥಾಪಿ ಚ ।
ಯೋಜನಾನಿ ಮಹಾವೇಗೈಃ ಕೃತಾನಿ ತ್ವರಿತೈಸ್ತು ತೈಃ ॥೭೧॥

ಪಞ್ಚಮೇನ ತಥಾ ಚಾಹ್ನಾ ಪ್ಲವಗೈಃ ಕ್ಷಿಪ್ರಕಾರಿಭಿಃ ।
ಯೋಜನಾನಿ ತ್ರಯೋವಿಂಶತ್ಸುವೇಲಮಧಿಕೃತ್ಯ ವೈ ॥೭೨॥

ಸ ವಾನರವರಃ ಶ್ರೀಮಾನ್ವಿಶ್ವಕರ್ಮಾತ್ಮಜೋ ಬಲೀ ।
ಬಬನ್ಧ ಸಾಗರೇ ಸೇತುಂ ಯಥಾ ಚಾಸ್ಯ ಪಿತಾ ತಥಾ ॥೭೩॥

ಸ ನಲೇನ ಕೃತಃ ಸೇತುಃ ಸಾಗರೇ ಮಕರಾಲಯೇ ।
ಶುಶುಭೇ ಸುಭಗಃ ಶ್ರೀಮಾನ್ಸ್ವಾತೀಪಥ ಇವಾಮ್ಬರೇ ॥೭೪॥

ತತೋ ದೇವಾಃ ಸಗನ್ಧರ್ವಾಃ ಸಿದ್ಧಾಶ್ಚ ಪರಮರ್ಷಯಃ ।
ಆಗಮ್ಯ ಗಗನೇ ತಸ್ಥುರ್ದ್ರಷ್ಟುಕಾಮಾಸ್ತದದ್ಭುತಮ್ ॥೭೫॥

ದಶಯೋಜನವಿಸ್ತೀರ್ಣಂ ಶತಯೋಜನಮಾಯತಮ್ ।
ದದೃಶುರ್ದೇವಗನ್ಧರ್ವಾ ನಲಸೇತುಂ ಸುದುಷ್ಕರಮ್ ॥೭೬॥

ಆಪ್ಲವನ್ತಃ ಪ್ಲವನ್ತಶ್ಚ ಗರ್ಜನ್ತಶ್ಚ ಪ್ಲವಂಗಮಾಃ ।
ತದಚಿನ್ತ್ಯಮಸಹ್ಯಂ ಚ ಅದ್ಭುತಂ ರೋಮಹರ್ಷಣಮ್ ।
ದದೃಶುಃ ಸರ್ವಭೂತಾನಿ ಸಾಗರೇ ಸೇತುಬನ್ಧನಮ್ ॥೭೭॥

ತಾನಿ ಕೋಟಿಸಹಸ್ರಾಣಿ ವಾನರಾಣಾಂ ಮಹೌಜಸಾಮ್ ।
ಬಧ್ನನ್ತಃ ಸಾಗರೇ ಸೇತುಂ ಜಗ್ಮುಃ ಪಾರಂ ಮಹೋದಧೇಃ ॥೭೮॥

ವಿಶಾಲಃ ಸುಕೃತಃ ಶ್ರೀಮಾನ್ಸುಭೂಮಿಃ ಸುಸಮಾಹಿತಃ ।
ಅಶೋಭತ ಮಹಾಸೇತುಃ ಸೀಮನ್ತ ಇವ ಸಾಗರೇ ॥೭೯॥

ತತಃ ಪಾರೇ ಸಮುದ್ರಸ್ಯ ಗದಾಪಾಣಿರ್ವಿಭೀಷಣಃ ।
ಪರೇಷಾಮಭಿಘಾತಾರ್ಥಮತಿಷ್ಠತ್ಸಚಿವೈಃ ಸಹ ॥೮೦॥

ಸುಗ್ರೀವಸ್ತು ತತಃ ಪ್ರಾಹ ರಾಮಂ ಸತ್ಯಪರಾಕ್ರಮಮ್ ।
ಹನುಮನ್ತಂ ತ್ವಮಾರೋಹ ಅಙ್ಗದಂ ಚಾಪಿ ಲಕ್ಷ್ಮಣಃ ॥೮೧॥

ಅಯಂ ಹಿ ವಿಪುಲೋ ವೀರ ಸಾಗರೋ ಮಕರಾಲಯಃ ।
ವೈಹಾಯಸೌ ಯುವಾಮೇತೌ ವಾನರೌ ತಾರಯಿಷ್ಯತಃ ॥೮೨॥

ಅಗ್ರತಸ್ತಸ್ಯ ಸೈನ್ಯಸ್ಯ ಶ್ರೀಮಾನ್ರಾಮಃ ಸಲಕ್ಷ್ಮಣಃ ।
ಜಗಾಮ ಧನ್ವೀ ಧರ್ಮಾತ್ಮಾ ಸುಗ್ರೀವೇಣ ಸಮನ್ವಿತಃ ॥೮೩॥

ಅನ್ಯೇ ಮಧ್ಯೇನ ಗಚ್ಛನ್ತಿ ಪಾರ್ಶ್ವತೋಽನ್ಯೇ ಪ್ಲವಂಗಮಾಃ ।
ಸಲಿಲೇ ಪ್ರಪತನ್ತ್ಯನ್ಯೇ ಮಾರ್ಗಮನ್ಯೇ ಪ್ರಪೇದಿರೇ ॥೮೪॥

ಕೇಚಿದ್ವೈಹಾಯಸಗತಾಃ ಸುಪರ್ಣಾ ಇವ ಪುಪ್ಲುವುಃ ॥೮೫॥

ಘೋಷೇಣ ಮಹತಾ ತಸ್ಯ ಸಿನ್ಧೋರ್ಘೋಷಂ ಸಮುಚ್ಛ್ರಿತಮ್ ।
ಭೀಮಮನ್ತರ್ದಧೇ ಭೀಮಾ ತರನ್ತೀ ಹರಿವಾಹಿನೀ ॥೮೬॥

ವಾನರಾಣಾಂ ಹಿ ಸಾ ತೀರ್ಣಾ ವಾಹಿನೀ ನಲಸೇತುನಾ ।
ತೀರೇ ನಿವಿವಿಶೇ ರಾಜ್ಞೋ ಬಹುಮೂಲಫಲೋದಕೇ ॥೮೭॥

ತದದ್ಭುತಂ ರಾಘವಕರ್ಮ ದುಷ್ಕರಂ
ಸಮೀಕ್ಷ್ಯ ದೇವಾಃ ಸಹ ಸಿದ್ಧಚಾರಣೈಃ ।
ಉಪೇತ್ಯ ರಾಮಂ ಸಹಸಾ ಮಹರ್ಷಿಭಿಃ
ಸಮಭ್ಯಷಿಞ್ಚನ್ಸುಶುಭೈರ್ಜಲೈಃ ಪೃಥಕ್ ॥೮೮॥

ಜಯಸ್ವ ಶತ್ರೂನ್ನರದೇವ ಮೇದಿನೀಂ
ಸಸಾಗರಾಂ ಪಾಲಯ ಶಾಶ್ವತೀಃ ಸಮಾಃ ।
ಇತೀವ ರಾಮಂ ನರದೇವಸತ್ಕೃತಂ
ಶುಭೈರ್ವಚೋಭಿರ್ವಿವಿಧೈರಪೂಜಯನ್ ॥೮೯॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ದ್ವಾವಿಂಶಃ ಸರ್ಗಃ

ತ್ರಯೋವಿಂಶಃ ಸರ್ಗಃ

ನಿಮಿತ್ತಾನಿ ನಿಮಿತ್ತಜ್ಞೋ ದೃಷ್ಟ್ವಾ ಲಕ್ಷ್ಮಣಪೂರ್ವಜಃ ।
ಸೌಮಿತ್ರಿಂ ಸಂಪರಿಷ್ವಜ್ಯ ಇದಂ ವಚನಮಬ್ರವೀತ್ ॥೧॥

ಪರಿಗೃಹ್ಯೋದಕಂ ಶೀತಂ ವನಾನಿ ಫಲವನ್ತಿ ಚ ।
ಬಲೌಘಂ ಸಂವಿಭಜ್ಯೇಮಂ ವ್ಯೂಹ್ಯ ತಿಷ್ಠೇಮ ಲಕ್ಷ್ಮಣ ॥೨॥

ಲೋಕಕ್ಷಯಕರಂ ಭೀಮಂ ಭಯಂ ಪಶ್ಯಾಮ್ಯುಪಸ್ಥಿತಮ್ ।
ನಿಬರ್ಹಣಂ ಪ್ರವೀರಾಣಾಮೃಕ್ಷವಾನರರಕ್ಷಸಾಮ್ ॥೩॥

ವಾತಾಶ್ಚ ಕಲುಷಾ ವಾನ್ತಿ ಕಮ್ಪತೇ ಚ ವಸುನ್ಧರಾ ।
ಪರ್ವತಾಗ್ರಾಣಿ ವೇಪನ್ತೇ ಪತನ್ತಿ ಚ ಮಹೀರುಹಾಃ ॥೪॥

ಮೇಘಾಃ ಕ್ರವ್ಯಾದಸಂಕಾಶಾಃ ಪರುಷಾಃ ಪರುಷಸ್ವನಾಃ ।
ಕ್ರೂರಾಃ ಕ್ರೂರಂ ಪ್ರವರ್ಷನ್ತಿ ಮಿಶ್ರಂ ಶೋಣಿತಬಿನ್ದುಭಿಃ ॥೫॥

ರಕ್ತಚನ್ದನಸಂಕಾಶಾ ಸನ್ಧ್ಯಾ ಪರಮದಾರುಣಾ ।
ಜ್ವಲತಃ ಪ್ರಪತತ್ಯೇತದಾದಿತ್ಯಾದಗ್ನಿಮಣ್ಡಲಮ್ ॥೬॥

ದೀನಾ ದೀನಸ್ವರಾಃ ಕ್ರೂರಾಃ ಸರ್ವತೋ ಮೃಗಪಕ್ಷಿಣಃ ।
ಪ್ರತ್ಯಾದಿತ್ಯಂ ವಿನರ್ದನ್ತಿ ಜನಯನ್ತೋ ಮಹದ್ಭಯಮ್ ॥೭॥

ರಜನ್ಯಾಮಪ್ರಕಾಶಸ್ತು ಸಂತಾಪಯತಿ ಚನ್ದ್ರಮಾಃ ।
ಕೃಷ್ಣರಕ್ತಾಂಶುಪರ್ಯನ್ತೋ ಲೋಕಕ್ಷಯ ಇವೋದಿತಃ ॥೮॥

ಹ್ರಸ್ವೋ ರೂಕ್ಷೋಽಪ್ರಶಸ್ತಶ್ಚ ಪರಿವೇಷಃ ಸುಲೋಹಿತಃ ।
ಆದಿತ್ಯೇ ವಿಮಲೇ ನೀಲಂ ಲಕ್ಷ್ಮ ಲಕ್ಷ್ಮಣ ದೃಶ್ಯತೇ ॥೯॥

ರಜಸಾ ಮಹತಾ ಚಾಪಿ ನಕ್ಷತ್ರಾಣಿ ಹತಾನಿ ಚ ।
ಯುಗಾನ್ತಮಿವ ಲೋಕಾನಾಂ ಪಶ್ಯ ಶಂಸನ್ತಿ ಲಕ್ಷ್ಮಣ ॥೧೦॥

ಕಾಕಾಃ ಶ್ಯೇನಾಸ್ತಥಾ ಗೃಧ್ರಾ ನೀಚಾಃ ಪರಿಪತನ್ತಿ ಚ ।
ಶಿವಾಶ್ಚಾಪ್ಯಶಿವಾನ್ನಾದಾನ್ನದನ್ತಿ ಸುಮಹಾಭಯಾನ್ ॥೧೧॥

ಶೈಲೈಃ ಶೂಲೈಶ್ಚ ಖಡ್ಗೈಶ್ಚ ವಿಸೃಷ್ಟೈಃ ಕಪಿರಾಕ್ಷಸೈಃ ।
ಭವಿಷ್ಯತ್ಯಾವೃತಾ ಭೂಮಿರ್ಮಾಂಸಶೋಣಿತಕರ್ದಮಾ ॥೧೨॥

ಕ್ಷಿಪ್ರಮದ್ಯೈವ ದುರ್ಧರ್ಷಾಂ ಪುರೀಂ ರಾವಣಪಾಲಿತಾಮ್ ।
ಅಭಿಯಾಮ ಜವೇನೈವ ಸರ್ವತೋ ಹರಿಭಿರ್ವೃತಾಃ ॥೧೩॥

ಇತ್ಯೇವಮುಕ್ತ್ವಾ ಧರ್ಮಾತ್ಮಾ ಧನ್ವೀ ಸಂಗ್ರಾಮಹರ್ಷಣಃ ।
ಪ್ರತಸ್ಥೇ ಪುರತೋ ರಾಮೋ ಲಙ್ಕಾಮಭಿಮುಖೋ ವಿಭುಃ ॥೧೪॥

ಸವಿಭೀಷಣಸುಗ್ರೀವಾಸ್ತತಸ್ತೇ ವಾನರರ್ಷಭಾಃ ।
ಪ್ರತಸ್ಥಿರೇ ವಿನರ್ದನ್ತೋ ನಿಶ್ಚಿತಾ ದ್ವಿಷತಾಂ ವಧೇ ॥೧೫॥

ರಾಘವಸ್ಯ ಪ್ರಿಯಾರ್ಥಂ ತು ಧೃತಾನಾಂ ವೀರ್ಯಶಾಲಿನಾಮ್ ।
ಹರೀಣಾಂ ಕರ್ಮಚೇಷ್ಟಾಭಿಸ್ತುತೋಷ ರಘುನನ್ದನಃ ॥೧೬॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ತ್ರಯೋವಿಂಶಃ ಸರ್ಗಃ

ಚತುರ್ವಿಂಶಃ ಸರ್ಗಃ

ಸಾ ವೀರಸಮಿತೀ ರಾಜ್ಞಾ ವಿರರಾಜ ವ್ಯವಸ್ಥಿತಾ ।
ಶಶಿನಾ ಶುಭನಕ್ಷತ್ರಾ ಪೌರ್ಣಮಾಸೀವ ಶಾರದೀ ॥೧॥

ಪ್ರಚಚಾಲ ಚ ವೇಗೇನ ತ್ರಸ್ತಾ ಚೈವ ವಸುಂಧರಾ ।
ಪೀಡ್ಯಮಾನಾ ಬಲೌಘೇನ ತೇನ ಸಾಗರವರ್ಚಸಾ ॥೨॥

ತತಃ ಶುಶ್ರುವುರಾಕೃಷ್ಟಂ ಲಙ್ಕಾಯಾಂ ಕಾನನೌಕಸಃ ।
ಭೇರೀಮೃದಙ್ಗಸಂಘುಷ್ಟಂ ತುಮುಲಂ ರೋಮಹರ್ಷಣಮ್ ॥೩॥

ಬಭೂವುಸ್ತೇನ ಘೋಷೇಣ ಸಂಹೃಷ್ಟಾ ಹರಿಯೂಥಪಾಃ ।
ಅಮೃಷ್ಯಮಾಣಾಸ್ತಂ ಘೋಷಂ ವಿನೇದುರ್ಘೋಷವತ್ತರಮ್ ॥೪॥

ರಾಕ್ಷಸಾಸ್ತು ಪ್ಲವಂಗಾನಾಂ ಶುಶ್ರುವುಶ್ಚಾಪಿ ಗರ್ಜಿತಮ್ ।
ನರ್ದತಾಮಿವ ದೃಪ್ತಾನಾಂ ಮೇಘಾನಾಮಮ್ಬರೇ ಸ್ವನಮ್ ॥೫॥

ದೃಷ್ಟ್ವಾ ದಾಶರಥಿರ್ಲಙ್ಕಾಂ ಚಿತ್ರಧ್ವಜಪತಾಕಿನೀಮ್ ।
ಜಗಾಮ ಮನಸಾ ಸೀತಾಂ ದೂಯಮಾನೇನ ಚೇತಸಾ ॥೬॥

ಅತ್ರ ಸಾ ಮೃಗಶಾಬಾಕ್ಷೀ ರಾವಣೇನೋಪರುಧ್ಯತೇ ।
ಅಭಿಭೂತಾ ಗ್ರಹೇಣೇವ ಲೋಹಿತಾಙ್ಗೇನ ರೋಹಿಣೀ ॥೭॥

ದೀರ್ಘಮುಷ್ಣಂ ಚ ನಿಃಶ್ವಸ್ಯ ಸಮುದ್ವೀಕ್ಷ್ಯ ಚ ಲಕ್ಷ್ಮಣಮ್ ।
ಉವಾಚ ವಚನಂ ವೀರಸ್ತತ್ಕಾಲಹಿತಮಾತ್ಮನಃ ॥೮॥

ಆಲಿಖನ್ತೀಮಿವಾಕಾಶಮುತ್ಥಿತಾಂ ಪಶ್ಯ ಲಕ್ಷ್ಮಣ ।
ಮನಸೇವ ಕೃತಾಂ ಲಙ್ಕಾಂ ನಗಾಗ್ರೇ ವಿಶ್ವಕರ್ಮಣಾ ॥೯॥

ವಿಮಾನೈರ್ಬಹುಭಿರ್ಲಙ್ಕಾ ಸಂಕೀರ್ಣಾ ಭುವಿ ರಾಜತೇ ।
ವಿಷ್ಣೋಃ ಪದಮಿವಾಕಾಶಂ ಛಾದಿತಂ ಪಾಣ್ಡುರೈರ್ಘನೈಃ ॥೧೦॥

ಪುಷ್ಪಿತೈಃ ಶೋಭಿತಾ ಲಙ್ಕಾ ವನೈಶ್ಚೈತ್ರರಥೋಪಮೈಃ ।
ನಾನಾಪತಙ್ಗಸಂಘುಷ್ಟೈಃ ಫಲಪುಷ್ಪೋಪಗೈಃ ಶುಭೈಃ ॥೧೧॥

ಪಶ್ಯ ಮತ್ತವಿಹಂಗಾನಿ ಪ್ರಲೀನಭ್ರಮರಾಣಿ ಚ ।
ಕೋಕಿಲಾಕುಲಷಣ್ಡಾನಿ ದೋಧವೀತಿ ಶಿವೋಽನಿಲಃ ॥೧೨॥

ಇತಿ ದಾಶರಥೀ ರಾಮೋ ಲಕ್ಷ್ಮಣಂ ಸಮಭಾಷತ ।
ಬಲಂ ಚ ತದ್ವೈ ವಿಭಜನ್ ಶಾಸ್ತ್ರದೃಷ್ಟೇನ ಕರ್ಮಣಾ ॥೧೩॥

ಶಶಾಸ ಕಪಿಸೇನಾಯಾ ಬಲಮಾದಾಯ ವೀರ್ಯವಾನ್ ।
ಅಙ್ಗದಃ ಸಹ ನೀಲೇನ ತಿಷ್ಠೇದುರಸಿ ದುರ್ಜಯಃ ॥೧೪॥

ತಿಷ್ಠೇದ್ವಾನರವಾಹಿನ್ಯಾ ವಾನರೌಘಸಮಾವೃತಃ ।
ಆಶ್ರಿತ್ಯ ದಕ್ಷಿಣಂ ಪಾರ್ಶ್ವಮೃಷಭೋ ವಾನರರ್ಷಭಃ ॥೧೫॥

ಗನ್ಧಹಸ್ತೀವ ದುರ್ಧರ್ಷಸ್ತರಸ್ವೀ ಗನ್ಧಮಾದನಃ ।
ತಿಷ್ಠೇದ್ವಾನರವಾಹಿನ್ಯಾಃ ಸವ್ಯಂ ಪಾರ್ಶ್ವಂ ಸಮಾಶ್ರಿತಃ ॥೧೬॥

ಮೂರ್ಧ್ನಿ ಸ್ಥಾಸ್ಯಾಮ್ಯಹಂ ಯುಕ್ತೋ ಲಕ್ಷ್ಮಣೇನ ಸಮನ್ವಿತಃ ।
ಜಾಮ್ಬವಾಂಶ್ಚ ಸುಷೇಣಶ್ಚ ವೇಗದರ್ಶೀ ಚ ವಾನರಃ ।
ಋಕ್ಷಮುಖ್ಯಾ ಮಹಾತ್ಮಾನಃ ಕುಕ್ಷಿಂ ರಕ್ಷನ್ತು ತೇ ತ್ರಯಃ ॥೧೭॥

ಜಘನಂ ಕಪಿಸೇನಾಯಾಃ ಕಪಿರಾಜೋಽಭಿರಕ್ಷತು ।
ಪಶ್ಚಾರ್ಧಮಿವ ಲೋಕಸ್ಯ ಪ್ರಚೇತಾಸ್ತೇಜಸಾ ವೃತಃ ॥೧೮॥

ಸುವಿಭಕ್ತಮಹಾವ್ಯೂಹಾ ಮಹಾವಾನರರಕ್ಷಿತಾ ।
ಅನೀಕಿನೀ ಸಾ ವಿಬಭೌ ಯಥಾ ದ್ಯೌಃ ಸಾಭ್ರ ಸಂಪ್ಲವಾ ॥೧೯॥

ಪ್ರಗೃಹ್ಯ ಗಿರಿಶೃಙ್ಗಾಣಿ ಮಹತಶ್ಚ ಮಹೀರುಹಾನ್ ।
ಆಸೇದುರ್ವಾನರಾ ಲಙ್ಕಾಂ ವಿಮರ್ದಯಿಷವೋ ರಣೇ ॥೨೦॥

ಶಿಖರೈರ್ವಿಕಿರಾಮೈನಾಂ ಲಙ್ಕಾಂ ಮುಷ್ಟಿಭಿರೇವ ವಾ ।
ಇತಿ ಸ್ಮ ದಧಿರೇ ಸರ್ವೇ ಮನಾಂಸಿ ಹರಿಸತ್ತಮಾಃ ॥೨೧॥

ತತೋ ರಾಮೋ ಮಹಾತೇಜಾಃ ಸುಗ್ರೀವಮಿದಮಬ್ರವೀತ್ ।
ಸುವಿಭಕ್ತಾನಿ ಸೈನ್ಯಾನಿ ಶುಕ ಏಷ ವಿಮುಚ್ಯತಾಮ್ ॥೨೨॥

ರಾಮಸ್ಯ ವಚನಂ ಶ್ರುತ್ವಾ ವಾನರೇನ್ದ್ರೋ ಮಹಾಬಲಃ ।
ಮೋಚಯಾಮಾಸ ತಂ ದೂತಂ ಶುಕಂ ರಾಮಸ್ಯ ಶಾಸನಾತ್ ॥೨೩॥

ಮೋಚಿತೋ ರಾಮವಾಕ್ಯೇನ ವಾನರೈಶ್ಚಾಭಿಪೀಡಿತಃ ।
ಶುಕಃ ಪರಮಸಂತ್ರಸ್ತೋ ರಕ್ಷೋಽಧಿಪಮುಪಾಗಮತ್ ॥೨೪॥

ರಾವಣಃ ಪ್ರಹಸನ್ನೇವ ಶುಕಂ ವಾಕ್ಯಮಭಾಷತ ।
ಕಿಮಿಮೌ ತೇ ಸಿತೌ ಪಕ್ಷೌ ಲೂನಪಕ್ಷಶ್ಚ ದೃಶ್ಯಸೇ ।
ಕಚ್ಚಿನ್ನಾನೇಕಚಿತ್ತಾನಾಂ ತೇಷಾಂ ತ್ವಂ ವಶಮಾಗತಃ ॥೨೫॥

ತತಃ ಸ ಭಯಸಂವಿಗ್ನಸ್ತಥಾ ರಾಜ್ಞಾಭಿಚೋದಿತಃ ।
ವಚನಂ ಪ್ರತ್ಯುವಾಚೇದಂ ರಾಕ್ಷಸಾಧಿಪಮುತ್ತಮಮ್ ॥೨೬॥

ಸಾಗರಸ್ಯೋತ್ತರೇ ತೀರೇಽಬ್ರುವಂ ತೇ ವಚನಂ ತಥಾ ।
ಯಥಾ ಸಂದೇಶಮಕ್ಲಿಷ್ಟಂ ಸಾನ್ತ್ವಯನ್ ಶ್ಲಕ್ಷ್ಣಯಾ ಗಿರಾ ॥೨೭॥

ಕ್ರುದ್ಧೈಸ್ತೈರಹಮುತ್ಪ್ಲುತ್ಯ
ದೃಷ್ಟಮಾತ್ರೈಃ ಪ್ಲವಂಗಮೈಃ ।
ಗೃಹಿತೋಽಸ್ಮ್ಯಪಿ ಚಾರಬ್ಧೋ
ಹನ್ತುಂ ಲೋಪ್ತುಂ ಚ ಮುಷ್ಟಿಭಿಃ ॥೨೮॥

ನೈವ ಸಂಭಾಷಿತುಂ ಶಕ್ಯಾಃ ಸಂಪ್ರಶ್ನೋಽತ್ರ ನ ಲಭ್ಯತೇ ।
ಪ್ರಕೃತ್ಯಾ ಕೋಪನಾಸ್ತೀಕ್ಷ್ಣಾ ವಾನರಾ ರಾಕ್ಷಸಾಧಿಪ ॥೨೯॥

ಸ ಚ ಹನ್ತಾ ವಿರಾಧಸ್ಯ ಕಬನ್ಧಸ್ಯ ಖರಸ್ಯ ಚ ।
ಸುಗ್ರೀವಸಹಿತೋ ರಾಮಃ ಸೀತಾಯಾಃ ಪದಮಾಗತಃ ॥೩೦॥

ಸ ಕೃತ್ವಾ ಸಾಗರೇ ಸೇತುಂ ತೀರ್ತ್ವಾ ಚ ಲವಣೋದಧಿಮ್ ।
ಏಷ ರಕ್ಷಾಂಸಿ ನಿರ್ಧೂಯ ಧನ್ವೀ ತಿಷ್ಠತಿ ರಾಘವಃ ॥೩೧॥

ಪರಿಘಾಗ್ರೇಣ ತಾನ್ವೃಕ್ಷಾನ್ಬಭಞ್ಜ ಸ ಸುರಾನ್ತಕಃ ।
ತ್ರಿಶಿರಾಶ್ಚಾಙ್ಗದಂ ವೀರಮಭಿದುದ್ರಾವ ಸಾಯಕೈಃ ॥೯॥

ಗಜೇನ ಸಮಭಿದ್ರುತ್ಯ ವಾಲಿಪುತ್ರಂ ಮಹೋದರಃ ।
ಜಘಾನೋರಸಿ ಸಂಕ್ರುದ್ಧಸ್ತೋಮರೈರ್ವಜ್ರಸಂನಿಭೈಃ ॥೧೦॥

ದೇವಾನ್ತಕಶ್ಚ ಸಂಕ್ರುದ್ಧಃ ಪರಿಘೇಣ ತದಾಙ್ಗದಮ್ ।
ಉಪಗಮ್ಯಾಭಿಹತ್ಯಾಶು ವ್ಯಪಚಕ್ರಾಮ ವೇಗವಾನ್ ॥೧೧॥

ಸ ತ್ರಿಭಿರ್ನೈರ್ಋತಶ್ರೇಷ್ಠೈರ್ಯುಗಪತ್ಸಮಭಿದ್ರುತಃ ।
ನ ವಿವ್ಯಥೇ ಮಹಾತೇಜಾ ವಾಲಿಪುತ್ರಃ ಪ್ರತಾಪವಾನ್ ॥೧೨॥

ಸ ವೇಗವಾನ್ಮಹಾವೇಗಂ ಕೃತ್ವಾ ಪರಮದುರ್ಜಯಃ ।
ತಲೇನ ಭೃಶಮುತ್ಪತ್ಯ ಜಘಾನಾಸ್ಯ ಮಹಾಗಜಮ್ ॥೧೩॥

ತಸ್ಯ ತೇನ ಪ್ರಹಾರೇಣ ನಾಗರಾಜಸ್ಯ ಸಂಯುಗೇ ।
ಪೇತತುರ್ಲೋಚನೇ ತಸ್ಯ ವಿನನಾದ ಸ ವಾರಣಃ ॥೧೪॥

ವಿಷಾಣಂ ಚಾಸ್ಯ ನಿಷ್ಕೃಷ್ಯ ವಾಲಿಪುತ್ರೋ ಮಹಾಬಲಃ ।
ದೇವಾನ್ತಕಮಭಿಪ್ಲುತ್ಯ ತಾಡಯಾಮಾಸ ಸಂಯುಗೇ ॥೧೫॥

ಸ ವಿಹ್ವಲಿತಸರ್ವಾಙ್ಗೋ ವಾತೋದ್ಧೂತ ಇವ ದ್ರುಮಃ ।
ಲಾಕ್ಷಾರಸಸವರ್ಣಂ ಚ ಸುಸ್ರಾವ ರುಧಿರಂ ಮುಖಾತ್ ॥೧೬॥

ಅಥಾಶ್ವಾಸ್ಯ ಮಹಾತೇಜಾಃ ಕೃಚ್ಛ್ರಾದ್ದೇವಾನ್ತಕೋ ಬಲೀ ।
ಆವಿಧ್ಯ ಪರಿಘಂ ಘೋರಮಾಜಘಾನ ತದಾಙ್ಗದಮ್ ॥೧೭॥

ಪರಿಘಾಭಿಹತಶ್ಚಾಪಿ ವಾನರೇನ್ದ್ರಾತ್ಮಜಸ್ತದಾ ।
ಜಾನುಭ್ಯಾಂ ಪತಿತೋ ಭೂಮೌ ಪುನರೇವೋತ್ಪಪಾತ ಹ ॥೧೮॥

ತಮುತ್ಪತನ್ತಂ ತ್ರಿಶಿರಾಸ್ತ್ರಿಭಿರ್ಬಾಣೈರಜಿಹ್ಮಗೈಃ ।
ಘೋರೈರ್ಹರಿಪತೇಃ ಪುತ್ರಂ ಲಲಾಟೇಽಭಿಜಘಾನ ಹ ॥೧೯॥

ತತೋಽಙ್ಗದಂ ಪರಿಕ್ಷಿಪ್ತಂ ತ್ರಿಭಿರ್ನೈರ್ಋತಪುಂಗವೈಃ ।
ಹನುಮಾನಪಿ ವಿಜ್ಞಾಯ ನೀಲಶ್ಚಾಪಿ ಪ್ರತಸ್ಥತುಃ ॥೨೦॥

ತತಶ್ಚಿಕ್ಷೇಪ ಶೈಲಾಗ್ರಂ ನೀಲಸ್ತ್ರಿಶಿರಸೇ ತದಾ ।
ತದ್ರಾವಣಸುತೋ ಧೀಮಾನ್ಬಿಭೇದ ನಿಶಿತೈಃ ಶರೈಃ ॥೨೧॥

ತದ್ಬಾಣಶತನಿರ್ಭಿನ್ನಂ ವಿದಾರಿತಶಿಲಾತಲಮ್ ।
ಸವಿಸ್ಫುಲಿಙ್ಗಂ ಸಜ್ವಾಲಂ ನಿಪಪಾತ ಗಿರೇಃ ಶಿರಃ ॥೨೨॥

ತತೋ ಜೃಮ್ಭಿತಮಾಲೋಕ್ಯ ಹರ್ಷಾದ್ದೇವಾನ್ತಕಸ್ತದಾ ।
ಪರಿಘೇಣಾಭಿದುದ್ರಾವ ಮಾರುತಾತ್ಮಜಮಾಹವೇ ॥೨೩॥

ತಮಾಪತನ್ತಮುತ್ಪ್ಲುತ್ಯ ಹನುಮಾನ್ಮಾರುತಾತ್ಮಜಃ ।
ಆಜಘಾನ ತದಾ ಮೂರ್ಧ್ನಿ ವಜ್ರಕಲ್ಪೇನ ಮುಷ್ಟಿನಾ ॥೨೪॥

ಶಿರಸಿ ಪ್ರಹರನ್ವೀರಸ್ತದಾ ವಾಯುಸುತೋ ಬಲೀ ।
ನಾದೇನಾಕಮ್ಪಯಚ್ಚೈವ ರಾಕ್ಷಸಾನ್ಸ ಮಹಾಕಪಿಃ ॥೨೫॥

ಸ ಮುಷ್ಟಿನಿಷ್ಪಿಷ್ಟವಿಕೀರ್ಣಮೂರ್ಧಾ
ನಿರ್ವಾನ್ತದನ್ತಾಕ್ಷಿವಿಲಮ್ಬಿಜಿಹ್ವಃ ।
ದೇವಾನ್ತಕೋ ರಾಕ್ಷಸರಾಜಸೂನು-
ರ್ಗತಾಸುರುರ್ವ್ಯಾಂ ಸಹಸಾ ಪಪಾತ ॥೨೬॥

ತಸ್ಮಿನ್ಹತೇ ರಾಕ್ಷಸಯೋಧಮುಖ್ಯೇ
ಮಹಾಬಲೇ ಸಂಯತಿ ದೇವಶತ್ರೌ ।
ಕ್ರುದ್ಧಸ್ತ್ರಿಮೂರ್ಧಾ ನಿಶಿತಾಗ್ರಮುಗ್ರಂ
ವವರ್ಷ ನೀಲೋರಸಿ ಬಾಣವರ್ಷಮ್ ॥೨೭॥

ಮಹೋದರಸ್ತು ಸಂಕ್ರುದ್ಧಃ ಕುಞ್ಜರಂ ಪರ್ವತೋಪಮಮ್ ।
ಭೂಯಃ ಸಮಧಿರುಹ್ಯಾಶು ಮನ್ದರಂ ರಶ್ಮಿವಾನಿವ ॥೨೮॥

ತತೋ ಬಾಣಮಯಂ ವರ್ಷಂ ನೀಲಸ್ಯೋರಸ್ಯಪಾತಯತ್ ।
ಗಿರೌ ವರ್ಷಂ ತಡಿಚ್ಚಕ್ರಚಾಪವಾನಿವ ತೋಯದಃ ॥೨೯॥

ತತಃ ಶರೌಘೈರಭಿವರ್ಷ್ಯಮಾಣೋ
ವಿಭಿನ್ನಗಾತ್ರಃ ಕಪಿಸೈನ್ಯಪಾಲಃ ।
ನೀಲೋ ಬಭೂವಾಥ ವಿಸೃಷ್ಟಗಾತ್ರೋ
ವಿಷ್ಟಮ್ಭಿತಸ್ತೇನ ಮಹಾಬಲೇನ ॥೩೦॥

ತತಸ್ತು ನೀಲಃ ಪ್ರತಿಲಭ್ಯ ಸಂಜ್ಞಾಂ
ಶೈಲಂ ಸಮುತ್ಪಾಟ್ಯ ಸವೃಕ್ಷಷಣ್ಡಮ್ ।

ತತಃ ಸಮುತ್ಪತ್ಯ ಭೃಶೋಗ್ರವೇಗೋ
ಮಹೋದರಂ ತೇನ ಜಘಾನ ಮೂರ್ಧ್ನಿ ॥೩೧॥

ತತಃ ಸ ಶೈಲೇನ್ದ್ರನಿಪಾತಭಗ್ನೋ
ಮಹೋದರಸ್ತೇನ ಮಹಾದ್ವಿಪೇನ ।
ವಿಪೋಥಿತೋ ಭೂಮಿತಲೇ ಗತಾಸುಃ
ಪಪಾತ ವಜ್ರಾಭಿಹತೋ ಯಥಾದ್ರಿಃ ॥೩೨॥

ಪಿತೃವ್ಯಂ ನಿಹತಂ ದೃಷ್ಟ್ವಾ ತ್ರಿಶಿರಾಶ್ಚಾಪಮಾದದೇ ।
ಹನುಮನ್ತಂ ಚ ಸಂಕ್ರುದ್ಧೋ ವಿವ್ಯಾಧ ನಿಶಿತೈಃ ಶರೈಃ ॥೩೩॥

ಸ ವಾಯುಸೂನುಃ ಕುಪಿತಶ್ಚಿಕ್ಷೇಪ ಶಿಖರಂ ಗಿರೇಃ ।
ತ್ರಿಶಿರಾಸ್ತಚ್ಛರೈಸ್ತೀಕ್ಷ್ಣೈರ್ಬಿಭೇದ ಬಹುಧಾ ಬಲೀ ॥೩೪॥

ತದ್ವ್ಯರ್ಥಂ ಶಿಖರಂ ದೃಷ್ಟ್ವಾ ದ್ರುಮವರ್ಷಂ ಮಹಾಕಪಿಃ ।
ವಿಸಸರ್ಜ ರಣೇ ತಸ್ಮಿನ್ರಾವಣಸ್ಯ ಸುತಂ ಪ್ರತಿ ॥೩೫॥

ತಮಾಪತನ್ತಮಾಕಾಶೇ ದ್ರುಮವರ್ಷಂ ಪ್ರತಾಪವಾನ್ ।
ತ್ರಿಶಿರಾ ನಿಶಿತೈರ್ಬಾಣೈಶ್ಚಿಚ್ಛೇದ ಚ ನನಾದ ಚ ॥೩೬॥

ತತೋ ಹನೂಮಾನುತ್ಪ್ಲುತ್ಯ ಹಯಾಂಸ್ತ್ರಿಶಿರಸಸ್ತದಾ ।
ವಿದದಾರ ನಖೈಃ ಕ್ರುದ್ಧೋ ಗಜೇನ್ದ್ರಂ ಮೃಗರಾಡಿವ ॥೩೭॥

ಅಥ ಶಕ್ತಿಂ ಸಮಾದಾಯ ಕಾಲರಾತ್ರಿಮಿವಾನ್ತಕಃ ।
ಚಿಕ್ಷೇಪಾನಿಲಪುತ್ರಾಯ ತ್ರಿಶಿರಾ ರಾವಣಾತ್ಮಜಃ ॥೩೮॥

ದಿವಃ ಕ್ಷಿಪ್ತಾಮಿವೋಲ್ಕಾಂ ತಾಂ ಶಕ್ತಿಂ ಕ್ಷಿಪ್ತಾಮಸಂಗತಾಮ್ ।
ಗೃಹೀತ್ವಾ ಹರಿಶಾರ್ದೂಲೋ ಬಭಞ್ಜ ಚ ನನಾದ ಚ ॥೩೯॥

ತಾಂ ದೃಷ್ಟ್ವಾ ಘೋರಸಂಕಾಶಾಂ ಶಕ್ತಿಂ ಭಗ್ನಾಂ ಹನೂಮತಾ ।
ಪ್ರಹೃಷ್ಟಾ ವಾನರಗಣಾ ವಿನೇದುರ್ಜಲದಾ ಇವ ॥೪೦॥

ತತಃ ಖಡ್ಗಂ ಸಮುದ್ಯಮ್ಯ ತ್ರಿಶಿರಾ ರಾಕ್ಷಸೋತ್ತಮಃ ।
ನಿಜಘಾನ ತದಾ ವ್ಯೂಢೇ ವಾಯುಪುತ್ರಸ್ಯ ವಕ್ಷಸಿ ॥೪೧॥

ಖಡ್ಗಪ್ರಹಾರಾಭಿಹತೋ ಹನೂಮಾನ್ಮಾರುತಾತ್ಮಜಃ ।
ಆಜಘಾನ ತ್ರಿಶಿರಸಂ ತಲೇನೋರಸಿ ವೀರ್ಯವಾನ್ ॥೪೨॥

ಸ ತಲಾಭಿಹತಸ್ತೇನ ಸ್ರಸ್ತಹಸ್ತಾಯುಧೋ ಭುವಿ ।
ನಿಪಪಾತ ಮಹಾತೇಜಾಸ್ತ್ರಿಶಿರಾಸ್ತ್ಯಕ್ತಚೇತನಃ ॥೪೩॥

ಸ ತಸ್ಯ ಪತತಃ ಖಡ್ಗಂ ಸಮಾಚ್ಛಿದ್ಯ ಮಹಾಕಪಿಃ ।
ನನಾದ ಗಿರಿಸಂಕಾಶಸ್ತ್ರಾಸಯನ್ಸರ್ವನೈರ್ಋತಾನ್ ॥೪೪॥

ಅಮೃಷ್ಯಮಾಣಸ್ತಂ ಘೋಷಮುತ್ಪಪಾತ ನಿಶಾಚರಃ ।
ಉತ್ಪತ್ಯ ಚ ಹನೂಮನ್ತಂ ತಾಡಯಾಮಾಸ ಮುಷ್ಟಿನಾ ॥೪೫॥

ತೇನ ಮುಷ್ಟಿಪ್ರಹಾರೇಣ ಸಂಚುಕೋಪ ಮಹಾಕಪಿಃ ।
ಕುಪಿತಶ್ಚ ನಿಜಗ್ರಾಹ ಕಿರೀಟೇ ರಾಕ್ಷಸರ್ಷಭಮ್ ॥೪೬॥

ಸ ತಸ್ಯ ಶೀರ್ಷಾಣ್ಯಸಿನಾ ಶಿತೇನ
ಕಿರೀಟಜುಷ್ಟಾನಿ ಸಕುಣ್ಡಲಾನಿ ।
ಕ್ರುದ್ಧಃ ಪ್ರಚಿಚ್ಛೇದ ಸುತೋಽನಿಲಸ್ಯ
ತ್ವಷ್ಟುಃ ಸುತಸ್ಯೇವ ಶಿರಾಂಸಿ ಶಕ್ರಃ ॥೪೭॥

ತಾನ್ಯಾಯತಾಕ್ಷಾಣ್ಯಗಸಂನಿಭಾನಿ
ಪ್ರದೀಪ್ತವೈಶ್ವಾನರಲೋಚನಾನಿ ।
ಪೇತುಃ ಶಿರಾಂಸೀನ್ದ್ರರಿಪೋರ್ಧರಣ್ಯಾಂ
ಜ್ಯೋತೀಂಷಿ ಮುಕ್ತಾನಿ ಯಥಾರ್ಕಮಾರ್ಗಾತ್ ॥೪೮॥

ತಸ್ಮಿನ್ಹತೇ ದೇವರಿಪೌ ತ್ರಿಶೀರ್ಷೇ
ಹನೂಮತಾ ಶಕ್ರಪರಾಕ್ರಮೇಣ ।
ನೇದುಃ ಪ್ಲವಂಗಾಃ ಪ್ರಚಚಾಲ ಭೂಮೀ
ರಕ್ಷಾಂಸ್ಯಥೋ ದುದ್ರುವಿರೇ ಸಮನ್ತಾತ್ ॥೪೯॥

ಹತಂ ತ್ರಿಶಿರಸಂ ದೃಷ್ಟ್ವಾ ತಥೈವ ಚ ಮಹೋದರಮ್ ।
ಹತೌ ಪ್ರೇಕ್ಷ್ಯ ದುರಾಧರ್ಷೌ ದೇವಾನ್ತಕನರಾನ್ತಕೌ ॥೫೦॥

ಚುಕೋಪ ಪರಮಾಮರ್ಷೀ
ಮತ್ತೋ ರಾಕ್ಷಸಪುಂಗವಃ ।
ಜಗ್ರಾಹಾರ್ಚಿಷ್ಮತೀಂ ಘೋರಾಂ
ಗದಾಂ ಸರ್ವಾಯಸೀಂ ಶುಭಾಮ್ ॥೫೧॥

ಹೇಮಪಟ್ಟಪರಿಕ್ಷಿಪ್ತಾಂ ಮಾಂಸಶೋಣಿತಫೇನಿಲಾಮ್ ।
ವಿರಾಜಮಾನಾಂ ವಪುಷಾ ಶತ್ರುಶೋಣಿತರಞ್ಜಿತಾಮ್ ॥೫೨॥

ತೇಜಸಾ ಸಂಪ್ರದೀಪ್ತಾಗ್ರಾಂ ರಕ್ತಮಾಲ್ಯವಿಭೂಷಿತಾಮ್ ।
ಐರಾವತಮಹಾಪದ್ಮಸಾರ್ವಭೌಮಭಯಾವಹಾಮ್ ॥೫೩॥

ಗದಾಮಾದಾಯ ಸಂಕ್ರುದ್ಧೋ ಮತ್ತೋ ರಾಕ್ಷಸಪುಂಗವಃ ।
ಹರೀನ್ಸಮಭಿದುದ್ರಾವ ಯುಗಾನ್ತಾಗ್ನಿರಿವ ಜ್ವಲನ್ ॥೫೪॥

ಅಥರ್ಷಭಃ ಸಮುತ್ಪತ್ಯ ವಾನರೋ ರಾವಣಾನುಜಮ್ ।
ಮತ್ತಾನೀಕಮುಪಾಗಮ್ಯ ತಸ್ಥೌ ತಸ್ಯಾಗ್ರತೋ ಬಲೀ ॥೫೫॥

ತಂ ಪುರಸ್ತಾತ್ಸ್ಥಿತಂ ದೃಷ್ಟ್ವಾ ವಾನರಂ ಪರ್ವತೋಪಮಮ್ ।
ಆಜಘಾನೋರಸಿ ಕ್ರುದ್ಧೋ ಗದಯಾ ವಜ್ರಕಲ್ಪಯಾ ॥೫೬॥

ಸ ತಯಾಭಿಹತಸ್ತೇನ ಗದಯಾ ವಾನರರ್ಷಭಃ ।
ಭಿನ್ನವಕ್ಷಾಃ ಸಮಾಧೂತಃ ಸುಸ್ರಾವ ರುಧಿರಂ ಬಹು ॥೫೭॥

ಸ ಸಂಪ್ರಾಪ್ಯ ಚಿರಾತ್ಸಂಜ್ಞಾಮೃಷಭೋ ವಾನರರ್ಷಭಃ ।
ಕ್ರುದ್ಧೋ ವಿಸ್ಫುರಮಾಣೌಷ್ಠೋ ಮಹಾಪಾರ್ಶ್ವಮುದೈಕ್ಷತ ॥೫೮॥

ಸ ವೇಗವಾನ್ವೇಗವದಭ್ಯುಪೇತ್ಯ
ತಂ ರಾಕ್ಷಸಂ ವಾನರವೀರಮುಖ್ಯಃ ।
ಸಂವರ್ತ್ಯ ಮುಷ್ಟಿಂ ಸಹಸಾ ಜಘಾನ
ಬಾಹ್ವನ್ತರೇ ಶೈಲನಿಕಾಶರೂಪಃ ॥೫೯॥

ಸ ಕೃತ್ತಮೂಲಃ ಸಹಸೇವ ವೃಕ್ಷಃ
ಕ್ಷಿತೌ ಪಪಾತ ಕ್ಷತಜೋಕ್ಷಿತಾಙ್ಗಃ ।

ತಾಂ ಚಾಸ್ಯ ಘೋರಾಂ ಯಮದಣ್ಡಕಲ್ಪಾಂ
ಗದಾಂ ಪ್ರಗೃಹ್ಯಾಶು ತದಾ ನನಾದ ॥೬೦॥

ಮುಹೂರ್ತಮಾಸೀತ್ಸ ಗತಾಸುಕಲ್ಪಃ
ಪ್ರತ್ಯಾಗತಾತ್ಮಾ ಸಹಸಾ ಸುರಾರಿಃ ।
ಉತ್ಪತ್ಯ ಸಂಧ್ಯಾಭ್ರಸಮಾನವರ್ಣ-
ಸ್ತಂ ವಾರಿರಾಜಾತ್ಮಜಮಾಜಘಾನ ॥೬೧॥

ಸ ಮೂರ್ಛಿತೋ ಭೂಮಿತಲೇ ಪಪಾತ
ಮುಹೂರ್ತಮುತ್ಪತ್ಯ ಪುನಃ ಸಸಂಜ್ಞಃ ।
ತಾಮೇವ ತಸ್ಯಾದ್ರಿವರಾದ್ರಿಕಲ್ಪಾಂ
ಗದಾಂ ಸಮಾವಿಧ್ಯ ಜಘಾನ ಸಂಖ್ಯೇ ॥೬೨॥

ಸಾ ತಸ್ಯ ರೌದ್ರಾ ಸಮುಪೇತ್ಯ ದೇಹಂ
ರೌದ್ರಸ್ಯ ದೇವಾಧ್ವರವಿಪ್ರಶತ್ರೋಃ ।
ಬಿಭೇದ ವಕ್ಷಃ ಕ್ಷತಜಂ ಚ ಭೂರಿ
ಸುಸ್ರಾವ ಧಾತ್ವಮ್ಬು ಇವಾದ್ರಿರಾಜಃ ॥೬೩॥

ಅಭಿದುದ್ರಾವ ವೇಗೇನ ಗದಾಂ ತಸ್ಯ ಮಹಾತ್ಮನಃ ।
ತಾಂ ಗೃಹೀತ್ವಾ ಗದಾಂ ಭೀಮಾಮಾವಿಧ್ಯ ಚ ಪುನಃ ಪುನಃ ।
ಮತ್ತಾನೀಕಂ ಮಹಾತ್ಮಾ ಸ ಜಘಾನ ರಣಮೂರ್ಧನಿ ॥೬೪॥

ಸ ಸ್ವಯಾ ಗದಯಾ ಭಗ್ನೋ ವಿಶೀರ್ಣದಶನೇಕ್ಷಣಃ ।
ನಿಪಪಾತ ತದಾ ಮತ್ತೋ ವಜ್ರಾಹತ ಇವಾಚಲಃ ॥೬೫॥

ವಿಶೀರ್ಣನಯನೇ ಭೂಮೌ ಗತಸತ್ತ್ವೇ ಗತಾಯುಷಿ ।
ಪತಿತೇ ರಾಕ್ಷಸೇ ತಸ್ಮಿನ್ವಿದ್ರುತಂ ರಕ್ಷಸಾಂ ಬಲಮ್ ॥೬೬॥

ತಸ್ಮಿನ್ಹತೇ ಭ್ರಾತರಿ ರಾವಣಸ್ಯ
ತನ್ನೈರ್ಋತಾನಾಂ ಬಲಮರ್ಣವಾಭಮ್ ।

ತ್ಯಕ್ತಾಯುಧಂ ಕೇವಲಜೀವಿತಾರ್ಥಂ
ದುದ್ರಾವ ಭಿನ್ನಾರ್ಣವಸಂನಿಕಾಶಮ್ ॥೯೭॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಸಪ್ತತಿತಮಃ ಸರ್ಗಃ

ಏಕಸಪ್ತತಿತಮಃ ಸರ್ಗಃ

ಸ್ವಬಲಂ ವ್ಯಥಿತಂ ದೃಷ್ಟ್ವಾ ತುಮುಲಂ ರೋಮಹರ್ಷಣಮ್ ।
ಭ್ರಾತೄಂಶ್ಚ ನಿಹತಾನ್ದೃಷ್ಟ್ವಾ ಶಕ್ರತುಲ್ಯಪರಾಕ್ರಮಾನ್ ॥೧॥

ಪಿತೃವ್ಯೌ ಚಾಪಿ ಸಂದೃಶ್ಯ ಸಮರೇ ಸಂನಿಷೂದಿತೌ ।
ಯುದ್ಧೋನ್ಮತ್ತಂ ಚ ಮತ್ತಂ ಚ ಭ್ರಾತರೌ ರಾಕ್ಷಸರ್ಷಭೌ ॥೨॥

ಚುಕೋಪ ಚ ಮಹಾತೇಜಾ ಬ್ರಹ್ಮದತ್ತವರೋ ಯುಧಿ ।
ಅತಿಕಾಯೋಽದ್ರಿಸಂಕಾಶೋ ದೇವದಾನವದರ್ಪಹಾ ॥೩॥

ಸ ಭಾಸ್ಕರಸಹಸ್ರಸ್ಯ ಸಂಘಾತಮಿವ ಭಾಸ್ವರಮ್ ।
ರಥಮಾಸ್ಥಾಯ ಶಕ್ರಾರಿರಭಿದುದ್ರಾವ ವಾನರಾನ್ ॥೪॥

ಸ ವಿಸ್ಫಾರ್ಯ ಮಹಚ್ಚಾಪಂ ಕಿರೀಟೀ ಮೃಷ್ಟಕುಣ್ಡಲಃ ।
ನಾಮ ವಿಶ್ರಾವಯಾಮಾಸ ನನಾದ ಚ ಮಹಾಸ್ವನಮ್ ॥೫॥

ತೇನ ಸಿಂಹಪ್ರಣಾದೇನ ನಾಮವಿಶ್ರಾವಣೇನ ಚ ।
ಜ್ಯಾಶಬ್ದೇನ ಚ ಭೀಮೇನ ತ್ರಾಸಯಾಮಾಸ ವಾನರಾನ್ ॥೬॥

ತೇ ದೃಷ್ಟ್ವಾ ದೇಹಮಾಹಾತ್ಮ್ಯಂ
ಕುಮ್ಭಕರ್ಣೋಽಯಮುತ್ಥಿತಃ ।
ಭಯಾರ್ತಾ ವಾನರಾಃ ಸರ್ವೇ
ಸಂಶ್ರಯನ್ತೇ ಪರಸ್ಪರಮ್ ॥೭॥

ತೇ ತಸ್ಯ ರೂಪಮಾಲೋಕ್ಯ ಯಥಾ ವಿಷ್ಣೋಸ್ತ್ರಿವಿಕ್ರಮೇ ।
ಭಯಾದ್ವಾನರಯೂಥಾಸ್ತೇ ವಿದ್ರವನ್ತಿ ತತಸ್ತತಃ ॥೮॥

ತೇಽತಿಕಾಯಂ ಸಮಾಸಾದ್ಯ ವಾನರಾ ಮೂಢಚೇತಸಃ ।
ಶರಣ್ಯಂ ಶರಣಂ ಜಗ್ಮುರ್ಲಕ್ಷ್ಮಣಾಗ್ರಜಮಾಹವೇ ॥೯॥

ತತೋಽತಿಕಾಯಂ ಕಾಕುತ್ಸ್ಥೋ ರಥಸ್ಥಂ ಪರ್ವತೋಪಮಮ್ ।
ದದರ್ಶ ಧನ್ವಿನಂ ದೂರಾದ್ಗರ್ಜನ್ತಂ ಕಾಲಮೇಘವತ್ ॥೧೦॥

ಸ ತಂ ದೃಷ್ಟ್ವಾ ಮಹಾತ್ಮಾನಂ ರಾಘವಸ್ತು ವಿಸಿಷ್ಮಿಯೇ ।
ವಾನರಾನ್ಸಾನ್ತ್ವಯಿತ್ವಾಥ ವಿಭೀಷಣಮುವಾಚ ಹ ॥೧೧॥

ಕೋಽಸೌ ಪರ್ವತಸಂಕಾಶೋ ಧನುಷ್ಮಾನ್ಹರಿಲೋಚನಃ ।
ಯುಕ್ತೇ ಹಯಸಹಸ್ರೇಣ ವಿಶಾಲೇ ಸ್ಯನ್ದನೇ ಸ್ಥಿತಃ ॥೧೨॥

ಯ ಏಷ ನಿಶಿತೈಃ ಶೂಲೈಃ ಸುತೀಕ್ಷ್ಣೈಃ ಪ್ರಾಸತೋಮರೈಃ ।
ಅರ್ಚಿಷ್ಮದ್ಭಿರ್ವೃತೋ ಭಾತಿ ಭೂತೈರಿವ ಮಹೇಶ್ವರಃ ॥೧೩॥

ಕಾಲಜಿಹ್ವಾಪ್ರಕಾಶಾಭಿರ್ಯ ಏಷೋಽತಿವಿರಾಜತೇ ।
ಆವೃತೋ ರಥಶಕ್ತೀಭಿರ್ವಿದ್ಯುದ್ಭಿರಿವ ತೋಯದಃ ॥೧೪॥

ಧನೂಂಷಿ ಚಾಸ್ಯ ಸಜ್ಯಾನಿ ಹೇಮಪೃಷ್ಠಾನಿ ಸರ್ವಶಃ ।
ಶೋಭಯನ್ತಿ ರಥಶ್ರೇಷ್ಠಂ ಶಕ್ರಚಾಪ ಇವಾಮ್ಬರಮ್ ॥೧೫॥

ಕ ಏಷ ರಕ್ಷಃ ಶಾರ್ದೂಲೋ ರಣಭೂಮಿಂ ವಿರಾಜಯನ್ ।
ಅಭ್ಯೇತಿ ರಥಿನಾಂ ಶ್ರೇಷ್ಠೋ ರಥೇನಾದಿತ್ಯತೇಜಸಾ ॥೧೬॥

ಧ್ವಜಶೃಙ್ಗಪ್ರತಿಷ್ಠೇನ ರಾಹುಣಾಭಿವಿರಾಜತೇ ।
ಸೂರ್ಯರಶ್ಮಿನಿಭೈರ್ಬಾಣೈರ್ದಿಶೋ ದಶ ವಿರಾಜಯನ್ ॥೧೭॥

ತ್ರಿಣತಂ ಮೇಘನಿರ್ಹ್ರಾದಂ ಹೇಮಪೃಷ್ಠಮಲಂಕೃತಮ್ ।
ಶತಕ್ರತುಧನುಃಪ್ರಖ್ಯಂ ಧನುಶ್ಚಾಸ್ಯ ವಿರಾಜತೇ ॥೧೮॥

ಸಧ್ವಜಃ ಸಪತಾಕಶ್ಚ ಸಾನುಕರ್ಷೋ ಮಹಾರಥಃ ।
ಚತುಃಸಾದಿಸಮಾಯುಕ್ತೋ ಮೇಘಸ್ತನಿತನಿಃಸ್ವನಃ ॥೧೯॥

ವಿಂಶತಿರ್ದಶ ಚಾಷ್ಟೌ ಚ ತೂರ್ಣೋಽಸ್ಯ ರಥಮಾಸ್ಥಿತಾಃ ।
ಕಾರ್ಮುಕಾನಿ ಚ ಭೀಮಾನಿ ಜ್ಯಾಶ್ಚ ಕಾಞ್ಚನಪಿಙ್ಗಲಾಃ ॥೨೦॥

ದ್ವೌ ಚ ಖಡ್ಗೌ ರಥಗತೌ ಪಾರ್ಶ್ವಸ್ಥೌ ಪಾರ್ಶ್ವಶೋಭಿತೌ ।
ಚತುರ್ಹಸ್ತತ್ಸರುಯುತೌ ವ್ಯಕ್ತಹಸ್ತದಶಾಯತೌ ॥೨೧॥

ರಕ್ತಕಣ್ಠಗುಣೋ ಧೀರೋ ಮಹಾಪರ್ವತಸಂನಿಭಃ ।
ಕಾಲಃ ಕಾಲಮಹಾವಕ್ತ್ರೋ ಮೇಘಸ್ಥ ಇವ ಭಾಸ್ಕರಃ ॥೨೨॥

ಕಾಞ್ಚನಾಙ್ಗದನದ್ಧಾಭ್ಯಾಂ ಭುಜಾಭ್ಯಾಮೇಷ ಶೋಭತೇ ।
ಶೃಙ್ಗಾಭ್ಯಾಮಿವ ತುಙ್ಗಾಭ್ಯಾಂ ಹಿಮವಾನ್ಪರ್ವತೋತ್ತಮಃ ॥೨೩॥

ಕುಣ್ಡಲಾಭ್ಯಾಂ ತು ಯಸ್ಯೈತದ್ಭಾತಿ ವಕ್ತ್ರಂ ಶುಭೇಕ್ಷಣಮ್ ।
ಪುನರ್ವಸ್ವನ್ತರಗತಂ ಪೂರ್ಣಂ ಬಿಮ್ಬಮಿವೈನ್ದವಮ್ ॥೨೪॥

ಆಚಕ್ಷ್ವ ಮೇ ಮಹಾಬಾಹೋ ತ್ವಮೇನಂ ರಾಕ್ಷಸೋತ್ತಮಮ್ ।
ಯಂ ದೃಷ್ಟ್ವಾ ವಾನರಾಃ ಸರ್ವೇ ಭಯಾರ್ತಾ ವಿದ್ರುತಾ ದಿಶಃ ॥೨೫॥

ಸ ಪೃಷ್ಟೋ ರಾಜಪುತ್ರೇಣ ರಾಮೇಣಾಮಿತತೇಜಸಾ ।
ಆಚಚಕ್ಷೇ ಮಹಾತೇಜಾ ರಾಘವಸ್ಯ ವಿಭೀಷಣಃ ॥೨೬॥

ದಶಗ್ರೀವೋ ಮಹಾತೇಜಾ ರಾಜಾ ವೈಶ್ರವಣಾನುಜಃ ।
ಭೀಮಕರ್ಮಾ ಮಹೋತ್ಸಾಹೋ ರಾವಣೋ ರಾಕ್ಷಸಾಧಿಪಃ ॥೨೭॥

ತಸ್ಯಾಸೀದ್ವೀರ್ಯವಾನ್ಪುತ್ರೋ ರಾವಣಪ್ರತಿಮೋ ರಣೇ ।
ವೃದ್ಧಸೇವೀ ಶ್ರುತಿಧರಃ ಸರ್ವಾಸ್ತ್ರವಿದುಷಾಂ ವರಃ ॥೨೮॥

ಅಶ್ವಪೃಷ್ಠೇ ರಥೇ ನಾಗೇ ಖಡ್ಗೇ ಧನುಷಿ ಕರ್ಷಣೇ ।
ಭೇದೇ ಸಾನ್ತ್ವೇ ಚ ದಾನೇ ಚ ನಯೇ ಮನ್ತ್ರೇ ಚ ಸಂಮತಃ ॥೨೯॥

ಯಸ್ಯ ಬಾಹೂ ಸಮಾಶ್ರಿತ್ಯ ಲಙ್ಕಾ ವಸತಿ ನಿರ್ಭಯಾ ।
ತನಯಂ ಧಾನ್ಯಮಾಲಿನ್ಯಾ ಅತಿಕಾಯಮಿಮಂ ವಿದುಃ ॥೩೦॥

ಏತೇನಾರಾಧಿತೋ ಬ್ರಹ್ಮಾ ತಪಸಾ ಭಾವಿತಾತ್ಮನಾ ।
ಅಸ್ತ್ರಾಣಿ ಚಾಪ್ಯವಾಪ್ತಾನಿ ರಿಪವಶ್ಚ ಪರಾಜಿತಾಃ ॥೩೧॥

ಸುರಾಸುರೈರವಧ್ಯತ್ವಂ ದತ್ತಮಸ್ಮೈ ಸ್ವಯಂಭುವಾ ।
ಏತಚ್ಚ ಕವಚಂ ದಿವ್ಯಂ ರಥಶ್ಚೈಷೋಽರ್ಕಭಾಸ್ವರಃ ॥೩೨॥

ಏತೇನ ಶತಶೋ ದೇವಾ ದಾನವಾಶ್ಚ ಪರಾಜಿತಾಃ ।
ರಕ್ಷಿತಾನಿ ಚ ರಕ್ಷಾಂಸಿ ಯಕ್ಷಾಶ್ಚಾಪಿ ನಿಷೂದಿತಾಃ ॥೩೩॥

ವಜ್ರಂ ವಿಷ್ಟಮ್ಭಿತಂ ಯೇನ ಬಾಣೈರಿನ್ದ್ರಸ್ಯ ಧೀಮತಃ ।
ಪಾಶಃ ಸಲಿಲರಾಜಸ್ಯ ರಣೇ ಪ್ರತಿಹತಸ್ತಥಾ ॥೩೪॥

ಏಷೋಽತಿಕಾಯೋ ಬಲವಾನ್ರಾಕ್ಷಸಾನಾಮಥರ್ಷಭಃ ।
ರಾವಣಸ್ಯ ಸುತೋ ಧೀಮಾನ್ದೇವದಾನವದರ್ಪಹಾ ॥೩೫॥

ತದಸ್ಮಿನ್ ಯತಾಂ ಯತ್ನಃ ಕ್ಷಿಪ್ರಂ ಪುರುಷಪುಂಗವ ।
ಪುರಾ ವಾನರಸೈನ್ಯಾನಿ ಕ್ಷಯಂ ನಯತಿ ಸಾಯಕೈಃ ॥೩೬॥

ತತೋಽತಿಕಾಯೋ ಬಲವಾನ್ಪ್ರವಿಶ್ಯ ಹರಿವಾಹಿನೀಮ್ ।
ವಿಸ್ಫಾರಯಾಮಾಸ ಧನುರ್ನನಾದ ಚ ಪುನಃ ಪುನಃ ॥೩೭॥

ತಂ ಭೀಮವಪುಷಂ ದೃಷ್ಟ್ವಾ ರಥಸ್ಥಂ ರಥಿನಾಂ ವರಮ್ ।
ಅಭಿಪೇತುರ್ಮಹಾತ್ಮಾನೋ ಯೇ ಪ್ರಧಾನಾ ವನೌಕಸಃ ॥೩೮॥

ಕುಮುದೋ ದ್ವಿವಿದೋ ಮೈನ್ದೋ ನೀಲಃ ಶರಭ ಏವ ಚ ।
ಪಾದಪೈರ್ಗಿರಿಶೃಙ್ಗೈಶ್ಚ ಯುಗಪತ್ಸಮಭಿದ್ರವನ್ ॥೩೯॥

ತೇಷಾಂ ವೃಕ್ಷಾಂಶ್ಚ ಶೈಲಾಂಶ್ಚ ಶರೈಃ ಕಾಞ್ಚನಭೂಷಣೈಃ ।
ಅತಿಕಾಯೋ ಮಹಾತೇಜಾಶ್ಚಿಚ್ಛೇದಾಸ್ತ್ರವಿದಾಂ ವರಃ ॥೪೦॥

ತಾಂಶ್ಚೈವ ಸರ್ವಾನ್ಸ ಹರೀನ್ ಶರೈಃ ಸರ್ವಾಯಸೈರ್ಬಲೀ ।
ವಿವ್ಯಾಧಾಭಿಮುಖಃ ಸಂಖ್ಯೇ ಭೀಮಕಾಯೋ ನಿಶಾಚರಃ ॥೪೧॥

ತೇಽರ್ದಿತಾ ಬಾಣವರ್ಷೇಣ ಭಗ್ನಗಾತ್ರಾಃ ಪ್ಲವಂಗಮಾಃ ।
ನ ಶೇಕುರತಿಕಾಯಸ್ಯ ಪ್ರತಿಕರ್ತುಂ ಮಹಾರಣೇ ॥೪೨॥

ತತ್ಸೈನ್ಯಂ ಹರಿವೀರಾಣಾಂ ತ್ರಾಸಯಾಮಾಸ ರಾಕ್ಷಸಃ ।
ಮೃಗಯೂಥಮಿವ ಕ್ರುದ್ಧೋ ಹರಿರ್ಯೌವನದರ್ಪಿತಃ ॥೪೩॥

ಸ ರಾಕ್ಷಸೇನ್ದ್ರೋ ಹರಿಸೈನ್ಯಮಧ್ಯೇ
ನಾಯುಧ್ಯಮಾನಂ ನಿಜಘಾನ ಕಂಚಿತ್ ।
ಉಪೇತ್ಯ ರಾಮಂ ಸಧನುಃ ಕಲಾಪೀ
ಸಗರ್ವಿತಂ ವಾಕ್ಯಮಿದಂ ಬಭಾಷೇ ॥೪೪॥

ರಥೇ ಸ್ಥಿತೋಽಹಂ ಶರಚಾಪಪಾಣಿ-
ರ್ನ ಪ್ರಾಕೃತಂ ಕಂಚನ ಯೋಧಯಾಮಿ ।
ಯಸ್ಯಾಸ್ತಿ ಕಶ್ಚಿದ್ವ್ಯವಸಾಯಯುಕ್ತೋ
ದದಾತು ಮೇ ಕ್ಷಿಪ್ರಮಿಹಾದ್ಯ ಯುದ್ಧಮ್ ॥೪೫॥

ತತ್ತಸ್ಯ ವಾಕ್ಯಂ ಬ್ರುವತೋ ನಿಶಮ್ಯ
ಚುಕೋಪ ಸೌಮಿತ್ರಿರಮಿತ್ರಹನ್ತಾ ।
ಅಮೃಷ್ಯಮಾಣಶ್ಚ ಸಮುತ್ಪಪಾತ
ಜಗ್ರಾಹ ಚಾಪಂ ಚ ತತಃ ಸ್ಮಯಿತ್ವಾ ॥೪೬॥

ಕ್ರುದ್ಧಃ ಸೌಮಿತ್ರಿರುತ್ಪತ್ಯ ತೂಣಾದಾಕ್ಷಿಪ್ಯ ಸಾಯಕಮ್ ।
ಪುರಸ್ತಾದತಿಕಾಯಸ್ಯ ವಿಚಕರ್ಷ ಮಹದ್ಧನುಃ ॥೪೭॥

ಪೂರಯನ್ಸ ಮಹೀಂ ಶೈಲಾನಾಕಾಶಂ ಸಾಗರಂ ದಿಶಃ ।
ಜ್ಯಾಶಬ್ದೋ ಲಕ್ಷ್ಮಣಸ್ಯೋಗ್ರಸ್ತ್ರಾಸಯನ್ರಜನೀಚರಾನ್ ॥೪೮॥

ಸೌಮಿತ್ರೇಶ್ಚಾಪನಿರ್ಘೋಷಂ ಶ್ರುತ್ವಾ ಪ್ರತಿಭಯಂ ತದಾ ।
ವಿಸಿಷ್ಮಿಯೇ ಮಹಾತೇಜಾ ರಾಕ್ಷಸೇನ್ದ್ರಾತ್ಮಜೋ ಬಲೀ ॥೪೯॥

ಅಥಾತಿಕಾಯಃ ಕುಪಿತೋ ದೃಷ್ಟ್ವಾ ಲಕ್ಷ್ಮಣಮುತ್ಥಿತಮ್ ।
ಆದಾಯ ನಿಶಿತಂ ಬಾಣಮಿದಂ ವಚನಮಬ್ರವೀತ್ ॥೫೦॥

ಬಾಲಸ್ತ್ವಮಸಿ ಸೌಮಿತ್ರೇ ವಿಕ್ರಮೇಷ್ವವಿಚಕ್ಷಣಃ ।
ಗಚ್ಛ ಕಿಂ ಕಾಲಸದೃಶಂ ಮಾಂ ಯೋಧಯಿತುಮಿಚ್ಛಸಿ ॥೫೧॥

ನ ಹಿ ಮದ್ಬಾಹುಸೃಷ್ಟಾನಾಮಸ್ತ್ರಾಣಾಂ ಹಿಮವಾನಪಿ ।
ಸೋಢುಮುತ್ಸಹತೇ ವೇಗಮನ್ತರಿಕ್ಷಮಥೋ ಮಹೀ ॥೫೨॥

ಸುಖಪ್ರಸುಪ್ತಂ ಕಾಲಾಗ್ನಿಂ ನಿಬೋಧಯಿತುಮಿಚ್ಛಸಿ ।
ನ್ಯಸ್ಯ ಚಾಪಂ ನಿವರ್ತಸ್ವ ಮಾ ಪ್ರಾಣಾಞ್ಜಹಿ ಮದ್ಗತಃ ॥೫೩॥

ಅಥ ವಾ ತ್ವಂ ಪ್ರತಿಷ್ಟಬ್ಧೋ ನ ನಿವರ್ತಿತುಮಿಚ್ಛಸಿ ।
ತಿಷ್ಠ ಪ್ರಾಣಾನ್ಪರಿತ್ಯಜ್ಯ ಗಮಿಷ್ಯಸಿ ಯಮಕ್ಷಯಮ್ ॥೫೪॥

ಪಶ್ಯ ಮೇ ನಿಶಿತಾನ್ಬಾಣಾನರಿದರ್ಪನಿಷೂದನಾನ್ ।
ಈಶ್ವರಾಯುಧಸಂಕಾಶಾಂಸ್ತಪ್ತಕಾಞ್ಚನಭೂಷಣಾನ್ ॥೫೫॥

ಏಷ ತೇ ಸರ್ಪಸಂಕಾಶೋ ಬಾಣಃ ಪಾಸ್ಯತಿ ಶೋಣಿತಮ್ ।
ಮೃಗರಾಜ ಇವ ಕ್ರುದ್ಧೋ ನಾಗರಾಜಸ್ಯ ಶೋಣಿತಮ್ ।
ಇತ್ಯೇವಮುಕ್ತ್ವಾ ಸಂಕ್ರುದ್ಧಃ ಶರಂ ಧನುಷಿ ಸಂದಧೇ ॥೫೬॥

ಶ್ರುತ್ವಾತಿಕಾಯಸ್ಯ ವಚಃ ಸರೋಷಂ
ಸಗರ್ವಿತಂ ಸಂಯತಿ ರಾಜಪುತ್ರಃ ।
ಸ ಸಂಚುಕೋಪಾತಿಬಲೋ ಬೃಹಚ್ಛ್ರೀ-
ರುವಾಚ ವಾಕ್ಯಂ ಚ ತತೋ ಮಹಾರ್ಥಮ್ ॥೫೭॥

ನ ವಾಕ್ಯಮಾತ್ರೇಣ ಭವಾನ್ಪ್ರಧಾನೋ
ನ ಕತ್ಥನಾತ್ಸತ್ಪುರುಷಾ ಭವನ್ತಿ ।
ಮಯಿ ಸ್ಥಿತೇ ಧನ್ವಿನಿ ಬಾಣಪಾಣೌ
ನಿದರ್ಶಯ ಸ್ವಾತ್ಮಬಲಂ ದುರಾತ್ಮನ್ ॥೫೮॥

ಕರ್ಮಣಾ ಸೂಚಯಾತ್ಮಾನಂ ನ ವಿಕತ್ಥಿತುಮರ್ಹಸಿ ।
ಪೌರುಷೇಣ ತು ಯೋ ಯುಕ್ತಃ ಸ ತು ಶೂರ ಇತಿ ಸ್ಮೃತಃ ॥೫೯॥

ಸರ್ವಾಯುಧಸಮಾಯುಕ್ತೋ ಧನ್ವೀ ತ್ವಂ ರಥಮಾಸ್ಥಿತಃ ।
ಶರೈರ್ವಾ ಯದಿ ವಾಪ್ಯಸ್ತ್ರೈರ್ದರ್ಶಯಸ್ವ ಪರಾಕ್ರಮಮ್ ॥೬೦॥

ತತಃ ಶಿರಸ್ತೇ ನಿಶಿತೈಃ ಪಾತಯಿಷ್ಯಾಮ್ಯಹಂ ಶರೈಃ ।
ಮಾರುತಃ ಕಾಲಸಂಪಕ್ವಂ ವೃನ್ತಾತ್ತಾಲಫಲಂ ಯಥಾ ॥೬೧॥

ಅದ್ಯ ತೇ ಮಾಮಕಾ ಬಾಣಾಸ್ತಪ್ತಕಾಞ್ಚನಭೂಷಣಾಃ ।
ಪಾಸ್ಯನ್ತಿ ರುಧಿರಂ ಗಾತ್ರಾದ್ಬಾಣಶಲ್ಯಾನ್ತರೋತ್ಥಿತಮ್ ॥೬೨॥

ಬಾಲೋಽಯಮಿತಿ ವಿಜ್ಞಾಯ
ನ ಮಾವಜ್ಞಾತುಮರ್ಹಸಿ ।
ಬಾಲೋ ವಾ ಯದಿ ವಾ ವೃದ್ಧೋ
ಮೃತ್ಯುಂ ಜಾನೀಹಿ ಸಂಯುಗೇ ॥೬೩॥

ಬಾಲೇನ ವಿಷ್ಣುನಾ ಲೋಕಾಸ್ತ್ರಯಃ ಕ್ರಾನ್ತಾಸ್ತ್ರಿಭಿಃ ಕ್ರಮೈಃ ।
ಲಕ್ಷ್ಮಣಸ್ಯ ವಚಃ ಶ್ರುತ್ವಾ ಹೇತುಮತ್ಪರಮಾರ್ಥವತ್ ।
ಅತಿಕಾಯಃ ಪ್ರಚುಕ್ರೋಧ ಬಾಣಂ ಚೋತ್ತಮಮಾದದೇ ॥೬೪॥
ತತೋ ವಿದ್ಯಾಧರಾ ಭೂತಾ ದೇವಾ ದೈತ್ಯಾ ಮಹರ್ಷಯಃ ।
ಗುಹ್ಯಕಾಶ್ಚ ಮಹಾತ್ಮಾನಸ್ತದ್ಯುದ್ಧಂ ದ್ರಷ್ಟುಮಾಗಮನ್ ॥೬೫॥

ತತೋಽತಿಕಾಯಃ ಕುಪಿತಶ್ಚಾಪಮಾರೋಪ್ಯ ಸಾಯಕಮ್ ।
ಲಕ್ಷ್ಮಣಾಯ ಪ್ರಚಿಕ್ಷೇಪ ಸಂಕ್ಷಿಪನ್ನಿವ ಚಾಮ್ಬರಮ್ ॥೬೬॥

ತಮಾಪತನ್ತಂ ನಿಶಿತಂ ಶರಮಾಶೀವಿಷೋಪಮಮ್ ।
ಅರ್ಧಚನ್ದ್ರೇಣ ಚಿಚ್ಛೇದ ಲಕ್ಷ್ಮಣಃ ಪರವೀರಹಾ ॥೬೭॥

ತಂ ನಿಕೃತ್ತಂ ಶರಂ ದೃಷ್ಟ್ವಾ ಕೃತ್ತಭೋಗಮಿವೋರಗಮ್ ।
ಅತಿಕಾಯೋ ಭೃಶಂ ಕ್ರುದ್ಧಃ ಪಞ್ಚ ಬಾಣಾನ್ಸಮಾದದೇ ॥೬೮॥

ತಾನ್ ಶರಾನ್ಸಂಪ್ರಚಿಕ್ಷೇಪ ಲಕ್ಷ್ಮಣಾಯ ನಿಶಾಚರಃ ।
ತಾನಪ್ರಾಪ್ತಾನ್ ಶರೈಸ್ತೀಕ್ಷ್ಣೈಶ್ಚಿಚ್ಛೇದ ಭರತಾನುಜಃ ॥೬೯॥

ಸ ತಾನ್ ಛಿತ್ವಾ ಶರೈಸ್ತೀಕ್ಷ್ಣೈರ್ಲಕ್ಷ್ಮಣಃ ಪರವೀರಹಾ ।
ಆದದೇ ನಿಶಿತಂ ಬಾಣಂ ಜ್ವಲನ್ತಮಿವ ತೇಜಸಾ ॥೭೦॥

ತಮಾದಾಯ ಧನುಃಶ್ರೇಷ್ಠೇ ಯೋಜಯಾಮಾಸ ಲಕ್ಷ್ಮಣಃ ।
ವಿಚಕರ್ಷ ಚ ವೇಗೇನ ವಿಸಸರ್ಜ ಚ ವೀರ್ಯವಾನ್ ॥೭೧॥

ಪೂರ್ಣಾಯತವಿಸೃಷ್ಟೇನ ಶರೇಣ ನತಪರ್ವಣಾ ।
ಲಲಾಟೇ ರಾಕ್ಷಸಶ್ರೇಷ್ಠಮಾಜಘಾನ ಸ ವೀರ್ಯವಾನ್ ॥೭೨॥

ಸ ಲಲಾಟೇ ಶರೋ ಮಗ್ನಸ್ತಸ್ಯ ಭೀಮಸ್ಯ ರಕ್ಷಸಃ ।
ದದೃಶೇ ಶೋಣಿತೇನಾಕ್ತಃ ಪನ್ನಗೇನ್ದ್ರ ಇವಾಚಲೇ ॥೭೩॥

ರಾಕ್ಷಸಃ ಪ್ರಚಕಮ್ಪೇ ಚ ಲಕ್ಷ್ಮಣೇಷುಪ್ರಪೀಡಿತಃ ।
ರುದ್ರಬಾಣಹತಂ ಘೋರಂ ಯಥಾ ತ್ರಿಪುರಗೋಪುರಮ್ ।
ಚಿನ್ತಯಾಮಾಸ ಚಾಶ್ವಾಸ್ಯ ವಿಮೃಶ್ಯ ಚ ಮಹಾಬಲಃ ॥೭೪॥

ಸಾಧು ಬಾಣನಿಪಾತೇನ ಶ್ಲಾಘನೀಯೋಽಸಿ ಮೇ ರಿಪುಃ ॥೭೫॥

ವಿಧಾಯ್ಯೈವಂ ವಿನಮ್ಯಾಸ್ಯಂ ನಿಯಮ್ಯ ಚ ಭುಜಾವುಭೌ ।
ಸ ರಥೋಪಸ್ಥಮಾಸ್ಥಾಯ ರಥೇನ ಪ್ರಚಚಾರ ಹ ॥೭೬॥

ಏಕಂ ತ್ರೀನ್ಪಞ್ಚ ಸಪ್ತೇತಿ ಸಾಯಕಾನ್ರಾಕ್ಷಸರ್ಷಭಃ ।
ಆದದೇ ಸಂದಧೇ ಚಾಪಿ ವಿಚಕರ್ಷೋತ್ಸಸರ್ಜ ಚ ॥೭೭॥

ತೇ ಬಾಣಾಃ ಕಾಲಸಂಕಾಶಾ ರಾಕ್ಷಸೇನ್ದ್ರಧನುಶ್ಚ್ಯುತಾಃ ।
ಹೇಮಪುಙ್ಖಾ ರವಿಪ್ರಖ್ಯಾಶ್ಚಕ್ರುರ್ದೀಪ್ತಮಿವಾಮ್ಬರಮ್ ॥೭೮॥

ತತಸ್ತಾನ್ರಾಕ್ಷಸೋತ್ಸೃಷ್ಟಾನ್ ಶರೌಘಾನ್ರಾಘವಾನುಜಃ ।
ಅಸಂಭ್ರಾನ್ತಃ ಪ್ರಚಿಚ್ಛೇದ ನಿಶಿತೈರ್ಬಹುಭಿಃ ಶರೈಃ ॥೭೯॥

ತಾನ್ ಶರಾನ್ಯುಧಿ ಸಂಪ್ರೇಕ್ಷ್ಯ ನಿಕೃತ್ತಾನ್ರಾವಣಾತ್ಮಜಃ ।
ಚುಕೋಪ ತ್ರಿದಶೇನ್ದ್ರಾರಿರ್ಜಗ್ರಾಹ ನಿಶಿತಂ ಶರಮ್ ॥೮೦॥

ಸ ಸಂಧಾಯ ಮಹಾತೇಜಾಸ್ತಂ ಬಾಣಂ ಸಹಸೋತ್ಸೃಜತ್ ।
ತತಃ ಸೌಮಿತ್ರಿಮಾಯಾನ್ತಮಾಜಘಾನ ಸ್ತನಾನ್ತರೇ ॥೮೧॥

ಅತಿಕಾಯೇನ ಸೌಮಿತ್ರಿಸ್ತಾಡಿತೋ ಯುಧಿ ವಕ್ಷಸಿ ।
ಸುಸ್ರಾವ ರುಧಿರಂ ತೀವ್ರಂ ಮದಂ ಮತ್ತ ಇವ ದ್ವಿಪಃ ॥೮೨॥

ಸ ಚಕಾರ ತದಾತ್ಮಾನಂ ವಿಶಲ್ಯಂ ಸಹಸಾ ವಿಭುಃ ।
ಜಗ್ರಾಹ ಚ ಶರಂ ತೀಕ್ಷ್ಣಮಸ್ತ್ರೇಣಾಪಿ ಚ ಸಂದಧೇ ॥೮೩॥

ಆಗ್ನೇಯೇನ ತದಾಸ್ತ್ರೇಣ ಯೋಜಯಾಮಾಸ ಸಾಯಕಮ್ ।
ಸ ಜಜ್ವಾಲ ತದಾ ಬಾಣೋ ಧನುಷ್ಯಸ್ಯ ಮಹಾತ್ಮನಃ ॥೮೪॥

ಅತಿಕಾಯೋಽಪಿ ತೇಜಸ್ವೀ ಸೌರಮಸ್ತ್ರಂ ಸಮಾದಧೇ ।
ತೇನ ಬಾಣಂ ಭುಜಜ್ಗಾಭಂ ಹೇಮಪುಙ್ಖಮಯೋಜಯತ್ ॥೮೫॥

ತದಸ್ತ್ರಂ ಜ್ವಲಿತಂ ಘೋರಂ ಲಕ್ಷ್ಮಣಃ ಶರಮಾಹಿತಮ್ ।
ಅತಿಕಾಯಾಯ ಚಿಕ್ಷೇಪ ಕಾಲದಣ್ಡಮಿವಾನ್ತಕಃ ॥೮೬॥

ಆಗ್ನೇಯೇನಾಭಿಸಂಯುಕ್ತಂ ದೃಷ್ಟ್ವಾ ಬಾಣಂ ನಿಶಾಚರಃ ।
ಉತ್ಸಸರ್ಜ ತದಾ ಬಾಣಂ ದೀಪ್ತಂ ಸೂರ್ಯಾಸ್ತ್ರಯೋಜಿತಮ್ ॥೮೭॥

ತಾವುಭಾವಮ್ಬರೇ ಬಾಣಾವನ್ಯೋನ್ಯಮಭಿಜಘ್ನತುಃ ।
ತೇಜಸಾ ಸಂಪ್ರದೀಪ್ತಾಗ್ರೌ ಕ್ರುದ್ಧಾವಿವ ಭುಜಂಗಮೌ ॥೮೮॥

ತಾವನ್ಯೋನ್ಯಂ ವಿನಿರ್ದಹ್ಯ ಪೇತತುಃ ಪೃಥಿವೀತಲೇ ॥೮೯॥

ನಿರರ್ಚಿಷೌ ಭಸ್ಮಕೃತೌ ನ ಭ್ರಾಜೇತೇ ಶರೋತ್ತಮೌ ।
ತಾವುಭೌ ದೀಪ್ಯಮಾನೌ ಸ್ಮ ನ ಭ್ರಾಜೇತೇ ಮಹೀತಲೇ ॥೯೦॥

ತತೋಽತಿಕಾಯಃ ಸಂಕ್ರುದ್ಧಸ್ತ್ವಸ್ತ್ರಮೈಷೀಕಮುತ್ಸೃಜತ್ ।
ತತ್ಪ್ರಚಿಚ್ಛೇದ ಸೌಮಿತ್ರಿರಸ್ತ್ರೇಣೈನ್ದ್ರೇಣ ವೀರ್ಯವಾನ್ ॥೯೧॥

ಐಷೀಕಂ ನಿಹತಂ ದೃಷ್ಟ್ವಾ
ರುಷಿತೋ ರಾವಣಾತ್ಮಜಃ ।
ಯಾಮ್ಯೇನಾಸ್ತ್ರೇಣ ಸಂಕ್ರುದ್ಧೋ
ಯೋಜಯಾಮಾಸ ಸಾಯಕಮ್ ॥೯೨॥

ತತಸ್ತದಸ್ತ್ರಂ ಚಿಕ್ಷೇಪ ಲಕ್ಷ್ಮಣಾಯ ನಿಶಾಚರಃ ।
ವಾಯವ್ಯೇನ ತದಸ್ತ್ರೇಣ ನಿಜಘಾನ ಸ ಲಕ್ಷ್ಮಣಃ ॥೯೩॥

ಅಥೈನಂ ಶರಧಾರಾಭಿರ್ಧಾರಾಭಿರಿವ ತೋಯದಃ ।
ಅಭ್ಯವರ್ಷತ್ಸುಸಂಕ್ರುದ್ಧೋ ಲಕ್ಷ್ಮಣೋ ರಾವಣಾತ್ಮಜಮ್ ॥೯೪॥

ತೇಽತಿಕಾಯಂ ಸಮಾಸಾದ್ಯ ಕವಚೇ ವಜ್ರಭೂಷಿತೇ ।
ಭಗ್ನಾಗ್ರಶಲ್ಯಾಃ ಸಹಸಾ ಪೇತುರ್ಬಾಣಾ ಮಹೀತಲೇ ॥೯೫॥

ತಾನ್ಮೋಘಾನಭಿಸಂಪ್ರೇಕ್ಷ್ಯ ಲಕ್ಷ್ಮಣಃ ಪರವೀರಹಾ ।
ಅಭ್ಯವರ್ಷನ್ಮಹೇಷೂಣಾಂ ಸಹಸ್ರೇಣ ಮಹಾಯಶಾಃ ॥೯೬॥

ಸ ವೃಷ್ಯಮಾಣೋ ಬಾಣೌಘೈರತಿಕಾಯೋ ಮಹಾಬಲಃ ।
ಅವಧ್ಯಕವಚಃ ಸಂಖ್ಯೇ ರಾಕ್ಷಸೋ ನೈವ ವಿವ್ಯಥೇ ॥೯೭॥

ಶರಂ ಚಾಶೀವಿಷಾಕಾರಂ ಲಕ್ಷ್ಮಣಾಯ ವ್ಯಪಾಸೃಜತ್ ।
ಸ ತೇನ ವಿದ್ಧಃ ಸೌಮಿತ್ರಿಃ ಮರ್ಮದೇಶೇ ಶರೇಣ ಹ ॥೯೮॥

ಮುಹೂರ್ತಮಾತ್ರಂ ನಿಃಸಂಜ್ಞೋ ಹ್ಯಭವಚ್ಛತ್ರುತಾಪನಃ ।
ತತಃ ಸಂಜ್ಞಾಮುಪಾಲಭ್ಯ ಚತುರ್ಭಿಃ ಸಾಯಕೋತ್ತಮೈಃ ॥೯೯॥

ನಿಜಘಾನ ಹಯಾನ್ಸಂಖ್ಯೇ ಸಾರಥಿಂ ಚ ಮಹಾಬಲಃ ।
ಧ್ವಜಸ್ಯೋನ್ಮಥನಂ ಕೃತ್ವಾ ಶರವರ್ಷೈರರಿಂದಮಃ ॥೧೦೦॥

ಅಸಂಭ್ರಾನ್ತಃ ಸ ಸೌಮಿತ್ರಿಃ ತಾನ್ ಶರಾನಭಿಲಕ್ಷಿತಾನ್ ।
ಮುಮೋಚ ಲಕ್ಷ್ಮಣೋ ಬಾಣಾನ್ವಧಾರ್ಥಂ ತಸ್ಯ ರಕ್ಷಸಃ ।
ನ ಶಶಾಕ ರುಜಂ ಕರ್ತುಂ ಯುಧಿ ತಸ್ಯ ನರೋತ್ತಮಃ ॥೧೦೧॥

ಅಥೈನಮಭ್ಯುಪಾಗಮ್ಯ ವಾಯುರ್ವಾಕ್ಯಮುವಾಚ ಹ ।
ಬ್ರಹ್ಮದತ್ತವರೋ ಹ್ಯೇಷ ಅವಧ್ಯಕವಚಾವೃತಃ ॥೧೦೨॥

ಬ್ರಾಹ್ಮೇಣಾಸ್ತ್ರೇಣ ಭಿನ್ಧ್ಯೇನಮೇಷ ವಧ್ಯೋ ಹಿ ನಾನ್ಯಥಾ ।
ಅವಧ್ಯ ಏಷ ಹ್ಯನ್ಯೇಷಾಮಸ್ತ್ರಾಣಾಂ ಕವಚೀ ಬಲೀ ॥೧೦೩॥

ತತಸ್ತು ವಾಯೋರ್ವಚನಂ ನಿಶಮ್ಯ
ಸೌಮಿತ್ರಿರಿನ್ದ್ರಪ್ರತಿಮಾನವೀರ್ಯಃ ।

ಸಮಾದದೇ ಬಾಣಮಮೋಘವೇಗಂ
ತದ್ಬ್ರಾಹ್ಮಮಸ್ತ್ರಂ ಸಹಸಾ ನಿಯೋಜ್ಯ ॥೧೦೪॥

ತಸ್ಮಿನ್ಮಹಾಸ್ತ್ರೇ ತು ನಿಯುಜ್ಯಮಾನೇ
ಸೌಮಿತ್ರಿಣಾ ಬಾಣವರೇ ಶಿತಾಗ್ರೇ ।
ದಿಶಶ್ಚ ಚನ್ದ್ರಾರ್ಕಮಹಾಗ್ರಹಾಶ್ಚ
ನಭಶ್ಚ ತತ್ರಾಸ ಚಚಾಲ ಚೋರ್ವೀ ॥೧೦೫॥

ತಂ ಬ್ರಹ್ಮಣೋಽಸ್ತ್ರೇಣ ನಿಯೋಜ್ಯ ಚಾಪೇ
ಶರಂ ಸುಪುಙ್ಖಂ ಯಮದೂತಕಲ್ಪಮ್ ।
ಸೌಮಿತ್ರಿರಿನ್ದ್ರಾರಿಸುತಸ್ಯ ತಸ್ಯ
ಸಸರ್ಜ ಬಾಣಂ ಯುಧಿ ವಜ್ರಕಲ್ಪಮ್ ॥೧೦೬॥

ತಂ ಲಕ್ಷ್ಮಣೋತ್ಸೃಷ್ಟಮಮೋಘವೇಗಂ
ಸಮಾಪತನ್ತಂ ಜ್ವಲನಪ್ರಕಾಶಮ್ ।
ಸುಪರ್ಣವಜ್ರೋತ್ತಮಚಿತ್ರಪುಙ್ಖಂ
ತದಾತಿಕಾಯಃ ಸಮರೇ ದದರ್ಶ ॥೧೦೭॥

ತಂ ಪ್ರೇಕ್ಷಮಾಣಃ ಸಹಸಾತಿಕಾಯೋ
ಜಘಾನ ಬಾಣೈರ್ನಿಶಿತೈರನೇಕೈಃ ।
ಸ ಸಾಯಕಸ್ತಸ್ಯ ಸುಪರ್ಣವೇಗ-
ಸ್ತದಾತಿಕಾಯಸ್ಯ ಜಗಾಮ ಪಾರ್ಶ್ವಮ್ ॥೧೦೮॥

ತಮಾಗತಂ ಪ್ರೇಕ್ಷ್ಯ ತದಾತಿಕಾಯೋ
ಬಾಣಂ ಪ್ರದೀಪ್ತಾನ್ತಕಕಾಲಕಲ್ಪಮ್ ।
ಜಘಾನ ಶಕ್ತ್ಯೃಷ್ಟಿಗದಾಕುಠಾರೈಃ
ಶೂಲೈರ್ಹಲೈಶ್ಚಾಪ್ಯವಿಪನ್ನಚೇತಾಃ ॥೧೦೯॥

ತಾನ್ಯಾಯುಧಾನ್ಯದ್ಭುತವಿಗ್ರಹಾಣಿ
ಮೋಘಾನಿ ಕೃತ್ವಾ ಸ ಶರೋಽಗ್ನಿದೀಪ್ತಃ ।

ಪ್ರಗೃಹ್ಯ ತಸ್ಯೈವ ಕಿರೀಟಜುಷ್ಟಂ
ತತೋಽತಿಕಾಯಸ್ಯ ಶಿರೋ ಜಹಾರ ॥೧೧೦॥

ತಚ್ಛಿರಃ ಸಶಿರಸ್ತ್ರಾಣಂ ಲಕ್ಷ್ಮಣೇಷುಪ್ರಪೀಡಿತಮ್ ।
ಪಪಾತ ಸಹಸಾ ಭೂಮೌ ಶೃಙ್ಗಂ ಹಿಮವತೋ ಯಥಾ ॥೧೧೧॥

ತಂ ತು ಭೂಮೌ ನಿಪತಿತಂ ದೃಷ್ಟ್ವಾ ವಿಕ್ಷಿಪ್ತಭೂಷಣಮ್ ।
ಬಭೂವುರ್ವ್ಯಥಿತಾಃ ಸರ್ವೇ ಹತಶೇಷಾ ನಿಶಾಚರಾಃ ॥೧೧೨॥

ತೇ ವಿಷಣ್ಣಮುಖಾ ದೀನಾಃ ಪ್ರಹಾರಜನಿತಶ್ರಮಾಃ ।
ವಿನೇದುರುಚ್ಚೈರ್ಬಹವಃ ಸಹಸಾ ವಿಸ್ವರೈಃ ಸ್ವರೈಃ ॥೧೧೩॥

ತತಸ್ತೇ ತ್ವರಿತಂ ಯಾತಾ ನಿರಪೇಕ್ಷಾ ನಿಶಾಚರಾಃ ।
ಪುರೀಮಭಿಮುಖಾ ಭೀತಾ ದ್ರವನ್ತೋ ನಾಯಕೇ ಹತೇ ॥೧೧೪॥

ಪ್ರಹರ್ಷಯುಕ್ತಾ ಬಹವಸ್ತು ವಾನರಾಃ
ಪ್ರಬುದ್ಧಪದ್ಮಪ್ರತಿಮಾನನಾಸ್ತದಾ ।
ಅಪೂಜಯನ್ ಲಕ್ಷ್ಮಣಮಿಷ್ಟಭಾಗಿನಂ
ಹತೇ ರಿಪೌ ಭೀಮಬಲೇ ದುರಾಸದೇ ॥೧೧೫॥

ಅತಿಬಲಮತಿಕಾಯಮಭ್ರಕಲ್ಪಂ
ಯುಧಿ ವಿನಿಪಾತ್ಯ ಸ ಲಕ್ಷ್ಮಣಃ ಪ್ರಹೃಷ್ಟಃ ।
ತ್ವರಿತಮಥ ತದಾ ಸ ರಾಮಪಾರ್ಶ್ವಂ
ಕಪಿನಿವಹೈಶ್ಚ ಸುಪೂಜಿತೋ ಜಗಾಮ ॥೧೧೬॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ಏಕಸಪ್ತತಿತಮಃ ಸರ್ಗಃ

ದ್ವಿಸಪ್ತತಿತಮಃ ಸರ್ಗಃ

ಅತಿಕಾಯಂ ಹತಂ ಶ್ರುತ್ವಾ ಲಕ್ಷ್ಮಣೇನ ಮಹೌಜಸಾ ।
ಉದ್ವೇಗಮಗಮದ್ರಾಜಾ ವಚನಂ ಚೇದಮಬ್ರವೀತ್ ॥೧॥

ಧೂಮ್ರಾಕ್ಷಃ ಪರಮಾಮರ್ಷೀ ಧನ್ವೀ ಶಸ್ತ್ರಭೃತಾಂ ವರಃ ।
ಅಕಮ್ಪನಃ ಪ್ರಹಸ್ತಶ್ಚ ಕುಮ್ಭಕರ್ಣಸ್ತಥೈವ ಚ ॥೨॥

ಏತೇ ಮಹಾಬಲಾ ವೀರಾ ರಾಕ್ಷಸಾ ಯುದ್ಧಕಾಂಕ್ಷಿಣಃ ।
ಜೇತಾರಃ ಪರಸೈನ್ಯಾನಾಂ ಪರೈರ್ನಿತ್ಯಾಪರಾಜಿತಾಃ ॥೩॥

ನಿಹತಾಸ್ತೇ ಮಹಾವೀರ್ಯಾ ರಾಮೇಣಾಕ್ಲಿಷ್ಟಕರ್ಮಣಾ ।
ರಾಕ್ಷಸಾಃ ಸುಮಹಾಕಾಯಾ ನಾನಾಶಸ್ತ್ರವಿಶಾರದಾಃ ॥೪॥

ಅನ್ಯೇ ಚ ಬಹವಃ ಶೂರಾ ಮಹಾತ್ಮಾನೋ ನಿಪಾತಿತಾಃ ।
ಪ್ರಖ್ಯಾತಬಲವೀರ್ಯೇಣ ಪುತ್ರೇಣೇನ್ದ್ರಜಿತಾ ಮಮ ॥೫॥

ಯೌ ಹಿ ತೌ ಭ್ರಾತರೌ ವೀರೌ ಬದ್ಧೌ ದತ್ತವರೈಃ ಶರೈಃ ।
ಯನ್ನ ಶಕ್ಯಂ ಸುರೈಃ ಸರ್ವೈರಸುರೈರ್ವಾ ಮಹಾಬಲೈಃ ॥೬॥

ಮೋಕ್ತುಂ ತದ್ಬನ್ಧನಂ ಘೋರಂ ಯಕ್ಷಗನ್ಧರ್ವಕಿನ್ನರೈಃ ।
ತನ್ನ ಜಾನೇ ಪ್ರಭಾವೈರ್ವಾ ಮಾಯಯಾ ಮೋಹನೇನ ವಾ ।
ಶರಬನ್ಧಾದ್ವಿಮುಕ್ತೌ ತೌ ಭ್ರಾತರೌ ರಾಮಲಕ್ಷ್ಮಣೌ ॥೭॥

ಯೇ ಯೋಧಾ ನಿರ್ಗತಾಃ ಶೂರಾ ರಾಕ್ಷಸಾ ಮಮ ಶಾಸನಾತ್ ।
ತೇ ಸರ್ವೇ ನಿಹತಾ ಯುದ್ಧೇ ವಾನರೈಃ ಸುಮಹಾಬಲೈಃ ॥೮॥

ತಂ ನ ಪಶ್ಯಾಮ್ಯಹಂ ಯುದ್ಧೇ
ಯೋಽದ್ಯ ರಾಮಂ ಸಲಕ್ಷ್ಮಣಮ್ ।
ಶಾಸಯೇತ್ಸಬಲಂ ವೀರ
ಸಸುಗ್ರೀವವಿಭೀಷಣಮ್ ॥೯॥

ಅಹೋ ನು ಬಲವಾನ್ರಾಮೋ ಮಹದಸ್ತ್ರಬಲಂ ಚ ವೈ ।
ಯಸ್ಯ ವಿಕ್ರಮಮಾಸಾದ್ಯ ರಾಕ್ಷಸಾ ನಿಧನಂ ಗತಾಃ ॥೧೦॥

ತಂ ಮನ್ಯೇ ರಾಘವಂ ವೀರಂ ನಾರಾಯಣಮನಾಮಯಮ್ ।
ತದ್ಭಯಾದ್ಧಿ ಪುರೀ ಲಙ್ಕಾ ಪಿಹಿತದ್ವಾರತೋರಣಾ ॥೧೧॥

ಅಪ್ರಮತ್ತೈಶ್ಚ ಸರ್ವತ್ರ ಗುಪ್ತೈ ರಕ್ಷ್ಯಾ ಪುರೀ ತ್ವಿಯಮ್ ।
ಅಶೋಕವನಿಕಾಯಾಂ ಚ ಯತ್ರ ಸೀತಾಭಿರಕ್ಷ್ಯತೇ ॥೧೨॥

ನಿಷಾ ಮೋ ವಾ ಪ್ರವೇಶೋ ವಾ ಜ್ಞಾತವ್ಯಃ ಸರ್ವಥೈವ ನಃ ।
ಯತ್ರ ಯತ್ರ ಭವೇದ್ಗುಲ್ಮಸ್ತತ್ರ ತತ್ರ ಪುನಃ ಪುನಃ ॥೧೩॥

ಸರ್ವತಶ್ಚಾಪಿ ತಿಷ್ಠಧ್ವಂ ಸ್ವೈಃ ಸ್ವೈಃ ಪರಿವೃತಾ ಬಲೈಃ ॥೧೪॥
ದ್ರಷ್ಟವ್ಯಂ ಚ ಪದಂ ತೇಷಾಂ ವಾನರಾಣಾಂ ನಿಶಾಚರಾಃ ।
ಪ್ರದೋಷೇ ವಾರ್ಧರಾತ್ರೇ ವಾ ಪ್ರತ್ಯೂಷೇ ವಾಪಿ ಸರ್ವತಃ ॥೧೫॥

ನಾವಜ್ಞಾ ತತ್ರ ಕರ್ತವ್ಯಾ ವಾನರೇಷು ಕದಾಚನ ।
ದ್ವಿಷತಾಂ ಬಲಮುದ್ಯುಕ್ತಮಾಪತತ್ಕಿಂ ಸ್ಥಿತಂ ಸದಾ ॥೧೬॥

ತತಸ್ತೇ ರಾಕ್ಷಸಾಃ ಸರ್ವೇ ಶ್ರುತ್ವಾ ಲಙ್ಕಾಧಿಪಸ್ಯ ತತ್ ।
ವಚನಂ ಸರ್ವಮಾತಿಷ್ಠನ್ಯಥಾವತ್ತು ಮಹಾಬಲಾಃ ॥೧೭॥

ಸ ತಾನ್ಸರ್ವಾನ್ಸಮಾದಿಶ್ಯ ರಾವಣೋ ರಾಕ್ಷಸಾಧಿಪಃ ।
ಮನ್ಯುಶಲ್ಯಂ ಸಹನ್ದೀನಃ ಪ್ರವಿವೇಶ ಸ್ವಮಾಲಯಮ್ ॥೧೮॥

ತತಃ ಸ ಸಂದೀಪಿತಕೋಪವಹ್ನಿ-
ರ್ನಿಶಾಚರಾಣಾಮಧಿಪೋ ಮಹಾಬಲಃ ।
ತದೇವ ಪುತ್ರವ್ಯಸನಂ ವಿಚಿನ್ತಯ-
ನ್ಮುಹುರ್ಮುಹುಶ್ಚೈವ ತದಾ ವ್ಯನಿಃಶ್ವಸತ್ ॥೧೯॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ
ಯುದ್ಧಕಾಣ್ಡೇ ದ್ವಿಸಪ್ತತಿತಮಃ ಸರ್ಗಃ

ತ್ರಿಸಪ್ತತಿತಮಃ ಸರ್ಗಃ

ತತೋ ಹತಾನ್ರಾಕ್ಷಸಪುಂಗವಾಂಸ್ತಾ-
ನ್ದೇವಾನ್ತಕಾದಿತ್ರಿಶಿರೋಽತಿಕಾಯಾನ್ ।
ರಕ್ಷೋಗಣಾಸ್ತತ್ರ ಹತಾವಶಿಷ್ಟಾ-
ಸ್ತೇ ರಾವಣಾಯ ತ್ವರಿತಾಃ ಶಶಂಸುಃ ॥೧॥

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ತಪಃಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಙ್ಗವಮ್ ॥

ಶ್ರೀಮದ್ವಾಲ್ಮೀಕಿರಾಮಾಯಣ-ಎಂಟನೆಯ ಸಂಪುಟ
ಯುದ್ಧಕಾಂಡ

ಯುದ್ಧಕಾಂಡ ೧೯ನೆಯ ಸರ್ಗ

ವಿಭೀಷಣನ ಶರಣಾಗತಿ : ವಿಭೀಷಣನಿಂದ ರಾವಣನ ಶಕ್ತಿಯ ಪರಿಚಯ : ರಾವಣನ ವಧೆಗೆ ಶ್ರೀರಾಮನಿಂದ ಪ್ರತಿಜ್ಞೆ: ವಿಭೀಷಣನಿಗೆ ಲಂಕಾರಾಜ್ಯದ ಅಭಿಷೇಕ : ಸಮುದ್ರತೀರದಲ್ಲಿ ಶ್ರೀರಾಮನ ಪ್ರಾಯೋಪವೇಶ

ರಾಘವೇಣಾಭಯೇ ದತ್ತೇ ಸಂನತೋ ರಾವಣಾನುಜಃ ।
ವಿಭೀಷಣೋ ಮಹಾಪ್ರಾಜ್ಞೋ ಭೂಮಿಂ ಸಮವಲೋಕಯತ್ ॥

ಹೀಗೆ ಶ್ರೀರಾಮನು ವಿಭೀಷಣನಿಗೆ ಅಭಯವನ್ನು ನೀಡಿದಾಗ ವಿನಯ ಶೀಲನೂ ಬುದ್ಧಿವಂತನೂ ಆದ ವಿಭೀಷಣನು ತಲೆಬಾಗಿ ಭೂಮಿಯ ಕಡೆಗೆ ನೋಡಿದನು.

ಅನಂತರ ಧರ್ಮಾತ್ಮನಾದ ವಿಭೀಷಣನು ಅತ್ಯಂತಹೃಷ್ಟನಾಗಿ ತನ್ನ ನಾಲ್ವರು ಅನುಚರರೊಡನೆ ಭೂಮಿಗಿಳಿಸಿದು ಶ್ರೀರಾಮನ ಪಾದಗಳಿಗೆರಗಿದನು. ಬಳಿಕ ಅವನು ಧರ್ಮಯುಕ್ತವಾದ, ಯುಕ್ತಿಯುಕ್ತವಾದ, ಸಮಯೋಚಿತ ವಾದ, ಹರ್ಷದಿಂದ ಕೂಡಿದ ಈ ಮಾತನ್ನು ಶ್ರೀರಾಮನಿಗೆ ಹೇಳಿದನು :

ಅನುಜೋ ರಾವಣಸ್ಯಾಹಂ ತೇನ ಚಾಸ್ಮ್ಯವಮಾನಿತಃ ।
ಭವನ್ತಂ ಸರ್ವಭೂತಾನಾಂ ಶರಣ್ಯಂ ಶರಣಂ ಗತಃ ॥೪॥

"ಪೂಜ್ಯನೇ! ನಾನು ರಾವಣನ ತಮ್ಮನು. ನಮ್ಮಣ್ಣನು ನನ್ನನ್ನು

ಅವಮಾನಗೊಳಿಸಿದನು. ಆದುದರಿಂದ ಸಮಸ್ತಪ್ರಾಣಿಗಳಿಗೂ ಶರಣ್ಯನಾದ ನಿನ್ನಲ್ಲಿ ಶರಣಾಗತನಾಗಿ ಬಂದಿರುವೆನು.

ನಾನು ಮಿತ್ರರನ್ನೂ, ಐಶ್ವರ್ಯವನ್ನೂ ಮತ್ತು ಲಂಕಾಪಟ್ಟಣವನ್ನೂ ಪರಿತ್ಯಜಿಸಿ ಬಂದಿರುವೆನು. ಈಗ ನನ್ನ ರಾಜ್ಯ, ನನ್ನ ಪ್ರಾಣ ಮತ್ತು ಐಹಿಕ-ಆಮುಷ್ಮಿಕಸುಖಗಳು—ಎಲ್ಲವೂ ನಿನ್ನನ್ನೇ ಅವಲಂಬಿಸಿವೆ.”

ವಿಭೀಷಣನ ಆ ಮಾತನ್ನು ಕೇಳಿ ಶ್ರೀರಾಮನು ಮಧುರವಾದ ಮಾತುಗಳಿಂದ ಅವನನ್ನು ಸಂತೈಸುತ್ತಾ ಹೇಳಿದನು. ಆ ಸಮಯದಲ್ಲಿ ಶ್ರೀರಾಮನು ಕಣ್ಣುಗಳಿಂದಲೇ ಮೈತ್ರಿಯ ರಸವನ್ನು ಪಾನಮಾಡುತ್ತಿರುವನೋ ಎಂಬಂತೆ ಪ್ರೇಮಾದರಗಳಿಂದ ವಿಭೀಷಣನನ್ನು ಎವೆಯಿಕ್ಕದೇ ನೋಡುತ್ತಾ ಹೇಳಿದನು:

“ವಿಭೀಷಣ! ರಾಕ್ಷಸರ ಬಲಾಬಲಗಳನ್ನು ನನಗೆ ಹೇಳು.”

ಅನಾಯಾಸವಾಗಿ ಕಾರ್ಯಗಳನ್ನು ಮಾಡುವ ಶ್ರೀರಾಮನು ಹೀಗೆ ಕೇಳಲು ವಿಭೀಷಣನು ರಾವಣನ ಸಮಗ್ರಬಲವನ್ನೂ ಪರಿಚಯಮಾಡಿಕೊಟ್ಟನು.

“ರಾಜಕುಮಾರನೇ! ಬ್ರಹ್ಮನ ವರಪ್ರಸಾದದಿಂದ ರಾವಣನು ಮನುಷ್ಯರನ್ನು ಬಿಟ್ಟು ಉಳಿದ ಎಲ್ಲ ಪ್ರಾಣಿಗಳಿಂದಲೂ ಗಂಧರ್ವ-ಪಕ್ಷಿ-ಸರ್ಪಗಳಿಂದಲೂ ವಧಿಸಲ್ಪಡತಕ್ಕವನಲ್ಲ. ರಾವಣನ ತಮ್ಮನಾದ ಮತ್ತು ನನಗೆ ಹಿರಿಯನಾದ, ಮಹಾತೇಜಸ್ವಿಯಾದ, ವೀರ್ಯವಂತನಾದ ಕುಂಭಕರ್ಣನು ಯುದ್ಧದಲ್ಲಿ ಇಂದ್ರನಿಗೆ ಸಮಾನವಾದ ಬಲದಿಂದ ಕೂಡಿರುವನು. ರಾವಣನ ಸೇನಾಪತಿಯಾದ ಪ್ರಹಸ್ತನೆಂಬ ಹೆಸರಿನ ರಾಕ್ಷಸನ ವಿಷಯವಾಗಿ ನೀನು ಕೇಳಿರಬಹುದು. ಕೈಲಾಸದಲ್ಲಿ ನಡೆದ ಯುದ್ಧದಲ್ಲಿ ಅವನು ಕುಬೇರನ ಸೇನಾಪತಿಯಾದ ಮಣಿಭದ್ರನನ್ನು ಪರಾಜಯಗೊಳಿಸಿರುವನು. ರಾವಣನ ಮಗನಾದ ಇಂದ್ರಜಿತುವು ಬೆರಳುಗಳನ್ನು ರಕ್ಷಣೆಮಾಡುವ ಚರ್ಮದ ಪಟ್ಟಿಯನ್ನು ಕಟ್ಟಿಕೊಂಡು, ಭೇದಿಸಲು ಸಾಧ್ಯವಾಗದಂತಹ ಕವಚವನ್ನು ಧರಿಸಿ, ಧನುಸ್ಸನ್ನು ಹಿಡಿದು ಶತ್ರುವಿನೊಡನೆ ಯುದ್ಧಮಾಡಲು ನಿಂತಾಗ ಅದೃಶ್ಯನಾಗಿ ಬಿಡುವನು. ಯುದ್ಧಕ್ಕೆ ಹೊರಡುವ ಮೊದಲು ಯಥೋಕ್ತವಾದ

ಆಜ್ಯಾಹುತಿಗಳಿಂದ ಯಜ್ಞೇಶ್ವರನನ್ನು ತೃಪ್ತಿಗೊಳಿಸಿ ರಣರಂಗದಲ್ಲಿ ರಚಿಸಿದ ಮಹಾವ್ಯೂಹದಲ್ಲಿ ನಿಂತು ಶತ್ರುವಿನೊಡನೆ ಯುದ್ಧಮಾಡುತ್ತಿರುವಾಗ ಅದೃಶ್ಯನಾಗಿ ಶತ್ರುಗಳನ್ನು ಪ್ರಹರಿಸುವನು. ಮಹೋದರ, ಮಹಾಪಾರ್ಶ್ವ ಮತ್ತು ಅಕಂಪನ–ಈ ಮೂವರೂ ರಾವಣನ ಸೇನಾನಾಯಕರು. ಅವರು ಲೋಕಪಾಲರ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವನ್ನು ಪ್ರಕಟಿಸುತ್ತಾ ಯುದ್ಧದಲ್ಲಿ ಹೋರಾಡುತ್ತಾರೆ. ಲಂಕೆಯಲ್ಲಿ ರಕ್ತ-ಮಾಂಸಾಹಾರಿಗಳಾದ ಮತ್ತು ಮನಬಂದಂತೆ ವೇಷಗಳನ್ನು ಧರಿಸಲು ಸಮರ್ಥರಾದ ಹತ್ತುಕೋಟಿ ಸಾವಿರ ರಾಕ್ಷಸರಿದ್ದಾರೆ. ಅಂತಹ ಸಮರ್ಥರಾದ ರಾಕ್ಷಸರೊಡನೆ ರಾವಣನು ಲೋಕಪಾಲರೊಡನೆ ಯುದ್ಧಮಾಡಿದನು. ಆ ಯುದ್ಧದಲ್ಲಿ ದೇವತೆಗಳಿಂದ ಸಮೇತರಾದ ಲೋಕಪಾಲರೆಲ್ಲರೂ ದುರಾತ್ಮನಾದ ರಾವಣನಿಂದ ಪರಾಜಿತ ರಾದರು."

ರಘುಶ್ರೇಷ್ಠನಾದ ಶ್ರೀರಾಮನು ವಿಭೀಷಣನ ಮಾತುಗಳನ್ನು ಕೇಳಿ ಮನಸ್ಸಿನಲ್ಲಿಯೇ ಎಲ್ಲವನ್ನೂ ಕೂಲಂಕಷವಾಗಿ ವಿವೇಚಿಸಿ ಹೇಳಿದನು :

"ವಿಭೀಷಣ! ನೀನು ಯಥಾವತ್ತಾಗಿ ಹೇಳಿದ ರಾವಣನ ಹಿಂದಿನ ಪರಾಕ್ರಮದ ವಿಷಯಗಳೆಲ್ಲವನ್ನೂ ನಾನು ಚೆನ್ನಾಗಿ ತಿಳಿದುಕೊಂಡೆನು. ವಿಭೀಷಣ! ಸತ್ಯವಾದ ಈ ನನ್ನ ಮಾತನ್ನು ಕೇಳು. ನಾನು ಪ್ರಹಸ್ತನನ್ನೂ ಪುತ್ರರಿಂದ ಕೂಡಿರುವ ರಾವಣನನ್ನೂ ಸಂಹರಿಸಿ ಲಂಕಾಪಟ್ಟಣಕ್ಕೆ ನಿನ್ನನ್ನು ರಾಜನನ್ನಾಗಿ ಮಾಡುತ್ತೇನೆ. ರಾವಣನು ರಸಾತಲಕ್ಕಾದರೂ ಹೋಗಲಿ ; ಪಾತಾಲಕ್ಕಾದರೂ ಹೋಗಲಿ ; ಬ್ರಹ್ಮನ ಬಳಿಗಾದರೂ ಹೋಗಲಿ–ಆದರೆ ಅವನು ಜೀವಸಹಿತವಾಗಿ ನನ್ನಿಂದ ಬಿಡುಗಡೆಯನ್ನು ಹೊಂದಲಾರನು. ನಾನು ನನ್ನ ಮೂವರು ತಮ್ಮಂದಿರ ಮೇಲೆ ಆಣೆಯಿಟ್ಟು ಹೇಳುತ್ತೇನೆ. ಪುತ್ರ-ಮಿತ್ರ-ಬಂಧುಗಳಿಂದ ಕೂಡಿರುವ ರಾವಣನನ್ನು ಯುದ್ಧದಲ್ಲಿ ಸಂಹರಿ ಸದೇ ನಾನು ಅಯೋಧ್ಯೆಯನ್ನು ಪ್ರವೇಶಿಸುವುದಿಲ್ಲ."

ಕ್ಲಿಷ್ಟವಾದ ಕಾರ್ಯಗಳನ್ನು ಶ್ರಮವಿಲ್ಲದೇ ಮಾಡುವ ಶ್ರೀರಾಮನ ಆ ಮಾತನ್ನು ಕೇಳಿ ಧರ್ಮಾತ್ಮನಾದ ವಿಭೀಷಣನು ತಲೆಬಾಗಿ ನಮಸ್ಕರಿಸಿ ಹೇಳಿದನು :

" ರಾಮಚಂದ್ರ! ನಾನು ಲಂಕಾಪಟ್ಟಣವನ್ನು ಆಕ್ರಮಿಸುವುದ

ರಲ್ಲಿಯೂ ರಾಕ್ಷಸರನ್ನು ಸಂಹರಿಸುವುದರಲ್ಲಿಯೂ ನಿನಗೆ ನೆರವಾಗುತ್ತೇನೆ ಮತ್ತು ನನ್ನ ಪ್ರಾಣಗಳನ್ನೇ ಒತ್ತೆಯಾಗಿಟ್ಟು ರಾವಣನ ಸೈನ್ಯದೊಳಕ್ಕೆ ನುಗ್ಗುತ್ತೇನೆ."

ವಿಭೀಷಣನು ಹೀಗೆ ಹೇಳಲು ಸಂತುಷ್ಟನಾದ ಶ್ರೀರಾಮನು ವಿಭೀಷಣನನ್ನು ಆಲಿಂಗಿಸಿಕೊಂಡನು. ಬಳಿಕ ಲಕ್ಷ್ಮಣನಿಗೆ ಹೇಳಿದನು :

"ಲಕ್ಷ್ಮಣ! ನಾನು ವಿಭೀಷಣನ ವಿಷಯದಲ್ಲಿ ಪ್ರಸನ್ನನಾಗಿರುವೆನು. ಈಗಲೇ ಹೋಗಿ ಸಮುದ್ರದಿಂದ ತೀರ್ಥವನ್ನು ತೆಗೆದುಕೊಂಡು ಬಾ. ಅದರಿಂದ ಮಹಾಪ್ರಾಜ್ಞನಾದ ಈ ವಿಭೀಷಣನಿಗೆ ರಾಜ್ಯಾಭಿಷೇಕಮಾಡು."



ಶ್ರೀರಾಮನು ಹೀಗೆ ಹೇಳುತ್ತಲೇ ಲಕ್ಷ್ಮಣನು ರಾಜನಾದ ಶ್ರೀರಾಮನ ಆಜ್ಞೆಯಂತೆ ವಾನರಶ್ರೇಷ್ಠರ ಮಧ್ಯದಲ್ಲಿ ವಿಭೀಷಣನನ್ನು ರಾಕ್ಷಸರಾಜನ ಪದವಿಯಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕಮಾಡಿದನು. ಹೀಗೆ ಶ್ರೀರಾಮನು

ವಿಭೀಷಣನಿಗೆ ಪರಮಾನುಗ್ರಹಮಾಡಿದುದನ್ನು ಕಂಡು ವಾನರಶ್ರೇಷ್ಠರು ಹರ್ಷಧ್ವನಿಗಳನ್ನು ಮಾಡಿದರು. "ರಾಘವ ಸಾಧು! ದಾಶರಥೇ ಸಾಧು! ನೀನು ಮಾಡಿರುವ ಕಾರ್ಯವು ಸಾಧುವಾಗಿದೆ'–ಎಂದು ಪ್ರಶಂಸೆಮಾಡಿದರು.

ಸುಗ್ರೀವ-ಹನುಮಂತ-ವಿಭೀಷಣರೇ ಬೇರೆಯಾಗಿ ಒಂದೆಡೆಯಲ್ಲಿ ಸೇರಿದ್ದಾಗ ಸುಗ್ರೀವ-ಹನುಮಂತರು ವಿಭೀಷಣನನ್ನು ಪ್ರಶ್ನಿಸಿದರು. "ರಾಕ್ಷಸೇಶ್ವರನೇ! ಮಹಾಬಲಿಷ್ಠರಾದ ಈ ವಾನರಮಹಾಸೈನ್ಯದಿಂದ ಪರಿವೃತರಾದ ನಾವೆಲ್ಲರೂ ಕ್ಷೋಭೆಗೊಳ್ಳದ ಈ ಸಮುದ್ರವನ್ನು ದಾಟುವ ಬಗೆ ಹೇಗೆ? ನಾವೆಲ್ಲರೂ ಸೈನ್ಯಸಮೇತರಾಗಿ ನದೀ-ನದಗಳಿಗೆ ಪತಿಯಾದ ವರುಣನ ಆಲಯವಾದ ಸಮುದ್ರವನ್ನು ಬಹಳ ಬೇಗ ದಾಟಿಹೋಗಲು ಯಾವ ಉಪಾಯವನ್ನೂ ನಾವು ಕಾಣುತ್ತಿಲ್ಲ."

ಹನುಮ-ಸುಗ್ರೀವರು ಹೀಗೆ ಹೇಳಲು ಧರ್ಮಜ್ಞನಾದ ವಿಭೀಷಣನು ಹೇಳಿದನು :

ಸಮುದ್ರಂ ರಾಘವೋ ರಾಜಾ ಶರಣಂ ಗನ್ತುಮರ್ಹತಿ ॥೩೦॥

ಖಾನಿತಃ ಸಗರೇಣಾಯಮಪ್ರಮೇಯೋ ಮಹೋದಧಿಃ ।
ಕರ್ತುಮರ್ಹತಿ ರಾಮಸ್ಯ ಜ್ಞಾತೇಃ ಕಾರ್ಯಂ ಮಹೋದಧಿಃ ॥೩೧॥

"ಈಗ ರಾಜಾರಾಮನು ಸಮುದ್ರನಿಗೆ ಶರಣುಹೋಗುವುದೇ ಯುಕ್ತವಾಗಿದೆ. ಅಪಾರವಾದ ಈ ಮಹಾಸಾಗರವನ್ನು ಶ್ರೀರಾಮನ ಪೂರ್ವಜನಾದ ಸಗರನೇ ತನ್ನ ಮಕ್ಕಳಿಂದ ತೋಡಿಸಿದನು. ಆದುದರಿಂದ ಮಹಾಮತಿ ಯಾದ ಸಮುದ್ರನು ಜ್ಞಾತಿಯಾದ ಶ್ರೀರಾಮನ ಕಾರ್ಯವನ್ನು ಮಾಡಿಕೊಡಬೇಕಾದುದು ಯುಕ್ತವಾಗಿಯೇ ಇದೆ."

ವಿದ್ವಾಂಸನಾದ ರಾಕ್ಷಸಶ್ರೇಷ್ಠನಾದ ವಿಭೀಷಣನು ಹೀಗೆ ಹೇಳಲು ಸುಗ್ರೀವನು ಹನುಮಂತನೊಡನೆ ರಾಮ-ಲಕ್ಷ್ಮಣರಿದ್ದೆಡೆಗೆ ಹೋದನು. ಅನಂತರ ವಿಶಾಲವಾದ ಕುತ್ತಿಗೆಯನ್ನು ಹೊಂದಿದ್ದ ಸುಗ್ರೀವನು ಸಮುದ್ರದ ಬಳಿಯಲ್ಲಿ ಪ್ರಾಯೋಪವೇಶಮಾಡುವ ವಿಷಯವಾಗಿ ವಿಭೀಷಣನ ಶುಭಕರವಾದ ಮಾತುಗಳನ್ನು ಶ್ರೀರಾಮನೊಡನೆ ಹೇಳಿದನು. ಸ್ವಭಾವದಿಂದಲೇ ಧರ್ಮಶೀಲನಾದ ರಾಮನಿಗೂ ವಿಭೀಷಣನ ಮಾತುಗಳು ರುಚಿಸಿದುವು.

ಮಹಾತೇಜಸ್ವಿಯಾದ ಕಾರ್ಯದಕ್ಷನಾದ ಶ್ರೀರಾಮನು ವಿಭೀಷಣನ ಮಾತುಗಳನ್ನು ಗೌರವಿಸುವ ಸಲುವಾಗಿ ಲಕ್ಷ್ಮಣಸಮೇತನಾದ ಸುಗ್ರೀವನಿಗೆ ಮಂದಹಾಸದೊಡನೆ ಹೇಳಿದನು :

"ಲಕ್ಷ್ಮಣ! ವಿಭೀಷಣನ ಈ ಸಲಹೆಯು ನನಗೆ ರುಚಿಸಿದೆ. ಆದರೆ ಸುಗ್ರೀವನೂ ಮಂತ್ರಾಲೋಚನೆಯಲ್ಲಿ ಪಂಡಿತನಾಗಿದ್ದಾನೆ. ನೀನೂ ಕೂಡ ಮಂತ್ರಾಲೋಚನೆಯಲ್ಲಿ ವಿಚಕ್ಷಣನಾಗಿರುವೆ. ನೀವಿಬ್ಬರೂ ಸೇರಿ ವಿಭೀಷಣನ ಸಲಹೆಯನ್ನು ಕೂಲಂಕಷವಾಗಿ ವಿಮರ್ಶಿಸಿ ನಿಮಗೆ ಯಾವುದು ಸಮಂಜಸವೆಂದು ತೋರುವುದೋ ಅದನ್ನು ಹೇಳಿರಿ."

ಶ್ರೀರಾಮನು ಹೀಗೆ ಹೇಳಲು ವೀರರಾದ ಸುಗ್ರೀವ-ಲಕ್ಷ್ಮಣರಿಬ್ಬರೂ ಸಂಪ್ರದಾಯದ ನಡವಳಿಕೆಯಿಂದ ಕೂಡಿರುವ ಈ ಮಾತನ್ನು ಹೇಳಿದರು :

"ಪುರುಷಸಿಂಹನೇ! ರಘುನಂದನ! ವಿಭೀಷಣನು ಹೇಳಿರುವ ಸುಖಕರವಾದ ಸಲಹೆಯು ನಮಗೆ ರುಚಿಸದಿರಲು ಕಾರಣವೇನಿದೆ? ಅತಿಭಯಂಕರವಾಗಿರುವ ಈ ಸಮುದ್ರಕ್ಕೆ ಸೇತುವೆಯನ್ನು ನಿರ್ಮಿಸದೇ ಇಂದ್ರಸಹಿತರಾದ ದೇವತೆಗಳಿಗಾಗಲೀ ಅಸುರರಿಗಾಗಲೀ ಲಂಕೆಗೆ ಹೋಗಲು ಸಾಧ್ಯವಾಗುವುದಿಲ್ಲ.

ಶೂರನಾದ ವಿಭೀಷಣನ ಯಥಾರ್ಥವಾದ ಮಾತಿನಂತೆ ಕಾರ್ಯ ಮಾಡುವುದು ಯುಕ್ತವಾಗಿದೆ. ಇನ್ನು ಹೆಚ್ಚು ಸಮಯವನ್ನು ಕಳೆಯುವುದು ಸರಿಯಲ್ಲ. ರಾವಣನಿಂದ ಪರಿಪಾಲಿಸಲ್ಪಡುತ್ತಿರುವ ಲಂಕಾಪಟ್ಟಣಕ್ಕೆ ನಾವು ಸೈನ್ಯಸಮೇತರಾಗಿ ಹೋಗಬೇಕು. ಅದಕ್ಕೆ ಅನುಕೂಲವಾಗುವಂತೆ ಸಮುದ್ರರಾಜನನ್ನು ಪ್ರಾರ್ಥಿಸು."

ಸುಗ್ರೀವ-ಲಕ್ಷ್ಮಣರಿಬ್ಬರೂ ಹೀಗೆ ಹೇಳಲು ಶ್ರೀರಾಮನು ಸಮುದ್ರತೀರದಲ್ಲಿ ದರ್ಭೆಯನ್ನು ಹರಡಿ ಅದರ ಮೇಲೆ–ವೇದಿಯಲ್ಲಿ ಪ್ರತಿಷ್ಠಿತವಾದ ಅಗ್ನಿಯಂತೆ–ಕುಳಿತುಕೊಂಡನು.

೧೯ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೨೦ನೆಯ ಸರ್ಗ

ಗುಪ್ತಚಾರನಾದ ಶಾರ್ದೂಲನು ಸಮುದ್ರದ ಉತ್ತರ ತೀರದಲ್ಲಿ ನಡೆಯುತ್ತಿರುವ ಸೇನಾಸನ್ನಾಹವನ್ನು ತಿಳಿಸಿದಾಗ ರಾವಣನು ಶುಕನನ್ನು ಸಂಧಾನಕ್ಕಾಗಿ ಸುಗ್ರೀವನ ಬಳಿಗೆ ಕಳುಹಿಸಿಕೊಟ್ಟುದು: ಅದನ್ನು ತಿಳಿದ ವಾನರರು ಶುಕನನ್ನು ಹಿಂಸಿಸಿದುದು : ಶ್ರೀರಾಮನ ಕೃಪೆಯಿಂದ ಶುಕನ ಬಿಡುಗಡೆ : ಸುಗ್ರೀವನು ಶುಕನ ಮೂಲಕವಾಗಿ ರಾವಣನಿಗೆ ಉತ್ತರವನ್ನು ಹೇಳಿಕಳುಹಿಸಿದುದು

ತತೋ ನಿವಿಷ್ಟಾಂ ಧ್ವಜಿನೀಂ ಸುಗ್ರೀವೇಣಾಭಿಪಾಲಿತಾಮ್ ।
ದದರ್ಶ ರಾಕ್ಷಸೋಽಭ್ಯೇತ್ಯ ಶಾರ್ದೂಲೋ ನಾಮ ವೀರ್ಯವಾನ್ ॥

ಚಾರೋ ರಾಕ್ಷಸರಾಜಸ್ಯ ರಾವಣಸ್ಯ ದುರಾತ್ಮನಃ ।
ತಾಂ ದೃಷ್ಟ್ವಾ ಸರ್ವತೋಽವ್ಯಗ್ರಾಂ ಪ್ರತಿಗಮ್ಯ ಸ ರಾಕ್ಷಸಃ ।
ಪ್ರವಿಶ್ಯ ಲಙ್ಕಾಂ ವೇಗೇನ ರಾವಣಂ ವಾಕ್ಯಮಬ್ರವೀತ್ ॥೨॥

ದುರಾತ್ಮನಾದ ರಾಕ್ಷಸರಾಜನ ಗುಪ್ತಚರನಾದ ಮತ್ತು ಮಹಾ ವೀರ್ಯವಂತನಾದ ಶಾರ್ದೂಲನೆಂಬ ರಾಕ್ಷಸನು ಮಹೋದಧಿಯ ಉತ್ತರ ತೀರಕ್ಕೆ ಬಂದು ಅಲ್ಲಿ ನೆಲೆಗೊಳಿಸಿದ್ದ ಸುಗ್ರೀವನಿಂದ ಪರಿಪಾಲಿತವಾದ ವಾನರಸೈನ್ಯವನ್ನು ನೋಡಿದನು. ತೀರದ ಸುತ್ತಲೂ ಸ್ಥೈರ್ಯದಿಂದ ನಿಂತಿದ್ದ ವಾನರಮಹಾಸೈನ್ಯವನ್ನು ನೋಡಿ ಶಾರ್ದೂಲನು ಲಂಕೆಗೆ ವೇಗವಾಗಿ ಹೋಗಿ ರಾವಣನಿಗೆ ಹೇಳಿದನು :

"ಪ್ರಭುವೇ! ಅಗಾಧವಾದ ವಾನರರ ಮತ್ತು ಕರಡಿಗಳ ಸೈನ್ಯವು ಲಂಕೆಯ ಸಮೀಪದಲ್ಲಿಯೇ ಬೀಡುಬಿಟ್ಟಿದೆ. ಆ ಮಹಾಸೈನ್ಯಕ್ಕೆ ಎಲ್ಲೆ ಯೆಂಬುದೇ ಕಾಣುತ್ತಿಲ್ಲ. ಎರಡನೆಯ ಸಾಗರದೋಪಾದಿಯಲ್ಲಿ ಅದು ಅಗಾಧವಾಗಿದೆ. ದಶರಥನ ಮಕ್ಕಳಾದ, ಉತ್ತಮವಾದ ಆಯುಧಗಳಿಂದ ಸಂಪನ್ನರಾದ, ವೀರಶ್ರೇಷ್ಠರಾದ, ಸಹೋದರರಾದ ರಾಮ-ಲಕ್ಷ್ಮಣರು ಸೀತೆಯ ರಕ್ಷಣೆಗಾಗಿ ಆಗಮಿಸಿದ್ದಾರೆ.

ಮಹಾಬಲಿಷ್ಠರಾದ ಆ ರಘುಪುಂಗವರು ಸಮುದ್ರದ ತೀರದಲ್ಲಿ

ಉಪಸ್ಥಿತರಾಗಿದ್ದಾರೆ. ಋಕ್ಷ-ವಾನರಸೈನ್ಯವೂ ಸುತ್ತಲೂ ಹತ್ತು ಯೋಜನಗಳಷ್ಟು ವಿಸ್ತಾರವಾದ ಪ್ರದೇಶವನ್ನು ಆಕ್ರಮಿಸಿ ಬೀಡುಬಿಟ್ಟುಕೊಂಡಿದೆ. ಈ ಸಮಾಚಾರವು ಯಥಾವತ್ತಾದುದು. ಆದುದರಿಂದ ಮಹಾರಾಜ! ಆ ಮಹಾಸೈನ್ಯವು ಯಾವ ಕಾರಣದಿಂದ ಇಲ್ಲಿಗೆ ಬಂದಿರುವುದೆಂಬುದನ್ನು ತಿಳಿಯುವುದು ಉಚಿತವಾಗಿದೆ. ನಿನ್ನ ದೂತರು ಈಗಲೇ ಅಲ್ಲಿಗೆ ಹೋಗಿ ಎಲ್ಲ ವಿಷಯಗಳನ್ನೂ ತಿಳಿದುಬರುವುದು ಯೋಗ್ಯವಾಗಿದೆ. ಅವರ ಆಗಮನದ ಕಾರಣವು ತಿಳಿದನಂತರ ನಿನಗೆ ಉಚಿತವೆನಿಸುವ ಕಾರ್ಯವನ್ನು ಮಾಡಬಹುದು.

ಉಪಪ್ರದಾನಂ ಸಾನ್ತ್ವಂ ವಾ
ಭೇದೋ ವಾತ್ರ ಪ್ರಯುಜ್ಯತಾಮ್ ॥೭॥

ಸೀತೆಯನ್ನು ಶ್ರೀರಾಮನಿಗೆ ಒಪ್ಪಿಸುವುದು ; ಸಾಮೋಪಾಯದಿಂದ ಸಮಾಧಾನದ ಮಾತುಗಳನ್ನಾಡುವುದು ಅಥವಾ ಸುಗ್ರೀವನಿಗೂ ರಾಮನಿಗೂ ಒಡಕು ಉಂಟಾಗುವಂತೆ ಮಾಡುವುದು–ಇವುಗಳಲ್ಲಿ ಯಾವುದನ್ನಾದರೂ ನಿಯೋಜಿಸು."

ಶಾರ್ದೂಲನ ಆ ಮಾತನ್ನು ಕೇಳಿ ರಾಕ್ಷಸೇಶ್ವರನಾದ ರಾವಣನು ವ್ಯಾಕುಲನಾಗಿ, ಆ ಸಮಯದಲ್ಲಿ ತನ್ನ ಕರ್ತವ್ಯವೇನೆಂಬುದನ್ನು ನಿಶ್ಚಯಿಸಿ, ಅರ್ಥಶಾಸ್ತ್ರವನ್ನು ತಿಳಿದವರಲ್ಲಿ ಶ್ರೇಷ್ಠನಾದ ಶುಕನೆಂಬ ರಾಕ್ಷಸನಿಗೆ ತತ್ಕಾಲೋಚಿತವಾದ ಈ ಮಾತನ್ನು ಹೇಳಿದನು :

"ಶುಕ! ನೀನೀಗಲೇ ವಾನರರಾಜನಾದ ಸುಗ್ರೀವನ ಬಳಿಗೆ ಹೋಗು. ಮೃದುವೂ ಮತ್ತು ಉತ್ತಮವೂ ಆದ ಮಾತಿನ ಮೂಲಕವಾಗಿ ವೀರ್ಯವತ್ತಾದ ಈ ಸಂದೇಶವನ್ನು ಹೇಳು :

ತ್ವಂ ವೈ ಮಹಾರಾಜ ಕುಲಪ್ರಸೂತೋ
ಮಹಾಬಲಶ್ಚರ್ಕ್ಷರಜಃಸುತಶ್ಚ ।
ನ ಕಶ್ಚಿದರ್ಥಸ್ತವ ನಾಸ್ತ್ಯನರ್ಥ-
ಸ್ತಥಾ ಹಿ ಮೇ ಭ್ರಾತೃಸಮೋ ಹರೀಶ ॥೧೦॥

"ವಾನರೇಶ್ವರನೇ! ನೀನು ವಾನರಮಹಾರಾಜರ ಕುಲದಲ್ಲಿ ಹುಟ್ಟಿರು

ವವನು. ಆದರಣೀಯನಾದ ಋಕ್ಷರಜಸನ ಮಗನು. ಮಹಾಬಲಿಷ್ಠನೂ ಆಗಿರುವೆ. ನಿನ್ನ ಸ್ನೇಹದಿಂದ ನನಗೆ ಯಾವ ಲಾಭವೂ ಇಲ್ಲ ; ನಷ್ಟವೂ ಇಲ್ಲ. ಆದರೂ ನಿನ್ನನ್ನು ನಾನು ನನ್ನ ಸಹೋದರನಿಗೆ ಸಮಾನನೆಂದು ಭಾವಿಸಿದ್ದೇನೆ.

ಅಹಂ ಯದ್ಯಹರಂ ಭಾರ್ಯಾಂ ರಾಜಪುತ್ರಸ್ಯ ಧೀಮತಃ ।
ಕಿಂ ತತ್ರ ತವ ಸುಗ್ರೀವ ಕಿಷ್ಕಿನ್ಧಾಂ ಪ್ರತಿ ಗಮ್ಯತಾಮ್ ॥೧೧॥

ನಾನು ಧೀಮಂತನಾದ ರಾಜಪುತ್ರನ ಹೆಂಡತಿಯನ್ನು ಅಪಹರಿಸಿದುದ ರಿಂದ ನಿನಗಾದ ನಷ್ಟವೇನು? ಆದುದರಿಂದ ಈಗಲೇ ನೀನು ಕಿಷ್ಕಿಂಧೆಗೆ ಹೊರಟುಹೋಗು.

ನ ಹೀಯಂ ಹರಿಭಿರ್ಲಙ್ಕಾ ಶಕ್ಯಾ ಪ್ರಾಪ್ತುಂ ಕಥಂಚನ ।
ದೇವೈರಪಿ ಸಗನ್ಧರ್ವೈಃ ಕಿಂ ಪುನರ್ನರವಾನರೈಃ ॥೧೨॥

ಈ ಲಂಕಾಪಟ್ಟಣಕ್ಕೆ ಬರಲು ವಾನರರಿಗೆ ಯಾವುದೇ ಪ್ರಯತ್ನ ದಿಂದಲೂ ಸಾಧ್ಯವಾಗುವುದಿಲ್ಲ. ಗಂಧರ್ವರಿಂದ ಕೂಡಿದ ದೇವತೆಗಳಿಗೇ ಇಲ್ಲಿಗೆ ಬರಲು ಸಾಧ್ಯವಿಲ್ಲವೆಂದಮೇಲೆ ನರ-ವಾನರರ ವಿಷಯವಾಗಿ ಹೇಳುವುದೇನಿದೆ?"

ರಾಕ್ಷಸೇಂದ್ರನು ಹೀಗೆ ಸಂದೇಶವಿತ್ತಬಳಿಕ ಶುಕರಾಕ್ಷಸನು ಪಕ್ಷಿಯ ರೂಪವನ್ನು ತಾಳಿ ಬಹಳ ಬೇಗ ಆಕಾಶಕ್ಕೆ ಹಾರಿದನು. ಸಮುದ್ರದ ಮೇಲೆ ಬಹಳ ದೂರದವರೆಗೆ ಹಾರಿಕೊಂಡು ಹೋಗಿ ಉತ್ತರತೀರವನ್ನು ಸೇರಿ ಆಕಾಶ ದಲ್ಲಿಯೇ ನಿಂತು ದುರಾತ್ಮನಾದ ರಾವಣನು ಹೇಳಿದ ಎಲ್ಲ ಮಾತುಗಳನ್ನೂ ಸುಗ್ರೀವನಿಗೆ ಯಥಾವತ್ತಾಗಿ ಹೇಳಿದನು. ಹೀಗೆ ಶುಕನು ರಾವಣನ ಸಂದೇಶ ವನ್ನು ಹೇಳುತ್ತಿದ್ದಂತೆಯೇ ವಾನರರು ಆಕಾಶಕ್ಕೆ ಹಾರಿ ಗಿಣಿಯ ರೂಪ ದಲ್ಲಿದ್ದ ರಾಕ್ಷಸನ ಬಳಿಗೆ ಹೋದರು. ರೆಕ್ಕೆಗಳನ್ನು ಕತ್ತರಿಸಿ ಮುಷ್ಟಿಗಳಿಂದ ಅದನ್ನು ಗುದ್ದಿ ಸಾಯಿಸುವುದೇ ವಾನರರ ಆಶಯವಾಗಿದ್ದಿತು. ಈ ನಿರ್ಧಾರದಿಂದ ಅವರೆಲ್ಲರೂ ಸೇರಿ ಆ ಶುಕರಾಕ್ಷಸನನ್ನು ಬಲಪೂರ್ವಕವಾಗಿ ಬಂಧಿಸಿ ಆಕಾಶದಿಂದ ಭೂಮಿಗೆ ಸೆಳೆದು ತಂದರು. ವಾನರರು ಹೀಗೆ ಪೀಡಿಸುತ್ತಿದ್ದಾಗ ಶುಕನು ರಾಮನಿಗೆ ಹೇಳಿದನು :

ನ ದೂತಾನ್ ಘ್ನನ್ತಿ ಕಾಕುತ್ಸ್ಥ ವಾರ್ಯನ್ತಾಂ ಸಾಧು ವಾನರಾಃ ।
ಯಸ್ತು ಹಿತ್ವಾ ಮತಂ ಭರ್ತುಃ ಸ್ವಮತಂ ಸಂಪ್ರಭಾಷತೇ ।
ಅನುಕ್ತವಾದೀ ದೂತಃ ಸನ್ಸ ದೂತೋ ವಧಮರ್ಹತಿ ॥೧೮॥

"ಕಾಕುತ್ಸ್ಥನೇ! ರಾಘವ! ರಾಜರು ಯಾವಾಗಲೂ ದೂತರನ್ನು ವಧಿಸುವುದಿಲ್ಲ. ಆದುದರಿಂದ ನನ್ನನ್ನು ಹಿಂಸಿಸದಂತೆ ನೀನು ಈ ವಾನರ ರನ್ನು ತಡೆಯಬೇಕು. ಯಾವನು ಸ್ವಾಮಿಯ ಸಂದೇಶವನ್ನು ಯಥಾವತ್ತಾಗಿ ಹೇಳದೇ ತನ್ನದೇ ಆದ ಅಭಿಪ್ರಾಯವನ್ನು ಪ್ರಕಟಿಸುವನೋ–ಅಂತಹ ದೂತನು ಹೇಳಬಾರದ ಮಾತನ್ನು ಹೇಳಿದ ಅಪರಾಧಕ್ಕೆ ಗುರಿಯಾಗುವನು. ಅಂತಹ ದೂತನು ತಾನೇ ವಧಾರ್ಹನಾಗುತ್ತಾನೆ."

ಶುಕನು ವಿಲಪಿಸುತ್ತಾ ಹೇಳಿದ ಆ ಮಾತನ್ನು ಕೇಳಿ ಶ್ರೀರಾಮನು ರಾಕ್ಷಸನನ್ನು ಪ್ರಹರಿಸುತ್ತಿದ್ದ ವಾನರಶ್ರೇಷ್ಠರಿಗೆ 'ಮಾ ವಧಿಷ್ಠ–ದೂತನನ್ನು ಹಿಂಸಿಸಬೇಡಿರಿ'–ಎಂದು ಆಜ್ಞಾಪಿಸಿದನು. ಆ ವೇಳೆಗಾಗಲೇ ವಾನರರ ಪ್ರಹಾರದಿಂದ ಆ ಗಿಣಿಯ ರೆಕ್ಕೆಗಳು ಉದುರಿಹೋಗಿದ್ದುವು. ಶ್ರೀರಾಮನ ಆಜ್ಞೆಯಂತೆ ಮುಂದೆ ಪ್ರಹರಿಸುವುದಿಲ್ಲವೆಂದು ವಾನರರು ಅಭಯ ದಾನಮಾಡಿದನಂತರ ಪುನಃ ಆಕಾಶಕ್ಕೆ ಹಾರಿ ಅಲ್ಲಿಯೇ ನಿಂತು ಶುಕರೂಪ ದಲ್ಲಿದ್ದ ಆ ರಾಕ್ಷಸನು ಹೇಳಿದನು :

"ಸತ್ತ್ವಸಂಪನ್ನನೇ! ಮಹಾಬಲಪರಾಕ್ರಮನೇ! ಸುಗ್ರೀವ! ಲೋಕರಾವಣನಾದ ರಾವಣನಿಗೆ ನಾನೇನೆಂದು ಹೇಳಲಿ?"

ಶುಕನು ಹೀಗೆ ಪ್ರಶ್ನಿಸಲು ಕಪಿಗಳಿಗೆ ಅಧಿಪತಿಯಾದ, ಕಪಿಶ್ರೇಷ್ಠನಾದ, ಮಹಾಬಲನಾದ, ಮಹಾಸತ್ತ್ವಸಂಪನ್ನನಾದ ಸುಗ್ರೀವನು ಆ ರಾಕ್ಷಸದೂತ ನಿಗೆ ಸ್ಪಷ್ಟವಾದ ಮತ್ತು ಶುದ್ಧವಾದ ಈ ಮಾತನ್ನು ಹೇಳಿದನು :

ನ ಮೇಽಸಿ ಮಿತ್ರಂ ನ ತಥಾನುಕಮ್ಪ್ಯೋ
ನ ಚೋಪಕರ್ತಾಸಿ ನ ಮೇ ಪ್ರಿಯೋಽಸಿ ।
ಅರಿಶ್ಚ ರಾಮಸ್ಯ ಸಹಾನುಬನ್ಧ-
ಸ್ತತೋಽಸಿ ವಾಲೀವ ವಧಾರ್ಹ ವಧ್ಯಃ ॥೨೩॥

"ವಧಾರ್ಹನಾದ ದಶಮುಖನೇ! ನೀನು ನನ್ನ ಮಿತ್ರನೂ ಅಲ್ಲ.

ದಯೆಗೆ ಪಾತ್ರನಾದವನೂ ಅಲ್ಲ. ನೀನು ನನಗೆ ಯಾವ ಉಪಕಾರವನ್ನೂ ಮಾಡಿರುವುದಿಲ್ಲ. ಆದುದರಿಂದ ನೀನು ನನಗೆ ಪ್ರಿಯನೂ ಅಲ್ಲ. ನೀನು ನನ್ನ ಮಿತ್ರನಾದ ರಾಮನಿಗೆ ಶತ್ರುವಾಗಿರುವೆ. ಆದುದರಿಂದ ನನಗೂ ನೀನು ಶತ್ರುವೇ ಸರಿ. ಆದುದರಿಂದ ವಾಲಿಯಂತೆ ಬಂಧು-ಮಿತ್ರರ ಸಹಿತನಾಗಿ ನೀನೂ ವಧಾರ್ಹನಾಗಿರುವೆ.

ರಜನೀಚರೇಶನೇ! ಪುತ್ರ-ಬಂಧು-ಕುಟುಂಬದವರ ಸಮೇತವಾಗಿ ನಿನ್ನನ್ನು ಸಂಹರಿಸುತ್ತೇನೆ. ಮಹಾಸೈನ್ಯಸಮೇತನಾಗಿ ಬಂದು ಸಮಗ್ರವಾದ ಲಂಕಾಪಟ್ಟಣವನ್ನು ಭಸ್ಮಮಾಡುತ್ತೇನೆ. ಇಂದ್ರಸಹಿತರಾದ ದೇವತೆಗಳಿಂದ ರಕ್ಷಿಸಲ್ಪಟ್ಟರೂ, ಆಕಾಶಕ್ಕೆ ಹೋಗಿ ಮಾಯವಾದರೂ, ಪಾತಾಲದಲ್ಲಿ ಹೊಕ್ಕಿಕೊಂಡರೂ–ನೀನು ರಾಘವನಿಂದ ತಪ್ಪಿಸಿಕೊಳ್ಳಲಾರೆ. ಸಹೋದರರಿಂದೊಡಗೂಡಿದ ನೀನು ಖಂಡಿತವಾಗಿಯೂ ಶ್ರೀರಾಮನಿಂದ ಹತನಾಗುವೆ. ಮೂರುಲೋಕಗಳಲ್ಲಿ ನಿನ್ನನ್ನು ರಕ್ಷಿಸುವವರು ಪಿಶಾಚ-ರಾಕ್ಷಸರಲ್ಲಾಗಲೀ, ಗಂಧರ್ವಾಸುರರಲ್ಲಾಗಲೀ ಯಾರೂ ನನಗೆ ಕಾಣುತ್ತಿಲ್ಲ. ನೀನೆಂತಹ ಪರಾಕ್ರಮಿಯೆಂಬುದನ್ನು ನಾನು ಬಲ್ಲೆನು. ಮೃತ್ಯುದೇವತೆಯ ಮಗಳಾದ ಜರಾ ಎಂಬುವಳ ಅತಿಕ್ರಮಣದಿಂದ ವೃದ್ಧನಾಗಿ ಅಸಮರ್ಥನಾಗಿದ್ದ ಜಟಾಯುವನ್ನು ಸಂಹರಿಸಿದೆ. ವಿಶಾಲಾಕ್ಷಿಯಾದ ಸೀತಾದೇವಿಯು ರಾಮನ ಸನ್ನಿಧಿಯಲ್ಲಾಗಲೀ ಲಕ್ಷ್ಮಣನ ಸಮೀಪದಲ್ಲಾಗಲೀ ಇದ್ದಾಗ ಅವಳನ್ನೇಕೆ ನೀನು ಅಪಹರಿಸಲಿಲ್ಲ? ಇದರಿಂದಲೇ ನಿನ್ನ ಪರಾಕ್ರಮವೆಷ್ಟೆಂಬುದು ಸ್ಪಷ್ಟವಾಗಿದೆ. ಆದರೆ ಹಾಗೆ ನೀನು ಅಪಹರಿಸುವುದರಿಂದ ಮುಂದೆ ವಿಪತ್ತು ಸಂಭವಿಸುವುದೆಂಬುದನ್ನು ನೀನು ಆಗ ತಿಳಿಯಲಿಲ್ಲ. ರಘುಕುಲತಿಲಕನಾದ ಮಹಾತ್ಮನಾದ ಶ್ರೀರಾಮನು ಮಹಾಬಲಿಷ್ಠನೆಂಬುದನ್ನೂ ದೇವತೆಗಳಿಂದಲೂ ಎದುರಿಸಲು ಅಸಾಧ್ಯನೆಂಬುದನ್ನೂ ನೀನು ತಿಳಿದಿಲ್ಲ. ಅವನೇ ನಿನ್ನ ಪ್ರಾಣಗಳನ್ನು ಅಪಹರಿಸುತ್ತಾನೆ."

ಸುಗ್ರೀವನು ಹೀಗೆ ಹೇಳಿದನಂತರ ಹರಿಶ್ರೇಷ್ಠನಾದ ಅಂಗದನು ಹೇಳಿದನು :

"ಮಹಾರಾಜ! ಇವನು ದೂತನಲ್ಲ. ಇವನೊಬ್ಬ ಗೂಢಚಾರನಿರ

ಬಹುದೆಂದು ನನಗೆ ಭಾಸವಾಗುತ್ತಿದೆ. ಇವನು ಇಲ್ಲಿ ನಿಂತಿರುವಂತೆಯೇ ನಿನ್ನ ಸೇನಾಬಲವೆಷ್ಟಿರುವುದೆಂಬುದನ್ನು ತುಲನೆ ಮಾಡುತ್ತಿದ್ದಾನೆ. ಆದುದರಿಂದ ಲಂಕೆಗೆ ಹೋಗದಂತೆ ಇವನನ್ನು ಇಲ್ಲಿಯೇ ಬಂಧನದಲ್ಲಿಡುವುದು ನನಗೆ ಉಚಿತವಾಗಿ ಕಾಣುತ್ತದೆ.''

ಅಂಗದನು ಹೀಗೆ ಹೇಳುತ್ತಲೇ ಸುಗ್ರೀವನು ಶುಕನನ್ನು ಬಂಧಿಸುವಂತೆ ವಾನರಸೈನಿಕರಿಗೆ ಆಜ್ಞೆಮಾಡಿದನು. ಒಡನೆಯೇ ವಾನರಸೈನಿಕರು ಮೇಲೆ ಹಾರಿ ಅನಾಥನಂತೆ ವಿಲಪಿಸುತ್ತಿದ್ದ ಶುಕರಾಕ್ಷಸನನ್ನು ಹಿಡಿದು ಬಂಧಿಸಿದರು. ಕೋಪಿಷ್ಠರಾದ ವಾನರರಿಂದ ಪೀಡಿಸಲ್ಪಡುತ್ತಿದ್ದ ಶುಕನು ಮಹಾತ್ಮನಾದ ದಶರಥನ ಮಗನಾದ ರಾಮನಿಗೆ ಹೇಳಿದನು :

``ಪ್ರಭುವೇ! ನನ್ನ ರೆಕ್ಕೆಗಳು ಕತ್ತರಿಸಲ್ಪಡುತ್ತಿವೆ. ನನ್ನ ಕಣ್ಣುಗಳು ಭೇದಿಸಲ್ಪಡುತ್ತಿವೆ.

ಯಾಂ ಚ ರಾತ್ರಿಂ ಮರಿಷ್ಯಾಮಿ
ಜಾಯೇ ರಾತ್ರಿಂ ಚ ಯಾಮಹಮ್ ।

ಏತಸ್ಮಿನ್ನನ್ತರೇ ಕಾಲೇ ಯನ್ಮಯಾ ಹ್ಯಶುಭಂ ಕೃತಮ್ ।
ಸರ್ವಂ ತದುಪಪದ್ಯೇಥಾ ಜಹ್ಯಾಂ ಚೇದ್ಯದಿ ಜೀವಿತಮ್ ॥೩೩॥

ರಾಮ! ನಾನೇನಾದರೂ ಈಗ ನಿನ್ನ ಸೈನಿಕರು ಕೊಡುತ್ತಿರುವ ಕಿರುಕುಳದಿಂದ ಪ್ರಾಣಗಳನ್ನು ತೊರೆದೆನಾದರೆ–ನಾನು ಹುಟ್ಟಿದ ರಾತ್ರಿಯಿಂದ ಸಾಯುವ ರಾತ್ರಿಯವರೆಗೆ ಎಷ್ಟೆಷ್ಟು ಪಾಪಗಳನ್ನು ಮಾಡಿರುವೆನೋ ಆ ಎಲ್ಲ ಪಾಪಗಳನ್ನೂ ನೀನೇ ಭರಿಸಬೇಕಾಗುತ್ತದೆ.''

ಶುಕನು ಮಾಡುತ್ತಿದ್ದ ಪ್ರಲಾಪವನ್ನು ಕೇಳಿ ಶ್ರೀರಾಮನು ಹಿಂಸಿಸುವುದನ್ನು ನಿಲ್ಲಿಸುವಂತೆ ವಾನರರಿಗೆ ಹೇಳಿ ದೂತನಾಗಿ ಬಂದಿರುವ ಶುಕನನ್ನು ಬಿಡುಗಡೆಮಾಡುವಂತೆಯೂ ಆಜ್ಞಾಪಿಸಿದನು.

೨೦ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೨೧ನೆಯ ಸರ್ಗ

ಸಮುದ್ರತೀರದಲ್ಲಿ ಶ್ರೀರಾಮನ ಪ್ರಾಯೋಪವೇಶ : ಸಮುದ್ರರಾಜನು ಬಾರದಿರಲು ಕುಪಿತನಾಗಿ ಸಮುದ್ರನ ಮೇಲೆ ಬಾಣಪ್ರಯೋಗ

ತತಃ ಸಾಗರವೇಲಾಯಾಂ ದರ್ಭಾನಾಸ್ತೀರ್ಯ ರಾಘವಃ ।
ಅಞ್ಜಲಿಂ ಪ್ರಾಙ್ಮುಖಃ ಕೃತ್ವಾ ಪ್ರತಿಶಿಶ್ಯೇ ಮಹೋದಧಿಮ್ ॥೧॥

ಬಳಿಕ ಶ್ರೀರಾಮನು ಸಮುದ್ರತೀರದಲ್ಲಿ ದರ್ಭೆಯನ್ನು ಹಾಸಿ ಸಮುದ್ರಕ್ಕೆ ನಮಸ್ಕರಿಸಿ ಅದಕ್ಕೆ ಎದುರಾಗಿ ಮಲಗಿದನು.

ಆ ಸಮಯದಲ್ಲಿ ಶತ್ರುಸೂದನನಾದ ಶ್ರೀರಾಮನು ಸರ್ಪದ ಶರೀರ ದಂತೆ ಸುಕೋಮಲವಾಗಿದ್ದ, ಹಿಂದೆ ಸುವರ್ಣಮಯವಾದ ಆಭರಣಗಳಿಂದ ಅಲಂಕರಿಸಲ್ಪಡುತ್ತಿದ್ದ ತನ್ನ ಬಲತೋಳನ್ನು ತಲೆದಿಂಬನ್ನಾಗಿ ಮಾಡಿ ಕೊಂಡಿದ್ದನು.

ಅಯೋಧ್ಯೆಯಲ್ಲಿದ್ದಾಗ ಮಣಿಗಳಿಂದಲೂ ಸುವರ್ಣದಿಂದಲೂ ನಿರ್ಮಿಸ ಲ್ಪಟ್ಟಿದ್ದ ಕೇಯೂರಗಳಿಂದಲೂ, ಶ್ರೇಷ್ಠವಾದ ಮುತ್ತುಗಳ ಆಭರಣ ಗಳಿಂದಲೂ ಭೂಷಿತವಾಗಿದ್ದ ಭುಜಗಳಿಂದ ಕೂಡಿದ್ದ, ಶ್ರೇಷ್ಠರಾದ ನಾರಿಯ ರಿಂದ* ಸ್ಪರ್ಶಿಸಲ್ಪಡುತ್ತಿದ್ದ ಬಲತೋಳನ್ನು ತಲೆದಿಂಬನ್ನಾಗಿ ಮಾಡಿಕೊಂಡು ಮಲಗಿದ್ದನು. ಹಿಂದೆ ಅರಮನೆಯಲ್ಲಿದ್ದಾಗ ಆ ಬಲತೋಳನ್ನು ವರನಾರಿ ಯರು ಚಂದನ, ಅಗುರು ಇವೇ ಮುಂತಾದ ಸುಗಂಧದ್ರವ್ಯಗಳನ್ನು ಪೂಸಿ ಅಲಂಕರಿಸುತ್ತಿದ್ದರು. ಬಾಲಸೂರ್ಯನಂತೆ ಪ್ರಕಾಶಮಾನವಾಗಿದ್ದ ರಕ್ತ ಚಂದನದಿಂದ ಆ ಬಲತೋಳು ಅತ್ಯಂತಶೋಭಾಯಮಾನವಾಗಿ ಕಾಣುತ್ತಿ ದ್ದಿತು. ಅರಮನೆಯಲ್ಲಿದ್ದಾಗ ಚಂದನಚರ್ಚಿತವಾದ ಆ ತೋಳು ಸೀತೆ ಯೊಡನೆ ಮಲಗಿದ್ದ ಸಮಯದಲ್ಲಿ ಅವಳ ಕತ್ತಿನ ಸುತ್ತಲೂ ಶೋಭಿಸುತ್ತಿ ದ್ದಿತು. ಶ್ವೇತವರ್ಣದ ಹಂಸತೂಲಿಕಾತಲ್ಪದ ಮೇಲೆ ಕಂಗೊಳಿಸುತ್ತಿದ್ದ ಆ

---

* ಪರಮನಾರಿಯರು–ಶ್ರೇಷ್ಠರಾದ ಮಾತೃಜನರು ಮತ್ತು ದಾಸೀಜನರು. ಅವರಿಂದ ಸ್ಪರ್ಶಿಸಲ್ಪಡುತ್ತಿದ್ದ. ಸ್ನಾನಾದಿಸಮಯಗಳಲ್ಲಿ ಅಲಂಕರಿಸುವ ಸಮಯದಲ್ಲಿ ಬಲತೋಳನ್ನು ಮುಟ್ಟುತ್ತಿದ್ದರು–ಎಂದರ್ಥ.

ದಿವ್ಯಬಾಹುವು ಗಂಗೆಯ ನೀರಿನಲ್ಲಿ ವಾಸಮಾಡುತ್ತಿರುವ ತಕ್ಷಕನ ಎಣ್ಣೆಗೆಂಪಿನ ಶರೀರದಂತೆಯೇ ಪ್ರಕಾಶಿಸುತ್ತಿದ್ದಿತು. ನೇಗಿಲಿನಂತೆ ಸುದೀರ್ಘವಾಗಿದ್ದ ಆ ಬಾಹುವು ಯುದ್ಧದಲ್ಲಿ ಶತ್ರುಗಳ ಶೋಕವನ್ನು ಹೆಚ್ಚಿಸುತ್ತಿದ್ದಿತು. ಸುಹೃದರಿಗೆ ಸಂತೋಷವನ್ನುಂಟುಮಾಡುವುದಾಗಿದ್ದಿತು. ಸಾಗರಾಂತವಾದ ಭೂಮಂಡಲದ ರಕ್ಷಣೆಯೂ ಆ ದೀರ್ಘವಾದ ಬಾಹುವನ್ನೇ ಆಶ್ರಯಿಸಿದ್ದಿತು. ಇಂತಹ ಬಲತೋಳನ್ನು ತಲೆದಿಂಬಾಗಿಟ್ಟುಕೊಂಡು ಶ್ರೀರಾಮನು ಮಲಗಿದನು.

ಪುನಃ ಪುನಃ ಬಿಲ್ಲಿನ ನಾಣನ್ನು ಸೆಳೆಯುತ್ತಿದ್ದ ಕಾರಣ ಜಡ್ಡುಕಟ್ಟಿದ್ದ, ದೊಡ್ಡ ಪರಿಘಾಯುಧಕ್ಕೆ ಸಮಾನವಾಗಿಯೂ ಸುದೃಢವಾಗಿಯೂ ಬಲಿಷ್ಠವಾಗಿಯೂ ಇದ್ದ, ಸಾವಿರಾರು ಗೋವುಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದ್ದ, ಸುದೀರ್ಘವಾಗಿದ್ದ ಬಲದತೋಳನ್ನು ತಲೆದಿಂಬನ್ನಾಗಿ ಮಾಡಿ ಕೊಂಡು ಶ್ರೀರಾಮನು ಮಲಗಿದನು.

ಅದ್ಯ ಮೇ ಮರಣಂ ವಾಥ ತರಣಂ ಸಾಗರಸ್ಯ ವಾ ॥೮॥

ಈಗ ನಾನು ಸಮುದ್ರವನ್ನಾದರೂ ದಾಟುವಂತಾಗಬೇಕು. ಅಥವಾ ಮರಣವನ್ನಾದರೂ ಅಪ್ಪಬೇಕು.

ಹೀಗೆ ಶ್ರೀರಾಮನು ದೃಢಸಂಕಲ್ಪಮಾಡಿ ಮೌನಿಯಾಗಿ ಮಾತು ಮತ್ತು ಶರೀರಗಳನ್ನು ಸಂಯಮದಲ್ಲಿರಿಸಿ ವಿಧಿವತ್ತಾಗಿ ಸಮುದ್ರಕ್ಕೆ ಅಭಿಮುಖವಾಗಿ ಮಲಗಿದನು.

ಹೀಗೆ ಶ್ರೀರಾಮನು ದರ್ಭೆಯ ಹಾಸಿಗೆಯಲ್ಲಿ ನಿಯಮಪೂರ್ವಕವಾಗಿ ಅಪ್ರಮತ್ತನಾಗಿ ಉಪವೇಶವ್ರತವನ್ನು ಆಚರಿಸುತ್ತಿದ್ದಂತೆಯೇ ಮೂರು ರಾತ್ರಿಗಳು ಕಳೆದುಹೋದುವು. ನೀತಿಜ್ಞನಾದ, ಧರ್ಮವತ್ಸಲನಾದ ಶ್ರೀರಾಮನು ಮೂರು ರಾತ್ರಿಗಳವರೆಗೆ ಸತ್ಯಾಗ್ರಹದಲ್ಲಿದ್ದು ನದೀ-ನದಗಳ ಪತಿಯಾದ ಸಮುದ್ರರಾಜನನ್ನು ಉಪಾಸನೆಮಾಡಿದನು. ಹೀಗೆ ಶ್ರೀರಾಮನು ಯಥಾಯೋಗ್ಯವಾಗಿ ಪೂಜಿಸಿದರೂ ವಿನೀತಭಾವದಿಂದ ಪ್ರಾರ್ಥಿಸಿಕೊಂಡರೂ ಮಂದಬುದ್ಧಿಯವನಾದ ಸಮುದ್ರರಾಜನು ತನ್ನ ಸ್ವರೂಪವನ್ನು ತೋರಿಸಿಕೊಳ್ಳಲಿಲ್ಲ.

ಕೆಂಪಾದ ಕಡೆಗಣ್ಣುಗಳಿಂದ ಕೂಡಿದ್ದ ಶ್ರೀರಾಮನು ಸಮುದ್ರರಾಜನ

ವಿಷಯದಲ್ಲಿ ಅತ್ಯಂತಕ್ರುದ್ಧನಾಗಿ ಸಮೀಪದಲ್ಲಿಯೇ ಇದ್ದ ಶುಭಲಕ್ಷಣ ಸಂಪನ್ನನಾದ ಲಕ್ಷ್ಮಣನಿಗೆ ಹೇಳಿದನು :

"ಸಮುದ್ರರಾಜನಿಗೆ ಅತಿಗರ್ವವಿದೆ. ಈ ಕಾರಣದಿಂದಲೇ ಅವನು ಪ್ರಾರ್ಥಿಸಿಕೊಂಡರೂ ತಾನೇ ತಾನಾಗಿ ನನ್ನ ಬಳಿಗೆ ಬರುತ್ತಿಲ್ಲ.

ಪ್ರಶಮಶ್ಚ ಕ್ಷಮಾ ಚೈವ ಆರ್ಜವಂ ಪ್ರಿಯವಾದಿತಾ ।
ಅಸಾಮರ್ಥ್ಯಂ ಫಲನ್ತ್ಯೇತೇ ನಿರ್ಗುಣೇಷು ಸತಾಂ ಗುಣಾಃ ॥೧೪॥

ಶಾಂತಿ, ಕ್ಷಮೆ, ಸರಳತೆ, ಸವಿಮಾತು–ಇವು ಸತ್ಪುರುಷರ ಲಕ್ಷಣಗಳಾಗಿವೆ. ಈ ಗುಣಗಳನ್ನು ಗುಣಹೀನರಲ್ಲಿ ಪ್ರಯೋಗಿಸಿದರೆ ಇವನ್ನು ಪ್ರಯೋಗಿಸಿದ ಸತ್ಪುರುಷರು ಅಸಮರ್ಥರೆಂಬ ಭಾವನೆಯುಂಟಾಗುತ್ತದೆ.

ಆತ್ಮಪ್ರಶಂಸಿನಂ ದುಷ್ಟಂ ಧೃಷ್ಟಂ ವಿಪರಿಧಾವಕಮ್ ।
ಸರ್ವತ್ರೋತ್ಸೃಷ್ಟದಣ್ಡಂ ಚ ಲೋಕಃ ಸತ್ಕುರುತೇ ನರಮ್ ॥೧೫॥

ಆತ್ಮಪ್ರಶಂಸೆಮಾಡಿಕೊಳ್ಳುವವನನ್ನೂ, ದುಷ್ಟನನ್ನೂ, ನಾಚಿಕೆಗೆಟ್ಟವನನ್ನೂ, ತನ್ನನ್ನು ಹೊಗಳಿಕೊಳ್ಳುತ್ತಾ ಸರ್ವತ್ರ ಸಂಚರಿಸುವವನನ್ನೂ, ದುಷ್ಟರು-ಶಿಷ್ಟರು ಎಂಬ ತಾರತಮ್ಯವೇ ಇಲ್ಲದೇ ಎಲ್ಲರ ಮೇಲೂ ದಂಡ ಪ್ರಯೋಗಮಾಡುವವನನ್ನೂ ಜನರು ಸತ್ಕರಿಸುತ್ತಾರೆ.

ನ ಸಾಮ್ನಾ ಶಕ್ಯತೇ ಕೀರ್ತಿರ್ನ ಸಾಮ್ನಾ ಶಕ್ಯತೇ ಯಶಃ ।
ಪ್ರಾಪ್ತುಂ ಲಕ್ಷ್ಮಣ ಲೋಕೇಽಸ್ಮಿಞ್ಜಯೋ ವಾ ರಣಮೂರ್ಧನಿ ॥೧೬॥

ಲಕ್ಷ್ಮಣ! ಈ ಲೋಕದಲ್ಲಿ ಸಾಮೋಪಾಯದಿಂದ ಕೀರ್ತಿಯಾಗಲೀ ಯಶಸ್ಸಾಗಲೀ ಲಭಿಸುವುದಿಲ್ಲ ಮತ್ತು ಸಾಮೋಪಾಯದಿಂದ ರಣರಂಗದಲ್ಲಿ ವಿಜಯವೂ ಲಭಿಸುವುದಿಲ್ಲ.

ಆದುದರಿಂದ ನಾನೀಗಲೇ ಈ ಸಮುದ್ರವನ್ನು ಅಲ್ಲೋಲ-ಕಲ್ಲೋಲ ಮಾಡಿಬಿಡುತ್ತೇನೆ. ನನ್ನ ಬಾಣಗಳಿಂದ ತುಂಡು-ತುಂಡುಗಳಾಗಿ ಕತ್ತರಿಸಲ್ಪಡುವ ಮೊಸಳೆ-ಮೀನುಗಳು ನೀರಿನ ಮೇಲೆ ತೇಲಿಬಂದು ಆ ಜಲಚರ ಪ್ರಾಣಿಗಳ ದೇಹಗಳಿಂದಲೇ ಆಚ್ಛಾದಿತವಾಗುವ ಈ ಸಮುದ್ರವನ್ನು ಈ ಕ್ಷಣದಲ್ಲಿಯೇ ನೀನು ಕಾಣಲಿರುವೆ. ಸರ್ಪಗಳ ಹೆಡೆಗಳು ಛಿನ್ನ-ಭಿನ್ನವಾಗುವುದನ್ನೂ, ಮೀನುಗಳ ಮಹಾಶರೀರಗಳು ಭಿನ್ನವಾಗುವುದನ್ನೂ, ನೀರಾನೆಗಳ

ಸೊಂಡಿಲುಗಳು ಭಿನ್ನ-ಭಿನ್ನವಾಗುವುದನ್ನೂ ಈಗಲೇ ನೀನು ಕಾಣಲಿರುವೆ. ಶಂಖಗಳ, ಕಪ್ಪೆಚಿಪ್ಪುಗಳ ಸಮುದಾಯದಿಂದ ಕೂಡಿರುವ, ಮೀನುಗಳಿಂದಲೂ ಮೊಸಳೆಗಳಿಂದಲೂ ತುಂಬಿರುವ ಈ ಸಮುದ್ರವನ್ನು ಮಹಾಯುದ್ಧದ ಮೂಲಕವಾಗಿ ಒಣಗಿಸಿಬಿಡುತ್ತೇನೆ.

ಕ್ಷಮಯಾ ಹಿ ಸಮಾಯುಕ್ತಂ ಮಾಮಯಂ ಮಕರಾಲಯಃ ।
ಅಸಮರ್ಥಂ ವಿಜಾನಾತಿ ಧಿಕ್ ಕ್ಷಮಾಮೀದೃಶೇ ಜನೇ ॥೨೦॥

ಮೊಸಳೆಗಳಿಗೆ ನಿವಾಸಸ್ಥಾನನಾದ ಈ ಸಮುದ್ರನು ಕ್ಷಮಾಗುಣದಿಂದ ಸಂಪನ್ನನಾಗಿರುವ ನನ್ನನ್ನು ಅಸಮರ್ಥನೆಂದು ಭಾವಿಸಿದ್ದಾನೆ. ಇಂತಹ ಮೂರ್ಖರ ವಿಷಯದಲ್ಲಿ ತೋರುವ ಈ ನನ್ನ ಕ್ಷಮೆಗೆ ಧಿಕ್ಕಾರವಿರಲಿ.

ಲಕ್ಷ್ಮಣ! ನಾನೀಗ ಸಾಮನೀತಿಯನ್ನು ಆಶ್ರಯಿಸಿರುವುದರಿಂದ ಸಮುದ್ರನು ಸಶರೀರನಾಗಿ ಬಂದು ನನಗೆ ಕಾಣಿಸಿಕೊಳ್ಳುತ್ತಿಲ್ಲ. ನನ್ನ ಬಿಲ್ಲನ್ನೂ-ವಿಷಸರ್ಪಗಳಂತಿರುವ ಬಾಣಗಳನ್ನೂ ಈಗಲೇ ತೆಗೆದುಕೊಂಡು ಬಾ. ಬಾಣಗಳಿಂದ ಈ ಸಮುದ್ರವನ್ನೇ ಸಂಪೂರ್ಣವಾಗಿ ಬತ್ತಿಸಿಬಿಡುತ್ತೇನೆ. ವಾನರರು ಕಾಲ್ನಡಿಗೆಯಲ್ಲಿಯೇ ಇದನ್ನು ದಾಟಿಕೊಂಡು ಹೋಗಲಿ. ಸಮುದ್ರನನ್ನು ಕ್ಷೋಭೆಗೊಳ್ಳದವನೆಂದು ಹೇಳುತ್ತಾರೆ. ಆದರೂ ಕ್ರುದ್ಧನಾದ ನಾನಿಂದು ಇವನನ್ನು ಕ್ಷೋಭೆಗೊಳಿಸುತ್ತೇನೆ. ಅಲ್ಲೋಲ-ಕಲ್ಲೋಲ ಮಾಡಿಬಿಡುತ್ತೇನೆ. ಸಾವಿರಾರು ಅಲೆಗಳಿಂದ ಕೂಡಿರುವ ಈ ಸಮುದ್ರನಿಗೆ ತೀರಪ್ರದೇಶಗಳಲ್ಲಿ ಮರ್ಯಾದೆಯಿದೆ. ನಾನಿಂದು ನನ್ನ ಬಾಣಗಳಿಂದ ವರುಣನಿಗೆ ಆಲಯವಾಗಿರುವ ಈ ಸಮುದ್ರನನ್ನು ಮರ್ಯಾದಾರಹಿತನನ್ನಾಗಿ ಮಾಡಿಬಿಡುವೆನು. ಮಹಾ-ಮಹಾದಾನವರಿಂದ ಸಮಾಕುಲವಾಗಿರುವ ಈ ಸಮುದ್ರವನ್ನು ಅಲ್ಲೋಲ-ಕಲ್ಲೋಲಗೊಳಿಸಿಬಿಡುತ್ತೇನೆ."

ಹೀಗೆ ಹೇಳುತ್ತಾ ಎದುರಿಸಲು ಅಸಾಧ್ಯನಾದ ವೀರನಾದ ಶ್ರೀರಾಮನು ಧನುಸ್ಸನ್ನೆತ್ತಿಕೊಂಡನು. ಕೋಪದಿಂದ ಅವನ ಕಣ್ಣುಗಳು ಸುತ್ತುತ್ತಿದ್ದುವು. ಆ ಸಮಯದಲ್ಲವನು ಪ್ರಳಯಕಾಲದ ಅಗ್ನಿಯಂತೆಯೇ ಪ್ರಜ್ವಲಿಸುತ್ತಿದ್ದನು. ಶ್ರೀರಾಮನು ತನ್ನ ಕೈಲಿದ್ದ ಘೋರವಾದ ಧನುಸ್ಸನ್ನು ಬಗ್ಗಿಸಿ ಅದರಲ್ಲಿ ಬಾಣದ ಹೂಡುವಿಕೆಯಿಂದ ಜಗತ್ತನ್ನೇ ಭಯಪಡಿಸುತ್ತಾ ಇಂದ್ರನು ವಜ್ರಾಯುಧವನ್ನು ಪ್ರಯೋಗಿಸುವಂತೆ ಭಯಂಕರವಾದ ಬಾಣಗಳನ್ನು ಪ್ರಯೋ

ಗಿಸತೊಡಗಿದನು. ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ, ಮಹಾವೇಗಶಾಲಿಗಳಾದ, ಶ್ರೇಷ್ಠವಾದ ಶ್ರೀರಾಮನ ಆ ಬಾಣಗಳು ಭಯಗೊಂಡ ಸರ್ಪಗಳಿಂದ ಕೂಡಿದ ಸಮುದ್ರವನ್ನು ಹೊಕ್ಕುವು. ಮತ್ಸ್ಯ ಮತ್ತು ಮಕರಗಳಿಂದ ಕೂಡಿದ ಸಮುದ್ರದ ನೀರಿನ ವೇಗವು ಅತ್ಯಂತಭಯಂಕರವಾದ ರೀತಿಯಲ್ಲಿದ್ದಿತು. ಹಾಗೆಯೇ ಬಿರುಗಾಳಿಯೂ ಶಬ್ದಮಾಡುತ್ತಾ ಬಹಳ ಭಯಂಕರವಾಗಿ ಬೀಸು ತ್ತಿದ್ದಿತು. ಆ ಸಮಯದಲ್ಲಿ ಸಮುದ್ರವು ದೊಡ್ಡ ದೊಡ್ಡ ಅಲೆಗಳಿಂದ ತುಂಬಿ ಹೋಗಿದ್ದಿತು. ಶಂಖಗಳಿಂದಲೂ ಕಪ್ಪೇಚಿಪ್ಪುಗಳಿಂದಲೂ ಸಮಾವೃತವಾಗಿ ದ್ದಿತು. ಆ ಮಹಾಸಮುದ್ರದ ಅಲೆಗಳು ಧೂಮದಿಂದ ಕೂಡಿ ಗರ-ಗರನೆ ಸುತ್ತುತ್ತಿದ್ದುವು. ದೇದೀಪ್ಯಮಾನವಾದ ಮುಖಗಳಿಂದಲೂ ಮತ್ತು ಕಣ್ಣು ಗಳಿಂದಲೂ ಕೂಡಿದ್ದ ಸಮುದ್ರದಲ್ಲಿದ್ದ ಸರ್ಪಗಳೂ ಮತ್ತು ಪಾತಾಲತಲ ವಾಸಿಗಳಾದ ದಾನವರೂ ವ್ಯಾಕುಲಗೊಂಡರು. ನದಿಗಳಿಗೆ ಒಡೆಯನಾದ ಸಮುದ್ರನ ಮೀನು, ಮೊಸಳೆಗಳಿಂದ ಕೂಡಿದ, ವಿಂಧ್ಯ ಮತ್ತು ಮಂದರ ಪರ್ವತಕ್ಕೆ ಸಮಾನವಾದ ಅಲೆಗಳು ಸಾವಿರಾರು ಸಂಖ್ಯೆಯಲ್ಲಿ ಸತತವಾಗಿ ಮೇಲೆದ್ದು ಬರುತ್ತಿದ್ದುವು. ಸಮುದ್ರದಲ್ಲಿದ್ದ ಅಲೆಗಳ ಸಮೂಹಗಳು ಗರ- ಗರನೆ ತಿರುಗುತ್ತಿದ್ದುವು. ಸರ್ಪಗಳೂ ಮತ್ತು ರಾಕ್ಷಸರೂ ಭ್ರಾಂತರಾದರು. ದೊಡ್ಡ ದೊಡ್ಡ ಮೊಸಳೆಗಳು ಮೇಲಕ್ಕೆ ಎಸೆಯಲ್ಪಡುತ್ತಿದ್ದುವು. ಸಮುದ್ರವು ಘೋರ್ಗರೆಯುವ ಶಬ್ದದಿಂದ ಕೂಡಿದ್ದಿತು.

ಬಳಿಕ ಶ್ರೀರಾಮನು ದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಅನುಪಮ ವಾದ ಮತ್ತು ವೇಗಶಾಲಿಯಾದ ತನ್ನ ಧನುಸ್ಸಿನ ನಾಣನ್ನು ಪುನಃ ಸೆಳೆಯ ತೊಡಗಿದನು. ಅದನ್ನು ನೋಡಿ ಸುಮಿತ್ರೆಯ ಮಗನಾದ ಲಕ್ಷ್ಮಣನು ಒಡ ನೆಯೇ ಹಾರಿ ಶ್ರೀರಾಮನ ಬಳಿಗೆ ಹೋಗಿ... “ಬೇಡಣ್ಣಾ! ಪುನಃ ಬಾಣ ಪ್ರಯೋಗ ಮಾಡಬೇಡ”–ಎಂದು ಹೇಳುತ್ತಾ ಆತನ ಧನುಸ್ಸನ್ನು ಹಿಡಿದು ಕೊಂಡನು.

ಏತದ್ವಿನಾಪಿ ಹ್ಯುದಧೇಸ್ತವಾದ್ಯ
ಸಂಪತ್ಸ್ಯತೇ ವೀರತಮಸ್ಯ ಕಾರ್ಯಮ್ ।

ಭವದ್ವಿಧಾಃ ಕೋಪವಶಂ ನ ಯಾನ್ತಿ
ದೀರ್ಘಂ ಭವಾನ್ಪಶ್ಯತು ಸಾಧುವೃತ್ತಮ್ ॥೩೪॥

"ಅಣ್ಣ! ವೀರಶ್ರೇಷ್ಠನಾದ ನಿನ್ನ ಕಾರ್ಯವು ಸಮುದ್ರವನ್ನು ಶೋಷಿಸದೆಯೇ ಪೂರ್ಣವಾಗುತ್ತದೆ. ನಿನ್ನಂತಹವರು ಯಾವಾಗಲೂ ಕೋಪಕ್ಕೆ ವಶರಾಗುವುದಿಲ್ಲ. ದೀರ್ಘದೃಷ್ಟಿಯಿಂದ ಬೇರೆ ಯಾವುದಾದರೂ ಒಳ್ಳೆಯ ಮಾರ್ಗವನ್ನು ಯೋಚಿಸು."

ಆ ಸಮಯದಲ್ಲಿ ಅಂತರಿಕ್ಷದಲ್ಲಿ ಅದೃಶ್ಯರೂಪದಲ್ಲಿದ್ದ ಮಹರ್ಷಿ ಗಳೂ ಮತ್ತು ದೇವರ್ಷಿಗಳೂ "ನಿಶ್ಚಯವಾಗಿಯೂ ಇದು ಅತ್ಯಂತ ಕಷ್ಟದ ವಿಷಯವಾಗಿದೆ. ಈಗ ಸಮುದ್ರವನ್ನು ಶೋಷಿಸುವುದು ಬೇಡ"–ಎಂದು ಗಟ್ಟಿಯಾಗಿ ಹೇಳುತ್ತಾ ಹಾಹಾಕಾರಗಳನ್ನು ಮಾಡುತ್ತಿದ್ದರು.

೨೧ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೨೨ನೆಯ ಸರ್ಗ

ಸಮುದ್ರರಾಜನ ಸಲಹೆಯಂತೆ ನಲನಿಂದ ಸಮುದ್ರದ ಮೇಲೆ ನೂರು ಯೋಜನಗಳ ಉದ್ದದ ಸೇತುವೆಯ ನಿರ್ಮಾಣ : ಅದರ ಮೂಲಕವಾಗಿ ಶ್ರೀರಾಮನೇ ಮೊದಲಾದವರು ಸಮುದ್ರವನ್ನು ದಾಟಿ ಆಚೆಯ ದಡದಲ್ಲಿ ಬೀಡುಬಿಟ್ಟುದು

ಅಥೋವಾಚ ರಘುಶ್ರೇಷ್ಠಃ ಸಾಗರಂ ದಾರುಣಂ ವಚಃ ।
ಅದ್ಯ ತ್ವಾಂ ಶೋಷಯಿಷ್ಯಾಮಿ ಸಪಾತಾಲಂ ಮಹಾರ್ಣವ ॥೧॥

ಅನಂತರ ರಘುಕುಲತಿಲಕನಾದ ಶ್ರೀರಾಮನು ಸಮುದ್ರರಾಜನಿಗೆ ಕಠೋರವಾದ ಈ ಮಾತುಗಳನ್ನು ಹೇಳತೊಡಗಿದನು : "ಸಾಗರನೇ! ಈಗಲೇ ನಾನು ಪಾತಾಳದಿಂದ ಸಹಿತನಾಗಿರುವ ನಿನ್ನನ್ನು ಒಣಗಿಸಿಬಿಡುತ್ತೇನೆ.

ನಿನ್ನಲ್ಲಿರುವ ಜಲರಾಶಿಯು ನನ್ನ ಬಾಣಗಳಿಂದ ದಗ್ಧವಾಗಿ ಹೋಗುತ್ತದೆ. ನೀನು ಸಂಪೂರ್ಣವಾಗಿ ಒಣಗಿಹೋಗುವೆ. ನಿನ್ನನ್ನು ಆಶ್ರಯಿಸಿರುವ ಪ್ರಾಣಿಗಳೆಲ್ಲವೂ ವಿನಾಶಹೊಂದುತ್ತವೆ. ಬಳಿಕ ಜಲರಾಶಿಯಿರುವ

ಈ ಸ್ಥಳದಲ್ಲಿ ಭಯಂಕರವಾದ ಧೂಳಿಯ ರಾಶಿಯು ತುಂಬಿಕೊಳ್ಳುತ್ತದೆ. ನನ್ನ ಧನುಸ್ಸಿನಿಂದ ಬಿಡಲ್ಪಡುವ ಬಾಣವರ್ಷದ ಪ್ರಭಾವದಿಂದ ನಿನಗೆ ಈ ಸ್ಥಿತಿಯುಂಟಾದಾಗ ಕಪಿನಾಯಕರು ಆಚೆಯ ದಡಕ್ಕೆ ಕಾಲ್ನಡಿಗೆಯಿಂದಲೇ ಹೋಗುತ್ತಾರೆ.

ದಾನವರಿಗೆ ಆಶ್ರಯನಾಗಿರುವ ಸಮುದ್ರನೇ! ನೀನು ನಾಲ್ಕು ದಿಕ್ಕುಗಳಿಂದಲೂ ಹರಿದುಬರುತ್ತಿರುವ ಜಲರಾಶಿಯನ್ನು ಸಂಗ್ರಹಿಸುತ್ತಿರುವೆ. ನನ್ನಲ್ಲಿರುವ ಪೌರುಷವನ್ನಾಗಲೀ ಪರಾಕ್ರಮವನ್ನಾಗಲೀ ನೀನರಿಯೆ. ಈ ವಿಷಯವನ್ನು ನೀನು ನೆನಪಿನಲ್ಲಿಡು. ನನ್ನನ್ನು ಉಪೇಕ್ಷಿಸುತ್ತಿರುವುದಕ್ಕಾಗಿ ನನ್ನಿಂದ ನೀನು ಮಹತ್ತರವಾದ ಸಂತಾಪವನ್ನು ಹೊಂದುವೆ."

ಶ್ರೀರಾಮನು ಹೀಗೆ ಹೇಳುತ್ತಾ ಬ್ರಹ್ಮದಂಡಕ್ಕೆ ಸಮಾನವಾಗಿದ್ದ ಬಾಣವನ್ನು ಬ್ರಹ್ಮಾಸ್ತ್ರಮಂತ್ರದಿಂದ ಅಭಿಮಂತ್ರಿಸಿ ಶ್ರೇಷ್ಠವಾದ ಧನುಸ್ಸಿನಲ್ಲಿ ಹೂಡಿ ಶಿಂಜಿನಿಯನ್ನು ಸೆಳೆದನು. ಹೀಗೆ ಶ್ರೀರಾಮನು ಧನುಸ್ಸನ್ನು ಸೆಳೆದೊಡನೆಯೇ ಭೂಮಿ ಮತ್ತು ಆಕಾಶಗಳು ಸೀಳಿಹೋಗುತ್ತಿರುವಂತೆ ಕಾಣುತ್ತಿದ್ದುವು. ಪರ್ವತಗಳು ನಡುಗಿದುವು. ಪ್ರಪಂಚವು ಅಂಧಕಾರಮಯ ವಾಯಿತು. ಯಾವ ದಿಕ್ಕುಗಳೂ ಕಾಣುತ್ತಲೇ ಇರಲಿಲ್ಲ. ನದಿಗಳೂ ಮತ್ತು ಸರೋವರಗಳೂ ಅಲ್ಲೋಲ-ಕಲ್ಲೋಲವಾದುವು. ಚಂದ್ರ-ಸೂರ್ಯರು ನಕ್ಷತ್ರಗಳೊಡನೆ ಅಡ್ಡಡ್ಡವಾಗಿ ಸಂಚರಿಸತೊಡಗಿದರು. ಸೂರ್ಯನ ಕಿರಣಗಳಿಂದ ಪ್ರಕಾಶಮಾನವಾಗಿದ್ದರೂ ಆಕಾಶವು ಅಂಧಕಾರದಿಂದ ತುಂಬಿ ಹೋಗಿದ್ದಿತು. ಆ ಸಮಯದಲ್ಲಿ ನೂರಾರು ಉಲ್ಕೆಗಳು ಹುಟ್ಟಿಕೊಂಡು ಆಕಾಶವನ್ನು ಬೆಳಗತೊಡಗಿದುವು. ಅಂತರಿಕ್ಷದಿಂದ ಘೋರಶಬ್ದದಿಂದ ಕೂಡಿದ ಸಿಡಿಲುಗಳು ಹೊರಬರುತ್ತಿದ್ದುವು. ಪರಿವಹವೇ* ಮೊದಲಾದ ವಾಯುಸಮೂಹಗಳು ಬಹಳ ವೇಗವಾಗಿ ಬೀಸತೊಡಗಿದುವು. ಆ ಬಿರು ಗಾಳಿಗಳು ವೃಕ್ಷಗಳನ್ನೇ ಬುಡಮೇಲು ಮಾಡುತ್ತಿದ್ದುವು. ಮೋಡಗಳನ್ನು ಚೆಲ್ಲಾಪಿಲ್ಲಿಯಾಗಿ ಮಾಡುತ್ತಿದ್ದುವು. ಪರ್ವತಗಳನ್ನು ಅಪ್ಪಳಿಸುತ್ತಿದ್ದುವು.

---

* ಪರಿವಹವೇ ಮುಂತಾದ ಎಲ್ಲ ಮಾರುತಗಳೂ ಒಟ್ಟಿಗೆ ಬೀಸುವುದು ಪ್ರಳಯ ಕಾಲದಲ್ಲಿ.

ಅವುಗಳ ಶಿಖರಗಳನ್ನು ಒಡೆದುಹಾಕುತ್ತಿದ್ದುವು. ಆಕಾಶದಲ್ಲಿ ದೊಡ್ಡ- ದೊಡ್ಡ ಸಿಡಿಲಿನ ಶಬ್ದಗಳಿಂದ ಕೂಡಿದ್ದ ಮಹಾಮೇಘಗಳು ಪರಸ್ಪರವಾಗಿ ಸಂಘರ್ಷಿಸುತ್ತಾ ವೈದ್ಯುತಾಗ್ನಿಯನ್ನು ಸುರಿಸತೊಡಗಿದುವು. ಆಕಾಶದಲ್ಲಿ ಕಾಣುತ್ತಿದ್ದ ಪ್ರಾಣಿಗಳು ಸಿಡಿಲಿನ ಶಬ್ದಕ್ಕೆ ಅನುರೂಪವಾಗಿಯೇ ಕೂಗಿ ಕೊಳ್ಳುತ್ತಿದ್ದುವು. ಅದೃಶ್ಯವಾಗಿದ್ದ ಪ್ರಾಣಿಗಳೂ ಭಯಂಕರವಾಗಿ ಶಬ್ದಮಾಡು ತ್ತಿದ್ದುವು. ಧನುಸ್ಸಿನ ಸೆಳೆತದ ಶಬ್ದವನ್ನು ಕೇಳಿಯೇ ಸೊರಗಿ ಸೊಪ್ಪಾದ ಕೆಲವು ಪ್ರಾಣಿಗಳು ಭೂಮಿಯಲ್ಲಿ ಮಲಗಿಬಿಟ್ಟುವು. ಕೆಲವು ಪ್ರಾಣಿಗಳು ಭಯಗೊಂಡು ಉದ್ವಿಗ್ನವಾದುವು. ಕೆಲವು ಪ್ರಾಣಿಗಳು ವ್ಯಥೆಯಿಂದ ಕಳವಳ ಗೊಂಡುವು. ಕೆಲವು ಪ್ರಾಣಿಗಳು ಭಯದಿಂದಾಗಿ ಜಡವಸ್ತುಗಳಂತಾದುವು. ಅಲುಗಾಡುತ್ತಲೂ ಇರಲಿಲ್ಲ. ಸಮುದ್ರವು ಕೂಡ ತನ್ನನ್ನಾಶ್ರಯಿಸಿದ್ದ ಪ್ರಾಣಿ ಗಳೊಡನೆಯೂ, ಸರ್ಪಗಳೊಡನೆಯೂ, ರಾಕ್ಷಸರೊಡನೆಯೂ, ತರಂಗ ಗಳೊಡನೆಯೂ ಭಯಂಕರವೇಗದಿಂದ ಕೂಡಿ ಪ್ರಳಯಕಾಲವಲ್ಲದಿದ್ದರೂ ತೀವ್ರವಾದ ಗತಿಯಿಂದ ತನ್ನ ಎಲ್ಲೆಯನ್ನೂ ದಾಟಿ ಒಂದು ಯೋಜನದಷ್ಟು ದೂರ ಉಕ್ಕೇರಿತು. ಹೀಗೆ ನದೀ-ನದಗಳ ಸ್ವಾಮಿಯಾದ ಸಮುದ್ರನು ಉದ್ಧತನಾಗಿ ಎಲ್ಲೆಯನ್ನು ಅತಿಕ್ರಮಿಸಿ ಹೋಗುತ್ತಿದ್ದರೂ ಶತ್ರುಸೂದನನಾದ ಶ್ರೀರಾಮನು ತಾನು ನಿಂತಿದ್ದ ಸ್ಥಾನದಿಂದ ಹಿಮ್ಮೆಟ್ಟಲಿಲ್ಲ.

ಅನಂತರ ಮೇರುಮಹಾಪರ್ವತದ ಅಂಗಪರ್ವತವಾದ ಉದಯಾದ್ರಿ ಯಿಂದ ಸೂರ್ಯನು ಹೊರಬರುವಂತೆ–ಸಮುದ್ರದ ಮಧ್ಯಭಾಗದಿಂದ ಸಮುದ್ರರಾಜನು ಮೂರ್ತಸ್ವರೂಪನಾಗಿ ಪ್ರದೀಪ್ತವಾದ ಮುಖಗಳಿಂದ ಕೂಡಿದ್ದ ಸರ್ಪಗಳೊಡನೆ ಹೊರಬಂದನು. ಅವನ ಬಣ್ಣವು ಸುಂದರವಾದ ವೈಡೂರ್ಯಮಣಿಯಂತಿದ್ದಿತು. ಸುವರ್ಣಮಯವಾದ ಆಭರಣಗಳಿಂದ ಆತನು ಭೂಷಿತನಾಗಿದ್ದನು ಕೆಂಪಾದ ಮಾಲೆಯನ್ನೂ ಮತ್ತು ಕೆಂಪಾದ ವಸ್ತ್ರಗಳನ್ನೂ ಧರಿಸಿದ್ದನು. ಕಮಲದೆಲೆಗೆ ಸದೃಶವಾದ ವಿಶಾಲವಾದ ಕಣ್ಣುಗಳನ್ನು ಹೊಂದಿದ್ದನು. ಕತ್ತಿನಲ್ಲಿ ದಿವ್ಯವಾದ ಪುಷ್ಪಮಯವಾದ ಹಾರವನ್ನು ಹಾಕಿಕೊಂಡಿದ್ದನು.

ಸುವರ್ಣಮಯವಾದ ಮತ್ತು ಪುಟಕ್ಕೆ ಹಾಕಿದ ಚಿನ್ನದಿಂದ ಮಾಡಿದ ಆಭರಣಗಳಿಂದ ಸಮಲಂಕೃತನಾಗಿದ್ದನು. ತನ್ನಲ್ಲಿಯೇ ಹುಟ್ಟಿದ ರತ್ನಗಳ

ಉತ್ತಮವಾದ ಆಭರಣಗಳಿಂದ ಭೂಷಿತನಾಗಿದ್ದನು. ಆ ಸಮಯದಲ್ಲಿ ಸಮುದ್ರರಾಜನು ಅನೇಕವಿಧವಾದ ಗೈರಿಕಾದಿಧಾತುಗಳಿಂದ ಸಮಲಂಕೃತ ನಾದ ಹಿಮವಂತನಂತೆಯೇ ಕಾಣುತ್ತಿದ್ದನು. ತನ್ನ ವಿಶಾಲವಾದ ವಕ್ಷಃಸ್ಥಳದ ಮಧ್ಯದಲ್ಲಿ ಕೌಸ್ತುಭಮಣಿಗೆ ಸಹೋದರನೋ ಎಂಬಂತೆ ಕಾಣುತ್ತಿದ್ದ ಬಿಳುಪಾದ ಪ್ರಭೆಯಿಂದ ಯುಕ್ತವಾಗಿದ್ದ ರತ್ನವನ್ನು ಧರಿಸಿದ್ದನು. ಚಂಚಲ ವಾದ ಪ್ರಭೆಯಿಂದ ಕೂಡಿದ್ದ ಆ ರತ್ನವು ರತ್ನಹಾರದ ಮಧ್ಯಭಾಗದಲ್ಲಿ

ಬೆಳಗುತ್ತಿದ್ದಿತು. ಅವನು ಚಂಚಲವಾದ ಅಲೆಗಳಿಂದ ಸಮಾವೃತನಾಗಿದ್ದನು. ಮೇಘಗಳಿಂದಲೂ ವಾಯುವಿನಿಂದಲೂ ಸುತ್ತುವರಿಯಲ್ಪಟ್ಟಿದ್ದನು. ಗಂಗಾ-ಸಿಂಧುಗಳೇ ಮೊದಲಾದ ಪ್ರಧಾನಭೂತಗಳಾದ ನದೀ-ನದಗಳಿಂದ ಸಮಾವೃತ ನಾಗಿದ್ದನು. ಅವನಲ್ಲಿ ಆಶ್ರಯಪಡೆದಿದ್ದ ದೊಡ್ಡ-ದೊಡ್ಡ ಮೊಸಳೆಗಳು ಅಲೆಗಳೊಡನೆ ಮೇಲಕ್ಕೆ ಹಾರುತ್ತಿದ್ದುವು. ಸರ್ಪಗಳೂ ರಾಕ್ಷಸರೂ ಗಾಬರಿ

ಗೊಂಡಿದ್ದರು. ದೇವತೆಗಳಿಗೆ ಸಮಾನವಾಗಿ ನಾನಾಪ್ರಕಾರವಾದ ಸುಂದರ ರೂಪಗಳನ್ನು ಧರಿಸಿ ಬಂದಿದ್ದ ನದಿಗಳ ದೇವತೆಗಳೊಡನೆ ಶಕ್ತಿಶಾಲಿಯಾದ ಸಮುದ್ರನು ಧನುರ್ಧರನಾಗಿದ್ದ ಶ್ರೀರಾಮನ ಬಳಿಗೆ ಬಂದು ಅವನನ್ನು ಸಂಬೋಧಿಸಿ ಕೈಮುಗಿದುಕೊಂಡು ಹೇಳಿದನು :

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ರಾಘವ ।
ಸ್ವಭಾವೇ ಸೌಮ್ಯ ತಿಷ್ಠನ್ತಿ ಶಾಶ್ವತಂ ಮಾರ್ಗಮಾಶ್ರಿತಾಃ ॥೨೬॥

"ಸೌಮ್ಯನೇ! ರಘುನಂದನ! ಪೃಥ್ವೀ, ವಾಯು, ಆಕಾಶ, ಜಲ ಮತ್ತು ತೇಜಸ್ಸು–ಈ ಪಂಚಭೂತಗಳೂ ಸರ್ವದಾ ತಮ್ಮ-ತಮ್ಮ ಸ್ವಭಾವದಲ್ಲಿಯೇ ಸ್ಥಿರವಾಗಿರುತ್ತವೆ. ಅವು ಶಾಶ್ವತವಾದ ಧರ್ಮವನ್ನು ಎಂದಿಗೂ ಪರಿತ್ಯಜಿಸುವುದಿಲ್ಲ. ಯಾವಾಗಲೂ ಆ ಮಾರ್ಗವನ್ನು ಆಶ್ರಯಿಸಿಯೇ ಇರುತ್ತವೆ.

ತತ್ಸ್ವಭಾವೋ ಮಮಾಪ್ಯೇಷ ಯದಗಾಧೋಽಹಮಪ್ಲವಃ ।
ವಿಕಾರಸ್ತು ಭವೇದ್ಗಾಧ ಏತತ್ತೇ ವೇದಯಾಮ್ಯಹಮ್ ॥೨೭॥

ಅಗಾಧ (ಹೆಚ್ಚು ಆಳ) ಮತ್ತು ಅಪ್ಲವ (ದಾಟಲು ಅಸಾಧ್ಯ) – ಎಂಬುದು ನನ್ನ ಸ್ವಭಾವಗುಣವೇ ಆಗಿದೆ. ಒಂದು ವೇಳೆ ನಾನು ಗಾಧನಾಗಿ ಬಿಟ್ಟರೆ (ಆಳವಿಲ್ಲದವನಾಗಿಬಿಟ್ಟರೆ) ನನ್ನ ಸ್ವಭಾವಗುಣಕ್ಕೆ ವ್ಯತಿಕ್ರಮ ವಾದಂತಾಗುತ್ತದೆ. ಆದುದರಿಂದ ನನ್ನ ಸ್ವಭಾವವನ್ನು ಬದಲಾಯಿಸುವ ಸಾಧ್ಯತೆಯಿಲ್ಲ. ಆದರೂ ನೀನು ನನ್ನನ್ನು ದಾಟಿಹೋಗಲು ಉಪಾಯ ವೊಂದನ್ನು ಹೇಳುತ್ತೇನೆ.

ನ ಕಾಮಾನ್ನ ಚ ಲೋಭಾದ್ವಾ ನ ಭಯಾತ್ಪಾರ್ಥಿವಾತ್ಮಜ ।
ಗ್ರಾಹನಕ್ರಾಕುಲಜಲಂ ಸ್ತಮ್ಭಯೇಯಂ ಕಥಂಚನ ॥೨೮॥

ರಾಜಕುಮಾರನೇ! ಮೊಸಳೆಗಳಿಂದಲೂ ತಿಮಿ-ತಿಮಿಂಗಿಲಗಳಿಂದಲೂ ಸಮಾಕುಲವಾಗಿರುವ ಈ ನೀರನ್ನು ನಾನು ಯಾವುದೇ ಕಾಮನೆಯಿಂದಾಗಲೀ, ಲೋಭದಿಂದಾಗಲೀ ಅಥವಾ ಭಯದಿಂದಾಗಲೀ ಸ್ತಂಭಗೊಳಿಸಲಾರೆನು.

ನೀನು ಯಾವ ರೀತಿಯಲ್ಲಿ ನನ್ನನ್ನು ದಾಟಿ ಹೋಗಬೇಕೆಂಬುದನ್ನು ವ್ಯವಸ್ಥೆಮಾಡುತ್ತೇನೆ. ಎಷ್ಟೇ ಕಷ್ಟವಾದರೂ ನಾನು ಸಹಿಸಿಕೊಳ್ಳುತ್ತೇನೆ.

ಸೇನೆಯು ನನ್ನನ್ನು ದಾಟಿಹೋಗುವವರೆಗೂ ನನ್ನಲ್ಲಿರುವ ಮೊಸಳೆಯೇ ಮುಂತಾದ ಪ್ರಾಣಿಗಳು ಸೈನ್ಯಕ್ಕೆ ತೊಂದರೆಕೊಡದಂತೆ ನೋಡಿಕೊಳ್ಳುತ್ತೇನೆ. ಕಪಿಗಳು ನನ್ನನ್ನು ದಾಟಿಹೋಗಲು ನನ್ನ ಮೇಲೆ ಸೇತುವೆಯನ್ನು ಕಟ್ಟಲು ಸಾಧ್ಯವಾಗುವಂತೆ ಮಾಡುತ್ತೇನೆ."

ಸಮುದ್ರರಾಜನ ಮಾತನ್ನು ಕೇಳಿ ಶ್ರೀರಾಮನು ಹೇಳಿದನು :

"ವರುಣಾಲಯನೇ! ನಾನು ಹೂಡಿರುವ ಈ ಬಾಣವು ವ್ಯರ್ಥವಾಗ ತಕ್ಕುದ್ದಲ್ಲ. ಇದನ್ನು ಎಲ್ಲಿ ಬಿಡಬೇಕೆಂಬುದನ್ನು ನೀನೇ ಹೇಳು."

ಮಹಾತೇಜಸ್ವಿಯಾದ ಮಹೋದಧಿಯು ರಾಘವನ ಮಾತನ್ನು ಕೇಳಿ ಅವನು ಬಿಡಲಿದ್ದ ಮಹಾಶರವನ್ನೂ ನೋಡಿ ಶ್ರೀರಾಮನಿಗೆ ಹೇಳಿದನು :

ಉತ್ತರೇಣಾವಕಾಶೋಽಸ್ತಿ ಕಶ್ಚಿತ್ಪುಣ್ಯತಮೋ ಮಮ ।
ದ್ರುಮಕುಲ್ಯ ಇತಿ ಖ್ಯಾತೋ ಲೋಕೇ ಖ್ಯಾತೋ ಯಥಾ ಭವಾನ್ ॥೩೨॥

"ಪ್ರಭುವೇ! ನೀನು ಹೇಗೆ ಜಗತ್ತಿನಲ್ಲಿ ವಿಖ್ಯಾತನಾಗಿರುವೆಯೋ ಹಾಗೆಯೇ ಪುಣ್ಯತಮವೂ 'ದ್ರುಮಕುಲ್ಯ' ಎಂಬ ಹೆಸರಿನಿಂದ ವಿಖ್ಯಾತವೂ ಆಗಿರುವ ಪವಿತ್ರವಾದ ಪ್ರದೇಶವು ನನ್ನ ಉತ್ತರಭಾಗದಲ್ಲಿದೆ.

ಆಭೀರ ಎಂಬ ಜಾತಿಗೆ ಸೇರಿದ ಪ್ರಮುಖರಾದ ಮನುಷ್ಯರು ಅಲ್ಲಿ ವಾಸಮಾಡುತ್ತಿದ್ದಾರೆ. ಅವರ ರೂಪ ಮತ್ತು ಕರ್ಮಗಳು ಅತ್ಯಂತಭಯಂಕರ ವಾಗಿವೆ. ಅವರೆಲ್ಲರೂ ಸಾಮಾನ್ಯವಾಗಿ ಕಳ್ಳರೇ ಆಗಿದ್ದು ಅತ್ಯಂತಪಾಪಿಷ್ಠ ರಾಗಿರುತ್ತಾರೆ. ಅವರೆಲ್ಲರೂ ನನ್ನಲ್ಲಿರುವ ನೀರನ್ನು ಪಾನಮಾಡುತ್ತಾರೆ. ಆ ಪಾಪಕರ್ಮಿಗಳೊಡನೆ ನನ್ನ ಸಂಪರ್ಕವು ಸರ್ವಕಾಲದಲ್ಲಿಯೂ ಇರುತ್ತದೆ. ಇದು ನನಗೆ ಸಹಿಸಲಸಾಧ್ಯವಾಗಿದೆ. ಅವರ ಸ್ಪರ್ಶವೇ ನನಗೆ ಬೇಡವಾಗಿದೆ. ಆದುದರಿಂದ ನೀನೀಗ ಗುರಿಯಿಟ್ಟಿರುವ ಬಾಣವನ್ನು ಅವರ ಮೇಲೆ ಪ್ರಯೋಗಿಸಿ ಅದು ವ್ಯರ್ಥವಾಗದಂತೆ ಮಾಡು."

ಮಹಾತ್ಮನಾದ ಸಮುದ್ರರಾಜನ ಮಾತನ್ನು ಕೇಳಿ ಶ್ರೀರಾಮನು ಪ್ರದೀಪ್ತವಾಗಿದ್ದ ಆ ಬಾಣವನ್ನು ಅವನು ತೋರಿಸಿದ ದಿಕ್ಕಿಗೆ ಪ್ರಯೋಗಿ ಸಿದನು. ವಜ್ರಾಯುಧಕ್ಕೂ ಮತ್ತು ಸಿಡಿಲಿಗೂ ಸಮಾನವಾಗಿದ್ದ ಆ ಬಾಣವು

ಬಿದ್ದ ಸ್ಥಳವು ಮುಂದೆ ಜಗತ್ತಿನಲ್ಲಿ 'ಮರುಕಾಂತಾರ'–ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಬಾಣದ ಪ್ರಹಾರದಿಂದ ಆಭೀರಪ್ರಮುಖರ ಸಮೇತವಾಗಿ ಅಲ್ಲಿದ್ದ ಗಿಡ-ಮರ-ಬಳ್ಳಿಗಳೂ ನಾಶವಾಗಿ ಅದೊಂದು ಮರುಭೂಮಿಯೇ ಆಯಿತು. ಬಾಣದಿಂದ ಪೀಡಿತಳಾದ ವಸುಂಧರೆಯು ಚೀತ್ಕಾರಮಾಡಿದಳು. ಬಾಣವು ಬಿದ್ದ ಆ ಸ್ಥಳದಲ್ಲಿ ಭೂದೇವಿಗೆ ಗಾಯವುಂಟಾಗಿ ಆ ಗಾಯದ ಮೂಲಕವಾಗಿ ರಸಾತಲದಲ್ಲಿದ್ದ ನೀರೂ ಹೊರಚಿಮ್ಮಿತು.

ಸ ಬಭೂವ ತದಾ ಕೂಪೋ ವ್ರಣ ಇತ್ಯಭಿವಿಶ್ರುತಃ ।
ಸತತಂ ಚೋತ್ಥಿತಂ ತೋಯಂ ಸಮುದ್ರಸ್ಯೇವ ದೃಶ್ಯತೇ ॥೩೮॥

ಆ ಗಾಯವು ಒಂದು ಬಾವಿಯ ರೂಪವನ್ನೇ ತಾಳಿತು ಮತ್ತು ಅದು ವ್ರಣಕೂಪವೆಂಬ ಹೆಸರಿನಿಂದಲೇ ಪ್ರಸಿದ್ಧಿಯನ್ನು ಹೊಂದಿತು. ಆ ಬಾವಿಯಿಂದ ಸತತವಾಗಿ ಹೊರಬರುತ್ತಿದ್ದ ನೀರು ಸಮುದ್ರದ ನೀರಿನಂತೆಯೇ ಕಾಣುತ್ತಿದ್ದಿತು.

ಆ ಸಮಯದಲ್ಲಿ ಭೂಮಿಯ ಸೀಳುವಿಕೆಯಿಂದ ಉಂಟಾದ ಶಬ್ದವು ಅತ್ಯಂತದಾರುಣವಾಗಿದ್ದಿತು. ಹೀಗೆ ಶ್ರೀರಾಮನು ಬಾಣಪ್ರಯೋಗದಿಂದ ಸಮುದ್ರದ ಹೊಟ್ಟೆಯಲ್ಲಿದ್ದ ಆ ನೀರನ್ನು ಶೋಷಿಸಿಬಿಟ್ಟನು. ಆ ಪ್ರದೇಶವು ಮುಂದೆ ಮೂರು ಲೋಕಗಳಲ್ಲಿಯೂ ಮರುಕಾಂತಾರವೆಂಬ ಹೆಸರಿನಿಂದ ಪ್ರಸಿದ್ಧವಾಯಿತು. ಸಮುದ್ರರಾಜನ ಕುಕ್ಷಿಪ್ರದೇಶವನ್ನು ಶೋಷಿಸಿ ದೇವತೆಗಳಂತೆಯೇ ಮಹಾಪರಾಕ್ರಮಿಯಾದ, ವಿದ್ವಾಂಸನಾದ, ದಶರಥನ ಮಗನಾದ ಶ್ರೀರಾಮನು ಆ ಮರುಭೂಮಿಗೆ ಹೀಗೆ ವರವನ್ನಿತ್ತನು.

ಪಶವ್ಯಶ್ಚಾಲ್ಪರೋಗಶ್ಚ ಫಲಮೂಲರಸಾಯುತಃ ।
ಬಹುಸ್ನೇಹೋ ಬಹುಕ್ಷೀರಸುಗನ್ಧಿರ್ವಿವಿಧೌಷಧಃ ॥೪೨॥

"ಈ ಮರುಭೂಮಿಯು ಪಶುಗಳಿಗೆ ಹಿತಕರವಾಗಿರಲಿ. ಇದು ಅಲ್ಪ ರೋಗವುಳ್ಳದ್ದಾಗಿರಲಿ. ಜಲ-ಮೂಲ-ರಸಗಳಿಂದ ಸಂಪನ್ನವಾಗಿರಲಿ. ಹಾಲು-ತುಪ್ಪ-ಎಣ್ಣೆಗಳಿಂದ ಸಮೃದ್ಧವಾಗಿರಲಿ. ಇಲ್ಲಿ ನಾನಾಪ್ರಕಾರವಾದ ಓಷಧಿಲತೆಗಳು ಬೆಳೆದು ವಾತಾವರಣವು ಸುಗಂಧಯುಕ್ತವಾಗಿರಲಿ."

ಹೀಗೆ ಶ್ರೀರಾಮನ ವರದಾನದಿಂದ ಆ ಮರುಪ್ರದೇಶವು ಅನೇಕಪ್ರಕಾರ

ವಾದ ಗುಣಗಳಿಂದ ಸಂಪನ್ನವಾಯಿತು ಮತ್ತು ಶುಭಕರವಾದ ಮಾರ್ಗವಾಗಿಯೂ ಪರಿಣಮಿಸಿತು.

ಆಭೀರರೆಂಬ ಪಾಪಿಷ್ಠರಿಂದ ತುಂಬಿಹೋಗಿದ್ದ, ಸಮುದ್ರರಾಜನ ಹೊಟ್ಟೆಯಂತಿದ್ದ ಆ ಪ್ರದೇಶವು ಶ್ರೀರಾಮನ ಬಾಣದಿಂದ ದಹಿಸಿಹೋಗಲು ನದೀ-ನದಗಳಿಗೆ ಒಡೆಯನಾದ ಸಮುದ್ರರಾಜನು ಸಕಲಶಾಸ್ತ್ರಜ್ಞನಾದ ಶ್ರೀರಾಮನಿಗೆ ಹೇಳಿದನು :

ಅಯಂ ಸೌಮ್ಯ ನಲೋ ನಾಮ ತನುಜೋ ವಿಶ್ವಕರ್ಮಣಃ ।
ಪಿತ್ರಾ ದತ್ತವರಃ ಶ್ರೀಮಾನ್ಪ್ರತಿಮೋ ವಿಶ್ವಕರ್ಮಣಾ ॥೪೫॥

"ಸೌಮ್ಯನೇ! ನಿನ್ನ ಸೈನ್ಯದಲ್ಲಿರುವ ನಲನೆಂಬ ಹೆಸರಿನ ಈ ವಾನರ ನಾಯಕನು ದೇವಶಿಲ್ಪಿಯಾದ ವಿಶ್ವಕರ್ಮನ ಪುತ್ರನು. ವಿಶ್ವಕರ್ಮನಿಗೆ ಸಮಾನನಾಗಿರುವ ತೇಜಸ್ವಿಯಾಗಿರುವ ಇವನಿಗೆ ಇವನ ತಂದೆಯು ವರವನ್ನಿತ್ತಿದ್ದಾನೆ.

ಹೆಚ್ಚು ಉತ್ಸಾಹಿಯಾಗಿರುವ ಈ ವಾನರನು ನನ್ನ ಮೇಲೆ ಸೇತುವೆಯನ್ನು ನಿರ್ಮಿಸಲಿ. ಅದನ್ನು ನಾನು ಧರಿಸುತ್ತೇನೆ. ಇವನು ಕೂಡ ತಂದೆಯಂತೆಯೇ ಶಿಲ್ಪಶಾಸ್ತ್ರದಲ್ಲಿ ಅತ್ಯಂತಚತುರನಾಗಿದ್ದಾನೆ."

ಹೀಗೆ ಹೇಳಿ ಸಮುದ್ರರಾಜನು ಅದೃಶ್ಯನಾದನು. ಬಳಿಕ ವಾನರಶ್ರೇಷ್ಠನಾದ ನಲನು ಮೇಲೆದ್ದುನಿಂತು ಮಹಾಬಲಿಷ್ಠನಾದ ಶ್ರೀರಾಮನಿಗೆ ಹೇಳಿದನು :

ಅಹಂ ಸೇತುಂ ಕರಿಷ್ಯಾಮಿ ವಿಸ್ತೀರ್ಣೇ ಲವಣಾಲಯೇ ।
ಪಿತುಃ ಸಾಮರ್ಥ್ಯಮಾಸ್ಥಾಯ ತತ್ತ್ವಮಾಹ ಮಹೋದಧಿಃ ॥೪೮॥

"ಪ್ರಭುವೇ! ಸಮುದ್ರರಾಜನು ಸತ್ಯವನ್ನೇ ಹೇಳಿದ್ದಾನೆ. ನಾನು ನನ್ನ ತಂದೆಯಾದ ವಿಶ್ವಕರ್ಮನಲ್ಲಿರುವ ಸಾಮರ್ಥ್ಯವನ್ನು ಪಡೆದುಕೊಂಡು ನೂರು ಯೋಜನಗಳಷ್ಟು ವಿಸ್ತಾರವಾಗಿರುವ ಈ ಸಮುದ್ರದ ಮೇಲೆ ಸೇತುವೆಯನ್ನು ನಿರ್ಮಿಸುತ್ತೇನೆ.

ದಣ್ಡ ಏವ ವರೋ ಲೋಕೇ ಪುರುಷಸ್ಯೇತಿ ಮೇ ಮತಿಃ ।
ಧಿಕ್ ಕ್ಷಮಾಮಕೃತಜ್ಞೇಷು ಸಾನ್ತ್ವಂ ದಾನಮಥಾಪಿ ವಾ ॥೪೯॥

ಈ ಲೋಕದಲ್ಲಿ ಪುರುಷನಿಗೆ ದಂಡನೀತಿಯೇ ತಕ್ಕುದೆಂದು ನನ್ನ ಭಾವನೆಯಾಗಿದೆ. ಕೃತಘ್ನರಾದವರ ವಿಷಯದಲ್ಲಿ ಕ್ಷಮೆಯನ್ನಾಗಲೀ, ಸಾಂತ್ವನವನ್ನಾಗಲೀ ಅಥವಾ ದಾನನೀತಿಯನ್ನಾಗಲೀ ತೋರುವುದಕ್ಕೆ ಧಿಕ್ಕಾರವಿರಲಿ.

ಅಯಂ ಹಿ ಸಾಗರೋ ಭೀಮಃ ಸೇತುಕರ್ಮದಿದೃಕ್ಷಯಾ ।
ದದೌ ದಣ್ಡಭಯಾದ್ಗಾಧಂ ರಾಘವಾಯ ಮಹೋದಧಿಃ ॥೫೦॥

ಭಯಂಕರನಾದ ಈ ಸಮುದ್ರನು ಸಗರನ ಮಕ್ಕಳಿಂದಲೇ ನಿರ್ಮಿಸಲ್ಪಟ್ಟವನು. ಆದರೂ ಇವನು ಶ್ರೀರಾಮನಿಗೆ ಕೃತಜ್ಞತೆಯಿಂದ ಸೇತುವೆಯನ್ನು ಕಟ್ಟಲು ಅನುವು ಮಾಡಿಕೊಡಲಿಲ್ಲ. ದಂಡದ ಭಯದಿಂದ ಮತ್ತು ಸೇತುವೆಯನ್ನು ಹೇಗೆ ಕಟ್ಟುವರೆಂಬುದನ್ನು ನೋಡುವ ಅಪೇಕ್ಷೆಯಿಂದ ಸೇತುವೆಯನ್ನು ಕಟ್ಟಲು ಜಾಗವನ್ನು ತೋರಿಸಿದನು.

ರಾಘವ! ಮಂದರಪರ್ವತದಲ್ಲಿದ್ದ ನನ್ನ ತಾಯಿಗೆ ದೇವಶಿಲ್ಪಿಯಾದ ವಿಶ್ವಕರ್ಮನು :- "ದೇವಿ! ನನ್ನಂತಹವನೇ ಒಬ್ಬ ಮಗನು ನಿನಗೆ ಹುಟ್ಟುವನು"–ಎಂಬ ವರವನ್ನಿತ್ತನು. ಈ ಕಾರಣದಿಂದ ನಾನು ವಿಶ್ವಕರ್ಮನಿಗೆ ಔರಸಪುತ್ರನಾಗಿರುತ್ತೇನೆ. ಶಿಲ್ಪಶಾಸ್ತ್ರದಲ್ಲಿ ಅವನಿಗೆ ಸಮಾನನಾಗಿದ್ದೇನೆ. ಈ ಎಲ್ಲ ವಿಷಯಗಳನ್ನೂ ಈಗ ಸಮುದ್ರನೇ ನನಗೆ ಜ್ಞಾಪಿಸಿಕೊಟ್ಟಿದ್ದಾನೆ. ಯಥಾವತ್ತಾದ ವಿಷಯವನ್ನೇ ಸಮುದ್ರರಾಜನು ಹೇಳಿದ್ದಾನೆ. ಅವನೇನಾದರೂ ನನ್ನ ಸಾಮರ್ಥ್ಯದ ವಿಷಯವಾಗಿ ಪ್ರಸ್ತಾಪಿಸದೇ ಇದ್ದಿದ್ದರೆ ನಾನೆಂದಿಗೂ ನನ್ನ ಆತ್ಮಗುಣಗಳನ್ನು ಹೇಳಿಕೊಳ್ಳುತ್ತಿರಲಿಲ್ಲ. ಸಮುದ್ರದಲ್ಲಿ ಸೇತುವೆಯನ್ನು ಕಟ್ಟಲು ನಾನು ನಿಶ್ಚಯವಾಗಿಯೂ ಸಮರ್ಥನಿದ್ದೇನೆ. ನನ್ನ ನಿರ್ದೇಶದಂತೆ ವಾನರಶ್ರೇಷ್ಠರೆಲ್ಲರೂ ಸೇರಿ ಈಗಲೇ ಸಮುದ್ರದ ಮೇಲೆ ಸೇತುವೆಯನ್ನು ಕಟ್ಟಲಿ."

ನಲನು ಹೀಗೆ ಹೇಳಿದೊಡನೆಯೇ ಶ್ರೀರಾಮನು ಸೇತುವೆಯನ್ನು ಕಟ್ಟಲು ಕಪಿಮುಖ್ಯರಿಗೆ ಆಜ್ಞಾಪಿಸಿದನು. ಶ್ರೀರಾಮನಿಂದ ಆಜ್ಞಪ್ತರಾದ ನೂರಾರು-ಸಾವಿರಾರು ಕಪಿಶ್ರೇಷ್ಠರು ಸಂತೋಷಭರಿತರಾಗಿ ನೆಗೆಯುತ್ತಾ ಹಾರುತ್ತಾ ಮಹಾರಣ್ಯವನ್ನು ಪ್ರವೇಶಿಸಿದರು. ಪರ್ವತಗಳಂತೆ ಮಹಾಕಾಯರಾಗಿದ್ದ ವಾನರಶ್ರೇಷ್ಠರು ಪರ್ವತಶಿಖರಗಳನ್ನೂ ವೃಕ್ಷಗಳನ್ನೂ ಮುರಿದು

ಅವೆಲ್ಲವನ್ನು ಸಮುದ್ರದ ತೀರಕ್ಕೆ ಸೆಳೆದು ತರುತ್ತಿದ್ದರು. ಸಾಲವೃಕ್ಷ ಗಳಿಂದಲೂ, ಮತ್ತಿಮರಗಳಿಂದಲೂ, ಕಗ್ಗಲೀಮರಗಳಿಂದಲೂ, ಬಿದುರು ಗಳಿಂದಲೂ, ಕುಟಜವೃಕ್ಷಗಳಿಂದಲೂ, ಅರ್ಜುನ-ತಾಲ-ತಿಲಕವೃಕ್ಷ ಗಳಿಂದಲೂ, ಬೆಟ್ಟದಾವರೆಗಳಿಂದಲೂ, ಬಿಲ್ವವೃಕ್ಷಗಳಿಂದಲೂ, ಏಳೆಲೆಬಾಳೆ ಗಳಿಂದಲೂ, ಸುಪುಷ್ಪಿತವಾಗಿದ್ದ ಕರ್ಣಿಕಾರವೃಕ್ಷಗಳಿಂದಲೂ, ಮಾವಿನಮರ ಗಳಿಂದಲೂ, ಅಶೋಕವೃಕ್ಷಗಳಿಂದಲೂ ಸಮುದ್ರವನ್ನು ತುಂಬಿಬಿಟ್ಟರು. ವಾನರಶ್ರೇಷ್ಠರು ಕೆಲವು ವೃಕ್ಷಗಳನ್ನು ಬುಡಸಹಿತವಾಗಿ ಕಿತ್ತು ತಂದುಹಾಕು ತ್ತಿದ್ದರು. ಕೆಲವನ್ನು ಬುಡಕ್ಕೆ ಸರಿಯಾಗಿ ಮುರಿದು ತಂದುಹಾಕುತ್ತಿದ್ದರು. ಹೀಗೆ ಅವರು ಎತ್ತರವಾದ ವೃಕ್ಷಗಳನ್ನು ಎತ್ತಿಕೊಂಡು ಹೋಗುತ್ತಿರುವಾಗ ಇಂದ್ರಧ್ವಜವನ್ನೇನಾದರೂ ಎತ್ತಿಕೊಂಡು ಹೋಗುತ್ತಿರುವರೋ ಎಂಬಂತೆ ಕಾಣುತ್ತಿದ್ದರು. ತಾಲವೃಕ್ಷಗಳನ್ನೂ, ದಾಳಿಂಬವೃಕ್ಷಗಳ ಪೊದೆಗಳನ್ನೂ, ತೆಂಗಿನಮರಗಳನ್ನೂ, ವಿಭೀತಕ-ವಕುಳವೃಕ್ಷಗಳನ್ನೂ, ಬೇವಿನ ಮರಗಳನ್ನೂ ಕಪಿಶ್ರೇಷ್ಠರು ಅರಣ್ಯದ ಎಲ್ಲ ಕಡೆಗಳಿಂದಲೂ ಕಿತ್ತುತಂದು ಸಮುದ್ರಕ್ಕೆ ಹಾಕುತ್ತಿದ್ದರು. ಮಹಾಕಾಯರಾದ ಮಹಾಬಲಿಷ್ಠರಾದ ವಾನರನಾಯಕರು ಆನೆಯ ಗಾತ್ರವಿದ್ದ ಬಂಡೆಗಳನ್ನು ತಂದುಹಾಕುತ್ತಿದ್ದರು. ದೊಡ್ಡ-ದೊಡ್ಡ ಪರ್ವತಗಳನ್ನೇ ಕಿತ್ತು ಯಂತ್ರಗಳ ಮೂಲಕವಾಗಿ ಸಮುದ್ರದ ಬಳಿಗೆ ಸಾಗಿಸಿ ಕೊಂಡು ಬರುತ್ತಿದ್ದರು. ಹೀಗೆ ಅವರು ಬಂಡೆಗಳನ್ನೂ ಪರ್ವತಗಳನ್ನೂ ಎತ್ತಿಕೊಂಡು ಬಂದು ಸಮುದ್ರದಲ್ಲಿ ಹಾಕಿದೊಡನೆಯೇ ಸಮುದ್ರದ ನೀರು ಬಹಳ ಮೇಲಕ್ಕೆ ಚಿಮ್ಮಿಹೋಗುತ್ತಿದ್ದಿತು. ಮರುಕ್ಷಣದಲ್ಲಿಯೇ ಆ ನೀರು ಕೆಳಕ್ಕೂ ಬೀಳುತ್ತಿದ್ದಿತು. ಹೀಗೆ ಕಪಿನಾಯಕರು ಎಲ್ಲ ಕಡೆಗಳಿಂದಲೂ ಬಂಡೆ ಗಳನ್ನೂ, ಪರ್ವತಗಳನ್ನೂ, ವೃಕ್ಷಗಳನ್ನೂ ಹಾಕುತ್ತಾ ಸಮುದ್ರವನ್ನು ಅಲ್ಲೋಲ-ಕಲ್ಲೋಲಗೊಳಿಸಿಬಿಟ್ಟರು. ಕೆಲವು ವಾನರರು ಸೇತುವೆಯನ್ನು ನೇರವಾಗಿ ಕಟ್ಟುವ ಸಲುವಾಗಿ ನೂರು ಯೋಜನಗಳ ಉದ್ದಕ್ಕೂ ದಾರವನ್ನು ಹಿಡಿದು ನಿಂತಿದ್ದರು. ನಲನು ಕಪಿನಾಯಕರು ತಂದ ವೃಕ್ಷಗಳನ್ನೂ, ಬಂಡೆ ಗಳನ್ನೂ, ಪರ್ವತಗಳನ್ನೂ ಯಥಾಯೋಗ್ಯವಾದ ಸ್ಥಳಗಳಲ್ಲಿಡಿಸುತ್ತಾ ಸಮುದ್ರದ ಮಧ್ಯದಲ್ಲಿ ಮಹಾಸೇತುವೆಯನ್ನು ನಿರ್ಮಿಸುತ್ತಿದ್ದನು. ಭಯಂಕರಕರ್ಮರಾದ ವಾನರರು ಸೇತುವೆಯನ್ನು ಕಟ್ಟಲು ಬೇಕಾದ

ಸಾಮಗ್ರಿಗಳನ್ನು ಹೊತ್ತುತರುತ್ತಾ ನಿರ್ಮಾಣಕಾರ್ಯವನ್ನು ಆರಂಭಿಸಿದರು. ಕೆಲವು ವಾನರರು ಅಳೆಯುವ ಸಲುವಾಗಿ ದಂಡಗಳನ್ನು ಹಿಡಿದುನಿಂತಿದ್ದರು. ಮತ್ತೆ ಕೆಲವರು ನಲನು ಹೇಳಿದ ಸಾಮಗ್ರಿಗಳನ್ನು ಹುಡುಕಿಕೊಡುವುದರಲ್ಲಿ ನಿರತರಾಗಿದ್ದರು.

ಶ್ರೀರಾಮನ ಆಜ್ಞೆಯನ್ನು ಶಿರಸಾವಹಿಸಿ ಸೇತುವೆಯ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ ಮೇಘ-ಪರ್ವತಸದೃಶರಾದ ವಾನರರು ಹುಲ್ಲಿನಿಂದಲೂ ಕಟ್ಟಿಗೆಗಳಿಂದಲೂ ಸೇತುವೆಯನ್ನು ಕಟ್ಟುತ್ತಿದ್ದರು. ಕೆಲವರು ತುದಿಗಳಲ್ಲಿ ಹೂವುಗಳನ್ನು ಹೊಂದಿದ್ದ ವೃಕ್ಷಗಳಿಂದಲೇ ಸೇತುವೆಯನ್ನು ಕಟ್ಟುತ್ತಿದ್ದರು. ಪರ್ವತಗಳಂತೆಯೇ ಇರುತ್ತಿದ್ದ ದೊಡ್ಡ ದೊಡ್ಡ ಬಂಡೆಗಳನ್ನೂ ಪರ್ವತಶಿಖರಗಳನ್ನೂ ಹೊತ್ತು ಎಲ್ಲ ಕಡೆಗಳಿಂದಲೂ ಧಾವಿಸಿ ಬರುತ್ತಿದ್ದ ಕಪಿಮುಖ್ಯರು ರಾಕ್ಷಸರಂತೆಯೇ ಕಾಣುತ್ತಿದ್ದರು. ಆ ಕಪಿನಾಯ ಕರು ಎಲ್ಲ ಕಡೆಗಳಿಂದಲೂ ದೊಡ್ಡ-ದೊಡ್ಡ ಬಂಡೆಗಳನ್ನೂ ಪರ್ವತಶಿಖರಗಳನ್ನೂ ಎತ್ತಿಕೊಂಡು ಬಂದು ಸಮುದ್ರದಲ್ಲಿ ಹಾಕುವಾಗ ಅತ್ಯಂತ ಭಯಂಕರವಾದ ಶಬ್ದವಾಗುತ್ತಿದ್ದಿತು. ಆನೆಯಂತೆ ವಿಶಾಲಕಾಯರಾಗಿದ್ದ, ಹೆಚ್ಚು ಉತ್ಸಾಹಿಗಳಾಗಿದ್ದ, ತ್ವರೆಯಿಂದ ಕೂಡಿದ್ದ ವಾನರನಾಯಕರು ಮೊದಲನೆಯ ದಿವಸ ಹದಿನಾಲ್ಕು ಯೋಜನಗಳಷ್ಟು ದೂರದವರೆಗೆ ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿದರು. ಎರಡನೆಯ ದಿವಸ ಭೀಮಕಾಯರಾದ, ಮಹಾಬಲಿಷ್ಠರಾದ ಕಪಿನಾಯಕರು ಇಪ್ಪತ್ತು ಯೋಜನಗಳಷ್ಟು ದೂರದವರೆಗೆ ಸೇತುವೆಯನ್ನು ಕಟ್ಟಿದರು. ಮೂರನೆಯ ದಿವಸ ಅತಿಶೀಘ್ರವಾಗಿ ಕಾರ್ಯಮಾಡುತ್ತಿದ್ದ ಮಹಾಕಾಯರಾದ ವಾನರರು ಇಪ್ಪತ್ತೊಂದು ಯೋಜನಗಳಷ್ಟು ದೂರದವರೆಗೆ ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿದರು. ನಾಲ್ಕನೆಯ ದಿವಸ ಮಹಾವೇಗವಂತರಾದ ತ್ವರೆಮಾಡುತ್ತಿದ್ದ ಕಪಿಮುಖ್ಯರು ಇಪ್ಪತ್ತೆರಡು ಯೋಜನಗಳಷ್ಟು ದೂರದವರೆಗೆ ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿದರು. ಐದನೆಯ ದಿವಸ ಕ್ಷಿಪ್ರವಾಗಿ ಕೆಲಸಮಾಡುತ್ತಿದ್ದ ಕಪಿಶ್ರೇಷ್ಠರು ಸುವೇಲವೆಂಬ ಪರ್ವತದವರೆಗೆ ಇಪ್ಪತ್ತುಮೂರು ಯೋಜನಗಳಷ್ಟು ದೂರ ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿದರು.

ತಂದೆಯಂತೆಯೇ ಶಿಲ್ಪಕಾರ್ಯದಲ್ಲಿ ಅತ್ಯಂತಚತುರನಾದ, ವಿಶ್ವ

ಕರ್ಮನ ಮಗನಾದ, ಬಲಿಷ್ಠನಾದ, ಶ್ರೀಮಂತನಾದ, ವಾನರಶ್ರೇಷ್ಠನಾದ ನಲನು ಹೀಗೆ ಸಮುದ್ರದಮಧ್ಯದಲ್ಲಿ ನೂರುಯೋಜನಗಳ ವಿಸ್ತಾರದ ಸೇತುವೆಯನ್ನು ನಿರ್ಮಿಸಿದನು. ಮೀನುಗಳಿಗೆ ವಾಸಸ್ಥಾನವಾದ ಸಮುದ್ರದಲ್ಲಿ ನಲನಿಂದ ನಿರ್ಮಿಸಲ್ಪಟ್ಟ ಸುಂದರವಾದ ಮತ್ತು ಶೋಭಾಯಮಾನವಾಗಿದ್ದ ಆ ಸೇತುವೆಯು ಆಕಾಶದಲ್ಲಿ ಕಾಣುವ ಸ್ವಾತೀಪಥದಂತೆಯೇ* ಕಾಣುತ್ತಿದ್ದಿತು. ಬಳಿಕ ಪರಮಾದ್ಭುತವಾದ ಆ ಸೇತುವೆಯನ್ನು ನೋಡಲು ದೇವತೆಗಳೂ, ಗಂಧರ್ವರೂ, ಸಿದ್ಧರೂ, ಮಹರ್ಷಿಗಳೂ ಬಂದು ಆಕಾಶದಲ್ಲಿ ನಿಂತುಕೊಂಡರು. ಹತ್ತುಯೋಜನಗಳಷ್ಟು ಅಗಲವಾಗಿಯೂ ನೂರು ಯೋಜನಗಳಷ್ಟು ಉದ್ದವಾಗಿಯೂ ಇದ್ದ, ಸಮುದ್ರದ ಮಧ್ಯದಲ್ಲಿ ಕಟ್ಟಲು ಅತ್ಯಂತ ದುಷ್ಕರವಾದ ಆ ನಲಸೇತುವೆಯನ್ನು ದೇವ-ಗಂಧರ್ವ-ಸಿದ್ಧ-ಪರಮರ್ಷಿಗಳು ನೋಡಿ ವಿಸ್ಮಿತರಾದರು. ಸೇತುವೆಯನ್ನು ಕಟ್ಟಿದ ವಾನರ ಸೈನಿಕರು ಕೂಡ ಅತ್ತಿಂದಿತ್ತ ಇತ್ತಿಂದತ್ತ ಹಾರಾಡುತ್ತಾ, ಕುಣಿದಾಡುತ್ತಾ, ಗರ್ಜನೆಮಾಡುತ್ತಾ, ಊಹಿಸಲು ಕೂಡ ಅಸಾಧ್ಯವಾಗಿದ್ದ, ಪರಮಾದ್ಭುತವಾಗಿದ್ದ, ರೋಮಾಂಚನವನ್ನುಂಟುಮಾಡುವುದಾಗಿದ್ದ ಆ ಸೇತುವೆಯನ್ನು ನೋಡಿದರು. ಸಮಸ್ತಪ್ರಾಣಿಗಳೂ ಸಮುದ್ರದ ಮೇಲೆ ನಿರ್ಮಿಸಿದ್ದ ಆ ಮಹಾಸೇತುವೆಯನ್ನು ನೋಡಿ ಅಚ್ಚರಿಗೊಂಡುವು. ಹೀಗೆ ಮಹಾಬಲಿಷ್ಠರಾದ ಪರಮೋತ್ಸಾಹಿಗಳಾಗಿದ್ದ ಸಾವಿರಕೋಟಿ ವಾನರಸೈನಿಕರು ಸಮುದ್ರದಲ್ಲಿ ಸೇತುವೆಯನ್ನು ಕಟ್ಟುತ್ತಲೇ ಸಮುದ್ರದ ಆಚೆಯ ದಡಕ್ಕೆ ಹೋದರು.

ವಿಶಾಲವಾಗಿದ್ದ, ಸುಂದರವಾಗಿ ಕಟ್ಟಲ್ಪಟ್ಟಿದ್ದ, ಸಮತಲವಾಗಿದ್ದ, ಸುಸಂಬದ್ಧವಾಗಿದ್ದ ಆ ಮಹಾಸೇತುವೆಯು ಆ ಮಹಾಸಾಗರದಲ್ಲಿ ಹೆಂಗಸರ ಬೈತಲೆಯಂತೆಯೇ ಶೋಭಿಸುತ್ತಿದ್ದಿತು.

ಸೇತುವೆಯು ಸಿದ್ಧವಾದೊಡನೆಯೇ ಗದಾಪಾಣಿಯಾದ ವಿಭೀಷಣನು ತನ್ನ ಸಚಿವರೊಡನೆ ಸಮುದ್ರದ ಆಚೆಯ ದಡದಲ್ಲಿ ನಿಂತನು. ಶತ್ರುಗಳೇ

---

* ಸ್ವಾತೀಪಥ = ಛಾಯಾಪಥ–ಜ್ಯೋತಿಶ್ಚಕ್ರಮಧ್ಯದಲ್ಲಿ ದಕ್ಷಿಣೋತ್ತರವಾದ ಒಂದು ಆಕಾಶಮಾರ್ಗ. ಅಥವಾ ಸ್ವಾತೀಬೀದಿ. ಸೂರ್ಯನೇ ಮೊದಲಾದವರಿಗೆ ಮಧ್ಯಮಾರ್ಗದಲ್ಲಿ ಮಧ್ಯದ ಬೀದಿ. ವಾಯುಪುರಾಣದಲ್ಲಿ ಹೀಗೆ ಹೇಳಿದೆ. **ಹಸ್ತಶ್ಚಿತ್ರಾ ತಥಾ ಸ್ವಾತೀಮಧ್ಯವೀಥ್ಯಾಭಿವಿಶ್ರುತಾ ।**

ನಾದರೂ ಸೇತುವೆಯನ್ನು ಭಗ್ನಗೊಳಿಸಲು ಬಂದರೆ ಅವರನ್ನು ಶಿಕ್ಷಿಸುವುದೇ ವಿಭೀಷಣನ ಉದ್ದೇಶವಾಗಿದ್ದಿತು. ಅನಂತರ ಸುಗ್ರೀವನು ಸತ್ಯಪರಾಕ್ರಮಿಯಾದ ಶ್ರೀರಾಮನಿಗೆ ಹೇಳಿದನು :

"ರಾಘವ! ನೀನು ಹನುಮಂತನ ಹೆಗಲಮೇಲೆ ಕುಳಿತುಕೋ. ಅಂಗದನ ಹೆಗಲಮೇಲೆ ಲಕ್ಷ್ಮಣನು ಕುಳಿತುಕೊಳ್ಳಲಿ. ಮೀನುಗಳಿಗೆ ಆಶ್ರಯಸ್ಥಾನವಾಗಿರುವ ಈ ಸಮುದ್ರವು ಅತ್ಯಂತವಿಶಾಲವಾಗಿದೆ. ಅಂಗದ-ಹನುಮಂತರು ನಿಮ್ಮಿಬ್ಬರನ್ನೂ ಎತ್ತಿಕೊಂಡು ಆಕಾಶಮಾರ್ಗದಲ್ಲಿ ಹೋಗ ಬಲ್ಲವರಾಗಿದ್ದಾರೆ."

ಸುಗ್ರೀವನು ಹೇಳಿದಂತೆಯೇ ಲಕ್ಷ್ಮಣಸಹಿತನಾದ ಶ್ರೀರಾಮನು ಧನುಷ್ಪಾಣಿಯಾಗಿ ಹನುಮಂತನ ಹೆಗಲಮೇಲೆ ಕುಳಿತು ಸೇನೆಯ ಮುಂಭಾಗ ದಲ್ಲಿ ಪ್ರಯಾಣಮಾಡುತ್ತಿದ್ದನು. ಸುಗ್ರೀವನೂ ಅವನ ಜೊತೆಯಲ್ಲಿಯೇ ಆಕಾಶಮಾರ್ಗದಲ್ಲಿ ಹೋಗುತ್ತಿದ್ದನು. ಕೆಲವು ವಾನರರು ಸೇತುವೆಯ ಮಧ್ಯಭಾಗದಲ್ಲಿ ಹೋಗುತ್ತಿದ್ದರು. ಕೆಲವರು ಸೇತುವೆಯ ಎರಡು ಬದಿಗಳಲ್ಲಿಯೂ ಪ್ರಯಾಣಮಾಡುತ್ತಿದ್ದರು. ಕೆಲವು ವಾನರರು ಸಮುದ್ರದಲ್ಲಿ ಬಿದ್ದು ಈಜಿಕೊಂಡು ಹೋಗುತ್ತಿದ್ದರು. ಕೆಲವರು ಆಕಾಶಮಾರ್ಗದಲ್ಲಿ ಗರುಡ ಪಕ್ಷಿಯಂತೆ ಹಾರಿಕೊಂಡು ಹೋಗುತ್ತಿದ್ದರು. ಹೀಗೆ ಪ್ರಯಾಣಮಾಡುತ್ತಿದ್ದಾಗ ಭಯಂಕರರಾದ ಕಪಿಸೈನಿಕರು ಸಮುದ್ರದ ಭಯಂಕರವಾದ ಭೋರ್ಗರೆಯುವಿಕೆಯೂ ಕೇಳಿಸದ ರೀತಿಯಲ್ಲಿ ಅತ್ಯಂತಭಯಂಕರವಾದ ಘೋಷಣೆಗಳನ್ನು ಮಾಡುತ್ತಾ ಸಮುದ್ರವನ್ನು ಸೇತುವೆಯ ಮೂಲಕವಾಗಿ ದಾಟುತ್ತಿದ್ದರು. ಹೀಗೆ ನಲಸೇತುವೆಯ ಮೂಲಕವಾಗಿ ಅಪಾರವಾದ ವಾನರ ಸೈನ್ಯವು ಸಮುದ್ರವನ್ನು ದಾಟಿತು. ಬಳಿಕ ರಾಜನಾದ ಸುಗ್ರೀವನು ಕಂದ-ಮೂಲ-ಫಲಸಮೃದ್ಧವಾಗಿರುವ ಸ್ಥಳದಲ್ಲಿ ಸೈನ್ಯದ ಬಿಡಾರಮಾಡಿದನು.

ಅತ್ಯದ್ಭುತವಾದ ಮತ್ತು ಸುದುಷ್ಕರವಾದ ಶ್ರೀರಾಮನ ಸೇತುಬಂಧಕಾರ್ಯವನ್ನು ನೋಡಿ ದೇವತೆಗಳು ಸಿದ್ಧ-ಚಾರಣರೊಡನೆಯೂ, ಋಷಿಗಳೊಡನೆಯೂ ಆಕಾಶಮಾರ್ಗದಲ್ಲಿ ಹೋಗುತ್ತಿದ್ದ ಶ್ರೀರಾಮನ ಬಳಿಗೆ ಬಂದು ಅವನನ್ನು ಪವಿತ್ರವಾದ ಶುಭಜಲದಿಂದ ಪ್ರತ್ಯೇಕ-ಪ್ರತ್ಯೇಕವಾಗಿ ಸಂಪ್ರೋಕ್ಷಿಸಿ ಹೇಳಿದರು :

ಜಯಸ್ವ ಶತ್ರೂನ್ನರದೇವ ಮೇದಿನೀಂ
ಸಸಾಗರಾಂ ಪಾಲಯ ಶಾಶ್ವತೀಃ ಸಮಾಃ ।

"ನರದೇವನೇ! ಶತ್ರುಗಳನ್ನು ಜಯಿಸು. ಸಮುದ್ರಪರ್ಯಂತವಾದ ಅಖಂಡಭೂಮಂಡಲವನ್ನೂ ಶಾಶ್ವತವಾಗಿ ಪರಿಪಾಲಿಸು."

ಇದೇ ಮುಂತಾಗಿ ಅನೇಕ ಶುಭವಾಕ್ಯಗಳಿಂದ ರಾಜಸಮ್ಮಾನಿತನಾದ ಶ್ರೀರಾಮನನ್ನು ದೇವತೆಗಳು ಅಭಿನಂದಿಸಿದರು.

೨೨ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೨೩ನೆಯ ಸರ್ಗ

ಶ್ರೀರಾಮನು ಲಕ್ಷ್ಮಣನಿಗೆ ಉತ್ಪಾತಸೂಚಕವಾದ ಲಕ್ಷಣಗಳನ್ನು ವಿವರಿಸಿ ಹೇಳಿದುದು : ಲಂಕೆಯ ಆಕ್ರಮಣ

ನಿಮಿತ್ತಾನಿ ನಿಮಿತ್ತಜ್ಞೋ ದೃಷ್ಟ್ವಾ ಲಕ್ಷ್ಮಣಪೂರ್ವಜಃ ।
ಸೌಮಿತ್ರಿಂ ಸಂಪರಿಷ್ವಜ್ಯ ಇದಂ ವಚನಮಬ್ರವೀತ್ ॥೧॥

ಉತ್ಪಾತಸೂಚಕವಾದ ಲಕ್ಷಣಗಳನ್ನು ಸಂಪೂರ್ಣವಾಗಿ ತಿಳಿದಿದ್ದ, ಶ್ರೀರಾಮನು ತಮ್ಮನಾದ ಲಕ್ಷ್ಮಣನನ್ನು ಆಲಿಂಗಿಸಿಕೊಂಡು ಹೇಳಿದನು :

"ಲಕ್ಷ್ಮಣ! ಶೀತಲವಾದ ನೀರು ಮತ್ತು ಕಂದ-ಮೂಲ-ಫಲಗಳಿರುವ ಅರಣ್ಯವನ್ನು ವಾಸಕ್ಕಾಗಿ ಆಶ್ರಯಿಸಿ ಈ ಸೈನ್ಯಸಮೂಹವನ್ನು ನಾಲ್ಕಾರು ವಿಭಾಗಗಳನ್ನಾಗಿ ವಿಂಗಡಿಸಿ ಅವುಗಳನ್ನು ವ್ಯೂಹಕ್ರಮದಲ್ಲಿ ನಿಲ್ಲಿಸಿ ಅಗ್ರಭಾಗದಲ್ಲಿ ನಾವು ನಿಲ್ಲೋಣ. ಸಮಸ್ತಲೋಕಗಳನ್ನೂ ವಿನಾಶಗೊಳಿಸುವ ಭೀಷಣವಾದ ಭಯವು ಸನ್ನಿಹಿತವಾಗಿರುವುದನ್ನು ನಾನು ಕಾಣುತ್ತಿದ್ದೇನೆ. ಇದು ಋಕ್ಷ-ವಾನರ-ರಾಕ್ಷಸವೀರರ ವಿನಾಶದ ಸೂಚಕವಾಗಿದೆ.

ವಾತಾಶ್ಚ ಕಲುಷಾ ವಾನ್ತಿ ಕಮ್ಪತೇ ಚ ವಸುನ್ಧರಾ ।
ಪರ್ವತಾಗ್ರಾಣಿ ವೇಪನ್ತೇ ಪತನ್ತಿ ಚ ಮಹೀರುಹಾಃ ॥೪॥

ಗಾಳಿಯು ಧೂಳಿನಿಂದ ಕೂಡಿ ಬೀಸುತ್ತಿದೆ. ಭೂಮಿಯು ನಡುಗುತ್ತಿದೆ. ಪರ್ವತದ ಶಿಖರಗಳು ಅಳ್ಳಾಡುತ್ತಿವೆ. ವೃಕ್ಷಗಳು ಕೆಳಗೆ ಬೀಳುತ್ತಿವೆ.

ಮೇಘಾಃ ಕ್ರವ್ಯಾದಸಂಕಾಶಾಃ ಪರುಷಾಃ ಪರುಷಸ್ವನಾಃ ।
ಕ್ರೂರಾಃ ಕ್ರೂರಂ ಪ್ರವರ್ಷನ್ತಿ ಮಿಶ್ರಂ ಶೋಣಿತಬಿನ್ದುಭಿಃ ॥೫॥

ಮೇಘಗಳು ಮಾಂಸಾಶಿಗಳಾದ ರಾಕ್ಷಸರಂತೆ ಭಯಂಕರವಾಗಿ ಕಾಣುತ್ತಿವೆ. ಅವುಗಳ ಗರ್ಜನೆಯು ಅತಿಕಠೋರವಾಗಿದೆ. ಅತ್ಯಂತಕ್ರೂರವಾಗಿ ಕಾಣುತ್ತಿರುವ ಈ ಮೇಘಗಳು ರಕ್ತದ ಹನಿಗಳಿಂದ ಮಿಶ್ರವಾದ ಕ್ರೂರವಾಗಿ ಕಾಣುವ ಮಳೆಯನ್ನು ಸುರಿಸುತ್ತಿವೆ.

ರಕ್ತಚನ್ದನಸಂಕಾಶಾ ಸನ್ಧ್ಯಾ ಪರಮದಾರುಣಾ ।
ಜ್ವಲತಃ ಪ್ರಪತತ್ಯೇತದಾದಿತ್ಯಾದಗ್ನಿಮಣ್ಡಲಮ್ ॥೬॥

ಈ ಸಂಧ್ಯಾಕಾಲವು ರಕ್ತಚಂದನಕ್ಕೆ ಸಮಾನವಾದ ಕಾಂತಿಯಿಂದ ಕೂಡಿದ್ದು ಅತ್ಯಂತಭಯಂಕರವಾಗಿ ಕಾಣುತ್ತಿದೆ. ಪ್ರಜ್ವಲಿಸುತ್ತಿರುವ ಸೂರ್ಯನಿಂದ ಕೆಂಡಗಳು ಕೆಳಗುದುರುತ್ತಿವೆ.

ದೀನಾ ದೀನಸ್ವರಾಃ ಕ್ರೂರಾಃ ಸರ್ವತೋ ಮೃಗಪಕ್ಷಿಣಃ ।
ಪ್ರತ್ಯಾದಿತ್ಯಂ ವಿನರ್ದನ್ತಿ ಜನಯನ್ತೋ ಮಹದ್ಭಯಮ್ ॥೭॥

ಕ್ರೂರವಾದ ಮೃಗ-ಪಕ್ಷಿಗಳು ದೈನ್ಯಭಾವದಿಂದ ಕೂಡಿದುವುಗಳಾಗಿ ಸೂರ್ಯನ ಕಡೆಗೆ ಮುಖಮಾಡಿಕೊಂಡು ದೀನಸ್ವರದಿಂದ ಚೀತ್ಕಾರ ಮಾಡುತ್ತಾ ಎಲ್ಲ ಪ್ರಾಣಿಗಳಿಗೂ ಭಯವನ್ನುಂಟುಮಾಡುತ್ತಿವೆ.

ರಜನ್ಯಾಮಪ್ರಕಾಶಸ್ತು ಸಂತಾಪಯತಿ ಚನ್ದ್ರಮಾಃ ।
ಕೃಷ್ಣರಕ್ತಾಂಶುಪರ್ಯನ್ತೋ ಲೋಕಕ್ಷಯ ಇವೋದಿತಃ ॥೮॥

ಚಂದ್ರನಾದರೋ ಪ್ರಕಾಶವಿಲ್ಲದವನಾಗಿ ತನ್ನ ಸ್ವಭಾವಕ್ಕೆ ವಿಪರೀತವಾಗಿ ಜನರನ್ನು ಸಂತಾಪಗೊಳಿಸುತ್ತಿದ್ದಾನೆ. ಕಪ್ಪಾದ ಮತ್ತು ಕೆಂಪಾದ ಕಿರಣಗಳಿಂದ ವ್ಯಾಪ್ತನಾಗಿರುವ ಚಂದ್ರನು ಲೋಕದ ಕ್ಷಯವನ್ನು ಸೂಚಿಸುವ ಸಲುವಾಗಿಯೇ ಹುಟ್ಟಿರುವನೋ ಎಂಬಂತೆ ಕಾಣುತ್ತಿದ್ದಾನೆ.

ಹ್ರಸ್ವೋ ರೂಕ್ಷೋಽಪ್ರಶಸ್ತಶ್ಚ ಪರಿವೇಷಃ ಸುಲೋಹಿತಃ ।
ಆದಿತ್ಯೇ ವಿಮಲೇ ನೀಲಂ ಲಕ್ಷ್ಮ ಲಕ್ಷ್ಮಣ ದೃಶ್ಯತೇ ॥೯॥

ಲಕ್ಷ್ಮಣ! ನಿರ್ಮಲವಾದ ಸೂರ್ಯಮಂಡಲದಲ್ಲಿ ಕಪ್ಪಾಗಿರುವ

ಚಿಹ್ನೆಯು ಕಾಣಿಸಿಕೊಳ್ಳುತ್ತಿದೆ. ಸೂರ್ಯನ ಸುತ್ತಲೂ ಹರಡಿಕೊಂಡಿರುವ ಪರಿವೇಷವು* ಚಿಕ್ಕದಾಗಿ ಕೆಂಪುಬಣ್ಣದಿಂದ ಕೂಡಿದ್ದು ಅತ್ಯಂತಕ್ರೂರವೂ, ಅಪ್ರಶಸ್ತವೂ ಆಗಿದೆ.

ರಜಸಾ ಮಹತಾ ಚಾಪಿ ನಕ್ಷತ್ರಾಣಿ ಹತಾನಿ ಚ ।
ಯುಗಾನ್ತಮಿವ ಲೋಕಾನಾಂ ಪಶ್ಯ ಶಂಸನ್ತಿ ಲಕ್ಷ್ಮಣ ॥೧೦॥

ಅಲ್ಲಿ ನೋಡು, ಲಕ್ಷ್ಮಣ! ಆ ನಕ್ಷತ್ರಗಳು ಅಪಾರವಾದ ಧೂಳಿನಿಂದ ಮುಚ್ಚಿಹೋಗಿ ಪ್ರಭೆಯನ್ನೇ ಕಳೆದುಕೊಂಡಿವೆ. ಜಗತ್ತಿನಲ್ಲಿ ಮುಂದೆ ಆಗಲಿರುವ ಮಹಾನಾಶವನ್ನು ಸೂಚಿಸುತ್ತಿವೆ.

ಕಾಕಾಃ ಶ್ಯೇನಾಸ್ತಥಾ ಗೃಧ್ರಾ ನೀಚಾಃ ಪರಿಪತನ್ತಿ ಚ ।
ಶಿವಾಶ್ಚಾಪ್ಯಶಿವಾನ್ನಾದಾನ್ನದನ್ತಿ ಸುಮಹಾಭಯಾನ್ ॥೧೧॥

ಕಾಗೆಗಳೂ, ಗಿಡಗಗಳೂ, ಗೃಧ್ರಗಳೂ ನೀಚಪಕ್ಷಿಗಳೊಡನೆ ಎಲ್ಲ ಕಡೆಗಳಲ್ಲಿಯೂ ಹಾರಾಡುತ್ತಿವೆ. ಗುಳ್ಳೇನರಿಗಳು ಅಮಂಗಳಕರವಾಗಿ ಮತ್ತು ಅತ್ಯಂತಭಯಂಕರವಾಗಿ ಕೂಗಿಕೊಳ್ಳುತ್ತಿವೆ.

---

* ಸೂರ್ಯ-ಚಂದ್ರರ ಸುತ್ತಲೂ ಯಾವಾಗಲಾದರೊಮ್ಮೆ ಹರಡಿಕೊಳ್ಳುವ ವರ್ತುಲಾಕಾರದ ಪ್ರಭೆಗೆ ಪರಿವೇಷವೆಂದು ಹೆಸರು. 'ಪರಿವೇಷಸ್ತು ಪರಿಧಿರುಪಸೂರ್ಯಕಮಣ್ಡಲೇ' (ಅಮರಃ) ಈ ಪರಿವೇಷವು ಹಲವಾರು ವರ್ಷಗಳಿಗೊಮ್ಮೆ ಕಾಣಿಸಿಕೊಳ್ಳುತ್ತದೆ. ಅದು ಶುಭಾಶುಭಫಲಗಳ ಸೂಚಕವಾಗಿರುತ್ತದೆ. ನಿಮಿತ್ತ ಶಾಸ್ತ್ರಜ್ಞರು ಪರಿವೇಷದ ಶುಭಾಶುಭಫಲಗಳನ್ನು ಹೀಗೆ ಹೇಳಿದ್ದಾರೆ : ದಿನಕರ ಪರಿವೇಷಃ ಪೂರ್ವಯಾಮೇ ತು ಪೀಡಾ ದಿನಕರಪರಿವೇಷೋ ವೃಷ್ಟಿಯುದ್ಧಂ ದ್ವಿತೀಯೇ । ದಿನಕರಪರಿವೇಷಂ ಕ್ಷೇಮಮಾಹುಸ್ತೃತಿಯೇ ದಿನಕರಪರಿವೇಷಃ ಸರ್ವನಾಶಶ್ಚತುರ್ಥೇ ॥ ಯಾಮ ಎಂದರೆ ದಿನದ ಎಂಟನೆಯ ಒಂದು ಭಾಗ. ಅಥವಾ ಮೂರು ಘಂಟೆಗಳಿಗೆ ಒಂದು ಯಾಮ. ಹೀಗೆ ಹಗಲು ನಾಲ್ಕು ಯಾಮಗಳು, ರಾತ್ರಿ ನಾಲ್ಕು ಯಾಮಗಳು–ಮೊದಲ ಯಾಮದಲ್ಲಿ ಸೂರ್ಯನಿಗೆ ಪರಿವೇಷವು ಕಟ್ಟಿದರೆ ಪೀಡೆ. ಎರಡನೆಯ ಯಾಮದಲ್ಲಿ ಪರಿವೇಷವು ಕಟ್ಟಿದರೆ ವೃಷ್ಟಿ ಮತ್ತು ಯುದ್ಧ. ಮೂರನೆಯ ಯಾಮದಲ್ಲಿ ಪರಿವೇಷವು ಕಟ್ಟಿದರೆ ಕ್ಷೇಮ. ನಾಲ್ಕನೆಯ ಯಾಮದಲ್ಲಿ (ಸಾಯಂಕಾಲದಲ್ಲಿ ಮೂರು ಘಂಟೆಯಿಂದ ಆರು ಘಂಟೆಯವರೆಗೆ) ಪರಿವೇಷವು ಕಟ್ಟಿದರೆ ಸರ್ವನಾಶ. ಶ್ರೀರಾಮನಿಲ್ಲಿ ನಾಲ್ಕನೆಯ ಯಾಮದ ಪರಿವೇಷದ ವಿಷಯವಾಗಿಯೇ ಹೇಳುತ್ತಿದ್ದಾನೆ.

ವಾನರರೂ ಮತ್ತು ರಾಕ್ಷಸರೂ ಪರಸ್ಪರವಾಗಿ ಪ್ರಹರಿಸುವ ಖಡ್ಗ ಗಳಿಂದಲೂ, ಪರ್ವತಗಳಿಂದಲೂ, ಶೂಲಗಳಿಂದಲೂ ಈ ಪ್ರದೇಶವು ತುಂಬಿ ಹೋಗುತ್ತದೆ ಮತ್ತು ಮಾಂಸ-ರಕ್ತಗಳ ಸುರಿತದಿಂದ ಇಲ್ಲಿ ಕೆಸರೇಳುತ್ತದೆ.

ಲಕ್ಷ್ಮಣ! ನಾವೀಗಲೇ ಸಮಸ್ತವಾದ ಕಪಿಸೈನ್ಯದಿಂದಲೂ ಸಮಾವೃತ ರಾಗಿ ರಾವಣನಿಂದ ಪರಿಪಾಲಿಸಲ್ಪಡುತ್ತಿರುವ, ಎದುರಿಸಲು ಅಸಾಧ್ಯವಾದ ಲಂಕಾಪಟ್ಟಣವನ್ನು ಅತ್ಯಂತಶೀಘ್ರವಾಗಿ ಆಕ್ರಮಿಸೋಣ."

ಯುದ್ಧದಲ್ಲಿ ಎದುರಿಸಲು ಅಸಾಧ್ಯನಾದ ಧನುರ್ಧಾರಿಯಾದ ಶ್ರೀರಾಮನು ಲಕ್ಷ್ಮಣನೊಡನೆ ಹೀಗೆ ಹೇಳಿ ಮಹಾಕಪಿಸೈನ್ಯದ ಅಗ್ರಭಾಗದಲ್ಲಿ ಲಂಕೆಗೆ ಅಭಿಮುಖವಾಗಿ ಪ್ರಯಾಣಮಾಡಿದನು. ವಿಭೀಷಣನಿಂದಲೂ ಸುಗ್ರೀವನಿಂದಲೂ ಕೂಡಿರುವ ಆ ಎಲ್ಲ ವಾನರಶ್ರೇಷ್ಠರೂ ಗರ್ಜನೆಗಳನ್ನು ಮಾಡುತ್ತಾ ಯುದ್ಧಮಾಡಲು ನಿಶ್ಚಯಿಸಿ ಶತ್ರುಗಳ ವಧೆಯ ಸಲುವಾಗಿ ಶ್ರೀರಾಮನ ಹಿಂಬದಿಯಲ್ಲಿ ಹೊರಟರು. ಶ್ರೀರಾಮನಿಗೆ ಪ್ರಿಯವನ್ನುಂಟು ಮಾಡುವ ಸಲುವಾಗಿ ಸಡಗರದಿಂದ ಹೊರಟಿದ್ದ ವೀರ್ಯವಂತರಾದ ವಾನರರ ಗರ್ಜನೆಗಳಿಂದಲೂ, ಉತ್ಸಾಹದ ಕುಣಿತಗಳಿಂದಲೂ ಶ್ರೀರಾಮನು ಸಂತೋಷಗೊಂಡನು.

೨೪ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೨೫ನೆಯ ಸರ್ಗ

ಶ್ರೀರಾಮನಿಂದ ಲಂಕಾಪಟ್ಟಣದ ವರ್ಣನೆ : ವ್ಯೂಹಕ್ರಮದಲ್ಲಿ ನಿಲ್ಲಲು ಸೈನ್ಯಕ್ಕೆ ಆದೇಶ : ಶ್ರೀರಾಮನಿಂದ ಬಿಡುಗಡೆಹೊಂದಿದ ಶುಕನು ರಾವಣನ ಬಳಿಗೆ ಹೋಗಿ ಶ್ರೀರಾಮನ ಸೈನ್ಯಶಕ್ತಿಯನ್ನು ವಿವರಿಸಿ ಹೇಳಿದುದು : ರಾವಣನಿಂದ ತನ್ನ ಬಲದ ಬಗೆಗೆ ಪ್ರಶಂಸೆ

ಸಾ ವೀರಸಮಿತೀ ರಾಜ್ಞಾ ವಿರರಾಜ ವ್ಯವಸ್ಥಿತಾ ।
ಶಶಿನಾ ಶುಭನಕ್ಷತ್ರಾ ಪೌರ್ಣಮಾಸೀವ ಶಾರದೀ ॥೧॥

ಸುಗ್ರೀವನಿಂದ ವ್ಯವಸ್ಥೆಗೊಳಿಸಲ್ಪಟ್ಟಿದ್ದ ಆ ಮಹಾಸೈನ್ಯವು ಶರತ್ಕಾಲ ದಲ್ಲಿ ಶುಭನಕ್ಷತ್ರಗಳಿಂದಲೂ ಚಂದ್ರನಿಂದಲೂ ಕಂಗೊಳಿಸುವ ಹುಣ್ಣಿಮೆ ಯಂತೆಯೇ ಪ್ರಕಾಶಿಸುತ್ತಿದ್ದಿತು.

ಆ ವಿಶಾಲವಾದ ವಾನರಸೈನ್ಯವು ಸಮುದ್ರದಂತೆಯೇ ಕಾಣುತ್ತಿದ್ದಿತು. ಆ ಮಹಾಸೈನ್ಯದಿಂದ ಪೀಡಿತಳಾದ ಭೂದೇವಿಯು ಭಯಗೊಂಡು ತರ-ತರನೆ ನಡುಗಿದಳು. ಅನಂತರ ವಾನರರು ಲಂಕೆಯಲ್ಲಿ ದೊಡ್ಡ ಕೋಲಾಹಲ ಶಬ್ದವಾಗುತ್ತಿರುವುದನ್ನು ಕೇಳಿದರು. ಆ ಶಬ್ದವು ಭೇರೀ-ಮೃದಂಗಶಬ್ದ ಗಳೊಡನೆಯೂ ಸೇರಿ ಅತಿಭಯಂಕರವೂ ರೋಮಾಂಚಕರವೂ ಆಗಿದ್ದಿತು. ಆ ತುಮುಲಶಬ್ದವನ್ನು ಕೇಳಿ ವಾನರಸೈನಿಕರು ಹರ್ಷೋತ್ಸಾಹಗಳಿಂದ ಬೀಗಿ ದರು. ಕೇಳಲು ಸಹನೆಯಿಲ್ಲದ ಕಪಿಸೈನಿಕರು ಅದಕ್ಕಿಂತಲೂ ಗಟ್ಟಿಯಾಗಿ ಗರ್ಜನೆಮಾಡಿದರು. ರಾಕ್ಷಸರು ಕೂಡ ಆಕಾಶದಲ್ಲಿ ಕೇಳಿಬರುವ ಮೇಘಗಳ ಶಬ್ದದಂತೆ ದರ್ಪದಿಂದ ಕೂಡಿದ್ದ ವಾನರರ ಗರ್ಜನೆಯನ್ನು ಕೇಳಿದರು.

ರಘುನಂದನನು ಚಿತ್ರವಾದ ಧ್ವಜಗಳಿಂದಲೂ ಪತಾಕೆಗಳಿಂದಲೂ ಸಮಲಂಕೃತವಾಗಿದ್ದ ಲಂಕೆಯನ್ನು ನೋಡಿ ವ್ಯಥೆಗೊಂಡ ಮನಸ್ಸಿನಿಂದ ಸೀತಾದೇವಿಯನ್ನು ನೆನೆದನು :

"ಅಯ್ಯೋ! ಮಂಗಳಗ್ರಹದಿಂದ ಆಕ್ರಾಂತವಾದ ರೋಹಿಣೀನಕ್ಷತ್ರ ದಂತೆ–ಜಿಂಕೇಮರಿಯ ಕಣ್ಣುಗಳಂತೆ ಚಂಚಲವಾದ ಕಣ್ಣುಗಳಿಂದ ಕೂಡಿರುವ ನನ್ನ ಪ್ರೇಯಸಿಯಾದ ಸೀತೆಯು ರಾವಣನ ಬಂಧನದಲ್ಲಿದ್ದಾಳೆ."

ವೀರನಾದ ಶ್ರೀರಾಮನು ಹೀಗೆ ಮನಸ್ಸಿನಲ್ಲಿಯೇ ಪರಿತಪಿಸುತ್ತಾ ದೀರ್ಘವಾಗಿ ನಿಟ್ಟುಸಿರನ್ನು ಬಿಡುತ್ತಾ ಲಕ್ಷ್ಮಣನನ್ನು ನೋಡಿ ಸಮಯಾನು ಕೂಲವಾದ ಮತ್ತು ಹಿತಕರವಾದ ಈ ಮಾತನ್ನು ಹೇಳಿದನು :

"ಲಕ್ಷ್ಮಣ! ಈ ಲಂಕೆಯನ್ನಾದರೂ ನೋಡು! ಇದು ತನ್ನ ಔನ್ನತ್ಯದಿಂದ ಆಕಾಶದಲ್ಲೇನಾದರೂ ಗೆರೆಯನ್ನು ಎಳೆಯುತ್ತಿರುವುದೋ ಎಂಬಂತೆ ಕಾಣುತ್ತಿದೆ. ಹಿಂದೆ ವಿಶ್ವಕರ್ಮನು ಈ ಲಂಕಾಪಟ್ಟಣವನ್ನು ಪರ್ವತದ ಶಿಖರದಲ್ಲಿ ಮನಸ್ಸಿನಿಂದಲೇ ನಿರ್ಮಿಸಿದನೋ ಎಂಬಂತೆ ಕಾಣುತ್ತಿದೆ– ಅಲ್ಲವೇ! ಹಲವಾರು ಉಪ್ಪರಿಗೆಮನೆಗಳಿಂದ ವ್ಯಾಪ್ತವಾದ ಈ ಲಂಕಾಪಟ್ಟ ಣವು ವಿಶ್ವಕರ್ಮನಿಂದ ಬಹಳ ಹಿಂದೆಯೇ ನಿರ್ಮಿಸಲ್ಪಟ್ಟಿದೆ. ಬಿಳುಪಾದ ಮೋಡಗಳಿಂದ ಆಕಾಶವು ಆಚ್ಛಾದಿತವಾಗಿರುವಂತೆ–ಈ ಉಪ್ಪರಿಗೇಮನೆ ಗಳಿಂದ ಲಂಕಾಪಟ್ಟಣವು ಆಚ್ಛಾದಿತವಾಗಿದೆ. ಪುಷ್ಪಿತವಾದ ಚೈತ್ರರಥವೆಂಬ

ಉದ್ಯಾನಕ್ಕೆ ಸದೃಶವಾದ ಸುಂದರವಾದ ಕಾನನಗಳಿಂದ ಈ ಲಂಕಾಪಟ್ಟಣವು ಶೋಭಿತವಾಗಿದೆ. ನಾನಾವಿಧವಾದ ಪಕ್ಷಿಗಳ ಕಲಕಲನಿನಾದಗಳಿಂದಲೂ ಮತ್ತು ಶುಭಕರವಾದ ಫಲ-ಪುಷ್ಪಗಳಿಂದಲೂ ಕೂಡಿರುವ ಈ ಉದ್ಯಾನ ವನಗಳು ಬಹಳ ಸುಂದರವಾಗಿ ಕಾಣುತ್ತಿವೆ. ಲಕ್ಷ್ಮಣ! ಅದೋ ಅಲ್ಲಿ ಕಾಣುವ ಮದಿಸಿದ ಪಕ್ಷಿಗಳನ್ನು ನೋಡು. ಪುಷ್ಪದಲ್ಲಿ ಹುದುಗಿಕೊಂಡಿರುವ ದುಂಬಿಗಳನ್ನು ನೋಡು. ಕೋಗಿಲೆಗಳಿಂದ ವ್ಯಾಪ್ತವಾದ ವೃಕ್ಷಗಳನ್ನು ನೋಡು. ಈ ವೃಕ್ಷಗಳನ್ನು ಮಂಗಳಕರವಾದ ಮಂದಮಾರುತವು ಅಲ್ಲಾಡಿಸುತ್ತಿದೆ."

ಹೀಗೆ ಶ್ರೀರಾಮನು ಲಕ್ಷ್ಮಣನಿಗೆ ಹೇಳಿ ಯುದ್ಧಶಾಸ್ತ್ರದ ನೀತಿಗೆ ಅನುಸಾರವಾಗಿ ವಾನರಸೈನ್ಯವನ್ನು ವಿಭಾಗಿಸುತ್ತಾ ಸೈನ್ಯಕ್ಕೆ ಆದೇಶವನ್ನಿತ್ತನು.

"ವಿಶಾಲವಾಗಿರುವ ಈ ಸೇನಾಸಮೂಹದಲ್ಲಿ ದುರ್ಜಯನೂ ಪರಾಕ್ರಮಿಯೂ ಆದ ಅಂಗದನು ತನ್ನ ಸೈನ್ಯವನ್ನು ತೆಗೆದುಕೊಂಡು ನೀಲನೊಡನೆ ವ್ಯೂಹದ ಹೃದಯಸ್ಥಾನದಲ್ಲಿ ನಿಲ್ಲಲಿ. ಹಾಗೆಯೇ ವಾನರನಾಯಕನಾದ ಋಷಭನು ತನ್ನ ಅಧೀನದಲ್ಲಿರುವ ವಾನರಸೈನಿಕರಿಂದ ಸಮಾವೃತನಾಗಿ ವಾನರವಾಹಿನಿಯ ದಕ್ಷಿಣಪಾರ್ಶ್ವದಲ್ಲಿ ನಿಲ್ಲಲಿ. ಗಂಧಹಸ್ತಿಗೆ ಸಮಾನವಾದ ಪರಾಕ್ರಮವುಳ್ಳ, ಎದುರಿಸಲು ಅಸಾಧ್ಯನಾದ, ವೇಗವಂತನಾದ, ಕಪಿಶ್ರೇಷ್ಠನಾದ ಗಂಧಮಾದನನು ವಾನರವಾಹಿನಿಯ ಎಡಪಾರ್ಶ್ವದಲ್ಲಿ ನಿಲ್ಲಲಿ. ನಾನು ಲಕ್ಷ್ಮಣನೊಡನೆ ವ್ಯೂಹದ ತಲೆಯ ಪ್ರದೇಶದಲ್ಲಿ ನಿಲ್ಲುತ್ತೇನೆ. ಮಹಾತ್ಮರಾದ, ಕರಡಿಗಳ ಸೈನ್ಯದಲ್ಲಿ ಮುಖ್ಯರಾದ ಜಾಂಬವಂತ, ಸುಷೇಣ, ವೇಗದರ್ಶೀ–ಈ ಮೂವರೂ ವ್ಯೂಹದ ಹೊಟ್ಟೆಯ ಭಾಗವನ್ನು ರಕ್ಷಿಸಲಿ. ತೇಜಸ್ವಿಯಾದ ವರುಣನು ಜಗತ್ತಿನ-ಲೋಕದ-ಪಶ್ಚಿಮಭಾಗವನ್ನು ರಕ್ಷಿಸುವಂತೆ–ಕಪಿರಾಜನಾದ ಸುಗ್ರೀವನು ವ್ಯೂಹದ ಕೆಳಭಾಗವನ್ನು ರಕ್ಷಿಸಲಿ."

ಶ್ರೀರಾಮನು ಹೀಗೆ ಆಜ್ಞಾಪಿಸಿದೊಡನೆಯೇ ಕಪಿಮುಖ್ಯರು ತಮ್ಮ-ತಮ್ಮ ಸ್ಥಳಗಳಲ್ಲಿ ಸೈನ್ಯಸಮೇತರಾಗಿ ನಿಂತುಕೊಂಡರು. ಹೀಗೆ ಸುಂದರವಾಗಿ ವಿಭಾಗಿಸಲ್ಪಟ್ಟು ವ್ಯೂಹದ ಕ್ರಮದಲ್ಲಿ ನಿಲ್ಲಿಸಲ್ಪಟ್ಟಿದ್ದ ಮಹಾವಾನರರಿಂದ ರಕ್ಷಿಸಲ್ಪಡುತ್ತಿದ್ದ ಆ ವಾನರವಾಹಿನಿಯು ಮೇಘಗಳಿಂದ ಆವರಿಸಲ್ಪಟ್ಟಿದ್ದ

ಆಕಾಶದಂತೆಯೇ ಕಾಣುತ್ತಿದ್ದಿತು. ಪರ್ವತಗಳ ಶಿಖರಗಳನ್ನೂ ದೊಡ್ಡ-ದೊಡ್ಡ ಮರಗಳನ್ನೂ ಹಿಡಿದು ಲಂಕಾಪಟ್ಟಣವನ್ನು ಧೂಳೀಪಟಮಾಡುವ ಇಚ್ಛೆಯಿಂದ ಎಲ್ಲ ವಾನರರೂ ಉತ್ಸಾಹದಿಂದ ಆಗಮಿಸಿದರು. ವಾನರಶ್ರೇಷ್ಠರೆಲ್ಲರೂ ಲಂಕೆಯನ್ನು ಪರ್ವತಶಿಖರಗಳಿಂದ ಮುಚ್ಚಿಬಿಡಬೇಕೆಂದೂ–ಲಂಕಾವಾಸಿಗಳನ್ನು ಮುಷ್ಟಿಗಳಿಂದ ಗುದ್ದಿ ಸಂಹರಿಸಬೇಕೆಂದೂ ಮನಸ್ಸಿನಲ್ಲಿ ನಿರ್ಧರಿಸಿದರು.

ಹೀಗೆ ವ್ಯೂಹವನ್ನು ರಚಿಸಿದ ನಂತರ ಮಹಾತೇಜಸ್ವಿಯಾದ ಶ್ರೀರಾಮನು ಸುಗ್ರೀವನಿಗೆ ಹೇಳಿದನು :

"ಸುಗ್ರೀವ! ಈಗ ನಮ್ಮ ಸೈನ್ಯವು ಸುಂದರವಾಗಿ ವಿಭಜಿಸಲ್ಪಟ್ಟು ವ್ಯೂಹಕ್ರಮದಲ್ಲಿ ನಿಂತಿದೆ. ಆದುದರಿಂದ ಶುಕನನ್ನು ಬಂಧನದಿಂದ ಬಿಡುಗಡೆ ಮಾಡು."

ಶ್ರೀರಾಮನ ಮಾತನ್ನು ಕೇಳಿ ಮಹಾಬಲನಾದ ವಾನರೇಂದ್ರನಾದ ಸುಗ್ರೀವನು ಶ್ರೀರಾಮನ ಆಜ್ಞೆಯಂತೆ ದೂತನಾಗಿ ಬಂದಿದ್ದ ಶುಕರಾಕ್ಷಸ ನನ್ನು ಬಂಧನದಿಂದ ಬಿಡಿಸಿದನು.

ವಾನರರಿಂದ ಪೀಡಿಸಲ್ಪಡುತ್ತಿದ್ದ ಶುಕನು ಶ್ರೀರಾಮನ ಆಜ್ಞೆಯಿಂದ ಮುಕ್ತನಾಗಿ, ಭೀತ-ಭೀತನಾಗಿಯೇ ರಾಕ್ಷಸರ ರಾಜನಾದ ರಾವಣನ ಬಳಿಗೆ ಹೋದನು. ತನ್ನಿಂದ ಕಳುಹಿಸಲ್ಪಟ್ಟಿದ್ದ ಶುಕನು ಹಿಂದಿರುಗಿ ಬಂದುದನ್ನು ನೋಡಿದೊಡನೆಯೇ ರಾವಣನು ನಗು-ನಗುತ್ತಾ ಹೇಳಿದನು :*

"ಶುಕ! ಇದೇನಿದು? ನಿನ್ನೆರಡು ರೆಕ್ಕೆಗಳೂ ಕತ್ತರಿಸಲ್ಪಟ್ಟಿರುವಂತೆ ಕಾಣುತ್ತಿವೆ? ಚಂಚಲಚಿತ್ತರಾದ ಆ ಕಪಿಗಳಿಗೆ ನೀನು ಬಂದಿಯಾಗಲಿಲ್ಲ ತಾನೇ?"

ರಾವಣನಿಂದ ಹೀಗೆ ಪ್ರಶ್ನಿಸಲ್ಪಟ್ಟ ಶುಕನು ಭಯದಿಂದ ಉದ್ವಿಗ್ನನಾಗಿ ರಾಕ್ಷಸಾಧಿಪನಿಗೆ ಉತ್ತರಿಸಿದನು :

"ಮಹಾರಾಜ! ನಿನ್ನ ಆದೇಶದಂತೆ ನಾನು ಸಮುದ್ರದ ಉತ್ತರತೀರಕ್ಕೆ ಹೋಗಿ ನಿನ್ನ ಸಂದೇಶವನ್ನು ಸ್ಪಷ್ಟವಾದ ಶಬ್ದಗಳಿಂದಲೂ, ಮಧುರವಾದ

---

* ಈ ಕಥೆಯು ಯುದ್ಧಕಾಂಡದ ೨೦ನೆಯ ಸರ್ಗದಿಂದ ಮುಂದುವರಿದಿದೆ.

ವಾಣಿಯಿಂದಲೂ, ಸಾಂತ್ವನಪೂರ್ವಕವಾಗಿಯೂ ತಿಳಿಸಿದೆನು. ಆದರೆ ನನ್ನನ್ನು ನೋಡುತ್ತಲೇ ಕುಪಿತರಾದ ವಾನರರು ಒಂದೇ ನೆಗೆತಕ್ಕೆ ಹಾರಿ ನನ್ನನ್ನು ಹಿಡಿದುಕೊಂಡು ಮುಷ್ಟಿಗಳಿಂದ ಪ್ರಹರಿಸಲು ಮತ್ತು ನನ್ನ ರೆಕ್ಕೆಗಳನ್ನು ಕತ್ತರಿಸಲು ಪ್ರಾರಂಭಿಸಿಬಿಟ್ಟರು. ರಾಕ್ಷಸೇಶ್ವರನೇ! ವಾನರರು ಸ್ವಭಾವದಿಂದಲೇ ಮಹಾಕೋಪಿಷ್ಠರು ಮತ್ತು ಕ್ರೂರಿಗಳು. ಅವರೊಡನೆ ಮಾತನಾಡುವ ಸಾಧ್ಯತೆಯೇ ಇರಲಿಲ್ಲ. ಆದುದರಿಂದ 'ನೀವೇಕೆ ನನ್ನನ್ನು ಪ್ರಹರಿಸುತ್ತಿರುವಿರಿ?'–ಎಂದು ಅವರನ್ನು ಕೇಳುವಷ್ಟು ಅವಕಾಶವೇ ಇರಲಿಲ್ಲ.

ಯಾವನು ವಿರಾಧ-ಕಬಂಧ-ಖರರಾಕ್ಷಸರ ಸಂಹಾರಕನೋ ಅಂತಹ ರಾಮನೇ ಈಗ ಸುಗ್ರೀವನ ಜೊತೆಯಲ್ಲಿ ಸೀತೆಯು ಎಲ್ಲಿರುವಳೆಂಬುದನ್ನು ತಿಳಿದು ಅವಳ ಉದ್ಧಾರಕ್ಕಾಗಿ ಆಗಮಿಸಿದ್ದಾನೆ. ಅವನು ಸಮುದ್ರದ ಮೇಲೆ ಸೇತುವೆಯನ್ನು ಕಟ್ಟಿ ಅಪಾರವಾದ ವಾನರಸೈನ್ಯದೊಡನೆ ಸೇತುವೆಯನ್ನು ದಾಟಿ, ರಾಕ್ಷಸರನ್ನು ತೃಣೀಕರಿಸಿ, ಧನುಷ್ಪಾಣಿಯಾಗಿ ಇಲ್ಲಿಗೆ ಬಂದು ನಿಂತಿದ್ದಾನೆ. ಪರ್ವತೋಪಮರಾದ, ಮೇಘಗಳಿಗೆ ಸಮಾನರಾದ, ವಿಶಾಲಕಾಯರಾದ ಸಾವಿರಾರು-ಲಕ್ಷ ವಾನರಸೈನಿಕರು ಸಮುದ್ರತೀರಪ್ರದೇಶದ ಭೂಮಿಯನ್ನೇ ಮುಚ್ಚಿಬಿಟ್ಟಿದ್ದಾರೆ. ದೇವತೆಗಳಿಗೂ ದಾನವರಿಗೂ ಹೇಗೆ ಸಂಧಿಯಾಗುವ ಸಂಭವವಿಲ್ಲವೋ–ಹಾಗೆಯೇ ವಾನರರಿಗೂ ರಾಕ್ಷಸರಿಗೂ ಸಂಧಿಯಾಗುವ ಸಂಭವವಿಲ್ಲ. ಅವರು ಲಂಕಾಪಟ್ಟಣದ ಕೋಟೆಯನ್ನು ಆಕ್ರಮಿಸುವುದರೊಳಗಾಗಿ ನೀನು ಎರಡರಲ್ಲಿ ಯಾವುದಾದರೂ ಒಂದು ಕಾರ್ಯವನ್ನು ಮಾಡು. ಸೀತೆಯನ್ನಾದರೂ ಈ ಕೂಡಲೇ ರಾಮನಿಗೊಪ್ಪಿಸಿಬಿಡು ಅಥವಾ ಯುದ್ಧಕ್ಕಾದರೂ ಸಿದ್ಧನಾಗು."

ಶುಕರಾಕ್ಷಸನ ಸ್ಪಷ್ಟವಾದ ಆ ಮಾತನ್ನು ಕೇಳಿದೊಡನೆಯೇ ತನ್ನ ದೃಷ್ಟಿಪಾತದಿಂದಲೇ ಎಲ್ಲವನ್ನೂ ಸುಟ್ಟುಬಿಡುವನೋ ಎಂಬಂತೆ ಕಾಣುತ್ತಿದ್ದ, ರೋಷದಿಂದ ಕೆಂಪಾದ ಕಣ್ಣುಗಳನ್ನು ಹೊಂದಿದ್ದ ರಾವಣನು ಶುಕನಿಗೆ ಹೇಳಿದನು :

"ದೇವ-ದಾನವ-ಗಂಧರ್ವರೇ ನನ್ನೆದುರಾಗಿ ನಿಂತು ಯುದ್ಧಮಾಡಲು ಬಂದರೂ, ಸಕಲಲೋಕಗಳೂ ನನ್ನನ್ನು ಭಯಪಡಿಸಿದರೂ–ನಾನು ಖಂಡಿತ

ವಾಗಿಯೂ ಸೀತೆಯನ್ನು ರಾಮನಿಗೆ ಒಪ್ಪಿಸುವುದಿಲ್ಲ. ವಸಂತಕಾಲದಲ್ಲಿ ಪುಷ್ಪಿತವಾದ ವೃಕ್ಷಗಳನ್ನು ದುಂಬಿಗಳು ಮುಚ್ಚಿಬಿಡುವಂತೆ–ನನ್ನಿಂದ ಬಿಡಲ್ಪಡುವ ಬಾಣಗಳು ಯಾವಾಗ ರಾಮನ ಕಡೆಗೆ ಧಾವಿಸಿ ಹೋಗುತ್ತವೆಯೆಂಬುದನ್ನು ನಾನು ಕುತೂಹಲದಿಂದ ನಿರೀಕ್ಷಿಸುತ್ತಿದ್ದೇನೆ. ಬಾಣಗಳ ಪ್ರಹಾರದಿಂದ ರಕ್ತದಿಂದ ತೋಯ್ದ ಅಂಗಗಳಿಂದ ಕೂಡಿರುವ ಆ ರಾಮನನ್ನು ನಾನು ಉಲ್ಕೆಗಳಿಂದ ಆನೆಯನ್ನು ಸುಟ್ಟುಹಾಕುವಂತೆ–ನನ್ನ ಧನುಸ್ಸಿನಿಂದ ಹೊರಬರುವ ಪ್ರದೀಪ್ತವಾದ ಬಾಣಗಳಿಂದ ಯಾವಾಗ ದಹಿಸಿಯೇನೆಂದು ತವಕಪಡುತ್ತಿದ್ದೇನೆ. ಸೂರ್ಯನು ಉದಯಿಸಿದೊಡನೆಯೇ ಸಮಸ್ತನಕ್ಷತ್ರಗಳ ಪ್ರಭೆಯನ್ನೂ ಅಪಹರಿಸುವಂತೆ–ರಣರಂಗಕ್ಕೆ ಹೋದೊಡನೆಯೇ ಮಹಾಬಲಯುಕ್ತನಾಗಿರುವ ನಾನು ಅವನ ಸಮಸ್ತಬಲವನ್ನೂ ಅಪಹರಿಸಿಬಿಡುತ್ತೇನೆ.

ದಶರಥನ ಮಗನಾದ ರಾಮನು ಸಮುದ್ರದ ವೇಗಕ್ಕೆ ಸಮಾನವಾದ ನನ್ನ ವೇಗವನ್ನೂ, ವಾಯುವಿನ ಬಲಕ್ಕೆ ಸಮಾನವಾದ ಬಲವನ್ನೂ ತಿಳಿದಿಲ್ಲ. ಈ ಕಾರಣದಿಂದಲೇ ಅವನು ನನ್ನೊಡನೆ ಯುದ್ಧಮಾಡಲು ಬಯಸಿ ಬಂದಿದ್ದಾನೆ. ನನ್ನ ಬತ್ತಳಿಕೆಯಲ್ಲಿ ಮಲಗಿರುವ ವಿಷಸರ್ಪಗಳಿಗೆ ಸಮಾನವಾದ ಬಾಣಗಳ ಪರಿಚಯವು ರಾಮನಿಗೆ ಆಗಿಲ್ಲ. ಆದುದರಿಂದಲೇ ಅವನು ನನ್ನೊಡನೆ ಯುದ್ಧಮಾಡಲು ಬಯಸಿ ಬಂದಿದ್ದಾನೆ. ಯುದ್ಧಸಮಯದಲ್ಲಿ ರಾಮನಿಗೆ ನನ್ನ ಬಾಣಗಳ ಅರಿವಾಗುತ್ತದೆ. ಹಿಂದೆ ನಾನು ಮಾಡಿದ ಯಾವ ಘೋರಯುದ್ಧದಲ್ಲಿಯೂ ರಾಮನು ನನಗೆ ಎದುರಾಗಿ ಬಂದಿಲ್ಲ. ಆದುದರಿಂದಲೇ ಅವನು ನನ್ನ ವೀರ್ಯ-ಪರಾಕ್ರಮಗಳು ಎಷ್ಟೆಂಬುದನ್ನು ತಿಳಿದವನಾಗಿಲ್ಲ. ನನ್ನ ಧನುಸ್ಸೆಂಬುದೇ ಒಂದು ಸುಂದರವಾದ ವೀಣೆಯಿದ್ದಂತೆ. ಅದನ್ನು ನಾನು ಬಾಣಗಳ ತುದಿಯಿಂದ ಬಾರಿಸುತ್ತೇನೆ. ಭಯಂಕರವಾದ ಮತ್ತು ಘೋರವಾದ ಶಿಂಜಿನಿಯ ಶಬ್ದವೇ ವೀಣೆಯ ಸ್ವರಲಹರಿಯಾಗಿರುತ್ತದೆ. ಶರಪೀಡಿತರಾದವರ ಆರ್ತಚೀತ್ಕಾರಗಳೇ ಉಚ್ಚಸ್ವರದಿಂದ ಹಾಡುವ ಗಾಯನವಾಗಿರುತ್ತದೆ. ಬಾಣಗಳನ್ನು ಬಿಡುವಾಗ ಹೊರಡುವ ಟಂಕಾರಶಬ್ದವೇ ಕೈಗಳಿಂದ ಬಡಿಯುವ ತಾಳವಾಗಿರುತ್ತದೆ. ಹರಿಯುತ್ತಿರುವ ನದಿಗೆ ಸಮಾನವಾಗಿ ಕಾಣುವ ಸೇನಾವಾಹಿನಿಯೇ ಸಂಗೀತೋತ್ಸವಕ್ಕಾಗಿ ನಿರ್ಮಿಸಿದ ವಿಶಾಲವಾದ ರಂಗಭೂಮಿಯಾಗಿರುತ್ತದೆ. ನಾನು

ಸಮರಭೂಮಿಯಲ್ಲಿರುವ ಆ ರಂಗಭೂಮಿಯನ್ನು ಪ್ರವೇಶಿಸಿ ನನ್ನ ಈ ಭಯಂಕರವಾದ ವೀಣೆಯನ್ನು ಬಾರಿಸುತ್ತೇನೆ.

ನ ವಾಸವೇನಾಪಿ ಸಹಸ್ರಚಕ್ಷುಷಾ
ಯಥಾಸ್ಮಿ ಶಕ್ಯೋ ವರುಣೇನ ವಾ ಸ್ವಯಮ್ ।
ಯಮೇನ ವಾ ಧರ್ಷಯಿತುಂ ಶರಾಗ್ನಿನಾ
ಮಹಾಹವೇ ವೈಶ್ರವಣೇನ ವಾ ಪುನಃ ॥೪೪॥

ಮಹಾಯುದ್ಧದಲ್ಲಿ ಸಾವಿರ ಕಣ್ಣುಗಳ ಇಂದ್ರನಾಗಲೀ, ಪಾಶಹಸ್ತನಾದ ಸ್ವಯಂ ವರುಣನೇ ಆಗಲೀ, ದಂಡಧರನಾದ ಯಮನೇ ಆಗಲೀ, ನನ್ನ ಅಣ್ಣ ಕುಬೇರನೇ ಆಗಲೀ–ಅಗ್ನಿರೂಪವಾದ ಬಾಣಗಳಿಂದಲೂ ನನ್ನನ್ನು ಆಕ್ರಮಿಸಲು ಶಕ್ತರಲ್ಲ."

ಿ೨೪ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೨೫ನೆಯ ಸರ್ಗ

ರಾವಣನು ಪುನಃ ಶುಕ-ಸಾರಣರನ್ನು ಗುಟ್ಟಿನಲ್ಲಿ ವಾನರರ ಸೈನ್ಯಸಮೂಹಕ್ಕೆ ಕಳುಹಿಸಿದುದು : ವಿಭೀಷಣನು ಅವರನ್ನು ಗುರುತಿಸಿದುದು : ಶ್ರೀರಾಮನ ಕೃಪೆಯಿಂದ ಅವರು ಪುನಃ ಬಿಡುಗಡೆ ಹೊಂದಿ ಸಂದೇಶವನ್ನು ಹೊತ್ತು ಲಂಕೆಗೆ ಹಿಂದಿರುಗಿ ರಾವಣನಿಗೆ ಸಮಾಧಾನ ಹೇಳಿದುದು

ಸಬಲೇ ಸಾಗರಂ ತೀರ್ಣೇ ರಾಮೇ ದಶರಥಾತ್ಮಜೇ ।
ಅಮಾತ್ಯೌ ರಾವಣಃ ಶ್ರೀಮಾನಬ್ರವೀಚ್ಛುಕಸಾರಣೌ ॥೧॥

ದಶರಥನ ಮಗನಾದ ಶ್ರೀರಾಮನು ವಾನರಸೈನ್ಯದೊಡನೆ ಸಮುದ್ರವನ್ನು ದಾಟಿ ಲಂಕಾಪಟ್ಟಣದ ಸಮೀಪಕ್ಕೆ ಬಂದನಂತರ ಶ್ರೀಮಂತನಾದ ರಾವಣನು ತನ್ನ ಇಬ್ಬರು ಅಮಾತ್ಯರಾದ ಶುಕ-ಸಾರಣರಿಗೆ ಹೇಳಿದನು :

"ಶುಕ-ಸಾರಣರೇ! ಸಮುದ್ರವನ್ನು ದಾಟುವುದು ಅತಿದುಸ್ತರವಾಗಿದ್ದರೂ ಸಮಸ್ತವಾದ ವಾನರಸೈನ್ಯವೂ ಸಮುದ್ರವನ್ನು ದಾಟಿಕೊಂಡು ಈಚೆಯ ದಡಕ್ಕೆ ಬಂದೇಬಿಟ್ಟಿದೆ. ರಾಮನು ಸಮುದ್ರದಲ್ಲಿ ಸೇತುವೆಯನ್ನು

ಕಟ್ಟಿರುವುದು ಪರಮಾದ್ಭುತವಾದ ಕಾರ್ಯವಾಗಿದೆ. ಸಮುದ್ರಕ್ಕೆ ಸೇತುವೆಯನ್ನು ಕಟ್ಟಿರುವರೆಂಬ ವಾರ್ತೆಯನ್ನು ನಾನು ಕೇಳುತ್ತಿದ್ದರೂ ಆ ವಿಷಯದಲ್ಲಿ ನನಗೆ ನಂಬಿಕೆಯೇ ಇಲ್ಲವಾಗಿದೆ. ನೂರುಯೋಜನವಿಸ್ತೀರ್ಣದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿರುವರೆಂಬ ವಾರ್ತೆಯನ್ನು ನಂಬಲು ಸಾಧ್ಯವೇ ಇಲ್ಲ. ವಾನರಸೈನ್ಯದ ಸಂಖ್ಯಾಪರಿಮಾಣವೆಷ್ಟೆಂಬುದನ್ನು ನಾನಿಂದು ಅರಿಯಬೇಕಾಗಿದೆ. ಆದುದರಿಂದ ನೀವು ಯಾರಿಗೂ ತಿಳಿಯದ ರೀತಿಯಲ್ಲಿ ವಾನರಸೈನ್ಯದೊಳಕ್ಕೆ ಪ್ರವೇಶಿಸಬೇಕು. ಹಾಗೆ ಪ್ರವೇಶಿಸಿ ಆ ವಾನರರ ಸಂಖ್ಯೆಯು ಎಷ್ಟಿದೆಯೆಂಬುದನ್ನು ತಿಳಿಯಬೇಕು. ಅವರಿಗೆ ಎಂತಹ ಶಕ್ತಿಯಿದೆ? ಅವರಲ್ಲಿ ಮುಖ್ಯ-ಮುಖ್ಯರಾದವರು ಯಾರು? ಶ್ರೀರಾಮನಿಗೂ ಮತ್ತು ಸುಗ್ರೀವನಿಗೂ ಸಮ್ಮತರಾದ ಮಂತ್ರಿಗಳು ಯಾರು ಯಾರಿದ್ದಾರೆ? ಸೇನೆಯ ಅಗ್ರಭಾಗದಲ್ಲಿ ಯಾವ ಯಾವ ಶೂರವಾನರರಿ ದ್ದಾರೆ? ಅಪಾರವಾದ ಜಲರಾಶಿಯಿಂದ ತುಂಬಿರುವ ಸಮುದ್ರದ ಮೇಲೆ ಅವರು ಹೇಗೆ ಸೇತುವೆಯನ್ನು ಕಟ್ಟಿದರು? ಆ ಮಹಾತ್ಮರಾದ ವಾನರಸೈನಿಕ ರಿಗೆ ಉಳಿದುಕೊಳ್ಳಲು ಬಿಡಾರಗಳೆಲ್ಲಿವೆ? ರಾಮ-ಲಕ್ಷ್ಮಣರ ನಿಶ್ಚಯವೇನು? ಅವರ ಪರಾಕ್ರಮವೆಷ್ಟು? ಅವರಲ್ಲಿ ಯಾವ ಯಾವ ಆಯುಧಗಳಿವೆ? ಈ ಎಲ್ಲ ವಿಷಯಗಳನ್ನೂ ನೀವು ಯಥಾವತ್ತಾಗಿ ತಿಳಿದು ಬರಬೇಕು. ಮಹಾತ್ಮರಾದ ವಾನರರ ಸೇನಾಪತಿಯು ಯಾರು? ಈ ವಿಷಯವನ್ನು ಕೂಡ ನೀವು ಯಥಾವತ್ತಾಗಿ ತಿಳಿದುಕೊಂಡು ಶೀಘ್ರವೇ ಇಲ್ಲಿಗೆ ಆಗಮಿಸಿರಿ.”

ಹೀಗೆ ರಾವಣನಿಂದ ನಿರ್ದೇಶಿತರಾದ ಶುಕ-ಸಾರಣರಾಕ್ಷಸರು ಕಪಿಗಳ ರೂಪವನ್ನೇ ಧರಿಸಿ ವಾನರಸೈನ್ಯವನ್ನು ಪ್ರವೇಶಿಸಿದರು.

ವಾನರಸೈನ್ಯವು ಎಷ್ಟಿರುವುದೆಂಬುದನ್ನು ಊಹಿಸಲು ಕೂಡ ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಕಣ್ಣುಗಳಿಗೆ ಎಟುಕದಷ್ಟು ದೂರವೂ ಅದು ತುಂಬಿ ಹೋಗಿದ್ದಿತು. ಅದನ್ನು ನೋಡುತ್ತಲೇ ಎಲ್ಲರಿಗೂ ರೋಮಾಂಚನವಾಗುತ್ತಿದ್ದಿತು. ಈ ಕಾರಣದಿಂದ ಶುಕ-ಸಾರಣರಿಗೆ ಕಪಿಸೈನ್ಯವು ಎಷ್ಟಿರುವುದೆಂಬುದನ್ನು ಎಣಿಕೆಮಾಡಲು ಸಾಧ್ಯವಾಗಲೇ ಇಲ್ಲ. ವಾನರಸೇನೆಯು ಪರ್ವತ ಶಿಖರಗಳಲ್ಲಿಯೂ, ಗಿರಿ-ನದಿಗಳ ತೀರಪ್ರದೇಶಗಳಲ್ಲಿಯೂ, ಗುಹೆಗಳಲ್ಲಿಯೂ, ಸಮುದ್ರದ ತೀರಪ್ರದೇಶಗಳಲ್ಲಿಯೂ, ವನಗಳಲ್ಲಿಯೂ, ಉಪವನ

ಗಳಲ್ಲಿಯೂ ಬೀಡುಬಿಟ್ಟಿದ್ದಿತು. ಇಷ್ಟುಮಾತ್ರವಲ್ಲದೇ ಸಮುದ್ರವನ್ನು ದಾಟಿದವರೂ, ದಾಟುತ್ತಿದ್ದವರೂ, ದಾಟಬೇಕೆಂಬ ಇಚ್ಛೆಯಿಂದ ಸಮುದ್ರದ ಉತ್ತರತೀರದಲ್ಲಿಯೇ ಕಾಯುತ್ತಾ ನಿಂತಿದ್ದವರೂ ಅಪಾರಸಂಖ್ಯೆಯಲ್ಲಿದ್ದರು. ಭಯಂಕರವಾಗಿ ಗರ್ಜನೆಮಾಡುತ್ತಿದ್ದ, ಮಹಾಬಲಿಷ್ಠವಾಗಿದ್ದ ಆ ಕಪಿಸಮೂಹದಲ್ಲಿ ಕೆಲವರು ಗುಡಾರಗಳನ್ನು ಹಾಕಿದ್ದರು. ಮತ್ತೆ ಕೆಲವರು ಹಾಕುತ್ತಿದ್ದರು. ಇನ್ನೂ ಕೆಲವರು ಗುಡಾರಗಳನ್ನು ಹಾಕುವ ಸಿದ್ಧತೆಯಲ್ಲಿದ್ದರು. ಸಮುದ್ರದಂತೆ ಅಕ್ಷೋಭ್ಯವಾಗಿದ್ದ ಅಂತಹ ವಾನರಸೇನೆಯನ್ನು ರಾಕ್ಷಸರಿಬ್ಬರೂ ನೋಡಿದರು. ವೇಷವನ್ನು ಮರೆಸಿಕೊಂಡಿದ್ದ ಇಬ್ಬರನ್ನೂ ವಿಭೀಷಣನು ಗುರುತಿಸಿದನು. ಒಡನೆಯೇ ಅವರಿಬ್ಬರನ್ನೂ ಹಿಡಿದು ಶ್ರೀರಾಮನ ಬಳಿಗೆ ಕರೆತಂದು ಹೇಳಿದನು :

"ಶತ್ರುಗಳ ಪಟ್ಟಣವನ್ನು ಜಯಿಸುವವನೇ! ರಾಘವ! ಈ ಇಬ್ಬರೂ ರಾಕ್ಷಸೇಂದ್ರನಾದ ರಾವಣನ ಮಂತ್ರಿಗಳಾದ ಶುಕ-ಸಾರಣರೆಂಬುವರು. ಈ ಇಬ್ಬರು ಗೂಢಚಾರರೂ ರಾವಣನ ಆದೇಶದಂತೆ ಲಂಕೆಯಿಂದ ಇಲ್ಲಿಗೆ ಬಂದಿರುವರು."

ವಿಭೀಷಣನಿಂದ ಒಯ್ಯಲ್ಪಟ್ಟ ಅವರಿಬ್ಬರು ರಾಕ್ಷಸರೂ ಶ್ರೀರಾಮನನ್ನು ನೋಡಿದರು. ಅವರಿಗೆ ಬಹಳ ವ್ಯಥೆಯಾಯಿತು. ಜೀವಿತದಲ್ಲಿಯೇ ಅವರಿಗೆ ನಿರಾಶೆಯುಂಟಾಯಿತು. ಅತ್ಯಂತಭೀತರಾಗಿದ್ದ ಅವರು ಕೈಗಳನ್ನು ಜೋಡಿಸಿಕೊಂಡು ರಾಮನಿಗೆ ಹೇಳಿದರು :

"ಸೌಮ್ಯನೇ! ರಾಘವ! ರಾವಣನಿಂದ ಕಳುಹಿಸಲ್ಪಟ್ಟ ನಾವು ನಿನ್ನ ಸೈನ್ಯದ ಸಂಖ್ಯೆಯನ್ನೂ ಮತ್ತು ಬಲವನ್ನೂ ತಿಳಿಯುವ ಸಲುವಾಗಿ ಇಲ್ಲಿಗೆ ಬಂದಿದ್ದೇವೆ."

ರಾಕ್ಷಸರ ಆ ಮಾತನ್ನು ಕೇಳಿ ಎಲ್ಲ ಪ್ರಾಣಿಗಳ ಹಿತದಲ್ಲಿಯೇ ಯಾವಾಗಲೂ ನಿರತನಾಗಿರುವ ದಾಶರಥಿಯು ನಗುತ್ತಾ ಹೇಳಿದನು :

ಯದಿ ದೃಷ್ಟಂ ಬಲಂ ಕೃತ್ಸ್ನಂ ವಯಂ ವಾ ಸುಪರೀಕ್ಷಿತಾಃ ।
ಯಥೋಕ್ತಂ ವಾ ಕೃತಂ ಕಾರ್ಯಂ ಛನ್ದತಃ ಪ್ರತಿಗಮ್ಯತಾಮ್ ॥

ಅಥ ಕಿಂಚಿದದೃಷ್ಟಂ ವಾ ಭೂಯಸ್ತದ್ದ್ರಷ್ಟುಮರ್ಹಥಃ ।
ವಿಭೀಷಣೋ ವಾ ಕಾರ್ತ್ಸ್ನ್ಯೇನ ಭೂಯಃ ಸಂದರ್ಶಯಿಷ್ಯತಿ ॥

"ರಾಕ್ಷಸರೇ! ನೀವು ನನ್ನ ಸಮಸ್ತಸೈನ್ಯವನ್ನೂ ನೋಡಿಯಾಗಿದ್ದರೆ, ನಮ್ಮನ್ನೂ ನಮ್ಮ ಅಪಾರವಾದ ಸೈನ್ಯಶಕ್ತಿಯನ್ನೂ ನೋಡಿಯಾಗಿದ್ದರೆ, ನಿಮ್ಮ ರಾಜನಾದ ರಾವಣನು ಹೇಳಿರುವಂತೆ ನೀವು ಬಂದಿರುವ ಎಲ್ಲ ಗೂಢಚಾರ ಕಾರ್ಯಗಳನ್ನೂ ಪೂರೈಸಿಯಾಗಿದ್ದರೆ–ಸ್ವೇಚ್ಛೆಯಿಂದ ನೀವು ಹಿಂದಿರುಗ ಬಹುದು. ನಿಮಗೆ ಯಾವ ಅಡೆ-ತಡೆಗಳೂ ಇರುವುದಿಲ್ಲ. ಒಂದು ವೇಳೆ ನೀವಿಲ್ಲಿ ನೋಡುವುದೇನಾದರೂ ಉಳಿದಿದ್ದರೆ ಅದನ್ನೂ ನೀವು ನೋಡಿ ಕೊಂಡು ಹೋಗಬಹುದು. ವಿಭೀಷಣನೇ ನಿಮಗೆ ಎಲ್ಲವನ್ನೂ ಸಮಗ್ರವಾಗಿ ತೋರಿಸುತ್ತಾನೆ.

ನ ಚೇದಂ ಗ್ರಹಣಂ ಪ್ರಾಪ್ಯ ಭೇತವ್ಯಂ ಜೀವಿತಂ ಪ್ರತಿ ।
ನ್ಯಸ್ತಶಸ್ತ್ರೌ ಗೃಹೀತೌ ವಾ ನ ದೂತೌ ವಧಮರ್ಹಥಃ ॥೨೦॥

ನೀವು ಸಿಕ್ಕಿಹಾಕಿಕೊಂಡಿರುವುದರಿಂದ ಮರಣದಂಡನೆಯಾಗುವು ದೆಂಬ ಭಯವೇನೂ ಇಲ್ಲ. ಇಲ್ಲಿ ನಿಮ್ಮ ಜೀವಕ್ಕೆ ಸ್ವಲ್ಪವೂ ಅಪಾಯವಿಲ್ಲ. ದೂತರು ಸೆರೆಸಿಕ್ಕಿದರೆ ಅಥವಾ ನಿರಾಯುಧರಾಗಿದ್ದರೆ ಅವರು ಮರಣ ದಂಡನೆಗೆ ಅರ್ಹರಾಗುವುದಿಲ್ಲ."

ಶ್ರೀರಾಮನು ಶುಕ-ಸಾರಣರಿಗೆ ಹೀಗೆ ಹೇಳಿ ಆಶ್ವಾಸನೆಯನ್ನಿತ್ತನಂತರ ವಿಭೀಷಣನಿಗೆ ಹೇಳಿದನು :

"ವಿಭೀಷಣ! ವೇಷವನ್ನು ಮರೆಸಿ ಬಂದಿರುವ ಮತ್ತು ಯಾವಾಗಲೂ ಶತ್ರುಪಕ್ಷವನ್ನು ಭೇದಿಸುವುದರಲ್ಲಿಯೇ ಆಸಕ್ತರಾಗಿರುವ ಈ ರಾಕ್ಷಸರನ್ನು ಬಿಟ್ಟುಬಿಡು."

ಶ್ರೀರಾಮನು ವಿಭೀಷಣನಿಗೆ ಹೀಗೆ ಹೇಳಿ ಪುನಃ ಶುಕ-ಸಾರಣರಿಗೆ ಹೇಳಿದನು :

"ರಾಕ್ಷಸರೇ! ನೀವಿಲ್ಲಿಂದ ಯಾವ ಭಯವೂ ಇಲ್ಲದೇ ಲಂಕಾಪಟ್ಟಣಕ್ಕೆ ಹೋಗಿ ಅಲ್ಲಿ ಕುಬೇರನ ತಮ್ಮನಾದ, ರಾಕ್ಷಸರಾಜನಾದ ರಾವಣನಿಗೆ ನನ್ನ ಈ ಮಾತುಗಳನ್ನು ಹೇಳಬೇಕು.

ಯದ್ಬಲಂ ಚ ಸಮಾಶ್ರಿತ್ಯ ಸೀತಾಂ ಮೇ ಹೃತವಾನಸಿ ।
ತದ್ದರ್ಶಯ ಯಥಾಕಾಮಮಂ ಸಸೈನ್ಯಃ ಸಹಬಾನ್ಧವಃ ॥೨೩॥

ಶ್ವಃ ಕಾಲ್ಯೇ ನಗರೀಂ ಲಙ್ಕಾಂ ಸಪ್ರಾಕಾರಾಂ ಸತೋರಣಾಮ್ ।
ರಕ್ಷಸಾಂ ಚ ಬಲಂ ಪಶ್ಯ ಶರೈರ್ವಿಧ್ವಂಸಿತಂ ಮಯಾ ॥೨೪॥

ಕ್ರೋಧಂ ಭೀಮಮಹಂ ಮೋಕ್ಷ್ಯೇ ಸಸೈನ್ಯೇ ತ್ವಯಿ ರಾವಣ ।
ಶ್ವಃ ಕಾಲ್ಯೇ ವಜ್ರವಾನ್ವಜ್ರಂ ದಾನವೇಷ್ವಿವ ವಾಸವಃ ॥೨೫॥

'ರಾವಣ! ನೀನು ಯಾವ ನಿನ್ನ ಬಲದಲ್ಲಿ ಭರವಸೆಯಿಟ್ಟು ಸೀತೆಯನ್ನು ಅಪಹರಿಸಿರುವೆಯೋ–ಆ ನಿನ್ನ ಬಲವನ್ನು ಸೈನ್ಯದೊಡನೆಯೂ ಬಂಧು-ಬಾಂಧವರೊಡನೆಯೂ ಬಂದು ಯಥೇಚ್ಛವಾಗಿ ಪ್ರದರ್ಶಿಸು. ನಾಳೆ ಬೆಳಗಾಗುತ್ತಲೇ ಮಹಾದ್ವಾರ ಮತ್ತು ಪ್ರಾಕಾರಗಳಿಂದ ಯುಕ್ತವಾಗಿರುವ ಲಂಕಾಪಟ್ಟಣವೂ ಮತ್ತು ರಾಕ್ಷಸರ ಸೈನ್ಯವೂ ನನ್ನ ಬಾಣಗಳಿಂದ ಧ್ವಂಸವಾಗುವುದನ್ನು ನೋಡು. ವಜ್ರಾಯುಧಧಾರಿಯಾದ ಇಂದ್ರನು ದಾನವರ ಮೇಲೆ ವಜ್ರಾಯುಧವನ್ನು ಪ್ರಯೋಗಿಸುವಂತೆ–ಬೆಳಗಾಗುತ್ತಲೇ ಸೈನ್ಯಸಮೇತನಾದ ನಿನ್ನ ಮೇಲೆ ನನ್ನ ಭಯಂಕರವಾದ ಕೋಪವನ್ನು ವಿಸರ್ಜಿಸುವೆನು.'

ಹೀಗೆ ಶ್ರೀರಾಮನಿಂದ ಆದೇಶಿಸಲ್ಪಟ್ಟ ಶುಕ-ಸಾರಣರು ಧರ್ಮವತ್ಸಲನಾದ ಶ್ರೀರಾಮನನ್ನು 'ವಿಜಯಿಯಾಗು'–ಎಂದು ಅಭಿನಂದಿಸಿ ಲಂಕಾಪಟ್ಟಣಕ್ಕೆ ಹೋಗಿ ರಾವಣೇಶ್ವರನಿಗೆ ಹೇಳಿದರು :

"ರಾಕ್ಷಸೇಶ್ವರನೇ! ವಿಭೀಷಣನು ನಮ್ಮನ್ನು ಮರಣದಂಡನೆಗೆ ಗುರಿಪಡಿಸಲೆಂದೇ ಬಂಧಿಸಿ ರಾಮನ ಬಳಿಗೆ ಕರೆದೊಯ್ದನು. ಆದರೆ ಮಹಾತೇಜಸ್ವಿಯಾದ, ಧರ್ಮಾತ್ಮನಾದ ಶ್ರೀರಾಮನು ನಮ್ಮನ್ನು ನೋಡಿದೊಡನೆಯೇ ಬಂಧನದಿಂದ ಬಿಡಿಸಿದನು.

ಮಹಾರಾಜ! ದಶರಥನ ಮಗನಾದ ಶ್ರೀರಾಮ, ಶ್ರೀಮಂತನಾದ ಲಕ್ಷ್ಮಣ, ವಿಭೀಷಣ ಮತ್ತು ಮಹೇಂದ್ರಸದೃಶಪರಾಕ್ರಮಿಯಾದ ಸುಗ್ರೀವ– ಈ ನಾಲ್ವರೂ ಲೋಕಪಾಲರಿಗೆ ಸಮಾನರಾಗಿದ್ದಾರೆ. ಮಹಾಶೂರರರೂ, ಅಸ್ತ್ರಶಾಸ್ತ್ರದಲ್ಲಿ ಸುಶಿಕ್ಷಿತರೂ, ದೃಢಪರಾಕ್ರಮಿಗಳೂ, ಪುರುಷಶ್ರೇಷ್ಠರೂ

ಆಗಿರುವ ಆ ನಾಲ್ವರೂ ಸೇರಿದೆಡೆಯಲ್ಲಿ ವಿಜಯವು ನಿಶ್ಚಿತ. ಕಪಿಸೈನ್ಯದ ಸಹಾಯವೇ ಇಲ್ಲದೇ ಆ ನಾಲ್ವರು ಮಾತ್ರವೇ ಪ್ರಾಕಾರಗಳಿಂದಲೂ ಮಹಾ ದ್ವಾರಗಳಿಂದಲೂ ಸಂಪನ್ನವಾಗಿರುವ ಲಂಕಾಪಟ್ಟಣವನ್ನೇ ಕಿತ್ತು ಬಿಸುಡಲು ಸಮರ್ಥರಾಗಿರುವರು. ಅದರಲ್ಲಿಯೂ ಶ್ರೀರಾಮನಿಗೆ ಇರುವ ರೂಪ ಮತ್ತು ಅವನಲ್ಲಿರುವ ಶಸ್ತ್ರಾಸ್ತ್ರಗಳು ಇವುಗಳನ್ನು ನೋಡಿದರೆ–ಅವನೊಬ್ಬನೇ ಈ ಲಂಕಾಪಟ್ಟಣವನ್ನು ವಿನಾಶಗೊಳಿಸಲು ಸಮರ್ಥನಾಗಿದ್ದಾನೆ. ಉಳಿದ ಮೂವರೂ ಸ್ವಸ್ಥರಾಗಿಯೇ ಇರಬಹುದು. ರಾಮ-ಲಕ್ಷ್ಮಣರಿಂದಲೂ ಸುಗ್ರೀವನಿಂದಲೂ ರಕ್ಷಿಸಲ್ಪಡುತ್ತಿರುವ ಆ ವಾನರಸೈನ್ಯವು ಸಮಸ್ತದೇವತೆ ಗಳಿಗೂ ಮತ್ತು ಅಸುರರಿಗೂ ದುರ್ಜಯವಾದುದು. ದೇವತೆಗಳಾಗಲೀ ಅಸುರರಾಗಲೀ ಆ ಮಹಾಸೈನ್ಯವನ್ನು ಎದುರಿಸಿ ನಿಲ್ಲಲಾರರು.

ಪ್ರಹೃಷ್ಟರೂಪಾ ಧ್ವಜಿನೀ ವನೌಕಸಾಂ
ಮಹಾತ್ಮನಾಂ ಸಂಪ್ರತಿಯೋದ್ಧುಮಿಚ್ಛತಾಮ್ ।
ಅಲಂ ವಿರೋಧೇನ ಶಮೋ ವಿಧೀಯತಾಂ
ಪ್ರದೀಯತಾಂ ದಾಶರಥಾಯ ಮೈಥಿಲೀ ॥೩೩॥

ಈಗ ಯುದ್ಧಮಾಡಲು ಬಯಸಿ ಬಂದಿರುವ ಮಹಾತ್ಮರಾದ ಋಕ್ಷ-ವಾನರಸೈನ್ಯವು ಅತ್ಯಂತಹರ್ಷೋತ್ಸಾಹಗಳಿಂದ ಯುಕ್ತವಾಗಿದೆ. ಮಹಾರಾಜ! ರಾಮನೊಡನೆ ವಿರೋಧವನ್ನು ಸಾಕುಮಾಡು. ಸಂಧಿಯನ್ನು ಮಾಡಿಕೋ. ಶ್ರೀರಾಮನಿಗೆ ಸೀತೆಯನ್ನು ಒಪ್ಪಿಸಿಬಿಡು."

ಇಪ್ಪತ್ತೈದನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೨೬ನೆಯ ಸರ್ಗ

ಸಾರಣನು ರಾವಣನಿಗೆ ವಾನರದಂಡನಾಯಕರ ಪರಿಚಯವನ್ನು ಮಾಡಿಕೊಟ್ಟುದು

ತದ್ವಚಃ ಸತ್ಯಮಕ್ಲೀಬಂ ಸಾರಣೇನಾಭಿಭಾಷಿತಮ್ ।
ನಿಶಮ್ಯ ರಾವಣೋ ರಾಜಾ ಪ್ರತ್ಯಭಾಷತ ಸಾರಣಮ್ ॥೧॥

ಸತ್ಯವೂ ಧೈರ್ಯದಿಂದ ಕೂಡಿದುದೂ ಆಗಿದ್ದ ಸಾರಣನ ಮಾತು ಗಳನ್ನು ಕೇಳಿ ರಾವಣನು ಹೇಳಿದನು :

"ಸಾರಣ! ಸಮಸ್ತದೇವ-ಗಂಧರ್ವ-ದಾನವರೇ ಸೀತೆಯ ಸಲುವಾಗಿ ನನ್ನೊಡನೆ ಯುದ್ಧಕ್ಕೆ ಬಂದರೂ, ಸಮಸ್ತಲೋಕವೂ ನನ್ನನ್ನು ಭಯಪಡಿಸಿದರೂ–ನಾನು ಸೀತೆಯನ್ನು ರಾಮನಿಗೆ ಒಪ್ಪಿಸುವುದಿಲ್ಲ. ನೀನಾದರೋ ಈ ಸಮಯದಲ್ಲಿ ಕಪಿಗಳಿಂದ ಬಹಳವಾಗಿ ಪೀಡಿಸಲ್ಪಟ್ಟಿರುವೆ. ಆದುದರಿಂದಲೇ ಬಹಳವಾಗಿ ಭಯಗೊಂಡಿರುವೆ. ಈ ಕಾರಣದಿಂದಲೇ ನೀನು ಸೀತೆಯನ್ನು ಈಗಲೇ ರಾಮನಿಗೆ ಒಪ್ಪಿಸಿಬಿಡುವುದು ಒಳ್ಳೆಯದೆಂದು ಭಾವಿಸುವೆ. ಯೋಚಿಸಿ ನೋಡು, ಸಾರಣ! ಸಮರಭೂಮಿಯಲ್ಲಿ ನನ್ನೊಡನೆ ಯುದ್ಧಮಾಡಿ ಜಯಿಸುವ ಸಾಮರ್ಥ್ಯವನ್ನು ಹೊಂದಿರುವ ಶತ್ರುವು ಈ ವಿಶ್ವದಲ್ಲಿಯೇ ಯಾವನಿದ್ದಾನೆ?"

ರಾವಣನು ಹೀಗೆ ಪೌರುಷಯುಕ್ತವಾದ ಮಾತುಗಳನ್ನಾಡಿ ವಾನರ ಸೈನ್ಯದ ಪರಿಮಾಣವನ್ನು ನೋಡುವ ಉತ್ಸುಕತೆಯಿಂದ ಅನೇಕತಾಲವೃಕ್ಷಗಳಷ್ಟು ಎತ್ತರವಾಗಿದ್ದ, ಹಿಮದಂತೆ ಬಿಳಿಯ ಬಣ್ಣದಿಂದ ಶೋಭಿಸುತ್ತಿದ್ದ ಉಪ್ಪರಿಗೆಯನ್ನು ಹತ್ತಿದನು. ಕ್ರೋಧವಶನಾಗಿದ್ದ ರಾವಣನು ಶುಕ-ಸಾರಣರೊಡನೆ ಉಪ್ಪರಿಗೆಯ ಮೇಲೆ ನಿಂತು ಸುತ್ತಲೂ ಇದ್ದ ಸಮುದ್ರವನ್ನೂ, ಪರ್ವತಗಳನ್ನೂ, ಅರಣ್ಯಗಳನ್ನೂ ನೋಡುತ್ತಿದ್ದಾಗ ಅವುಗಳ ಹತ್ತಿರದಲ್ಲಿದ್ದ ಭೂಪ್ರದೇಶಗಳೆಲ್ಲವೂ ಸಂಪೂರ್ಣವಾಗಿ ವಾನರಸೈನಿಕರಿಂದ ತುಂಬಿ ಹೋಗಿರುವುದನ್ನು ನೋಡಿದನು. ಅಪಾರವಾಗಿಯೂ ಅಸಂಖ್ಯಾತವಾಗಿಯೂ ಇದ್ದ ಮಹಾಬಲಿಷ್ಠವಾಗಿದ್ದ ಆ ವಾನರಸೈನ್ಯವನ್ನು ನೋಡಿ ರಾವಣನು ಸಾರಣನನ್ನು ಪ್ರಶ್ನಿಸಿದನು :

"ಸಾರಣ! ಈ ವಾನರಸಮುದಾಯದಲ್ಲಿ ಮುಖ್ಯರಾದವರು ಯಾರು? ಶೂರರು ಯಾರು? ಮಹಾಬಲಿಷ್ಠರಾದವರು ಯಾರು? ಯಾವ ಯಾವ ವಾನರರು ಹರ್ಷೋತ್ಸಾಹಗಳಿಂದ ಕೂಡಿದವರಾಗಿ ಯುದ್ಧಮಾಡಲು ಸೈನ್ಯದ ಮುಂಭಾಗದಲ್ಲಿದ್ದಾರೆ? ಯಾವ ಯಾವ ವಾನರಪ್ರಮುಖರ ಮಾತುಗಳನ್ನು ಸುಗ್ರೀವನು ಕೇಳುತ್ತಾನೆ? ಇಲ್ಲಿರುವ ಅನೇಕಸೇನಾಪತಿಗಳಿಗೆ ದಂಡನಾಯಕನು ಯಾರು? ಈ ವಾನರರ ಪ್ರಭಾವ-ಪರಾಕ್ರಮಗಳಾದರೂ ಎಷ್ಟಿವೆ? ಈ ಎಲ್ಲ ವಿಷಯಗಳನ್ನೂ ನನಗೆ ವಿಶದವಾಗಿ ಹೇಳು."

ರಾವಣನು ಹೀಗೆ ಪ್ರಶ್ನಿಸಲು ವಾನರಸೈನ್ಯದಲ್ಲಿ ಮುಖ್ಯ-ಮುಖ್ಯರಾದ

ವರು ಯಾರೆಂಬುದನ್ನು ತಿಳಿದು ಬಂದಿದ್ದ ಸಾರಣನು ಆ ವಾನರಮುಖ್ಯರ ಪರಿಚಯವನ್ನು ರಾವಣನಿಗೆ ಮಾಡಿಕೊಡಲು ಉಪಕ್ರಮಿಸಿದನು.

“ಮಹಾರಾಜ! ಅದೋ ನೋಡು, ಅಲ್ಲೊಬ್ಬ ವಾನರಶ್ರೇಷ್ಠನು ಲಂಕೆಯ ಕಡೆಗೆ ಮುಖವನ್ನು ತಿರುಗಿಸಿಕೊಂಡು ಗರ್ಜನೆಮಾಡುತ್ತಿದ್ದಾನೆ. ಒಂದು ಲಕ್ಷ ಯೂಥಪತಿಗಳಿಂದ ಅವನು ಪರಿವೃತನಾಗಿದ್ದಾನೆ. ಅವನ ಮಹಾಗರ್ಜನೆಯು ಪ್ರಾಕಾರಗಳಿಂದಲೂ ಮಹಾದ್ವಾರಗಳಿಂದಲೂ ಕೂಡಿರುವ ಪರ್ವತಾರಣ್ಯ-ವನಗಳಿಂದ ಪರಿಶೋಭಿಸುತ್ತಿರುವ ಸಮಗ್ರವಾದ ಲಂಕಾಪಟ್ಟಣದಲ್ಲಿ ಪ್ರತಿಧ್ವನಿಸುತ್ತಿದೆ. ಸಮಸ್ತಶಾಖಾಮೃಗಗಳಿಗೂ ಒಡೆಯನಾದ, ಮಹಾತ್ಮನಾದ ಸುಗ್ರೀವನ ಮಹಾವಾನರಸೈನ್ಯದ ಅಗ್ರಭಾಗದಲ್ಲಿ ಅವನು ನಿಂತಿದ್ದಾನೆ. ಅವನೇ ಆ ಅಪಾರಸೈನ್ಯಕ್ಕೂ ಮಹಾದಂಡನಾಯಕನಾಗಿರುವ ನೀಲನು. ಅಲ್ಲಿನೋಡು, ಮಹಾರಾಜ? ಅಲ್ಲೊಬ್ಬ ವಾನರಶ್ರೇಷ್ಠನು ಕೈಗಳಿಂದ ಎರಡು ತೋಳುಗಳನ್ನು ಹಿಡಿದುಕೊಂಡು ದಾಪುಗಾಲುಹಾಕುತ್ತಾ ಅತ್ತಿಂದಿತ್ತ ಸಂಚರಿಸುತ್ತಿದ್ದಾನೆ. ಲಂಕೆಯ ಕಡೆಗೆ ಮುಖಮಾಡಿಕೊಂಡು ಕೋಪದಿಂದ ಬಾರಿ-ಬಾರಿಗೂ ಉಬ್ಬುತ್ತಿದ್ದಾನೆ. ಪರ್ವತಶಿಖರಕ್ಕೆ ಸಮಾನನಾಗಿದ್ದಾನೆ. ಅವನ ಮೈಬಣ್ಣವು ತಾವರೆಯ ಎಸಳಿನಂತಿದೆ. ಬಾಲವನ್ನು ಪುನಃ ಪುನಃ ನೆಲಕ್ಕೆ ಅಪ್ಪಳಿಸುತ್ತಿದ್ದಾನೆ. ಆ ಶಬ್ದವು ದಿಕ್ಕುಗಳಲ್ಲಿಯೂ ಉಪದಿಕ್ಕುಗಳಲ್ಲಿಯೂ ಪ್ರತಿಧ್ವನಿಸುತ್ತಿದೆ. ಅವನಿಗೆ ಸುಗ್ರೀವನು ಯೌವರಾಜ್ಯಾಭಿಷೇಕಮಾಡಿದ್ದಾನೆ. ಅವನೇ ಅಂಗದನು. ಯುವರಾಜನಾದ ಅವನು ನಿನ್ನನ್ನೀಗಲೇ ಯುದ್ಧಕ್ಕೆ ಆಹ್ವಾನಿಸುತ್ತಿದ್ದಾನೆ. ಅವನು ತನ್ನ ತಂದೆಯಾದ ವಾಲಿಯ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವನ್ನು ಹೊಂದಿದ್ದಾನೆ. ಸುಗ್ರೀವನಿಗೆ ಅವನು ಸರ್ವಕಾಲದಲ್ಲಿಯೂ ಪ್ರಿಯನಾಗಿರತಕ್ಕವನು. ಇಂದ್ರನ ಸಲುವಾಗಿ ವರುಣನು ಪರಾಕ್ರಮವನ್ನು ತೋರಿಸುವಂತೆ–ರಾಘವನ ಸಲುವಾಗಿ ಆ ಅಂಗದನು ತನ್ನ ಪರಾಕ್ರಮವನ್ನು ತೋರಲು ಸಿದ್ಧನಾಗಿ ನಿಂತಿದ್ದಾನೆ. ರಾಘವನ ಹಿತೈಷಿಯಾದ ವೇಗವಂತನಾದ ಹನುಮಂತನು ಇಲ್ಲಿಗೆ ಬಂದು ಸೀತೆಯನ್ನು ನೋಡಿಕೊಂಡು ಹೋಗಲು ಈ ಅಂಗದನ ಕುಶಲಬುದ್ಧಿಯೇ ಮುಖ್ಯಕಾರಣವಾಗಿದ್ದಿತು. ಪರಾಕ್ರಮಿಯಾದ ಅಂತಹ ಅಂಗದನು ಅನೇಕವಾನರಶ್ರೇಷ್ಠರ ಗುಂಪುಗಳನ್ನು ತನ್ನೊಡನೆ

ಕರೆದುಕೊಂಡು ನಿನ್ನ ಸೈನ್ಯದೊಡನೆ ನಿನ್ನನ್ನೂ ಮರ್ದನಮಾಡಬೇಕೆಂಬ ಆಶಯದಿಂದ ಬರುತ್ತಿದ್ದಾನೆ.

ಅಂಗದನ ಹಿಂಭಾಗದಲ್ಲಿ ಅಪಾರವಾದ ವಾನರಸೈನ್ಯದಿಂದ ಆವೃತನಾಗಿರುವ ವೀರನಾದ ನಲನು ರಣಭೂಮಿಯಲ್ಲಿ ನಿಂತಿದ್ದಾನೆ. ಅವನೇ ಸೇತುವೆಯ ನಿರ್ಮಾಣಕ್ಕೆ ಮುಖ್ಯಕಾರಣನು.

ರಾವಣೇಶ್ವರನೇ! ಶರೀರಗಳನ್ನು ಮೇಲಕ್ಕೆ ನಿಮಿರಿಸಿಕೊಂಡು ಗಟ್ಟಿಯಾಗಿ ಗರ್ಜನೆಮಾಡುತ್ತಿರುವ ಮತ್ತು ಶಬ್ದಮಾಡುತ್ತಿರುವ ಆ ವಾನರರನ್ನು ನೋಡು. ಕೆಲವು ವಾನರರು ಕುಳಿತಲ್ಲಿಂದ ಮೇಲಕ್ಕೆದ್ದು ಕೋಪದಿಂದ ಉಬ್ಬುತ್ತಿದ್ದಾರೆ. ಅವರ ವೇಗವನ್ನು ಸಹಿಸುವುದು ಅತ್ಯಂತದುಸ್ತರವೇ ಸರಿ. ಅವರು ಅತಿಭಯಂಕರರು. ಮಹಾಕೋಪಿಷ್ಠರು. ಪ್ರಚಂಡವಾದ ಪರಾಕ್ರಮವುಳ್ಳವರು. ಅವರ ಸಂಖ್ಯೆಯು ನೂರುಕೋಟಿ ಎಂಟು ಲಕ್ಷದಷ್ಟಿದೆ. ಚಂದನವನದಲ್ಲಿ ವಾಸಿಸುವ ಅವರೆಲ್ಲರೂ ವಾನರಶ್ರೇಷ್ಠನಾದ ನಲನ ಅನುಯಾಯಿಗಳು. ನಲನು ಕೂಡ ತನ್ನ ಅಪಾರವಾದ ಸೈನ್ಯದೊಡನೆ ಲಂಕಾಪಟ್ಟಣವನ್ನು ಮರ್ದನಮಾಡಲು ಇಚ್ಛಿಸಿದ್ದಾನೆ.

ಸುಗ್ರೀವನ ಬಳಿಗೆ ಆಗಿಂದಾಗ್ಗೆ ಬಂದುಹೋಗುತ್ತಿರುವ, ಬೆಳ್ಳಿಯಂತೆ ಮೈಬಣ್ಣವುಳ್ಳ, ಚಪಲಚಿತ್ತನಾದ, ಭಯಂಕರಪರಾಕ್ರಮಿಯಾದ ವಾನರನೇ ಶ್ವೇತನು. ಅವನು ಮಹಾಬುದ್ಧಿಶಾಲಿಯು. ಮಹಾಶೂರನು. ಮೂರು ಲೋಕಗಳಲ್ಲಿಯೂ ವಿಖ್ಯಾತನಾಗಿರತಕ್ಕವನು. ಸೈನ್ಯವನ್ನು ಸಮಯಕ್ಕೆ ತಕ್ಕಂತೆ ವಿಭಾಗಿಸುವುದು ಮತ್ತು ಅವರಲ್ಲಿ ಹರ್ಷೋತ್ಸಾಹಗಳನ್ನು ತುಂಬುವುದು ಇದೇ ಅವನ ಕಾರ್ಯವಾಗಿದೆ.

ರಾಕ್ಷಸೇಶ್ವರನೇ! ಗೋಮತೀನದಿಯ ತೀರದಲ್ಲಿ ನಾನಾವಿಧವಾದ ವೃಕ್ಷಗಳಿಂದ ಕೂಡಿರುವ 'ಸಂಕೋಚನ' ಎಂಬ ಹೆಸರಿನ ಪರ್ವತವಿದೆ. ಅಲ್ಲಿ ಕಾಣುತ್ತಿರುವ ಕುಮುದನೆಂಬ ಹೆಸರಿನ ಆ ವಾನರನಾಯಕನು ಈ ಮೊದಲು ಸುಂದರವಾದ ಸಂಕೋಚನಪರ್ವತದ ಸುತ್ತಲೂ ಸಂಚರಿಸುತ್ತಿದ್ದನು ಮತ್ತು ಅಲ್ಲೊಂದು ಕಪಿರಾಜ್ಯವನ್ನು ಕಟ್ಟಿಕೊಂಡು ಆಳುತ್ತಿದ್ದನು. ಅವನೀಗ ನೂರು ಲಕ್ಷ ವಾನರಸೈನಿಕರನ್ನು ತನ್ನ ಜೊತೆಯಲ್ಲಿ ಕರೆತಂದಿದ್ದಾನೆ. ಅವನ

ಉದ್ದವಾದ ಬಾಲದಲ್ಲಿರುವ ರೋಮಗಳು ಬಹಳ ನೀಳವಾಗಿವೆ. ಕೆಂಪು-ಹಳದಿ-ಬಿಳುಪು ಇವೇ ಮೊದಲಾದ ಬಣ್ಣಗಳಿಂದ ಕೂಡಿವೆ. ಅವು ಸರ್ವತ್ರ ವ್ಯಾಪ್ತವಾಗಿದ್ದು ನೋಡಲು ಬಹಳ ಭಯಂಕರವಾಗಿ ಕಾಣುತ್ತಿವೆ. ಕುಮುದನಿಗೆ ದೈನ್ಯವೆಂಬುದೇ ಇಲ್ಲ. ಮಹಾಧೈರ್ಯಶಾಲಿಯು. ಮಹಾ ಕೋಪಿಷ್ಠನು. ಯುದ್ಧವನ್ನೇ ಯಾವಾಗಲೂ ಆಶಿಸತಕ್ಕವನು. ಇವನು ಕೂಡ ತನ್ನ ಸೈನಿಕರ ಜೊತೆಯಲ್ಲಿ ಲಂಕಾಪಟ್ಟಣವನ್ನು ಮರ್ದನ ಮಾಡಲು ಬಯಸಿ ಬಂದಿದ್ದಾನೆ.

ಅದೋ ಅಲ್ಲಿ ನೋಡು! ರಾವಣೇಶ್ವರ! ಉದ್ದವಾದ ಕೂದಲು ಗಳನ್ನು ಹೊಂದಿರುವ, ಸಿಂಹದಂತೆಯೇ ಕಾಣುತ್ತಿರುವ, ದಹಿಸಿಬಿಡುವನೋ ಎಂಬಂತೆ ಲಂಕಾಪಟ್ಟಣವನ್ನೇ ಏಕಾಗ್ರಚಿತ್ತನಾಗಿ ಎವೆಯಿಕ್ಕದೇ ನೋಡು ತ್ತಿರುವ, ಕಪಿಲವರ್ಣದ ವಾನರಶಿರೋಮಣಿಯೇ ರಂಭನೆಂಬ ವಾನರ ನಾಯಕನು. ಅವನು ನಿರಂತರವಾಗಿ ವಿಂಧ್ಯ-ಕೃಷ್ಣಗಿರಿ-ಸಹ್ಯ ಮತ್ತು ಸುದರ್ಶನಪರ್ವತಗಳಲ್ಲಿ ಸುತ್ತಾಡುತ್ತಿರುತ್ತಾನೆ. ಆ ಪರ್ವತಗಳು ಅವನ ಆವಾಸಸ್ಥಳಗಳೂ ಆಗಿವೆ. ಅವನು ಹೊರಟನೆಂದರೆ ಅವನ ಜೊತೆಯಲ್ಲಿ ಲಂಕಾಪಟ್ಟಣವನ್ನು ಮರ್ದನಮಾಡುವ ಸಲುವಾಗಿ ಭಯಂಕರರಾದ, ಕೋಪಿಷ್ಠರಾದ, ಚಂಡಪರಾಕ್ರಮಿಗಳಾದ ಒಂದು ಕೋಟಿ ಮೂವತ್ತು ವಾನರರು ರಂಭನನ್ನು ಅನುಸರಿಸಿ ಹೊರಡುತ್ತಾರೆ.

ಮಹಾರಾಜ! ಅದೋ ಅತ್ತಕಡೆ ನೋಡು. ವಾನರನಾಯಕನೊಬ್ಬನು ತನ್ನೆರಡು ಕಿವಿಗಳನ್ನೂ ಪದೇ-ಪದೇ ಹಿಗ್ಗಿಸಿಕೊಳ್ಳುತ್ತಿದ್ದಾನೆ. ಶರೀರವನ್ನು ಪುನಃ ಪುನಃ ಉಬ್ಬಿಸುತ್ತಿದ್ದಾನೆ. ಅವನೇ ಶರಭನೆಂಬ ಸೇನಾನಾಯಕನು. ಅವನು ಮೃತ್ಯುವಿಗೂ ಹೆದರತಕ್ಕವನಲ್ಲ. ಅವನಿಗೆ ಸೈನ್ಯದ ಅವಶ್ಯಕತೆಯೂ ಇಲ್ಲ. ರೋಷದಿಂದ ಕಂಪಿಸುತ್ತಿದ್ದಾನೆ. ಹಿಂದು-ಮುಂದಕ್ಕೆ ದುರುಗುಟ್ಟಿಕೊಂಡು ನೋಡುತ್ತಿದ್ದಾನೆ. ಮಹಾಬಲಿಷ್ಠನಾದ ಅವನು ತನ್ನ ಬಾಲವನ್ನು ನೆಲಕ್ಕೆ ಅಪ್ಪಳಿಸುತ್ತಾ ಸಿಂಹನಾದಮಾಡುತ್ತಿದ್ದಾನೆ. ಅವನು ಮಹಾವೇಗವಂತನು. ಅವನಿಗೆ ಭಯವೆಂಬುದೇ ಇಲ್ಲ. ಸೇನಾನಾಯಕನಾದ ಆ ಶರಭನು ರಮ್ಯವಾದ ಸಾಲ್ವೇಯಪರ್ವತದಲ್ಲಿ ವಾಸಮಾಡುತ್ತಾನೆ. ಇವನ ಬಳಿ ಇರುವ

ಸಮುದಾಯನಾಯಕರು ವಿಹಾರರು ಎಂಬ ಹೆಸರಿನಿಂದ ವಿಖ್ಯಾತರಾಗಿ ದ್ದಾರೆ. ಅವರು ಮಹಾಬಲಿಷ್ಠರು. ಅವರ ಸಂಖ್ಯೆಯು ಒಂದು ಲಕ್ಷ ನಲವತ್ತು ಸಾವಿರದಷ್ಟಿದೆ.

ರಾವಣೇಶ್ವರ! ಇತ್ತಕಡೆ ನೋಡು. ಮಹಾಕಾಯನಾದ ಆ ವಾನರ ಶ್ರೇಷ್ಠನು ಮೇಘವು ಆಕಾಶವನ್ನು ಆವರಿಸುವಂತೆ ಹೆಚ್ಚು ಪ್ರದೇಶವನ್ನು ವ್ಯಾಪಿಸಿಕೊಂಡು ನಿಂತಿದ್ದಾನೆ. ವಾನರವೀರರ ಮಧ್ಯದಲ್ಲಿ ನಿಂತಿರುವ ಅವನು ದೇವತೆಗಳ ಮಧ್ಯದಲ್ಲಿರುವ ಇಂದ್ರನಂತೆಯೇ ಕಾಣುತ್ತಿದ್ದಾನೆ. ಅವನು ಮಾಡುತ್ತಿರುವ ಗರ್ಜನೆಯು ಭೇರಿಗಳ ನಿನಾದದಂತೆಯೇ ಕೇಳಿಬರುತ್ತಿದೆ. ಯುದ್ಧದಲ್ಲಿ ಅವನನ್ನು ಎದುರಿಸಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ಆ ವಾನರನಾಯಕನು ಪನಸನೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ. ಪಾರಿಯಾತ್ರಪರ್ವತದಲ್ಲಿ ಅವನು ವಾಸಮಾಡುತ್ತಾನೆ. ಸೇನಾಗಣಪತಿಗಳಲ್ಲಿ ಶ್ರೇಷ್ಠನಾದ ಪನಸನ ಸೇವೆಯಲ್ಲಿ ಐವತ್ತು ಲಕ್ಷ ಸೇನಾಗಣಪತಿಗಳು ನಿರತ ರಾಗಿರುತ್ತಾರೆ. ಅವರ ಸೇನಾವಿಭಾಗವೂ ಪ್ರತ್ಯೇಕ-ಪ್ರತ್ಯೇಕವಾಗಿದೆ.

ಸಮುದ್ರತೀರದಲ್ಲಿ ಕುಣಿದಾಡುತ್ತಿರುವ, ಭಯಂಕರವಾದ ಸೈನ್ಯವನ್ನು ಶೋಭಾಯಮಾನಗೊಳಿಸುತ್ತಾ ಎರಡನೆಯ ಸಮುದ್ರದೋಪಾದಿಯಲ್ಲಿ ಕಾಣುತ್ತಿರುವ, ದುರ್ದರಪರ್ವತಕ್ಕೆ ಸಮಾನನಾಗಿರುವ, ಅಲ್ಲಿ ಕಾಣುತ್ತಿರುವ ದಳಪತಿಯು ವಿನತ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ. ಅವನು ನದಿ ಗಳಲ್ಲಿ ಶ್ರೇಷ್ಠವಾದ ಪರ್ಣಾಸಾನದಿಯ ನೀರನ್ನು ಪಾನಮಾಡುತ್ತಾ ಎಲ್ಲೆಲ್ಲಿಯೂ ಸಂಚರಿಸುತ್ತಿರುತ್ತಾನೆ. ಅವನ ಆಜ್ಞಾಧಾರಕರಾಗಿ ಅರುವತ್ತು ಲಕ್ಷ ವಾನರ ಸೈನಿಕರಿದ್ದಾರೆ.

ರಾವಣೇಶ್ವರ! ಅಲ್ಲಿ ಕಾಣುತ್ತಿರುವವನೇ ಕ್ರೋಧನ ಎಂಬ ಹೆಸರಿನ ವಾನರಶ್ರೇಷ್ಠನು. ಅವನೂ ಕೂಡ ನಿನ್ನನ್ನು ಯುದ್ಧಕ್ಕೆ ಆಹ್ವಾನಿಸುತ್ತಿದ್ದಾನೆ. ಅವನ ಬಳಿ ಮಹಾಪರಾಕ್ರಮಿಗಳಾದ ಮತ್ತು ಬಲಿಷ್ಠರಾದ ಅನೇಕ ದಳಪತಿಗಳಿದ್ದಾರೆ. ಅವರೆಲ್ಲರ ಅಧೀನದಲ್ಲಿಯೂ ಪ್ರತ್ಯೇಕ-ಪ್ರತ್ಯೇಕವಾಗಿ ವಾನರಸೈನ್ಯಗಳಿವೆ.

ರಾವಣೇಶ್ವರ! ಅದೋ ಅಲ್ಲಿ ನೋಡು. ಅಲ್ಲೊಬ್ಬ ವಾನರನು ಗೈರಿಕಧಾತುವಿನಂತೆ ಕೆಂಪಾದ ಶರೀರವನ್ನು ಹೊಂದಿದ್ದಾನೆ. ಮಹಾತೇಜಸ್ವಿ

ನಿಂದ ಕೂಡಿರುವ ಅವನೇ ಗವಯನೆಂಬ ಹೆಸರಿನ ವಾನರರ ನಾಯಕನು. ಅವನಿಗೆ ತನಗಿರುವ ಬಲದ ವಿಷಯದಲ್ಲಿ ತುಂಬ ಅಹಂಕಾರವಿದೆ. ಈ ಕಾರಣದಿಂದಲೇ ಅವನು ಇತರ ವಾನರರನ್ನು ತಿರಸ್ಕಾರಭಾವದಿಂದ ಕಾಣುತ್ತಾನೆ. ಅವನಿಗೆ ಎಪ್ಪತ್ತು ಲಕ್ಷ ಸೈನಿಕರಿದ್ದಾರೆ. ಈ ಸಮಯದಲ್ಲವನು ಕ್ರೋಧವಶನಾಗಿ ನಿನ್ನ ಕಡೆಗೇ ನೋಡುತ್ತಿದ್ದಾನೆ. ಅವನು ಕೂಡ ಸೈನ್ಯದೊಡನೆ ಲಂಕೆಯನ್ನು ಆಕ್ರಮಿಸಿ ಧೂಳೀಪಟಮಾಡಬೇಕೆಂದು ಆಶಿಸಿದ್ದಾನೆ.

ಮಹಾರಾಜ! ಅಲ್ಲಿ ಸೇರಿರುವ ವಾನರಸೈನಿಕರೆಲ್ಲರೂ ಸಹಿಸಲು ಅಸಾಧ್ಯರಾದವರು. ಅವರನ್ನು ಎಣಿಸುವ ಸಾಧ್ಯತೆಯೇ ಇಲ್ಲ. ದಳಪತಿಗಳಲ್ಲಿ ಶ್ರೇಷ್ಠರಾದ ಪ್ರತಿಯೊಬ್ಬ ದಳಪತಿಯ ಅಧೀನದಲ್ಲಿಯೂ ಪ್ರತ್ಯೇಕ-ಪ್ರತ್ಯೇಕವಾದ ವಾನರಸೈನ್ಯವಿಭಾಗಗಳಿವೆ.”

೨೬ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೨೭ನೆಯ ಸರ್ಗ

ಸಾರಣನು ರಾವಣನಿಗೆ ವಾನರಸೈನ್ಯದಲ್ಲಿ ಪ್ರಧಾನರಾದ ದಳಪತಿಗಳ ಪರಿಚಯವನ್ನು ಮಾಡಿಕೊಟ್ಟುದು

ತಾಂಸ್ತು ತೇ ಸಂಪ್ರವಕ್ಷ್ಯಾಮಿ ಪ್ರೇಕ್ಷಮಾಣಸ್ಯ ಯೂಥಪಾನ್ ।
ರಾಘವಾರ್ಥೇ ಪರಾಕ್ರಾನ್ತಾ ಯೇ ನ ರಕ್ಷನ್ತಿ ಜೀವಿತಮ್ ॥೧॥

ಸಾರಣನು ಮುಂದುವರಿದು ಹೇಳುತ್ತಾನೆ :

“ಮಹಾರಾಜ! ವಾನರಸೈನ್ಯವನ್ನು ಗಮನಿಸುತ್ತಿರುವ ನಿನಗೆ ರಾಮನ ಸಲುವಾಗಿ ತಮ್ಮ ಪರಾಕ್ರಮವನ್ನು ತೋರಿಸಲು ಜೀವದ ಹಂಗನ್ನೂ ತೊರೆದು ಬಂದಿರುವ ದಳಪತಿಗಳ ಪರಿಚಯವನ್ನು ಮಾಡಿಕೊಡುತ್ತೇನೆ.

ರಾವಣೇಶ್ವರ! ಅಲ್ಲಿ ಕಾಣುತ್ತಿರುವವನೇ ಹರನೆಂಬ ವಾನರನಾಯಕನು. ಅವನು ಭಯಂಕರವಾದ ಕಾರ್ಯಗಳನ್ನು ಮಾಡತಕ್ಕವನು. ಉದ್ದವಾದ ಅವನ ಬಾಲದಲ್ಲಿ ನುಣುಪಾಗಿಯೂ, ಅನೇಕಮಾರುಗಳಷ್ಟು ಉದ್ದವಾಗಿಯೂ, ಕೆಂಪು-ಹಳದಿ-ಬಿಳೀ ಮತ್ತು ಕಂದುಬಣ್ಣಗಳಿಂದ ಕೂಡಿಯೂ, ವಿರಳವೂ ಆಗಿರುವ ಕೂದಲುಗಳು ತುಂಬಿವೆ. ಅವನು ಬಾಲವನ್ನೇನಾದರೂ

ಮೇಲಕ್ಕೆತ್ತಿದರೆ ಆ ಕೂದಲುಗಳು ಸೂರ್ಯನ ಕಿರಣಗಳಂತೆಯೇ ಕಾಣುತ್ತವೆ. ಬಾಲದಲ್ಲಿರುವ ಆ ಕೂದಲುಗಳನ್ನು ಹರನು ಭೂಮಿಯ ಮೇಲೂ ಎಳೆದುಕೊಂಡು ಹೋಗುತ್ತಿರುತ್ತಾನೆ. ಅವನ ಹಿಂದೆ ಲಂಕೆಯನ್ನು ಆಕ್ರಮಿಸಲು ನೂರಾರು-ಸಾವಿರಾರು ವಾನರಕಿಂಕರರು ವೃಕ್ಷಗಳನ್ನೆತ್ತಿಕೊಂಡು ಸಿದ್ಧರಾಗಿ ನಿಂತಿದ್ದಾರೆ.

ಲಂಕೇಶ್ವರ! ಅತ್ತಕಡೆ ಮಹಾಮೇಘಗಳಂತೆಯೂ ಮತ್ತು ಕಪ್ಪಾದ ಕಾಡಿಗೆಯಂತೆಯೂ ಇರುವ ಕರಡಿಗಳನ್ನು ನೀನು ನೋಡುತ್ತಿರುವೆಯಲ್ಲವೇ? ಅವರೆಲ್ಲರೂ ಯುದ್ಧದಲ್ಲಿ ನಿಜವಾದ ಪರಾಕ್ರಮವನ್ನು ತೋರಿಸತಕ್ಕವರು. ಸಮುದ್ರದ ಆಚೆಯ ದಡವು ಕಾಣದಂತೆ ಅವರು ಕಣ್ಣುಗಳಿಗೆ ನಿಲುಕದಷ್ಟು ವಿಶಾಲವಾಗಿ ವ್ಯಾಪಿಸಿಕೊಂಡಿದ್ದಾರೆ. ಅಸಂಖ್ಯಾತರಾಗಿದ್ದಾರೆ. ಅವರಲ್ಲಿ ಒಬ್ಬೊಬ್ಬ ದಳಪತಿಗಳನ್ನೂ ನಿರ್ದೇಶಿಸಿ ಪರಿಚಯಿಸಲು ಸಾಧ್ಯವೇ ಇಲ್ಲ. ಅತ್ಯಂತ ಭಯಂಕರರಾಗಿರುವ ಅವರಲ್ಲಿ ಕೆಲವರು ಪರ್ವತಗಳಲ್ಲಿಯೂ, ವಿಭಿನ್ನಪ್ರದೇಶಗಳಲ್ಲಿಯೂ ಮತ್ತು ನದೀತೀರಗಳಲ್ಲಿಯೂ ವಾಸಮಾಡುತ್ತಾರೆ. ಈಗ ಇವರೆಲ್ಲರೂ ಒಟ್ಟಾಗಿ ಸೇರಿ ನಿನ್ನ ಮೇಲೆ ಆಕ್ರಮಣಮಾಡಲು ಬಂದಿರುವರು. ಅವರ ಮಧ್ಯದಲ್ಲಿ ಭಯಂಕರವಾಗಿ ಕಾಣುವ, ಭಯಂಕರವಾದ ಕಣ್ಣುಗಳನ್ನು ಹೊಂದಿರುವ ಧೂಮ್ರನೆಂಬ ದಳಪತಿಯಿದ್ದಾನೆ. ಮೇಘಗಳಿಂದ ಸುತ್ತುವರಿಯಲ್ಪಟ್ಟ ಇಂದ್ರನಂತೆ ಅವನು ನಾಲ್ಕು ಕಡೆಗಳಲ್ಲಿಯೂ ಕರಡಿಗಳ ನಾಯಕರಿಂದ ಸುತ್ತುವರಿಯಲ್ಪಟ್ಟಿದ್ದಾನೆ. ಅವನು ನರ್ಮದಾ ನದಿಯ ನೀರನ್ನು ಕುಡಿಯುತ್ತಾ ಋಕ್ಷವಂತವೆಂಬ ಶ್ರೇಷ್ಠವಾದ ಪರ್ವತದಲ್ಲಿ ವಾಸಮಾಡುತ್ತಿದ್ದಾನೆ. ಎಲ್ಲ ಕರಡಿಗಳಿಗೂ ಅವನೇ ರಾಜನು.

ಮಹಾರಾಜ! ಪರ್ವತೋಪಮನಾಗಿ ಅಲ್ಲೊಬ್ಬ ಋಕ್ಷಶ್ರೇಷ್ಠನು ನಿಂತಿದ್ದಾನೆ. ಅವನನ್ನು ನೋಡು. ಅವನೇ ಧೂಮ್ರನ ತಮ್ಮನು. ರೂಪದಲ್ಲವನು ಧೂಮ್ರನಂತೆಯೇ ಇದ್ದಾನೆ. ಆದರೆ ಪರಾಕ್ರಮದಲ್ಲಿ ಅವನಿಗಿಂತಲೂ ಅಧಿಕನು. ಮಹಾದಳಪತಿಗಳಿಗೂ ದಂಡನಾಯಕನಾದ ಅವನು ಜಾಂಬವಂತ–ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ. ಅವನು ಶಾಂತಸ್ವಭಾವದವನು. ಗುರುಜನರ ಆಜ್ಞಾಪರಿಪಾಲಕನು. ಯುದ್ಧಗಳಲ್ಲಿ ಮಾತ್ರ ಅವನು ಸಹನೆಯಿಲ್ಲದವನಾಗುತ್ತಾನೆ. ಬುದ್ಧಿವಂತನಾದ ಅವನು ದೇವಾಸುರರ

ಯುದ್ಧದಲ್ಲಿ ಅನೇಕಪ್ರಕಾರವಾಗಿ ಸಹಾಯಮಾಡಿರುವನು. ಈ ಕಾರಣ ದಿಂದಲೇ ಇಂದ್ರನಿಂದ ಹಲವಾರು ವರಗಳನ್ನು ಪಡೆದುಕೊಂಡಿರುತ್ತಾನೆ. ಅವನ ಅಸಂಖ್ಯಾತರಾದ ಸೈನಿಕರು ಎಲ್ಲೆಡೆಗಳಲ್ಲೂ ಸಂಚರಿಸುತ್ತಿರುತ್ತಾರೆ. ಅವನ ಪರಾಕ್ರಮವು ಅಪಾರವಾದುದು. ಅವರೆಲ್ಲರಿಗೂ ದೊಡ್ಡದಾದ ಆಕಾ ರವೂ ದಟ್ಟವಾದ ಕೂದಲುಗಳೂ ಇವೆ. ರಾಕ್ಷಸ-ಪಿಶಾಚಸದೃಶರು. ಮೃತ್ಯು ವಿಗೂ ಹೆದರದೇ ಇರತಕ್ಕವರು. ಪರ್ವತಗಳ ಶಿಖರಗಳನ್ನು ಹತ್ತಿ ಮೇಘ ಸದೃಶವಾದ ಕಲ್ಲುಬಂಡೆಗಳನ್ನು ಕಿತ್ತು ಶತ್ರುಗಳ ಮೇಲೆ ಎಸೆಯುತ್ತಾರೆ.

ರಾಕ್ಷಸೇಶ್ವರ! ಅಲ್ಲಿ ಕಾಣುತ್ತಿರುವವನು ದಂಭನೆಂಬ ವಾನರದಂಡ ನಾಯಕನು. ಅವನು ಯಾವಾಗಲೂ ಕುಪಿತನಾಗಿಯೇ ಇರುವನು. ಅತ್ತಿಂದಿತ್ತ ಹಾರಾಡುತ್ತಲೇ ಇರುವನು. ವಾನರರೆಲ್ಲರೂ ಅವನನ್ನು ಅಚ್ಚರಿಯಿಂದ ನೋಡುತ್ತಾರೆ. ತನ್ನ ಸೈನ್ಯವನ್ನು ಕಳುಹಿಸುವುದರ ಮೂಲಕವಾಗಿ ಬಲಿಷ್ಠನಾದ ದಂಭನು ಯಾವಾಗಲೂ ಇಂದ್ರನ ಸೇವೆಯನ್ನು ಮಾಡುತ್ತಿರು ವನು.

ರಾವಣೇಶ್ವರ! ಅತ್ತಕಡೆಯಲ್ಲಿ ನಿಂತಿರುವ ವಾನರರ ಪಿತಾಮಹನಾದ ಸನ್ನಾದನನೆಂಬ ಯೂಥಪರ ದಂಡನಾಯಕನನ್ನು ನೋಡು. ಅವನ ಆಕಾರವು ಬಹಳ ದೊಡ್ಡದಾದುದು. ಯೋಜನದ ದೂರದಲ್ಲಿರುವ ಪರ್ವತವನ್ನು ತನ್ನ ನೀಳವಾದ ತೋಳಿನಿಂದ ಮುಟ್ಟಬಲ್ಲನು. ಅಂತೆಯೇ ಯೋಜನದಷ್ಟು ಎತ್ತರದಲ್ಲಿರುವ ವಸ್ತುವನ್ನೂ ತನ್ನ ಶರೀರದಿಂದ ಹೊಂದಬಲ್ಲನು. ಅವನ ಶರೀರವು ಅಷ್ಟೊಂದು ಎತ್ತರವಾಗಿದೆ. ಅವನ ತೋಳುಗಳು ಅಷ್ಟೊಂದು ನೀಳವಾಗಿವೆ. ನಾಲ್ಕು ಕಾಲುಗಳಿರುವ ಪ್ರಾಣಿಗಳಲ್ಲಿ ಅಂತಹ ರೂಪವು ಬೇರೆ ಯಾರಿಗೂ ಇರುವುದಿಲ್ಲ. ಹಿಂದೊಮ್ಮೆ ಇಂದ್ರನು ಅಸುರರೊಡನೆ ಮಾಡು ತ್ತಿದ್ದ ಯುದ್ಧದಲ್ಲಿ ಸನ್ನಾದನು ಅಸುರರಿಗೆ ಯುದ್ಧದ ಆಹ್ವಾನವನ್ನಿತ್ತನು. ಅಸುರರೊಡನೆ ಮಾಡಿದ ಯುದ್ಧದಲ್ಲಿ ಸನ್ನಾದನು ಪರಾಜಿತನಾಗಲಿಲ್ಲ. ಅಂತಹವನೀಗ ತನ್ನ ಅನುಯಾಯಿಗಳೊಡನೆ ಲಂಕೆಯನ್ನು ಧ್ವಂಸಮಾಡಲು ಬಂದಿರುವನು.

ರಾವಣೇಶ್ವರ! ಅಲ್ಲಿಯೇ ಮತ್ತೊಬ್ಬ ದಂಡನಾಯಕನಿದ್ದಾನೆ. ಅವ ನನ್ನು ನೋಡು. ಅವನೇ ಕ್ರಥನೆಂಬ ವಾನರಶ್ರೇಷ್ಠನು. ಅವನಿಗೆ ಇಂದ್ರನ

ಪರಾಕ್ರಮಕ್ಕೆ ಅನುರೂಪವಾದ ಪರಾಕ್ರಮವಿದೆ. ದೇವಾಸುರರಿಗೆ ನಡೆಯ ಲಿದ್ದ ಯುದ್ಧದಲ್ಲಿ ದೇವತೆಗಳಿಗೆ ಸಹಾಯಮಾಡುವ ಸಲುವಾಗಿ ಅಗ್ನಿದೇವನು ಗಂಧರ್ವಕನ್ಯೆಯಲ್ಲಿ ಕ್ರಥನನ್ನು ಪಡೆದುಕೊಂಡನು. ಅನೇಕ ಕಿನ್ನರರಿಂದ ಸೇವಿಸಲ್ಪಡುವ, ಶ್ರೇಷ್ಠಪರ್ವತಗಳಿಗೆ ರಾಜನಾದ, ವಿಹಾರಮಾಡುವವರಿಗೆ ಸುಖದಾಯಕನಾದ, ನಿನ್ನ ಅಣ್ಣನಾದ ಕುಬೇರನು ಯಾವ ಜಂಬೂ ವೃಕ್ಷದ ಆಶ್ರಯದಲ್ಲಿ ರಮಿಸುವನೋ–ಅಲ್ಲಿಯೇ ಮಹಾಪರಾಕ್ರಮಿಯಾದ, ಶ್ರೀಮಂತನಾದ, ಮಹಾಬಲಿಷ್ಠನಾದ ಕ್ರಥನೂ ರಮಿಸುತ್ತಿರುತ್ತಾನೆ. ಯುದ್ಧ ಗಳಲ್ಲಿ ಯಾವಾಗಲೂ ಅವನು ಜಂಬಕೊಚ್ಚುವವನಲ್ಲ. ಸಾವಿರ ಕೋಟಿಸೈನಿಕ ರಿಂದ ಪರಿವೃತನಾಗಿ ನಿಂತಿದ್ದಾನೆ. ಅವನು ಕೂಡ ತನ್ನ ಸೈನ್ಯದೊಡನೆ ಲಂಕೆ ಯನ್ನು ಧ್ವಂಸಮಾಡಲು ಆಶಿಸಿದ್ದಾನೆ.

ದಶಕಂಠನೇ! ನೀನಲ್ಲಿ ನೋಡುತ್ತಿರುವ ವಾನರನಾಯಕನೇ ಪ್ರಮಾಥಿ ಎಂಬುವವನು. ವಾನರರಿಗೂ ಮತ್ತು ಆನೆಗಳಿಗೂ ಇರುವ ಹಿಂದಿನ ವೈರ ವನ್ನು ಸ್ಮರಿಸುತ್ತಾ ಪ್ರಮಾಥಿಯು ಆನೆಗಳನ್ನು ಭಯಗೊಳಿಸುತ್ತಾ ಗಂಗಾ ನದಿಯ ತೀರದಲ್ಲಿ ಸಂಚರಿಸುತ್ತಿರುತ್ತಾನೆ.* ಗಿರಿಗಳ ಗುಹೆಗಳಲ್ಲಿ ಮಲಗುವ ಪ್ರಮಾಥಿಯು ಕಾಡಿನಲ್ಲಿರುವ ವೃಕ್ಷಗಳನ್ನು ಬುಡಸಹಿತವಾಗಿ ಕಿತ್ತು ಆನೆಗಳು ಹೋಗುವ ಹಾದಿಯಲ್ಲಿರಿಸಿ ಅವುಗಳನ್ನು ಮುಂದೆ ಚಲಿಸದಂತೆ ತಡೆಯು ವನು. ವಾನರರ ವಾಹಿನಿಗೆ ದಂಡನಾಯಕನಾಗಿರುವ ಅವನು ಗಂಗಾನದಿಯ ತೀರಪ್ರದೇಶದಲ್ಲಿರುವ ಉಶೀರಬೀಜವೆಂಬ ಪರ್ವತವನ್ನೂ ಪರ್ವತಗಳಲ್ಲಿ ಶ್ರೇಷ್ಠವಾದ ಮಂದರಪರ್ವತವನ್ನೂ ಆಶ್ರಯಿಸಿ ದೇವಲೋಕದ ಇಂದ್ರನಂತೆ ವಿಹರಿಸುತ್ತಿರುತ್ತಾನೆ. ವೀರ್ಯ-ಪರಾಕ್ರಮಗಳಿಂದ ಗರ್ವಿಷ್ಠರಾಗಿರುವ, ಬಾಹುಬಲದಿಂದ ಶೋಭಿಸುವ, ಸರ್ವಕಾಲದಲ್ಲಿಯೂ ಗರ್ಜನೆಮಾಡು ತ್ತಿರುವ ಹತ್ತುಕೋಟಿ ವಾನರಸೈನಿಕರು ಪ್ರಮಾಥಿಯನ್ನು ಅನುಸರಿಸಿ ಹೋಗು ತ್ತಿರುತ್ತಾರೆ. ಮಹಾತ್ಮರಾದ ಆ ವಾನರರಿಗೆ ಅವನೇ ನೇತಾರನು. ವೇಗಶಾಲಿ

---

* ಶಂಬಸಾರದನೆಂಬ ರಾಕ್ಷಸನು ಆನೆಯ ರೂಪವನ್ನು ಧರಿಸಿ ಋಷಿ-ಮುನಿಗಳಿಗೆ ಉಪಟಳಕೊಡುತ್ತಿದ್ದನೆಂದೂ, ಋಷಿಗಳ ಆಜ್ಞೆಯಂತೆ ಹನುಮಂತನ ತಂದೆಯಾದ ಕೇಸರಿಯು ಆನೆಯ ರೂಪದಲ್ಲಿದ್ದ ರಾಕ್ಷಸನನ್ನು ಸಂಹರಿಸಿದನೆಂದೂ ಕಥೆಯಿದೆ. ಅಂದಿನಿಂದ ಆನೆಗಳಿಗೂ ಕಪಿಗಳಿಗೂ ಶತ್ರುತ್ವವು ಬೆಳೆದುಬಂದಿದೆ.

ಗಳಾದ ವಾನರರಿಂದ ಕೂಡಿರುವ ಯಾವನ ಸೈನ್ಯವು ಕೋಪಗೊಂಡಿರುವುದೋ–ವಾಯುವಿನಿಂದ ಚದುರಿಸಲ್ಪಟ್ಟ ಮೇಘದಂತೆ ಇರುವ ಯಾವನನ್ನು ನೀನು ನೋಡುತ್ತಿರುವೆಯೋ–ಅವನೇ ಪ್ರಮಾಥಿಯು. ಗಾಳಿಯಿಂದ ಎಬ್ಬಿಸಲ್ಪಟ್ಟ, ಎಣ್ಣೆಗೆಂಪಿನಿಂದ ಕೂಡಿರುವ ಯಾವ ಧೂಳು ಪುನಃ ಸುತ್ತಿಕೊಂಡು ಎಲ್ಲಿ ಬೀಳುತ್ತಿರುವುದೋ–ಅದೇ ಪ್ರಮಾಥಿಯಿರುವ ಸ್ಥಳ.

ಅತ್ತ ನೋಡು, ರಾವಣೇಶ್ವರ! ಅಲ್ಲಿ ಕಾಣುವ ಕಪ್ಪಾದ ಮುಖದಿಂದ ಕೂಡಿರುವವರೇ ಗೋಲಾಂಗೂಲಜಾತಿಗೆ ಸೇರಿದ ವಾನರರು. ಅವರು ಮಹಾಬಲಿಷ್ಠರು. ಭಯಂಕರವಾದ ಗೋಲಾಂಗೂಲಸೈನಿಕರ ಸಂಖ್ಯೆಯು ಒಂದು ಕೋಟಿಯಷ್ಟಿದೆ. ಅವರೆಲ್ಲರೂ ಸೇತುವೆಯನ್ನು ಕಟ್ಟಲು ಸಹಾಯ ಮಾಡಿದ್ದಾರೆ. ಗೋಲಾಂಗೂಲಜಾತಿಗೆ ಸೇರಿದ ಆ ವಾನರರಿಗೆ ನಾಯಕನಾದ ಗವಾಕ್ಷ ಎಂಬ ಯೂಥಪನನ್ನು ನಾಲ್ಕು ಕಡೆಗಳಿಂದಲೂ ಆವರಿಸಿಕೊಂಡು ಅವನ ಅನುಯಾಯಿಗಳು ಲಂಕೆಯನ್ನು ಧ್ವಂಸಮಾಡುವ ಸಲುವಾಗಿ ಗರ್ಜನೆ ಮಾಡುತ್ತಿದ್ದಾರೆ. ರಾವಣೇಶ್ವರ! ಅಲ್ಲಿ ಕಾಣುತ್ತಿರುವವನೇ ಹನುಮಂತನ ತಂದೆಯಾದ ಕೇಸರಿಯು. ಯಾವ ಪರ್ವತದಲ್ಲಿ ಎಲ್ಲ ಋತುಗಳಲ್ಲಿಯೂ ಫಲಗಳನ್ನು ಬಿಡುವ ಮತ್ತು ದುಂಬಿಗಳಿಂದ ಸೇವಿಸಲ್ಪಡುವ ವೃಕ್ಷಗಳು ಸಮೃದ್ಧವಾಗಿವೆಯೋ, ಸೂರ್ಯನು ತನಗೆ ಸಮಾನವಾದ ಬಣ್ಣವಿರುವ ಯಾವ ಪರ್ವತವನ್ನು ಅನುದಿನವೂ ಪ್ರದಕ್ಷಿಣೆಮಾಡುವನೋ, ಯಾವ ಪರ್ವತದ ಕಾಂತಿಯಿಂದ ಅಲ್ಲಿ ವಾಸಮಾಡುವ ಮೃಗ-ಪಕ್ಷಿಗಳೂ ಸುವರ್ಣಮಯವಾಗಿ ಕಾಣುತ್ತವೆಯೋ, ಮಹಾತ್ಮರಾದ ಮಹರ್ಷಿಗಳು ಯಾವ ಪರ್ವತದ ಶಿಖರವನ್ನು ಯಾವಾಗಲೂ ಬಿಟ್ಟುಹೋಗುವುದಿಲ್ಲವೋ, ಯಾವ ಪರ್ವತದಲ್ಲಿರುವ ಎಲ್ಲ ವೃಕ್ಷಗಳೂ ಮನಸ್ಸಿನಲ್ಲಿ ಕೋರುವ ವಸ್ತುಗಳೆಲ್ಲವನ್ನೂ ಫಲ ರೂಪದಲ್ಲಿ ಕೊಡುವುವೋ, ಯಾವ ಪರ್ವತದಲ್ಲಿರುವ ವೃಕ್ಷಗಳು ಯಾವಾಗಲೂ ಫಲಸಮೃದ್ಧವಾಗಿರುವುವೋ, ಯಾವ ಶ್ರೇಷ್ಠವಾದ ಪರ್ವತದಲ್ಲಿ ಬಹುಮೂಲ್ಯವಾದ ಮಧುವು ಯಾವಾಗಲೂ ಲಭಿಸುವುದೋ–ಅಂತಹ ಸುವರ್ಣಮಯವಾದ ಸುಂದರವಾದ ಮೇರುಪರ್ವತದಲ್ಲಿ ಪ್ರಮುಖವಾನರರಲ್ಲಿ ಪ್ರಧಾನಭೂತನಾದ ಕೇಸರಿಯು ವಾಸಮಾಡುತ್ತಾನೆ.

ಮಹಾರಾಜ! ಅರುವತ್ತು ಸಾವಿರ ಸುವರ್ಣಪರ್ವತಗಳಿವೆ. ಅವುಗಳ

ಮಧ್ಯದಲ್ಲಿ 'ಸಾವರ್ಣಿಮೇರು' ಎಂಬ ಶ್ರೇಷ್ಠವಾದ ಪರ್ವತವಿದೆ. ರಾಕ್ಷಸರಲ್ಲಿ ನೀನು ಶ್ರೇಷ್ಠನಾಗಿರುವಂತೆ ಸಾವರ್ಣಿಮೇರುಪರ್ವತವು ಎಲ್ಲ ಪರ್ವತ ಗಳಿಗೂ ಉತ್ತಮೋತ್ತಮವಾಗಿದೆ.

ಸಾವರ್ಣಿಮೇರುಪರ್ವತದ ಅಂತಿಮಶಿಖರದಲ್ಲಿ ಕಂದುಬಣ್ಣದ, ಬಿಳೀಬಣ್ಣದ, ಕೆಂಪುಬಣ್ಣದ, ಜೇನುತುಪ್ಪದ ಬಣ್ಣದಂತೆ ಪಿಂಗಲವರ್ಣದ ಕಪಿಗಳು ವಾಸಮಾಡುತ್ತವೆ. ಅವುಗಳಿಗೆ ತೀಕ್ಷ್ಣವಾದ ಕೋರೆದಾಡೆಗಳಿವೆ. ಉಗುರುಗಳೇ ಆಯುಧಗಳಾಗಿರುವ ಅವೆಲ್ಲವೂ ಸಿಂಹದಂತೆ ನಾಲ್ಕು ನಾಲ್ಕು ಕೋರೆದಾಡೆಗಳನ್ನು ಹೊಂದಿವೆ. ಹುಲಿಯಂತೆ ಎದುರಿಸಲು ಅಸಾಧ್ಯ ವಾಗಿವೆ. ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕಂಗೊಳಿಸುತ್ತವೆ. ಪ್ರಜ್ವಲಿಸುವ ಮುಖದಿಂದ ಕೂಡಿರುವ ವಿಷಸರ್ಪಗಳಂತೆ ಅವರು ಮಹಾ ಕೋಪಿಷ್ಠರು. ಅವರ ಬಾಲಗಳು ಉದ್ದವಾಗಿಯೂ ಸುಂದರವಾಗಿಯೂ ಇವೆ. ಅವರೆಲ್ಲರೂ ಮದಿಸಿದ ಆನೆಗಳಂತೆಯೂ ಮಹಾಪರ್ವತಗಳಂತೆಯೂ ಇದ್ದಾ ರೆ. ಅವರ ಧ್ವನಿಯು ಮಹಾಮೇಘದ ಧ್ವನಿಗೆಅನುರೂಪವಾಗಿದೆ. ಅವರೆಲ್ಲರಿಗೂ ದುಂಡಾದ ಪಿಂಗಳಬಣ್ಣದ ಕಣ್ಣುಗಳಿವೆ. ಅವರು ನಡೆಯು ವಾಗ ಘೋರವಾದ ಶಬ್ದವುಂಟಾಗುತ್ತದೆ. ಅಂತಹ ಅದ್ಭುತಪರಾಕ್ರಮಿಗಳಾದ ವಾನರರೆಲ್ಲರೂ ಇಲ್ಲಿಗೆ ಆಗಮಿಸಿ ಲಂಕೆಯನ್ನು ನೋಡಿದೊಡನೆಯೇ ಧ್ವಂಸ ಮಾಡಿಬಿಡುವರೋ ಎಂಬಂತೆ ನಿಂತಿದ್ದಾರೆ. ರಾವಣೇಶ್ವರ! ಅವರ ಮಧ್ಯ ದಲ್ಲಿ ಮಹಾಪರಾಕ್ರಮಿಯಾದ ಸೇನಾಪತಿಯೊಬ್ಬನು ನಿಂತಿರುವುದನ್ನು ನೋಡು. ಅವನು ಮಹಾಬಲಿಷ್ಠನು. ವಿಜಯದ ಪ್ರಾಪ್ತಿಗಾಗಿ ಯಾವಾಗಲೂ ಸೂರ್ಯೋಪಾಸನೆಮಾಡುತ್ತಿರುತ್ತಾನೆ. ಆ ವಾನರನಾಯಕನು ಪ್ರಪಂಚದಲ್ಲಿ ಶತಬಲೀ ಎಂಬ ಹೆಸರಿನಿಂದ ವಿಖ್ಯಾತನಾಗಿರುವನು. ಬಲಿಷ್ಠನಾದ, ಪರಾಕ್ರಮಿಯಾದ, ಮಹಾಶೂರನಾದ ಶತಬಲಿಯು ತನ್ನ ಪೌರುಷವನ್ನೇ ಆಶ್ರಯಿಸಿ ಯುದ್ಧಸನ್ನದ್ಧನಾಗಿದ್ದಾನೆ. ತನ್ನ ಸೇನೆಯೊಡನೆ ಲಂಕಾಪಟ್ಟಣವನ್ನು ಧ್ವಂಸಮಾಡಲು ಅಪೇಕ್ಷಿಸಿದ್ದಾನೆ. ಶ್ರೀರಾಮನಿಗೆ ಪ್ರಿಯವನ್ನುಂಟು ಮಾಡಲು ತನ್ನ ಪ್ರಾಣಗಳ ಮೇಲಿನ ಪ್ರೀತಿಯನ್ನೂ ತೊರೆದುಬಿಟ್ಟಿದ್ದಾನೆ. ಗಜ, ಗವಾಕ್ಷ, ಗವಯ, ನಲ, ನೀಲ-ಇವರಲ್ಲಿ ಒಬ್ಬೊಬ್ಬರೂ ಹತ್ತುಕೋಟಿ ವಾನರಸೈನಿಕರಿಂದ ಸಮಾವೃತರಾಗಿದ್ದಾರೆ. ಅವರಂತೆಯೇ ವಿಂಧ್ಯಪರ್ವತ

ವಾಸಿಗಳಾದ ಇತರ ವಾನರಶ್ರೇಷ್ಠರೂ ಮಹಾಪರಾಕ್ರಮಿಗಳೂ, ಯುದ್ಧ ದುರ್ಮದರೂ, ಅಜೇಯರೂ, ರಾಮನ ಪ್ರೀತ್ಯರ್ಥವಾಗಿ ಪ್ರಾಣಗಳ ಹಂಗನ್ನೇ ತೊರೆದಿರುವವರೂ ಆದ ವಾನರರೂ ಅಗಣಿತಸಂಖ್ಯೆಯಲ್ಲಿದ್ದಾರೆ. ಅವರೆಲ್ಲರನ್ನೂ ಎಣಿಕೆಮಾಡಿ ಹೇಳುವ ಸಾಧ್ಯತೆಯೇ ಇಲ್ಲ.

ಮಹಾರಾಜ! ಅಲ್ಲಿ ಕಾಣುತ್ತಿರುವ ಕಪಿವೀರರೆಲ್ಲರೂ ಮಹಾಪ್ರಭಾವ ಶಾಲಿಗಳು. ಎಲ್ಲರ ಶರೀರಗಳೂ ಪರ್ವತೋಪಮವಾಗಿವೆ. ಕ್ಷಣಮಾತ್ರದಲ್ಲಿ ಭೂಮಂಡಲದಲ್ಲಿರುವ ಸಮಸ್ತಪರ್ವತಗಳನ್ನೂ ಚೂರು-ಚೂರುಮಾಡಿ ಎಲ್ಲ ಕಡೆಗಳಲ್ಲಿಯೂ ಹರಡಿಬಿಡುವಷ್ಟು ಅವರು ಸಮರ್ಥರಾಗಿದ್ದಾರೆ."

೨೭ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೨೮ನೆಯ ಸರ್ಗ

ಶುಕನು ಶ್ರೀರಾಮನೇ ಮೊದಲಾದ ಪ್ರಧಾನರನ್ನು ರಾವಣನಿಗೆ ಪರಿಚಯಮಾಡಿಕೊಟ್ಟುದು

ಸಾರಣಸ್ಯ ವಚಃ ಶ್ರುತ್ವಾ ರಾವಣಂ ರಾಕ್ಷಸಾಧಿಪಮ್ ।
ಬಲಮಾದಿಶ್ಯ ತತ್ಸರ್ವಂ ಶುಕೋ ವಾಕ್ಯಮಥಾಬ್ರವೀತ್ ॥೧॥

ಸಾರಣನ ಮಾತನ್ನು ಕೇಳಿದನಂತರ ಶುಕನು ವಾನರಸೈನ್ಯವನ್ನು ತೋರಿಸುತ್ತಾ ರಾಕ್ಷಸಾಧಿಪನಾದ ರಾವಣನಿಗೆ ಹೇಳಿದನು :

"ರಾವಣೇಶ್ವರ! ಅಲ್ಲಿ ನಿಂತಿರುವವರೆಲ್ಲರನ್ನೂ ನೀನು ನೋಡು ತ್ತಿರುವೆಯಲ್ಲವೇ? ಅವರೆಲ್ಲರೂ ದೊಡ್ಡ ದೊಡ್ಡ ಮದಿಸಿದ ಆನೆಗಳಂತಿದ್ದಾರೆ. ಗಂಗಾತೀರದಲ್ಲಿರುವ ಆಲದ ಮರಗಳಂತೆಯೂ ಹಿಮವತ್ಪರ್ವತದಲ್ಲಿರುವ ಸಾಲವೃಕ್ಷಗಳಂತೆಯೂ ಇದ್ದಾರೆ. ಅವರ ವೇಗವನ್ನು ಸಹಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಇಚ್ಛಾನುಸಾರವಾಗಿ ರೂಪಗಳನ್ನು ಧರಿಸುವ ಇವರು ಮಹಾಬಲಿಷ್ಠರು. ದೈತ್ಯ-ದಾನವಸದೃಶರಾಗಿರುವ ಎಲ್ಲರೂ ಯುದ್ಧ ದಲ್ಲಿ ದೇವತೆಗಳ ಪರಾಕ್ರಮಕ್ಕೆ ಸದೃಶವಾದ ಪರಾಕ್ರಮವನ್ನು ತೋರಬಲ್ಲರು. ಅವರ ಸಂಖ್ಯೆಯು ಇಪ್ಪತ್ತೊಂದು ಕೋಟಿಸಹಸ್ರ-ಸಹಸ್ರಶಂಖ-ನೂರು ವೃಂದಗಳಷ್ಟಿದೆ. ಅವರೆಲ್ಲರೂ ಸುಗ್ರೀವನ ಮಂತ್ರಿಗಳು. ಕಿಷ್ಕಿಂಧಾವಾಸಿಗಳು.

ಕಾಮರೂಪಿಗಳಾದ ಅವರು ದೇವ-ಗಂಧರ್ವರಿಂದ ಹುಟ್ಟಿದವರು. ದೇವತೆಗಳಿಗೆ ಸಮಾನವಾದ ರೂಪವುಳ್ಳ ಆ ಇಬ್ಬರು ವಾನರರು ಜೊತೆಗೂಡಿ ನಿಂತಿರುವುದನ್ನು ನೀನು ನೋಡುತ್ತಿರುವೆಯಲ್ಲವೇ? ಅವರೇ ಮೈಂದ-ದ್ವಿವಿದರು. ಯುದ್ಧದಲ್ಲಿ ಅವರಿಗೆ ಸಮಾನರಾದವರೇ ಇಲ್ಲ. ಬ್ರಹ್ಮನ ಅನುಜ್ಞೆಯನ್ನು ಪಡೆದು ಅವರಿಬ್ಬರೂ ಅಮೃತಪ್ರಾಶನ ಮಾಡಿದ್ದಾರೆ. ಅವರಿಬ್ಬರೂ ತಮ್ಮ ಭುಜಬಲ-ಪರಾಕ್ರಮಗಳಿಂದ ಲಂಕೆಯನ್ನು ಧ್ವಂಸಮಾಡಲು ಆಶಿಸಿದ್ದಾರೆ.

ಮಹಾರಾಜ! ಇತ್ತಕಡೆ ಮದೋದಕವನ್ನು ಸುರಿಸುತ್ತಿರುವ ಆನೆಯಂತೆಯೇ ನಿಂತಿರುವ ವಾನರನೊಬ್ಬನನ್ನು ನೋಡುತ್ತಿರುವೆಯಲ್ಲವೇ? ಅವನೇನಾದರೂ ಕುಪಿತನಾದನೆಂದರೆ ಬಲಪೂರ್ವಕವಾಗಿ ಸಮುದ್ರವನ್ನೇ ಅಲ್ಲೋಲ-ಕಲ್ಲೋಲಮಾಡಿಬಿಡುವನು. ಆ ವಾನರನೇ ಹಿಂದೆ ಲಂಕೆಗೆ ಬಂದು ನಿನ್ನನ್ನೂ ಸೀತಾದೇವಿಯನ್ನೂ ನೋಡಿಕೊಂಡು ಹೋಗಿದ್ದವನು. ಹಿಂದೆ ನೀನು ನೋಡಿದ್ದ ಆ ವಾನರನೇ ಪುನಃ ಆಗಮಿಸಿರುವುದನ್ನು ನೋಡು. ಅವನು ಕೇಸರಿಯೆಂಬ ವಾನರನಾಯಕನ ಹಿರಿಯ ಮಗನು. ವಾಯುಪುತ್ರನೆಂಬ ಹೆಸರಿನಿಂದಲೂ ಕರೆಯಲ್ಪಡುತ್ತಾನೆ. ಹನುಮಂತನೆಂದೂ ವಿಖ್ಯಾತನಾಗಿರುವ ಅವನೇ ಮೊದಲಬಾರಿಗೆ ಈ ಸಮುದ್ರವನ್ನು ದಾಟಿ ಇಲ್ಲಿಗೆ ಬಂದಿದ್ದನು. ಬಲ-ರೂಪಸಂಪನ್ನನಾಗಿರುವ ಹನುಮಂತನು ತನ್ನ ಇಚ್ಛಾನುಸಾರವಾಗಿ ರೂಪಗಳನ್ನು ಧರಿಸಲು ಸಮರ್ಥನು. ಅವನ ಗಮನವನ್ನು ಯಾರಿಂದಲೂ ತಡೆಯಲು ಸಾಧ್ಯವಾಗುವುದಿಲ್ಲ. ತಂದೆಯಾದ ವಾಯುವಿನಂತೆಯೇ ಅವನೂ ಎಲ್ಲಿಗೆ ಬೇಕಾದರೂ ಅಡೆ-ತಡೆಯಿಲ್ಲದೆ ಹೋಗಬಲ್ಲನು. ಅವನು ಬಾಲಕನಾಗಿದ್ದಾಗಲೇ ಒಂದು ಪ್ರಸಂಗವು ನಡೆಯಿತು. ಒಂದು ದಿನ ಅವನಿಗೆ ಬಹಳ ಹಸಿವಾಗಿದ್ದಿತಂತೆ. ಹುಟ್ಟುತ್ತಿರುವ ಸೂರ್ಯನನ್ನು ನೋಡಿ ತಾನು ತಿಂದು ಹಸಿವಾರಿಸಿಕೊಳ್ಳಬಹುದಾದ ದೊಡ್ಡ ಹಣ್ಣೆಂದು ಸೂರ್ಯಮಂಡಲವನ್ನು ಭಾವಿಸಿ ಮೂರು ಸಾವಿರ ಯೋಜನಗಳಷ್ಟು ಎತ್ತರಕ್ಕೆ ಹಾರಿದನಂತೆ. 'ಇಲ್ಲಿರುವ ಯಾವ ಪದಾರ್ಥಗಳಿಂದಲೂ ನನ್ನ ಹಸಿವು ಇಂಗುವುದಿಲ್ಲ. ಆದುದರಿಂದ ಆಕಾಶದಲ್ಲಿ ದಿವ್ಯಫಲದಂತಿರುವ ಆದಿತ್ಯನನ್ನೇ ತಿಂದುಬಿಡುತ್ತೇನೆ'–ಎಂದು ನಿಶ್ಚಯಿಸಿ ಮೇಲಕ್ಕೆ ಹಾರಿದನಂತೆ.

ಆದರೆ ದೇವರ್ಷಿ-ರಾಕ್ಷಸರಿಂದಲೂ ಎದುರಿಸಲು ಅಸಾಧ್ಯನಾದ ಸೂರ್ಯ ದೇವನನ್ನು ತಲುಪದೆಯೇ ಉದಯಗಿರಿಯ ಮೇಲೆ ಬಿದ್ದುಬಿಟ್ಟನಂತೆ.

ಪತಿತಸ್ಯ ಕಪೇರಸ್ಯ ಹನುರೇಕಾ ಶಿಲಾತಲೇ ।
ಕಿಂಚಿದ್ಭಿನ್ನಾ ದೃಢಹನೋರ್ಹನುಮಾನೇಷ ತೇನ ವೈ ॥೧೫॥

ಉದಯಗಿರಿಯ ಮೇಲಿದ್ದ ಬಂಡೆಯ ಮೇಲೆ ಬಿದ್ದೊಡನೆಯೇ ಹನುಮಂತನ ದವಡೆಯು ಸ್ವಲ್ಪ ಜಜ್ಜಿಹೋಯಿತು ಮತ್ತು ಅದು ಹಾಗೆಯೇ ದೃಢವಾಗಿಯೂ ಉಳಿದುಬಿಟ್ಟಿತು. ಈ ಕಾರಣದಿಂದಲೇ ಅವನು ಹನುಮಂತನೆಂಬ ಹೆಸರಿನಿಂದ ಪ್ರಸಿದ್ಧನಾದನು.*

ವಿಶ್ವಸನೀಯರಾದ ವ್ಯಕ್ತಿಗಳ ಪರಿಚಯದಿಂದ ನನಗೆ ಹನುಮಂತನ ವಿಷಯವು ಚೆನ್ನಾಗಿ ತಿಳಿಯಿತು. ಅವನ ಬಲ-ರೂಪ-ಪ್ರಭಾವಗಳನ್ನು ಪೂರ್ಣವಾಗಿ ವರ್ಣಿಸಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ಅವನು ತನ್ನೊಬ್ಬನ ಪರಾಕ್ರಮದಿಂದಲೇ ಲಂಕಾಪಟ್ಟಣವನ್ನು ಧ್ವಂಸಮಾಡಿಬಿಡಲು ಇಚ್ಛಿಸುತ್ತಿದ್ದಾನೆ. ಲಂಕೆಯಲ್ಲಿ ನಿನ್ನಿಂದಲೇ ಇಡಲ್ಪಟ್ಟ ಬೆಂಕಿಯನ್ನು ಉದ್ದೀಪನಗೊಳಿಸಿ ಲಂಕಾಪಟ್ಟಣವನ್ನೇ ಸುಟ್ಟುಹಾಕಿದ ಆ ಕಪಿಯನ್ನು ನೀನು ಹೇಗೆ ತಾನೇ ಮರೆಯುವೆ?

ಹನುಮಂತನ ಪಕ್ಕದಲ್ಲಿರುವವನೇ ಕಮಲಾಕ್ಷನಾದ, ಶೂರನಾದ, ಇಕ್ಷ್ವಾಕುವಂಶೀಯರಲ್ಲಿ ಅತಿರಥನಾದ, ಮಹಾಪೌರುಷದಿಂದ ಕೂಡಿರುವವನೆಂದು ಮೂರು ಲೋಕಗಳಲ್ಲಿಯೂ ಪ್ರಸಿದ್ಧನಾಗಿರುವ ಶ್ರೀರಾಮನು.

ಯಸ್ಮಿನ್ನ ಚಲತೇ ಧರ್ಮೋ ಯೋ ಧರ್ಮಾನ್ನಾತಿವರ್ತತೇ ।
ಯೋ ಬ್ರಾಹ್ಮಮಸ್ತ್ರಂ ವೇದಾಂಶ್ಚ ವೇದ ವೇದವಿದಾಂ ವರಃ ॥೧೯॥

ಯಾವನನ್ನು ಧರ್ಮವು ಬಿಟ್ಟುಹೋಗುವುದಿಲ್ಲವೋ, ಯಾವನು

---

* ರಾಮಾಯಣದ ಉತ್ತರಕಾಂಡದಲ್ಲಿ ಹನುಮಂತನೆಂದು ಹೆಸರು ಬರಲು ಕಾರಣ ವನ್ನು ಹೀಗೆ ವಿವರಿಸಿದೆ. 'ಇಂದ್ರನ ವಜ್ರಾಯುಧಪ್ರಹಾರದಿಂದ ಉಂಟಾದ ವೀರತ್ವ ಸೂಚಕವಾದ ಗಾಯದ ಗುರುತಿರುವುದರಿಂದ ಹನುಮಂತನೆಂಬ ಹೆಸರಾಯಿತು. ಮತ್ಕರೋತ್ಸೃಷ್ಟವಜ್ರೇಣ **ಹನುಸ್ತಸ್ಯ ತದಾ ಕ್ಷತಃ । ನಾಮ್ನೈಷ ಹರಿಶಾರ್ದೂಲಃ ಭವಿತಾ ಹನುಮಾನಿತಿ ॥**

ಧರ್ಮವನ್ನು ಯಾವಾಗಲೂ ಉಲ್ಲಂಘಿಸುವುದಿಲ್ಲವೋ, ವೇದವಿದರಲ್ಲಿ ಶ್ರೇಷ್ಠನಾದ ಯಾವನು ಬ್ರಹ್ಮಾಸ್ತ್ರವನ್ನೂ ವೇದಗಳನ್ನೂ ತಿಳಿದಿರುವನೋ– ಅವನೇ ಹನುಮಂತನ ಪಕ್ಕದಲ್ಲಿರುವ ಶ್ರೀರಾಮನು.

ಯೋ ಭಿನ್ದ್ಯಾದ್ಗಗನಂ ಬಾಣೈಃ ಪರ್ವತಾನಪಿ ದಾರಯೇತ್ ।
ಯಸ್ಯ ಮೃತ್ಯೋರಿವ ಕ್ರೋಧಃ ಶಕ್ರಸ್ಯೇವ ಪರಾಕ್ರಮಃ ॥೨೦॥

ಶ್ರೀರಾಮನು ಬಾಣಗಳಿಂದ ಆಕಾಶವನ್ನೇ ಭೇದಿಸಬಲ್ಲನು. ಭೂಮಿ ಯನ್ನೇ ಸೀಳಿಹಾಕಬಲ್ಲನು. ಅವನ ಕೋಪವು ಮೃತ್ಯುವಿಗೆ ಸಮಾನವಾದುದು. ಅವನಲ್ಲಿ ಇಂದ್ರನ ಪರಾಕ್ರಮಕ್ಕೆ ಅನುರೂಪವಾದ ಪರಾಕ್ರಮವಿದೆ. ರಾಕ್ಷಸೇಶ್ವರ! ಯಾವನ ಭಾರ್ಯೆಯನ್ನು ನೀನು ಜನಸ್ಥಾನದಿಂದ ಕದ್ದುತಂದೆಯೋ ಅಂತಹ ಶ್ರೀರಾಮನೇ ಈಗ ನಿನ್ನೊಡನೆ ಯುದ್ಧಮಾಡಲು ನಿನ್ನ ಮುಂದೆ ಬಂದು ನಿಂತಿರುವನು.

ಶ್ರೀರಾಮನ ಬಲಭಾಗದಲ್ಲಿ ಶುದ್ಧವಾದ ಚಿನ್ನದ ಪ್ರಭೆಯಂತೆ ದಿವ್ಯ ವಾದ ಪ್ರಭೆಯಿಂದ ಪ್ರಕಾಶಿಸುತ್ತಿರುವವನೂ, ವಿಶಾಲವಾದ ವಕ್ಷಃಸ್ಥಳವುಳ್ಳ ವನೂ, ಕೆಂಪಾದ ಕಣ್ಣುಗಳುಳ್ಳವನೂ, ಕಪ್ಪಾಗಿ ಗುಂಗುರುಗಳಿಂದ ಕೂಡಿರುವ ಕೇಶರಾಶಿಯುಳ್ಳವನೂ ಆಗಿ ಕಂಗೊಳಿಸುತ್ತಿರುವವನೇ ಅಣ್ಣನ ಹಿತದಲ್ಲಿಯೇ ಯಾವಾಗಲೂ ಆಸಕ್ತನಾಗಿರುವ ಲಕ್ಷ್ಮಣನು. ಸಮಸ್ತಶಸ್ತ್ರಧಾರಿಗಳಲ್ಲಿಯೂ ಶ್ರೇಷ್ಠನಾದ ಅವನು ನೀತಿಶಾಸ್ತ್ರದಲ್ಲಿಯೂ ಯುದ್ಧದಲ್ಲಿಯೂ ಮಹಾಕುಶಲನು. ಶೀಘ್ರಕೋಪಿಯು. ಶತ್ರುಗಳಿಂದ ಜಯಿಸಲು ಅಸಾಧ್ಯ ನಾದವನು. ಶತ್ರುಗಳೊಡನೆ ಮಾಡುವ ಯುದ್ಧದಲ್ಲಿ ಜಯಗಳಿಸುವ ಸಾಮರ್ಥ್ಯವಿರುವವನು. ಮಹಾಪರಾಕ್ರಮಿಯು. ಮಹಾಬಲಿಷ್ಠನು.

ರಾಮಸ್ಯ ದಕ್ಷಿಣೋ ಬಾಹುರ್ನಿತ್ಯಂ ಪ್ರಾಣೋ ಬಹಿಶ್ಚರಃ ॥೨೧॥

ಶ್ರೀರಾಮನಿಗೆ ಬಲಗೈಯಂತೆಯೂ ಹೊರಗೆ ಸಂಚರಿಸುವ ಪ್ರಾಣ ಗಳಂತೆಯೂ ಇರತಕ್ಕವನು. ರಾಘವನ ಸಲುವಾಗಿ ಅವನು ಜೀವವನ್ನೇ ತೊರೆಯಲು ಸಿದ್ಧನಾಗಿರತಕ್ಕವನು. ಅವನು ಕೂಡ ಸಮಸ್ತರಾಕ್ಷಸರನ್ನೂ ಸಂಹರಿಸಲು ಇಚ್ಛಿಸಿದ್ದಾನೆ.

ಶ್ರೀರಾಮನ ಎಡಭಾಗದಲ್ಲಿ ರಾಕ್ಷಸರಿಂದ ಸುತ್ತುವರಿಯಲ್ಪಟ್ಟು ನಿಂತಿ

ರುವವನೇ ರಾಜಾ ವಿಭೀಷಣ. ರಾಜಾಧಿರಾಜನಾದ ಶ್ರೀರಾಮನು ಅವನಿಗೀಗಾಗಲೇ ಲಂಕಾರಾಜ್ಯದ ಪಟ್ಟಗಟ್ಟಿಬಿಟ್ಟಿದ್ದಾನೆ. ಈಗ ವಿಭೀಷಣನು ನಿನ್ನ ವಿಷಯದಲ್ಲಿ ಕುಪಿತನಾಗಿ ನಿನ್ನೊಡನೆ ಯುದ್ಧಮಾಡಲು ಬರುತ್ತಿದ್ದಾನೆ.

ಎಲ್ಲ ವಾನರನಾಯಕರ ಮಧ್ಯದಲ್ಲಿ ಪರ್ವತೋಪಮನಾಗಿರುವ, ಪರ್ವತದಂತೆ ಸುಸ್ಥಿರನಾಗಿ ನಿಂತಿರುವ ವಾನರಶ್ರೇಷ್ಠನನ್ನು ನೋಡುತ್ತಿರುವೆಯಲ್ಲವೇ? ಅವನೇ ಸಮಸ್ತವಾನರಶ್ರೇಷ್ಠರಿಗೂ ರಾಜನಾದ ಮಹಾತೇಜಸ್ವಿಯಾದ ಸುಗ್ರೀವನು. ಹಿಮವಂತನು ಎಲ್ಲ ಪರ್ವತಗಳಿಗೂ ಶ್ರೇಷ್ಠನಾಗಿರುವಂತೆ–ತೇಜಸ್ಸು, ಯಶಸ್ಸು, ಬುದ್ಧಿ, ಬಲ, ಸತ್ಕುಲಪ್ರಸೂತಿ–ಈ ಎಲ್ಲದರಲ್ಲಿಯೂ ಸುಗ್ರೀವನು ಎಲ್ಲ ವಾನರಶ್ರೇಷ್ಠರನ್ನೂ ಮೀರಿಸಿದ್ದಾನೆ. ಪರ್ವತರೂಪವಾದ ದುರ್ಗದಲ್ಲಿರುವ, ದಟ್ಟವಾದ ವೃಕ್ಷಗಳಿಂದ ಸಮಾವೃತವಾಗಿರುವ ಕಿಷ್ಕಿಂಧಾ ಎಂಬ ದುರ್ಗಮವಾದ ಗುಹೆಯಲ್ಲಿ ಸುಗ್ರೀವನು ತನ್ನ ಪ್ರಧಾನಭೂತರಾದ ಸೇನಾಪತಿಗಳೊಡನೆ ವಾಸಮಾಡುತ್ತಿದ್ದಾನೆ. ಅವನ ಕೊರಳಲ್ಲಿ ಸುವರ್ಣಮಯವಾದ ನೂರು ಕಮಲಗಳಿಂದ ಸುಶೋಭಿಸುವ ಮಾಲೆಯಿದೆ. ಆ ಮಾಲೆಯಲ್ಲಿ ಲಕ್ಷ್ಮಿಯ ಸಾನ್ನಿಧ್ಯವು ಸರ್ವದಾ ಇರುತ್ತದೆ. ದೇವ-ಮಾನವರಿಗೂ ಆ ಮಾಲೆಯು ಆಕರ್ಷಕವಾಗಿದೆ. ಶ್ರೀರಾಮನು ವಾಲಿಯನ್ನು ಸಂಹರಿಸಿ ದಿವ್ಯವಾದ ಆ ಸುವರ್ಣಮಾಲೆಯನ್ನೂ, ತಾರಾದೇವಿಯನ್ನೂ, ಶಾಶ್ವತವಾದ ಕಪಿರಾಜ್ಯವನ್ನೂ ಸುಗ್ರೀವನಿಗೆ ಒಪ್ಪಿಸಿಕೊಟ್ಟನು.

ಶತಂ ಶತಸಹಸ್ರಾಣಾಂ ಕೋಟಿಮಾಹುರ್ಮನೀಷಿಣಃ ।
ಶತಂ ಕೋಟಿಸಹಸ್ರಾಣಾಂ ಶಙ್ಖ ಇತ್ಯಭಿಧೀಯತೇ ॥೩೩॥

ನೂರು ಲಕ್ಷಗಳನ್ನು ವಿದ್ವಾಂಸರು ಕೋಟಿ–ಎಂದು ಕರೆಯುತ್ತಾರೆ. ಅಂತಹ ನೂರು ಸಾವಿರ ಕೋಟಿಗಳನ್ನು ಶಂಖ ಒಂದು ಎಂದು ಕರೆಯುತ್ತಾ ರೆ.

ಶತಂ ಶಙ್ಖಸಹಸ್ರಾಣಾಂ ಮಹಾಶಙ್ಖ ಇತಿ ಸ್ಮೃತಃ ।
ಮಹಾಶಙ್ಖಸಹಸ್ರಾಣಾಂ ಶತಂ ವೃನ್ದಮಿತಿ ಸ್ಮೃತಮ್ ॥೩೪॥

ನೂರುಸಾವಿರ ಶಂಖಗಳಿಗೆ ಒಂದು ಮಹಾಶಂಖವೆಂದು ಹೆಸರು. ನೂರುಸಾವಿರ ಮಹಾಶಂಖಗಳಿಗೆ ಒಂದು ವೃಂದವೆಂದು ಹೆಸರು.

ಶತಂ ವೃನ್ದಸಹಸ್ರಾಣಾಂ ಮಹಾವೃನ್ದಮಿತಿ ಸ್ಮೃತಮ್ ।
ಮಹಾವೃನ್ದಸಹಸ್ರಾಣಾಂ ಶತಂ ಪದ್ಮಮಿತಿ ಸ್ಮೃತಮ್ ॥೩೫॥

ನೂರುಸಾವಿರ ವೃಂದಗಳಿಗೆ ಒಂದು ಮಹಾವೃಂದವೆಂದು ಹೆಸರು. ನೂರುಸಾವಿರ ಮಹಾವೃಂದಗಳಿಗೆ ಒಂದು ಪದ್ಮವೆಂದು ಹೆಸರು.

ಶತಂ ಪದ್ಮಸಹಸ್ರಾಣಾಂ ಮಹಾಪದ್ಮಮಿತಿ ಸ್ಮೃತಮ್ ।
ಮಹಾಪದ್ಮಸಹಸ್ರಾಣಾಂ ಶತಂ ಖರ್ವಮಿಹೋಚ್ಯತೇ ॥೩೬॥

ನೂರುಸಾವಿರ ಪದ್ಮಗ್ರಳಿಗೆ ಒಂದು ಮಹಾಪದ್ಮವೆಂದು ಹೆಸರು. ನೂರುಸಾವಿರ ಮಹಾಪದ್ಮಗ್ರಳಿಗೆ ಒಂದು ಖರ್ವ ಎನ್ನುತ್ತಾರೆ.

ಶತಂ ಖರ್ವಸಹಸ್ರಾಣಾಂ ಮಹಾಖರ್ವಮಿತಿ ಸ್ಮೃತಮ್ ।
ಮಹಾಖರ್ವಸಹಸ್ರಾಣಾಂ ಸಮುದ್ರಮಭಿಧೀಯತೇ ॥೩೭॥

ಶತಂ ಸಮುದ್ರಸಾಹಸ್ರಮೋಘ ಇತ್ಯಭಿಧೀಯತೇ ।
ಶತಮೋಘಸಹಸ್ರಾಣಾಂ ಮಹೌಘ ಇತಿ ವಿಶ್ರುತಃ ॥೩೮॥

ನೂರು ಸಾವಿರ ಖರ್ವಗಳಿಗೆ ಒಂದು ಮಹಾಖರ್ವವೆಂದು ಹೆಸರು. ನೂರು ಸಾವಿರ ಮಹಾಖರ್ವಗಳಿಗೆ ಒಂದು ಸಮುದ್ರವೆಂದು ಹೆಸರು. ನೂರು ಸಾವಿರ ಸಮುದ್ರಗಳಿಗೆ ಒಂದು ಓಘವೆಂದು ಹೆಸರು. ನೂರು ಸಾವಿರ ಓಘಗಳಿಗೆ ಒಂದು ಮಹೌಘವೆಂದು ಹೆಸರು.

ಹೀಗೆ ಸಾವಿರ ಕೋಟಿ, ನೂರು ಶಂಖ, ಸಾವಿರ ಮಹಾಶಂಖ, ನೂರು ವೃಂದ, ಸಾವಿರ ಮಹಾವೃಂದ, ನೂರು ಪದ್ಮ, ಸಾವಿರ ಮಹಾಪದ್ಮ, ನೂರು ಖರ್ವ, ನೂರು ಸಮುದ್ರ, ನೂರು ಮಹೌಘ ಮತ್ತು ಸಮುದ್ರ ಸದೃಶರಾದ ನೂರುಕೋಟಿ ಮಹೌಘಸಂಖ್ಯಾತರಾದ ಸೈನಿಕರಿಂದ ವೀರನಾದ ವಿಭೀಷಣನೂ ಮತ್ತು ಸಚಿವರಿಂದ ಕೂಡಿರುವ ಮಹಾಬಲಪರಾಕ್ರಮನಾದ ಸುಗ್ರೀವನೂ ಸುತ್ತುವರಿಯಲ್ಪಟ್ಟವರಾಗಿ ನಿನ್ನನ್ನು ಯುದ್ಧಕ್ಕೆ ಆಹ್ವಾನಿಸುತ್ತಾ ಮುಂದು-ಮುಂದಕ್ಕೆ ಬರುತ್ತಿದ್ದಾರೆ.

ಮಹಾರಾಜ! ಪ್ರಜ್ವಲಿಸುವ ಮಹಾಗ್ರಹದಂತೆ ಪ್ರಕಾಶಮಾನವಾಗಿ ಕಾಣುತ್ತಿರುವ ಮಹಾಸೈನ್ಯವನ್ನು ನೋಡಿ ಶತ್ರುಗಳಿಂದ ನಮಗೆ ಪರಾಜಯ

ವಾಗದಂತೆಯೂ–ಅಂತಿಮವಿಜಯವು ನಮಗೇ ಲಭಿಸುವಂತೆಯೂ ಯಾವುದಾದರೂ ಒಂದು ಶ್ರೇಷ್ಠವಾದ ಉಪಾಯವನ್ನು ಯೋಚನೆಮಾಡು."

೨೮ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೨೯ನೆಯ ಸರ್ಗ

ರಾವಣನು ಶುಕ-ಸಾರಣರನ್ನು ಮೂದಲಿಸಿ ಹೊರಕ್ಕಟ್ಟಿದುದು : ರಾವಣನಿಂದ ಕಳುಹಿಸಲ್ಪಟ್ಟಿದ್ದ ಇತರ ಗುಪ್ತಚಾರರೂ ಶ್ರೀರಾಮನ ಕೃಪೆಯಿಂದ ವಾನರರ ಉಪಟಳವನ್ನು ತಪ್ಪಿಸಿಕೊಂಡು ಲಂಕೆಗೆ ಹಿಂದಿರುಗಿದುದು

ಶುಕೇನ ತು ಸಮಾಖ್ಯಾತಾಂಸ್ತಾನ್ದೃಷ್ಟ್ವಾ ಹರಿಯೂಥಪಾನ್ ।
ಲಕ್ಷ್ಮಣಂ ಚ ಮಹಾವೀರ್ಯಂ ಭುಜಂ ರಾಮಸ್ಯ ದಕ್ಷಿಣಮ್ ॥೧॥

ಶುಕನು ಹೇಳುತ್ತಿದ್ದಂತೆಯೇ ರಾವಣನು ಸಮಸ್ತವಾನರದಂಡನಾಯಕರನ್ನೂ ನೋಡಿದನು. ಶ್ರೀರಾಮನ ಬಲಭುಜದಂತಿದ್ದ ಮಹಾಪರಾಕ್ರಮಿಯಾದ ಲಕ್ಷ್ಮಣನನ್ನೂ ನೋಡಿದನು.

ರಾಮನ ಸಮೀಪದಲ್ಲಿಯೇ ಇದ್ದ ತನ್ನ ತಮ್ಮನಾದ ವಿಭೀಷಣನನ್ನೂ, ಭಯಂಕರಪರಾಕ್ರಮಿಯಾದ ಸರ್ವವಾನರರಿಗೂ ರಾಜನಾದ ಸುಗ್ರೀವನನ್ನೂ, ಇಂದ್ರನ ಮಗನಾದ ವಾಲಿಯ ಪುತ್ರನಾದ ಮಹಾಬಲಿಷ್ಠನಾದ ಅಂಗದನನ್ನೂ, ಮಹಾಪರಾಕ್ರಮಿಯಾದ ಹನುಮಂತನನ್ನೂ, ಜಯಿಸಲು ದುಸ್ಸಾಧ್ಯನಾದ ಜಾಂಬವಂತನನ್ನೂ, ಸುಷೇಣ-ಕುಮುದರನ್ನೂ, ಪ್ಲವಗಶ್ರೇಷ್ಠರಾದ ನೀಲ-ನಲರನ್ನೂ, ಗಜ-ಗವಾಕ್ಷ-ಶರಭರನ್ನೂ ಮತ್ತು ಮೈಂದ-ದ್ವಿವಿದರನ್ನೂ ರಾವಣನು ಉಪ್ಪರಿಗೆಯ ಮೇಲೆ ನಿಂತು ನೋಡಿದನು.

ವಾನರಮಹಾಸೈನ್ಯವನ್ನೂ, ಶ್ರೇಷ್ಠರಾದ ವಾನರನಾಯಕರನ್ನೂ, ರಾಮ-ಲಕ್ಷ್ಮಣರನ್ನೂ ನೋಡಿದೊಡನೆಯೇ ರಾವಣನ ಮನಸ್ಸು ಸ್ವಲ್ಪ ಉದ್ವಿಗ್ನಗೊಂಡಿತು. ಹಾಗೆಯೇ ಕೋಪವೂ ಉಕ್ಕಿಬಂದಿತು. ಶುಕ-ಸಾರಣರು ಹೇಳಿದುದೆಲ್ಲವನ್ನೂ ಸಂಪೂರ್ಣವಾಗಿ ಕೇಳಿದನಂತರ ಅವನು ಅವರನ್ನು ಗದರಿಸುತ್ತಾ ವಿನೀತರಾಗಿ ತಲೆತಗ್ಗಿಸಿಕೊಂಡು ನಿಂತಿದ್ದ ಇಬ್ಬರಿಗೂ ರೋಷದಿಂದ ಹುಟ್ಟಿದ ಗದ್ಗದಿತವಾದ ಸ್ವರದಿಂದ ಹೇಳಿದನು :

ನ ತಾವತ್ಸದೃಶಂ ನಾಮ ಸಚಿವೈರುಪಜೀವಿಭಿಃ ।
ವಿಪ್ರಿಯಂ ನೃಪತೇರ್ವಕ್ತುಂ ನಿಗ್ರಹಪ್ರಗ್ರಹೇ ಪ್ರಭೋಃ ॥೭॥

"ರಾಜನಾದವನು ನಿಗ್ರಹಿಸಲೂ ಸಮರ್ಥನಾಗಿರುವನು ; ಅನುಗ್ರಹಿಸಲೂ ಸಮರ್ಥನಾಗಿರುವನು. ಅವನ ಉಪ್ಪನ್ನೇ ತಿಂದು ಜೀವಿಸುವ ಮಂತ್ರಿಗಳು ರಾಜನಿಗೆ ಅಪ್ರಿಯವಾಗುವಂತಹ ಮಾತನ್ನು ಎಂದಿಗೂ ಹೇಳಬಾರದು. ಉಪಜೀವಿಗಳಿಗೆ ಹಾಗೆ ಮಾಡುವುದು ಉಚಿತವೆನಿಸುವುದಿಲ್ಲ.

ರಿಪೂಣಾಂ ಪ್ರತಿಕೂಲಾನಾಂ ಯುದ್ಧಾರ್ಥಮಭಿವರ್ತತಾಮ್ ।
ಉಭಾಭ್ಯಾಂ ಸದೃಶಂ ನಾಮ ವಕ್ತುಮಪ್ರಸ್ತವೇ ಸ್ತವಮ್ ॥೮॥

ನಮಗೆ ಪ್ರತಿಕೂಲರಾದ ಶತ್ರುಗಳು ಯುದ್ಧಮಾಡುವ ಸಲುವಾಗಿಯೇ ಇಲ್ಲಿಗೆ ಆಗಮಿಸಿದ್ದಾರೆ. ಯಾವುದೇ ಪ್ರಸ್ತಾಪವಿಲ್ಲದೇ ನಿಮ್ಮಿಬ್ಬರಿಗೂ ನನ್ನ ಮುಂದೆ ಅವರನ್ನು ಸ್ತೋತ್ರಮಾಡುವ ಅಗತ್ಯವೇನಿತ್ತು? ಇದು ನಿಮಗೆ ಯೋಗ್ಯವೇ?

ಆಚಾರ್ಯಾ ಗುರವೋ ವೃದ್ಧಾ ವೃಥಾ ವಾಂ ಪರ್ಯುಪಾಸಿತಾಃ ।
ಸಾರಂ ಯದ್ರಾಜಶಾಸ್ತ್ರಾಣಾಮುಪಜೀವ್ಯಂ ನ ಗೃಹ್ಯತೇ ॥೯॥

ನೀವಿಬ್ಬರೂ ಆಚಾರ್ಯರಿಗೂ, ಗುರುಗಳಿಗೂ ಮತ್ತು ವೃದ್ಧರಿಗೂ ಮಾಡಿದ ಸೇವೆಯು ವ್ಯರ್ಥವೇ ಸರಿ. ಏಕೆಂದರೆ : ನೀವು ರಾಜನೀತಿಯ ಸಾರವನ್ನು ಅವರಿಂದ ಗ್ರಹಿಸಿಲ್ಲ.

ಗೃಹೀತೋ ವಾ ನ ವಿಜ್ಞಾತೋ ಭಾರೋಽಜ್ಞಾನಸ್ಯ ವೋಹ್ಯತೇ ।
ಈದೃಶೈಃ ಸಚಿವೈರ್ಯುಕ್ತೋ ಮೂರ್ಖೈರ್ದಿಷ್ಟ್ಯಾಧರಾಮ್ಯಹಮ್ ॥೧೦॥

ಒಂದು ವೇಳೆ ನೀವು ರಾಜನೀತಿಯ ಸಾರವನ್ನು ಆಚಾರ್ಯ-ಗುರು-ವೃದ್ಧರ ಸೇವೆಯಿಂದ ಗ್ರಹಿಸಿದ್ದರೂ ಈ ಸಮಯದಲ್ಲಿ ನೀವು ಅಜ್ಞಾನಿಗಳೇ ಆಗಿರುವಿರಿ. ರಾಜನೀತಿಯ ಪರಿಜ್ಞಾನವು ನಿಮಗೆ ಸ್ವಲ್ಪವಾದರೂ ಇರುವುದಿಲ್ಲ. ಅಜ್ಞಾನದ ಭಾರವನ್ನೇ ನೀವೀಗ ಹೊತ್ತಿರುವಿರಿ. ಇಂತಹ ಮೂರ್ಖರಾದ ಮಂತ್ರಿಗಳಿಂದ ಯುಕ್ತನಾಗಿದ್ದರೂ ನಾನು ರಾಜ್ಯವನ್ನು ಸುರಕ್ಷಿತವಾಗಿ ಆಳುತ್ತಿರುವುದು ಕೇವಲ ಅದೃಷ್ಟವೇ ಸರಿ.

ಕಿಂ ನು ಮೃತ್ಯೋರ್ಭಯಂ ನಾಸ್ತಿ ವಕ್ತುಂ ಮಾಂ ಪರುಷಂ ವಚಃ ।
ಯಸ್ಯ ಮೇ ಶಾಸತೋ ಜಿಹ್ವಾ ಪ್ರಯಚ್ಛತಿ ಶುಭಾಶುಭಮ್ ॥೧೧॥

ನಾನು ಈ ರಾಜ್ಯಕ್ಕೆ ಶಾಸಕನಾಗಿರುವೆನು. ನನ್ನ ನಾಲಿಗೆಯೇ ನಿಮಗೆ ಶುಭಾಶುಭಗಳನ್ನು ನೀಡಲು ಸಮರ್ಥವಾಗಿದೆ. ಆಜ್ಞಾಮಾತ್ರದಿಂದ ನಿಮ್ಮನ್ನು ಅನುಗ್ರಹಿಸಲು ಅಥವಾ ನಿಗ್ರಹಿಸಲು ಬಲ್ಲೆನು. ಹಾಗಿದ್ದರೂ ನೀವು ನನ್ನ ಮುಂದೆ ಅತ್ಯಂತಕಠೋರವಾದ ಮತ್ತು ನನ್ನಂತಹ ವೀರನಿಂದ ಸಹಿಸಲು ಅಶಕ್ಯವಾದ ಮಾತುಗಳನ್ನಾಡಿರುವಿರಿ. ನಿಮಗೆ ಮೃತ್ಯುವಿನ ಭಯವಿಲ್ಲವೇ?

ಅಪ್ಯೇವ ದಹನಂ ಸ್ಪೃಷ್ಟ್ವಾ ವನೇ ತಿಷ್ಠನ್ತಿ ಪಾದಪಾಃ ।
ರಾಜದಣ್ಡಪರಾಮೃಷ್ಟಾಸ್ತಿಷ್ಠನ್ತೇ ನಾಪರಾಧಿನಃ ॥೧೨॥

ಅರಣ್ಯದಲ್ಲಿ ಕಾಡುಗಿಚ್ಚಿಗೆ ಸಿಕ್ಕಿಯೂ ಮರಗಳು ಉಳಿಯಬಹುದು ; ಆದರೆ ರಾಜದಂಡಕ್ಕೆ ಒಳಪಟ್ಟ ಅಪರಾಧಿಗಳು ಖಂಡಿತವಾಗಿಯೂ ಉಳಿಯಲಾರರು. ಅವರ ಪತನವು ಖಂಡಿತ.

ನೀವು ಮಾಡಿರುವ ಹಿಂದಿನ ಉಪಕಾರದ ಸ್ಮರಣೆಯಿಂದ ನನ್ನ ಕೋಪವು ಸ್ವಲ್ಪಮಟ್ಟಿಗೆ ಶಾಂತವಾಗಿದೆ. ಹಾಗಿಲ್ಲದಿದ್ದಿದ್ದರೆ ಶತ್ರುಪಕ್ಷವನ್ನು ಪ್ರಶಂಸೆ ಮಾಡುತ್ತಿರುವ ನಿಮ್ಮಿಬ್ಬರನ್ನೂ ಈ ವೇಳೆಗಾಗಲೇ ಸಂಹರಿಸಿಬಿಡುತ್ತಿದ್ದೆನು.

ಕೃತಘ್ನರೇ! ಈಗಲೇ ನೀವು ನನ್ನ ಸಮೀಪದಿಂದ ಹೊರಟುಹೋಗಿರಿ. ನಾಶವಾಗಿಹೋಗಿರಿ. ನೀವು ಹಿಂದೆ ಮಾಡಿದ ಉಪಕಾರವನ್ನು ನಾನು ಸ್ಮರಿಸುತ್ತಿದ್ದೇನೆ. ಈ ಕಾರಣದಿಂದ ನಾನು ನಿಮ್ಮನ್ನು ಸಂಹರಿಸಲು ಬಯಸುವುದಿಲ್ಲ. ನನ್ನ ಸ್ನೇಹದಿಂದ ವಿಮುಖರಾದ ನಿಮ್ಮನ್ನು ಸತ್ತುಹೋದಿರೆಂದೇ ನಾನು ಭಾವಿಸುತ್ತೇನೆ. ನನ್ನ ಭಾಗಕ್ಕೆ ನೀವಿಬ್ಬರೂ ಮೃತಪ್ರಾಯರೇ ಸರಿ.”

ರಾವಣನು ಹೀಗೆ ಹೇಳಲು ಶುಕ-ಸಾರಣರು ಬಹಳ ಲಜ್ಜಿತರಾದರು. ಆದರೂ–‘ಜಯತು ಜಯತು ರಾವಣೇಶ್ವರಃ!’–ಎಂದು ರಾವಣನಿಗೆ ಜಯಕಾರವನ್ನು ಹೇಳಿ ಅವನನ್ನು ಅಭಿನಂದಿಸಿ ಅಲ್ಲಿಂದ ನಿರ್ಗಮಿಸಿದರು.

ಬಳಿಕ ರಾವಣನು ಪಕ್ಕದಲ್ಲಿಯೇ ಇದ್ದ ಮಹೋದರನಿಗೆ ನೀತಿವಿಶಾರದರಾದ ಗೂಢಚಾರರನ್ನು ಕರೆತರಲು ಆಜ್ಞಾಪಿಸಿದನು. ಮಹೋದರನು

ಕೂಡಲೇ ಗೂಢಚಾರರನ್ನು ಕರೆಸಿದನು. ರಾಜನ ಆಜ್ಞೆಯಂತೆ ಅನೇಕ ಗೂಢಚಾರರು ತ್ವರೆಯಿಂದ ರಾವಣನ ಬಳಿಗೆ ಬಂದು 'ಜಯತು ಜಯತು ರಾಕ್ಷಸೇಶ್ವರಃ!' 'ರಾಕ್ಷಸೇಶ್ವರನಿಗೆ ಜಯವಾಗಲಿ'–ಎಂದು ಜಯಾಶಿಷಗಳನ್ನು ಹೇಳುತ್ತಾ ಕೈಜೋಡಿಸಿಕೊಂಡು ನಿಂತರು. ತನ್ನ ವಿಶ್ವಾಸಕ್ಕೆ ಪಾತ್ರರಾಗಿದ್ದ, ಶೂರವೀರರಾದ, ಧೀರರಾದ, ನಿರ್ಭಯರಾಗಿದ್ದ ಗೂಢಚಾರರಿಗೆ ರಾವಣನು ಹೇಳಿದನು :

"ಗುಪ್ತಚರರೇ! ನೀವೀಗಲೇ ಹೋಗಿ ರಾಮನು ನಮ್ಮೊಡನೆ ಯುದ್ಧ ಮಾಡಲು ಎಂತೆಂತಹ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವನೆಂಬುದನ್ನು ತಿಳಿದುಬರಬೇಕು. ಅವನಿಗೆ ಅಂತರಂಗದ ಮಂತ್ರಿಗಳು ಯಾರಿದ್ದಾರೆ? ಪ್ರೇಮಪೂರ್ವಕವಾಗಿ ಯಾರು ಅವನೊಡನೆ ಸೇರಿದ್ದಾರೆ? ಅವನು ಹೇಗೆ ಮಲಗುತ್ತಾನೆ? ಯಾವಾಗ ಮಲಗುತ್ತಾನೆ? ಯಾವಾಗ ಎಚ್ಚರವಾಗಿರುತ್ತಾನೆ? ಈ ಸಮಯದಲ್ಲಿ ಅವನೇನು ಮಾಡುತ್ತಿದ್ದಾನೆ? ಈ ಎಲ್ಲ ವಿಷಯಗಳನ್ನೂ ನೀವು ಆಮೂಲಾಗ್ರವಾಗಿ ತಿಳಿದುಬರಬೇಕು.

ಚಾರೇಣ ವಿದಿತಃ ಶತ್ರುಃ ಪಣ್ಡಿತೈರ್ವಸುಧಾಧಿಪೈಃ ।
ಯುದ್ಧೇ ಸ್ವಲ್ಪೇನ ಯತ್ನೇನ ಸಮಾಸಾದ್ಯ ನಿರಸ್ಯತೇ ॥೨೧॥

ಬುದ್ಧಿವಂತನಾದ ಚಾರನ ಮೂಲಕವಾಗಿ ಶತ್ರುವಿನ ಗತಿ-ವಿಧಾನಗಳು ತಿಳಿದುಬಂದರೆ–ಪಂಡಿತರಾದ ರಾಜರು ಅಲ್ಪಪ್ರಯತ್ನದಿಂದಲೇ ಶತ್ರುವನ್ನು ಎದುರಿಸಿ ಯುದ್ಧದಲ್ಲಿ ಪರಾಜಯಗೊಳಿಸುತ್ತಾರೆ."

ರಾವಣನು ಹೀಗೆ ಹೇಳಲು ಹರ್ಷೋತ್ಸಾಹಿತರಾದ ಗುಪ್ತಚಾರರು ಹಾಗೆಯೇ ಆಗಲೆಂದು ಹೇಳಿ ಶಾರ್ದೂಲನೆಂಬ ರಾಕ್ಷಸನನ್ನು ಮುಂದೆ ಮಾಡಿಕೊಂಡು ರಾಕ್ಷಸಶಿರೋಮಣಿಯಾದ ಮಹಾಕಾಯನಾದ ರಾವಣನಿಗೆ ಪ್ರದಕ್ಷಿಣೆಮಾಡಿ ರಾಮ-ಲಕ್ಷ್ಮಣರಿದ್ದ ಸ್ಥಳಕ್ಕೆ ಧಾವಿಸಿದರು. ಸುವೇಲಪರ್ವತದ ಬಳಿಗೆ ಹೋಗಿ ಆ ಗುಪ್ತಚಾರರು ಯಾರಿಗೂ ತಿಳಿಯದ ರೀತಿಯಲ್ಲಿ ಅವಿತುಕೊಂಡಿದ್ದು ಶ್ರೀರಾಮ-ಲಕ್ಷ್ಮಣ-ವಿಭೀಷಣರನ್ನು ನೋಡಿದರು. ವಾನರರ ಆ ಸೇನಾಸಮುದ್ರವನ್ನು ನೋಡಿ ಶಾರ್ದೂಲಪ್ರಮುಖರಾದ ಗೂಢಚಾರರು ಭಯದಿಂದ ವ್ಯಾಕುಲಗೊಂಡರು. ಅಷ್ಟರಲ್ಲಿಯೇ ಧರ್ಮಾತ್ಮನಾದ ವಿಭೀಷಣನು

ಅದನ್ನು ಗಮನಿಸಿ ವಾನರರ ಅಪೇಕ್ಷೆಯಂತೆ ಅವರೆಲ್ಲರನ್ನೂ ಬಂಧಿಸಿದನು. ಅವರ ನಾಯಕನಾದ ಶಾರ್ದೂಲನನ್ನು ಮಹಾಪಾಪಿಷ್ಠನೆಂದು ನಿರ್ಧರಿಸಿ ಪ್ರತ್ಯೇಕವಾಗಿ ಸೆರೆಹಿಡಿದನು. ವಾನರರೆಲ್ಲರೂ ಸೇರಿ ನಾಲ್ಕು ಕಡೆಗಳಿಂದಲೂ ಶಾರ್ದೂಲನನ್ನು ಹಿಂಸಿಸಲು ಪ್ರಾರಂಭಿಸಿದರು. ದಯಾಮಯನಾದ ಶ್ರೀರಾಮನು ಇತರ ರಾಕ್ಷಸರನ್ನು ಬಿಟ್ಟಂತೆಯೇ ಶಾರ್ದೂಲನನ್ನೂ ಬಿಡುಗಡೆ ಮಾಡಲು ಆಜ್ಞಾಪಿಸಿದನು. ಆ ವೇಳೆಗಾಗಲೇ ಶೀಘ್ರಪರಾಕ್ರಮಿಗಳಾದ, ಬಲವಿಕ್ರಮಸಂಪನ್ನರಾಗಿದ್ದ ವಾನರರು ರಾವಣನ ಅನುಯಾಯಿಗಳನ್ನು ಚೆನ್ನಾಗಿ ಥಳಿಸಿದ್ದರು. ಶಾರ್ದೂಲಪ್ರಮುಖರಾದ ರಾಕ್ಷಸರೆಲ್ಲರೂ ಏದುಸಿರುಬಿಡುತ್ತಾ ಪ್ರಜ್ಞಾಹೀನಾವಸ್ಥೆಯಲ್ಲಿಯೇ ಲಂಕೆಗೆ ಹಿಂದಿರುಗಿದರು. ರಾವಣನ ಸೇವೆಯಲ್ಲಿಯೇ ಸದಾ ಉಪಸ್ಥಿತರಾಗಿರುತ್ತಾ ಚಾರರ ವೇಷ ದಲ್ಲಿಯೇ ಯಾವಾಗಲೂ ಹೊರಗೆ ಸಂಚರಿಸುತ್ತಿದ್ದ, ಮಹಾಬಲಿಷ್ಠರಾಗಿದ್ದ ಆ ರಾಕ್ಷಸರು ಶ್ರೀರಾಮನು ಸುವೇಲಪರ್ವತದ ಸಮೀಪದಲ್ಲಿರುವನೆಂಬುದನ್ನೂ ಅವನ ಸೈನ್ಯವೆಷ್ಟಿರುವುದೆಂಬುದನ್ನೂ ರಾವಣನಿಗೆ ತಿಳಿಸಿದರು.

೨೯ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೩೦ನೆಯ ಸರ್ಗ

ಗೂಢಚಾರರು ರಾವಣನಿಗೆ ವಾನರಸೇನೆಯ ಸ್ವರೂಪವನ್ನು ತಿಳಿಸಿ ಮುಖ್ಯರಾದವರ ಪರಿಚಯಮಾಡಿಕೊಟ್ಟುದು

ತತಸ್ತಮಕ್ಷೋಭ್ಯಬಲಂ ಲಙ್ಕಾಧಿಪತಯೇ ಚರಾಃ ।
ಸುವೇಲೇ ರಾಘವಂ ಶೈಲೇ ನಿವಿಷ್ಟಂ ಪ್ರತ್ಯವೇದಯನ್ ॥೧॥

ರಾವಣನಿಂದ ಕಳುಹಿಸಲ್ಪಟ್ಟಿದ್ದ ಶಾರ್ದೂಲನೇ ಮೊದಲಾದ ಗೂಢ ಚಾರರು ಹಿಂದಿರುಗಿಬಂದು ಶ್ರೀರಾಮನು ಕದಲಿಸಲು ಅಶಕ್ಯವಾದ ವಾನರ ಸೈನ್ಯದೊಡನೆ ಸುವೇಲಪರ್ವತದ ಸಮೀಪದಲ್ಲಿರುವುದನ್ನು ತಿಳಿಯ ಪಡಿಸಿದರು.

ರಾವಣನು ಗೂಢಚಾರರಿಂದ ಮಹಾಬಲಿಷ್ಠನಾದ ರಾಮನು ಬಂದಿರುವನೆಂಬ ವಾರ್ತೆಯನ್ನು ಕೇಳಿ ಸ್ವಲ್ಪಮಟ್ಟಿಗೆ ಉದ್ವಿಗ್ನನಾಗಿ ಶಾರ್ದೂಲನಿಗೆ ಹೇಳಿದನು :

“ನಿಶಾಚರನೇ! ನಿನ್ನ ಶರೀರಕಾಂತಿಯು ಹಿಂದಿದ್ದಂತಿಲ್ಲ. ಈಗ ನೀನು ಬಹಳ ದೀನನಾಗಿರುವಂತೆ ಕಾಣುತ್ತಿರುವೆ. ಕ್ರುದ್ಧರಾದ ಶತ್ರುಗಳಿಗೆ ಬಂದಿಯಾಗಲಿಲ್ಲ ತಾನೇ?”

ರಾವಣನು ಹೀಗೆ ಪ್ರಶ್ನಿಸಲು ಭಯದಿಂದ ಗಾಬರಿಗೊಂಡಿದ್ದ ಶಾರ್ದೂಲನು ರಾವಣನಿಗೆ ಮೆದುದನಿಯಲ್ಲಿ ಹೇಳಿದನು :

“ರಾವಣೇಶ್ವರ! ಆ ವಾನರಶ್ರೇಷ್ಠರ ಗತಿ-ವಿಧಾನಗಳನ್ನು ತಿಳಿಯಲು ಗೂಢಚಾರರಾದ ನಮಗೆ ಸಾಧ್ಯವಾಗಲಿಲ್ಲ. ಅವರೆಲ್ಲರೂ ಮಹಾಪರಾಕ್ರಮಿಗಳು ಮತ್ತು ಮಹಾಬಲಿಷ್ಠರು. ಮಿಗಿಲಾಗಿ ರಾಘವನಿಂದ ರಕ್ಷಿಸಲ್ಪಡುತ್ತಿರುವವರು. ಅವರೊಡನೆ ಮಾತನಾಡಲು ಕೂಡ ಸಾಧ್ಯವಿಲ್ಲ. ಹೀಗಿರುವಾಗ ‘ನೀವು ಯಾರು? ನಿಮ್ಮ ವಿಚಾರವೇನು?”–ಮುಂತಾದ ಪ್ರಶ್ನೆಗಳನ್ನು ಕೇಳಲು ಹೇಗೆ ತಾನೇ ಸಾಧ್ಯ? ಸೈನ್ಯದ ಶಿಬಿರದೊಳಕ್ಕೆ ಹೋಗುವ ಮಾರ್ಗಗಳನ್ನು ಪರ್ವತಸದೃಶರಾದ ವಾನರರು ಎಲ್ಲ ಕಡೆಗಳಲ್ಲಿಯೂ ಕಾಯುತ್ತಿದ್ದಾರೆ. ಆದುದರಿಂದ ಶಿಬಿರದೊಳಕ್ಕೆ ಪ್ರವೇಶಿಸುವುದೂ ದುಃಸಾಧ್ಯವೇ ಸರಿ. ನಾನಾದರೋ ಸೇನೆಯೊಳಗೆ ಪ್ರವೇಶಿಸುತ್ತಲೇ ಅಲ್ಲಿಯ ಗತಿ-ವಿಧಾನಗಳನ್ನು ವಿಚಾರಿಸಲು ಪ್ರಾರಂಭಿಸಿದೆನು. ಅಷ್ಟರಲ್ಲಿಯೇ ವಿಭೀಷಣನ ಕಡೆಯ ರಾಕ್ಷಸರು ನನ್ನನ್ನು ಗುರುತಿಸಿ ಬಲಪೂರ್ವಕವಾಗಿ ಬಂಧಿಸಿ ಬಹಳವಾಗಿ ವಿಚಾರಿಸತೊಡಗಿದರು.

ಆ ಕಪಿಸೈನಿಕರ ಮಧ್ಯದಲ್ಲಿ ಅಸಹನೆಯಿಂದ ಕೂಡಿ ಅತ್ಯಂತಕ್ರುದ್ಧರಾಗಿದ್ದ ಹಲವಾರು ವಾನರರು ಮಂಡಿಗಳಿಂದಲೂ ಮುಷ್ಟಿಗಳಿಂದಲೂ ನನ್ನನ್ನು ಗುದ್ದಿದರು. ಹಲ್ಲುಗಳಿಂದ ಕಚ್ಚಿದರು. ಅಂಗೈಗಳಿಂದ ಪ್ರಹರಿಸಿದರು. ಸೈನಿಕರ ಮಧ್ಯದಲ್ಲಿ ನನ್ನನ್ನು ಹಿಡಿದು ಅಪರಾಧಿ, ಗೂಢಚಾರ–ಮುಂತಾಗಿ ಘೋಷಿಸುತ್ತಾ ಎಲ್ಲ ಕಡೆಗಳಲ್ಲಿಯೂ ಸುತ್ತಿಸಿದರು. ಹೀಗೆ ಎಲ್ಲೆಡೆಗಳಲ್ಲಿಯೂ ಸುತ್ತಾಡಿಸಿ ರಾಮನ ಬಳಿಗೆ ನನ್ನನ್ನು ಸೆಳೆದೊಯ್ದರು. ಆ ವೇಳೆಗೆ ವಾನರರ ಸತತವಾದ ಪ್ರಹಾರದಿಂದ ನನ್ನ ಶರೀರದಲ್ಲೆಲ್ಲಾ ರಕ್ತವು ಸ್ರವಿಸುತ್ತಿದ್ದಿತು. ನನ್ನ ಎಲ್ಲ ಅಂಗಗಳೂ ಬಲಹೀನವಾಗಿದ್ದುವು. ಇಂದ್ರಿಯಗಳೂ ಶಿಥಿಲವಾಗಿದ್ದುವು. ಆ ಸಮಯದಲ್ಲಿ ನಾನು ಅತ್ಯಂತವ್ಯಾಕುಲನಾಗಿದ್ದೆನು. ರಾಮನ ಮುಂದೆ ಹೋದಾಗಲೂ ವಾನರರು ನನ್ನನ್ನು ಪ್ರಹರಿಸುತ್ತಲೇ ಇದ್ದರು.

ನಾನು ಯಾತನೆಯನ್ನು ಸಹಿಸಲಾರದೇ ಪ್ರಾಣರಕ್ಷಣೆಗಾಗಿ ಕೈಮುಗಿದುಕೊಂಡು ಪ್ರಾರ್ಥಿಸುತ್ತಿದ್ದೆನು. ಆ ಸಮಯದಲ್ಲಿ ರಾಘವನು 'ಬೇಡಿ! ಬೇಡಿ! ಪ್ರಹರಿಸಬೇಡಿರಿ!'–ಎಂದೆನ್ನುತ್ತಾ ನನ್ನನ್ನು ರಕ್ಷಿಸಿದನು.

ರಾಮನು ಪರ್ವತದ ಬಂಡೆಗಳಿಂದಲೇ ಸಮುದ್ರವನ್ನು ತುಂಬಿ ಸೇತುವೆಯನ್ನು ನಿರ್ಮಿಸಿ ಸೈನ್ಯಸಮೇತನಾಗಿ ಇಲ್ಲಿಗೆ ಬಂದು ಲಂಕಾಪಟ್ಟಣದ ಮಹಾದ್ವಾರದಲ್ಲಿ ಧನುಷ್ಪಾಣಿಯಾಗಿ ನಿಂತಿದ್ದಾನೆ. ಮಹಾತೇಜಸ್ವಿಯಾದ ರಾಘವನು ಗರುಡವ್ಯೂಹವನ್ನು ರಚಿಸಿ ವಾನರಸೈನಿಕರಿಂದ ಪರಿವೃತನಾಗಿ ನಿಂತಿದ್ದಾನೆ. ನನ್ನನ್ನು ಬಿಡುಗಡೆಮಾಡಿದನಂತರ ಅವನು ಲಂಕೆಯನ್ನು ಆಕ್ರಮಿಸಲು ತೊಡಗಿದ್ದಾನೆ. ರಾವಣೇಶ್ವರ! ರಾಮನು ಸೈನ್ಯಸಮೇತನಾಗಿ ಕೋಟೆಯೊಳಕ್ಕೆ ನುಗ್ಗಿಬರುವ ಮೊದಲೇ ಎರಡರಲ್ಲಿ ಯಾವುದಾದರೂ ಒಂದು ಕಾರ್ಯವನ್ನು ಮಾಡು.

ಸೀತಾಂ ವಾಸ್ಮೈ ಪ್ರಯಚ್ಛಾಶು
ಸುಯುದ್ಧಂ ವಾ ಪ್ರದೀಯತಾಮ್ ॥೧೩॥

ಸೀತೆಯನ್ನಾದರೂ ಅವನಿಗೆ ಶೀಘ್ರವಾಗಿ ಒಪ್ಪಿಸಿಕೊಡು. ಅಥವಾ ಯುದ್ಧವನ್ನಾದರೂ ಕೊಡು."

ರಾಕ್ಷಸೇಶ್ವರನು, ಶಾರ್ದೂಲನು ಹೇಳಿದ ಮಾತನ್ನು ಕೇಳಿ ಮನಸ್ಸಿನಲ್ಲಿಯೇ ಸಮಾಲೋಚಿಸಿ ಅತ್ಯಂತಮಹತ್ತ್ವಪೂರ್ಣವಾದ ಮಾತನ್ನು ಚಾರನಿಗೆ ಹೇಳಿದನು :

"ದೇವ-ದಾನವ-ಗಂಧರ್ವರೆಲ್ಲರೂ ಒಟ್ಟಾಗಿ ಸೇರಿ ನನ್ನ ಮೇಲೆ ಯುದ್ಧಕ್ಕೆ ಬಂದರೂ–ಸಮಸ್ತಲೋಕಗಳೂ ನನ್ನನ್ನು ಭಯಪಡಿಸಿದರೂ–ನಾನು ಸೀತೆಯನ್ನು ಮಾತ್ರ ರಾಮನಿಗೆ ಒಪ್ಪಿಸುವುದಿಲ್ಲ."

ಹೀಗೆ ತನ್ನ ಅಂತಿಮನಿರ್ಧಾರವನ್ನು ಪುನಃ ಸ್ಪಷ್ಟಪಡಿಸಿದನಂತರ ರಾವಣನು ಶಾರ್ದೂಲನನ್ನು ಪ್ರಶ್ನಿಸಿದನು :

"ಶಾರ್ದೂಲ! ವಾನರರು ನಿನ್ನನ್ನು ಎಲ್ಲ ಕಡೆಗಳಲ್ಲಿಯೂ ಸುತ್ತಾಡಿಸಿದರೆಂದು ಹೇಳಿದೆಯಲ್ಲವೇ? ಆ ಸಮಯದಲ್ಲಿ ನೀನು ಸಾಮಾನ್ಯವಾಗಿ ಎಲ್ಲ

ವಾನರನಾಯಕರನ್ನೂ ನೋಡಿರಬಹುದು. ನಿನ್ನ ಅಭಿಪ್ರಾಯದಂತೆ ಆ ವಾನರಸೈನ್ಯದಲ್ಲಿ ಅತ್ಯಂತಶೂರರಾದ ವಾನರರು ಯಾರು ಯಾರಿದ್ದಾರೆ? ಎದುರಿಸಲು ಅಸಾಧ್ಯರಾದ ವಾನರರು ಹೇಗಿದ್ದಾರೆ? ಅವರ ಪ್ರಭಾವವೆಂತಹುದು? ಅಂತಹ ವೀರರು ಯಾರ ಮಕ್ಕಳು ಅಥವಾ ಯಾರ ಮೊಮ್ಮಕ್ಕಳು? ಈ ಎಲ್ಲ ವಿಷಯಗಳನ್ನೂ ನನಗೆ ಯಥಾವತ್ತಾಗಿ ಹೇಳು. ಆ ವಾನರರ ಬಲಾಬಲಗಳನ್ನು ತಿಳಿದನಂತರವೇ ನಾನು ನನ್ನ ಕರ್ತವ್ಯವೇನೆಂಬುದನ್ನು ನಿಶ್ಚಯಿಸುತ್ತೇನೆ. ಶತ್ರುಗಳೊಡನೆ ಯುದ್ಧಮಾಡಲು ಇಚ್ಛಿಸುವವನು ಶತ್ರುಪಕ್ಷದ ಸಂಖ್ಯಾಬಲವನ್ನು ಅವಶ್ಯವಾಗಿ ಅರಿತಿರಬೇಕು."

ರಾವಣನು ಹೀಗೆ ಹೇಳಲು ಶ್ರೇಷ್ಠಚಾರನಾದ ಶಾರ್ದೂಲನು ರಾವಣನ ಸನ್ನಿಧಿಯಲ್ಲಿ ಶತ್ರುಪಕ್ಷದ ನಾಯಕರ ಪರಿಚಯಮಾಡಿಕೊಡಲು ಉಪಕ್ರಮಿಸಿದನು :

"ರಾವಣೇಶ್ವರ! ಋಕ್ಷರಜಸನ ಮಗನಾದ ಸುಗ್ರೀವನು ಯುದ್ಧದಲ್ಲಿ ಸುಲಭವಾಗಿ ಜಯಿಸಲ್ಪಡತಕ್ಕವನಲ್ಲ. ಗದ್ಗದನ ಮಗನಾದ ಜಾಂಬವಂತ ಎಂಬ ಹೆಸರಿನ ವೀರನಿದ್ದಾನೆ.* ಅವನು ಕೂಡ ಸುಗ್ರೀವನಂತೆಯೇ ದುರ್ಜಯನು. ಗದ್ಗದನಿಗೆ ಧೂಮ್ರನೆಂಬ ಮತ್ತೊಬ್ಬ ಮಗನೂ ಇದ್ದಾನೆ. ಅವನೂ ಮಹಾಪರಾಕ್ರಮಿ. ಕೇಸರಿಯು ಇಂದ್ರನ ಗುರುವಾದ ಬೃಹಸ್ಪತಿಯ ಮಗ. ಅವನ ಮಗನೇ ಸುಪ್ರಸಿದ್ಧನಾದ ಹನುಮಂತ. ಅವನೇ ಈ ಹಿಂದೆ ಲಂಕೆಗೆ ಬಂದು ಅನೇಕರಾಕ್ಷಸರನ್ನು ಸಂಹಾರಮಾಡಿ ಹೋದವನು. ಯಮಧರ್ಮನ ಮಗನಾದ, ಧರ್ಮಾತ್ಮನಾದ ಮತ್ತು ಪರಾಕ್ರಮಿಯಾದ ಸುಷೇಣನೂ ವಾನರಸೈನ್ಯದಲ್ಲಿ ನಾಯಕನಾಗಿದ್ದಾನೆ. ದಧಿಮುಖನೆಂಬ ಹೆಸರಿನ ವಾನರನು ಚಂದ್ರನ ಮಗನು. ಸುಮುಖ, ದುರ್ಮುಖ ಮತ್ತು ವೇಗದರ್ಶೀ ಎಂಬ ಮೂವರು ವಾನರರೂ ಮೃತ್ಯುವಿನ ಮಕ್ಕಳು. ನಿಶ್ಚಯ

---

* ಜಾಮ್ಬವಾನ್ ಜೃಮ್ಭಮಾಣಸ್ಯ ಮಮ ವಕ್ತ್ರಾದಜಾಯತ । ನಾನು ಆಕಳಿಸು ತ್ತಿದ್ದಾಗ ನನ್ನ ಮುಖದಿಂದ ಜಾಂಬವಂತನು ಹುಟ್ಟಿದನು–ಎಂದು ಬ್ರಹ್ಮನು ಹೇಳಿದ್ದಾನೆ. ಗದ್ಗದನ ಮಗನು ಹೇಗಾದನು ಎಂಬುದಕ್ಕೆ ಹೀಗೆ ಸಮಾಧಾನ ಹೇಳಬಹುದಾಗಿದೆ. ಬ್ರಹ್ಮನ ಮುಖದಿಂದ ಹುಟ್ಟಿದ ಶಿಶುವನ್ನು ಸಾಕಿ ಸಲಹಿದವನು ಗದ್ಗದ. ಆದುದರಿಂದ ಅವನೂ ತಂದೆಯೇ. ಪಾಂಚಾಲಿಯು ಪಾಂಚಾಲರಾಜಕನ್ಯೆ ಎನಿಸಿದಂತೆ.

ವಾಗಿಯೂ ಬ್ರಹ್ಮನು ಮೃತ್ಯುವನ್ನೇ ಈ ಮೂವರು ವಾನರರ ರೂಪದಲ್ಲಿ ಸೃಷ್ಟಿಸಿದ್ದಾನೆ. ವಾನರಸೈನ್ಯಕ್ಕೆ ಸೇನಾಪತಿಯಾಗಿರುವ ನೀಲನು ಅಗ್ನಿಯ ಮಗನು. ಸುವಿಖ್ಯಾತನಾದ ಹನುಮಂತನು ವಾಯುವಿನ ಮಗನು. (ಕೇಸರಿಯ ಕ್ಷೇತ್ರದಲ್ಲಿ ಹುಟ್ಟಿದವನಾದುದರಿಂದ ಕೇಸರಿಯ ಪುತ್ರನೆಂದೂ ಪ್ರಸಿದ್ಧನಾಗಿದ್ದಾನೆ.) ದುರ್ಧರ್ಷನಾದ ಮಹಾಬಲಿಷ್ಠನಾದ ಅಂಗದನು ಇಂದ್ರನ ಮೊಮ್ಮಗ. ಬಲಿಷ್ಠರಾದ ಮೈಂದ-ದ್ವಿವಿದರಿಬ್ಬರೂ ಅಶ್ವಿನೀದೇವತೆ ಗಳ ಮಕ್ಕಳು. ಕಾಲ ಮತ್ತು ಅಂತಕರ ಪರಾಕ್ರಮಕ್ಕೆ ಸದೃಶವಾದ ಪರಾ ಕ್ರಮವುಳ್ಳ ಗಜ-ಗವಯ-ಗವಾಕ್ಷ-ಶರಭ-ಗಂಧಮಾದನ–ಎಂಬ ಐವರು ಕಪಿನಾಯಕರೂ ಯಮರಾಜನ ಮಕ್ಕಳು.

ಹೀಗೆ ದೇವತೆಗಳಿಂದಲೇ ಜನ್ಮವನ್ನು ಪಡೆದಿರುವ ಯುದ್ಧಾಕಾಂಕ್ಷಿ ಗಳಾದ, ಶೂರ-ವೀರರಾದ, ಮಹಾತೇಜಸ್ವಿಗಳಾದ ವಾನರರ ಸಂಖ್ಯೆಯು ಹತ್ತು ಕೋಟಿ. ಉಳಿದವರ ವಿಷಯವನ್ನು ಹೇಳುವ ಉತ್ಸಾಹವು ನನಗಿಲ್ಲ. ಏಕೆಂದರೆ : ಅವರ ಸಂಖ್ಯೆಯು ಅಷ್ಟು ಅಪಾರವಾಗಿದೆ.

ಸಿಂಹದಂತೆ ಮೈಕಟ್ಟುಳ್ಳ, ಯುವಕನಾದ ರಾಮನು ದಶರಥನ ಮಗನು. ಖರ-ದೂಷಣ-ತ್ರಿಶಿರಸರನ್ನು ಸಂಹಾರಮಾಡಿದ ವೀರನು ಅವನೇ. ರಾಮನ ಪರಾಕ್ರಮಕ್ಕೆ ಸಾಟಿಯಾಗಿರುವ ಪರಾಕ್ರಮವುಳ್ಳವನು ಈ ಭೂಮಂಡಲದಲ್ಲಿಯೇ ಮತ್ತೊಬ್ಬನಿಲ್ಲ. ವಿರಾಧ, ಯಮಸ್ವರೂಪನಾಗಿದ್ದ ಕಬಂಧ–ಇವರೂ ರಾಮನಿಂದಲೇ ಹತರಾದರು. **ವಕ್ತುಂ ನ ಶಕ್ತೋ ರಾಮಸ್ಯ ಗುಣಾನ್ಕಶ್ಚಿನ್ನರಃ ಕ್ಷಿತೌ ।** ಅವನ ಅಪಾರಗುಣಗಳನ್ನು ವಿವರಿಸಿ ಹೇಳಲು ಸಮರ್ಥನಾಗಿರುವ ಮನುಷ್ಯನು ಯಾವನೂ ಈ ಭೂಮಂಡಲ ದಲ್ಲಿಲ್ಲ. ಜನಸ್ಥಾನದಲ್ಲಿದ್ದ ಎಲ್ಲ ರಾಕ್ಷಸರೂ ಅವನಿಂದಲೇ ಹತರಾದರು. ರಾಮನ ತಮ್ಮನಾದ ಧರ್ಮಾತ್ಮನಾದ ಲಕ್ಷ್ಮಣನೂ ಗಜರಾಜನಿಗೆ ಅನುರೂಪ ವಾದ ಪರಾಕ್ರಮವುಳ್ಳವನು. ಅವನ ಬಾಣಕ್ಕೆ ಲಕ್ಷ್ಯನಾಗುವ ಇಂದ್ರನು ಕೂಡ ಜೀವವನ್ನು ಉಳಿಸಿಕೊಳ್ಳಲಾರನು. ಇವರೇ ಅಲ್ಲದೇ ವಾನರಸೇನೆಯಲ್ಲಿ ಶ್ವೇತ ಮತ್ತು ಜ್ಯೋತಿರ್ಮುಖರೆಂಬುವರೂ ಇದ್ದಾರೆ. ಅವರಿಬ್ಬರೂ ಸೂರ್ಯನ ಮಕ್ಕಳು. ಹೇಮಕೂಟನೆಂಬ ವಾನರಶ್ರೇಷ್ಠನು ವರುಣನ ಪುತ್ರನು. ವೀರನಾದ ಕಪಿಶ್ರೇಷ್ಠನಾದ ನಲನು ವಿಶ್ವಕರ್ಮನ ಪುತ್ರನು.

ಮಹಾಪರಾಕ್ರಮಿಯಾದ ವೇಗವಂತನಾದ ಸುದುರ್ಧರನು ವಸುವಿನ ಮಗನು. ರಾಕ್ಷಸಶ್ರೇಷ್ಠನಾದ ನಿನ್ನ ತಮ್ಮ ವಿಭೀಷಣನು ರಾಮನಿಂದ ಲಂಕಾ ರಾಜ್ಯವನ್ನು ಪಡೆದುಕೊಂಡು ಈಗ ಅವನ ಹಿತದಲ್ಲಿಯೇ ನಿರತನಾಗಿದ್ದಾನೆ.

ರಾವಣೇಶ್ವರ! ಹೀಗೆ ನಾನು ನಿನಗೆ ಸುವೇಲಪರ್ವತದ ಬಳಿಯಲ್ಲಿ ನಿಂತಿರುವ ವಾನರಸೈನ್ಯದ ಪೂರ್ಣಪರಿಚಯವನ್ನು ಮಾಡಿಕೊಟ್ಟಿರುತ್ತೇನೆ. ಮುಂದೆ ಮಾಡಬೇಕಾಗಿರುವ ಕಾರ್ಯಕ್ಕೆ ನೀನೇ ನಿಯಾಮಕನು."*

ಇ೦ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ಇ೧ನೆಯ ಸರ್ಗ

ಮಾಯಾರಚಿತವಾದ ಶ್ರೀರಾಮನ ತಲೆಯನ್ನು ತೋರಿಸಿ ಸೀತೆಯನ್ನು ವಿಮೋಹಗೊಳಿಸಲು ರಾವಣನ ಪ್ರಯತ್ನ

ತತಸ್ತಮಕ್ಷೋಭ್ಯಬಲಂ ಲಙ್ಕಾಧಿಪತಯೇ ಚರಾಃ ।
ಸುವೇಲೇ ರಾಘವಂ ಶೈಲೇ ನಿವಿಷ್ಟಂ ಪ್ರತ್ಯವೇದಯನ್ ॥೧॥

ಚಾರಾಣಾಂ ರಾವಣಃ ಶ್ರುತ್ವಾ ಪ್ರಾಪ್ತಂ ರಾಮಂ ಮಹಾಬಲಮ್ ।
ಜಾತೋದ್ವೇಗೋಽಭವತ್ಕಿಂಚಿತ್ಸಚಿವಾನಿದಮಬ್ರವೀತ್ ॥೨॥

ಗೂಢಚಾರರು–ಕ್ಷೋಭೆಗೊಳಿಸಲು ಅಸಾಧ್ಯವಾದ ವಾನರಸೈನ್ಯವೂ ಮತ್ತು ಶ್ರೀರಾಮನೂ ಸುವೇಲಪರ್ವತದ ಬಳಿ ಬೀಡುಬಿಟ್ಟಿರುವರೆಂಬ ವಾರ್ತೆಯನ್ನು ರಾವಣನಿಗೆ ನಿವೇದಿಸಿದರು. ಮಹಾಬಲನಾದ ಶ್ರೀರಾಮನು ಲಂಕಾಪಟ್ಟಣದ ಸಮೀಪಕ್ಕೆ ಬಂದಿರುವನೆಂಬ ಚಾರರ ಮಾತನ್ನು ಕೇಳಿ ರಾವಣನು ಉದ್ವಿಗ್ನನಾಗಿ ಸಚಿವರಿಗೆ ಹೇಳಿದನು :

---

* ಈ ಸರ್ಗದಲ್ಲಿ ವಾನರರ ಉತ್ಪತ್ತಿಯ ವಿಷಯವನ್ನು ಹೇಳಿರುವುದು ಬಾಲಕಾಂಡ ದಲ್ಲಿರುವುದಕ್ಕಿಂತಲೂ ಸ್ವಲ್ಪ ಭಿನ್ನವಾಗಿದೆ. ಅಲ್ಲಿ ವರುಣನಿಂದ ಸುಷೇಣನು ಹುಟ್ಟಿದ ನೆಂದೂ, ಪರ್ಜನ್ಯನಿಂದ ಶರಭ, ಕುಬೇರನಿಂದ ಗಂಧಮಾದನ ಇವರು ಹುಟ್ಟಿದರೆಂದೂ ಹೇಳಿದೆ. ಈ ಸರ್ಗದಲ್ಲಿ ಸುಷೇಣನು ಧರ್ಮನ ಮಗನೆಂದು ಶಾರ್ದೂಲನು ಹೇಳುತ್ತಾನೆ. ಇವನು ಗೂಢಚಾರನಾಗಿ ಸಂಗ್ರಹಿಸಿದ ವಿಷಯವಿದು. ಅಲ್ಪ-ಸ್ವಲ್ಪ ವ್ಯತ್ಯಾಸವಾಗಿ ಹೇಳಿರಬಹುದೆಂದು ಭಾವಿಸಬೇಕು.

"ಸಚಿವರೇ! ಮಂತ್ರಿಗಳೆಲ್ಲರೂ ಏಕಾಗ್ರಚಿತ್ತರಾಗಿ ಆದಷ್ಟು ಬೇಗ ಇಲ್ಲಿಗೆ ಆಗಮಿಸಲಿ. ರಾಕ್ಷಸರೇ! ನಾವೆಲ್ಲರೂ ಸೇರಿ ಸಮಾಲೋಚಿಸಬೇಕಾದ ಕಾಲವೀಗ ಸನ್ನಿಹಿತವಾಗಿದೆ."

ರಾವಣೇಶ್ವರನ ಆ ಮಾತನ್ನು ಕೇಳಿ ಮಂತ್ರಿಗಳೆಲ್ಲರೂ ಬಹಳ ಶೀಘ್ರ ವಾಗಿಯೇ ಸಭಾಭವನಕ್ಕೆ ಆಗಮಿಸಿದರು. ಅನಂತರ ರಾವಣನು ತನ್ನ ಸಚಿವ ರೊಡನೆಯೂ ಇತರ ರಾಕ್ಷಸನಾಯಕರೊಡನೆಯೂ ಸೇರಿ ಅವಶ್ಯಕರ್ತವ್ಯದ ವಿಷಯವಾಗಿ ಸಮಾಲೋಚಿಸಿದನು. ದುರ್ಧರ್ಷನಾದ ರಾವಣನು ತತ್ಕಾಲೋಚಿತವಾದ ಕರ್ತವ್ಯದ ವಿಷಯವಾಗಿ ಸಚಿವರೊಡನೆ ವಿಚಾರ ವಿಮರ್ಶೆಮಾಡಿ ಅವರೆಲ್ಲರನ್ನೂ ತಮ್ಮ ತಮ್ಮ ಮನೆಗಳಿಗೆ ಕಳುಹಿಸಿಕೊಟ್ಟು ತಾನೂ ಅರಮನೆಗೆ ಹೋದನು.

ಬಳಿಕ ರಾವಣನು ವಿದ್ಯುಜ್ಜಿಹ್ವನೆಂಬ ಮಹಾಬಲಿಷ್ಠನಾದ ಮಾಯಾವಿ ಯಾದ ರಾಕ್ಷಸನನ್ನು ಜೊತೆಯಲ್ಲಿ ಕರೆದುಕೊಂಡು ಮೈಥಿಲಿಯಿದ್ದೆಡೆಗೆ ಹೋದನು. ಹಾಗೆ ಹೋಗುತ್ತಿದ್ದಾಗಲೇ ಮಾಯಾವಿದ್ಯೆಯನ್ನು ಚೆನ್ನಾಗಿ ತಿಳಿದಿದ್ದ ವಿದ್ಯುಜ್ಜಿಹ್ವನಿಗೆ ರಾಕ್ಷಸರ ಅಧಿಪತಿಯಾದ ರಾವಣನು ಹೇಳಿದನು:

ಮೋಹಯಿಷ್ಯಾವಹೇ ಸೀತಾಂ ಮಾಯಯಾ ಜನಕಾತ್ಮಜಾಮ್ ॥

"ವಿದ್ಯುಜ್ಜಿಹ್ವ! ಮಾಯೆಯಿಂದ ಜನಕನ ಮಗಳಾದ ಸೀತೆಯನ್ನು ವಿಮೋಹಗೊಳಿಸೋಣ.

ಶಿರೋ ಮಾಯಾಮಯಂ ಗೃಹ್ಯ ರಾಘವಸ್ಯ ನಿಶಾಚರ ।
ತ್ವಂ ಮಾಂ ಸಮುಪತಿಷ್ಠಸ್ವ ಮಹಚ್ಚ ಸಶರಂ ಧನುಃ ॥೮॥

ಮಾಯಾಮಯವಾದ ರಾಘವನ ತಲೆಯನ್ನೂ ಮತ್ತು ಬಾಣ ಗಳೊಡನೆ ದೊಡ್ಡ ಧನುಸ್ಸನ್ನೂ ಹಿಡಿದು ನನ್ನ ಸಮೀಪದಲ್ಲಿರು."

ರಾವಣನ ಮಾತನ್ನು ಕೇಳಿ ವಿದ್ಯುಜ್ಜಿಹ್ವರಾಕ್ಷಸನು ಹಾಗೆಯೇ ಆಗ ಲೆಂದನು. ಮರುಕ್ಷಣದಲ್ಲಿಯೇ ಕುಶಲತೆಯಿಂದ ಸಿದ್ಧಪಡಿಸಿದ ತನ್ನ ಮಾಯೆ ಯನ್ನು ರಾವಣನಿಗೆ ತೋರಿಸಿದನು. ಅದರಿಂದ ಸುಪ್ರೀತನಾದ ರಾವಣನು ತನ್ನ ಕಂಠಾಭರಣವನ್ನು ವಿದ್ಯುಜ್ಜಿಹ್ವನಿಗೆ ಪಾರಿತೋಷಿಕವಾಗಿ ಕೊಟ್ಟನು.

ಬಳಿಕ ಸೀತೆಯನ್ನು ನೋಡಬೇಕೆಂಬ ತವಕದಿಂದಿದ್ದ ರಾಕ್ಷಸಾಧಿಪತಿಯು ಅಶೋಕವನಕ್ಕೆ ತೆರಳಿದನು. ಕುಬೇರನ ತಮ್ಮನಾದ ರಾವಣನು ಅಶೋಕ ವನದಲ್ಲಿ ದೀನಾವಸ್ಥೆಯಲ್ಲಿದ್ದ ಸೀತೆಯನ್ನು ನೋಡಿದನು. ಅಂತಹ ದೀನಾ ವಸ್ಥೆಗೆ ರಾಜಕುಮಾರಿಯಾದ ಸೀತೆಯು ಖಂಡಿತವಾಗಿಯೂ ತಕ್ಕವಳಾಗಿರ ಲಿಲ್ಲ. ಅಶೋಕವನದಲ್ಲಿದ್ದರೂ ಅವಳು ಶೋಕಾವಿಷ್ಟಳಾಗಿದ್ದಳು. ನೆಲದ ಮೇಲೆ ಕುಳಿತಿದ್ದಳು. ತಲೆತಗ್ಗಿಸಿಕೊಂಡಿದ್ದಳು. ಪತಿಯನ್ನೇ ಕುರಿತು ಯಾವಾಗಲೂ ಚಿಂತಿಸುತ್ತಿದ್ದಳು. ಅವಳಿಗೆ ಸಮೀಪದಲ್ಲಿಯೇ ಘೋರ ರೂಪಿಣಿಯರಾದ ರಾಕ್ಷಸಿಯರು ಕುಳಿತಿದ್ದರು. ರಾವಣನು ಅಟ್ಟಹಾಸ ದೊಡನೆ ತನ್ನ ನಾಮಧೇಯವನ್ನು ಹೇಳಿಕೊಳ್ಳುತ್ತಾ ಉದ್ಧತನಾಗಿ ಸೀತೆ ಯೊಡನೆ ಈ ಮಾತನ್ನು ಹೇಳಿದನು :

ಸಾನ್ತ್ವ್ಯಮಾನಾ ಮಯಾ ಭದ್ರೇ ಯಮಾಶ್ರಿತ್ಯ ವಿಮನ್ಯಸೇ ।
ಖರಹನ್ತಾ ಸ ತೇ ಭರ್ತಾ ರಾಘವಃ ಸಮರೇ ಹತಃ ॥೧೪॥

“ಮಂಗಳಾಂಗಿಯೇ! ನಾನೆಷ್ಟೇ ಸಾಂತ್ವನದ ಮಾತುಗಳನ್ನು ಹೇಳಿ ದರೂ ನೀನು ನನ್ನ ಮಾತುಗಳನ್ನು ಮಾನ್ಯಮಾಡುತ್ತಿರಲಿಲ್ಲ. ನೀನು ಸಂಪೂರ್ಣವಾಗಿ ಆ ರಾಘವನನ್ನೇ ಆಶ್ರಯಿಸಿದ್ದ ಕಾರಣ ಹೀಗೆ ಮಾಡುತ್ತಿದ್ದೆ. ಆದರೆ ಖರನನ್ನು ಸಂಹರಿಸಿದ ಆ ನಿನ್ನ ಪತಿಯು ಯುದ್ಧದಲ್ಲಿ ನನ್ನಿಂದಲೇ ಹತನಾದನು.

ಈಗ ನಿನ್ನ ಪ್ರೇಮದ ಮೂಲವೇ ಸಂಪೂರ್ಣವಾಗಿ ಕತ್ತರಿಸಿಹೋದಂತಾ ಗಿದೆ. ನಿನ್ನ ಪತಿಯನ್ನೇ ಸಂಹರಿಸಿ ನಾನು ನಿನ್ನ ದರ್ಪವನ್ನೂ ಅಡಗಿಸಿಬಿಟ್ಟಿ ದ್ದೇನೆ. ಈ ನಿನ್ನ ಪತಿವಿಯೋಗದ ವ್ಯಸನದಿಂದಾಗಿ ನೀನು ಗತ್ಯಂತರವಿಲ್ಲದೇ ನನ್ನ ಭಾರ್ಯೆಯಾಗುವೆ. ಮೂಢಳೇ! ರಾಮನ ಸಂಬಂಧವಾದ ಚಿಂತೆ ಯನ್ನು ಇನ್ನಾದರೂ ಬಿಟ್ಟುಬಿಡು. ಸತ್ತವನನ್ನು ಕಟ್ಟಿಕೊಂಡು ನೀನೇನು ಮಾಡುವೆ? ನನ್ನ ಎಲ್ಲ ಪತ್ನಿಯರಿಗೂ ನೀನು ಸ್ವಾಮಿನಿಯಾಗು. ನೀನು ನಿನ್ನನ್ನು ಮಹಾಬುದ್ಧಿವಂತೆಯೆಂದೂ ಪಂಡಿತೆಯೆಂದೂ ಭಾವಿಸಿಕೊಂಡು ಬಿಟ್ಟಿರುವೆ. ಅಲ್ಪಪುಣ್ಯಳೇ! ಕಳೆದುಕೊಂಡ ಪುರುಷಾರ್ಥವುಳ್ಳವಳೇ! ಮೂಢಳೇ! ವೃತ್ರಾಸುರನ ವಧೆಯಾದಂತೆ ನಿನ್ನ ಪತಿಯ ವಧೆಯು ಹೇಗಾ ಯಿತೆಂಬ ಘೋರಸಮಾಚಾರವನ್ನು ಹೇಳುವೆನು ; ಕೇಳು :

ನನ್ನನ್ನು ಸಂಹರಿಸುವ ಸಲುವಾಗಿ ರಾಘವನು ಸುಗ್ರೀವನಿಂದ ಸಜ್ಜು ಗೊಳಿಸಲ್ಪಟ್ಟಿದ್ದ ಮಹಾಸೈನ್ಯದಿಂದ ಪರಿವೃತನಾಗಿ ಸಮುದ್ರತೀರಕ್ಕೆ ಬಂದ ನಲ್ಲವೇ! ಸಮುದ್ರದ ಉತ್ತರತೀರವನ್ನು ಒತ್ತರಿಸಿ ಸೇನೆಯೊಡನೆ ಅಲ್ಲಿ ಬೀಡುಮಾಡಿದನು. ಆ ಸಮಯಕ್ಕೆ ಸರಿಯಾಗಿ ಸೂರ್ಯನು ಅಸ್ತಮಿಸಿದನು. ಹಾದಿನಡೆದು ಆಯಾಸಗೊಂಡಿದ್ದ ರಾಮನ ಸೈನ್ಯವು ಸುಖವಾಗಿ ಮಲಗಿದ್ದಿತು. ಅರ್ಧರಾತ್ರಿಯ ಸಮಯದಲ್ಲಿ ನಮ್ಮ ಗೂಢಚಾರರು ಅಲ್ಲಿಗೆ ಹೋಗಿ ಆ ಮಹಾಸೈನ್ಯವನ್ನು ನಿರೀಕ್ಷಿಸಿದರು. ಪ್ರಹಸ್ತನ ಮುಖಂಡತ್ವದಲ್ಲಿ ಸಜ್ಜಾಗಿದ್ದ ರಾಕ್ಷಸಸೈನ್ಯವು ಆ ಸಮಯದಲ್ಲಿ ನುಗ್ಗಿ ರಾಮ-ಲಕ್ಷ್ಮಣರಿಂದ ಯುಕ್ತವಾಗಿದ್ದ ಸುಖಸುಪ್ತವಾಗಿದ್ದ ಆ ಎಲ್ಲ ವಾನರಸೈನ್ಯವನ್ನೂ ಧ್ವಂಸಮಾಡಿಬಿಟ್ಟಿತು. ಆ ಸಮಯದಲ್ಲಿ ರಾಕ್ಷಸರು ಪಟ್ಟಿಶ-ಪರಿಘ-ಚಕ್ರ-ಋಷ್ಟಿ-ದಂಡಗಳಿಂದಲೂ, ದೊಡ್ಡ-ದೊಡ್ಡ ಆಯುಧಗಳಿಂದಲೂ, ಬಾಣಗಳ ಸಮೂಹಗಳಿಂದಲೂ ತ್ರಿಶೂಲಗಳಿಂದಲೂ, ಥಳ-ಥಳಿಸುತ್ತಿದ್ದ ಕೂಟ-ಮುದ್ಗರಗಳಿಂದಲೂ, ದಂಡ-ತೋಮರಗಳಿಂದಲೂ, ಪ್ರಾಸ-ಮುಸಲಗಳಿಂದಲೂ ಕಪಿಸೈನಿಕರನ್ನು ಪ್ರಹರಿಸಿ ಸಂಹರಿಸಿದರು.

ಅನಂತರ ಶತ್ರುಗಳನ್ನು ಮಥನಮಾಡುವುದರಲ್ಲಿ ಸಮರ್ಥನಾದ ಕತ್ತೀ ವರಸೆಯಲ್ಲಿ ಸಿದ್ಧಹಸ್ತನಾಗಿದ್ದ ಪ್ರಹಸ್ತನು ದೊಡ್ಡದಾದೊಂದು ಕತ್ತಿಯಿಂದ ಮಲಗಿದ್ದ ರಾಮನ ತಲೆಯನ್ನು ಕತ್ತರಿಸಿದನು. ಒಂದೇ ನೆಗೆತಕ್ಕೆ ವಿಭೀಷಣ ನನ್ನೂ ಹಿಡಿದು ಸಂಹರಿಸಿದನು. ಅನಂತರ ಲಕ್ಷ್ಮಣಸಹಿತರಾದ ವಾನರ ರೆಲ್ಲರೂ ದಿಕ್ಕಾಪಾಲಾಗಿ ಹೋಗುವಂತೆ ಪ್ರಹಸ್ತನು ತನ್ನ ಅತುಲಪರಾಕ್ರಮ ವನ್ನು ಪ್ರದರ್ಶಿಸಿದನು. ಪ್ಲವಗೇಶ್ವರನಾದ ಸುಗ್ರೀವನ ಕತ್ತೇ ಮುರಿಯಿತು. ರಾಕ್ಷಸಶ್ರೇಷ್ಠರು ಹನುಮಂತನ ಕೆನ್ನೆಯನ್ನೇ ಕತ್ತರಿಸಿ ಸಂಹರಿಸಿದರು. ಜಾಂಬ ವಂತನು ಮಂಡಿಯನ್ನೂರಿ ಮೇಲಕ್ಕೆ ಹಾರುತ್ತಿದ್ದಾಗ ರಾಕ್ಷಸರು ಪ್ರಯೋ ಗಿಸಿದ ಪಟ್ಟಿಶಗಳಿಂದ ಚೂರು-ಚೂರಾಗಿ ತುಂಡರಿಸಲ್ಪಟ್ಟು ಕೆಳಗುರುಳಿ ಅಸುನೀಗಿದನು. ಶತ್ರುಸೂದನರಾದ, ವಾನರಶ್ರೇಷ್ಠರಾದ ಮೈಂದ-ದ್ವಿವಿದರೂ ನಮ್ಮ ಕಡೆಯವರ ಕತ್ತಿಯ ಪ್ರಹಾರದಿಂದ ಗಾಯಗೊಂಡಿದ್ದರು. ಅವರ ಶರೀರವೆಲ್ಲವೂ ರಕ್ತದಿಂದ ತೋಯ್ದುಹೋಗಿದ್ದಿತು. ಎಲ್ಲರೂ ನಿಟ್ಟುಸಿರು ಬಿಡುತ್ತಿದ್ದರು. ನೋವನ್ನು ಸಹಿಸಲಾರದೇ ಗಟ್ಟಿಯಾಗಿ ಅಳುತ್ತಿದ್ದರು.

ಕಡೆಗೆ ವಾನರಸೈನಿಕರ ಮಧ್ಯದಲ್ಲಿಯೇ ರಾಕ್ಷಸರ ಕತ್ತಿಗಳಿಂದ ಕತ್ತರಿಸಲ್ಪಟ್ಟು ಛಿನ್ನ-ಭಿನ್ನರಾಗಿ ಕೆಳಗುರುಳಿ ಅಸುನೀಗಿದರು. ಪನಸನು ಹಲಸಿನಹಣ್ಣಿನಂತೆ ಸುಲಿಯಲ್ಪಟ್ಟನು. ದರೀಮುಖನು ಬಾಣಗಳಿಂದ ಚಿಂದಿಯಾಗಿ ಪೊದರಿನಲ್ಲಿ ಬಿದ್ದನು. ತೇಜಸ್ವಿಯಾದ ಕುಮುದನು ಸೊಲ್ಲಡಗಿ ಹತನಾದನು. ಅಂಗದ ಧರನಾದ ಅಂಗದನನ್ನು ಅನೇಕ ರಾಕ್ಷಸರು ಆಕ್ರಮಿಸಿ ಬಾಣಗಳಿಂದ ಛಿನ್ನ-ಭಿನ್ನಗೊಳಿಸಿದರು. ಅವನ ಎಲ್ಲ ಅಂಗಗಳಿಂದಲೂ ರಕ್ತವು ಸೋರುತ್ತಿದ್ದಿತು. ಕಡೆಗೆ ಅವನೂ ಅಸುನೀಗಿ ಭೂಮಿಯಲ್ಲಿ ಬಿದ್ದನು. ವಾಯುವೇಗದಿಂದ ಮೋಡಗಳು ಛಿನ್ನ-ಭಿನ್ನವಾಗಿ ವಿನಾಶಹೊಂದುವಂತೆ ಅಲ್ಲಿ ಮಲಗಿದ್ದ ವಾನರರು ಆನೆಗಳಿಂದ ತುಳಿಯಲ್ಪಟ್ಟು ರಥದ ಚಕ್ರಗಳಿಗೆ ಸಿಕ್ಕಿ ಧ್ವಂಸವಾಗಿ ಹೋದರು. ಸಿಂಹಗಳಿಂದ ಹಿಂಬಾಲಿಸಲ್ಪಟ್ಟ ಆನೆಗಳಂತೆ–ರಾಕ್ಷಸರಿಂದ ಹಿಂಬಾಲಿಸಲ್ಪಟ್ಟು ಪೃಷ್ಠಭಾಗದಲ್ಲಿ ಬಾಣಗಳಿಂದ ಪ್ರಹರಿಸಲ್ಪಟ್ಟ ಅನೇಕ ವಾನರಸೈನಿಕರು ಭಯತ್ರಸ್ತರಾಗಿ ಓಡಿಹೋಗುತ್ತಿದ್ದರು. ರಾಕ್ಷಸರ ಭಯ ದಿಂದಾಗಿ ಆ ಸಮಯದಲ್ಲಿ ಕೆಲವು ವಾನರರು ಸಮುದ್ರಕ್ಕೆ ಹಾರಿದರು. ಕೆಲವರು ಆಕಾಶಕ್ಕೆ ಹಾರಿದರು. ಕೆಲವು ಋಕ್ಷಸೈನಿಕರು ಕಪಿಗಳ ವೃತ್ತಿಯನ್ನೇ ಆಶ್ರಯಿಸಿ ಮರಗಳನ್ನು ಹತ್ತಿ ಕುಳಿತರು. ವಿರೂಪಾಕ್ಷರಾದ ರಾಕ್ಷಸರು ಸಮುದ್ರದ ತೀರಪ್ರದೇಶಗಳಲ್ಲಿಯೂ ಪರ್ವತಪ್ರದೇಶಗಳಲ್ಲಿಯೂ ಮತ್ತು ಅರಣ್ಯಪ್ರದೇಶಗಳಲ್ಲಿಯೂ ಇದ್ದ ಬಹುಸಂಖ್ಯಾತರಾದ ಪಿಂಗಲವರ್ಣದ ಕಪಿಸೈನಿಕರನ್ನು ಸಂಹರಿಸಿದರು.

ಹೀಗೆ ಸಸೈನ್ಯನಾದ ನಿನ್ನ ಪತಿಯು ನನ್ನ ಸೈನಿಕರಿಂದ ಕೊಲ್ಲಲ್ಪಟ್ಟನು. ರಕ್ತದಿಂದ ತೋಯ್ದುಹೋಗಿರುವ ಧೂಳಿನಿಂದ ಸಮಾವೃತವಾಗಿರುವ ನಿನ್ನ ಪತಿಯ ಶಿರಸ್ಸನ್ನು ನಿನಗೆ ತೋರಿಸುವ ಸಲುವಾಗಿಯೇ ಇಲ್ಲಿಗೆ ತರಲಾಗಿದೆ."

ಪರಮದುರ್ಜಯನಾದ ರಾವಣನು ಹೀಗೆ ಹೇಳಿ ಸೀತೆಗೆ ಕೇಳಿಸು ವಂತೆಯೇ ರಾಕ್ಷಸಿಯೊಬ್ಬಳಿಗೆ ಹೇಳಿದನು :

"ರಕ್ಕಸಿಯೇ! ಕ್ರೂರಕರ್ಮನಾದ ವಿದ್ಯುಜ್ಜಿಹ್ವನನ್ನು ಇಲ್ಲಿಗೆ ಕರೆದು ಕೊಂಡು ಬಾ. ಅವನೇ ಯುದ್ಧಭೂಮಿಯಿಂದ ರಾಮನ ಶಿರಸ್ಸನ್ನು ಸ್ವತಃ ಇಲ್ಲಿಗೆ ತಂದಿದ್ದಾನೆ."

ಅನಂತರ ವಿದ್ಯುಜ್ಜಿಹ್ವನು ಧನುಸ್ಸಿನ ಜೊತೆಯಲ್ಲಿದ್ದ ಶಿರಸ್ಸನ್ನು ಹಿಡಿದುಕೊಂಡು ರಾವಣನ ಬಳಿಗೆ ಬಂದು ತಲೆಬಾಗಿ ನಮಸ್ಕರಿಸಿ ಮುಂದೆ ನಿಂತುಕೊಂಡನು. ಬಳಿಕ ರಾವಣನು ವಿಶಾಲವಾದ ನಾಲಿಗೆಯುಳ್ಳ ವಿದ್ಯುಜ್ಜಿಹ್ವನಿಗೆ ಹೇಳಿದನು :

ಅಗ್ರತಃ ಕುರು ಸೀತಾಯಾಃ ಶೀಘ್ರಂ ದಾಶರಥೇಃ ಶಿರಃ ।
ಅವಸ್ಥಾಂ ಪಶ್ಚಿಮಾಂ ಭರ್ತುಃ ಕೃಪಣಾ ಸಾಧು ಪಶ್ಯತು ॥೪೧॥

"ವಿದ್ಯುಜ್ಜಿಹ್ವನೇ! ಶೀಘ್ರವಾಗಿ ರಾಮನ ಶಿರಸ್ಸನ್ನು ಸೀತೆಯ ಮುಂದಿಡು. ದೀನೆಯಾದ ಇವಳು ತನ್ನ ಪತಿಯ ಕೊನೆಯ ಅವಸ್ಥೆಯನ್ನು ಚೆನ್ನಾಗಿ ನೋಡಲಿ."

ರಾವಣನು ಹೀಗೆ ಹೇಳಿದೊಡನೆಯೇ ರಾಕ್ಷಸನು ಸುಂದರವಾಗಿ ಕಾಣುತ್ತಿದ್ದ ತಲೆಯನ್ನು ಸೀತೆಯ ಮುಂದಿಟ್ಟು ಅದೃಶ್ಯನಾದನು. ರಾವಣನು ಕೂಡ ಪ್ರಕಾಶಮಾನವಾಗಿದ್ದ ಮತ್ತು ಮಹತ್ತರವಾಗಿದ್ದ ಧನುಸ್ಸನ್ನು ಸೀತೆಯ ಮುಂದಿಡುತ್ತಾ ಹೇಳಿದನು :

"ಸೀತೇ! ಇದೋ ನೋಡು. ಇದು ಮೂರು ಲೋಕಗಳಲ್ಲಿಯೂ ವಿಖ್ಯಾತವಾಗಿರುವ, ಶಿಂಜಿನಿಯಿಂದ ಕೂಡಿರುವ ರಾಮನ ಧನುಸ್ಸು. ಪ್ರಹಸ್ತನು ರಾತ್ರಿಯಲ್ಲಿ ಆ ಮನುಷ್ಯನನ್ನು ಸಂಹರಿಸಿ ಈ ಧನುಸ್ಸನ್ನು ತಂದನು."

ಹೀಗೆ ವಿದ್ಯುಜ್ಜಿಹ್ವನು ಸುಂದರವಾದ ಶಿರಸ್ಸನ್ನು ಸೀತೆಯ ಮುಂದಿಟ್ಟೊಡನೆಯೇ ರಾವಣನು ಧನುಸ್ಸನ್ನೂ ಸೀತೆಯ ಮುಂದಿಟ್ಟನು. ಬಳಿಕ ಯಶೋವತಿಯಾದ ವಿದೇಹರಾಜನ ಮಗಳಾದ ಸೀತೆಗೆ ನಾಚಿಕೆಗೆಟ್ಟ ರಾವಣನು ಹೇಳಿದನು :

'**ಭವ ಮೇ ವಶಾನುಗಾ**' 'ಈಗಲಾದರೂ ನೀನು ನನ್ನ ವಶಳಾಗು.'

ಒ೧ನೆಯ ಸರ್ಗವು ಮುಗಿಯಿತು.

ಶ್ರೀರಾಮನು ಮೃತನಾದನೆಂದೇ ಭಾವಿಸಿದ ಸೀತೆಯ ವಿಲಾಪ : ಮಂತ್ರಿಗಳ ಸಲಹೆಯಂತೆ ರಾವಣನಿಂದ ಯುದ್ಧದ ಸಿದ್ಧತೆ

ಸಾ ಸೀತಾ ತಚ್ಛಿರೋ ದೃಷ್ಟ್ವಾ ತಚ್ಚ ಕಾರ್ಮುಕಮುತ್ತಮಮ್ ।
ಸುಗ್ರೀವಪ್ರತಿಸಂಸರ್ಗಮಾಖ್ಯಾತಂ ಚ ಹನೂಮತಾ ॥೧॥

ನಯನೇ ಮುಖವರ್ಣಂ ಚ ಭರ್ತುಸ್ತತ್ಸದೃಶಂ ಮುಖಮ್ ।
ಕೇಶಾನ್ಕೇಶಾನ್ತದೇಶಂ ಚ ತಂ ಚ ಚೂಡಾಮಣಿಂ ಶುಭಮ್ ॥೨॥

ಏತೈಃ ಸರ್ವೈರಭಿಜ್ಞಾನೈರಭಿಜ್ಞಾಯ ಸುದುಃಖಿತಾ ।
ವಿಜಗರ್ಹೇಽತ್ರ ಕೈಕೇಯೀಂ ಕ್ರೋಶನ್ತೀ ಕುರರೀ ಯಥಾ ॥೩॥

ಹನುಮಂತನೇನೋ ಸುಗ್ರೀವನೊಡನೆ ರಾಮನಿಗೆ ಮೈತ್ರಿಯು ವಿಧ್ಯುಕ್ತವಾಗಿ ಆಗಿರುವುದೆಂಬ ವಿಷಯವನ್ನು ಹೇಳಿದ್ದನು. ಆದರೆ ಈಗ ಸೀತೆಯ ಕಣ್ಣುಮುಂದಿರುವುದೇನು? ಸೀತೆಯು ವಿದ್ಯುಜ್ಜಿಹ್ವನಿಟ್ಟ ತಲೆಯನ್ನೂ ರಾವಣನಿಟ್ಟ ಧನುಸ್ಸನ್ನೂ ದಿಟ್ಟಿಸಿ ನೋಡಿದಳು. ಮುಖದಲ್ಲಿ ತನ್ನ ಪತಿಯ ಕಣ್ಣುಗಳಿಗೆ ಸದೃಶವಾದ ಕಣ್ಣುಗಳೇ ಇದ್ದುವು. ಮುಖವರ್ಣ, ಮುಖ, ತಲೆಗೂದಲು, ಹಣೆ–ಎಲ್ಲವೂ ಪತಿಯ ಮುಖವರ್ಣ, ಮುಖಾಕೃತಿ, ಕೇಶ-ಕೇಶಾಂತಗಳಿಗೆ ಅನುರೂಪವಾಗಿಯೇ ಇದ್ದುವು. ಅಲ್ಲದೇ ತಾನು ಕಳುಹಿಸಿದ್ದ ಚೂಡಾಮಣಿಯೂ ಶಿರಸ್ಸಿನಲ್ಲಿ ವಿರಾಜಿಸುತ್ತಿದ್ದಿತು. ಆ ಎಲ್ಲ ಗುರುತುಗಳಿಂದ ಸೀತೆಗೆ ಆ ಶಿರಸ್ಸು ತನ್ನ ಪತಿಯದಲ್ಲ–ಎಂದು ಸಂಶಯಿ ಸಲು ಅವಕಾಶವೇ ಆಗಲಿಲ್ಲ. ಇದು ತನ್ನ ಪತಿಯ ತಲೆ–ಎಂದೇ ಅವಳು ನಿರ್ಧರಿಸಿಬಿಟ್ಟಳು. ಬಹಳ ದುಃಖಿತಳಾಗಿ ಹೆಣ್ಣು ಕುರರಹಕ್ಕಿಯಂತೆ ಕೂಗಿಕೊಂಡು ಅಳತೊಡಗಿದಳು. ಇವೆಲ್ಲಕ್ಕೂ ಮೂಲಕಾರಣಳಾದ ಕೈಕೇಯಿಯನ್ನು ನಿಂದಿಸುತ್ತಾ ಹೇಳಿದಳು :

ಸಕಾಮಾ ಭವ ಕೈಕೇಯಿ ಹತೋಽಯಂ ಕುಲನನ್ದನಃ ।
ಕುಲಮುತ್ಸಾದಿತಂ ಸರ್ವಂ ತ್ವಯಾ ಕಲಹಶೀಲಯಾ ॥೪॥

"ಕೈಕೇಯಿ! ನಿನ್ನ ಮನೋರಥವು ಈಡೇರಿದಂತಾಯಿತು. ರಘುಕುಲಕ್ಕೆ ಆನಂದದಾಯಕನಾಗಿದ್ದ ನನ್ನ ಪತಿಯು ಸತ್ತುಹೋದನು. ಜಗಳಗಂಟಿಯಾದ ನಿನ್ನಿಂದ ರಘುಕುಲವೇ ನಿರ್ಮೂಲವಾಯಿತು.

ಆರ್ಯನಾದ ರಾಮನು ಕೈಕೇಯಿಗೆ ಯಾವ ಅಪರಾಧವನ್ನು ಮಾಡಿದ್ದನು? ನಿರಪರಾಧಿಯಾದ ಶ್ರೀರಾಮನಿಗೆ ನಾರುಬಟ್ಟೆಯನ್ನು ಕೊಟ್ಟು ನನ್ನೊಡನೆ ಕಾಡಿಗಟ್ಟಿಬಿಟ್ಟಳಲ್ಲವೇ!"

ಹೀಗೆ ಹೇಳುವಾಗ ತಪಸ್ವಿನಿಯಾದ ಸೀತೆಯ ಶರೀರವೆಲ್ಲವೂ ತರ-ತರನೆ ನಡುಗುತ್ತಿದ್ದಿತು. ಅವಳ ಆಗಿನ ದುಃಖವನ್ನು ವರ್ಣಿಸಲು ಸಾಧ್ಯವೇ ಇರಲಿಲ್ಲ. ಅವಳು ಕಡಿದುಹಾಕಿದ ಬಾಳೇಗಿಡದಂತೆ ದೊಪ್ಪನೆ ನೆಲದ ಮೇಲೆ ಬಿದ್ದುಬಿಟ್ಟಳು. ಮುಹೂರ್ತವು ಕಳೆದನಂತರ ಪುನಃ ಅವಳಿಗೆ ಪ್ರಜ್ಞೆಯು ಬಂದಿತು. ಸ್ವಲ್ಪ ಸಮಾಧಾನ ತಂದುಕೊಂಡು ರಾಮನ ಶಿರಸ್ಸಿನಂತೆಯೇ ಇದ್ದ ಆ ಶಿರಸ್ಸನ್ನು ಸಮೀಪದಲ್ಲಿಟ್ಟುಕೊಂಡು ಗೋಳಾಡತೊಡಗಿದಳು.

"ಅಯ್ಯೋ! ನಾನು ಹಾಳಾಗಿಹೋದೆನಲ್ಲಾ! ಮಹಾಬಾಹುವೇ! ವೀರವ್ರತಪರಿಪಾಲಕನೇ! ನಿನ್ನ ಈ ಕೊನೆಯ ಅವಸ್ಥೆಯನ್ನು ನಾನು ಪ್ರತ್ಯಕ್ಷವಾಗಿ ನೋಡುತ್ತಿರುವೆನಲ್ಲವೇ! ನೀನು ನನ್ನನ್ನು ವಿಧವೆಯನ್ನಾಗಿ ಮಾಡಿಬಿಟ್ಟೆಯಲ್ಲಾ!

ಪ್ರಥಮಂ ಮರಣಂ ನಾರ್ಯಾ ಭರ್ತುರ್ವೈಗುಣ್ಯಮುಚ್ಯತೇ ।
ಸುವೃತ್ತಃ ಸಾಧುವೃತ್ತಾಯಾಃ ಸಂವೃತ್ತಸ್ತ್ವಂ ಮಮಾಗ್ರತಃ ॥೯॥

ಪತ್ನಿಗಿಂತಲೂ ಮೊದಲು ಪತಿಯು ಮರಣಹೊಂದುವುದು ಸ್ತ್ರೀಗೆ ಅನರ್ಥಕರವಾದ ದೋಷವೆಂದು ಹೇಳುತ್ತಾರೆ. ಸದಾಚಾರಸಂಪನ್ನೆಯಾದ ನನ್ನ ಎದುರಿನಲ್ಲಿಯೇ ಸದಾಚಾರಸಂಪನ್ನನಾದ ನೀನು ಮರಣಹೊಂದಿರುವೆ. ನಾನಿದನ್ನು ಹೇಗೆ ತಾನೇ ಸಹಿಸಲಿ?

ನಾನು ಅತ್ಯಂತದುಃಖಿತಳಾಗಿದ್ದೆನು. ಶೋಕಸಾಗರದಲ್ಲಿಯೇ ಮುಳುಗಿಹೋಗಿದ್ದೆನು. ಅಂತಹ ನನ್ನನ್ನು ಉದ್ಧರಿಸಲು ಪ್ರಯತ್ನಿಸಿದ ನಿನ್ನಂತಹ ವೀರನನ್ನೇ ಶತ್ರುಗಳು ಸಂಹರಿಸಿಬಿಟ್ಟರು.

ಕರುವಿನೊಡನಿದ್ದ ಹಸುವನ್ನು ಕರುವಿನಿಂದ ಪ್ರತ್ಯೇಕಿಸಿಬಿಡುವಂತೆ

ನಿನ್ನನ್ನು ಅತ್ಯಂತವಾತ್ಸಲ್ಯದಿಂದ ಕಾಣುತ್ತಿದ್ದ ನನ್ನ ಅತ್ತೆಯಾದ ಕೌಸಲ್ಯೆಯನ್ನು ಶತ್ರುಗಳು ವತ್ಸನಾದ ನಿನ್ನಿಂದ ವಿಹೀನಳನ್ನಾಗಿ ಮಾಡಿಬಿಟ್ಟರು.

ಆದಿಷ್ಟಂ ದೀರ್ಘಮಾಯುಸ್ತೇ ದೈವಜ್ಞೈರಪಿ ರಾಘವ ।
ಅನೃತಂ ವಚನಂ ತೇಷಾಮಲ್ಪಾಯುರಸಿ ರಾಘವ ॥೧೨॥

ರಘುನಂದನನೇ! ಜ್ಯೋತಿಷ್ಕರು ನಿನ್ನನ್ನು ದೀರ್ಘವಾದ ಆಯುಷ್ಯ ವಿರುವವನೆಂದು ಹೇಳಿದ್ದರು. ಅವರ ಮಾತೂ ಸುಳ್ಳಾಗಿಹೋಯಿತು. ನೀನಿಂದು ಅಲ್ಪಾಯುವಾದೆ.

ಅಥವಾ ನಶ್ಯತಿ ಪ್ರಜ್ಞಾ
ಪ್ರಾಜ್ಞಸ್ಯಾಪಿ ಸತಸ್ತವ ।
ಪಚತ್ಯೇನಂ ತಥಾ ಕಾಲೋ
ಭೂತಾನಾಂ ಪ್ರಭವೋ ಹ್ಯಯಮ್ ॥೧೩॥

ಪ್ರಾಜ್ಞನಿಗೇ ಆದರೂ ಕೆಲವು ಸಮಯಗಳಲ್ಲಿ ಪ್ರಜ್ಞೆಯು ನಶಿಸಿ ಹೋಗುತ್ತದೆ. ಸತ್ಪುರುಷನಾದ ನಿನಗೂ ಹಾಗೆಯೇ ಆಗಿರಬಹುದು. ನೀನು ಪ್ರಾಜ್ಞನಾಗಿದ್ದರೂ ಶತ್ರುಗಳ ಆಕ್ರಮಣವನ್ನು ಮುಂದಾಗಿ ಯೋಚಿಸದೇ ಮಲಗಿ ನಿದ್ರಿಸುತ್ತಿದ್ದಾಗ ಅವರ ಆಕ್ರಮಣಕ್ಕೆ ಬಲಿಯಾದೆ. ಅಥವಾ ಇದು ಕಾಲದ ಮಹತ್ತ್ವವೂ ಇರಬಹುದು. ಏಕೆಂದರೆ : ಪ್ರಾಣಿಗಳ ಉತ್ಪತ್ತಿಗೆ ಕಾರಣವಾಗಿರುವ ಈ ಕಾಲವು ತನ್ನ ಮನಸ್ಸಿಗೆ ಬಂದಂತೆ ಪ್ರಾಣಿಗಳನ್ನು ಪಕ್ವಮಾಡುತ್ತದೆ.

ಪ್ರಿಯನೇ! ನೀನು ನೀತಿಶಾಸ್ತ್ರವಿಶಾರದನಾಗಿದ್ದೆ. ಸಮಸ್ತವಾದ ವ್ಯಸನಗಳ ಪರಿಹಾರಕ್ಕೂ ಉಪಾಯಗಳನ್ನು ತಿಳಿದವನಾಗಿದ್ದೆ. ಮೇಲಾಗಿ ನೀನು ಮಹಾಕುಶಲನು. ಹೀಗಿದ್ದರೂ ಆಕಸ್ಮಿಕವಾದ ಮೃತ್ಯುವಿಗೆ ನೀನು ಹೇಗೆ ತುತ್ತಾದೆ?*

ಕಮಲಾಕ್ಷನೇ! ಅತ್ಯಂತಕ್ರೂರಳಾದ, ನಿರ್ದಯಳಾದ, ಭಯಂಕರ

---

* ಮೃತ್ಯುವು ಆಕಸ್ಮಿಕವಾದರೆ ಅಥವಾ ಅದೃಷ್ಟವಾದರೆ ಕಾಣಿಸದ ಮೃತ್ಯುವಾದರೆ ಯಾರೂ ಏನೂ ಮಾಡಲಾರರು. ಆದರೆ ರಾಮನಿಗೆ ಅದೃಷ್ಟವೆಂಬುದೇ ಇಲ್ಲ. ಅವನು ಕಣ್ಣಿನಿಂದ ಕಾಣಲಾಗದುದನ್ನು ಬುದ್ಧಿಯಿಂದ ನೋಡತಕ್ಕವನು. ಚಾರರೆಂಬ ಕಣ್ಣುಗಳಿಂದ ತಿಳಿಯತಕ್ಕವನು. ಆದುದರಿಂದಲೇ ನಯ ಶಾಸ್ತ್ರವಿತ್, ಕುಶಲ,

ಳಾದ ಕಾಳರಾತ್ರಿಯು ನಿನ್ನನ್ನು ಗಾಢವಾಗಿ ತಬ್ಬಿಕೊಂಡು ನನ್ನಿಂದ ನಿನ್ನನ್ನು ಕಸಿದುಬಿಟ್ಟಳು.

ಪುರುಷೋತ್ತಮನೇ! ಮಹಾಬಾಹುವೇ! ತಪಸ್ವಿನಿಯಾದ ನನ್ನನ್ನು ನೀನು ಪರಿತ್ಯಜಿಸಿ ಪ್ರೇಯಸಿಯನ್ನು ತಬ್ಬಿಕೊಳ್ಳುವಂತೆ ಈ ಭೂಮಿಯನ್ನು ಆಲಿಂಗಿಸಿಕೊಂಡು ಮಲಗಿರುವೆ. ನಾನು ಯಾವುದನ್ನು ಗಂಧದಿಂದಲೂ ಮಾಲೆಗಳಿಂದಲೂ ಸತತವಾಗಿ ಮತ್ತು ಭಕ್ತಿಪೂರ್ವಕವಾಗಿ ಪೂಜಿಸುತ್ತಿದ್ದೆನೋ–ನನಗೆ ಯಾವುದು ಅತ್ಯಂತಪ್ರಿಯವಾಗಿದ್ದಿತೋ–ಆ ನಿನ್ನ ಸುವರ್ಣಭೂಷಿತವಾದ ಧನುಸ್ಸನ್ನು ನಾನಿಲ್ಲಿ ಕಾಣುತ್ತಿದ್ದೇನೆ.

ನಿಷ್ಪಾಪನೇ! ನಿಶ್ಚಯವಾಗಿಯೂ ನೀನು ಸ್ವರ್ಗಕ್ಕೆ ಹೋಗಿ ನನ್ನ ಮಾವನಾದ ದಶರಥನೊಡನೆಯೂ ಮತ್ತು ಇತರ ನಿನ್ನ ವಂಶದ ಪಿತೃಗಳೊಡನೆಯೂ ಸೇರಿಕೊಂಡಿರುವೆ. ನೀನು ತಂದೆಯ ಆಜ್ಞಾಪರಿಪಾಲನಾರೂಪವಾದ ಮಹಾಕಾರ್ಯವನ್ನು ಮಾಡಿ ಪುಣ್ಯವನ್ನು ಗಳಿಸಿ ಆಕಾಶದಲ್ಲಿ ನಕ್ಷತ್ರರೂಪವನ್ನು ತಾಳಿಬಿಟ್ಟೆ. ಆದರೆ ನೀನು ಹುಟ್ಟಿದ ಪುಣ್ಯತಮವಾದ ವಂಶವನ್ನೂ ಉಪೇಕ್ಷಿಸಿ ಸ್ವರ್ಗಕ್ಕೆ ಹೋದೆಯಲ್ಲಾ! ನೀನು ಹೀಗೆ ಮಾಡಬಾರದಾಗಿತ್ತು. ಇಕ್ಷ್ವಾಕುಕುಲತಿಲಕನೇ! ಮಹಾರಾಜ! ನೀನು ಬಾಲಕನಿದ್ದಾಗಲೇ ಬಾಲಕಿಯಾಗಿದ್ದ ನನ್ನನ್ನು ಪತ್ನಿಯನ್ನಾಗಿ ಸ್ವೀಕರಿಸಿದೆ. ಅಂದಿನಿಂದಲೂ ನಾನು ನಿನಗೆ ಸಹಧರ್ಮಿಣಿಯೇ ಆಗಿರುವೆನು. ಎಡೆಬಿಡದೇ ಯಾವಾಗಲೂ ನಿನ್ನೊಡನೆಯೇ ಸಂಚರಿಸುತ್ತಿದ್ದೆನು. ಅಂತಹ ನನ್ನೊಡನೆ ನೀನೀಗ ಮಾತನಾಡುವುದಿಲ್ಲವೇಕೆ? ಒಮ್ಮೆಯಾದರೂ ನನ್ನನ್ನು ನೋಡುವುದಿಲ್ಲವೇಕೆ? ಪಾಣಿಗ್ರಹಣದ ಸಮಯದಲ್ಲಿ ನೀನು–'**ತ್ವಯಾ ಸಹ ಚರಿಷ್ಯಾಮಿ ಧರ್ಮಾದಿಕಮ್** = ಧರ್ಮಾದಿಕಾರ್ಯಗಳೆಲ್ಲವನ್ನೂ ನಿನ್ನೊಡನೆಯೇ ಆಚರಿಸುವೆನು'–ಎಂದು ನನಗೆ ಪ್ರತಿಜ್ಞೆಯನ್ನು ಮಾಡಿಕೊಟ್ಟಿದ್ದೆಯಲ್ಲವೇ?

ವ್ಯಸನಾನಾಂ ವರ್ಜನೇ ಉಪಾಯಜ್ಞಃ – ಮುಂತಾಗಿ ಸೀತೆಯು ಹೇಳುತ್ತಾಳೆ. ಅಂತಹ ನಿನಗೆ ಮೃತ್ಯುವು ಅದೃಷ್ಟವು ಹೇಗಾಯಿತು? ನಿನ್ನ ಕುಶಲಮತಿಗೆ ಶತ್ರುವಿನ ಈ ಸನ್ನಾಹವೇಕೆ ತಿಳಿಯಲಿಲ್ಲ?–ಎಂಬುದಾಗಿ ಸೀತೆಯು ಪ್ರಶ್ನಿಸುತ್ತಾಳೆ.

ಆ ಮಾತನ್ನು ಈಗಲಾದರೂ ಜ್ಞಾಪಿಸಿಕೋ. ದುಃಖಿತಳಾದ ನನ್ನನ್ನು ನಿನ್ನ ಜೊತೆಯಲ್ಲಿಯೇ ಕರೆದುಕೊಂಡು ಹೋಗು.

ಸನ್ಮಾರ್ಗವನ್ನು ತಿಳಿದವರಲ್ಲಿ ಶ್ರೇಷ್ಠನಾದವನೇ! ನೀನು ನನ್ನನ್ನು ಅರಣ್ಯಕ್ಕೆ ಕರೆತಂದೆ. ಅತ್ಯಂತದುಃಖಿತೆಯಾಗಿರುವ ನನ್ನನ್ನು ಇಲ್ಲಿ ಪರಿತ್ಯಜಿಸಿ ಈ ಲೋಕದಿಂದ ಪರಲೋಕಕ್ಕೆ ಹೋದುದೇಕೆ? ಮಂಗಳಮಯವಾದ ಕಸ್ತೂರೀ-ಚಂದನಾದಿಗಳಿಂದ ಸಮಲಂಕೃತವಾಗಿರುತ್ತಿದ್ದ ನಿನ್ನ ಸುಂದರವಾದ ಅಂಗಗಳನ್ನು ನಾನು ಆಲಿಂಗನೆಮಾಡಿಕೊಳ್ಳುತ್ತಿದ್ದೆನು. ಈಗ ಅದೇ ನಿನ್ನ ಶರೀರವನ್ನು ಮಾಂಸಾಶಿಗಳಾದ ಪ್ರಾಣಿಗಳು ಇತ್ತಿಂದತ್ತ ಅತ್ತಿಂದಿತ್ತ ಎಳೆದಾಡುತ್ತಿವೆ. ಅಯ್ಯೋ! ಇದನ್ನು ನಾನು ಹೇಗೆ ತಾನೇ ಸಹಿಸಿಕೊಳ್ಳಲಿ? ಸಾಕಷ್ಟು ದಕ್ಷಿಣೆಗಳಿಂದ ಸಂಪನ್ನವಾದ ಅಗ್ನಿಷ್ಟೋಮವೇ ಮೊದಲಾದ ಯಜ್ಞಗಳಿಂದ ನೀನು ಯಜ್ಞಪುರುಷನನ್ನು ಆರಾಧಿಸಿರುವೆ. ಹೀಗಿರುವಾಗ ಅಗ್ನಿಹೋತ್ರಾಗ್ನಿಯಿಂದಲೇ ಆಗಬೇಕಾಗಿದ್ದ ದಹನಸಂಸ್ಕಾರದ ಸುಯೋಗವು ನಿನಗೇಕೆ ಲಭಿಸಲಿಲ್ಲ? ನಾವು ಮೂವರೂ ಒಟ್ಟಾಗಿ ಅರಣ್ಯಕ್ಕೆ ಬಂದಿದ್ದೆವು. ಆದರೆ ಈಗ ಶೋಕಾಕುಲಳಾಗಿರುವ ಕೌಸಲ್ಯೆಯು ಅರಣ್ಯದಿಂದ ಹಿಂದಿರುಗಿ ಹೋಗುವ ಲಕ್ಷ್ಮಣನನ್ನು ಮಾತ್ರವೇ ನೋಡಬಲ್ಲಳು. ಏಕಾಕಿಯಾಗಿ ಬಂದ ಲಕ್ಷ್ಮಣನನ್ನು ನೋಡಿ ಕೌಸಲ್ಯೆಯು ರಾಮ ಮತ್ತು ಸೀತೆ ಎಲ್ಲೆಂದು ಪ್ರಶ್ನಿಸುವಳು. ಆಗ ಲಕ್ಷ್ಮಣನು, ರಾತ್ರಿಯಲ್ಲಿ ಎಲ್ಲರೂ ಮಲಗಿದ್ದಾಗ ರಾಕ್ಷಸ ಸೈನಿಕರು ಶಿಬಿರಕ್ಕೆ ನುಗ್ಗಿ ಮಿತ್ರಸೈನ್ಯವನ್ನೂ ರಾಮನನ್ನೂ ಕೊಂದುಬಿಟ್ಟರೆಂದು ನಿಶ್ಚಯವಾಗಿಯೂ ಹೇಳುವನು. ರಾಕ್ಷಸನು ನನ್ನನ್ನು ಅಪಹರಿಸಿ ಕೊಂಡುಹೋದ ವಾರ್ತೆಯನ್ನೂ ಹೇಳುವನು. ನೀನು ಮಲಗಿದ್ದ ಸಮಯದಲ್ಲಿ ರಾಕ್ಷಸರಿಂದ ಹತನಾದುದನ್ನೂ–ನಾನು ರಾಕ್ಷಸನ ಮನೆಗೆ ಸೆಳೆದೊಯ್ಯಲ್ಪಟ್ಟುದನ್ನೂ ಕೇಳಿ ಕೌಸಲ್ಯೆಯ ಹೃದಯವು ಸೀಳಿಹೋಗುವುದು. ಅವಳು ಖಂಡಿತವಾಗಿಯೂ ಬದುಕಿರುವುದಿಲ್ಲ.

ಅಯ್ಯೋ! ಅನಾರ್ಯಳಾದ ನನ್ನ ಸಲುವಾಗಿ ನಿಷ್ಪಾಪನಾದ, ರಾಜಪುತ್ರನಾದ, ವೀರ್ಯವಂತನಾದ ಶ್ರೀರಾಮನು ಸಮುದ್ರವನ್ನೇ ದಾಟಿಬಂದು ಹಸುವಿನ ಗೊರಸು ಮುಳುಗುವಷ್ಟು ನೀರಿರುವ ಗುಣಿಯಲ್ಲಿ ಮುಳುಗಿ ಸತ್ತು ಹೋದನೇ? ಅಯ್ಯೋ! ಎಂತಹ ದುರ್ವಿಧಿಯಿದು! ಅಯ್ಯೋ! ದಶರಥನ

ಪುತ್ರನಾದ ಶ್ರೀರಾಮನು ಸ್ವಕುಲಕಲಂಕಿನಿಯಾದ ನನ್ನನ್ನು ಮೋಹದಿಂದ ಮದುವೆಯಾದನು. ಅಂತಹ ಪತ್ನಿಯೇ ಈಗ ಶ್ರೀರಾಮನಿಗೆ ಮೃತ್ಯು ಸ್ವರೂಪಳಾದಳಲ್ಲವೇ? ಅಯ್ಯೋ! ಈ ದುಃಖವನ್ನು ನಾನು ಹೇಗೆ ತಾನೇ ಸಹಿಸಲಿ? ಹಿಂದಿನ ಜನ್ಮದಲ್ಲಿ ಕನ್ಯಾದಾನವೇ ಮೊದಲಾದ ಉತ್ತಮದಾನ ಗಳನ್ನು ಅತಿಥಿಗಳಿಗೆ ಕೊಡುವಾಗ ನಿಶ್ಚಯವಾಗಿಯೂ ನಾನು ನಿನ್ನನ್ನು ತಡೆದುಬಿಟ್ಟಿರಬಹುದು. ಏಕೆಂದರೆ : ನಾನೀಗ ಸಮಸ್ತರಾದ ಅತಿಥಿಗಳಿಗೂ ಪರಮಪ್ರಿಯನಾದ, ಅತಿಥಿಗಳನ್ನು ಯಾವಾಗಲೂ ಸತ್ಕರಿಸುವ ಸ್ವಭಾವವುಳ್ಳ ಶ್ರೀರಾಮನಿಗೆ ಭಾರ್ಯೆಯಾಗಿದ್ದರೂ ಸುಖ-ಭೋಗಗಳನ್ನು ಅನುಭವಿಸ ಬೇಕಾಗಿರುವ ಈ ಸಮಯದಲ್ಲಿ ಪತಿಯಿಂದ ವಿಹೀನಳಾಗಿ ಶೋಕಪಡು ತ್ತಿರುವೆನಲ್ಲವೇ?

ಸಾಧು ಪಾತಯ ಮಾಂ ಕ್ಷಿಪ್ರಂ ರಾಮಸ್ಯೋಪರಿ ರಾವಣ ।
ಸಮಾನಯ ಪತಿಂ ಪತ್ನ್ಯಾ ಕುರು ಕಲ್ಯಾಣಮುತ್ತಮಮ್ ॥೩೧॥

ರಾವಣ! ಒಳ್ಳೆಯದು. ಒಳ್ಳೆಯ ಕಾರ್ಯವನ್ನೇ ಮಾಡಿರುವೆ. ಈಗ ನೀನು ನನ್ನನ್ನೂ ಶ್ರೀರಾಮನ ಶವದ ಮೇಲಿರಿಸಿಬಿಡು. ಹೀಗೆ ಮಾಡಿ ಪತಿಯು ಪತ್ನಿಯೊಡನೆ ಸೇರುವಂತೆ ಮಾಡು. ಇದು ನಿಶ್ಚಯವಾಗಿಯೂ ಮಂಗಳಕರವಾದ ಕಾರ್ಯವಾಗಿದೆ. ಅವಶ್ಯವಾಗಿ ನೀನೀ ಕಾರ್ಯವನ್ನು ಈಗಲೇ ಮಾಡಿಬಿಡು.

ಶಿರಸಾ ಮೇ ಶಿರಶ್ಚಾಸ್ಯ ಕಾಯಂ ಕಾಯೇನ ಯೋಜಯ ।
ರಾವಣಾನುಗಮಿಷ್ಯಾಮಿ ಗತಿಂ ಭರ್ತುರ್ಮಹಾತ್ಮನಃ ।
ಮುಹೂರ್ತಮಪಿ ನೇಚ್ಛಾಮಿ ಜೀವಿತುಂ ಪಾಪಜೀವಿತಾ ॥೩೨॥

ದಶಮುಖನೇ! ನನ್ನ ಶಿರಸ್ಸನ್ನು ನನ್ನ ಪತಿಯ ಶಿರಸ್ಸಿನೊಡನೆ ಸೇರಿಸು. ನನ್ನ ಶರೀರವನ್ನು ನನ್ನ ಪತಿಯ ಶರೀರದೊಡನೆ ಜೋಡಿಸು. ಮಹಾತ್ಮನಾದ ನನ್ನ ಪತಿಯು ಹಿಡಿದುಹೋದ ಮಾರ್ಗವನ್ನೇ ನಾನೂ ಹಿಡಿದು ಹೋಗುತ್ತೇನೆ. ಈ ಪಾಪಜೀವನವನ್ನು ಹೊರೆಯುತ್ತಾ ಮುಹೂರ್ತಮಾತ್ರವೂ ಜೀವಿಸಿರಲು ಬಯಸುವುದಿಲ್ಲ."

ಹೀಗೆ ದುಃಖದಿಂದ ಸಂತಪಿಸುತ್ತಿದ್ದ ವಿಶಾಲಾಕ್ಷಿಯಾದ ಜಾನಕಿಯು ಪತಿಯ ಶಿರಸ್ಸನ್ನೂ ಧನುಸ್ಸನ್ನೂ ಪುನಃ ಪುನಃ ನೋಡುತ್ತಾ ಗೋಳಿಡು ತ್ತಿದ್ದಳು. ಸೀತಾದೇವಿಯು ಹೀಗೆ ವಿಲಪಿಸುತ್ತಿರುವಾಗ ಸೈನ್ಯದಲ್ಲಿದ್ದ ರಾಕ್ಷಸ

ನೊಬ್ಬನು ಕೈಮುಗಿದುಕೊಂಡು ರಾವಣನ ಸಮೀಪಕ್ಕೆ ಬಂದನು. 'ಆರ್ಯಪುತ್ರನಾದ ರಾವಣಮಹಾರಾಜನಿಗೆ ಜಯವಾಗಲಿ'–ಎಂದೆನ್ನುತ್ತಾ ರಾವಣನನ್ನು ಅಭಿವಾದನದ ಮೂಲಕವಾಗಿ ಪ್ರಸನ್ನಗೊಳಿಸುತ್ತಾ ಹೇಳಿದನು:

"ಮಹಾರಾಜ! ಸೇನಾಪತಿಯಾದ ಪ್ರಹಸ್ತನು ಆಗಮಿಸಿದ್ದಾನೆ. ಸಮಸ್ತರಾದ ಮಂತ್ರಿಗಳೊಡನೆ ನಿನ್ನ ಸೇವೆಗೆ ಸಿದ್ಧನಾಗಿದ್ದಾನೆ. ಅವನು ತಮ್ಮನ್ನು ಸಂದರ್ಶಿಸಲು ಬಯಸಿದ್ದಾನೆ. ನನ್ನನ್ನಿಲ್ಲಿಗೆ ಕಳುಹಿಸಿದ್ದಾನೆ. ಕ್ಷಮಾಶೀಲನೇ! ಮಹಾರಾಜ! ನಿಶ್ಚಯವಾಗಿಯೂ ಯಾವುದೋ ಒಂದು ಮಹತ್ತ್ವಪೂರ್ಣವಾದ ರಾಜಕಾರ್ಯವಿರಬೇಕು. ಆದುದರಿಂದ ನೀನು ಅವರನ್ನು ನೋಡುವುದು ಉಚಿತವಾಗಿದೆ."

ರಾಕ್ಷಸಸೈನಿಕನು ಹೇಳಿದ ಮಾತನ್ನು ಕೇಳಿ ದಶಗ್ರೀವನು ಅಶೋಕವನವನ್ನು ಬಿಟ್ಟು ಮಂತ್ರಿಗಳನ್ನು ನೋಡುವ ಸಲುವಾಗಿ ರಾಜಭವನಕ್ಕೆ ತೆರಳಿದನು.

ಸಭೆಯನ್ನು ಪ್ರವೇಶಿಸಿದೊಡನೆಯೇ ತಾನು ಮಾಡಿರುವ ಕಾರ್ಯಗಳೆಲ್ಲವೂ ಸಮರ್ಪಕವಾಗಿರುವುದೆಂದು ಮಂತ್ರಿಗಳೊಡನೆ ಸಮರ್ಥಿಸಿಕೊಂಡನು. ಶ್ರೀರಾಮನ ಪರಾಕ್ರಮವನ್ನು ಗೂಢಚಾರರ ಮೂಲಕ ಚೆನ್ನಾಗಿ ತಿಳಿದಿದ್ದ ರಾವಣನು ಮುಂದಿನ ಕಾರ್ಯವನ್ನು ವ್ಯವಸ್ಥೆಗೊಳಿಸಿದನು.

ಅನ್ತರ್ಧಾನಂ ತು ತಚ್ಛೀರ್ಷಂ ತಚ್ಚ ಕಾರ್ಮುಕಮುತ್ತಮಮ್ ।
ಜಗಾಮ ರಾವಣಸ್ಯೈವ ನಿರ್ಯಾಣಸಮನನ್ತರಮ್ ॥೪೦॥

ರಾವಣನು ಅಶೋಕವನದಿಂದ ಹೊರಟೊಡನೆಯೇ ಶ್ರೀರಾಮನ ತಲೆಯೂ ಮತ್ತು ಉತ್ತಮೋತ್ತಮವಾಗಿದ್ದ ಧನುಸ್ಸೂ ಅದೃಶ್ಯವಾದುವು.

ರಾಕ್ಷಸೇಂದ್ರನಾದ ರಾವಣನು ಭಯಂಕರಪರಾಕ್ರಮಿಗಳಾದ ಮಂತ್ರಿಗಳೊಡನೆ ಕುಳಿತು ಶ್ರೀರಾಮನಿಗೆ ಪ್ರತಿಯಾಗಿ ಮಾಡಬೇಕಾದ ತತ್ಕಾಲೋಚಿತವಾದ ಕಾರ್ಯವನ್ನು ನಿರ್ಧರಿಸಿದನು. ತನ್ನ ಸಮೀಪದಲ್ಲಿಯೇ ಇದ್ದ ಹಿತೈಷಿಗಳಾದ ಸೇನಾಪತಿಗಳೊಡನೆ ಸಮಯೋಚಿತವಾದ ಈ ಮಾತನ್ನು ಹೇಳಿದನು :

"ನೀವೀಗಲೇ ವಾದನದಂಡದಿಂದ ರಣಭೇರಿಯನ್ನು ಬಾರಿಸಿ ಸಮಸ್ತ

ಸೈನಿಕರನ್ನೂ ಒಂದೆಡೆಯಲ್ಲಿ ಸೇರಿಸಿರಿ. ಆದರೆ ಕಾರಣವನ್ನು ಮಾತ್ರ ಹೇಳದಿರಿ.”

ರಾವಣನ ಆ ಮಾತನ್ನು ಕೇಳಿ ಮಂತ್ರಿ-ಸೇನಾಪತಿಗಳೆಲ್ಲರೂ ಹಾಗೆಯೇ ಆಗಲೆಂದು ಹೇಳಿ ಭೇರೀನಿನಾದದಿಂದ ಕರೆಯಿತ್ತು ಎಲ್ಲ ಸೈನಿಕರನ್ನೂ ಒಂದೆಡೆಯಲ್ಲಿ ಸೇರಿಸಿದರು. ಬಳಿಕ ಯುದ್ಧಾಕಾಂಕ್ಷಿಯಾದ ರಾವಣನಿಗೆ ಆ ವಿಷಯವನ್ನು ತಿಳಿಯಪಡಿಸಿದರು.

ಃ೨ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೩೩ನೆಯ ಸರ್ಗ

ಸರಮೆಯು ಸೀತೆಯನ್ನು ಸಂತೈಸಿ ಎಲ್ಲವೂ ರಾವಣನ ಮಾಯೆಯೆಂದು ಸಮಾಧಾನ ಹೇಳಿದುದು : ಶ್ರೀರಾಮನು ಬಂದಿರುವನೆಂಬ ಶುಭಸಮಾಚಾರವನ್ನೂ ಹೇಳಿ ಶ್ರೀರಾಮನೇ ಜಯಿಸುವನೆಂಬ ಬಗೆಗೆ ಸೀತೆಯಲ್ಲಿ ವಿಶ್ವಾಸವನ್ನು ಹುಟ್ಟಿಸಿದುದು

ಸೀತಾಂ ತು ಮೋಹಿತಾಂ ದೃಷ್ಟ್ವಾ ಸರಮಾ ನಾಮ ರಾಕ್ಷಸೀ ।
ಆಸಸಾದಾಥ ವೈದೇಹೀಂ ಪ್ರಿಯಾಂ ಪ್ರಣಯಿನೀಂ ಸಖೀಮ್ ॥೧॥

ಸೀತೆಯು ವಿಮೋಹಿತಳಾಗಿರುವುದನ್ನು ಕಂಡು ಸರಮಾ ಎಂಬ ಹೆಸರಿನ ರಾಕ್ಷಸಿಯು–ತನ್ನ ಪ್ರೀತಿಯ ಗೆಳತಿಯಾದ ಸೀತೆಯ ಬಳಿಗೆ ಬಂದಳು.

ರಾಕ್ಷಸೇಂದ್ರನಾದ ರಾವಣನಿಂದ ವಿಮೋಹಗೊಳಿಸಲ್ಪಟ್ಟು ಅತ್ಯಂತ ದುಃಖಿತೆಯಾಗಿದ್ದ ಸೀತೆಯನ್ನು ಮೃದುಭಾಷಿಣಿಯಾದ ಆಕೆಯು ಸಂತೈಸ ತೊಡಗಿದಳು. ಸರಮೆಯು ರಾವಣನ ಆಜ್ಞೆಯಂತೆ ಸೀತೆಯ ರಕ್ಷಣೆಮಾಡು ತ್ತಿದ್ದಳು. ಆದರೆ ಅವಳು ರಕ್ಷಕಳು ಮಾತ್ರವೇ ಆಗಿರಲಿಲ್ಲ. ತಾನು ರಕ್ಷಿಸುತ್ತಿದ್ದ ಸೀತೆಯೊಡನೆ ಮೈತ್ರಿಯನ್ನೂ ಬೆಳೆಸಿಕೊಂಡಿದ್ದಳು. ಸರಮೆಯು ದಯಾಪರಳೂ ದೃಢವ್ರತಳೂ ಆಗಿದ್ದಳು. ಪತಿಯ ಮರಣವಾರ್ತೆಯನ್ನು ಕೇಳಿ ಬುದ್ಧಿಗೆಟ್ಟು ವಿಲಪಿಸುತ್ತಿದ್ದ ಸೀತಾದೇವಿಯನ್ನು ಸರಮೆಯು ನೋಡಿ ದಳು. ಆಯಾಸಗೊಂಡು ನೆಲದ ಮೇಲೆ ಬಿದ್ದು ಹೊರಳಾಡಿ ಧೂಳಿನಿಂದ ಧೂಸರಿತವಾಗುವ ಕುದುರೆಯಂತೆ–ಸೀತೆಯು ದುಃಖದಿಂದ ನೆಲದ ಮೇಲೆ

ಬಿದ್ದು ಹೊರಳಾಡುತ್ತಾ ಧೂಳಿನಿಂದ ಧೂಸರಿತಳಾಗಿದ್ದಳು. ಸಖೀಸ್ನೇಹ ದಿಂದ ಪ್ರೇರಿತಳಾದ ಸರಮೆಯು ಸುವ್ರತಳಾದ ಸೀತೆಯನ್ನು ಸಂತೈಸುತ್ತಾ ಹೇಳಿದಳು:

"ವೈದೇಹಿ! ಧೈರ್ಯವನ್ನು ತಂದುಕೊ. ನಿನ್ನ ಮನಸ್ಸಿಗೆ ಯಾವ ವಿಧವಾದ ವ್ಯಥೆಯೂ ಆಗದಿರಲಿ. ಭೀರುವೇ! ರಾವಣನು ನಿನಗೆ ಹೇಳಿದ್ದು ಮತ್ತು ನೀನು ರಾವಣನಿಗೆ ಉತ್ತರಿಸಿದ್ದು –ಈ ಎಲ್ಲವನ್ನೂ ಸಖೀಸ್ನೇಹದಿಂದ ಪ್ರೇರಿತಳಾದ ನಾನು ಕೇಳಿಸಿಕೊಂಡಿದ್ದೇನೆ. ನಿನ್ನ ಸಲುವಾಗಿ ನಾನು ರಾವಣನಿಗೆ ಸ್ವಲ್ಪವೂ ಭಯಪಡದೇ ಅಶೋಕವನದಲ್ಲಿನ ನಿರ್ಜನಸ್ಥಾನವೊಂದರಲ್ಲಿ ಅಡಗಿಕೊಂಡಿದ್ದು ನಿಮ್ಮಿಬ್ಬರ ಮಾತುಗಳನ್ನೂ ಕೇಳುತ್ತಿದ್ದೆನು. ನನಗೆ ರಾವಣನಿಂದ ಯಾವ ಭಯವೂ ಇಲ್ಲ. ಅವನು ಇದ್ದಕ್ಕಿದ್ದಂತೆಯೇ ಗಾಬರಿಗೊಂಡು ಏಕೆ ಹೊರಟುಹೋದನೆಂಬುದನ್ನು ಕೂಡ ಅಲ್ಲಿಗೆ ಹೋಗಿ ತಿಳಿದು ಬಂದಿರುವೆನು.

ನ ಶಕ್ಯಂ ಸೌಪ್ತಿಕಂ ಕರ್ತುಂ ರಾಮಸ್ಯ ವಿದಿತಾತ್ಮನಃ ।
ವಧಶ್ಚ ಪುರುಷವ್ಯಾಘ್ರೇ ತಸ್ಮಿನ್ನೈವೋಪಪದ್ಯತೇ ॥೮॥

ಜನಕನಂದಿನಿಯೇ! ಶ್ರೀರಾಮನು ಆತ್ಮಜ್ಞಾನಿಯು. ಅಂತಹವನನ್ನು ಯಾವುದೇ ಕಾರಣದಿಂದಲೂ ನಿದ್ರೆಗೆ ವಶನನ್ನಾಗಿಸಲು ಯಾರಿಂದಲೂ ಸಾಧ್ಯವಿಲ್ಲ. ಪುರುಷಸಿಂಹನಾದ ಶ್ರೀರಾಮನ ವಿಷಯದಲ್ಲಿ 'ವಧೆ' ಎಂಬ ಪದವೇ ಸಂಘಟಿಸುವುದಿಲ್ಲ.

ಹಾಗೆಯೇ ವೃಕ್ಷಗಳನ್ನೇ ಕಿತ್ತು ಯುದ್ಧಮಾಡಲು ಸಮರ್ಥರಾದ ವಾನರರನ್ನೂ ಸಂಹರಿಸಲು ಶಕ್ಯವಿಲ್ಲ. ಮೇಲಾಗಿ ಅವರು ದೇವಶ್ರೇಷ್ಠನಾದ ಇಂದ್ರನಿಂದ ದೇವತೆಗಳು ರಕ್ಷಿಸಲ್ಪಡುತ್ತಿರುವಂತೆ ಶ್ರೀರಾಮನಿಂದ ರಕ್ಷಿಸಲ್ಪಡುತ್ತಿದ್ದಾರೆ.

ಸೀತೇ! ನಿನಗೂ ತಿಳಿದಿರುವಂತೆ ಶ್ರೀರಾಮನೇನೂ ಸಾಮಾನ್ಯನಲ್ಲ. ದುಂಡಾದ ಮತ್ತು ದೀರ್ಘವಾದ ತೋಳುಗಳುಳ್ಳವನು. ಮಹಾತೇಜಸ್ವಿಯು. ವಿಶಾಲವಾದ ವಕ್ಷಃಸ್ಥಳವುಳ್ಳವನು. ಪ್ರತಾಪಶಾಲಿಯು. ಶ್ರೇಷ್ಠನಾದ ಧನುರ್ಧರನು. ಒಳ್ಳೆಯ ಮೈಕಟ್ಟುಳ್ಳವನು. ಧರ್ಮಾತ್ಮನೆಂದು ಭೂಮಂಡಲದಲ್ಲಿ ವಿಖ್ಯಾತನಾದವನು. ಮಹಾಪರಾಕ್ರಮಿಯು. ಲಕ್ಷ್ಮಣ

ಸಹಾಯನಾದ ಅವನು ತನ್ನನ್ನು ರಕ್ಷಿಸಿಕೊಳ್ಳುವುದು ಮಾತ್ರವಲ್ಲದೇ ಇತರರನ್ನೂ ರಕ್ಷಿಸತಕ್ಕವನು. ನೀತಿಶಾಸ್ತ್ರವನ್ನು ತಿಳಿದವನು. ಸತ್ಕುಲಪ್ರಸೂತನು. ಅವನ ಬಲ-ಪೌರುಷಗಳು ಅಚಿಂತ್ಯವಾದುವು. ಸಮಗ್ರವಾದ ಶತ್ರುಸೈನ್ಯ ಸಮೂಹವನ್ನೇ ಸಂಹರಿಸುವ ಸಾಮರ್ಥ್ಯವುಳ್ಳವನು. ಅಂತಹ ಶತ್ರುಸೂದನನಾದ ಶ್ರೀರಾಮನು ಖಂಡಿತವಾಗಿಯೂ ಹತನಾಗಿಲ್ಲ. ಯೋಗ್ಯವಲ್ಲದ ಬುದ್ಧಿಯಿಂದ ಕಾರ್ಯಮಾಡುವ, ಸರ್ವಪ್ರಾಣಿಗಳಿಗೂ ವಿರೋಧಿಯಾದ, ಭಯಂಕರನಾದ, ಮಾಯಾವಿಯಾದ ರಾವಣನು ಶ್ರೀರಾಮನ ಶಿರಸ್ಸು ಮತ್ತು ಧನುಸ್ಸುಗಳ ರೂಪವಾದ ಮಾಯೆಯನ್ನು ನಿನ್ನ ಮೇಲೆ ಪ್ರಯೋಗಿಸಿದ್ದಾನೆ. ಶ್ರೀರಾಮನ ಶಿರಸ್ಸು ಮತ್ತು ಧನುಸ್ಸುಗಳು ಮಾಯಾ ಕಲ್ಪಿತವಾದುವುಗಳು. ನಿಜವಾದುವಲ್ಲ. ಪ್ರಿಯಸಖಿಯೇ! ನಿನ್ನ ಶೋಕದ ದಿವಸಗಳು ಕಳೆದುಹೋದುವು. ಸರ್ವಪ್ರಕಾರದಿಂದಲೂ ಮಂಗಳಕರವಾದ ದಿವಸಗಳು ಹತ್ತಿರಕ್ಕೆ ಬರುತ್ತಿವೆ. ನಿಶ್ಚಯವಾಗಿಯೂ ನಿನ್ನನ್ನು ಜಯ ಲಕ್ಷ್ಮಿಯು ಸೇವಿಸುತ್ತಾಳೆ. ನಿನಗೆ ಒಳ್ಳೆಯದಾಗುತ್ತದೆ. ಹೇಗೆಂಬುದನ್ನು ಹೇಳುವೆನು ಕೇಳು:

ಶ್ರೀರಾಮನು ವಾನರಸೈನ್ಯದೊಡನೆ ಸಮುದ್ರವನ್ನು ದಾಟಿ ಸಮುದ್ರದ ದಕ್ಷಿಣತೀರದಲ್ಲಿ ಬೀಡುಬಿಟ್ಟಿದ್ದಾನೆ. ನಾನೇ ಸ್ವತಃ ಲಕ್ಷ್ಮಣಸಹಿತನಾದ ಪೂರ್ಣಕಾಮನಾದ ಶ್ರೀರಾಮನನ್ನು ನೋಡಿದೆನು. ಅವನು ಸಮುದ್ರದ ತೀರದಲ್ಲಿ ಬೀಡುಬಿಟ್ಟಿರುವ ವಾನರಸೈನಿಕರೊಡನೆ ಸುರಕ್ಷಿತನಾಗಿದ್ದಾನೆ. ರಾವಣನಿಂದ ಕಳುಹಿಸಲ್ಪಟ್ಟಿದ್ದ ಶೀಘ್ರಗಾಮಿಗಳಾದ ಗೂಢಚಾರ ರಾಕ್ಷಸರು ರಾಘವನು ಸಮುದ್ರವನ್ನು ದಾಟಿ ಇಲ್ಲಿಗೆ ಬಂದಿರುವನೆಂಬ ವಾರ್ತೆಯನ್ನು ತಂದಿರುವರು. ಆ ಸಮಾಚಾರವನ್ನು ಕೇಳಿ ರಾಕ್ಷಸರ ಅಧಿಪತಿಯಾದ ರಾವಣನು ಮುಂದೇನು ಮಾಡಬೇಕೆಂಬುದರ ಬಗೆಗೆ ಎಲ್ಲ ಸಚಿವರೊಡನೆ ಮಂತ್ರಾಲೋಚನೆ ಮಾಡುತ್ತಿದ್ದಾನೆ.”

ಸರಮಾರಾಕ್ಷಸಿಯು ಹೀಗೆ ಹೇಳುತ್ತಿರುವಾಗಲೇ ಸೈನಿಕರು ಸರ್ವ ಪ್ರಯತ್ನದಿಂದ ಮಾಡಿದ ಭಯಂಕರವಾದ ಸಿಂಹನಾದವು ಕೇಳಿಸಿತು. ದಂಡದಿಂದ ಪ್ರಹರಿಸಲ್ಪಟ್ಟ ಭೇರಿವಾದ್ಯದ ಮಹಾಧ್ವನಿಯನ್ನು ಕೇಳಿ ಮಧುರ ಭಾಷಿಣಿಯಾದ ಸರಮೆಯು ಪುನಃ ಸೀತೆಗೆ ಹೇಳಿದಳು :

"ಭೀರುವೇ! ಭಯಂಕರವಾದ ಈ ಭೇರಿಯ ನಿನಾದವು ಯುದ್ಧಕ್ಕಾಗಿ ಮಾಡಿಕೊಳ್ಳುತ್ತಿರುವ ಸಿದ್ಧತೆಯನ್ನು ಸೂಚಿಸುತ್ತದೆ. ಮೇಘದ ಗರ್ಜನೆಗೆ ಅನುರೂಪವಾಗಿರುವ ಗಂಭೀರವಾದ ಈ ಭೇರೀನಿನಾದವನ್ನು ನೀನೂ ಕೇಳು ತ್ತಿರುವೆ. ಮದಿಸಿದ ಆನೆಗಳನ್ನು ಯುದ್ಧಕ್ಕೊಯ್ಯಲು ಸಿಂಗರಿಸುತ್ತಿದ್ದಾರೆ. ಕುದುರೆಗಳನ್ನು ರಥಗಳಿಗೆ ಹೂಡುತ್ತಿದ್ದಾರೆ. ಪ್ರಾಸಗಳನ್ನು ಹಿಡಿದ ಸಾವಿರಾರು ಕುದುರೇಸವಾರರು ಕಾಣಿಸಿಕೊಳ್ಳುತ್ತಿದ್ದಾರೆ. ಅಲ್ಲಲ್ಲಿ ಸನ್ನದ್ಧರಾದ ಸಾವಿರಾರು ಸೈನಿಕರು ನಿರ್ದಿಷ್ಟವಾದ ಸ್ಥಳಕ್ಕೆ ಬಂದು ಸೇರುತ್ತಿದ್ದಾರೆ. ವೇಗಯುಕ್ತವಾದ ಮತ್ತು ಭೋರ್ಗರೆಯುವ ಪ್ರವಾಹಗಳಿಂದ ಸಮುದ್ರವು ತುಂಬಿಹೋಗುವಂತೆ–ಅದ್ಭುತವಾಗಿ ಕಾಣುವ ಸೈನಿಕರಿಂದ ರಾಜಮಾರ್ಗ ಗಳು ತುಂಬಿಹೋಗುತ್ತಿವೆ. ರಾಕ್ಷಸೇಂದ್ರನ ಅನುಯಾಯಿಗಳಾದ ರಥಾಶ್ವ-ಗಜಸೈನಿಕರು ಹೊಳೆಯುತ್ತಿರುವ ಶಸ್ತ್ರಗಳ ಮೂಲಕವಾಗಿ, ಕವಚಗಳ ಮೂಲಕವಾಗಿ, ಗುರಾಣಿಗಳ ಮೂಲಕವಾಗಿ ಚಮ-ಚಮಕಿಸುವ ಪ್ರಭೆಯನ್ನು ಹೊರಸೂಸುತ್ತಿರುವುದನ್ನಾದರೂ ನೋಡು, ಮೈಥಿಲಿ! ಸಂತುಷ್ಟರಾಗಿರುವ ಮತ್ತು ವೇಗವಂತರಾಗಿರುವ ರಾಕ್ಷಸರಿಗೆ ಇದೊಂದು ಸಂಭ್ರಮವೇ ಆಗಿದೆ. ಬೇಸಿಗೆಯಲ್ಲಿ ಅರಣ್ಯವನ್ನು ದಹಿಸುವ ದಾವಾನಲದಂತೆಯೇ ಈ ರಾಕ್ಷಸರ ರೂಪು ಜಾಜ್ವಲ್ಯಮಾನವಾಗಿ ಕಾಣುತ್ತಿದೆ. ಮೈಥಿಲಿ! ಆನೆಗಳ ಮೇಲೆ ಬಾರಿಸುತ್ತಿರುವ ಘಂಟಾನಿನಾದವನ್ನು ಕೇಳು. ರಥಚಕ್ರಗಳ ಗಡ-ಗಡಾ ಶಬ್ದವನ್ನು ಲಾಲಿಸು. ಕುದುರೆಗಳು ಕೆನೆಯುತ್ತಿರುವ ಶಬ್ದವನ್ನೂ ಮತ್ತು ನಾನಾವಿಧವಾದ ರಣವಾದ್ಯಗಳ ಶಬ್ದಗಳನ್ನೂ ಆಲಿಸಿ ಕೇಳು. ಆಯುಧ ಗಳನ್ನೆತ್ತಿಕೊಂಡು ಹೋಗುತ್ತಿರುವ ರಾಕ್ಷಸೇಂದ್ರನ ಅನುಯಾಯಿಗಳಾದ ರಾಕ್ಷಸಸೈನಿಕರ ಸಂಭ್ರಮಯುಕ್ತವಾದ ಈ ಗಲಿಬಿಲಿಶಬ್ದವು ನಿಶ್ಚಯ ವಾಗಿಯೂ ರೋಮಾಂಚನವನ್ನುಂಟುಮಾಡುವುದಾಗಿದೆ.

ಸೀತೆ! ಈ ಸಮಯದಲ್ಲಿ ರಾಕ್ಷಸರಿಗೆ ಭಯವು ಸನ್ನಿಹಿತವಾಗಿದೆ. ಶೋಕವಿನಾಶಿನಿಯಾದ ಜಯಲಕ್ಷ್ಮಿಯು ನಿನ್ನನ್ನು ಸೇವಿಸುತ್ತಾಳೆ. ಇದು ನಿಶ್ಚಯ. ನಿನ್ನ ಪತಿಯಾದ, ಕಮಲಾಕ್ಷನಾದ ಶ್ರೀರಾಮನು ಕ್ರೋಧವನ್ನು ಜಯಿಸಿರತಕ್ಕವನು. ಅವನ ಪರಾಕ್ರಮವು ಅಚಿಂತ್ಯವಾದುದು. ಇಂದ್ರನು ದೈತ್ಯರನ್ನು ಪರಾಜಯಗೊಳಿಸಿದಂತೆ–ಶ್ರೀರಾಮನು ಯುದ್ಧದಲ್ಲಿ ರಾಕ್ಷಸರನ್ನು

ಪರಾಜಯಗೊಳಿಸಿ ರಾವಣನನ್ನು ಸಂಹರಿಸಿ ನಿನ್ನನ್ನು ಪಡೆಯುತ್ತಾನೆ. ಶತ್ರುಸೂದನನಾದ ಇಂದ್ರನು ಉಪೇಂದ್ರನೊಡನೆ ಶತ್ರುಗಳ ಮಧ್ಯದಲ್ಲಿ ತನ್ನ ಪರಾಕ್ರಮವನ್ನು ಪ್ರಕಟಪಡಿಸಿದಂತೆ–ನಿನ್ನ ಪತಿಯಾದ ಶ್ರೀರಾಮನು ಲಕ್ಷ್ಮಣನೊಡನೆ ರಾಕ್ಷಸರ ಮಧ್ಯದಲ್ಲಿ ತನ್ನ ಬಲ-ಪರಾಕ್ರಮಗಳನ್ನು ಪ್ರದರ್ಶಿಸುತ್ತಾನೆ. ಶತ್ರುವಿನ ಸಂಹಾರವಾದೊಡನೆಯೇ ಇಲ್ಲಿಗೆ ಆಗಮಿಸುವ ಶ್ರೀರಾಮಚಂದ್ರನ ತೊಡೆಯಲ್ಲಿ ಸಾಧ್ವಿಯಾದ ಮತ್ತು ಪ್ರಾಪ್ತಮನೋರಥಳಾದ ನೀನು ಕುಳಿತುಕೊಳ್ಳುವುದನ್ನು ನಾನು ನೋಡುವೆನು.

ಶೋಭನಳೇ! ವಿಶಾಲವಕ್ಷನಾದ ಶ್ರೀರಾಮನು ಇಲ್ಲಿಗೆ ಬಂದೊಡನೆಯೇ ಅವನನ್ನು ತಬ್ಬಿಕೊಂಡು ಅವನ ವಕ್ಷಃಸ್ಥಳದ ಮೇಲೆ ನೀನು ಆನಂದ ಬಾಷ್ಪಗಳನ್ನು ಸುರಿಸುವೆ. ಅನೇಕ ಮಾಸಗಳಿಂದ ನಿನ್ನ ತಲೆಗೂದಲು ಜಡೆಗಟ್ಟಿಬಿಟ್ಟಿದೆ. ಕಟಿಪ್ರದೇಶದವರೆಗೂ ನೇತುಬಿದ್ದಿರುವ ಆ ನಿನ್ನ ಜಡೆಗಟ್ಟಿರುವ ಕೂದಲನ್ನು ಮಹಾಬಲನಾದ ಶ್ರೀರಾಮನು ಬಹಳ ಬೇಗ ಬಿಡಿಸಿ ಮುಡಿಯನ್ನು ಕಟ್ಟುತ್ತಾನೆ. ಆಗತಾನೇ ಉದಯಿಸಿದ ಪೂರ್ಣಚಂದ್ರನಂತಿರುವ ನಿನ್ನ ಪತಿಯ ಮುಖವನ್ನು ನೋಡಿ ಹೆಣ್ಣುಹಾವು ಪೊರೆಬಿಡುವಂತೆ–ನೀನು ಆನಂದಬಾಷ್ಪಗಳನ್ನು ಸುರಿಸುವೆ. ಬಹಳ ಶೀಘ್ರದಲ್ಲಿಯೇ ಸುಖಾರ್ಹನಾದ ಶ್ರೀರಾಮನು ಯುದ್ಧದಲ್ಲಿ ರಾವಣನನ್ನು ಸಂಹರಿಸಿ ಪ್ರಿಯೆಯಾದ ನಿನ್ನೊಡನೆ ಮನೋವಾಂಛಿತವಾದ ಸುಖವನ್ನು ಹೊಂದುತ್ತಾನೆ. ಮಳೆ ಬಿದ್ದ ಭೂಮಿಯು ಸಸ್ಯಶಾಲಿನಿಯಾಗಿ ಕಂಗೊಳಿಸುವಂತೆ–ಮಹಾತ್ಮನಾದ ಶ್ರೀರಾಮನಿಂದ ಸಮ್ಮಾನಿತಳಾಗುವ ನೀನು ಆನಂದಪಡುವೆ.

ಗಿರಿವರಮಭಿತೋಽನುವರ್ತಮಾನೋ
ಹಯ ಇವ ಮಣ್ಡಲಮಾಶು ಯಃ ಕರೋತಿ ।
ತಮಿಹ ಶರಣಮಭ್ಯುಪೇಹಿ ದೇವಂ
ದಿವಸಕರಂ ಪ್ರಭವೋ ಹ್ಯಯಂ ಪ್ರಜಾನಾಮ್ ॥೩೮॥

ಪರ್ವತಗಳಲ್ಲಿ ಶ್ರೇಷ್ಠವಾದ ಮೇರುಪರ್ವತದ ಸುತ್ತಲೂ ಕುದುರೆಯಂತೆ ಮಂಡಲಾಕಾರವಾಗಿ ಅತ್ಯಂತಶೀಘ್ರವಾಗಿ ಸುತ್ತುವ, ನಿನ್ನ ವಂಶಕ್ಕೆ ಅಧಿದೇವನಾದ ಸೂರ್ಯದೇವನನ್ನು ಶರಣಹೊಂದು. ದೇವಿ! ಏಕೆಂದರೆ :

ಆ ಸೂರ್ಯದೇವನೇ ಪ್ರಜೆಗಳ ದುಃಖವನ್ನು ದೂರಮಾಡಲು ಮತ್ತು ಸುಖವನ್ನುಂಟುಮಾಡಲು ಸಮರ್ಥನು."

೩೩ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೩೪ನೆಯ ಸರ್ಗ

ಸೀತೆಯ ಇಷ್ಟದಂತೆ ಸರಮೆಯು ಮಂತ್ರಿಗಳೊಡನೆ ರಾವಣನು ಚರ್ಚಿಸಿ ನಿರ್ಧರಿಸಿದ ವಿಷಯವನ್ನು ಹೇಳಿದುದು

ಅಥ ತಾಂ ಜಾತಸಂತಾಪಾಂ ತೇನ ವಾಕ್ಯೇನ ಮೋಹಿತಾಮ್ ।
ಸರಮಾ ಹ್ಲಾದಯಾಮಾಸ ಮಹೀಂ ದಗ್ಧಾಮಿವಾಮ್ಭಸಾ ॥೧॥

ರಾವಣನು ಹೇಳಿದ ಮಾತುಗಳಿಂದ ವಿಮೋಹಿತಳಾಗಿ ಅದರಿಂದ ಬಹಳವಾಗಿ ಪರಿತಪಿಸುತ್ತಿದ್ದ ಸೀತೆಯನ್ನು ಸರಮೆಯು-ಗ್ರೀಷ್ಮರ್ತುವಿನಲ್ಲಿ ಒಣಗಿ ಸುಟ್ಟುಹೋದ ಭೂಮಿಯನ್ನು ಮಳೆಗಾಲದ ಮಳೆಯು ನೀರುಣಿಸಿ ತಣಿಸುವಂತೆ-ತನ್ನ ಸುಮಧುರವಾದ ವಾಣಿಯಿಂದ ಆನಂದಗೊಳಿಸಿದಳು.

ಅನಂತರ ಯಾವ ಕಾಲದಲ್ಲಿ ಯಾವ ಕಾರ್ಯವನ್ನು ಮಾಡಬೇಕೆಂಬ ತತ್ತ್ವವನ್ನು ತಿಳಿದಿದ್ದ, ಮುಗುಳ್ನಗೆಯೊಡನೆ ಮಾತನಾಡುವ ಸ್ವಭಾವದಿಂದ ಕೂಡಿದ್ದ, ಸಖಿಯಾದ ಸರಮೆಯು ಪ್ರಿಯಸಖಿಯಾದ ಸೀತೆಗೆ ಹಿತವನ್ನುಂಟು ಮಾಡುವ ಆಶಯದಿಂದ ಸಮಯೋಚಿತವಾದ ಈ ಮಾತನ್ನು ಹೇಳಿದಳು:

"ಕಾಡಿಗೆಯಂತೆ ಕಪ್ಪಾದ ಕಣ್ಣುಗಳಿಂದ ಕಂಗೊಳಿಸುತ್ತಿರುವವಳೇ! ಸೀತಾದೇವೀ! ಈಗಲೇ ರಾಮನ ಬಳಿಗೆ ಹೋಗಿ ನಿನ್ನ ಸಂದೇಶವನ್ನೂ ಮತ್ತು ನೀನು ಕುಶಲಳಾಗಿರುವ ಸಮಾಚಾರವನ್ನೂ ಅವನಿಗೆ ತಿಳಿಸಿ ಯಾರಿಗೂ ಕಾಣದಂತೆ ಹಿಂದಿರುಗಬೇಕೆನ್ನುವ ಉತ್ಸಾಹವು ನನಗಿದೆ. ನಿರಾಧಾರವಾದ ಆಕಾಶದಲ್ಲಿ ತೀವ್ರಗತಿಯಿಂದ ಹೋಗುತ್ತಿರುವ ನನ್ನನ್ನು ಅನುಸರಿಸಿ ಬರಲು ವಾಯುವಾಗಲೀ, ಗರುಡನಾಗಲೀ ಸಮರ್ಥರಲ್ಲ."

ಹೀಗೆ ಹೇಳಿದ ಸರಮೆಗೆ ಈ ಹಿಂದೆತಾನೆ ಶೋಕಾಭಿಭೂತವಾದ ಮಾತುಗಳಿಂದ ಸಂಭಾಷಿಸುತ್ತಿದ್ದ ಸೀತಾದೇವಿಯು ಸ್ನೇಹಯುಕ್ತವಾದ ಮತ್ತು ಸುಮಧುರವಾದ ಮಾತಿನಿಂದ ಹೇಳಿದಳು :

"ಸರಮೇ! ನೀನು ಆಕಾಶಕ್ಕೂ ಹೋಗಬಲ್ಲೆ. ರಸಾತಲಕ್ಕೂ ಹೋಗಲು ಸಮರ್ಥಳಾಗಿರುವೆ. ಆದರೆ ನನ್ನ ಸಲುವಾಗಿ ಈಗ ಯಾವ ಕರ್ತವ್ಯವನ್ನು ನೀನು ಮಾಡಬೇಕಾಗಿರುವುದೋ ಅದನ್ನು ಕೇಳು. ನೀನು ನನಗೆ ಪ್ರಿಯವಾಗುವ ಕಾರ್ಯವನ್ನು ಮಾಡಲು ಬಯಸುವೆಯಾದರೆ–ಹಾಗೆ ಮಾಡಬೇಕೆಂಬುದರಲ್ಲಿ ನಿನ್ನ ಬುದ್ಧಿಯು ಸ್ಥಿರವಾಗಿರುವುದಾದರೆ–ರಾವಣನು ಇಲ್ಲಿಂದ ಹೊರಟುಹೋದನಂತರ ಏನು ಮಾಡುತ್ತಿರುವನೆಂಬುದನ್ನು ತಿಳಿದು ಆ ವಿಷಯವನ್ನು ನನಗೆ ಹೇಳಬೇಕು. ರಾವಣನ ಮುಂದಿನ ಕಾರ್ಯವೇನೆಂಬುದನ್ನು ನಾನು ತಿಳಿಯಲು ಬಯಸುತ್ತೇನೆ. ಶತ್ರುಗಳನ್ನು ಕೂಗಿಕೊಳ್ಳುವಂತೆ ಮಾಡುವ ಸಾಮರ್ಥ್ಯವುಳ್ಳ ಕ್ರೂರಿಯಾದ ರಾವಣನು ಮಾಯಾಬಲದಿಂದಲೂ ಸಂಪನ್ನನಾಗಿದ್ದಾನೆ. ವಾರುಣೀಮದ್ಯವು ಕುಡಿದ ಮಾತ್ರದಿಂದಲೇ ಮನುಷ್ಯನನ್ನು ವಿಮೋಹಗೊಳಿಸುವಂತೆ–ದುಷ್ಟಾತ್ಮನಾದ ರಾವಣನು ಮಾಯಾವಿದ್ಯೆಯ ಪ್ರಭಾವದಿಂದ ನನ್ನನ್ನು ಕ್ಷಣಮಾತ್ರದಲ್ಲಿ ವಿಮೋಹಗೊಳಿಸಿದನು. ನನ್ನನ್ನು ರಕ್ಷಿಸುತ್ತಿರುವ ಭಯಂಕರಾಕಾರದ ಈ ರಾಕ್ಷಸಿಯರ ಮೂಲಕವಾಗಿ ರಾವಣನು ಅನುದಿನವೂ ನನ್ನನ್ನು ಭಯಗೊಳಿಸುತ್ತಿದ್ದಾನೆ ಮತ್ತು ಹಲವಾರು ಬಾರಿ ಗದರಿಸುತ್ತಿದ್ದಾನೆ. ಸಖಿಯೇ! ಇದರಿಂದಾಗಿ ನಾನು ಉದ್ವಿಗ್ನಳಾಗಿದ್ದೇನೆ. ನನಗೆ ಮನಸ್ಸಿನಲ್ಲಿ ಸ್ವಾಸ್ಥ್ಯವೇ ಇಲ್ಲವಾಗಿದೆ. ನಾನು ಅಶೋಕವನದಲ್ಲಿಯೇ ಇದ್ದರೂ ಅವನ ಭಯ ದಿಂದಾಗಿ ಶೋಕದಿಂದ ಉದ್ವಿಗ್ನಳಾಗಿದ್ದೇನೆ.

ಮಂತ್ರಿಗಳೊಡನೆ ಅವನ ಮಾತುಕತೆಗಳು ಮುಂದುವರಿಯುತ್ತಿದ್ದರೆ ಅಥವಾ ಅವರು ಯಾವುದಾದರೂ ನಿಶ್ಚಯಕ್ಕೆ ಬಂದಿದ್ದರೆ–ಅವೆಲ್ಲವನ್ನೂ ನೀನು ನನಗೆ ತಪ್ಪದೇ ಹೇಳಬೇಕು. ಇದೇ ನೀನು ನನಗೆ ಮಾಡಬೇಕಾಗಿರುವ ಪರಮಾನುಗ್ರಹವು."

ಸೀತೆಯು ಹೀಗೆ ಹೇಳಲು ಮಧುರಭಾಷಿಣಿಯಾದ ಸರಮೆಯು ಕಣ್ಣೀರಿನಿಂದ ತೋಯ್ದುಹೋಗಿದ್ದ ಸೀತೆಯ ಮುಖವನ್ನು ತನ್ನ ಕೈಯಿಂದ ಒರೆಸಿ ಸಂತೈಸುತ್ತಾ ಹೇಳಿದಳು :

"ಜನಕನಂದಿನಿ! ನಿನ್ನ ಅಭಿಪ್ರಾಯವು ಹೀಗಿರುವುದಾದರೆ ನಾನೀಗಲೇ

ರಾವಣನ ಸಭಾಭವನಕ್ಕೆ ಹೋಗಿ ಶತ್ರುವಿನ ಅಭಿಪ್ರಾಯವೇನೆಂಬುದನ್ನು ತಿಳಿದುಕೊಂಡು ಈಗಲೇ ಬಂದುಬಿಡುತ್ತೇನೆ."

ಸರಮೆಯು ಹೀಗೆ ಹೇಳಿ ರಾವಣರಾಕ್ಷಸನ ಬಳಿಗೆ ಹೋಗಿ ಮಂತ್ರಿಗಳಿಂದ ಕೂಡಿದ್ದ ರಾವಣೇಶ್ವರನು ಹೇಳಿದ ಎಲ್ಲ ಮಾತುಗಳನ್ನೂ ಕೇಳಿಸಿಕೊಂಡಳು. ದುರಾತ್ಮನಾದ ಆತನ ನಿರ್ಧಾರವೇನೆಂಬುದನ್ನು ಕೇಳಿ ಆ ನಿಶ್ಚಯವನ್ನು ಸಂಪೂರ್ಣವಾಗಿ ಮನವರಿಕೆ ಮಾಡಿಕೊಂಡ ಸರಮೆಯು ಅಶೋಕವನಕ್ಕೆ ಶೀಘ್ರವಾಗಿಯೇ ಹಿಂದಿರುಗಿದಳು. ಅಶೋಕವನವನ್ನು ಪ್ರವೇಶಿಸುತ್ತಲೇ ಸರಮೆಯು ಸೀತೆಯನ್ನು ನೋಡಿದಳು. ಕೈಯ್ಯಲ್ಲಿದ್ದ ಕಮಲವನ್ನು ಕಳೆದುಕೊಂಡ ಲಕ್ಷ್ಮಿಯು ಕಮಲಕ್ಕಾಗಿ ಪ್ರತೀಕ್ಷಿಸುವಂತೆ ಸೀತೆಯು ಸರಮೆಯು ಬರುವುದನ್ನೇ ಕಾಯುತ್ತಿದ್ದಳು. ಹೇಳಿ ಹೋಗಿದ್ದಂತೆಯೇ ಪುನಃ ಆಗಮಿಸಿದ ಪ್ರಿಯಭಾಷಿಣಿಯಾದ ಸರಮೆಯನ್ನು ಸೀತೆಯು ಪ್ರೇಮಪೂರ್ವಕವಾಗಿ ಆಲಿಂಗಿಸಿಕೊಂಡು ಅವಳು ಕುಳಿತು ಕೊಳ್ಳಲು ತಾನೇ ಒಂದು ಆಸನವನ್ನು ಕೊಟ್ಟು ಹೇಳಿದಳು :

"ಸಖಿ! ನೀನಿಲ್ಲಿ ಸುಖವಾಗಿ ಕುಳಿತುಕೊ. ಕ್ರೂರನಾದ, ದುರಾತ್ಮನಾದ ರಾವಣನ ನಿರ್ಧಾರವೇನೆಂಬುದನ್ನು ಯಥಾವತ್ತಾಗಿ ಹೇಳು."

ಹೀಗೆ ಹೇಳುವಾಗ ಸೀತೆಯ ಮೈ ನಡುಗುತ್ತಿದ್ದಿತು. ಸರಮೆಯು ಮಂತ್ರಿಗಳಿಂದ ಸಹಿತನಾಗಿದ್ದ ರಾವಣನು ಹೇಳಿದ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ಹೇಳತೊಡಗಿದಳು :

"ವೈದೇಹಿ! ರಾವಣನ ತಾಯಿಯಾದ ಕೈಕಸೆಯೂ ಮತ್ತು ರಾವಣನ ವಿಷಯದಲ್ಲಿ ಹೆಚ್ಚು ವಿಶ್ವಾಸವಿರುವ ವೃದ್ಧನಾದ ಮಂತ್ರಿಯೂ ಬಹಳ ಹೊತ್ತಿನವರೆಗೂ ಮಾತುಗಳನ್ನಾಡಿ ನಿನ್ನನ್ನು ಬಿಟ್ಟುಬಿಡುವ ಸಲಹೆ ಯನ್ನಿತ್ತರು.

ದೀಯತಾಮಭಿಸತ್ಕೃತ್ಯ ಮನುಜೇನ್ದ್ರಾಯ ಮೈಥಿಲೀ ।
ನಿದರ್ಶನಂ ತೇ ಪರ್ಯಾಪ್ತಂ ಜನಸ್ಥಾನೇ ಯದದ್ಭುತಮ್ ॥೨೧॥

"ರಾಕ್ಷಸರಾಜನೇ! ನೀನೀಗಲೇ ಮಹಾರಾಜನಾದ ಶ್ರೀರಾಮನನ್ನು ಸತ್ಕಾರಪೂರ್ವಕವಾಗಿ ಆದರಿಸಿ ಅವನಿಗೆ ಮೈಥಿಲಿಯನ್ನು ಒಪ್ಪಿಸು. ರಾಮನು

ಎಂತಹ ಪರಾಕ್ರಮಿಯೆಂಬುದನ್ನು ನಿಶ್ಚಯಿಸಲು ಜನಸ್ಥಾನದಲ್ಲಿ ನಡೆದ ಅದ್ಭುತಘಟನೆಗಳೇ ಸಾಕಾಗಿವೆ.

ಲಙ್ಘನಂ ಚ ಸಮುದ್ರಸ್ಯ ದರ್ಶನಂ ಚ ಹನೂಮತಃ ।
ವಧಂ ಚ ರಕ್ಷಸಾಂ ಯುದ್ಧೇ ಕಃ ಕುರ್ಯಾನ್ಮಾನುಷೋ ಭುವಿ ॥

ರಾಮನ ಅದ್ಭುತಪರಾಕ್ರಮವು ಒತ್ತಟ್ಟಿಗಿರಲಿ. ಅವನ ಸೇವಕರಲ್ಲಿರುವ ಪರಾಕ್ರಮವೂ ಅಸದೃಶವಾದುದು. ಹನುಮಂತನು ಮಾಡಿದ ಸಮುದ್ರ ಲಂಘನ, ಸೀತಾದರ್ಶನ, ಯುದ್ಧದಲ್ಲಿ ರಾಕ್ಷಸರ ಹನನ–ಈ ಎಲ್ಲ ಕಾರ್ಯ ಗಳನ್ನೂ ಈ ಪ್ರಪಂಚದಲ್ಲಿ ಯಾವ ಮನುಷ್ಯನು ತಾನೇ ಮಾಡಬಲ್ಲನು?

ಆದುದರಿಂದ ನೀನು ಈ ಸಮಯದಲ್ಲಿ ಸೀತೆಯನ್ನು ರಾಮನಿಗೆ ಒಪ್ಪಿಸುವುದೇ ಶ್ರೇಯಸ್ಕರ."

ಹೀಗೆ ವೃದ್ಧನಾದ ಮಂತ್ರಿಯೂ ಮತ್ತು ಅವನ ತಾಯಿಯೂ ರಾವಣ ನಿಗೆ ಬಹಳವಾಗಿ ತಿಳಿಯಹೇಳಿದರು. ಆದರೆ ಲೋಭಿಯಾದವನು ಅರ್ಥ ತ್ಯಾಗವನ್ನು ಮಾಡಲು ಒಪ್ಪದಿರುವಂತೆ–ನಿನ್ನನ್ನು ಬಿಟ್ಟುಬಿಡಲು ರಾವಣನು ಸಮ್ಮತಿಸಲಿಲ್ಲ.

ಯುದ್ಧದಲ್ಲಿ ಮರಣಹೊಂದಿದ ಹೊರತು ಅವನು ನಿನ್ನನ್ನು ಬಿಟ್ಟು ಬಿಡಲು ಉತ್ಸಾಹಿಯಾಗಿಲ್ಲ. ಮಂತ್ರಿಗಳಿಂದ ಕೂಡಿದ ಆ ಕ್ರೂರಿಯ ನಿಶ್ಚ ಯವು ಇದೇ ಆಗಿದೆ. ಮೃತ್ಯುವಿನ ಲೋಭದಿಂದಾಗಿ (ಸಾಯಬೇಕೆಂಬ ಆಸೆ ಯಿಂದಾಗಿ) ಅವನಿಗೆ ಇಂತಹ ಸುದೃಢವಾದ ಬುದ್ಧಿಯುಂಟಾಗಿದೆ. ಯುದ್ಧ ದಲ್ಲಿ ಪರಾಜಿತನಾಗದಿದ್ದರೆ ಭಯದಿಂದ ನಿನ್ನನ್ನವನು ಬಿಡುಗಡೆಮಾಡುವು ದಿಲ್ಲ. ಸಮಸ್ತರಾಕ್ಷಸರ ಮತ್ತು ತನ್ನ ವಧೆಯಾದನಂತರವೇ ನಿನ್ನ ಬಿಡುಗಡೆ ಯೆಂದು ಅವನು ನಿರ್ಧರಿಸಿಬಿಟ್ಟಿದ್ದಾನೆ.

ಕಪ್ಪಾದ ಕಣ್ಣುಗಳುಳ್ಳವಳೇ! ಶ್ರೀರಾಮನು ಸರ್ವಪ್ರಕಾರಗಳಿಂದಲೂ ನಿಶಿತವಾದ ಬಾಣಗಳಿಂದ ರಾವಣನನ್ನು ಯುದ್ಧದಲ್ಲಿ ಸಂಹರಿಸಿ ನಿನ್ನನ್ನು ಅಯೋಧ್ಯೆಗೆ ಕರೆದೊಯ್ಯುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ."

ಸರಮೆಯು ಹೀಗೆ ಹೇಳುತ್ತಾ ಸೀತೆಯನ್ನು ಸಂತೈಸುತ್ತಿದ್ದಾಗ ಭೇರೀ- ಶಂಖಧ್ವನಿಗಳಿಂದ ಸಮಾಕುಲವಾದ ಸಮಸ್ತಸೈನಿಕರ ಕೋಲಾಹಲಶಬ್ದವು

ಕೇಳಿಬಂದಿತು. ಆ ಮಹಾಘೋಷವು ಭೂಮಿಯನ್ನೇ ನಡುಗಿಸುತ್ತಿದ್ದಿತು. ವಾನರಸೈನಿಕರ ಭಯಂಕರವಾದ ಆ ಸಿಂಹನಾದಗಳನ್ನು ಕೇಳಿ ಲಂಕಾವಾಸಿಗಳಾದ ರಾಕ್ಷಸರಾಜನ ಸೇವಕರ ಉತ್ಸಾಹವು ಕುಗ್ಗಿಹೋಯಿತು. ಅವರ ನಡೆ-ನುಡಿಗಳೆಲ್ಲವೂ ದೈನ್ಯದಿಂದ ಕೂಡಿರುವಂತೆ ಕಾಣುತ್ತಿದ್ದುವು. ರಾಜನ ದೋಷದಿಂದಾಗಿ ಅವರು ಶ್ರೇಯಸ್ಸಿನ ಮಾರ್ಗವನ್ನೇ ಕಾಣದಾದರು.

ಇಳನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ಇಜನೆಯ ಸರ್ಗ

ಮಾಲ್ಯವಂತನು ರಾವಣನಿಗೆ ಶ್ರೀರಾಮನೊಡನೆ ಸಂಧಿಮಾಡಿಕೊಳ್ಳುವ ಸಲಹೆಯನ್ನಿತ್ತುದು

ತೇನ ಶಙ್ಖವಿಮಿಶ್ರೇಣ ಭೇರೀಶಬ್ದೇನ ನಾದಿನಾ ।
ಉಪಯಾತಿ ಮಹಾಬಾಹೂ ರಾಮಃ ಪರಪುರಂಜಯಃ ॥೧॥

ಶತ್ರುಗಳ ಪಟ್ಟಣಗಳನ್ನು ಗೆಲ್ಲಲು ಸಮರ್ಥನಾದ, ಮಹಾಬಾಹು ವಾದ ಶ್ರೀರಾಮನು ಶಂಖಧ್ವನಿಯಿಂದ ಮಿಲಿತವಾದ ಭೇರೀಶಬ್ದದೊಡನೆ ಲಂಕಾಪಟ್ಟಣವನ್ನು ಆಕ್ರಮಿಸಿದನು.

ಶಂಖ-ಭೇರಿಗಳ ನಿನಾದವನ್ನು ಕೇಳಿದೊಡನೆಯೇ ರಾಕ್ಷಸೇಶ್ವರನಾದ ರಾವಣನು ಮುಹೂರ್ತಕಾಲದವರೆಗೆ ಮನಸ್ಸಿನಲ್ಲಿ ಯೇ ಚಿಂತಿಸುತ್ತಿ ದ್ದುಳಿಕ ಮಂತ್ರಿಗಳ ಕಡೆಗೆ ನೋಡಿದನು. ಜಗತ್ತಿಗೇ ಸಂತಾಪವನ್ನುಂಟುಮಾಡು ತ್ತಿದ್ದ, ಮಹಾಬಲಿಷ್ಠನಾದ, ಕ್ರೂರನಾದ, ರಾಕ್ಷಸರಾಜನಾದ ರಾವಣನು ಅಲ್ಲಿ ನೆರೆದಿದ್ದ ಎಲ್ಲ ಮಂತ್ರಿಗಳನ್ನೂ ಆಕ್ಷೇಪಿಸುತ್ತಾ ತನ್ನ ಗಂಭೀರವಾದ ಧ್ವನಿ ಯಿಂದ ಸಭೆಯಲ್ಲಿ ಪ್ರತಿಧ್ವನಿಯನ್ನುಂಟುಮಾಡುತ್ತಾ ಹೇಳಿದನು :

"ಅಮಾತ್ಯಶಿರೋಮಣಿಗಳೇ! ಬಂಧುಗಳೇ! ನೀವೆಲ್ಲರೂ ರಾಮನ ಪರಾಕ್ರಮದ ವಿಷಯವಾಗಿಯೂ, ಅವನಲ್ಲಿರುವ ಬಲ-ಪೌರುಷಗಳ ವಿಷಯವಾಗಿಯೂ, ಅವನು ವಾನರಸೈನ್ಯದೊಡನೆ ಅಪಾರವಾದ ಈ ಸಮುದ್ರವನ್ನು ದಾಟಿದ ವಿಷಯವಾಗಿಯೂ ಹೇಳಿದಿರಿ. ಅವೆಲ್ಲವನ್ನೂ ನಾನು ಕೇಳಿದೆನು. ರಾಮನ ಪರಾಕ್ರಮವನ್ನು ತಿಳಿದಿರುವ ನೀವೀಗ ಯಾವ ಮಾತನ್ನೂ ಆಡದೇ ಪರಸ್ಪರವಾಗಿ ಒಬ್ಬರ ಮುಖವನ್ನು ಮತ್ತೊಬ್ಬರು

ನೋಡಿಕೊಳ್ಳುತ್ತಿರುವಿರಿ. ಆದರೂ ನೀವೆಲ್ಲರೂ ನಿಜವಾದ ಪರಾಕ್ರಮವುಳ್ಳವರೆಂಬುದನ್ನೂ ಯುದ್ಧದಲ್ಲಿ ಪರಾಕ್ರಮದಿಂದ ಕಾದಾಡುವಿರೆಂಬು ದನ್ನೂ ನಾನು ತಿಳಿದಿದ್ದೇನೆ."

ರಾವಣನ ಆ ಮಾತನ್ನು ಕೇಳಿದ ಅವನ ತಾಯಿಯ ತಂದೆಯಾದ ಮಹಾಪ್ರಾಜ್ಞನಾದ ಮಾಲ್ಯವಂತನೆಂಬ ರಾಕ್ಷಸನು ರಾವಣನಿಗೆ ಹೇಳಿದನು :

ವಿದ್ಯಾಸ್ವಭಿವಿನೀತೋ ಯೋ ರಾಜಾ ರಾಜನ್ನಯಾನುಗಃ ।
ಸ ಶಾಸ್ತಿ ಚಿರಮೈಶ್ವರ್ಯಮರೀಂಶ್ಚ ಕುರುತೇ ವಶೇ ॥೭॥

"ಯಾವ ರಾಜನು ಆನ್ವೀಕ್ಷಿಕಿಯೇ* ಮೊದಲಾದ ನಾಲ್ಕು ವಿದ್ಯೆಗಳಲ್ಲಿ ಸುಶಿಕ್ಷಿತನಾಗಿರುವನೋ–ರಾಜನೀತಿಯನ್ನು ಯಥಾವತ್ತಾಗಿ ಅನುಸರಿಸುವನೋ–ಅಂತಹವನು ಬಹಳ ಕಾಲದವರೆಗೆ ರಾಜ್ಯವಾಳುತ್ತಾನೆ ಮತ್ತು ಶತ್ರುಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿರುತ್ತಾನೆ.

ಸಂದಧಾನೋ ಹಿ ಕಾಲೇನ ವಿಗೃಹ್ಣಂಶ್ಚಾರಿಭಿಃ ಸಹ ।
ಸ್ವಪಕ್ಷವರ್ಧನಂ ಕುರ್ವನ್ಮಹದೈಶ್ವರ್ಯಮಶ್ನುತೇ ॥೮॥

ಯಾವನು ಸಮಯಾನುಸಾರವಾಗಿ ಶತ್ರುಗಳೊಡನೆ ಸಂಧಿಯನ್ನು ಮಾಡಿಕೊಳ್ಳುವನೋ, ಸಮಯಾನುಸಾರವಾಗಿ ಯುದ್ಧಮಾಡುವನೋ ಮತ್ತು ತನ್ನ ಪಕ್ಷವನ್ನು ಬಲಪಡಿಸುವುದರಲ್ಲಿಯೇ ಯಾವಾಗಲೂ ನಿರತನಾಗಿರುವನೋ–ಅಂತಹವನು ಮಹೈಶ್ವರ್ಯವನ್ನು ಹೊಂದುತ್ತಾನೆ.

ಹೀಯಮಾನೇನ ಕರ್ತವ್ಯೋ ರಾಜ್ಞಾ ಸಂಧಿಃ ಸಮೇನ ಚ ।
ನ ಶತ್ರುಮವಮನ್ಯೇತ ಜ್ಯಾಯಾನ್ಕುರ್ವೀತ ವಿಗ್ರಹಮ್ ॥೯॥

---

* ಆನ್ವೀಕ್ಷಿಕೀ–ತ್ರಯೀ–ವಾರ್ತಾ–ದಂಡನೀತಿ – ಇವೇ ನಾಲ್ಕು ವಿದ್ಯೆಗಳು. ಕಾಮಂದಕ ನೀತಿಶಾಸ್ತ್ರದಲ್ಲಿ ಈ ನಾಲ್ಕು ವಿದ್ಯೆಗಳ ವಿವರಣೆ ಹೀಗಿದೆ : ಆನ್ವೀಕ್ಷಿಕೀಂ ತ್ರಯೀಂ ವಾರ್ತಾಂ ದಣ್ಡನೀತಿಂ ಚ ಪಾರ್ಥಿವಃ । ತದ್ವಿದ್ಭಿಸ್ತತಿ ಯೋಪೇತ್ಯೈ- ಶ್ಚಿನ್ತಯೇದ್ವಿನಯಾನ್ವಿತಃ ॥ ಆನ್ವೀಕ್ಷಿತ್ಯಾತ್ಮವಿಜ್ಞಾನಂ ಧರ್ಮಾಧರ್ಮೌ ತ್ರಯೀಸ್ಥಿತೌ । ಅರ್ಥಾನರ್ಥೌ ತು ವಾರ್ತಾಯಾಂ ದಣ್ಡನೀತ್ಯಾಂ ನಯಾನಯೌ ॥ ವಿದ್ಯಾಶ್ಚತಸ್ರ ಏವೈತಾ ಯೋಗಕ್ಷೇಮಾಯ ದೇಹಿನಾಮ್ । ವಿದ್ಯಾವಿನೀತೋ ನೃಪತಿರ್ನ ಕೃಚ್ಛ್ರೇಷ್ವವಸೀದತಿ ॥

ಯಾವ ರಾಜನ ಬಲವು ಶತ್ರುವಿನ ಬಲಕ್ಕಿಂತಲೂ ಕಡಿಮೆಯಾಗಿರುವುದೋ ಅಥವಾ ಶತ್ರುವಿನ ಬಲಕ್ಕೆ ಸಮನಾಗಿರುವುದೋ–ಅಂತಹ ರಾಜನು ಶತ್ರುವಿನೊಡನೆ ಸಂಧಿಯನ್ನು ಮಾಡಿಕೊಳ್ಳಬೇಕು. ತನಗೆ ಸಮಾನನಾದ ಮತ್ತು ತನಗಿಂತಲೂ ಅಧಿಕನಾದ ಶತ್ರುವನ್ನು ಯಾವ ಕಾರಣದಿಂದಲೂ ಅವಮಾನಿಸಬಾರದು. ತನ್ನ ಬಲವು ಶತ್ರುವಿನ ಬಲಕ್ಕಿಂತಲೂ ಹೆಚ್ಚು ಬಲವಾಗಿರುವುದೆಂದು ಸ್ಪಷ್ಟವಾಗಿ ಕಂಡುಬಂದಾಗ ಶತ್ರುವಿನೊಡನೆ ಯುದ್ಧಮಾಡಬಹುದು.

ತನ್ಮಹ್ಯಂ ರೋಚತೇ ಸಂಧಿಃ ಸಹ ರಾಮೇಣ ರಾವಣ ।
ಯದರ್ಥಮಭಿಯುಕ್ತಾಃ ಸ್ಮ ಸೀತಾ ತಸ್ಮೈ ಪ್ರದೀಯತಾಮ್ ॥೧೦॥

ರಾವಣೇಶ್ವರ! ಈ ಕಾರಣಗಳಿಂದ ಈ ಸಮಯದಲ್ಲಿ ರಾಮನೊಡನೆ ಸಂಧಿಮಾಡಿಕೊಳ್ಳುವುದೇ ಒಳ್ಳೆಯದೆಂದು ನನ್ನ ಭಾವನೆಯಾಗಿದೆ. ಯಾವಳ ಸಲುವಾಗಿ ನಾವು ವಿರೋಧಿಗಳಾಗಿರುವೆವೋ–ಆ ಸೀತಾದೇವಿಯನ್ನು ಅವನಿಗೆ ಒಪ್ಪಿಸಿಬಿಡು.

ಯಸ್ಯ ದೇವರ್ಷಯಃ ಸರ್ವೇ ಗನ್ಧರ್ವಾಶ್ಚ ಜಯೈಷಿಣಃ ।
ವಿರೋಧಂ ಮಾ ಗಮಸ್ತೇನ ಸಂಧಿಸ್ತೇ ತೇನ ರೋಚತಾಮ್ ॥೧೧॥

ದೇವತೆಗಳು, ಋಷಿಗಳು, ಗಂಧರ್ವರು ಎಲ್ಲರೂ ರಾಮನಿಗೆ ಜಯವಾಗಲೆಂಬ ಆಶಯವುಳ್ಳವರಾಗಿದ್ದಾರೆ. ಅಂತಹವನೊಡನೆ ನೀನು ವಿರೋಧವನ್ನು ಕಟ್ಟಿಕೊಳ್ಳಬೇಡ. ಅವನೊಡನೆ ಸಂಧಿಯನ್ನು ಮಾಡಿಕೊಳ್ಳುವ ಅಪೇಕ್ಷೆಯನ್ನು ಪ್ರಕಟಿಸು.

ಪೂಜ್ಯನಾದ ಬ್ರಹ್ಮನು ಸುರ ಮತ್ತು ಅಸುರರೆಂಬ ಎರಡು ಪಂಗಡಗಳನ್ನು ಸೃಷ್ಟಿಸಿದನು. ಧರ್ಮ ಮತ್ತು ಅಧರ್ಮಗಳು ಆ ಎರಡು ಪಕ್ಷಗಳನ್ನು ಅನುಕ್ರಮವಾಗಿ ಆಶ್ರಯಿಸಿವೆ. ಧರ್ಮವು ಮಹಾತ್ಮರಾದ ದೇವತೆಗಳ ಪಕ್ಷದ್ದೆಂದೂ–ಅಧರ್ಮವು ಅಸುರರ ಪಕ್ಷದ್ದೆಂದೂ ಹೇಳಲ್ಪಟ್ಟಿವೆ.

ಧರ್ಮೋ ವೈ ಗ್ರಸತೇಽಧರ್ಮಂ ತತಃ ಕೃತಮಭೂದ್ಯುಗಮ್ ।
ಅಧರ್ಮೋ ಗ್ರಸತೇ ಧರ್ಮಂ ತತಸ್ತಿಷ್ಯಃ* ಪ್ರವರ್ತತೇ ॥೧೪॥

---

* ತಿಷ್ಯಃ= ಕಲಿಯುಗ – ತಿಷ್ಯಃ ಕಲೌ ಚ ಪುಷ್ಯೇ ಚ (ಅಮರಃ)

ಕೃತಯುಗದಲ್ಲಿ ಪ್ರಬಲವಾಗಿರುವ ಧರ್ಮವು ಅಧರ್ಮವನ್ನು ನುಂಗಿ ಹಾಕುತ್ತದೆ. ಕಲಿಯುಗದಲ್ಲಿ ಅಧರ್ಮವು ಪ್ರಬಲವಾಗಿದ್ದು ಧರ್ಮವನ್ನು ನುಂಗಿಹಾಕುತ್ತದೆ. ನೀನು ದಿಗ್ವಿಜಯಕ್ಕಾಗಿ ಎಲ್ಲ ಲೋಕಗಳಲ್ಲಿಯೂ ಸಂಚರಿಸುತ್ತಿದ್ದಾಗ ಮಹತ್ತಾದ ಧರ್ಮವನ್ನು ವಿನಾಶಗೊಳಿಸಿರುವೆ. ಅಧರ್ಮ ಮಾರ್ಗವನ್ನೇ ಪರಿಗ್ರಹಿಸಿದೆ. ಈ ಕಾರಣದಿಂದಲೇ ಇಂದು ಶತ್ರುವು ನಮಗಿಂತಲೂ ಪ್ರಬಲನಾಗಿದ್ದಾನೆ.

ಸ ಪ್ರಮಾದಾತ್ಪ್ರವೃದ್ಧಸ್ತೇಽಧರ್ಮೋಽಭಿಗ್ರಸತೇ ಹಿ ನಃ ।
ವಿವರ್ಧಯತಿ ಪಕ್ಷಂ ಚ ಸುರಾಣಾಂ ಸುರಭಾವನಃ ॥೧೬॥ *

ನಿನ್ನ ಪ್ರಮಾದದಿಂದಾಗಿ ದೊಡ್ಡದಾಗಿ ಬೆಳೆದುಕೊಂಡಿರುವ ಅಧರ್ಮವು ನಮ್ಮನ್ನೇ ನುಂಗಿಹಾಕುತ್ತದೆ. (ಅಧರ್ಮದ ಗುಣವೇ ಅಂತಹುದು. ಆಶ್ರಯಕೊಟ್ಟವನನ್ನು ನುಂಗಿಹಾಕುವುದೇ ಅದರ ಸ್ವಭಾವ.) ಆದರೆ ದೇವತೆಗಳು ಪಾಲಿಸುತ್ತಿರುವ ಧರ್ಮವು ಅವರ ಪಕ್ಷವನ್ನು ವೃದ್ಧಿಗೊಳಿಸುತ್ತದೆ.

ನೀನು ಯಾವಾಗಲೂ ವಿಷಯಸುಖಗಳಲ್ಲಿಯೇ ಆಸಕ್ತನಾಗಿರತಕ್ಕವನು. ಸ್ವೇಚ್ಛೆಯಿಂದ ನೀನು ಮಾಡಬಾರದ ಕಾರ್ಯಗಳನ್ನು ಮಾಡಿರುವೆ. ಈ ಕಾರಣದಿಂದಲೇ ನೀನು ಅಗ್ನಿಸದೃಶರಾದ ಋಷಿಗಳ ಮನಸ್ಸಿನಲ್ಲಿ ಪ್ರಬಲವಾದ ಉದ್ವೇಗವನ್ನು ಹುಟ್ಟಿಸಿರುವೆ. ಅವರ ಪ್ರಭಾವವು ಪ್ರಜ್ವಲಿಸುವ ಅಗ್ನಿಯಂತೆ ಎದುರಿಸಲು ಅಸಾಧ್ಯವಾದುದು. ಅನವರತವಾದ ತಪಸ್ಸಿನಿಂದ ಶುದ್ಧಾಂತಃಕರಣರಾಗಿರುವ ಅವರು ಧರ್ಮದ ಸಂಗ್ರಹದಲ್ಲಿ ಸದಾ ನಿರತರಾಗಿರುತ್ತಾರೆ. ದ್ವಿಜರು ಮುಖ್ಯ-ಮುಖ್ಯವಾದ ಯಜ್ಞಗಳಿಂದ ದೇವತೆಗಳನ್ನು ಆರಾಧಿಸುತ್ತಾರೆ. ವಿಧಿವತ್ತಾಗಿ ಅಗ್ನಿಯಲ್ಲಿ ಹೋಮಮಾಡುತ್ತಾರೆ ಮತ್ತು ವೇದಗಳನ್ನು ಉಚ್ಚಸ್ವರದಲ್ಲಿ ಅಧ್ಯಯನ ಮಾಡುತ್ತಾರೆ. ಅವರೆಲ್ಲರೂ ರಾಕ್ಷಸರನ್ನು ತಿರಸ್ಕರಿಸುತ್ತಾ ರಾಕ್ಷೋಘ್ನ ಮಂತ್ರಗಳನ್ನು ಗಟ್ಟಿಯಾಗಿ ಹೇಳುತ್ತಾರೆ. ಅದರ ಪರಿಣಾಮವಾಗಿ ರಾಕ್ಷಸರು ಗ್ರೀಷ್ಮರ್ತುವಿನ ಮೇಘಗಳಂತೆ ದಿಕ್ಕಾಪಾಲಾಗಿ ಓಡಿಹೋಗುತ್ತಾರೆ.

* ನಾನು ಅಧರ್ಮವನ್ನೇ ಸರ್ವತ್ರ ಹರಡಿರುವಾಗ ನಮ್ಮ ಶತ್ರುಗಳು ಹೇಗೆ ಪ್ರಬಲರಾಗುವರು? ಎಂಬ ಸಂದೇಹಕ್ಕೆ ಈ ಶ್ಲೋಕದಲ್ಲಿ ವಿವರಣೆಯಿದೆ.

ಋಷೀಣಾಮಗ್ನಿಕಲ್ಪಾನಾಮಗ್ನಿಹೋತ್ರಸಮುತ್ಥಿತಃ ।
ಆದತ್ತೇ ರಕ್ಷಸಾಂ ತೇಜೋ ಧೂಮೋ ವ್ಯಾಪ್ಯ ದಿಶೋ ದಶ ॥೨೧॥

ಅಗ್ನಿಸದೃಶರಾದ ಋಷಿಗಳು ಮಾಡುತ್ತಿರುವ ಅಗ್ನಿಹೋತ್ರದಿಂದ ಹೊರಬರುವ ಹೋಮಧೂಮವು ನಾಲ್ಕು ದಿಕ್ಕುಗಳಲ್ಲಿಯೂ ವ್ಯಾಪ್ತವಾಗಿ ರಾಕ್ಷಸರ ತೇಜಸ್ಸನ್ನು ಅಪಹರಿಸುತ್ತಿದೆ.

ಭಿನ್ನ-ಭಿನ್ನ ದೇಶಗಳಲ್ಲಿ ಪುಣ್ಯಕರ್ಮಗಳಲ್ಲಿಯೇ ನಿರತರಾಗಿರುವ ದೃಢವ್ರತರಾದ ಋಷಿಗಳು ಮಾಡುತ್ತಿರುವ ತೀವ್ರವಾದ ತಪಸ್ಸುಗಳು ರಾಕ್ಷಸರನ್ನು ಸಂತಾಪಗೊಳಿಸುತ್ತಿವೆ.

ನೀನು ದೇವತೆಗಳಿಂದಲೂ, ದಾನವ-ಯಕ್ಷರಿಂದಲೂ ವಧ್ಯನಾಗಬಾರದೆಂಬ ವರವನ್ನೇನೋ ಪಡೆದಿರುವೆ. ಆದರೆ ಮನುಷ್ಯರಿಂದ ವಧಿಸಲ್ಪಡಕೂಡದೆಂಬ ವರವನ್ನೇನೂ ಪಡೆದಿರುವುದಿಲ್ಲ. ಈಗ ಮನುಷ್ಯರೂ, ವಾನರರೂ, ಮಹಾಬಲರಾದ ದೃಢಪರಾಕ್ರಮರಾದ ಋಕ್ಷ-ಲಾಂಗೂಲರೂ ಇಲ್ಲಿಗೆ ಬಂದು ಗರ್ಜನೆಮಾಡುತ್ತಿದ್ದಾರೆ. ಬಹುವಿಧವಾದ ಹಲವು ಬಗೆಯ ಘೋರವಾದ ಉತ್ಪಾತಗಳನ್ನು ನೋಡಿ ಸಮಸ್ತರಾಕ್ಷಸರಿಗೂ ವಿನಾಶಕಾಲವು ಸಮೀಪಿಸಿರುವುದನ್ನು ಕಾಣುತ್ತಿದ್ದೇವೆ. ಘೋರವಾದ ಮತ್ತು ದಟ್ಟವಾದ ಮೇಘಗಳು ಪ್ರಚಂಡವಾದ ಗರ್ಜನೆ-ತರ್ಜನೆಗಳೊಡನೆ ಲಂಕೆಯ ಸುತ್ತಲೂ ಬಿಸಿ-ಬಿಸಿಯಾದ ರಕ್ತವನ್ನು ಸುರಿಸುತ್ತಿವೆ. ಆನೆಗಳು, ಕುದುರೆಗಳು ರೋದನ ಮಾಡುತ್ತಿವೆ. ಅವುಗಳ ಕಣ್ಣುಗಳಿಂದ ಕಂಬನಿಯು ಸುರಿಯುತ್ತಿದೆ. ಧ್ವಜಗಳೆಲ್ಲವೂ ಹಾಳಾಗಿಹೋಗಿವೆ. ಮಲಿನವಾಗಿಯೂ ಇದ್ದು ಹಿಂದಿನಂತೆ ಪ್ರಕಾಶಮಾನವಾಗಿ ಕಾಣುತ್ತಿಲ್ಲ. ಸ್ವಪ್ನದಲ್ಲಿ ಕಪ್ಪುಬಣ್ಣದ ಸ್ತ್ರೀಯರು ಬಿಳಿಯ ಹಲ್ಲುಗಳನ್ನು ತೋರಿಸಿಕೊಂಡು ಮುಂದೆ ನಿಂತು ಕಿಲ-ಕಿಲನೆ ನಗುತ್ತಾರೆ. ಪ್ರತಿಕೂಲವಾದ ಮಾತುಗಳನ್ನಾಡುತ್ತಾ ಮನೆಯಲ್ಲಿರುವ ಪದಾರ್ಥಗಳನ್ನೆಲ್ಲಾ ಕದಿಯುತ್ತಿರುತ್ತಾರೆ. ಇಂತಹ ಸ್ವಪ್ನಗಳು ಲಂಕೆ ಯಲ್ಲಿರುವ ನಾಗರಿಕರಿಗೆ ಪ್ರತಿನಿತ್ಯವೂ ಬೀಳುತ್ತಿವೆ. ಮನೆಗಳಲ್ಲಿ ನಡೆಯುವ ಕರ್ಮಗಳ ಸಂಬಂಧವಾದ ಬಲಿಯನ್ನು ನಾಯಿಗಳು ತಿನ್ನುತ್ತಿವೆ. ಕತ್ತೆಗಳು ಹಸುಗಳಲ್ಲಿಯೂ – ಇಲಿಗಳು ಮುಂಗುಸಿಗಳಲ್ಲಿಯೂ ಹುಟ್ಟುತ್ತಿವೆ. ಬೆಕ್ಕುಗಳು ಹುಲಿಗಳೊಡನೆಯೂ, ಹಂದಿಗಳು ನಾಯಿಗಳೊಡನೆಯೂ, ಕಿನ್ನರರು

ರಾಕ್ಷಸರೊಡನೆಯೂ ಮತ್ತು ಮನುಷ್ಯರೊಡನೆಯೂ ಸಮಾಗಮಮಾಡುತ್ತಾರೆ. ಬಿಳುಪಾದ ರೆಕ್ಕೆಗಳನ್ನೂ ಕೆಂಪಾದ ಕಾಲುಗಳನ್ನೂ ಹೊಂದಿರುವ ಕಪೋತಪಕ್ಷಿಗಳು ದೈವದಿಂದ ಪ್ರೇರಿತವಾಗಿ ರಾಕ್ಷಸರಿಗೆ ಮುಂದಾಗುವ ವಿನಾಶವನ್ನು ಸೂಚಿಸುವ ಸಲುವಾಗಿ ಲಂಕಾಪಟ್ಟಣದ ಎಲ್ಲ ಕಡೆಗಳಲ್ಲಿಯೂ ಹಾರಾಡುತ್ತಿವೆ. ಮನೆಗಳಲ್ಲಿ ವಾಸಮಾಡುವ ಸಾರಿಕಾಪಕ್ಷಿಗಳು ಜಗಳ ಮಾಡಲಿಚ್ಛಿಸಿ ಮುಂದೆ ಬರುವ ಪಕ್ಷಿಗಳೊಡನೆ 'ಚೀ ಚೀ-ಕೂ ಚೀ' ಎಂದು ಕೂಗಿಕೊಳ್ಳುತ್ತಾ ಸೆಣೆಸಾಡುತ್ತಿವೆ. ಸ್ವಲ್ಪ ಹೊತ್ತಿನಲ್ಲಿಯೇ ಸೋತು ಕೆಳಕ್ಕೆ ಬೀಳುತ್ತಿವೆ. ಎಲ್ಲ ಪಕ್ಷಿಗಳೂ ಎಲ್ಲ ಮೃಗಗಳೂ ಸೂರ್ಯನ ಕಡೆಗೆ ಮುಖ ಮಾಡಿಕೊಂಡು ಅಳುತ್ತಿವೆ. ಕರಾಳರೂಪವನ್ನು ಧರಿಸಿರುವ, ವಿಕಟವಾದ ಆಕೃತಿಯುಳ್ಳ, ತಲೆಬೋಳಿಸಿಕೊಂಡಿರುವ, ಕಪ್ಪು ಮತ್ತು ಪಿಂಗಳವರ್ಣದ ಕಾಲನು ಪುರುಷನ ರೂಪವನ್ನು ಧರಿಸಿ ಕಾಲ-ಕಾಲಗಳಲ್ಲಿ ಲಂಕಾವಾಸಿಗಳ ಮನೆಗಳನ್ನು ವೀಕ್ಷಿಸುತ್ತಿರುತ್ತಾನೆ.

ರಾವಣೇಶ್ವರ! ಇವೇ ಮುಂತಾದ ಇನ್ನೂ ಅನೇಕ ಅಪಶಕುನಗಳು ಲಂಕಾಪಟ್ಟಣದಲ್ಲಿ ಕಾಣಿಸಿಕೊಳ್ಳುತ್ತಿವೆ.

ವಿಷ್ಣುಂ ಮನ್ಯಾಮಹೇ ರಾಮಂ ಮಾನುಷಂ ದೇಹಮಾಸ್ಥಿತಮ್ ।
ನಹಿ ಮಾನುಷಮಾತ್ರೋಽಸೌ ರಾಘವೋ ದೃಢವಿಕ್ರಮಃ ॥೩೫॥

ಭಗವಂತನಾದ ಮಹಾವಿಷ್ಣುವೇ ಮಾನವದೇಹವನ್ನು ಧರಿಸಿ ರಾಮನಾಗಿ ಅವತರಿಸಿರುವನೆಂದು ನಾವು ಭಾವಿಸುತ್ತೇವೆ. ದೃಢವಾದ ಪರಾಕ್ರಮವನ್ನು ಹೊಂದಿರುವ ರಾಮನು ಮನುಷ್ಯಸಾಮಾನ್ಯನಲ್ಲ.

ಅವನು ಸಮುದ್ರದ ಮಧ್ಯದಲ್ಲಿ ಪರಮಾದ್ಭುತವಾದ ಸೇತುವೆಯನ್ನು ಕಟ್ಟಿರುವನು. ಅಂತಹ ಅದ್ಭುತಕರ್ಮನಾದ ರಾಮನೊಡನೆ ನೀನು ಸಂಧಿಯನ್ನು ಮಾಡಿಕೋ. ಶ್ರೀರಾಮನ ಅಲೌಕಿಕಕರ್ಮಗಳನ್ನೂ ಲಂಕೆಯಲ್ಲಿ ಈಗ ಆಗುತ್ತಿರುವ ಅಪಶಕುನಗಳನ್ನೂ, ಉತ್ಪಾತಗಳನ್ನೂ ಮನಸ್ಸಿಗೆ ತಂದು ಕೊಂಡು ಯಾವ ಕಾರ್ಯವು ಮುಂದೆ ಸುಖದಾಯಕವೋ ಅದನ್ನು ನಿಶ್ಚಯಿಸಿ ಅಂತಹ ಕಾರ್ಯವನ್ನು ಮಾಡು."

ಹೀಗೆ ಹೇಳಿದನಂತರ ತನ್ನ ಮಾತಿನಿಂದ ರಾವಣನ ಮನಸ್ಸಿನಲ್ಲಾದ

ಪರಿಣಾಮವನ್ನು ಪರೀಕ್ಷಿಸಿ ಉತ್ತಮರಾದ ಮಂತ್ರಿಗಳಲ್ಲಿಯೂ ಶ್ರೇಷ್ಠನಾದ, ಪೌರುಷಶಾಲಿಯಾದ, ಮಹಾಬಲಿಷ್ಠನಾದ ಮಾಲ್ಯವಂತನು ರಾವಣನ ಕಡೆಗೊಮ್ಮೆ ದೃಷ್ಟಿಯನ್ನು ಹರಿಸಿ ಸುಮ್ಮನಾದನು.

೩೫ನೆಯ ಸರ್ಗವು ಮುಗಿಯಿತು.

ರಾವಣನು ಮಾಲ್ಯವಂತನನ್ನು ಆಕ್ಷೇಪಿಸಿ ನಗರರಕ್ಷಣೆಯ ವ್ಯವಸ್ಥೆಯನ್ನು ಏರ್ಪಡಿಸಿ ಅಂತಃಪುರಕ್ಕೆ ತೆರಳಿದುದು

ತತ್ತು ಮಾಲ್ಯವತೋ ವಾಕ್ಯಂ ಹಿತಮುಕ್ತಂ ದಶಾನನಃ ।
ನ ಮರ್ಷಯತಿ ದುಷ್ಟಾತ್ಮಾ ಕಾಲಸ್ಯ ವಶಮಾಗತಃ ॥೧॥

ಕಾಲವಶನಾಗಿದ್ದ ದುಷ್ಟಾತ್ಮನಾದ ರಾವಣನಿಗೆ ಮಾಲ್ಯವಂತನು ಹೇಳಿದ ಹಿತಕರವಾದ ಮಾತನ್ನು ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಅವನ ಮಾತನ್ನು ಕೇಳುತ್ತಲೇ ರಾವಣನು ಕೋಪದಿಂದ ಕಿಡಿ-ಕಿಡಿ ಯಾದನು. ಅವನ ಹುಬ್ಬುಗಳು ಗಂಟಿಕ್ಕಿದುವು. ಅಸಹನೆಯಿಂದಾಗಿ ಕಣ್ಣುಗಳು ತಿರುಗತೊಡಗಿದುವು. ದುರ-ದುರನೆ ನೋಡುತ್ತಾ ಮಾಲ್ಯವಂತ ನಿಗೆ ಹೇಳಿದನು :

ಹಿತಬುದ್ಧ್ಯಾ ಯದಹಿತಂ ವಚಃ ಪರುಷಮುಚ್ಯತೇ ।
ಪರಪಕ್ಷಂ ಪ್ರವಿಶ್ಯೈವ ನೈತಚ್ಛ್ರೋತ್ರಂ ಗತಂ ಮಮ ॥೨॥

“ನೀನು ಶತ್ರುಗಳ ಪಕ್ಷವನ್ನು ವಹಿಸಿ ಹಿತಬುದ್ಧಿಯ ನೆಪದಿಂದ ಆಡು ತ್ತಿರುವ ಅಹಿತವೂ ಮತ್ತು ಕಠಿನವೂ ಆಗಿರುವ ಮಾತುಗಳು ನನ್ನ ಕಿವಿಗಳ ಹತ್ತಿರವೂ ಸುಳಿಯುವುದಿಲ್ಲ.

ಮಾನುಷಂ ಕೃಪಣಂ ರಾಮಮೇಕಂ ಶಾಖಾಮೃಗಾಶ್ರಯಮ್ ।
ಸಮರ್ಥಂ ಮನ್ಯಸೇ ಕೇನ ತ್ಯಕ್ತಂ ಪಿತ್ರಾ ವನಾಲಯಮ್ ॥೪॥

ಮನುಷ್ಯಮಾತ್ರದವನು ; ಬಡಪಾಯಿ ; ಕೋತಿಗಳನ್ನಾಶ್ರಯಿಸಿರು ವವನು ; ತಂದೆಯಿಂದ ಓಡಿಸಲ್ಪಟ್ಟು ಕಾಡಿಗೆ ಬಂದಿರುವವನು ; ಅಂತಹವ ನನ್ನು ನೀನು ಯಾವ ಕಾರಣದಿಂದ ಮಹಾಸಮರ್ಥನೆಂದು ಭಾವಿಸುವೆ?

ರಕ್ಷಸಾಮೀಶ್ವರಂ ಮಾಂ ಚ ದೇವಾನಾಂ ಚ ಭಯಂಕರಮ್ ।
ಹೀನಂ ಮಾಂ ಮನ್ಯಸೇ ಕೇನ ಹ್ಯಹೀನಂ ಸರ್ವವಿಕ್ರಮೈಃ ॥೫॥

ನಾನಾದರೋ ರಾಕ್ಷಸರೆಲ್ಲರಿಗೂ ರಾಜನಾಗಿದ್ದೇನೆ. ದೇವತೆಗಳಿಗೂ ಭಯಂಕರನಾಗಿದ್ದೇನೆ. ಸಮಸ್ತವಾದ ಪರಾಕ್ರಮಗಳಿಂದಲೂ ಸಂಪನ್ನನಾಗಿದ್ದೇನೆ. ನನ್ನ ಪರಾಕ್ರಮದಲ್ಲಿ ಯಾವ ನ್ಯೂನತೆಯೂ ಇಲ್ಲ. ಇಂತಹ ನನ್ನನ್ನು ನೀನು ರಾಮನಿಗಿಂತಲೂ ಹೀನನೆಂದು ಹೇಗೆ ಭಾವಿಸುವೆ?

ವೀರದ್ವೇಷೇಣ ವಾ ಶಙ್ಕೇ ಪಕ್ಷಪಾತೇನ ವಾ ರಿಪೋಃ ।
ತ್ವಯಾಹಂ ಪರುಷಾಣ್ಯುಕ್ತಃ ಪರಪ್ರೋತ್ಸಾಹನೇನ ವಾ ॥೬॥

ನೀನು ನನ್ನ ವಿಷಯದಲ್ಲಿ ಇಷ್ಟೊಂದು ಕಠಿನವಾದ ಮಾತುಗಳನ್ನಾಡುತ್ತಿರುವುದಕ್ಕೆ ನಾನು ಕಾರಣಗಳನ್ನು ಹೀಗೆ ಊಹಿಸುತ್ತೇನೆ : ನಾನೊಬ್ಬ ಅಪ್ರತಿಮವೀರನೆಂಬ ಭಾವನೆಯಿಂದ ನೀನು ನನ್ನನ್ನು ದ್ವೇಷಿಸುತ್ತಿರಬಹುದು. ಶತ್ರುವಿನೊಡನೆ ಸೇರಿಕೊಂಡಿರುವ ಕಾರಣದಿಂದ ಹೀಗೆ ಮಾತನಾಡುತ್ತಿರಬಹುದು ಅಥವಾ ಹೀಗೆ ಮಾತನಾಡಿ ನನ್ನ ರಣೋತ್ಸಾಹವನ್ನು ಕುಗ್ಗಿಸುವಂತೆ ಶತ್ರುವಾದರೂ ನಿನ್ನನ್ನು ಪ್ರಚೋದಿಸಿರಬಹುದು.

ಪ್ರಭವನ್ತಂ ಪದಸ್ಥಂ ಹಿ ಪರುಷಂ ಕೋಽಭಿಧಾಸ್ಯತಿ ।
ಪಣ್ಡಿತಃ ಶಾಸ್ತ್ರತತ್ತ್ವಜ್ಞೋ ವಿನಾ ಪ್ರೋತ್ಸಾಹನಾದ್ರಿಪೋಃ ॥೭॥

ನಾನು ಪ್ರಭಾವಶಾಲಿಯಾಗಿರುವುದು ಮಾತ್ರವಲ್ಲದೇ ರಾಜಪದವಿಯಲ್ಲೂ ಇರುವೆನು. ಶತ್ರುವಿನ ಪ್ರೋತ್ಸಾಹವಿಲ್ಲದೇ ಪಂಡಿತನೂ–ಶಾಸ್ತ್ರಗಳ ತತ್ತ್ವವನ್ನು ತಿಳಿದವನೂ ಆಗಿರುವ ನಿನ್ನಂತಹವನು ರಾಜನೆದುರಿನಲ್ಲಿಯೇ ಹೇಗೆ ಇಂತಹ ಕರ್ಣಕಠೋರವಾದ ಮಾತುಗಳನ್ನಾಡುತ್ತಾನೆ?

ಆನೀಯ ಚ ವನಾತ್ಸೀತಾಂ ಪದ್ಮಹೀನಾಮಿವ ಶ್ರಿಯಮ್ ।
ಕಿಮರ್ಥಂ ಪ್ರತಿದಾಸ್ಯಾಮಿ ರಾಘವಸ್ಯ ಭಯಾದಹಮ್ ॥೮॥

ಕಮಲವಿಲ್ಲದ ಸಾಕ್ಷಾತ್ ಲಕ್ಷ್ಮಿಯಂತೆಯೇ ಇರುವ ಸೀತೆಯನ್ನು ಅರಣ್ಯದಿಂದ ಕರೆತಂದು ರಾಮನಿಗೆ ಹೆದರಿ ನಾನೇಕೆ ಅವನಿಗೊಪ್ಪಿಸಲಿ?

ಕೋಟ್ಯಂತರ ವಾನರರಿಂದ ಪರಿವೃತನಾಗಿರುವ ಸುಗ್ರೀವ-ಲಕ್ಷ್ಮಣರೊಡನಿರುವ ಆ ರಾಮನು ಹಲವಾರು ದಿವಸಗಳಲ್ಲಿಯೇ ನನ್ನಿಂದ ಹತನಾಗುವು

ದನ್ನು ನೀನೇ ಕಾಣಲಿರುವೆ. ಯಾವನ ಎದುರಾಗಿ ದ್ವಂದ್ವಯುದ್ಧದಲ್ಲಿ ದೇವತೆಗಳು ಕೂಡ ನಿಲ್ಲಲಾರರೋ–ಅಂತಹ ರಾವಣನು ರಾಮನೊಡನೆ ಯುದ್ಧಮಾಡಲು ಏಕೆ ಭಯಪಟ್ಟಾನು?

ದ್ವಿಧಾ ಭಜ್ಯೇಯಮಪ್ಯೇವಂ ನ ನಮೇಯಂ ತು ಕಸ್ಯಚಿತ್ ।
ಏಷ ಮೇ ಸಹಜೋ ದೋಷಃ ಸ್ವಭಾವೋ ದುರತಿಕ್ರಮಃ ॥೧೧॥

ನೆಟ್ಟಗೆ ನಿಂತಿರುವ ನಾನು ಎರಡು ಭಾಗಗಳಾಗಿ ಸೀಳಿಯಾದರೂ ಹೋದೇನು. ಆದರೆ ಯಾವನೊಬ್ಬನಿಗೂ ಬಗ್ಗುವವನಲ್ಲ. ಇದು ನನಗೆ ಹುಟ್ಟಿದಾಗಿನಿಂದಲೂ ಬಂದಿರುವ ಒಂದು ದೋಷ. ಹುಟ್ಟುಗುಣವನ್ನು ಯಾರೂ ಅತಿಕ್ರಮಿಸಿ ನಡೆಯಲಾರರು.

ರಾಮನು ತನ್ನ ಇಷ್ಟದಂತೆ ಸಮುದ್ರದ ಮೇಲೆ ಸೇತುವೆಯನ್ನು ಕಟ್ಟಿರಬಹುದು. ಇದರಲ್ಲಿ ಆಶ್ಚರ್ಯವೇನಿದೆ? ಇದರಿಂದಲೇ ನೀನಿಷ್ಟು ಭಯಪಡುತ್ತಿರುವೆಯಲ್ಲವೇ? ತಾತ! ಈಗ ನಾನು ನಿನ್ನ ಮುಂದೆ ಸತ್ಯ ವಾದ ಪ್ರತಿಜ್ಞೆಯನ್ನು ಮಾಡುತ್ತೇನೆ. ವಾನರಸೇನೆಯೊಡನೆ ಸಮುದ್ರವನ್ನು ದಾಟಿ ಲಂಕೆಗೆ ಬಂದಿರುವ ರಾಮನು ಜೀವಂತನಾಗಿ ಹಿಂದಿರುಗುವುದಿಲ್ಲ."

ಹೀಗೆ ಮಾತನಾಡುತ್ತಿರುವ ರಾವಣನು ಕ್ರುದ್ಧನೂ ಕ್ರೂರಿಯೂ ಆಗಿರುವನೆಂಬುದನ್ನು ಗಮನಿಸಿ ಮಾಲ್ಯವಂತನು ಲಜ್ಜಿತನಾದನು. ಪುನಃ ಅವನೊಡನೆ ಯಾವ ಮಾತನ್ನೂ ಆಡಲಿಲ್ಲ. ಬಳಿಕ ಎದ್ದುನಿಂತು 'ಮಹಾ ರಾಜನಿಗೆ ಜಯವಾಗಲಿ' –ಎಂದು ಹೇಳುತ್ತಾ ಯಥೋಚಿತವಾಗಿ ರಾಜನನ್ನು ಹುರಿದುಂಬಿಸಿ ಅವನ ಅಪ್ಪಣೆಯನ್ನು ಪಡೆದು ತನ್ನ ಮನೆಗೆ ಹೊರಟು ಹೋದನು. ಮಾಲ್ಯವಂತನು ಹೊರಟುಹೋದನಂತರ ರಾವಣನು ತನ್ನ ಅಮಾತ್ಯರೊಡನೆ ಸಮಾಲೋಚಿಸಿ ಲಂಕೆಯ ರಕ್ಷಣೆಗೆ ಅಗತ್ಯವಾದ ವ್ಯವಸ್ಥೆ ಯನ್ನು ಏರ್ಪಡಿಸಿದನು. ಲಂಕಾಪಟ್ಟಣದ ಪೂರ್ವದ್ವಾರದ ರಕ್ಷಣೆಗಾಗಿ ಪ್ರಹಸ್ತನನ್ನು ನಿಯಮಿಸಿದನು. ದಕ್ಷಿಣದ್ವಾರದ ರಕ್ಷಣೆಗಾಗಿ ಮಹಾಪರಾ ಕ್ರಮಿಯಾದ ಮಹಾಪಾರ್ಶ್ವನನ್ನೂ ಮತ್ತು ಮಹೋದರನನ್ನೂ, ಪಶ್ಚಿಮ ದ್ವಾರದ ರಕ್ಷಣೆಗಾಗಿ ಮಹಾಮಾಯಾವಿಯಾದ ಮತ್ತು ಹಲವಾರು ರಾಕ್ಷಸ ರಿಂದ ಪರಿವೃತನಾಗಿರುವ ಇಂದ್ರಜಿತುವನ್ನೂ ನಿಯಮಿಸಿದನು. ಉತ್ತರದ್ವಾರದ

ರಕ್ಷಣೆಗಾಗಿ ಶುಕ-ಸಾರಣರನ್ನು ನಿಯಮಿಸಿ ಮಂತ್ರಿಗಳೊಡನೆ ತಾನೂ ಉತ್ತರದ್ವಾರದ ರಕ್ಷಣೆಗಾಗಿ ಹೋಗುವೆನೆಂದು ಹೇಳಿದನು. ಮಹಾವೀರ್ಯ-ಪರಾಕ್ರಮನಾದ ವಿರೂಪಾಕ್ಷನೆಂಬ ರಾಕ್ಷಸನನ್ನು ಅನೇಕ ರಾಕ್ಷಸರೊಡನೆ ನಗರದ ಮಧ್ಯದಲ್ಲಿ ಕಾವಲುಸೈನ್ಯಕ್ಕೆ ನಾಯಕನನ್ನಾಗಿ ನಿಯಮಿಸಿದನು.

ಹೀಗೆ ಲಂಕಾಪಟ್ಟಣದ ರಕ್ಷಣೆಯ ವ್ಯವಸ್ಥೆಯನ್ನು ಮಾಡಿದನಂತರ ಕಾಲಚೋದಿತನಾದ ರಾವಣನು ತಾನು ಕೃತಕೃತ್ಯನಾದೆನೆಂದು ಭಾವಿಸುತ್ತಾ ಮಂತ್ರಿಗಳು ತಮ್ಮ-ತಮ್ಮ ನಿವಾಸಗಳಿಗೆ ಹೋಗಲು ಅನುಮತಿಸಿದನು. ಅವರು ಹೊರಡುವಾಗ ಮಾಡಿದ–'ರಾವಣೇಶ್ವರನಿಗೆ ಜಯವಾಗಲಿ!' 'ಲಂಕೇಶ್ವರನಿಗೆ ಜಯವಾಗಲಿ!'–ಇವೇ ಮುಂತಾದ ಜಯಾಶಿಷಗಳಿಂದ ಸಮ್ಮಾನಿತನಾದ ರಾವಣನು ಸಮೃದ್ಧಶಾಲಿಯಾದ ಮತ್ತು ವಿಶಾಲವಾದ ತನ್ನ ಅಂತಃಪುರಕ್ಕೆ ತೆರಳಿದನು.

ಇ೬ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೩೭ನೆಯ ಸರ್ಗ

ರಾವಣನು ಲಂಕೆಯ ರಕ್ಷಣೆಗಾಗಿ ಮಾಡಿರುವ ವ್ಯವಸ್ಥೆಯನ್ನು ವಿಭೀಷಣನು ಶ್ರೀರಾಮನಿಗೆ ವಿವರಿಸಿ ಹೇಳಿದುದು : ಶ್ರೀರಾಮನು ತನ್ನ ಕಡೆಯ ಸೇನಾನಾಯಕರಿಗೆ ನಾಲ್ಕು ದ್ವಾರಗಳನ್ನೂ ಆಕ್ರಮಿಸಲು ಆದೇಶವನ್ನಿತ್ತುದು

ನರವಾನರರಾಜಾನೌ ಸ ತು ವಾಯುಸುತಃ ಕಪಿಃ ।
ಜಾಮ್ಬವಾನೃಕ್ಷರಾಜಶ್ಚ ರಾಕ್ಷಸಶ್ಚ ವಿಭೀಷಣಃ ॥೧॥
ಅಙ್ಗದೋ ವಾಲಿಪುತ್ರಶ್ಚ ಸೌಮಿತ್ರಿಃ ಶರಭಃ ಕಪಿಃ ।
ಸುಷೇಣಃ ಸಹದಾಯಾದೋ ಮೈನ್ದೋ ದ್ವಿವಿದ ಏವ ಚ ॥೨॥
ಗಜೋ ಗವಾಕ್ಷಃ ಕುಮುದೋ ನಲೋಽಥ ಪನಸಸ್ತಥಾ ।
ಅಮಿತ್ರವಿಷಯಂ ಪ್ರಾಪ್ತಾಃ ಸಮವೇತಾಃ ಸಮರ್ಥಯನ್ ॥೩॥

ಶತ್ರುಗಳ ದೇಶಕ್ಕೆ ಆಗಮಿಸಿದ ನರರಾಜನಾದ ಶ್ರೀರಾಮ, ವಾನರ ರಾಜನಾದ ಸುಗ್ರೀವ, ವಾಯುವಿನ ಮಗನಾದ ಹನುಮಂತ, ಕರಡಿಗಳಿಗೆ ರಾಜನಾದ ಜಾಂಬವಂತ, ರಾಕ್ಷಸನಾದ ವಿಭೀಷಣ, ವಾಲಿಯ ಮಗನಾದ

ಅಂಗದ, ಸುಮಿತ್ರೆಯ ಮಗನಾದ ಲಕ್ಷ್ಮಣ, ಶರಭ, ಬಂಧುಗಳಿಂದ ಸಹಿತನಾದ ಸುಷೇಣ, ಮೈಂದ, ದ್ವಿವಿದ, ಗಜ, ಗವಾಕ್ಷ, ಕುಮುದ, ನಲ ಮತ್ತು ಪನಸ–ಇವರೆಲ್ಲರೂ ಒಟ್ಟಾಗಿ ಸೇರಿ ಪರಸ್ಪರವಾಗಿ ಸಮಾಲೋಚಿಸ ತೊಡಗಿದರು.

"ರಾವಣನಿಂದ ಪರಿಪಾಲಿಸಲ್ಪಡುತ್ತಿರುವ ಈ ಲಂಕಾಪಟ್ಟಣವು ಅಸುರ-ನಾಗರಿಂದಲೂ, ಗಂಧರ್ವರಿಂದ ಸಹಿತರಾದ ದೇವತೆಗಳಿಂದಲೂ ಜಯಿಸಲು ಅಶಕ್ಯವಾಗಿರುವಂತೆ ಕಾಣುತ್ತಿದೆ. ರಾಕ್ಷಸರಾಜನಾದ ರಾವಣನು ಈ ಪಟ್ಟಣದಲ್ಲಿ ನಿರಂತರವಾಗಿ ವಾಸಮಾಡುತ್ತಿದ್ದಾನೆ. ನಾವೆಲ್ಲರೂ ಈಗ ಯಾವ ಉಪಾಯದಿಂದ ನಮ್ಮ ಕಾರ್ಯವು ಸಿದ್ಧಿಸುವುದೆಂಬುದನ್ನೂ, ಹೇಗೆ ವಿಜಯಗಳಿಸಬಹುದೆಂಬುದನ್ನೂ ಅನ್ಯೋನ್ಯವಾದ ವಿಚಾರವಿನಿಮಯ ದಿಂದ ನಿಶ್ಚಯಿಸಬೇಕಾಗಿದೆ."

ಅವರೆಲ್ಲರೂ ಹೀಗೆ ಮಾತನಾಡಿಕೊಳ್ಳುತ್ತಿದ್ದಾಗ ರಾವಣನ ತಮ್ಮನಾದ ವಿಭೀಷಣನು ಗ್ರಾಮ್ಯವಲ್ಲದ (ಸಂಸ್ಕಾರಯುಕ್ತವಾದ), ಅರ್ಥಪುಷ್ಟಿ ಯಿಂದ ಕೂಡಿದ ಈ ಮಾತನ್ನು ಹೇಳಿದನು :

"ಮಿತ್ರರೇ! ನನ್ನ ಮಂತ್ರಿಗಳಾದ ಅನಲ, ಶರಭ, ಸಂಪಾತಿ ಮತ್ತು ಪ್ರಘಸ–ಈ ನಾಲ್ವರೂ ಲಂಕಾಪಟ್ಟಣಕ್ಕೆ ಹೋಗಿ ಈಗತಾನೇ ಇಲ್ಲಿಗೆ ಬಂದಿರುವರು. ಇವರೆಲ್ಲರೂ ಪಕ್ಷಿಗಳ ರೂಪಗಳನ್ನು ಧರಿಸಿ ಶತ್ರುಗಳ ಸೈನ್ಯ ವನ್ನು ಹೊಕ್ಕಿದ್ದರು. ಅಲ್ಲಿ ಪಟ್ಟಣದ ರಕ್ಷಣೆಗಾಗಿ ಮಾಡಿರುವ ಎಲ್ಲ ವ್ಯವಸ್ಥೆ ಗಳನ್ನೂ ಪ್ರತ್ಯಕ್ಷವಾಗಿ ನೋಡಿಕೊಂಡು ಪುನಃ ಇಲ್ಲಿಗೆ ಬಂದಿದ್ದಾರೆ.

ರಾಘವ! ದುರಾತ್ಮನಾದ ರಾವಣನು ನಗರದ ರಕ್ಷಣೆಗೆ ಮಾಡಿರುವ ವ್ಯವಸ್ಥೆಗಳೆಲ್ಲವನ್ನೂ ಇವರು ನನಗೆ ವರ್ಣಿಸಿ ಹೇಳಿದ್ದಾರೆ. ಅದನ್ನೇ ನಿನಗೆ ಯಥಾವತ್ತಾಗಿ ಹೇಳುವೆನು ; ಕೇಳು :

ಲಂಕಾಪಟ್ಟಣದ ಪೂರ್ವದ ಹೆಬ್ಬಾಗಿಲಿನಲ್ಲಿ ಪ್ರಹಸ್ತನು ಸೈನ್ಯದೊಡನೆ ನಿಂತಿದ್ದಾನೆ. ಮಹಾವೀರ್ಯರಾದ ಮಹಾಪಾರ್ಶ್ವ-ಮಹೋದರರು ದಕ್ಷಿಣದ ಹೆಬ್ಬಾಗಿಲನ್ನು ಕಾಯುತ್ತಿದ್ದಾರೆ. ಇಂದ್ರಜಿತುವು ಅನೇಕರಾಕ್ಷಸಸೈನಿಕ ರಿಂದ ಸಮಾವೃತನಾಗಿ ಪಶ್ಚಿಮದ್ವಾರದ ಬಳಿ ನಿಂತಿದ್ದಾನೆ. ಅವನ ಜೊತೆ ಯಲ್ಲಿರುವ ರಾಕ್ಷಸರು ಪಟ್ಟಿಶ, ಖಡ್ಗ, ಧನುಸ್ಸು, ಶೂಲ, ಮುದ್ಗರ–ಇವೇ

ಮೊದಲಾದ ಆಯುಧಗಳನ್ನು ಕೈಗಳಲ್ಲಿ ಹಿಡಿದಿದ್ದಾರೆ. ನಾನಾವಿಧವಾದ ಆಯುಧಗಳನ್ನು ಹೊಂದಿರುವ ಶೂರರಾದ ರಾಕ್ಷಸರಿಂದ ರಾವಣನು ಸಮಾವೃತನಾಗಿದ್ದಾನೆ. ಮಂತ್ರವಿದರಾದ ಶುಕ-ಸಾರಣರೇ ಮೊದಲಾದ ಸಾವಿರಾರು ಶಸ್ತ್ರಧಾರಿಗಳಾದ ರಾಕ್ಷಸರೊಡನೆ ನಗರದ ಉತ್ತರದ್ವಾರದಲ್ಲಿ ರಾವಣನೇ ನಿಂತಿದ್ದಾನೆ. ಆದರೆ ಅವನು ಉದ್ವಿಗ್ನನಾಗಿರುವಂತೆ ಕಾಣು ತ್ತಿದ್ದಾನೆ. ವಿರೂಪಾಕ್ಷನು ಶೂಲ-ಖಡ್ಗ-ಧನುಷ್ಪಾಣಿಗಳಾದ ಅನೇಕರಾಕ್ಷಸ ಸೈನಿಕರೊಡನೆ ನಗರದ ಮಧ್ಯಭಾಗದ ಸೇನಾವಲಯದಲ್ಲಿದ್ದಾನೆ. ಹೀಗೆ ಪಕ್ಷಿಗಳ ರೂಪವನ್ನು ಧರಿಸಿ ಹೋಗಿದ್ದ ನನ್ನ ಎಲ್ಲ ಮಂತ್ರಿಗಳೂ ಲಂಕಾ ಪಟ್ಟಣದ ವಿಭಿನ್ನಸ್ಥಾನಗಳಲ್ಲಿ ನಿಯುಕ್ತರಾಗಿರುವ ಸೇನಾಸಮೂಹಗಳನ್ನು ನೋಡಿಕೊಂಡು ಬಹಳ ಶೀಘ್ರವಾಗಿ ಇಲ್ಲಿಗೆ ಆಗಮಿಸಿದ್ದಾರೆ.

ಗಜಾನಾಂ ದಶಸಾಹಸ್ರಂ ರಥಾನಾಮಯುತಂ ತಥಾ ।
ಹಯಾನಾಮಯುತೇ ದ್ವೇ ಚ ಸಾಗ್ರಕೋಟಿಶ್ಚ ರಕ್ಷಸಾಮ್ ॥೧೬॥

ರಾವಣನ ಸೈನ್ಯದಲ್ಲಿ ಹತ್ತು ಸಾವಿರ ಆನೆಗಳೂ, ಹತ್ತು ಸಾವಿರ ರಥ ಗಳೂ, ಇಪ್ಪತ್ತು ಸಾವಿರ ಕುದುರೆಗಳೂ, ಒಂದು ಕೋಟಿಗಿಂತಲೂ ಮಿಗಿ ಲಾದ ಕಾಲಾಳುಗಳೂ ಇವೆ.

ರಾಘವ! ಅವರೆಲ್ಲರೂ ಮಹಾವೀರರು, ಮಹಾಬಲಿಷ್ಠರು. ಎಲ್ಲರೂ ಯುದ್ಧಗಳಲ್ಲಿ ಮಹಾಕ್ರೂರಿಗಳು. ಇಂತಹ ರಾಕ್ಷಸರೇ ರಾಕ್ಷಸರಾಜನಿಗೆ ಅತ್ಯಂತಪ್ರಿಯರಾದವರು. ಯುದ್ಧದ ಸಲುವಾಗಿ ಸನ್ನದ್ಧನಾಗಿ ನಿಂತಿರುವ ಪ್ರತಿಯೊಬ್ಬ ರಾಕ್ಷಸನಾಯಕನ ಬಳಿಯಲ್ಲೂ ಹತ್ತು-ಹತ್ತು ಲಕ್ಷ ಪರಿವಾರ ರಾಕ್ಷಸರು ನಿಂತಿದ್ದಾರೆ."

ಮಹಾಬಾಹುವಾದ ವಿಭೀಷಣನು ತನ್ನ ಮಂತ್ರಿಗಳು ತಿಳಿಸಿದ, ಲಂಕೆಗೆ ಸಂಬಂಧಿಸಿದ ಸಮಾಚಾರವನ್ನು ಹೀಗೆ ವಿವರಿಸಿ ಹೇಳಿ ತನ್ನ ಸಚಿವರನ್ನೂ ಶ್ರೀರಾಮನಿಗೆ ಪರಿಚಯಮಾಡಿಸಿಕೊಟ್ಟನು. ಸಚಿವರೊಡನೆ ಶ್ರೀರಾಮನ ಬಳಿ ನಿಂತಿದ್ದ ವಿಭೀಷಣನು ಪುನಃ ಲಂಕಾವೃತ್ತಾಂತವನ್ನು ಶ್ರೀರಾಮನಿಗೆ ಹೇಳತೊಡಗಿದನು. ರಾವಣನ ತಮ್ಮನಾದ ವಿಭೀಷಣನಿಗೆ–ಶ್ರೀರಾಮನಿಗೆ ಪ್ರಿಯವನ್ನುಂಟುಮಾಡಬೇಕೆಂಬುದೇ ಮುಖ್ಯವಾದ ಆಶಯವಾಗಿದ್ದಿತು.

ಆದುದರಿಂದಲೇ ವಿಭೀಷಣನು ಉತ್ತಮೋತ್ತಮವಾದ, ಮನಸ್ಸಿಗೆ ಆಪ್ಯಾಯ ಮಾನವಾಗುವ ಈ ಮಾತನ್ನು ಕಮಲಪತ್ರಾಕ್ಷನಾದ ಶ್ರೀರಾಮನಿಗೆ ಹೇಳಿದನು:

"ರಾಘವ! ರಾವಣನು ಕುಬೇರನೊಡನೆ ಯುದ್ಧಕ್ಕೆ ಹೊರಟಾಗ ಅವನ ಜೊತೆಯಲ್ಲಿ ಅರುವತ್ತು ಲಕ್ಷ ರಾಕ್ಷಸಸೈನಿಕರು ಹೋಗುತ್ತಿದ್ದರು. ಅವರೆಲ್ಲರೂ ಪರಾಕ್ರಮದಿಂದಲೂ, ತೇಜಸ್ಸಿನಿಂದಲೂ, ಧೈರ್ಯದ ಆಧಿಕ್ಯ ದಿಂದಲೂ, ದರ್ಪದಿಂದಲೂ, ದುರಾತ್ಮನಾದ ರಾವಣನಿಗೆ ಸಮಾನರಾಗಿಯೇ ಇದ್ದರು. ಆದರೆ ರಾವಣನನ್ನು ನಾನು ಹೊಗಳುತ್ತಿರುವೆನೆಂದು ನೀನು ಭಾವಿಸಬೇಡ.

ಅತ್ರ ಮನ್ಯುರ್ನ ಕರ್ತವ್ಯೋ ರೋಷಯೇ ತ್ವಾಂ ನ ಭೀಷಯೇ ।
ಸಮರ್ಥೋ ಹ್ಯಸಿ ವೀರ್ಯೇಣ ಸುರಾಣಾಮಪಿ ನಿಗ್ರಹೇ ॥೨೩॥

ಶತ್ರುವಿನ ವಿಷಯದಲ್ಲಿ ನಾನು ಹೀಗೆ ಹೇಳುತ್ತಿರುವುದಕ್ಕೆ ನೀನು ಕೋಪಗೊಳ್ಳುವ ಕಾರಣವಿಲ್ಲ. ಶತ್ರುವಿನ ವಿನಾಶಕ್ಕಾಗಿ ನಿನ್ನನ್ನು ಕೆರಳಿಸು ತ್ತಿರುವೆನೇ ಹೊರತು ಭಯಗೊಳಿಸುವ ಉದ್ದೇಶದಿಂದ ಈ ಮಾತುಗಳ ನ್ನಾಡುತ್ತಿಲ್ಲ. ನೀನು ಪರಾಕ್ರಮದಲ್ಲಿ ದೇವತೆಗಳ ನಿಗ್ರಹಕ್ಕಾದರೂ ಸಮರ್ಥ ನಾಗಿರುವೆ.

ಆದುದರಿಂದ ನೀನೀಗಲೇ ಈ ವಾನರಸೈನ್ಯವನ್ನು ವ್ಯೂಹಕ್ರಮದಲ್ಲಿ ನಿಲ್ಲಿಸು. ಬಹಳ ದೊಡ್ಡದಾದ ಚತುರಂಗಬಲದಿಂದ ಕೂಡಿರುವ ರಾವಣನನ್ನು ನೀನು ನಿಶ್ಚಯವಾಗಿಯೂ ವಿನಾಶಗೊಳಿಸುವೆ."

ವಿಭೀಷಣನು ಹೀಗೆ ಹೇಳಿದನಂತರ ಶ್ರೀರಾಮನು ಶತ್ರುಗಳನ್ನು ಪ್ರಹರಿಸುವ ಸಲುವಾಗಿ ಹೀಗೆ ಹೇಳಿದನು :

"ಬಹುಸಂಖ್ಯಾತರಾದ ವಾನರರೊಡನೆ ಕಪಿಶ್ರೇಷ್ಠನಾದ ನೀಲನು ಲಂಕಾಪಟ್ಟಣದ ಪೂರ್ವದ್ವಾರಕ್ಕೆ ಹೋಗಿ ಅಲ್ಲಿರುವ ಪ್ರಹಸ್ತನನ್ನು ಎದುರಿಸಿ ಯುದ್ಧಮಾಡಲಿ. ಮಹಾಬಲಿಷ್ಠನಾದ, ವಾಲಿಯ ಮಗನಾದ ಅಂಗದನು ಮಹಾಪಾರ್ಶ್ವ, ಮಹೋದರರಿರುವ ದಕ್ಷಿಣದ್ವಾರವನ್ನು ಆಕ್ರಮಿಸಲಿ. ಅಳಿ ಯಲು ಅಸಾಧ್ಯವಾದ ಆತ್ಮಬಲದಿಂದ ಸಂಪನ್ನನಾಗಿರುವ ಮಾರುತಿಯು ಅಸಂಖ್ಯಾತವಾದ ವಾನರಸೈನ್ಯದೊಡನೆ ಪಶ್ಚಿಮದ್ವಾರವನ್ನು ಆಕ್ರಮಿ

ಅದನ್ನು ಧ್ವಂಸಮಾಡಿ ಲಂಕೆಯೊಳಗೆ ಪ್ರವೇಶಿಸಲಿ. ದೈತ್ಯ-ದಾನವರಿಗೂ, ಮಹಾತ್ಮರಾದ ಋಷಿಗಳಿಗೂ ತೊಂದರೆಮಾಡುವುದರಲ್ಲಿಯೇ ಯಾವನಿಗೆ ಅತ್ಯಂತಸಂತೋಷವಾಗುವುದೋ, ಯಾವನು ಅತ್ಯಂತಕ್ಷುದ್ರನೋ, ವರ ದಾನದ ಶಕ್ತಿಯಿಂದ ಸಂಪನ್ನನಾಗಿರುವನೋ, ಪ್ರಜೆಗಳನ್ನು ಸಂತಾಪಗೊಳಿಸುತ್ತಾ ಎಲ್ಲ ಲೋಕಗಳನ್ನೂ ಸುತ್ತುತ್ತಿರುವನೋ–ಅಂತಹ ರಾಕ್ಷಸೇಂದ್ರ ನಾದ ರಾವಣನ ವಧೆಗೆ ನಾನೇ ದೃಢನಿಶ್ಚಯಮಾಡಿದ್ದೇನೆ. ಆದುದರಿಂದ ಸೈನ್ಯಸಮೇತನಾಗಿ ರಾವಣನಿರುವ ಉತ್ತರದಿಕ್ಕಿನ ಹೆಬ್ಬಾಗಿಲಿಗೆ ಲಕ್ಷ್ಮಣನೊಡನೆ ನಾನೇ ಹೋಗಿ ಅವರೆಲ್ಲರನ್ನೂ ಧ್ವಂಸಮಾಡಿ ಲಂಕೆಯೊಳಗೆ ಪ್ರವೇಶಿಸುತ್ತೇನೆ. ವಾನರರಾಜನಾದ–ಬಲಿಷ್ಠನಾದ ಸುಗ್ರೀವ, ಕರಡಿಗಳಿಗೆ ರಾಜನಾದ ಜಾಂಬವಂತ, ರಾಕ್ಷಸೇಂದ್ರನ ತಮ್ಮನಾದ ವಿಭೀಷಣ–ಈ ಮೂವರೂ ಸೈನ್ಯಸಮೇತರಾಗಿ ನಗರದ ಮಧ್ಯದಲ್ಲಿರುವ ಸೇನಾಸಮೂಹ ವನ್ನು ಆಕ್ರಮಿಸಲಿ.

ನ ಚೈವ ಮಾನುಷಂ ರೂಪಂ ಕಾರ್ಯಂ ಹರಿಭಿರಾಹವೇ ।
ಏಷಾ ಭವತು ಸಂಜ್ಞಾ ನೋ ಯುದ್ಧೇऽಸ್ಮಿನ್ವಾನರೇ ಬಲೇ ॥೩೩॥

ಈಗ ನಡೆಯಲಿರುವ ಯುದ್ಧದಲ್ಲಿ ವಾನರರು ಮನುಷ್ಯರ ರೂಪ ಗಳನ್ನು ಧರಿಸಬಾರದು. ವಾನರಸೇನೆಯಲ್ಲಿ ಇದು ನಮ್ಮ ಮುಖ್ಯವಾದ ಗುರುತಾಗಿರಲಿ.

ವಾನರಾ ಏವ ನಶ್ಚಿಹ್ನಂ ಸ್ವಜನೇऽಸ್ಮಿನ್ಭವಿಷ್ಯತಿ ।
ವಯಂ ತು ಮಾನುಷೇಣೈವ ಸಪ್ತ ಯೋತ್ಸ್ಯಾಮಹೇ ಪರಾನ್ ॥೩೪॥

ನಮ್ಮವರು ಯಾರೆಂದು ತಿಳಿಯಲು ವಾನರರೇ ನಮ್ಮ ಗುರುತಾಗಿರು ವರು. ನಾವು ಏಳು ಮಂದಿ ಮಾತ್ರ ಮನುಷ್ಯರೂಪದಿಂದಲೇ ಶತ್ರು ಗಳೊಡನೆ ಯುದ್ಧಮಾಡೋಣ.

ಅಹಮೇವ ಸಹಭ್ರಾತ್ರಾ ಲಕ್ಷ್ಮಣೇನ ಮಹೌಜಸಾ ।
ಆತ್ಮನಾ ಪಞ್ಚಮಶ್ಚಾಯಂ ಸಖಾ ಮಮ ವಿಭೀಷಣಃ ॥೩೫॥

ನಾನೇ ಒಬ್ಬ. ಮಹಾತೇಜಸ್ವಿಯಾದ ನನ್ನ ತಮ್ಮ ಲಕ್ಷ್ಮಣನೊಬ್ಬ ; ನಾಲ್ವರು ಮಂತ್ರಿಗಳೂ ಸೇರಿ ಐದನೆಯವನಾಗಿರುವ ನನ್ನ ಮಿತ್ರ ವಿಭೀಷಣ.

ಹೀಗೆ ನಾವು ಏಳು ಮಂದಿ ಮನುಷ್ಯರೂಪದಲ್ಲೇ ಶತ್ರುಗಳೊಡನೆ ಯುದ್ಧ ಮಾಡೋಣ.* ”

ಮಹಾಬುದ್ಧಿವಂತನಾದ ಪ್ರಭುವಾದ ಶ್ರೀರಾಮನು ವಿಜಯಸಿದ್ಧಿಗಾಗಿ ವಿಭೀಷಣನಿಗೆ ಹೀಗೆ ಹೇಳಿ ಸುವೇಲಪರ್ವತದ ತಪ್ಪಲು ಪರಿಸರದ ರಮಣೀಯತೆಯನ್ನು ನೋಡಿ ಅದನ್ನು ಹತ್ತಲು ನಿಶ್ಚಯಿಸಿದನು.

ಬಳಿಕ ಮಹಾತ್ಮನಾದ ಶ್ರೀರಾಮನು ವಿಶಾಲವಾದ ಸೈನ್ಯದಿಂದ ಅಲ್ಲಿಯ ಭೂಪ್ರದೇಶವನ್ನು ಸಂಪೂರ್ಣವಾಗಿ ಮುಚ್ಚಿಬಿಟ್ಟನು. ಶತ್ರುವನ್ನು ವಧಿಸಬೇಕೆಂದು ನಿಶ್ಚಯಿಸಿ ಹರ್ಷೋತ್ಸಾಹಗಳಿಂದ ಲಂಕೆಯ ಕಡೆಗೆ ಪ್ರಯಾಣಮಾಡಿದನು.

೩೭ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೩೮ನೆಯ ಸರ್ಗ

ಶ್ರೀರಾಮನು ಪ್ರಮುಖವಾನರರೊಡನೆ ಸುವೇಲಪರ್ವತವನ್ನು ಹತ್ತಿ ರಾತ್ರಿ ಅಲ್ಲಿಯೇ ಬಿಡಾರಮಾಡಿದುದು

ಸ ತು ಕೃತ್ವಾ ಸುವೇಲಸ್ಯ ಮತಿಮಾರೋಹಣಂ ಪ್ರತಿ ।
ಲಕ್ಷ್ಮಣಾನುಗತೋ ರಾಮಃ ಸುಗ್ರೀವಮಿದಮಬ್ರವೀತ್ ॥೧॥
ವಿಭೀಷಣಂ ಚ ಧರ್ಮಜ್ಞಮನುರಕ್ತಂ ನಿಶಾಚರಮ್ ।
ಮನ್ತ್ರಜ್ಞಂ ಚ ವಿಧಿಜ್ಞಂ ಚ ಶ್ಲಕ್ಷ್ಣಯಾ ಪರಯಾ ಗಿರಾ ॥೨॥

ಲಕ್ಷ್ಮಣನಿಂದ ಅನುಸರಿಸಲ್ಪಟ್ಟ ಶ್ರೀರಾಮನು ಸುವೇಲಪರ್ವತವನ್ನು

---

* ಈ ಪ್ರಕರಣದಿಂದ ವಾನರರು ಮನುಷ್ಯರೂಪವನ್ನು ಧರಿಸಲು ಸಮರ್ಥರಾಗಿದ್ದರೆಂಬುದು ಸ್ಪಷ್ಟವಾಗಿದೆ. ಹನುಮಂತನು ಬ್ರಹ್ಮಚಾರಿಯ ವೇಷವನ್ನು ಧರಿಸಿದ್ದ ವಿಷಯವೂ ಈ ಹಿಂದೆ ಬಂದಿದೆ. ಮನುಷ್ಯರೂಪವನ್ನು ಧರಿಸಲು ಶ್ರೀರಾಮನು ನಿಷೇಧಿಸಿದ್ದೇಕೆ?– ಎಂಬುದಕ್ಕೆ ಒಬ್ಬ ವ್ಯಾಖ್ಯಾನಕಾರರು ಹೀಗೆ ಹೇಳಿದ್ದಾರೆ : ವಾನರರು ಮನುಷ್ಯರೂಪವನ್ನು ಧರಿಸಿದರೆ ರಾಕ್ಷಸರೂ ಹಾಗೆಯೇ ಮಾಡಿಬಿಡಬಹುದು. ಅವರೂ ಮನುಷ್ಯರಾಗಬಹುದು. ಅವರೂ ಕಾಮರೂಪಿಗಳೇ. ಅಂತಹ ಸಂದರ್ಭದಲ್ಲಿ ಶತ್ರುಗಳು ಯಾರು–ಮಿತ್ರರು ಯಾರು?–ಎಂಬ ಬಗೆಗೆ ಗೊಂದಲವಾಗುತ್ತದೆ. ಕಪಿಗಳು ಕ್ಷುದ್ರಜಾತಿಯವರಾದುದರಿಂದ ರಾಕ್ಷಸರು ಕಪಿಯ ವೇಷವನ್ನು ಯುದ್ಧದಲ್ಲಿ ಧರಿಸಲಾರರು. ಆದರೆ ಗೂಢಚಾರರಾಗಿ ವಾನರವೇಷವನ್ನು ಧರಿಸಿಬಂದಿದ್ದರೆಂದು ಈ

ಹತ್ತಲು ನಿಶ್ಚಯಿಸಿ ಸುಗ್ರೀವನಿಗೂ ಮತ್ತು ಧರ್ಮಜ್ಞನೂ, ತನ್ನಲ್ಲಿಯೇ ವಿಶೇಷವಾದ ಅನುರಾಗವುಳ್ಳವನೂ, ಮಂತ್ರಜ್ಞನೂ, ವಿಧಿಜ್ಞನೂ ಆದ ವಿಭೀಷಣನಿಗೂ ಮಧುರವಾಣಿಯಿಂದ ಹೇಳಿದನು :

"ಸುಗ್ರೀವ-ವಿಭೀಷಣರೇ! ನೂರಾರು ಗೈರಿಕಾದಿಧಾತುಗಳಿಂದ ಆವರಿಸಲ್ಪಟ್ಟಿರುವ, ಪರ್ವತಗಳಲ್ಲಿಯೇ ಶ್ರೇಷ್ಠವಾದ ಈ ಸುವೇಲಪರ್ವತವನ್ನು ನಾವೆಲ್ಲರೂ ಹತ್ತೋಣ ಮತ್ತು ಅಲ್ಲಿಯೇ ಈ ರಾತ್ರಿಯನ್ನು ಕಳೆಯೋಣ. ಈ ಪರ್ವತದ ಮೇಲಿಂದಲೇ ನಾವು ಲಂಕಾಪಟ್ಟಣವನ್ನೂ, ಮರಣ ಹೊಂದುವ ಸಲುವಾಗಿಯೇ ನನ್ನ ಭಾರ್ಯೆಯನ್ನು ಅಪಹರಿಸಿರುವ ದುರಾತ್ಮನಾದ ರಾವಣನ ನಿವಾಸಸ್ಥಾನವನ್ನೂ ನೋಡೋಣ. ನಿಶ್ಚಯವಾಗಿಯೂ ಆ ದುಷ್ಟನು ಧರ್ಮವನ್ನೂ ತಿಳಿದವನಲ್ಲ. ಆಚಾರ-ವಿಚಾರಗಳನ್ನೂ ತಿಳಿದವನಲ್ಲ. ಕುಲದ ಮರ್ಯಾದೆಯನ್ನೂ ತಿಳಿದವನಲ್ಲ. ತುಚ್ಛವಾದ ರಾಕ್ಷಸಬುದ್ಧಿಯಿಂದ ಈ ಅತಿನಿಂದನೀಯವಾದ ಕಾರ್ಯವನ್ನವನು ಮಾಡಿದ್ದಾನೆ.

ತಸ್ಮಿನ್ಮೇ ವರ್ತತೇ ರೋಷಃ ಕೀರ್ತಿತೇ ರಾಕ್ಷಸಾಧಮೇ ।
ಯಸ್ಯಾಪರಾಧಾನ್ನೀಚಸ್ಯ ವಧಂ ದ್ರಕ್ಷ್ಯಾಮಿ ರಕ್ಷಸಾಮ್ ॥೬॥

ಹಿಂದೆ ಬಂದಿದೆ. ವಿಭೀಷಣ ಮತ್ತು ಅವನ ನಾಲ್ವರು ಅನುಚರರು ಸಹಜವಾಗಿ ಮನುಷ್ಯರೇ? ರಾಕ್ಷಸರಿಗೂ ಮನುಷ್ಯರಿಗೂ ವ್ಯತ್ಯಾಸವೇನೂ ಇಲ್ಲವೇ? ಅಥವಾ ರಾಮನು ವಿಭೀಷಣನಿಗೂ ಮತ್ತು ಅವನ ಅನುಯಾಯಿಗಳಿಗೂ ಮನುಷ್ಯರೂಪವನ್ನು ಧರಿಸುವಂತೆ ಹೇಳಿದನೇ? ವಯಂ ತು ಮಾನುಷರೂಪೇಣ – ನಾವು ಏಳು ಮಂದಿ ಮನುಷ್ಯರೂಪದಲ್ಲಿಯೇ ಶತ್ರುಗಳೊಡನೆ ಯುದ್ಧಮಾಡುತ್ತೇವೆ – ಎಂದು ಹೇಳಿದ್ದಾನೆ. ಇದಕ್ಕೆ ಸಮಾಧಾನವನ್ನು ಹೀಗೆ ಹೇಳಬಹುದಾಗಿದೆ : ರಾಕ್ಷಸರೂ ಕಾಮರೂಪಿಗಳು. ಕಪಿಗಳೂ ಕಾಮರೂಪಿಗಳು. ರಾಮನಾಗಲೀ ಲಕ್ಷ್ಮಣನಾಗಲೀ ಮನುಷ್ಯರಾದುದರಿಂದ ಕಾಮರೂಪಿಗಳಲ್ಲ. ವಿಭೀಷಣನು ಶ್ರೀರಾಮನ ಬಳಿಗೆ ಬರುವಾಗಲೇ ತನ್ನ ಅನುಚರರೊಡನೆ ಮನುಷ್ಯರೂಪದಲ್ಲೇ ಬಂದಿದ್ದನು. ಆದುದರಿಂದ ಅವರೈವರೂ ಮನುಷ್ಯರೂಪದಲ್ಲೇ ಇರಲೆಂದು ಶ್ರೀರಾಮನು ಹೇಳುತ್ತಾನೆ. ವಿಭೀಷಣ ಎಂಬ ಪದಕ್ಕೆ ವಿಶೇಷವಾಗಿ ಭಯವನ್ನುಂಟುಮಾಡುವವನು ಎಂದೇ ಅರ್ಥ. ರಾಕ್ಷಸರಿಗೂ ಮನುಷ್ಯರಿಗೂ ವ್ಯತ್ಯಾಸವಿದ್ದೇ ಇರಬೇಕು. ರಾವಣನು ಸಂನ್ಯಾಸಿಯ ವೇಷವನ್ನು ಧರಿಸಿ ಸೀತೆಯ ಆಶ್ರಮಕ್ಕೆ ಹೋಗಿದ್ದನು. ತನ್ನ ನಿಜರೂಪದಲ್ಲೇ ಹೋಗಿದ್ದರೆ ಸೀತೆಯನ್ನು ವಂಚಿಸಲು ಸಾಧ್ಯವಾಗುತ್ತಿರಲಿಲ್ಲ.

ನೀಚನಾದ ಆ ರಾವಣರಾಕ್ಷಸನ ಹೆಸರನ್ನು ಕೇಳುತ್ತಿದ್ದಂತೆಯೇ ನನ್ನ ಕೋಪವು ಉಕ್ಕೇರುತ್ತದೆ. ನೀಚನಾದ ಆ ಒಬ್ಬನ ಅಪರಾಧದಿಂದಾಗಿ ಎಲ್ಲ ರಾಕ್ಷಸರ ವಧೆಯಾಗುವುದನ್ನೂ ನಾನೀಗ ಕಾಣುತ್ತಿದ್ದೇನೆ.

ಏಕೋ ಹಿ ಕುರುತೇ ಪಾಪಂ ಕಾಲಪಾಶವಶಂ ಗತಃ ।
ನೀಚೇನಾತ್ಮಾಪಚಾರೇಣ ಕುಲಂ ತೇನ ವಿನಶ್ಯತಿ ॥೭॥

ಕಾಲಪಾಶಕ್ಕೆ ವಶನಾದವನೊಬ್ಬನು ಪಾಪವನ್ನು ಮಾಡುತ್ತಾನೆ. ಆದರೆ ಆ ನೀಚನೊಬ್ಬನು ಮಾಡಿದ ಅಪಚಾರದಿಂದಾಗಿ ಇಡೀ ಕುಲವೇ ವಿನಾಶಹೊಂದುತ್ತದೆ.”

ರಾವಣನ ವಿಷಯದಲ್ಲಿ ಅತಿಕ್ರುದ್ಧನಾಗಿದ್ದ ಶ್ರೀರಾಮನು ಹೀಗೆ ಮಾತ ನಾಡಿಕೊಂಡೇ ವಿಚಿತ್ರವಾದ ಶಿಖರಗಳನ್ನೊಳಗೊಂಡಿದ್ದ ಸುವೇಲಪರ್ವತ ವನ್ನು ಹತ್ತಿದನು. ಅಲ್ಲಿ ಆ ರಾತ್ರಿ ತಂಗುವುದು ಶ್ರೀರಾಮನ ಆಶಯವಾಗಿ ದ್ದಿತು. ಅಣ್ಣನ ರಕ್ಷಣೆಯಲ್ಲಿಯೇ ಏಕಾಗ್ರಚಿತ್ತನಾಗಿದ್ದ, ಮಹಾಪರಾಕ್ರಮ ಶಾಲಿಯಾಗಿದ್ದ ಲಕ್ಷ್ಮಣನೂ ಧನುರ್ಬಾಣಗಳನ್ನು ಹಿಡಿದು ಶ್ರೀರಾಮನ ಜೊತೆಯಲ್ಲಿಯೇ ಸುವೇಲಪರ್ವತವನ್ನು ಹತ್ತಿದನು. ಅನಂತರ ಸುಗ್ರೀವ, ನಾಲ್ವರು ಮಂತ್ರಿಗಳೊಡನೆ ವಿಭೀಷಣ, ಹನುಮಂತ, ಅಂಗದ, ನೀಲ, ಮೈಂದ, ದ್ವಿವಿದ, ಗಜ, ಗವಾಕ್ಷ, ರಂಭ, ಜಾಂಬವಂತ, ಸುಷೇಣ, ಮಹಾಮತಿ ಯಾದ ಋಷಭ, ಮಹಾತೇಜಸ್ವಿಯಾದ ದುರ್ಮುಖ ಮತ್ತು ಕಪಿಶ್ರೇಷ್ಠ ನಾದ ಶತಬಲಿ–ಇವರೆಲ್ಲರೂ ಪರ್ವತವನ್ನು ಹತ್ತಿದರು. ಇವರೇ ಅಲ್ಲದೇ ಶೀಘ್ರಗಾಮಿಗಳಾದ, ವಾಯುವೇಗಕ್ಕೆ ಸಮಾನವಾದ ವೇಗದಿಂದ ಸಂಚರಿ ಸುವ, ಪರ್ವತದಲ್ಲಿ ಸಂಚರಿಸುವ, ಬಹುಸಂಖ್ಯಾತರಾದ ವಾನರರೂ ಶ್ರೀರಾಮನಿದ್ದ ಸುವೇಲಪರ್ವತವನ್ನು ಹತ್ತತೊಡಗಿದರು. ಬಹಳ ಶೀಘ್ರ ವಾಗಿಯೇ ಅವರೆಲ್ಲರೂ ಪರ್ವತಾರೋಹಣಮಾಡಿ ಸುತ್ತಲೂ ಸಂಚರಿಸ ತೊಡಗಿದರು. ಆ ವಾನರದಳಪತಿಗಳು ಸುವೇಲಪರ್ವತದ ಶಿಖರದಲ್ಲಿ ನಿಂತು ಸುಂದರವಾದ ಲಂಕಾಪಟ್ಟಣವನ್ನು ನೋಡಿದರು. ಆ ಪಟ್ಟಣವು ಆಕಾಶದಲ್ಲಿಯೇ ನಿರ್ಮಿಸಿರುವಂತೆ ಕಾಣುತ್ತಿದ್ದಿತು. ಅದಕ್ಕೆ ನಾಲ್ಕು ಕಡೆಗಳ ಲ್ಲಿಯೂ ಸುಂದರವಾದ ಮತ್ತು ಶ್ರೇಷ್ಠವಾದ ಹೆಬ್ಬಾಗಿಲುಗಳಿದ್ದುವು. ಅದು ಶ್ರೇಷ್ಠವಾದ ಪ್ರಾಕಾರದಿಂದ ಶೋಭಾಯಮಾನವಾಗಿ ಕಾಣುತ್ತಿದ್ದಿತು. ರಾಕ್ಷಸ

ರಿಂದ ತುಂಬಿಹೋಗಿದ್ದ ಲಂಕಾಪಟ್ಟಣವನ್ನು ವಾನರಸೇನಾನಾಯಕರು ನೋಡಿದರು. ಶ್ರೇಷ್ಠವಾದ ಆ ಪ್ರಾಕಾರದ ಸುತ್ತಲೂ ನೀಲವರ್ಣದ ರಾಕ್ಷಸರು ನಿಂತಿದ್ದರು. ಪ್ರಾಕಾರವನ್ನನುಸರಿಸಿ ನಿಂತಿದ್ದ ಕಪ್ಪುಬಣ್ಣದ ಆ ರಾಕ್ಷಸರ ಸಾಲು ಒಂದು ಪ್ರಾಕಾರದ ಜೊತೆಯಲ್ಲಿಯೇ ಮತ್ತೊಂದು ಪ್ರಾಕಾರವೂ ಇರುವುದೋ ಎಂಬಂತೆ ವಾನರಶ್ರೇಷ್ಠರಿಗೆ ಕಾಣುತ್ತಿದ್ದಿತು. ಯುದ್ಧಮಾಡುವ ಇಚ್ಛೆಯಿಂದ ಪ್ರಾಕಾರದ ಬಳಿಯಲ್ಲಿ ನಿಂತಿದ್ದ ಅಸಂಖ್ಯಾತ ರಾದ ರಾಕ್ಷಸರನ್ನು ಕಂಡು ವಾನರನಾಯಕರು ಶ್ರೀರಾಮನು ನೋಡುತ್ತಿ ದ್ದಂತೆಯೇ ನಾನಾಪ್ರಕಾರವಾಗಿ ಸಿಂಹನಾದಗಳನ್ನು ಮಾಡಿದರು. ಆ ಸಮಯಕ್ಕೆ ಸರಿಯಾಗಿ ಸಂಧ್ಯಾಕಾಲದ ಕೆಂಪಿನಿಂದ ಅನುರಂಜಿತನಾದ ಸೂರ್ಯನು ಅಸ್ತಾಚಲವನ್ನು ಸೇರಿದನು. ಪೂರ್ಣಚಂದ್ರನಿಂದ ಪ್ರಕಾಶಿತವಾದ ರಾತ್ರಿಯು ಸರ್ವತ್ರ ವ್ಯಾಪಿಸಿತು. ಅನಂತರ ವಾನರಸೈನ್ಯಕ್ಕೆ ಸ್ವಾಮಿಯಾದ ಶ್ರೀರಾಮನು ವಿಭೀಷಣನಿಂದ ಸತ್ಕೃತನಾಗಿ ಲಕ್ಷ್ಮಣನೊಡನೆಯೂ ಸೇನಾದಂಡನಾಯಕರೊಡನೆಯೂ ಸುವೇಲಪರ್ವತದ ತಪ್ಪಲಿನಲ್ಲಿ ಆ ರಾತ್ರಿಯನ್ನು ಸುಖವಾಗಿ ಕಳೆದನು.

ಎಲನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೩೯ನೆಯ ಸರ್ಗ

ಶ್ರೀರಾಮನು ವಾನರನಾಯಕರೊಡನೆ ಸುವೇಲಪರ್ವತದಲ್ಲಿ ನಿಂತು ಲಂಕಾಪಟ್ಟಣವನ್ನು ನಿರೀಕ್ಷಿಸಿದುದು

ತಾಂ ರಾತ್ರಿಮುಷಿತಾಸ್ತತ್ರ ಸುವೇಲೇ ಹರಿಯೂಥಪಾಃ ।
ಲಙ್ಕಾಯಾಂ ದದೃಶುರ್ವೀರಾ ವನಾನ್ಯುಪವನಾನಿ ಚ ॥೧॥

ವಾನರದಂಡನಾಯಕರು ಸುವೇಲಪರ್ವತದಲ್ಲಿ ರಾತ್ರಿಯಲ್ಲಿ ತಂಗಿದ್ದು ಬೆಳಗಾಗುತ್ತಲೇ ಪರ್ವತದ ಮೇಲೆ ನಿಂತು ಲಂಕಾಪಟ್ಟಣದ ವನಗಳನ್ನೂ ಮತ್ತು ಉಪವನಗಳನ್ನೂ ನೋಡಿದರು.

ಆ ವನೋಪವನಗಳು ಸಮನೆಲದಲ್ಲಿದ್ದುವು. ಶಾಂತವಾಗಿಯೂ, ರಮ್ಯವಾಗಿಯೂ, ವಿಶಾಲವಾಗಿಯೂ, ಅಗಲವಾಗಿಯೂ ಇದ್ದುವು. ಕಣ್ಣು ಗಳಿಗೆ ಹಬ್ಬವನ್ನುಂಟುಮಾಡುತ್ತಿದ್ದುವು. ಅಂತಹ ಸುಂದರವಾದ ವನ ಗಳನ್ನೂ ಉಪವನಗಳನ್ನೂ ನೋಡಿ ವಾನರನಾಯಕರು ವಿಸ್ಮಿತರಾದರು.

ಲಂಕಾಪಟ್ಟಣವು ಚಂಪಾ, ಅಶೋಕ, ಪುನ್ನಾಗ, ಸಾಲ, ತಾಲವೃಕ್ಷಗಳಿಂದ ವ್ಯಾಪ್ತವಾಗಿದ್ದಿತು. ತಂಪಾದ ನೆರಳಿರುವ ಹೊಂಗೇಮರಗಳಿಂದ ಆಚ್ಛಾದಿತವಾಗಿದ್ದಿತು. ನಾಗ-ಕೇಸರವೃಕ್ಷಗಳಿಂದ ಸಮಾವೃತವಾಗಿದ್ದಿತು. ಹಿಂತಾಲ-ಅರ್ಜುನ-ನೀಪವೃಕ್ಷಗಳಿಂದಲೂ, ಹೂವರಳಿದ ಏಳೆಲೇಬಾಳೆಗಳಿಂದಲೂ, ತಿಲಕ-ಕರ್ಣಿಕಾರ-ಪಾಟಲವೃಕ್ಷಗಳಿಂದಲೂ, ಅಗ್ರಭಾಗಗಳಲ್ಲಿ ಹೂಗಳಿದ್ದ ಬಳ್ಳಿ

ಗಳಿಂದ ವ್ಯಾಪ್ತವಾದ, ನಾನಾಪ್ರಕಾರವಾದ ಮತ್ತು ದಿವ್ಯವಾದ ವೃಕ್ಷಗಳಿಂದಲೂ ವ್ಯಾಪ್ತವಾಗಿದ್ದ ಲಂಕಾಪಟ್ಟಣವು ಇಂದ್ರನ ಅಮರಾವತಿಯಂತೆಯೇ ಪ್ರಕಾಶಮಾನವಾಗಿದ್ದಿತು. ವಿಚಿತ್ರವಾದ ಹೂವುಗಳಿಂದ ಕೂಡಿರುವ, ಕೆಂಪಾದ ಮತ್ತು ಕೋಮಲವಾದ ಚಿಗುರುಗಳಿಂದಲೂ ಹಚ್ಚಹಸಿರಾದ ಹುಲ್ಲಿನಿಂದಲೂ ನೀಲವಾಗಿ ಕಾಣುತ್ತಿದ್ದ, ವಿಚಿತ್ರವಾದ ಉದ್ಯಾನವನಗಳ ಸಾಲುಗಳಿಂದ ಕಂಗೊಳಿಸುತ್ತಿದ್ದ ಲಂಕಾಪಟ್ಟಣವು ಅತ್ಯಂತ ಶೋಭಾಯಮಾನವಾಗಿ ಕಾಣು

ತ್ತಿದ್ದಿತು. ಮನುಷ್ಯರು ಆಭರಣಗಳನ್ನು ಧರಿಸುವ ರೀತಿಯಲ್ಲಿ ಅಲ್ಲಿಯ ವೃಕ್ಷ ಗಳು ಸುಗಂಧಯುಕ್ತವಾದ ಮತ್ತು ಅತಿರಮ್ಯವಾದ ಪುಷ್ಪಗಳನ್ನೂ-ಫಲ ಗಳನ್ನೂ ಧರಿಸಿದ್ದುವು. ಕುಬೇರನ ಉದ್ಯಾನವನವಾದ ಚೈತ್ರರಥೋದ್ಯಾನಕ್ಕೆ ಸದೃಶವಾಗಿದ್ದ, ಇಂದ್ರನ ನಂದನವನದಂತೆ ಅತಿಮನೋಜ್ಞವಾಗಿದ್ದ, ಎಲ್ಲ ಋತುಗಳಲ್ಲಿಯೂ ಫಲ-ಪುಷ್ಪಗಳಿಂದ ಸಮೃದ್ಧವಾಗಿದ್ದು ದುಂಬಿಗಳಿಂದಲೂ ವ್ಯಾಪ್ತವಾಗಿರುತ್ತಿದ್ದ ಲಂಕಾಪಟ್ಟಣದ ಉದ್ಯಾನವನವು ಬಹಳವಾಗಿ ಕಂಗೊಳಿಸುತ್ತಿದ್ದಿತು. ಚಾತಕಪಕ್ಷಿಗಳಿಂದಲೂ, ನೀರುಕೋಳಿಗಳಿಂದಲೂ, ಬಕಪಕ್ಷಿಗಳಿಂದಲೂ ಮತ್ತು ನೃತ್ಯಮಾಡುತ್ತಿದ್ದ ನವಿಲುಗಳಿಂದಲೂ ತುಂಬಿದ್ದ ಆ ಪ್ರದೇಶವು ಬಹಳ ಶೋಭಾಯಮಾನವಾಗಿ ಕಾಣುತ್ತಿದ್ದಿತು. ಅರಣ್ಯದಲ್ಲಿದ್ದ ಚಿಲುಮೆಗಳ ಬಳಿಯಲ್ಲಿ ಕೋಗಿಲೆಗಳ ಸುಮಧುರಧ್ವನಿಯು ಕೇಳಿಬರುತ್ತಿದ್ದಿತು. ಲಂಕಾಪಟ್ಟಣದ ವನೋಪವನಗಳು ಮದಿಸಿದ ಪಕ್ಷಿ ಗಳಿಂದ ಸುಶೋಭಿತವಾಗಿದ್ದುವು. ದುಂಬಿಗಳು ಆ ವನಗಳ ಸುತ್ತಲೂ ತಂಡ-ತಂಡವಾಗಿ ಸಂಚರಿಸುತ್ತಿದ್ದುವು. ವೃಕ್ಷದ ರೆಂಬೆಗಳು ಕೋಗಿಲೆಗಳ ಸುಮ ಧುರಧ್ವನಿಗಳಿಂದಲೂ ಪಕ್ಷಿಗಳ ಚಿಲಿ-ಪಿಲಿ ಶಬ್ದಗಳಿಂದಲೂ ಪ್ರತಿಧ್ವನಿಸು ತ್ತಿದ್ದುವು. ಗಾನಮಾಡುತ್ತಿದ್ದ ದುಂಬಿಗಳಿಂದ ಆ ವನಗಳು ಸೇವಿಸಲ್ಪಡುತ್ತಿ ದ್ದುವು. ಗೀಜಗದ ಹಕ್ಕಿಗಳಿಂದಲೂ ಸಾರಸಪಕ್ಷಿಗಳಿಂದಲೂ ಶಬ್ದಾಯಮಾನ ವಾಗಿದ್ದ ಲಂಕಾಪಟ್ಟಣದ ವನೋಪವನಗಳನ್ನು ವಾನರರು ಪ್ರವೇಶಿಸಿದರು. ಕಾಮರೂಪಿಗಳಾಗಿದ್ದ ಆ ಎಲ್ಲ ವಾನರರೂ ಹೃಷ್ಟರೂ ಸಂತೋಷಭರಿತರೂ ಆಗಿದ್ದರು. ಮಹಾತೇಜಸ್ವಿಗಳಾದ ವಾನರರು ಅಲ್ಲಿ ಪ್ರವೇಶಿಸುತ್ತಲೇ ಪುಷ್ಪಗಳ ಸಂಬಂಧದಿಂದ ಸುಗಂಧಿತವಾಗಿದ್ದ, ಮೂಗಿಗೆ ಸುಖದಾಯಕವಾಗಿದ್ದ ಮಂದಮಾರುತವು ಬೀಸತೊಡಗಿತು. ಇತರ ಕೆಲವರು ದಂಡನಾಯಕರು ವಾನರಸಮೂಹದಿಂದ ಹೊರಬಂದು ಸುಗ್ರೀವನ ಆಜ್ಞೆಯಂತೆ ಧ್ವಜ-ಪತಾಕೆ ಗಳಿಂದ ಸಮಲಂಕೃತವಾಗಿದ್ದ ಲಂಕಾಪಟ್ಟಣವನ್ನು ಪ್ರವೇಶಿಸಿದರು. ಗರ್ಜಿಸು ವವರಲ್ಲಿ ಶ್ರೇಷ್ಠರಾದ ಆ ವಾನರನಾಯಕರು ಸಿಂಹನಾದಗಳಿಂದ ಪಕ್ಷಿಗಳನ್ನು ಬೆದರಿಸುತ್ತಾ ಮೃಗಗಳನ್ನೂ ಆನೆಗಳನ್ನೂ ಆಯಾಸಗೊಳಿಸುತ್ತಾ ಲಂಕೆ ಯನ್ನೇ ನಡುಗಿಸುತ್ತಿದ್ದರು. ಮಹಾವೇಗಶಾಲಿಗಳಾದ ಆ ವಾನರರು ತಮ್ಮ

ಕಾಲುಗಳ ಸಂಘಟ್ಟನೆಗಳಿಂದ ಭೂಮಿಯನ್ನೇ ಮರ್ದಿಸುತ್ತಿದ್ದರು. ಅದ ರಿಂದ ಎದ್ದ ಧೂಳಿಯು ಆಕಾಶವನ್ನೂ ವ್ಯಾಪಿಸಿತು. ವಾನರರ ಆ ಸಿಂಹನಾದ ಗಳಿಂದ ಭಯಗೊಂಡ ಕರಡಿಗಳು, ಸಿಂಹಗಳು, ಎಮ್ಮೆಗಳು, ಆನೆಗಳು, ಜಿಂಕೆಗಳು ಮತ್ತು ಪಕ್ಷಿಗಳು ದಿಕ್ಕಾಪಾಲಾಗಿ ಓಡಿಹೋದುವು. ತ್ರಿಕೂಟ ಪರ್ವತದ ಒಂದು ಶಿಖರವು ಆಕಾಶವನ್ನೇ ಮುಟ್ಟುವಷ್ಟು ಎತ್ತರವಾಗಿದ್ದಿತು. ಆ ಶಿಖರವು ಪುಷ್ಪಗಳಿಂದ ತುಂಬಿದ್ದು ದೊಡ್ಡದಾದ ಬೆಳ್ಳಿಯ ಶಿಖರದಂತೆಯೇ ಕಾಣುತ್ತಿದ್ದಿತು. ಅದರ ವಿಸ್ತಾರವು ನೂರು ಯೋಜನಗಳಷ್ಟಿದ್ದಿತು. ನೋಡಲು ಅತ್ಯಂತಸುಂದರವಾಗಿದ್ದ, ಸ್ವಚ್ಛವಾಗಿದ್ದ, ಕಾಂತಿಯುಕ್ತವಾಗಿದ್ದ, ನುಣುಪಾಗಿದ್ದ ಮತ್ತು ವಿಶಾಲವಾಗಿದ್ದ ಆ ಶಿಖರವು ಪಕ್ಷಿಗಳಿಗೆ ಕೂಡ ಪ್ರವೇಶಿಸಲು ದುಸ್ಸಾಧ್ಯವಾಗಿದ್ದಿತು. ಸಾಮಾನ್ಯರಿಗೆ ಅದನ್ನು ಹತ್ತಲು ಮನಸ್ಸಿನಿಂದ ಕೂಡ ಸಾಧ್ಯವಾಗುತ್ತಿರಲಿಲ್ಲ. ಹೀಗಿರುವಾಗ ಪ್ರತ್ಯಕ್ಷವಾಗಿಯೇ ಅಲ್ಲಿಗೆ ಹತ್ತಿಹೋಗುವ ಸಾಧ್ಯತೆಯೆಲ್ಲಿದೆ? ಅಂತಹ ದುರ್ಗಮವಾದ ತ್ರಿಕೂಟಪರ್ವತದ ಶಿಖರದ ಮೇಲ್ಭಾಗದಲ್ಲಿಯೇ ರಾವಣನಿಂದ ಪರಿಪಾಲಿಸಲ್ಪಡುತ್ತಿರುವ ಲಂಕಾಪಟ್ಟಣವು ನಿರ್ಮಿಸಲ್ಪಟ್ಟಿದ್ದಿತು. ಆ ಪಟ್ಟಣವು ಹತ್ತು ಯೋಜನಗಳಷ್ಟು ಅಗಲವಾಗಿಯೂ ಇಪ್ಪತ್ತು ಯೋಜನಗಳಷ್ಟು ಉದ್ದವಾಗಿಯೂ ಇದ್ದು ಬಿಳಿಯ ಮೋಡಗಳಂತೆಯೇ ಕಾಣುವ ಎತ್ತರವಾದ ಗೋಪುರಗಳಿಂದ ಶೋಭಿಸುತ್ತಿತ್ತು. ಸುವರ್ಣಮಯವಾದ ಮತ್ತು ರಜತಮಯವಾದ ಪ್ರಾಕಾರಗಳಿಂದಲೂ ಕೂಡಿ ಅದು ಅತ್ಯಂತಶೋಭಾಯಮಾನವಾಗಿ ಕಾಣುತ್ತಿತ್ತು.

ಪ್ರಾಸಾದೈಶ್ಚ ವಿಮಾನೈಶ್ಚ ಲಙ್ಕಾ ಪರಮಭೂಷಿತಾ ।
ಘನೈರಿವಾತಪಾಪಾಯೇ ಮಧ್ಯಮಂ ವೈಷ್ಣವಂ ಪದಮ್ ॥೨೧॥

ಬೇಸಿಗೆಯು ಕಳೆದು ಮಳೆಗಾಲವು ಪ್ರಾರಂಭವಾಗುವಾಗ ದಟ್ಟವಾದ ಮೇಘಗಳಿಂದ ಆಕಾಶವು ಶೋಭಾಯಮಾನವಾಗಿ ಕಾಣುವಂತೆ–ಪ್ರಾಸಾದ ಗಳಿಂದಲೂ ಏಳು ಅಂತಸ್ತಿನ ಉಪ್ಪರಿಗೇಮನೆಗಳಿಂದಲೂ ಕೂಡಿದ್ದ ಲಂಕಾ ಪಟ್ಟಣವು ಹೆಚ್ಚು ಶೋಭಾಯಮಾನವಾಗಿ ಕಾಣುತ್ತಿದ್ದಿತು.

ಸಾವಿರ ಕಂಬಗಳ ಅದ್ಭುತವಾದ ಒಂದು ಪ್ರಾಸಾದದಿಂದ ಲಂಕಾ

ಪಟ್ಟಣವು ಸಮಲಂಕೃತವಾಗಿದ್ದಿತು. ಅದು ಕೈಲಾಸಶಿಖರದ ಆಕಾರದಲ್ಲಿದ್ದು ಆಕಾಶದಲ್ಲಿ ಗೆರೆಯನ್ನು ಎಳೆಯುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ರಾವಣರಾಕ್ಷಸನ ಆ ಚೈತ್ಯಪ್ರಾಸಾದವು ಲಂಕಾಪಟ್ಟಣಕ್ಕೇ ಭೂಷಣಪ್ರಾಯ ವಾಗಿದ್ದಿತು. ನೂರು ರಾಕ್ಷಸಯೋಧರು ಆ ಪ್ರಾಸಾದವನ್ನು ಸಮಗ್ರವಾಗಿ ಅನುದಿನವೂ ರಕ್ಷಿಸುತ್ತಿದ್ದರು. ಹೀಗೆ ಆ ಲಂಕಾಪಟ್ಟಣವು ಅತ್ಯಂತ ಮನೋಹರವಾಗಿದ್ದಿತು. ಉದ್ಯಾನವನಗಳಿಂದ ವ್ಯಾಪ್ತವಾಗಿದ್ದಿತು. ನಾನಾ ವಿಧವಾದ ಗೈರಿಕಾದಿಧಾತುಗಳಿಂದ ಚಿತ್ರಿತವಾಗಿ ಕಾಣುತ್ತಿದ್ದ ಕ್ರೀಡಾಪರ್ವತ ಗಳಿಂದ ಪರಿಶೋಭಿಸುತ್ತಿದ್ದಿತು. ನಾನಾವಿಧವಾದ ಪಕ್ಷಿಗಳಿಂದ ನಿನಾದಿತ ವಾಗಿದ್ದಿತು. ನಾನಾವಿಧವಾದ ಮೃಗಗಳಿಂದ ಸೇವಿಸಲ್ಪಡುತ್ತಿದ್ದಿತು. ನಾನಾ ವಿಧವಾದ ಪುಷ್ಪಗಳಿಂದ ಸಮೃದ್ಧವಾಗಿದ್ದಿತು. ವಿಧ-ವಿಧವಾದ ಆಕಾರಗಳುಳ್ಳ ರಾಕ್ಷಸರು ಅಲ್ಲಿ ವಾಸಮಾಡುತ್ತಿದ್ದರು.

ಧನ-ಧಾನ್ಯಗಳಿಂದಲೂ ಮನೋವಾಂಛಿತವಾದ ವಸ್ತುಗಳಿಂದಲೂ ಸಂಪನ್ನವಾಗಿದ್ದ ರಾವಣನ ಲಂಕಾಪಟ್ಟಣವನ್ನು ಲಕ್ಷ್ಮಣನ ಅಣ್ಣನಾದ, ದಿವ್ಯವಾದ ಶರೀರಕಾಂತಿಯಿಂದ ಬೆಳಗುತ್ತಿದ್ದ ಶ್ರೀರಾಮನು ವಾನರರೊಡನೆ ನೋಡಿದನು. ಒತ್ತಾಗಿ ಕಟ್ಟಲ್ಪಟ್ಟಿದ್ದ, ದೊಡ್ಡ-ದೊಡ್ಡ ಸೌಧಗಳಿಂದ ಕೂಡಿದ್ದ, ಸ್ವರ್ಗದಂತಿದ್ದ ಆ ಲಂಕಾಪಟ್ಟಣವನ್ನು ನೋಡಿ ವೀರ್ಯವಂತನಾದ ಶ್ರೀರಾಮನು ವಿಸ್ಮಯಗೊಂಡನು.

ಹೀಗೆ ಶ್ರೀರಾಮನು ಮಹಾವಾನರಸೇನೆಯೊಡನೆ ನಾನಾವಿಧವಾದ ರತ್ನಗಳಿಂದ ಪರಿಪೂರ್ಣವಾಗಿದ್ದ, ಹಲವಾರು ಪ್ರಕಾರದ ರಚನೆಗಳಿಂದ ಶೋಭಿತವಾಗಿದ್ದ, ಎತ್ತರವಾದ ಪ್ರಾಸಾದಗಳ ಸಾಲುಗಳಿಂದ ಸಮಲಂಕೃತ ವಾಗಿದ್ದ, ಮಹಾಯಂತ್ರಗಳಿಂದ ನಿರ್ವಹಿಸುವ ಮಹಾದ್ವಾರಗಳಿಂದ ಕೂಡಿದ್ದ ಅದ್ಭುತವಾದ ಲಂಕಾಪಟ್ಟಣವನ್ನು ನೋಡಿದನು.

ಽ೯ನೆಯ ಸರ್ಗವು ಮುಗಿಯಿತು.

ಸುಗ್ರೀವ-ರಾವಣರ ದ್ವಂದ್ವಯುದ್ಧ

ತತೋ ರಾಮಃ ಸುವೇಲಾಗ್ರಂ ಯೋಜನದ್ವಯಮಣ್ಡಲಮ್ ।
ಆರುರೋಹ ಸ ಸುಗ್ರೀವೋ ಹರಿಯೂಥೈಃ ಸಮನ್ವಿತಃ ॥೧॥

ಬಳಿಕ ವಾನರನಾಯಕರಿಂದಲೂ ಸುಗ್ರೀವನಿಂದಲೂ ಕೂಡಿದ್ದ ಶ್ರೀರಾಮನು ಎರಡು ಯೋಜನಗಳಷ್ಟು ವಿಸ್ತಾರವಿದ್ದ, ಅತ್ಯಂತ ಎತ್ತರ ವಾಗಿದ್ದ ಸುವೇಲಪರ್ವತದ ಶಿಖರವನ್ನು ಹತ್ತಿದನು.

ಮುಹೂರ್ತಕಾಲದವರೆಗೆ ಅಲ್ಲಿಯೇ ಇದ್ದು ಹತ್ತು ದಿಕ್ಕುಗಳನ್ನೂ ವೀಕ್ಷಿಸುತ್ತಾ ತ್ರಿಕೂಟಪರ್ವತದ ಶಿಖರದಲ್ಲಿ ವಿಶ್ವಕರ್ಮನಿಂದ ನಿರ್ಮಿಸಲ್ಪ ಟ್ಟಿದ್ದ, ರಮ್ಯವಾದ ಕಾನನಗಳಿಂದ ಸುಶೋಭಿತವಾಗಿದ್ದ ಲಂಕಾಪಟ್ಟಣವನ್ನು ನೋಡಿದನು. ಅದೇ ಸಮಯದಲ್ಲಿ ಲಂಕಾಪಟ್ಟಣದ ಗೋಪುರದ ತುದಿ ಯಲ್ಲಿ ನಿಂತಿದ್ದ, ಎದುರಿಸಲು ಅಸಾಧ್ಯನಾದ, ರಾಕ್ಷಸೇಂದ್ರನಾದ ರಾವಣ ನನ್ನೂ ನೋಡಿದನು. ಅವನ ಎರಡು ಕಡೆಗಳಲ್ಲಿಯೂ ಸೇವಕಿಯರು ಬಿಳಿಯ ಚಾಮರಗಳನ್ನು ಹಿಡಿದು ಬೀಸುತ್ತಿದ್ದರು. ತಲೆಯ ಮೇಲೆ ವಿಜಯಚ್ಛತ್ರವು ಶೋಭಿಸುತ್ತಿದ್ದಿತು. ಶರೀರವೆಲ್ಲವೂ ರಕ್ತಚಂದನದಿಂದ ಚರ್ಚಿತವಾಗಿದ್ದಿತು. ರಾವಣನು ರತ್ನಾಭರಣಗಳಿಂದ ಸಮಲಂಕೃತನಾಗಿದ್ದನು. ನೀಲಮೇಘಸದೃಶ ನಾಗಿದ್ದನು. ಸುವರ್ಣಮಯವಾದ ವಸ್ತ್ರವನ್ನುಟ್ಟಿದ್ದನು. ಐರಾವತದ ದಂತದ ತುದಿಯಿಂದ ಗಾಯಗೊಳಿಸಲ್ಪಟ್ಟ ವಕ್ಷಃಸ್ಥಳವುಳ್ಳವನಾಗಿದ್ದನು. ಮೊಲದ ರಕ್ತಕ್ಕೆ ಸಮಾನವಾದ ಕೆಂಪುಬಣ್ಣದ ವಸ್ತ್ರದಿಂದ ಆಚ್ಛಾದಿತನಾಗಿದ್ದನು. ಆಕಾಶದಲ್ಲಿ ಸಂಧ್ಯಾಕಾಲದ ಬಿಸಿಲಿನಿಂದ ವ್ಯಾಪ್ತವಾದ ಮೇಘರಾಶಿಯಂತೆಯೇ ಕಾಣುತ್ತಿದ್ದನು. ವಾನರನಾಯಕರೂ ಮತ್ತು ಶ್ರೀರಾಮನೂ ನೋಡುತ್ತಿದ್ದಂತೆಯೇ ಸುಗ್ರೀವನು ರಾವಣರಾಕ್ಷಸನ ದರ್ಶನದಿಂದ ಕೆರಳಿ ಮೇಲೆದ್ದು ನಿಂತನು. ಕ್ರೋಧದ ರಭಸದಿಂದ ಉದ್ದೀಪ್ತನಾದ ಸುಗ್ರೀವನು ಸತ್ತ್ವದಿಂದಲೂ, ಬಲದಿಂದಲೂ ಪ್ರೇರಿತನಾಗಿ ಸುವೇಲಪರ್ವತದ ಶಿಖರಾಗ್ರ ಭಾಗದಿಂದ ಲಂಕೆಯಲ್ಲಿ ರಾವಣನು ನಿಂತಿದ್ದ ಗೋಪುರದ ಶಿಖರಕ್ಕೆ ಹಾರಿಬಿಟ್ಟನು. ಗೋಪುರದ ಶಿಖರದಲ್ಲಿ ಕ್ಷಣಕಾಲ ನಿಂತು ರಾವಣನನ್ನೇ

ನೋಡುತ್ತಾ ಭಯರಹಿತವಾದ ಮನಸ್ಸಿನಿಂದ ಕೂಡಿ ರಾವಣನನ್ನು ತೃಣೀ ಕರಿಸಿ ಕಠೋರವಾದ ಈ ಮಾತುಗಳನ್ನು ಹೇಳಿದನು :

"ಎಲವೋ ರಾಕ್ಷಸನೇ! ನಾನು ಲೋಕಸ್ವಾಮಿಯಾದ ಶ್ರೀರಾಮನಿಗೆ ಮಿತ್ರನೂ ದಾಸನೂ ಆಗಿರುವೆನು. ಮಹಾರಾಜನಾದ ಶ್ರೀರಾಮನ ತೇಜಸ್ಸಿನ ಪ್ರಭಾವದಿಂದಾಗಿ ಇಂದು ನೀನು ನನ್ನಿಂದ ತಪ್ಪಿಸಿಕೊಂಡು ಹೋಗಲಾರೆ."

ಹೀಗೆ ಹೇಳುತ್ತಾ ಸುಗ್ರೀವನು ಥಂಗನೆ ಹಾರಿ ರಾವಣನನ್ನು ಆಕ್ರಮಿಸಿ, ಚಿತ್ರಿತವಾಗಿದ್ದ ಅವನ ಕಿರೀಟವನ್ನು ಸೆಳೆದು ಭೂಮಿಯ ಮೇಲೆ ಕೆಡವಿದನು. ಹೀಗೆ ಸುಗ್ರೀವನು ತೀವ್ರಗತಿಯಿಂದ ತನ್ನ ಮೇಲೆ ಆಕ್ರಮಣನಡೆಸುತ್ತಿರುವುದನ್ನು ನೋಡಿ ರಾವಣನು ಗರ್ಜಿಸುತ್ತಾ ಹೇಳಿದನು :

"ಎಲವೋ ವಾನರನೇ! ಇದುವರೆಗೂ ನೀನು ನನ್ನ ಪರೋಕ್ಷದಲ್ಲಿದ್ದೆ. ಆದುದರಿಂದ ನೀನು ಸುಗ್ರೀವನಾಗಿದ್ದೆ. ಈಗ ನನ್ನ ಮುಂದೆ ಬಂದಿರುವೆ. ಈಗಲೀಗ ನೀನು ಕ್ಷಣಮಾತ್ರದಲ್ಲಿ ಹೀನಗ್ರೀವನಾಗುವೆ. ಸುಂದರವಾದ ಕುತ್ತಿಗೆಯನ್ನು ಹೊಂದಿದ್ದ ನೀನೀಗ ಕುತ್ತಿಗೆಯಿಲ್ಲದವನಾಗುವೆ."

ಹೀಗೆ ಹೇಳುತ್ತಾ ರಾವಣನು ತನ್ನೆರಡು ಭುಜಗಳಿಂದಲೂ ಸುಗ್ರೀವನನ್ನು ಮೇಲಕ್ಕೆತ್ತಿ ನೆಲಕ್ಕೆ ಅಪ್ಪಳಿಸಿದನು. ಪುಟವೆದ್ದ ಚೆಂಡಿನಂತೆ ಸುಗ್ರೀವನು ಕ್ಷಣಮಾತ್ರದಲ್ಲಿ ಮೇಲೆದ್ದು ರಾವಣನನ್ನು ತನ್ನ ಭುಜಗಳಿಂದ ಹಿಡಿದು ನೆಲಕ್ಕಪ್ಪಳಿಸಿದನು. ಅವರಿಬ್ಬರಿಗೂ ಘೋರವಾದ ದ್ವಂದ್ವಯುದ್ಧವು ಗೋಪುರದ ಶಿಖರದಲ್ಲಿಯೇ ಪ್ರಾರಂಭವಾಯಿತು. ಇಬ್ಬರ ಶರೀರಗಳೂ ಬೆವರಿನಿಂದ ನೆನೆದುಹೋಗಿದ್ದುವು. ಪರಸ್ಪರವಾದ ಪ್ರಹಾರಗಳಿಂದ ಶರೀರಾದ್ಯಂತ ಗಾಯಗಳಾಗಿ ರಕ್ತವು ಹರಿದು ಕೆಂಪಾದ ಶರೀರವುಳ್ಳವರಾದರು. ಒಬ್ಬರನ್ನೊಬ್ಬರು ಬಾಚಿ ತಬ್ಬಿಕೊಂಡಾಗ ಆ ಬಿಗಿತದಿಂದ ಇಬ್ಬರಲ್ಲಿ ಯಾರೊಬ್ಬರೂ ತಪ್ಪಿಸಿಕೊಳ್ಳಲಾಗದೇ ಏಕಕಾಲದಲ್ಲಿ ಇಬ್ಬರೂ ನಿಶ್ಚೇಷ್ಟರಾಗುತ್ತಿದ್ದರು. ಆ ಸಮಯದಲ್ಲಿ ಆ ರಾಕ್ಷಸ-ವಾನರರು ಬೂರುಗದ ಮತ್ತು ಮುತ್ತುಗದ ಮರಗಳಂತೆಯೇ ಕಾಣುತ್ತಿದ್ದರು.

ರಾಕ್ಷಸರಾಜ-ವಾನರರಾಜರಿಬ್ಬರೂ ಮಹಾಬಲಿಷ್ಠರಾಗಿದ್ದರು. ಮುಷ್ಟಿಗಳ ಗುದ್ದಾಟಗಳಿಂದಲೂ, ಅಂಗೈಗಳ ಪ್ರಹಾರಗಳಿಂದಲೂ, ಮೊಳಕೈಗಳ

ತಿವಿತಗಳಿಂದಲೂ, ಉಗುರುಗಳ ಪರಚುವಿಕೆಯಿಂದಲೂ ಸಾಮಾನ್ಯರಿಂದ ಸಹಿಸಲು ಅಶಕ್ಯವಾದ ಘೋರಯುದ್ಧವನ್ನು ಮಾಡುತ್ತಿದ್ದರು. ಭಯಂಕರ ವೇಗವಂತರಾದ ರಾವಣ-ಸುಗ್ರೀವರು ಗೋಪುರದ ಜಗುಲಿಯ ಮೇಲೆ ಬಹಳ

ಹೊತ್ತಿನವರೆಗೂ ಭಯಂಕರವಾದ ಮಲ್ಲಯುದ್ಧವನ್ನು ಮಾಡುತ್ತಿದ್ದರು. ಒಬ್ಬರು ಮತ್ತೊಬ್ಬರನ್ನು ಮೇಲಕ್ಕೆತ್ತಿ ನೆಲದ ಮೇಲೆ ಅಪ್ಪಳಿಸುತ್ತಿದ್ದರು. ಒಬ್ಬರು ಮತ್ತೊಬ್ಬರ ದೇಹವನ್ನು ಬಲಪೂರ್ವಕವಾಗಿ ಬಗ್ಗಿಸುತ್ತಿದ್ದರು. ಹಾಗೊಮ್ಮೆ ಹೀಗೊಮ್ಮೆ ಹೆಜ್ಜೆಗಳನ್ನಿಡುತ್ತಾ ಗೋಪುರದ ಜಗುಲಿಯಲ್ಲಿಯೇ ಇಬ್ಬರೂ ಯುದ್ಧಮಾಡುತ್ತಿದ್ದರು. ಒಬ್ಬರು ಮತ್ತೊಬ್ಬರನ್ನು ಬಹಳವಾಗಿ ಪೀಡಿಸುತ್ತಿದ್ದು ಇಬ್ಬರೂ ಬೇರೆ-ಬೇರೆಯಾಗಿ ಒಬ್ಬರನ್ನು ಮತ್ತೊಬ್ಬರು ತಳ್ಳಿಕೊಂಡು ಹೋಗುತ್ತಿದ್ದಾಗ ಇಬ್ಬರೂ ಕೋಟೆ ಮತ್ತು ಕಂದಕಗಳ ಮಧ್ಯದಲ್ಲಿ ಬಿದ್ದುಬಿಟ್ಟರು. ಕ್ಷಣಕಾಲ ಭೂಮಿಯ ಮೇಲೆ ಬಿದ್ದಿದ್ದು ಇಬ್ಬರೂ

ದೀರ್ಘವಾಗಿ ನಿಟ್ಟುಸಿರುಬಿಡುತ್ತಿದ್ದರು. ಮರುಕ್ಷಣದಲ್ಲಿಯೇ ಇಬ್ಬರೂ ಗೋಪುರದ ಮೇಲಕ್ಕೆ ಹಾರಿ ಪುನಃ ಯುದ್ಧವನ್ನು ಪ್ರಾರಂಭಿಸಿದರು. ತೋಳುಗಳೆಂಬ ಪಾಶದಿಂದ ಒಬ್ಬರನ್ನು ಮತ್ತೊಬ್ಬರು ಕ್ಷಣ-ಕ್ಷಣಕ್ಕೂ ಬಿಗಿಯಾಗಿ ಬಿಗಿಯುತ್ತಿದ್ದರು. ಇಬ್ಬರೂ ಸಂರಂಭ ಮತ್ತು ಶಿಕ್ಷೆಗಳೆಂಬ ಮಲ್ಲಯುದ್ಧದ ಪ್ರಕ್ರಿಯೆಗಳಲ್ಲಿ ನಿಷ್ಣಾತರಾಗಿದ್ದರು. ಶಾರೀರಕಬಲದಿಂದ ಸಂಪನ್ನರಾಗಿದ್ದರು. ಆದುದರಿಂದ ಇಬ್ಬರೂ ಮಲ್ಲಯುದ್ಧದ ವರಸೆಗಳನ್ನು ಒಂದಾದ ಮೇಲೆ ಮತ್ತೊಂದರಂತೆ ಪ್ರಯೋಗಿಸುತ್ತಾ ಗೋಪುರದ ಜಗುಲಿಯ ಸುತ್ತಲೂ ಸುತ್ತುತ್ತಿದ್ದರು. ಸಿಂಹ-ಶಾರ್ದೂಲಗಳಂತೆ ಇಬ್ಬರಿಗೂ ಕೋರೆದಾಡೆಗಳಿದ್ದುವು. ಆನೆಯ ಮರಿಗಳಂತೆ ಪರಸ್ಪರವಾಗಿ ತೆಕ್ಕೆಹಾಕಿಕೊಂಡಿದ್ದರು. ಒಬ್ಬರು ಮತ್ತೊಬ್ಬರ ವರಸೆಯನ್ನರಿತು ಕೈಗಳಿಂದ ಪ್ರಹರಿಸುತ್ತಾ ಇಬ್ಬರೂ ಒಟ್ಟಾಗಿಯೇ ನೆಲದಮೇಲೆ ಬಿದ್ದರು. ಇಬ್ಬರೂ ವ್ಯಾಯಾಮಗಳನ್ನು ಮಾಡಿದ್ದರು. ಮಲ್ಲಯುದ್ಧದ ಶಿಕ್ಷಣದಲ್ಲಿ ಶಿಕ್ಷಿತರಾಗಿದ್ದರು. ಬಲಸಂಪನ್ನರಾಗಿದ್ದರು. ಆದುದರಿಂದ ವಿಜಯಕ್ಕಾಗಿ ಇಬ್ಬರೂ ಹೋರಾಡುತ್ತಿದ್ದರು. ಪರಸ್ಪರವಾಗಿ ಒಬ್ಬರನ್ನೊಬ್ಬರು ಆಕ್ಷೇಪಿಸುತ್ತಾ ಮಲ್ಲಯುದ್ಧದ ವರಸೆಗಳಿಗೆ ಅನುಸಾರವಾಗಿ ಇಲ್ಲಿಂದಲ್ಲಿಗೂ ಅಲ್ಲಿಂದಿಲ್ಲಿಗೂ ಸಂಚರಿಸುತ್ತಿದ್ದರು. ಅಷ್ಟೊಂದು ಭಯಂಕರವಾಗಿ ಯುದ್ಧಮಾಡುತ್ತಿದ್ದರೂ ಅವರಲ್ಲಿ ಯಾರೊಬ್ಬರಿಗೂ ಆಯಾಸವಾಗಲಿಲ್ಲ. ಮದಿಸಿದ ಆನೆಗಳಂತಿದ್ದ ರಾವಣ-ಸುಗ್ರೀವರು ಆನೆಯ ಸೊಂಡಿಲುಗಳಂತಿದ್ದ ತಮ್ಮ ಬಾಹುದಂಡಗಳಿಂದ ಪ್ರಹಾರಗಳನ್ನು ತಪ್ಪಿಸಿಕೊಳ್ಳಲು ಒಬ್ಬರು ಮತ್ತೊಬ್ಬರನ್ನು ದೂರಕ್ಕೆ ತಳ್ಳುತ್ತಿದ್ದರು. ಹೀಗೆ ಬಹಳ ಹೊತ್ತಿನವರೆಗೆ ಆವೇಶಪೂರಿತರಾಗಿ ಯುದ್ಧಮಾಡುತ್ತಿದ್ದ ಅವರು ಮಂಡಲಾಕಾರದ ಮಾರ್ಗದಲ್ಲಿ ಬಹಳ ಬೇಗ ಚಲಿಸತೊಡಗಿದರು. ಒಬ್ಬರು ಮತ್ತೊಬ್ಬರನ್ನು ಹಿಡಿದು ಪ್ರಹರಿಸಲು ಪ್ರಯತ್ನಿಸುತ್ತಿದ್ದರು. ತಿಂಡಿಗಾಗಿ ಗುರುಗುಟ್ಟುತ್ತಾ ಎದುರು-ಬದುರಾಗಿ ನಿಂತಿರುವ ಎರಡು ಬೆಕ್ಕುಗಳಂತೆ–ರಾವಣ-ಸುಗ್ರೀವರು ಪರಸ್ಪರವಾಗಿ ಕೆಡವಿ ಕೆಳಕ್ಕೆ ಬೀಳಿಸಲು ಅವಕಾಶವನ್ನು ನಿರೀಕ್ಷಿಸುತ್ತಾ ನಿಂತಿದ್ದರು. ವಿಚಿತ್ರವಾದ ಮಂಡಲಕ್ರಮಗಳಲ್ಲಿ* ತಿರುಗುತ್ತಾ,

---

* ಭರತಮುನಿಯು ಹೇಳಿರುವ ವಿಧ-ವಿಧ ಸ್ಥಾನಗಳು : ವೈಷ್ಣವಂ ಸಮಪಾದಂ ಚ ವೈಶಾಖಂ ಮಂಡಲಂ ತಥಾ । ಪ್ರತ್ಯಾಲೀಢಮನಾಲೀಢಂ ಸ್ಥಾನಾನ್ಯೇತಾನಿ ಷಣ್ಣ

ವಿಧ-ವಿಧವಾದ ಸ್ಥಾನಗಳನ್ನು[1] ಪ್ರದರ್ಶಿಸುತ್ತಾ, ಗೋಮೂತ್ರದಂತೆ ಕುಟಿಲ ಗತಿಯಲ್ಲಿ ಕೆಲವೊಮ್ಮೆ ಸಂಚರಿಸುತ್ತಾ, ಕೆಲವು ಬಾರಿ ಹಿಂದಕ್ಕೂ ಕೆಲವು ಬಾರಿ ಮುಂದಕ್ಕೂ ಹೋಗುತ್ತಾ ವಾನರ-ರಾಕ್ಷಸರು ಮಲ್ಲಯುದ್ಧ ಮಾಡುತ್ತಿದ್ದರು. ಅವರು ಕೆಲವು ವೇಳೆ ಅಡ್ಡವಾಗಿ ಹೋಗುತ್ತಿದ್ದರು. ಎಡಕ್ಕೂ-ಬಲಕ್ಕೂ ತಿರುಗುತ್ತಿದ್ದರು. ಕ್ಷಣಮಾತ್ರದಲ್ಲಿ ಸ್ಥಾನಪಲ್ಲಟದಿಂದ ಹೊಡೆತವನ್ನು ತಪ್ಪಿಸಿಕೊಳ್ಳುತ್ತಿದ್ದರು. (ಇದಕ್ಕೆ ಪ್ರಹಾರಗಳ ಪರಿಮೋಕ್ಷವೆಂದು ಹೆಸರು). ಕುಯುಕ್ತಿಯನ್ನು ಪ್ರಯೋಗಿಸಿ ಶತ್ರುವನ್ನು ಪ್ರಹರಿಸದೇ ಇರುವುದು. (ಇದಕ್ಕೆ ವರ್ಜನವೆಂದು ಹೆಸರು.) ಇಬ್ಬರಲ್ಲಿ ಒಬ್ಬನು ನಿಂತಿದ್ದು ಮತ್ತೊಬ್ಬನು ನಾಲ್ಕು ಕಡೆಗಳಲ್ಲೂ ಓಡಾಡುವುದು. (ಇದಕ್ಕೆ ಪರಿಧಾವನವೆಂದು ಹೆಸರು.) ಶತ್ರುವಿನ ಎದುರಾಗಿ ರಭಸದಿಂದ ಹೋಗುವುದು. (ಇದಕ್ಕೆ ಅಭಿದ್ರವಣವೆಂದು ಹೆಸರು.) ಬಗ್ಗಿಕೊಂಡು ಹೋಗುವುದು ಅಥವಾ ಕಪ್ಪೆ ಯಂತೆ ಕುಪ್ಪಿಕೊಂಡು ಹೋಗುವುದು. (ಇದಕ್ಕೆ ಆಪ್ಲಾವವೆಂದು ಹೆಸರು.) ಒಂದೇ ಸ್ಥಳದಲ್ಲಿ ಯುದ್ಧಮಾಡುತ್ತಾ ನಿಲ್ಲುವುದು. (ಇದಕ್ಕೆ ಸಂಗ್ರಹಾವ ಸ್ಥಾನಂ ಎಂದು ಹೆಸರು.) ಪರಾಙ್ಮುಖನಾಗುವುದು ಪರಾವೃತ್ತ. ಶತ್ರುವನ್ನು ಹಿಡಿಯುವುದಕ್ಕಾಗಿ ಶರೀರವನ್ನು ಸಂಕುಚಿಸಿಕೊಂಡು ಹೋಗುವುದು ಅವ ದ್ರುತ. ಪ್ರತಿಯೋಧಿಯನ್ನು ಕಾಲಿನಿಂದ ಪ್ರಹರಿಸಲು ಅಧೋಮುಖವಾಗಿ

ಣಾಮ್ ॥ ವೈಷ್ಣವ, ಸಮಪಾದ, ವೈಶಾಖ, ಮಂಡಲ, ಪ್ರತ್ಯಾಲೀಢ, ಅನಾಲೀಢ–ಇವು ಆರು ಸ್ಥಾನವಿಶೇಷಗಳು.

[1] ಭರತಮುನಿಯು ಮಲ್ಲಯುದ್ಧದಲ್ಲಿ ನಾಲ್ಕು ವಿಧವಾದ ಮಂಡಲಗಳನ್ನು ಹೇಳಿದ್ದಾನೆ : ಏಕಪಾದಪ್ರಚಾರೇಣ ಚಾರಿಸಂಜ್ಞಂ ತು ಮಣ್ಡಲಮ್ । ದ್ವಿಪಾದಕ್ರಮಣಂ ಯತ್ತು ಕರಣಾಖ್ಯಂ ತು ಮಣ್ಡಲಮ್ । ಕರಣಾನಾಂ ಸಮಾಯೋಗಾತ್ಖಣ್ಡಮಣ್ಡಲ ಮೀರಿತಮ್। ಖಣ್ಡೈಸ್ತ್ರಿಭಿಶ್ಚತುರ್ಭಿರ್ವಾ ಮಹಾಮಣ್ಡಲಮೀರಿತಮ್ ॥ ಒಂದು ಕಾಲನ್ನು ಮುಂದಿಟ್ಟುಕೊಂಡು ಮಂಡಲಾಕಾರದಲ್ಲಿ ಶತ್ರುವಿನ ಮೇಲೆ ಆಕ್ರಮಣ ಮಾಡುವುದಕ್ಕೆ ಚಾರಿಮಂಡಲವೆಂದು ಹೆಸರು. ಎರಡು ಕಾಲುಗಳಿಂದಲೂ ಮಂಡಲಾಕಾರವಾಗಿ ತಿರುಗುತ್ತಾ ಶತ್ರುವಿನ ಮೇಲೆ ಆಕ್ರಮಣಮಾಡುವುದಕ್ಕೆ ಕರಣಮಂಡಲವೆಂದು ಹೆಸರು. ಇಂತಹ ಅನೇಕ ಕರಣಮಂಡಲಗಳ ಸಂಯೋಗದಿಂದ ಖಂಡಮಂಡಲವಾಗುತ್ತದೆ. ಮೂರು-ನಾಲ್ಕು ಖಂಡಮಂಡಲಗಳ ಸಂಯೋಗದಿಂದ ಒಂದು ಮಹಾಮಂಡಲವಾಗುತ್ತದೆ.

ಹೋಗುವುದು ಪ್ಲವನ. ಪ್ರತಿಯೋಧಿಯ ತೋಳುಗಳನ್ನು ಹಿಡಿದುಕೊಳ್ಳಲು ತನ್ನ ತೋಳುಗಳನ್ನು ಪ್ರಸರಿಸುವುದು ಉಪನ್ಯಸ್ತ. ಪ್ರತಿಯೋಧಿಯು ಹಿಡಿಯುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಕೈಗಳನ್ನು ಹಿಂದಕ್ಕಿಟ್ಟುಕೊಳ್ಳುವುದು ಅಪನ್ಯಸ್ತ. ಇವೇ ಮುಂತಾದ ಮಲ್ಲಯುದ್ಧಕ್ರಮಗಳಿಂದ ಯುದ್ಧಮಾರ್ಗದಲ್ಲಿ ವಿಶಾರದರಾದ ಸುಗ್ರೀವ-ರಾವಣರು ಗೋಪುರದ ಜಗುಲಿಯಲ್ಲಿ ಮಲ್ಲಯುದ್ಧವನ್ನು ಮಾಡುತ್ತಿದ್ದರು. ಆ ಮಧ್ಯದಲ್ಲಿ ರಾವಣನು ತನ್ನಲ್ಲಿರುವ ಮಾಯಾಶಕ್ತಿಯನ್ನು ಪ್ರಯೋಗಿಸಲು ಸಿದ್ಧನಾಗುತ್ತಿದ್ದನು. ಅದನ್ನು ತಿಳಿದ, ವಿಜಯದಿಂದ ಪ್ರಕಾಶಮಾನನಾಗಿದ್ದ, ನಿರಾಯಾಸನಾಗಿದ್ದ ಸುಗ್ರೀವನು ಆಕಾಶಕ್ಕೆ ಹಾರಿದನು. ವಾನರರಾಜನಿಂದ ವಂಚಿತನಾದ ರಾವಣನು ಸುಗ್ರೀವನು ಹಾರಿಹೋಗುತ್ತಿರುವುದನ್ನು ನೋಡುತ್ತಾ ಗೋಪುರದಲ್ಲಿಯೇ ನಿಂತಿದ್ದನು.

ಕಪಿಶ್ರೇಷ್ಠರ ನಾಯಕನಾದ, ಸೂರ್ಯನ ಮಗನಾದ ಸುಗ್ರೀವನು ನಿಶಾಚರರ ನಾಯಕನಾದ ರಾವಣನಿಗೆ ಯುದ್ಧದಲ್ಲಿ ಆಯಾಸವನ್ನುಂಟು ಮಾಡಿ ವಿಶಾಲವಾದ ಆಕಾಶವನ್ನು ಲಂಘಿಸಿ ವಾನರಸೇನೆಯ ಮಧ್ಯದಲ್ಲಿದ್ದ ಶ್ರೀರಾಮನ ಬಳಿಗೆ ಬಂದನು.

ಹೀಗೆ ಸೂರ್ಯನ ಮಗನಾದ ವಾಯುವಿನ ವೇಗಕ್ಕೆ ಸಮಾನವಾದ ವೇಗವುಳ್ಳ ಸುಗ್ರೀವನು ಅದ್ಭುತವಾದ ಕಾರ್ಯವನ್ನು ಮಾಡಿ ದಶರಥನ ಮಗನ ಯುದ್ಧೋತ್ಸಾಹವನ್ನು ಹೆಚ್ಚಿಸುತ್ತಾ ಪರಮಹೃಷ್ಟನಾಗಿ ವಾನರ ಮಹಾಸೈನ್ಯವನ್ನು ಪ್ರವೇಶಿಸಿದನು. ಆ ಸಮಯದಲ್ಲಿ ವಾನರಮುಖ್ಯರೆಲ್ಲರೂ ಸೇರಿ ಸುಗ್ರೀವನನ್ನು ಯಥಾಯೋಗ್ಯವಾಗಿ ಪೂಜಿಸಿ ಸತ್ಕರಿಸಿದರು.

೪೦ನೆಯ ಸರ್ಗವು ಮುಗಿಯಿತು.

ದುಃಸಾಹಸಕ್ಕೆ ಕೈಹಾಕದಂತೆ ಶ್ರೀರಾಮನು ಸುಗ್ರೀವನನ್ನು ಎಚ್ಚರಿಸಿ ನಾಲ್ಕು ಮಹಾದ್ವಾರಗಳನ್ನು ಆಕ್ರಮಿಸಲು ವಾನರಸೈನ್ಯವನ್ನು ವಿಭಜಿಸಿ ಕಳುಹಿಸಿದುದು : ವಾನರರ ಆಕ್ರಮಣದಿಂದ ರಾಕ್ಷಸರ ಭಯ

ಅಥ ತಸ್ಮಿನ್ನಿಮಿತ್ತಾನಿ ದೃಷ್ಟ್ವಾ ಲಕ್ಷ್ಮಣಪೂರ್ವಜಃ ।
ಸುಗ್ರೀವಂ ಸಂಪರಿಷ್ವಜ್ಯ ತದಾ ವಚನಮಬ್ರವೀತ್ ॥೧॥

ಬಳಿಕ ಶ್ರೀರಾಮನು ಸುಗ್ರೀವನ ಶರೀರದಲ್ಲಾಗಿದ್ದ ಗಾಯಗಳನ್ನು ನೋಡಿ ಅವನನ್ನು ಆಲಿಂಗಿಸಿಕೊಂಡು ಸಂತೈಸುತ್ತಾ ಹೇಳಿದನು :

"ಸುಗ್ರೀವ! ನನ್ನೊಡನೆ ಸಮಾಲೋಚಿಸದೆಯೇ ನೀನು ಇಂತಹ ಸಾಹಸಕಾರ್ಯವನ್ನು ಮಾಡಿರುವೆ. ಹೀಗೆ ಸಾಹಸಕಾರ್ಯಗಳನ್ನು ರಾಜರಾದವರು ಯಾವಾಗಲೂ ಮಾಡುವುದಿಲ್ಲ. ಸಾಹಸಪ್ರಿಯನೇ! ನೀನು ನನ್ನನ್ನೂ, ಈ ವಾನರಸೈನ್ಯವನ್ನೂ ಮತ್ತು ವಿಭೀಷಣನನ್ನೂ ಸಂಶಯಸ್ಥಿತಿಯಲ್ಲಿ ನಿಲ್ಲಿಸಿ, ಕ್ಲೇಶದಾಯಕವಾದ ಸಾಹಸವನ್ನು ಮಾಡಿದೆ. ಅರಿಂದಮನೇ! ಪುನಃ ಇಂತಹ ದುಃಸಾಹಸಕ್ಕೆ ಕೈಹಾಕಬೇಡ. ಪ್ರಬಲನಾದ ಶತ್ರುವಿನ ಜೊತೆಯಲ್ಲಿ ಯುದ್ಧ ಮಾಡುವಾಗ ನಿನಗೇನಾದರೂ ಸಂಭವಿಸಿಬಿಟ್ಟಿದ್ದರೆ ಸೀತೆಯಿಂದ ನನಗೇನಾಗಬೇಕಾಗಿದ್ದಿತು? ಭರತನಿಂದಾಗಲೀ, ಲಕ್ಷ್ಮಣನಿಂದಾಗಲೀ, ಕಡೆಯ ತಮ್ಮನಾದ ಶತ್ರುಘ್ನನಿಂದಾಗಲೀ ನನಗೇನಾಗಬೇಕಾಗಿದ್ದಿತು? ಕಡೆಗೆ ನನ್ನ ಶರೀರದಿಂದಾದರೂ ನನಗೇನಾಗಬೇಕಾಗಿದ್ದಿತು?

ಮಹೇಂದ್ರ-ವರುಣರ ಪರಾಕ್ರಮಕ್ಕೆ ಅನುರೂಪವಾದ ಪರಾಕ್ರಮವಿರುವವನೇ! ಮಿತ್ರನೇ! ನೀನು ಮಹಾಪರಾಕ್ರಮಿಯೆಂಬುದನ್ನು ನಾನು ತಿಳಿದಿದ್ದರೂ ನೀನು ಜೀವದಿಂದ ಹಿಂದಿರುಗದಿದ್ದರೆ ನಾನು ಪುತ್ರ-ಬಲ-ವಾಹನಗಳಿಂದ ಕೂಡಿರುವ ರಾವಣನನ್ನು ಯುದ್ಧದಲ್ಲಿ ಸಂಹರಿಸಿ ಲಂಕೆಯಲ್ಲಿ ವಿಭೀಷಣನಿಗೆ ಪಟ್ಟಾಭಿಷೇಕಮಾಡಿ ಭರತನಿಗೆ ರಾಜ್ಯವನ್ನು ವಹಿಸಿಕೊಟ್ಟು ದೇಹವನ್ನು ಪರಿತ್ಯಜಿಸಬೇಕೆಂದು ನಿಶ್ಚಯಮಾಡಿದ್ದೆನು."

ಹೀಗೆ ಹೇಳಿದ ಶ್ರೀರಾಮನಿಗೆ ಸುಗ್ರೀವನು ಹೇಳಿದನು :

"ರಾಘವ! ನನ್ನ ಪರಾಕ್ರಮವೆಷ್ಟೆಂಬುದನ್ನು ಅರಿತುಕೊಂಡಿರುವ ನಾನು ನಿನ್ನ ಭಾರ್ಯೆಯನ್ನು ಅಪಹರಿಸಿರುವ ರಾವಣನನ್ನು ಪ್ರತ್ಯಕ್ಷವಾಗಿ ನೋಡಿಯೂ ಹೇಗೆ ತಾನೇ ಸುಮ್ಮನಿರಲಿ? ಅಂತಹ ದುರಾತ್ಮನನ್ನು ನಾನು ಹೇಗೆ ತಾನೇ ಕ್ಷಮಿಸಲಿ?"

ಹೀಗೆ ಹೇಳಿದ ಸುಗ್ರೀವನನ್ನು ಶ್ರೀರಾಮನು ಯಥೋಚಿತವಾಗಿ ಅಭಿನಂದಿಸಿ ಶೋಭಾಸಂಪನ್ನನಾಗಿದ್ದ ಲಕ್ಷ್ಮಣನಿಗೆ ಹೇಳಿದನು :

"ಲಕ್ಷ್ಮಣ! ಶೀತಲವಾದ ನೀರಿನಿಂದ ಕೂಡಿರುವ ಜಲಾಶಯವಿರುವ ಮತ್ತು ಫಲಗಳಿಂದ ಸಮೃದ್ಧವಾಗಿರುವ ವನವನ್ನು ಆಶ್ರಯಿಸಿ ಅಲ್ಲಿ ನಾವು ಈ ವಿಶಾಲವಾದ ವಾನರಸೈನ್ಯವನ್ನು ವಿಭಜಿಸಿ ಪ್ರತ್ಯೇಕ-ಪ್ರತ್ಯೇಕವಾದ ವ್ಯೂಹಗಳನ್ನು ರಚಿಸಿಕೊಂಡು ಯುದ್ಧಕ್ಕೆ ಸಿದ್ಧವಾಗಿ ನಿಲ್ಲೋಣ. ನಾನು ಈ ಸಮಯದಲ್ಲಿ ಲೋಕಸಂಹಾರವನ್ನು ಸೂಚಿಸುವ ಭಯಂಕರವಾದ ಅಪಶಕುನಗಳು ಸನ್ನಿಹಿತವಾಗಿರುವುದನ್ನು ಕಾಣುತ್ತಿದ್ದೇನೆ. ಇದರಿಂದ ಋಕ್ಷ-ವಾನರ-ರಾಕ್ಷಸರಲ್ಲಿ ಮುಖ್ಯ-ಮುಖ್ಯರಾದವರ ವಿನಾಶವಾಗುವುದು ಸ್ಪಷ್ಟವಾಗಿ ಕಾಣುತ್ತಿದೆ.

ವಾತಾಶ್ಚ ಪರುಷಂ ವಾನ್ತಿ ಕಮ್ಪತೇ ಚ ವಸುಂಧರಾ ।
ಪರ್ವತಾಗ್ರಾಣಿ ವೇಪನ್ತೇ ನದನ್ತಿ ಧರಣೀಧರಾಃ ॥೧೩॥

ಬಿರುಗಾಳಿಯು ಪ್ರಚಂಡವಾಗಿ ಬೀಸುತ್ತಿದೆ. ಭೂಮಿಯು ನಡುಗು ತ್ತಿದೆ. ಪರ್ವತದ ಶಿಖರಗಳು ಅಳ್ಳಾಡುತ್ತಿವೆ. ದಿಗ್ಗಜಗಳು ಚೀತ್ಕಾರ ಮಾಡುತ್ತಿವೆ.

ಮೇಘಾಃ ಕ್ರವ್ಯಾದಸಂಕಾಶಾಃ ಪರುಷಾಃ ಪರುಷಸ್ವನಾಃ ।
ಕ್ರೂರಾಃ ಕ್ರೂರಂ ಪ್ರವರ್ಷನ್ತಿ ಮಿಶ್ರಂ ಶೋಣಿತಬಿನ್ದುಭಿಃ ॥೧೪॥

ಮೇಘಗಳು ಹಿಂಸ್ರಮೃಗಗಳಂತೆ ಕ್ರೂರವಾಗಿ ಕಾಣುತ್ತಿವೆ. ಕಠೋರ ವಾಗಿ ಕಾಣುತ್ತಿದ್ದು ಭೀಕರವಾಗಿ ಧ್ವನಿಮಾಡುತ್ತಿವೆ. ರಕ್ತದ ತೊಟ್ಟುಗಳೊಡನೆ ಮಳೆಯನ್ನು ಬಹಳ ಬಿರುಸಿನಿಂದ ಸುರಿಸುತ್ತಿವೆ.

ರಕ್ತಚನ್ದನಸಂಕಾಶಾ ಸನ್ಧ್ಯಾ ಪರಮದಾರುಣಾ ।
ಜ್ವಲಚ್ಚ ನಿಪತತ್ಯೇತದಾದಿತ್ಯಾದಗ್ನಿಮಣ್ಡಲಮ್ ॥೧೫॥

ರಕ್ತಚಂದನಕ್ಕೆ ಸದೃಶವಾಗಿರುವ ಸಂಧ್ಯಾಕಾಲವು ಅತ್ಯಂತದಾರುಣ ವಾಗಿ ಕಾಣುತ್ತಿದೆ. ಪ್ರಜ್ವಲಿಸುತ್ತಿರುವ ಅಗ್ನಿಮಂಡಲವು ಸೂರ್ಯನಿಂದ ಕೆಳಕ್ಕೆ ಬೀಳುತ್ತಿದೆ.

ಆದಿತ್ಯಮಭಿವಾಶ್ಯನ್ತಿ ಜನಯನ್ತೋ ಮಹದ್ಭಯಮ್ ।
ದೀನಾ ದೀನಸ್ವರಾ ಘೋರಾ ಅಪ್ರಶಸ್ತಾ ಮೃಗದ್ವಿಜಾಃ ॥೧೬॥

ಅಮಂಗಳಕರವಾದ ಮತ್ತು ಭಯಂಕರವಾದ ಮೃಗ-ಪಕ್ಷಿಗಳು ದೈನ್ಯ ದಿಂದ ಕೂಡಿ ದೈನ್ಯಸೂಚಕವಾದ ಸ್ವರದಲ್ಲಿ ಸೂರ್ಯನ ಕಡೆಗೆ ನೋಡುತ್ತಾ ಚೀತ್ಕಾರಮಾಡುತ್ತಿವೆ. ಇದರಿಂದ ಪ್ರಾಣಿಗಳ ಮನಸ್ಸಿನಲ್ಲಿ ಭಯವನ್ನುಂಟು ಮಾಡುತ್ತಿವೆ.

ರಜನ್ಯಾಮಪ್ರಕಾಶಶ್ಚ ಸಂತಾಪಯತಿ ಚನ್ದ್ರಮಾಃ ।
ಕೃಷ್ಣರಕ್ತಾಂಶುಪರ್ಯನ್ತೋ ಯಥಾ ಲೋಕಸ್ಯ ಸಂಕ್ಷಯೇ ॥೧೭॥

ರಾತ್ರಿಯಲ್ಲಿ ಚಂದ್ರನ ಪ್ರಕಾಶವು ಕ್ಷೀಣಿಸುತ್ತಿದೆ. ಚಂದ್ರನೀಗ ಪ್ರಾಣಿ ಗಳಿಗೆ ಸಂತಾಪವನ್ನುಂಟುಮಾಡುತ್ತಿದ್ದಾನೆ. ಅವನ ಕಿರಣಗಳ ತುದಿಯ ಭಾಗವು ಪ್ರಳಯಕಾಲದಲ್ಲಿ ಹೇಗೋ ಹಾಗೆ ಕಪ್ಪು ಮತ್ತು ಕೆಂಪು ಬಣ್ಣ ಗಳಿಂದ ಕೂಡಿದೆ.

ಹ್ರಸ್ವೋ ರೂಕ್ಷೋऽಪ್ರಶಸ್ತಶ್ಚ ಪರಿವೇಷಃ ಸುಲೋಹಿತಃ ।
ಆದಿತ್ಯಮಣ್ಡಲೇ ನೀಲಂ ಲಕ್ಷ್ಮ ಲಕ್ಷ್ಮಣ ದೃಶ್ಯತೇ ॥೧೮॥

ಸೌಮಿತ್ರೇ! ಸೂರ್ಯಮಂಡಲದಲ್ಲಿ ಸಣ್ಣದಾಗಿಯೂ, ಒರಟಾ ಗಿಯೂ, ಅಮಂಗಳಕರವಾಗಿಯೂ ಇರುವ ಕೆಂಪಾದ ಪರಿವೇಷವು ಕಾಣುತ್ತಿದೆ ಮತ್ತು ಮಧ್ಯದಲ್ಲಿ ಕಪ್ಪಾದ ಚಿಹ್ನೆಯೂ ಕಾಣುತ್ತಿದೆ.

ದೃಶ್ಯನ್ತೇ ನ ಯಥಾವಚ್ಚ ನಕ್ಷತ್ರಾಣ್ಯಭಿವರ್ತತೇ ।
ಯುಗಾನ್ತಮಿವ ಲೋಕಸ್ಯ ಪಶ್ಯ ಲಕ್ಷ್ಮಣ ಶಂಸತಿ ॥೧೯॥

ಈಗ ನಕ್ಷತ್ರಗಳೂ ಚೆನ್ನಾಗಿ ಹೊಳೆಯುತ್ತಿಲ್ಲ. ಮಲಿನವಾದ ಕಾಂತಿ

ಯಿಂದ ಕೂಡಿವೆ. ಈ ಅಶುಭಲಕ್ಷಣಗಳು ಲೋಕದಲ್ಲಿ ಪ್ರಳಯವಾಗಲಿರುವುದನ್ನು ಸೂಚಿಸುತ್ತಿರುವಂತೆ ಕಾಣುತ್ತಿವೆ.

ಕಾಕಾಃ ಶ್ಯೇನಾಸ್ತಥಾ ಗೃಧ್ರಾ ನೀಚೈಃ ಪರಿತಪನ್ತಿ ಚ ।
ಶಿವಾಶ್ಚಾಪ್ಯಶಿವಾ ವಾಚಃ ಪ್ರವದನ್ತಿ ಮಹಾಸ್ವನಾಃ ॥೨೦॥

ಕಾಗೆಗಳು, ಗಿಡಗಗಳು ಮತ್ತು ರಣಹದ್ದುಗಳು ಕೆಳಭಾಗದಲ್ಲಿಯೇ ಹಾರಾಡುತ್ತಿವೆ. ಕ್ಷಣ-ಕ್ಷಣಕ್ಕೂ ನೆಲದ ಮೇಲೆ ಬಂದು ಕುಳಿತುಕೊಳ್ಳುತ್ತಿವೆ. ಗುಳ್ಳೇನರಿಗಳು ಗಟ್ಟಿಯಾಗಿ ಅಮಂಗಳಕರವಾದ ಧ್ವನಿಯಿಂದ ಊಳಿಡು ತ್ತಿವೆ.

ಲಕ್ಷ್ಮಣ! ಇದರಿಂದ ತಿಳಿದುಬರುವುದೇನೆಂದರೆ : ಈ ಭೂಮಿಯು ಕಪಿ-ರಾಕ್ಷಸರಿಂದ ಪ್ರಹರಿಸಲ್ಪಡುವ ಪರ್ವತಶಿಖರಗಳಿಂದಲೂ, ಶೂಲಗಳಿಂದಲೂ ಮತ್ತು ಕತ್ತಿಗಳಿಂದಲೂ ತುಂಬಿಹೋಗಿ ಮಾಂಸ-ರಕ್ತಗಳಿಂದ ಉಂಟಾಗುವ ಕೆಸರಿನಿಂದ ಕೂಡಿರುವುದು. ರಾವಣನಿಂದ ಪರಿಪಾಲಿಸಲ್ಪಡುತ್ತಿರುವ, ಶತ್ರುಗಳಿಂದ ಎದುರಿಸಲು ಅಸಾಧ್ಯವೆನಿಸಿರುವ ಲಂಕಾಪಟ್ಟಣವನ್ನು ವಾನರಸೇನೆಯಿಂದ ಸಮಾವೃತರಾಗಿ ನಾವೀಗಲೇ ಆಕ್ರಮಿಸೋಣ."

ಧರ್ಮಾತ್ಮನಾದ ಲಕ್ಷ್ಮಣಾಗ್ರಜನು ಲಕ್ಷ್ಮಣನಿಗೆ ಹೀಗೆಂದು ಹೇಳುತ್ತಾ ಆ ಸುವೇಲಪರ್ವತದ ಶಿಖರದಿಂದ ಒಡನೆಯೇ ಕೆಳಗಿಳಿದು ಶತ್ರುಗಳಿಂದ ಎದುರಿಸಲು ಅಸಾಧ್ಯವಾಗಿದ್ದ ತನ್ನ ಮಹಾವಾನರಸೈನ್ಯವನ್ನು ವೀಕ್ಷಿಸಿದನು. ಕಾಲಜ್ಞನಾದ ಶ್ರೀರಾಮನು ಕಪಿರಾಜನ ಆ ಮಹಾಸೈನ್ಯವನ್ನು ಸುಗ್ರೀವ ಸಮೇತನಾಗಿ ಸುಸಜ್ಜಿತಗೊಳಿಸಿ ಸಕಾಲದಲ್ಲಿ ಯುದ್ಧಸನ್ನದ್ಧರಾಗುವಂತೆ ಸೈನಿಕರಿಗೆ ಆಜ್ಞಾಪಿಸಿದನು. ಮಹಾಬಾಹುವಾದ ಧನುರ್ಧರನಾದ ಶ್ರೀರಾಮನು ವಾನರಮಹಾಸೈನ್ಯಸಮೇತನಾಗಿ ಶುಭಮುಹೂರ್ತದಲ್ಲಿ ಲಂಕಾಪಟ್ಟಣಕ್ಕೆ ಅಭಿಮುಖವಾಗಿ ಪ್ರಯಾಣಮಾಡಿದನು. ವಿಭೀಷಣ, ಸುಗ್ರೀವ, ಹನುಮಂತ, ಋಕ್ಷರಾಜನಾದ ಜಾಂಬವಂತ, ನಲ, ನೀಲ ಮತ್ತು ಲಕ್ಷ್ಮಣ– ಇವರೆಲ್ಲರೂ ಶ್ರೀರಾಮನನ್ನು ಅನುಸರಿಸಿ ಹೊರಟರು. ಅವರ ಹಿಂದೆ ಋಕ್ಷ-ವಾನರರ ವಿಶಾಲವಾದ ಸೈನ್ಯವು ಅತ್ಯಂತ ವಿಸ್ತಾರವಾದ ಭೂಮಿಯನ್ನು ಆವರಿಸಿಕೊಂಡು ಶ್ರೀರಾಮನ ಹಿಂದೆ ಹೊರಟಿತು. ಶತ್ರುಗಳು ಮುಂದೆ

ಬಾರದಂತೆ ತಡೆಯುವ ಆನೆಗಳಂತಿದ್ದ ಮಹಾಕಾಯರಾದ ವಾನರರು ಪರ್ವತದ ನೂರಾರು ಶಿಖರಗಳನ್ನೂ ಮತ್ತು ಚೆನ್ನಾಗಿ ಬೆಳೆದು ನಿಂತಿದ್ದ ವೃಕ್ಷಗಳನ್ನೂ ಹಿಡಿದು ಹೋಗುತ್ತಿದ್ದರು. ಶತ್ರುಗಳನ್ನು ದಮನಮಾಡುವ ಸಾಮರ್ಥ್ಯವಿರುವ ಸಹೋದರರಾದ ರಾಮ-ಲಕ್ಷ್ಮಣರು ಸ್ವಲ್ಪಹೊತ್ತಿನಲ್ಲಿಯೇ ರಾವಣನ ಪಟ್ಟಣವಾದ ಲಂಕೆಯನ್ನು ಸಮೀಪಿಸಿದರು. ಆ ಲಂಕಾ ಪಟ್ಟಣವು ರಮಣೀಯವಾದ ಧ್ವಜ-ಪತಾಕೆಗಳಿಂದ ಸುಶೋಭಿತವಾಗಿದ್ದು ಹಲವಾರು ಉದ್ಯಾನವನಗಳಿಂದಲೂ ಮತ್ತು ವನಗಳಿಂದಲೂ ಸುಶೋಭಿಸುತ್ತಿದ್ದಿತು. ಅದರ ನಾಲ್ಕು ಕಡೆಗಳಲ್ಲಿಯೂ ಚಿತ್ರಿತವಾದ ಮತ್ತು ಎತ್ತರವಾದ ಪ್ರಾಕಾರಗಳಿದ್ದುವು. ಪ್ರಾಕಾರದ ನಾಲ್ಕು ಕಡೆಗಳಲ್ಲಿಯೂ ನಾಲ್ಕು ಹೆಬ್ಬಾಗಿಲುಗಳಿದ್ದುವು. ಅವುಗಳ ಮೂಲಕವಾಗಿ ಲಂಕೆಯನ್ನು ಪ್ರವೇಶಿಸುವುದು ದುಸ್ಸಾಧ್ಯವಾಗಿದ್ದಿತು. ದೇವತೆಗಳಿಂದಲೂ ಪ್ರವೇಶಿಸಲು ದುಸ್ಸಾಧ್ಯವಾಗಿದ್ದ ಆ ಪಟ್ಟಣವನ್ನು ರಾಮನ ಮಾತಿನಿಂದ ಪ್ರಚೋದಿತರಾದ ವಾನರ ಸೈನಿಕರು ಶ್ರೀರಾಮನ ನಿದೇಶಾನುಸಾರವಾಗಿ ಆಕ್ರಮಿಸಿ ಧೂಳಿಪಟಲ ಮಾಡುತ್ತಾ ಒಳನುಗ್ಗತೊಡಗಿದರು.

ಪರ್ವತಶಿಖರದಂತೆ ಎತ್ತರವಾಗಿದ್ದ ಲಂಕಾಪಟ್ಟಣದ ಉತ್ತರದ ಹೆಬ್ಬಾಗಿಲನ್ನು ಲಕ್ಷ್ಮಣಸಹಿತನಾದ ಶ್ರೀರಾಮನು ಧನುಷ್ಪಾಣಿಯಾಗಿ ತನ್ನ ಸೈನ್ಯವನ್ನು ರಕ್ಷಿಸಿಕೊಳ್ಳುತ್ತಾ ಆಕ್ರಮಿಸಿದನು. ಲಕ್ಷ್ಮಣನಿಂದ ಅನುಸರಿಸಲ್ಪಟ್ಟು ರಾವಣನಿಂದ ಪಾಲಿಸಲ್ಪಡುತ್ತಿದ್ದ ಲಂಕಾಪಟ್ಟಣದ ಬಳಿಗೆ ಬಂದು ಅವನಿಂದಲೇ ರಕ್ಷಿಸಲ್ಪಡುತ್ತಿದ್ದ ಉತ್ತರದ್ವಾರವನ್ನು ಆಕ್ರಮಿಸಿದನು. ಆ ದ್ವಾರವನ್ನು ತನ್ನೊಡನೆ ಬಂದಿದ್ದ ವಾನರಮಹಾಸೈನ್ಯವನ್ನು ಶ್ರೀರಾಮನ ಹೊರತಾಗಿ ಬೇರೆ ಯಾರಿಂದಲೂ ರಕ್ಷಿಸಲು ಸಾಧ್ಯವಾಗುತ್ತಿರಲಿಲ್ಲ. ಆಯುಧಪಾಣಿಗಳಾದ ಭಯಂಕರರಾದ ರಾಕ್ಷಸರಿಂದ ಸುತ್ತಲೂ ರಕ್ಷಿಸಲ್ಪಡುತ್ತಿದ್ದ ಭಯಂಕರವಾದ ಆ ಉತ್ತರದ ಹೆಬ್ಬಾಗಿಲು ವರುಣನಿಂದ ಸಮುದ್ರವು ಆಶ್ರಯಿಸಲ್ಪಟ್ಟಿರುವಂತೆ–ರಾವಣನಿಂದ ಆಶ್ರಯಿಸಲ್ಪಟ್ಟಿದ್ದಿತು. ದಾನವರಿಂದ ರಕ್ಷಿಸಲ್ಪಡುತ್ತಿರುವ ಪಾತಾಳಲೋಕದಂತೆ ರಾವಣಪ್ರಮುಖರಾದ ರಾಕ್ಷಸರಿಂದ ರಕ್ಷಿಸಲ್ಪಡುತ್ತಿದ್ದ ಉತ್ತರದ ಹೆಬ್ಬಾಗಿಲು ಅಲ್ಪಬಲರಿಗೆ ಭಯವನ್ನುಂಟುಮಾಡುವುದಾಗಿದ್ದಿತು. ಮಹಾದ್ವಾರದ ಹಿಂಬದಿಯಲ್ಲಿ ವ್ಯವಸ್ಥಿತವಾಗಿ ಇಡಲ್ಪಟ್ಟಿದ್ದ

ಸೈನಿಕರ ನಾನಾವಿಧವಾದ ಮತ್ತು ಅಪಾರಸಂಖ್ಯೆಯ ಆಯುಧಗಳನ್ನೂ ಮತ್ತು ಕವಚಗಳನ್ನೂ ಶ್ರೀರಾಮನು ನೋಡಿದನು.

ವಾನರಸೇನಾಪತಿಯಾದ ಪರಾಕ್ರಮಿಯಾದ ನೀಲನು ಮೈಂದ-ದ್ವಿವಿದರೊಡನೆ ಲಂಕಾಪಟ್ಟಣದ ಪೂರ್ವದ್ವಾರವನ್ನು ಆಕ್ರಮಿಸಿದನು. ಮಹಾ ಬಲಿಷ್ಠನಾದ ಅಂಗದನು ಋಷಭ-ಗವಾಕ್ಷ-ಗಜ-ಗವಯರೊಡನೆ ದಕ್ಷಿಣ ಮಹಾದ್ವಾರವನ್ನು ಆಕ್ರಮಿಸಿ ನಿಂತನು. ಪ್ರಮಾಥಿ-ಪ್ರಘಸರೊಡನೆಯೂ ಇನ್ನೂ ಅನೇಕ ವೀರವಾನರನಾಯಕರೊಡನೆಯೂ ಸೇರಿ ಮಹಾಬಲಿಷ್ಠನಾದ ಹನುಮಂತನು ಪಶ್ಚಿಮದ್ವಾರವನ್ನು ಆಕ್ರಮಿಸಿ ತನ್ನ ಕಡೆಯ ಸೈನಿಕರನ್ನು ರಕ್ಷಿಸುತ್ತಿದ್ದನು. ಉತ್ತರಕ್ಕೂ ಮತ್ತು ಪಶ್ಚಿಮಕ್ಕೂ ಮಧ್ಯಭಾಗದ ವಾಯವ್ಯದಿಕ್ಕಿನಲ್ಲಿದ್ದ ರಾಕ್ಷಸಸೇನೆಯ ತುಕಡಿಯನ್ನು ಗರುಡ-ಮಾರುತರ ವೇಗಕ್ಕೆ ಸಮಾನವೇಗರಾಗಿದ್ದ ವಾನರವೀರರೊಡನೆ ವಾನರರಾಜನಾದ ಸುಗ್ರೀವನು ಆಕ್ರಮಿಸಿದನು. ಸುಗ್ರೀವನಿದ್ದೆಡೆಯಲ್ಲಿ ಸುವಿಖ್ಯಾತ ದಳಪತಿ ಗಳಾದ ಮೂವತ್ತಾರುಕೋಟಿ ವಾನರರು ರಾಕ್ಷಸರನ್ನು ಪರ್ವತಶಿಖರಗಳ ಮತ್ತು ವೃಕ್ಷಗಳ ಪ್ರಹಾರಗಳಿಂದ ಪೀಡಿಸುತ್ತಿದ್ದರು. ಶ್ರೀರಾಮನ ಆಜ್ಞೆಯಂತೆ ವಿಭೀಷಣಸಹಿತನಾದ ಲಕ್ಷ್ಮಣನು ಪ್ರತಿಯೊಂದು ಹೆಬ್ಬಾಗಿಲಿನಲ್ಲಿಯೂ ಒಂದೊಂದು ಕೋಟಿ ವಾನರಸೈನಿಕರನ್ನು ಸ್ಥಾಪಿಸಿದನು. ಸುಗ್ರೀವ-ಜಾಂಬ ವಂತರು ಅಸಂಖ್ಯಾತವಾದ ವಾನರಸೈನ್ಯದೊಡನೆ ಶ್ರೀರಾಮನ ಹಿಂದೆ ಸ್ವಲ್ಪ ದೂರದಲ್ಲಿ ಮಧ್ಯಮಗುಲ್ಮದಲ್ಲಿ ನಿಂತಿದ್ದರು. ಹುಲಿಗಳಂತೆ ಕೋರೆದಾಡೆ ಗಳುಳ್ಳ ವಾನರಶ್ರೇಷ್ಠರು ವೃಕ್ಷಗಳನ್ನೂ ಪರ್ವತಶಿಖರಗಳನ್ನೂ ಹಿಡಿದು ಹರ್ಷೋತ್ಸಾಹಗಳಿಂದ ಯುದ್ಧಸನ್ನದ್ಧರಾಗಿ ನಿಂತಿದ್ದರು. ಕ್ರೋಧದಿಂದ ಯುದ್ಧಸನ್ನದ್ಧರಾಗಿ ನಿಂತಿದ್ದ ವಾನರನಾಯಕರ ಬಾಲಗಳು ವಿಕಾರವಾಗಿ ಕಾಣುತ್ತಿದ್ದುವು. ಎಲ್ಲರೂ ಕೋರೆದಾಡೆಗಳನ್ನೂ ಮತ್ತು ಉಗುರುಗಳನ್ನೂ ಆಯುಧಗಳನ್ನಾಗಿ ಉಪಯೋಗಿಸುತ್ತಿದ್ದರು. ಕೋಪದ ಕಾರಣದಿಂದಾಗಿ ಆ ವಾನರನಾಯಕರ ಅಂಗಾಂಗಗಳೂ ವಿಚಿತ್ರವಾದ ಚಿಹ್ನೆಗಳನ್ನು ಹೊಂದಿದ್ದುವು. ಕ್ರೋಧದಿಂದ ಹುಬ್ಬುಗಂಟಿಕ್ಕಿದ್ದ ವಾನರರ ಮುಖಗಳೂ ವಿಕಾರವಾಗಿ ಕಾಣುತ್ತಿದ್ದುವು.

ದಶನಾಗಬಲಾಃ ಕೇಚಿತ್ಕೇಚಿದ್ದಶಗುಣೋತ್ತರಾಃ ।
ಕೇಚಿನ್ನಾಗಸಹಸ್ರಸ್ಯ ಬಭೂವುಸ್ತುಲ್ಯವಿಕ್ರಮಾಃ ॥೪೭॥

ವಾನರರಲ್ಲಿ ಕೆಲವರಿಗೆ ಹತ್ತು ಆನೆಗಳ ಬಲವಿದ್ದಿತು. ಕೆಲವರಿಗೆ ಅದಕ್ಕಿಂತಲೂ ಹತ್ತುಪಟ್ಟು ಹೆಚ್ಚಿನ ಬಲವಿದ್ದಿತು. ಕೆಲವರಿಗೆ ಸಾವಿರ ಆನೆಗಳ ಬಲವಿದ್ದಿತು.

ಸನ್ತಿ ಚೌಘಬಲಾಃ ಕೇಚಿತ್ಕೇಚಿಚ್ಛತಗುಣೋತ್ತರಾಃ ।
ಅಪ್ರಮೇಯಬಲಾಶ್ಚಾನ್ಯೇ ತತ್ರಾಸನ್ ಹರಿಯೂಥಪಾಃ ॥೪೮॥

ಕೆಲವು ವಾನರನಾಯಕರಿಗೆ ಹತ್ತು ಸಾವಿರ ಆನೆಗಳ ಬಲವಿದ್ದಿತು. ಕೆಲವರಿಗೆ ಅವರಿಗಿಂತಲೂ ನೂರುಪಟ್ಟು ಬಲವಿದ್ದಿತು. ಅವರಲ್ಲಿ ಕೆಲವರು ವಾನರ ದಳಪತಿಗಳು ಅಳೆಯಲಾಗದಷ್ಟು ಬಲವುಳ್ಳವರಾಗಿದ್ದರು. ಪತಂಗದ ಹುಳುಗಳು ಕೋಟಿ-ಕೋಟಿ ಸಂಖ್ಯೆಯಲ್ಲಿ ಒಮ್ಮೆಲೇ ಹುಟ್ಟಿಕೊಳ್ಳುವಂತೆ– ಕೋಟಿ-ಕೋಟಿ ವಾನರಸೈನಿಕರ ಆ ಸಮಾಗಮವು ಅದ್ಭುತವೂ ವಿಚಿತ್ರವೂ ಆಗಿದ್ದಿತು. ಹಾರಿ-ನೆಗೆದು ಬರುತ್ತಿದ್ದ ವಾನರರಿಂದ ಆಕಾಶವೇ ಮುಚ್ಚಿ ಹೋಗಿದ್ದಿತು. ಅಂತೆಯೇ ಲಂಕಾಪಟ್ಟಣವನ್ನು ಪ್ರವೇಶಿಸಲು ನಿಂತಿದ್ದ ವಾನರ ರಿಂದ ಭೂಮಿಯೂ ಮುಚ್ಚಿಹೋಯಿತು. ಒಂದೊಂದು ಕೋಟಿ ಋಕ್ಷ-ವಾನರಸೈನಿಕರು ಲಂಕಾಪಟ್ಟಣದ ನಾಲ್ಕು ಹೆಬ್ಬಾಗಿಲುಗಳನ್ನೂ ಆಕ್ರಮಿಸಿ ನಿಂತಿದ್ದರು. ಇತರ ಯೋಧರೂ ಲಂಕಾಪಟ್ಟಣದ ಸುತ್ತಲೂ ಯುದ್ಧಸನ್ನದ್ಧ ರಾಗಿ ನಿಂತಿದ್ದರು. ಸಮಸ್ತವಾನರರೂ ನಾಲ್ಕು ದಿಕ್ಕುಗಳಿಂದಲೂ ಲಂಕಾ ಪಟ್ಟಣವಿದ್ದ ಆ ತ್ರಿಕೂಟಪರ್ವತವನ್ನೇ ಆಕ್ರಮಿಸಿಬಿಟ್ಟಿದ್ದರು. ಒಂದೊಂದು ಕೋಟಿ ಸೈನಿಕರು ಲಂಕಾಪಟ್ಟಣದ ಮಹಾದ್ವಾರವನ್ನು ಆಕ್ರಮಿಸಿ ನಿಂತಿದ್ದರು. ವಾಯುವಿನಿಂದಲೂ ಪ್ರವೇಶಿಸಲು ಅಸಾಧ್ಯವಾಗಿದ್ದ ಲಂಕಾಪಟ್ಟಣವು ಪರ್ವತಶಿಖರಗಳನ್ನೂ ವೃಕ್ಷಗಳನ್ನೂ ಹಿಡಿದಿದ್ದ ಬಲಿಷ್ಠರಾದ ವಾನರರಿಂದ ಎಲ್ಲೆಡೆಗಳಲ್ಲಿಯೂ ಆಕ್ರಮಿಸಲ್ಪಟ್ಟಿದ್ದಿತು. ವಾನರರೆಲ್ಲರೂ ಕಾಲಮೇಘ ಗಳಂತೆ ಭಯಂಕರರಾಗಿದ್ದರು. ಇಂದ್ರಸದೃಶಪರಾಕ್ರಮಿಗಳಾಗಿದ್ದರು. ಅವ ರಿಂದ ಪೀಡಿಸಲ್ಪಡುತ್ತಿದ್ದ ರಾಕ್ಷಸರು ವಾನರಸೇನೆಯನ್ನು ನೋಡಿ ಬಹಳ ವಾಗಿ ವಿಸ್ಮಯಗೊಂಡರು. ಸಮುದ್ರವೇ ಎಲ್ಲೆಯನ್ನು ಮೀರಿ ಉಕ್ಕಿಹರಿದಾಗ ಉಂಟಾಗುವ ನೀರಿನ ಶಬ್ದದಂತೆ–ಸುತ್ತಲೂ ಇದ್ದ ವಾನರಸೇನಾಸಮೂಹ ದಲ್ಲಿ ಭಯಂಕರವಾದ ಕೋಲಾಹಲಧ್ವನಿಯಾಯಿತು. ಆ ಕೋಲಾಹಲಧ್ವನಿ ಯಿಂದ ಪ್ರಾಕಾರಗಳಿಂದಲೂ, ಮಹಾದ್ವಾರಗಳಿಂದಲೂ, ಪರ್ವತ-ವನ-

ಕಾನನಗಳಿಂದಲೂ ಸಂಪನ್ನವಾಗಿದ್ದ ಲಂಕಾಪಟ್ಟಣವೇ ಅಲ್ಲಾಡಿತು. ರಾಮ-ಲಕ್ಷ್ಮಣ-ಸುಗ್ರೀವರಿಂದ ರಕ್ಷಿಸಲ್ಪಡುತ್ತಿದ್ದ ವಾನರಸೇನೆಯು ಸಮಸ್ತರಾದ ಸುರಾಸುರರಿಂದಲೂ ಎದುರಿಸಲು ಅಸಾಧ್ಯವಾಗಿದ್ದಿತು. ಶ್ರೀರಾಮನು ರಾಕ್ಷಸರ ವಧೆಗಾಗಿ ತನ್ನ ಸೈನ್ಯವನ್ನು ಹೀಗೆ ನಿಲ್ಲಿಸಿ ಮುಂದಿನ ಕರ್ತವ್ಯವನ್ನು ತಿಳಿಯುವ ಇಚ್ಛೆಯಿಂದ ಮಂತ್ರಿಗಳೊಡನೆ ಪುನಃ ಪುನಃ ಸಮಾಲೋಚಿಸಿ ಮುಂದಿನ ಕಾರ್ಯವನ್ನು ನಿಶ್ಚಯಿಸಿದನು. ಸಾಮ-ದಾನ-ಭೇದ-ದಂಡೋಪಾಯಗಳನ್ನು ಅನುಕ್ರಮವಾಗಿ ಪ್ರಯೋಗಿಸುವುದರಿಂದ ದೊರೆಯುವ ಪ್ರಯೋಜನವನ್ನು ಚೆನ್ನಾಗಿ ತಿಳಿದಿದ್ದ ಶ್ರೀರಾಮನು ರಾಜಧರ್ಮವನ್ನು ಜ್ಞಾಪಿಸಿಕೊಳ್ಳುತ್ತಾ ವಿಭೀಷಣನ ಅನುಮತಿಯನ್ನೂ ಪಡೆದು ವಾಲಿಯ ಮಗನಾದ ಅಂಗದನನ್ನು ಕರೆದು ಹೇಳಿದನು :

"ಸೌಮ್ಯನೇ! ಅಂಗದ! ನೀನೀಗಲೇ ಯಾವ ವಿಧವಾದ ಭಯ ವಾಗಲೀ ವ್ಯಥೆಯಾಗಲೀ ಇಲ್ಲದೇ ಪ್ರಾಕಾರವನ್ನು ದಾಟಿ ಲಂಕೆಗೆ ಹೋಗಿ ದಶಕಂಠನಾದ ರಾವಣನಿಗೆ ನನ್ನ ಈ ಮಾತುಗಳನ್ನು ಹೇಳು :

ಭ್ರಷ್ಟಶ್ರೀಕ ಗತೈಶ್ವರ್ಯ ಮುಮೂರ್ಷೋ ನಷ್ಟಚೇತನ ।
ಋಷೀಣಾಂ ದೇವತಾನಾಂ ಚ ಗನ್ಧರ್ವಾಪ್ಸರಸಾಂ ತಥಾ ॥೬೧॥

ನಾಗಾನಾಮಥ ಯಕ್ಷಾಣಾಂ ರಾಜ್ಞಾಂ ಚ ರಜನೀಚರ ।
ಯಚ್ಚ ಪಾಪಂ ಕೃತಂ ಮೋಹಾದವಲಿಪ್ತೇನ ರಾಕ್ಷಸ ॥೬೨॥

ನೂನಮದ್ಯ ಗತೋ ದರ್ಪಃ ಸ್ವಯಂಭೂವರದಾನಜಃ ।
ತಸ್ಯ ಪಾಪಸ್ಯ ಸಮ್ಪ್ರಾಪ್ತಾ ವ್ಯುಷ್ಟಿರದ್ಯ ದುರಾಸದಾ ॥೬೩॥

"ನಷ್ಟವಾದ ಕಾಂತಿಯುಳ್ಳವನೇ! ನಷ್ಟವಾದ ಐಶ್ವರ್ಯವುಳ್ಳವನೇ! ಮರಣಹೊಂದಲು ಬಯಸಿರುವವನೇ! ರಾವಣ! ನೀನು ಮೋಹವಶನಾಗಿ ದರ್ಪದಿಂದ ದೇವರ್ಷಿ-ಗಂಧರ್ವರಿಗೆ, ಅಪ್ಸರ-ನಾಗ-ಯಕ್ಷರಿಗೆ, ರಾಜರಿಗೆ ಹಲವಾರು ಅಪರಾಧಗಳನ್ನೆಸಗಿರುವೆ. ಬ್ರಹ್ಮದೇವನು ನಿನಗೆ ಕೊಟ್ಟಿರುವ ವರದಿಂದ ಉಂಟಾಗಿರುವ ದರ್ಪವು ನಿಜವಾಗಿಯೂ ಅಡಗಿಹೋಗುತ್ತದೆ. ಆ ಪಾಪದ ಫಲವನ್ನು ಇಂದು ನೀನು ಅನುಭವಿಸಬೇಕಾಗಿದೆ.

ಯಸ್ಯ ದಣ್ಡಧರಸ್ತೇಽಹಂ ದಾರಾಹರಣಕರ್ಶಿತಃ ।
ದಣ್ಡಂ ಧಾರಯಮಾಣಸ್ತು ಲಙ್ಕಾದ್ವಾರೇ ವ್ಯವಸ್ಥಿತಃ ॥೬೪॥

ನಾನು ಅಪರಾಧಿಗಳಿಗೆ ಶಿಕ್ಷೆಕೊಡುವ ಶಾಸಕನಾಗಿದ್ದೇನೆ. ನೀನು ಮಾಡಿರುವ ಭಾರ್ಯಾಪಹರಣದಿಂದ ಪೀಡಿತನಾಗಿರುವ ನಾನು ನಿನ್ನನ್ನು ಶಿಕ್ಷಿಸಲು ಲಂಕಾಪಟ್ಟಣದ ಹೆಬ್ಬಾಗಿಲಿನಲ್ಲಿ ನಿಂತಿದ್ದೇನೆ.

ಪದವೀಂ ದೇವತಾನಾಂ ಚ ಮಹರ್ಷೀಣಾಂ ಚ ರಾಕ್ಷಸ ।
ರಾಜರ್ಷೀಣಾಂ ಚ ಸರ್ವೇಷಾಂ ಗಮಿಷ್ಯಸಿ ಮಯಾ ಹತಃ ॥೬೫॥

ರಾಕ್ಷಸ! ನೀನು ನನ್ನೊಡನೆ ಯುದ್ಧಮಾಡಿ ನನ್ನಿಂದ ಹತನಾಗಿ ದೇವತೆಗಳ ಮತ್ತು ಮಹರ್ಷಿಗಳ ಸ್ಥಾನವನ್ನು ಪಡೆಯುವೆ.*

ಬಲೇನ ಯೇನ ವೈ ಸೀತಾಂ ಮಾಯಯಾ ರಾಕ್ಷಸಾಧಮ ।
ಮಾಮತಿಕ್ರಾಮಯಿತ್ವಾ ತ್ವಂ ಹೃತವಾಂಸ್ತನ್ನಿದರ್ಶಯ ॥೬೬॥

ರಾಕ್ಷಸಾಧಮನೇ! ನೀನು ಯಾವ ನಿನ್ನ ಬಲ-ಪರಾಕ್ರಮಗಳನ್ನು ಆಶ್ರಯಿಸಿ ನನ್ನನ್ನು ವಂಚಿಸಿ ಸೀತೆಯನ್ನು ಮಾಯೆಯಿಂದ ಕದ್ದುತಂದೆಯೋ ಆ ನಿನ್ನ ಬಲ-ಪರಾಕ್ರಮಗಳನ್ನು ಯುದ್ಧದಲ್ಲೀಗ ಪ್ರದರ್ಶಿಸು.

ಅರಾಕ್ಷಸಮಿಮಂ ಲೋಕಂ ಕರ್ತಾಸ್ಮಿ ನಿಶಿತೈಃ ಶರೈಃ ।
ನ ಚೇಚ್ಛರಣಮಭ್ಯೇಷಿ ಮಾಮುಪಾದಾಯ ಮೈಥಿಲೀಮ್ ॥೬೭॥

ಈಗಲಾದರೂ ನೀನು ವೈದೇಹಿಯನ್ನು ಕರೆತಂದು ನನಗೊಪ್ಪಿಸಿ ಶರಣಾಗತನಾಗು. ಇಲ್ಲದಿದ್ದರೆ ನನ್ನ ನಿಶಿತವಾದ ಬಾಣಗಳಿಂದ ಈ ಲೋಕವನ್ನು ರಾಕ್ಷಸರಹಿತನನ್ನಾಗಿ ಮಾಡಿಬಿಡುತ್ತೇನೆ.

ರಾಕ್ಷಸರಲ್ಲಿ ಶ್ರೇಷ್ಠನಾದ ಧರ್ಮಾತ್ಮನಾದ ವಿಭೀಷಣನು ಈಗ ನನ್ನೊಡ

---

* ಅನೇಕಮಹಾಪಾಪಗಳನ್ನು ಮಾಡಿದವನಿಗೆ ದೇವತೆಗಳ ಪದವಿಯು ಹೇಗೆ ಸಿಕ್ಕುತ್ತದೆ? ರಾಜನು ಕೊಡುವ ತಕ್ಕ ಶಿಕ್ಷೆಯಿಂದಾಗಿ ಪಾಪಾತ್ಮರೂ ಪೂತಾತ್ಮರಾಗುತ್ತಾರೆ. ರಾಜಭಿರ್ಧೃತದಣ್ಡಾಸ್ತು ಕೃತ್ವಾ ಪಾಪಾನಿ ಮಾನವಾಃ । ನಿರ್ಮಲಾಃ ಸ್ವರ್ಗಮಾಯಾನ್ತಿ ಸನ್ತಃ ಸುಕೃತಿನೋ ಯಥಾ ॥ ಯುದ್ಧದಲ್ಲಿ ಹತರಾದವರಿಗೆ ಸ್ವರ್ಗವು ಸಿಕ್ಕುವು ದೆಂಬುದು ಪ್ರಸಿದ್ಧವಾಗಿಯೇ ಇದೆ. ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ॥ (ಭಗವದ್ಗೀತೆ)

ನಿರುವನು. ನಿಶ್ಚಯವಾಗಿಯೂ ಇವನು ನಿಷ್ಕಂಟಕವಾದ ಲಂಕಾರಾಜ್ಯಲಕ್ಷ್ಮಿಯನ್ನು ಪಡೆದುಕೊಳ್ಳುವನು. ಪಾಪಿಷ್ಠನಾದ, ಆತ್ಮಸ್ವರೂಪವನ್ನು ತಿಳಿಯದಿರುವ ಮೂರ್ಖರನ್ನೇ ಸಹಾಯಕರನ್ನಾಗಿ ಪಡೆದಿರುವ, ಅಧರ್ಮಸ್ವರೂಪನಾದ ನೀನು ಕ್ಷಣಕಾಲವಾದರೂ ಇನ್ನುಮುಂದೆ ರಾಜ್ಯವನ್ನು ಉಪಭೋಗಿಸಲಾರೆ. ರಾಕ್ಷಸನೇ! ಶೌರ್ಯವನ್ನು ಆಶ್ರಯಿಸಿ ಧೈರ್ಯಮಾಡಿ ನನ್ನೊಡನೆ ಯುದ್ಧಮಾಡು. ಯುದ್ಧದಲ್ಲಿ ನನ್ನ ಬಾಣಗಳಿಂದ ಸಂಹೃತನಾಗುವ ನೀನು ಪರಿಶುದ್ಧನಾಗುವೆ. ನನ್ನ ಕಣ್ಣಿಗೆ ಬಿದ್ದನಂತರ ನೀನು ಪಕ್ಷಿಯ ರೂಪವನ್ನು ತಾಳಿ ಮೂರು ಲೋಕಗಳಲ್ಲಿ ಹಾರಿಹೋಗುತ್ತಿದ್ದರೂ ಜೀವಂತವಾಗಿ ಮನೆಗೆ ಹಿಂದಿರುಗಲಾರೆ. ರಾವಣ! ನಿನಗೆ ಹಿತಕರವಾದ ಈ ಮಾತನ್ನು ಹೇಳುತ್ತಿರುವೆನು ಕೇಳು. ಪರಲೋಕಪ್ರಾಪ್ತಿಗೆ ಸಾಧಕವಾದ ನಿನ್ನ ಅಂತ್ಯಸಂಸ್ಕಾರವನ್ನು ಈಗಲೇ ಮುಗಿಸಿಕೊ. ಲಂಕೆಯನ್ನೊಮ್ಮೆ ಚೆನ್ನಾಗಿ ನೋಡಿಬಿಡು. ಏಕೆಂದರೆ : ಈಗ ನಿನ್ನ ಜೀವಿತವು ನನ್ನ ಅಧೀನದಲ್ಲಿರುವುದು."

ಎಂತಹ ಕಷ್ಟದ ಕಾರ್ಯಗಳನ್ನಾದರೂ ಅನಾಯಾಸವಾಗಿ ಮಾಡುವ ಶ್ರೀರಾಮನು ತಾರೆಯ ಮಗನಿಗೆ ಹೀಗೆ ಹೇಳಲು–ಅಂಗದನು ಸಾಕಾರನಾದ ಅಗ್ನಿಯಂತೆ ಆಕಾಶಮಾರ್ಗದಿಂದ ಲಂಕೆಗೆ ತೆರಳಿದನು. ಶ್ರೀಮಂತನಾದ ಅಂಗದನು ಮುಹೂರ್ತಮಾತ್ರದಲ್ಲಿ ಕೋಟೆಯನ್ನು ದಾಟಿ ರಾವಣನ ಅರಮನೆಗೆ ಹೋಗಿ, ಅಲ್ಲಿ ಏಕಾಗ್ರಚಿತ್ತನಾಗಿ ಮಂತ್ರಿಗಳೊಡನೆ ಸಮಾಲೋಚಿಸುತ್ತಾ ಕುಳಿತಿದ್ದ ರಾವಣನನ್ನು ನೋಡಿದನು. ಸುವರ್ಣಮಯವಾದ ಭುಜಕೀರ್ತಿಗಳನ್ನು ಧರಿಸಿದ್ದ, ಪ್ರಜ್ವಲಿಸುವ ಅಗ್ನಿಯಂತೆಯೇ ಪ್ರಕಾಶಮಾನ ನಾಗಿದ್ದ ಅಂಗದನು ರಾವಣನಿಗೆ ಅತಿಸಮೀಪದಲ್ಲಿಯೇ ಆಕಾಶದಿಂದಿಳಿದನು. ಮೊದಲು ತನ್ನ ಪರಿಚಯ ಮಾಡಿಕೊಟ್ಟು ಬಳಿಕ ಮಂತ್ರಿಗಳ ಸಮೇತ ನಾಗಿದ್ದ ರಾವಣನಿಗೆ ಶ್ರೀರಾಮನು ಹೇಳಿದ್ದ ಮಾತುಗಳಲ್ಲಿ ನ್ಯೂನತೆ ಯಾಗಲೀ ಆಧಿಕ್ಯವಾಗಲೀ ಇಲ್ಲದಂತೆ ಉತ್ತಮವಾದ ಮಾತುಗಳನ್ನು ಯಥಾ ವತ್ತಾಗಿ ನಿವೇದಿಸಿದನು.

ದೂತೋಽಹಂ ಕೋಸಲೇನ್ದ್ರಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ ।
ವಾಲಿಪುತ್ರೋಽಙ್ಗದೋ ನಾಮ ಯದಿ ತೇ ಶ್ರೋತ್ರಮಾಗತಃ ॥೭೭॥

"ರಾವಣೇಶ್ವರ! ಅತಿಕ್ಲಿಷ್ಟವಾದ ಕಾರ್ಯಗಳನ್ನೂ ಅನಾಯಾಸವಾಗಿ

ಮಾಡುವ ಕೋಸಲೇಂದ್ರನಾದ ಶ್ರೀರಾಮನ ದೂತನು ನಾನು. ವಾಲಿಯ ಮಗನಾದ ಅಂಗದನು. ನನ್ನ ಹೆಸರನ್ನು ನೀನೂ ಕೇಳಿರಬಹುದಲ್ಲವೇ?

ತಾಯಿಯಾದ ಕೌಸಲ್ಯಾದೇವಿಯ ಆನಂದವನ್ನು ಹೆಚ್ಚಿಸುವ ರಾಘವನು ನಿನಗೆ ಸಂದೇಶವನ್ನು ಕಳುಹಿಸಿಕೊಟ್ಟಿದ್ದಾನೆ.

ನಿಷ್ಪತ್ಯ ಪ್ರತಿಯುದ್ಧ್ಯಸ್ವ ನೃಶಂಸ ಪುರುಷೋ ಭವ ॥೭೮॥

ಹನ್ತಾಸ್ಮಿ ತ್ವಾಂ ಸಹಾಮಾತ್ಯಂ ಸಪುತ್ರಜ್ಞಾತಿಬಾನ್ಧವಮ್ ।
ನಿರುದ್ವಿಗ್ನಾಸ್ತ್ರಯೋ ಲೋಕಾ ಭವಿಷ್ಯನ್ತಿ ಹತೇ ತ್ವಯಿ ॥೭೯॥

ದೇವದಾನವಯಕ್ಷಾಣಾಂ ಗನ್ಧರ್ವೋರಗರಕ್ಷಸಾಮ್ ।
ಶತ್ರುಮದ್ಯೋದ್ಧರಿಷ್ಯಾಮಿ ತ್ವಾಮೃಷೀಣಾಂ ಚ ಕಣ್ಟಕಮ್ ॥೮೦॥

ವಿಭೀಷಣಸ್ಯ ಚೈಶ್ವರ್ಯಂ ಭವಿಷ್ಯತಿ ಹತೇ ತ್ವಯಿ ।
ನ ಚೇತ್ಸತ್ಕೃತ್ಯ ವೈದೇಹೀಂ ಪ್ರಣಿಪತ್ಯ ಪ್ರದಾಸ್ಯಸಿ ॥೮೧॥

'ಮಹಾಕ್ರೂರಿಯೇ! ಅರಮನೆಯಿಂದ ಹೊರಬಂದು ನನ್ನೊಡನೆ ಯುದ್ಧಮಾಡು. ವೀರಪುರುಷನಾಗು. ಅಮಾತ್ಯ–ಪುತ್ರ-ಜ್ಞಾತಿಬಾಂಧವರಿಂದ ಕೂಡಿರುವ ನಿನ್ನನ್ನು ಈಗಲೇ ಸಂಹರಿಸುತ್ತೇನೆ. ಏಕೆಂದರೆ : ನಿನ್ನೊಬ್ಬನ ಸಂಹಾರವಾದರೆ ಮೂರು ಲೋಕದ ಪ್ರಾಣಿಗಳೂ ಭಯವಿಲ್ಲದೇ ಜೀವಿಸುತ್ತವೆ. ದೇವ-ದಾನವ-ಯಕ್ಷ-ಗಂಧರ್ವ-ನಾಗ-ರಾಕ್ಷಸರಿಗೆ ಶತ್ರುವೂ, ಋಷಿಗಳಿಗೆ ಕಂಟಕಪ್ರಾಯನೂ ಆಗಿರುವ ನಿನ್ನನ್ನು ಈಗಲೇ ನಿರ್ಮೂಲಮಾಡುತ್ತೇನೆ. ಈಗಲಾದರೂ ನೀನು ಶರಣಾಗತನಾಗಿ ಗೌರವಾದರಗಳಿಂದ ಸೀತಾದೇವಿಯನ್ನು ನನಗೊಪ್ಪಿಸದಿದ್ದರೆ ನಿನ್ನನ್ನು ಸಂಹಾರಮಾಡುವುದಂತೂ ನಿಶ್ಚಯ. ನಿನ್ನ ಐಶ್ವರ್ಯವೆಲ್ಲವೂ ವಿಭೀಷಣನದಾಗುತ್ತದೆ.'–ಇದೇ ಶ್ರೀರಾಮನು ಕಳುಹಿಸಿರುವ ಸಂದೇಶ" ಎಂದು ಹೇಳಿ ಅಂಗದನು ವಿರಮಿಸಿದನು.

ವಾನರಶ್ರೇಷ್ಠನಾದ ಅಂಗದನು ಅತ್ಯಂತಕಠೋರವಾದ ಮಾತುಗಳನ್ನು ಹೇಳುತ್ತಿರಲಾಗಿ ರಾಕ್ಷಸರಾಜನು ಕ್ರೋಧವಶನಾದನು. "ದುರ್ಬುದ್ಧಿಯ ಈ ವಾನರನನ್ನು ಈಗಲೇ ಹಿಡಿಯಿರಿ. ಕೊಂದುಹಾಕಿರಿ"–ಎಂದು ಮಂತ್ರಿಗಳಿಗೆ ಪುನಃ ಪುನಃ ಹೇಳಿದನು.

ರಾವಣನ ಆಜ್ಞೆಯನ್ನು ಕೇಳಿ ನಾಲ್ವರು ಭಯಂಕರರಾದ ನಿಶಾಚರರು

ಪ್ರಜ್ವಲಿಸುವ ಅಗ್ನಿಯಂತೆ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಅಂಗದನನ್ನು ಹಿಡಿದುಕೊಂಡರು. ಆತ್ಮಬಲಸಂಪನ್ನನಾಗಿದ್ದ ತಾರಾಪುತ್ರನು ಆ ಸಮಯದಲ್ಲಿ ರಾಕ್ಷಸರಿಗೆ ತನ್ನ ಬಲವನ್ನು ತೋರಿಸುವ ಸಲುವಾಗಿ ಯಾವ ರೀತಿಯ ಪ್ರತಿಭಟನೆಯನ್ನೂ ತೋರದೇ ಅವರ ವಶವಾದನು. ಇಬ್ಬಿಬ್ಬರು ರಾಕ್ಷಸರು ಅವನೆರಡು ತೋಳುಗಳನ್ನು ಎರಡು ಕಡೆಗಳಲ್ಲಿಯೂ ಬಲವಾಗಿ ಹಿಡಿದಿದ್ದರು. ಪಕ್ಷಿಗಳಂತೆ ಎರಡು ತೋಳುಗಳಲ್ಲಿಯೂ ಜೋತುಬಿದ್ದಿದ್ದ ನಾಲ್ವರು



ರಾಕ್ಷಸರನ್ನೂ ಎತ್ತಿಕೊಂಡೇ ಅಂಗದನು ಪರ್ವತದಂತಿದ್ದ ಪ್ರಾಸಾದದ ಮೇಲಕ್ಕೆ ಹಾರಿದನು. ಹಾಗೆ ಹಾರಿದ ರಭಸಕ್ಕೆ ಅವನ ತೋಳುಗಳನ್ನು ಹಿಡಿ ದಿದ್ದ ರಾಕ್ಷಸರು ಎಸೆಯಲ್ಪಟ್ಟವರಾಗಿ ರಾಕ್ಷಸೇಂದ್ರನು ನೋಡುತ್ತಿದ್ದಂತೆಯೇ ಭೂಮಿಯ ಮೇಲೆ ಬಿದ್ದರು. ಪರ್ವತದ ಶಿಖರದಂತೆ ಎತ್ತರವಾಗಿದ್ದ ರಾಕ್ಷಸೇಂದ್ರನ ಪ್ರಾಸಾದದ ಶಿಖರವನ್ನು ಪ್ರತಾಪವಂತನಾದ ವಾಲಿಯ ಮಗನು

ನೋಡಿದನು. ಹಿಂದೆ ವಜ್ರಾಯುಧದ ಪ್ರಹಾರದಿಂದ ಹಿಮವತ್ಪರ್ವತದ ಶಿಖರವು ಮುರಿದುಬಿದ್ದಂತೆ–ಅಂಗದನ ಕಾಲುಗಳಿಂದ ಸಮಾಕ್ರಾಂತವಾದ ಪ್ರಾಸಾದಶಿಖರವು ರಾವಣನು ನೋಡುತ್ತಿದ್ದಂತೆಯೇ ಭಗ್ನವಾಗಿ ಕೆಳಕ್ಕೆ ಬಿದ್ದಿತು. ಹೀಗೆ ಅಂಗದನು ಪ್ರಾಸಾದಶಿಖರವನ್ನು ಧ್ವಂಸಮಾಡಿ ತನ್ನ ನಾಮಧೇಯವನ್ನು ಉದ್ಘೋಷಿಸುತ್ತಾ ಗಟ್ಟಿಯಾಗಿ ಗರ್ಜನೆಮಾಡುತ್ತಾ ಆಕಾಶಮಾರ್ಗದ ಮೂಲಕವಾಗಿ ಹಾರಿಹೋದನು. ಈ ವಿಧವಾದ ಅದ್ಭುತ ಕ್ರಿಯೆಯಿಂದ ಅಂಗದನು ರಾಕ್ಷಸರಿಗೆ ವ್ಯಥೆಯನ್ನುಂಟುಮಾಡುತ್ತಾ ವಾನರರನ್ನು ಸಂತೋಷಗೊಳಿಸುತ್ತಾ ವಾನರರ ಮಧ್ಯದಲ್ಲಿದ್ದ ಶ್ರೀರಾಮನನ್ನು ಸೇರಿದನು. ಪ್ರಾಸಾದದ ಶಿಖರವು ಕೆಳಕ್ಕೆ ಬಿದ್ದುದರಿಂದಾಗಿ ರಾವಣನಿಗೆ ಮಹತ್ತರವಾದ ಕೋಪವುಂಟಾಯಿತು. ತನ್ನ ವಿನಾಶದ ಕಾಲವೂ ಸಮೀಪಿಸುತ್ತಿರುವುದನ್ನು ಮನಗಂಡು ರಾವಣನು ನಿಟ್ಟುಸಿರುಬಿಟ್ಟನು.

ಇತ್ತಲಾಗಿ ಹರ್ಷೋತ್ಸಾಹಗಳಿಂದ ಕೂಡಿ ಗರ್ಜಿಸುತ್ತಿದ್ದ, ಬಹುಸಂಖ್ಯಾತ ವಾನರರಿಂದ ಪರಿವೃತನಾಗಿದ್ದ, ಶತ್ರುವನ್ನು ಸಂಹರಿಸುವ ಅಪೇಕ್ಷೆಯಿಂದಿದ್ದ ಶ್ರೀರಾಮನು ಯುದ್ಧಮಾಡುವ ಸಲುವಾಗಿಯೇ ಮುನ್ನಡೆದನು.

ಪರ್ವತಶಿಖರೋಪಮನಾಗಿದ್ದ, ವಿಶಾಲಕಾಯನಾದ, ಮಹಾಪರಾಕ್ರಮಿಯಾದ, ದುರ್ಜಯನಾದ ಸುಷೇಣನು ಇಚ್ಛಾನುಸಾರವಾಗಿ ರೂಪಗಳನ್ನು ಧರಿಸುವ ಬಹುಸಂಖ್ಯಾತರಾದ ವಾನರರೊಡನೆ ಪರಿವೃತನಾಗಿ ಸುಗ್ರೀವನ ಆಜ್ಞೆಯಂತೆ ಎಲ್ಲ ಹೆಬ್ಬಾಗಿಲುಗಳನ್ನೂ ತನ್ನ ಹತೋಟಿಯಲ್ಲಿಟ್ಟುಕೊಂಡು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಮಾಚಾರವನ್ನು ಒಯ್ಯುವ ಸಲುವಾಗಿ–ಚಂದ್ರನು ನಕ್ಷತ್ರಗಳನ್ನು ಸಂಧಿಸುವಂತೆ–ಅನುಯಾಯಿಗಳೊಡನೆ ಎಲ್ಲ ಹೆಬ್ಬಾಗಿಲುಗಳಿಗೂ ಹೋಗಿಬರುತ್ತಿದ್ದನು.

ಲಂಕೆಯಿಂದ ಹಿಡಿದು ಸಮುದ್ರದವರೆಗೂ ದಟ್ಟವಾಗಿ ಪ್ರಸರಿಸಿದ್ದ ವಾನರರ ನೂರು ಅಕ್ಷೌಹಿಣೀ ಸೈನ್ಯವನ್ನು ನೋಡಿ ರಾಕ್ಷಸರು ವಿಸ್ಮಿತರಾದರು. ಕೆಲವರು ಭಯಗೊಂಡರು. ಹಲವರು ಸಮರಭೂಮಿಯಲ್ಲಿ ಹರ್ಷೋತ್ಸಾಹಗಳಿಂದ ಯುದ್ಧಸನ್ನದ್ಧರಾಗಿ ನಿಂತಿದ್ದರು. ಲಂಕಾಪಟ್ಟಣದ ಪ್ರಾಕಾರದಿಂದ ಕಂದಕದವರೆಗಿನ ಭೂಭಾಗವು ಕಪಿಸೈನಿಕರಿಂದ ತುಂಬಿಹೋಗಿದ್ದಿತು.

ಪ್ರಾಕಾರವೇ ವಾನರರಿಂದ ಮಾಡಲ್ಪಟ್ಟಿರುವುದೋ ಎಂಬಂತೆ ಕಾಣುತ್ತಿದ್ದ ಆ ಮಹಾವಾನರಸೈನ್ಯವನ್ನು ನೋಡಿ ದೀನರಾದ ರಾಕ್ಷಸರು ಭಯಗೊಂಡು ಹಾಹಾಕಾರಮಾಡತೊಡಗಿದರು.

ಮಹಾಭಯಂಕರವಾದ ಕೋಲಾಹಲಶಬ್ದವು ಆರಂಭವಾಗಲಾಗಿ ರಾಕ್ಷಸರಾಜನಾದ ರಾವಣನ ಕಡೆಯ ರಾಕ್ಷಸಯೋಧರು ದೊಡ್ಡ-ದೊಡ್ಡ ಆಯುಧಗಳನ್ನು ಕೈಗಳಲ್ಲೆತ್ತಿಕೊಂಡು ಪ್ರಳಯಕಾಲದ ಬಿರುಗಾಳಿಯಂತೆ ಎಲ್ಲ ಕಡೆಗಳಲ್ಲಿಯೂ ಸಂಚರಿಸತೊಡಗಿದರು.

ಳ೧ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೪೨ನೆಯ ಸರ್ಗ

ವಾನರರಿಂದ ಲಂಕೆಯ ಆಕ್ರಮಣ : ರಾಕ್ಷಸರೊಡನೆ ಯುದ್ಧ

ತತಸ್ತೇ ರಾಕ್ಷಸಾಸ್ತತ್ರ ಗತ್ವಾ ರಾವಣಮಂದಿರಮ್ ।
ನ್ಯವೇದಯನ್ಪುರೀಂ ರುದ್ಧಾಂ ರಾಮೇಣ ಸಹ ವಾನರೈಃ ॥೧॥

ಅನಂತರ ರಾಕ್ಷಸರು ರಾವಣನ ಅರಮನೆಗೆ ಹೋಗಿ ರಾಮನು ವಾನರ ಸೈನಿಕರೊಡನೆ ಲಂಕಾಪಟ್ಟಣವನ್ನು ಆಕ್ರಮಿಸಿರುವನೆಂಬ ಸಮಾಚಾರ ವನ್ನು ನಿವೇದಿಸಿದರು.

ಲಂಕಾಪಟ್ಟಣವು ಆಕ್ರಮಿಸಲ್ಪಟ್ಟಿರುವುದೆಂಬ ವಾರ್ತೆಯನ್ನು ಕೇಳಿ ಅತಿಕ್ರುದ್ಧನಾದ ರಾವಣನು ನಗರದ ರಕ್ಷಣೆಯನ್ನು ಇಮ್ಮಡಿಯಾಗಿಸಿ ಪ್ರಾಸಾದವನ್ನು ಏರಿದನು. ಅಲ್ಲವನು ಪರ್ವತ-ವನ-ಕಾನನಗಳಿಂದ ಸುಶೋ ಭಿತವಾದ ಲಂಕಾಪಟ್ಟಣವು ಯುದ್ಧಕಾಂಕ್ಷಿಗಳಾದ ಬಹುಸಂಖ್ಯಾತರಾದ ವಾನರಸೈನಿಕರಿಂದ ಸುತ್ತಲೂ ಆಕ್ರಮಿಸಲ್ಪಟ್ಟಿರುವುದನ್ನು ನೋಡಿದನು. ಲಂಕಾಪಟ್ಟಣದಿಂದ ಸಮುದ್ರದವರೆಗಿನ ಭೂಭಾಗವೆಲ್ಲವೂ ವಾನರರಿಂದ ಆಚ್ಛಾದಿತವಾಗಿ ಕಪಿಲವರ್ಣದಿಂದ ಕೂಡಿರುವಂತೆ ಕಾಣುತ್ತಿದ್ದಿತು. ಆ ಅಪಾರವಾದ ವಾನರಸೈನ್ಯವನ್ನು ಹೇಗೆ ವಿನಾಶಗೊಳಿಸುವುದೆಂಬ ಚಿಂತೆಯು ರಾವಣನಿಗುಂಟಾಯಿತು. ವಿಶಾಲನೇತ್ರವಾದ ರಾವಣನು ಬಹಳ ಕಾಲದವರೆಗೆ

ಚಿಂತಾಮಗ್ನನಾಗಿದ್ದು ಅನಂತರ ಧೈರ್ಯವನ್ನು ತಾಳಿ ರಾಘವನನ್ನೂ ಕಪಿ ನಾಯಕರನ್ನೂ ಮತ್ತೊಮ್ಮೆ ನೋಡಿದನು.

ಇತ್ತಲಾಗಿ ರಾಘವನು ವಾನರಸೈನ್ಯದೊಡನೆ ಪ್ರಸನ್ನತೆಯಿಂದ ಮುನ್ನಡೆದನು. ಅಲ್ಲವನು ಲಂಕೆಯು ಎಲ್ಲ ಕಡೆಗಳಿಂದಲೂ ರಾಕ್ಷಸರಿಂದ ಆವೃತವಾಗಿದ್ದು ರಕ್ಷಿಸಲ್ಪಡುತ್ತಿದ್ದುದನ್ನು ನೋಡಿದನು. ದಾಶರಥಿಯು ಚಿತ್ರಿತವಾದ ಧ್ವಜ-ಪತಾಕೆಗಳಿಂದ ಸಮಲಂಕೃತವಾಗಿದ್ದ ಲಂಕಾಪಟ್ಟಣವನ್ನು ನೋಡಿ ವ್ಯಥಿತವಾದ ಮನಸ್ಸಿನಿಂದ ಸೀತೆಯನ್ನು ಸ್ಮರಿಸಿಕೊಂಡನು.

ಅತ್ರ ಸಾ ಮೃಗಶಾಬಾಕ್ಷೀ ಮತ್ಕೃತೇ ಜನಕಾತ್ಮಜಾ ।
ಪೀಡ್ಯತೇ ಶೋಕಸಂತಪ್ತಾ ಕೃಶಾ ಸ್ಥಣ್ಡಿಲಶಾಯಿನೀ ॥೮॥

"ಅಯ್ಯೋ! ಜಿಂಕೆಮರಿಯ ಕಣ್ಣುಗಳಂತೆ ಚಂಚಲವಾದ ಕಣ್ಣು ಗಳಿರುವ ಜನಕನ ಮಗಳು ರಾಕ್ಷಸರಿಂದ ಪೀಡಿಸಲ್ಪಡುತ್ತಿದ್ದಾಳೆ. ನನ್ನ ಸಲುವಾಗಿ ಅವಳು ಶೋಕದಿಂದ ಪರಿತಪಿಸುತ್ತಿದ್ದಾಳೆ. ನೆಲದ ಮೇಲೆಯೇ ಮಲಗುತ್ತಿರುವ ಅವಳು ಅತ್ಯಂತ ಕೃಶಳೂ ಆಗಿದ್ದಾಳೆ."

ವೈದೇಹಿಯು ರಾಕ್ಷಸರಿಂದ ಪೀಡಿಸಲ್ಪಡುತ್ತಿರುವಳೆಂಬುದನ್ನು ರಾಘವನು ಸ್ಮರಿಸಿದೊಡನೆಯೇ ವಾನರವೀರರಿಗೆ ರಾಕ್ಷಸರನ್ನು ಸಂಹರಿಸಲು ಬಹಳ ಶೀಘ್ರವಾಗಿಯೇ ಆಜ್ಞಾಪಿಸಿದನು. ಕ್ಲಿಷ್ಟವಾದ ಕಾರ್ಯಗಳನ್ನು ಬಹಳ ಸುಲಭವಾಗಿ ಮಾಡುವ ಶ್ರೀರಾಮನು ಹೀಗೆ ಆಜ್ಞಾಪಿಸಿದೊಡನೆಯೇ ರಾಕ್ಷ ಸರ ಮೇಲೆ ಬೀಳಲು ಮುಂದಾದ ವಾನರಸೈನಿಕರು ಸಿಂಹನಾದಗಳಿಂದ ನಾಲ್ಕು ದಿಕ್ಕುಗಳನ್ನೂ ಪ್ರತಿಧ್ವನಿಸಿದರು. "ಪರ್ವತಶಿಖರಗಳ ಪ್ರಹಾರಗಳಿಂದ ಲಂಕೆ ಯನ್ನೇ ಪುಡಿಪುಡಿ ಮಾಡೋಣ. ಮುಷ್ಟಿಗಳಿಂದಲೇ ಸಮಸ್ತರಾಕ್ಷಸರನ್ನೂ ಸಂಹರಿಸೋಣ"–ಹೀಗೆ ಎಲ್ಲ ವಾನರ ದಂಡನಾಯಕರೂ ಮನಸ್ಸಿನಲ್ಲಿ ನಿಶ್ಚಯಿಸಿದರು. ಪರ್ವತಶೃಂಗಗಳನ್ನೂ, ದೊಡ್ಡ-ದೊಡ್ಡ ಶಿಖರಗಳನ್ನೂ, ಬುಡಸಹಿತ ಕಿತ್ತ ವಿಧ-ವಿಧವಾದ ವೃಕ್ಷಗಳನ್ನೂ ಹಿಡಿದು ಕಪಿನಾಯಕರು ಯುದ್ಧಸನ್ನದ್ಧರಾದರು. ಪ್ರಾಸಾದದ ಮೇಲಿದ್ದ ರಾಕ್ಷಸರಾಜನಾದ ರಾವಣನು ನೋಡುತ್ತಿದ್ದಂತೆಯೇ ಹಲವಾರು ವಿಭಾಗಗಳಲ್ಲಿದ್ದ ವಾನರಸೈನಿಕರು ರಾಘವ ನಿಗೆ ಪ್ರಿಯವನ್ನುಂಟುಮಾಡುವ ಆಶಯದಿಂದ ಲಂಕಾಪಟ್ಟಣದ ಪ್ರಾಕಾರ

ವನ್ನು ಹತ್ತತೊಡಗಿದರು. ಕೆಂಪಾದ ಮುಖಗಳಿಂದ ಕೂಡಿದ್ದ, ಚಿನ್ನದಂತೆ ಕಾಂತಿಯುಳ್ಳವರಾಗಿದ್ದ, ಶ್ರೀರಾಮನ ಸಲುವಾಗಿ ಪ್ರಾಣಗಳನ್ನಾದರೂ ಪರಿತ್ಯಜಿಸಲು ಸಿದ್ಧರಾಗಿ ನಿಂತಿದ್ದ, ಸಾಲವೃಕ್ಷಗಳಿಂದಲೂ ಪರ್ವತದ ಶಿಖರಗಳಿಂದಲೂ ಯುದ್ಧಮಾಡುವ ವಾನರರು ನೇರವಾಗಿ ಲಂಕಾಪಟ್ಟಣವನ್ನೇ ಆಕ್ರಮಿಸಿದರು. ವೃಕ್ಷಗಳಿಂದಲೂ, ಪರ್ವತದ ಶಿಖರಗಳಿಂದಲೂ ಮತ್ತು ಮುಷ್ಟಿಗಳಿಂದಲೂ ಪ್ರಾಕಾರಗಳನ್ನೂ ಮಹಾದ್ವಾರಗಳನ್ನೂ ಪ್ರಹರಿಸುತ್ತಾ



ಧ್ವಂಸಮಾಡತೊಡಗಿದರು. ಆ ವಾನರವೀರರು ಲಂಕಾಪಟ್ಟಣದ ಸುತ್ತಲೂ ಇದ್ದ ಶುದ್ಧವಾದ ನೀರಿನಿಂದ ಕೂಡಿದ್ದ ಕಂದಕಗಳನ್ನು ಮಣ್ಣಿನಿಂದಲೂ, ಪರ್ವತಗಳ ಶಿಖರಗಳಿಂದಲೂ, ಹುಲ್ಲಿನಿಂದಲೂ, ಮರಗಳಿಂದಲೂ ತುಂಬತೊಡಗಿದರು. ಹೀಗೆ ಸಾವಿರಾರು ಲಕ್ಷ-ಲಕ್ಷ, ಕೋಟಿ-ಕೋಟಿ ವಾನರನಾಯಕರು ಲಂಕೆಯ ಪ್ರಾಕಾರಗಳನ್ನು ಹತ್ತಿದರು. ದೊಡ್ಡ-ದೊಡ್ಡ ಆನೆಗಳಂತೆ

ವಿಶಾಲಕಾಯರಾಗಿದ್ದ ಆ ವಾನರರು ಕೆಳಗಿನಿಂದ ಮೇಲಕ್ಕೂ ಮೇಲಿನಿಂದ ಕೆಳಕ್ಕೂ ಜಿಗಿದಾಡುತ್ತಾ ಭಯಂಕರವಾಗಿ ಗರ್ಜನೆಮಾಡುತ್ತಾ ಸುವರ್ಣ ಮಯವಾದ ಮಹಾದ್ವಾರಗಳನ್ನೂ ಕೈಲಾಸಶಿಖರದಂತೆಯೇ ಇದ್ದ ಎತ್ತರ ವಾದ ಗೋಪುರಗಳನ್ನೂ ಧ್ವಂಸಮಾಡುತ್ತಾ ದಾಳಿಮಾಡತೊಡಗಿದರು.

ಜಯತ್ಯತಿಬಲೋ ರಾಮೋ ಲಕ್ಷ್ಮಣಶ್ಚ ಮಹಾಬಲಃ ।
ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ ॥೨೦॥

'ಮಹಾಬಲಿಷ್ಠನಾದ ಶ್ರೀರಾಮನು ಜಯಶಾಲಿಯಾಗುತ್ತಾನೆ! ಮಹಾಬಲನಾದ ಲಕ್ಷ್ಮಣನೂ ವಿಜಯಿಯಾಗುತ್ತಾನೆ! ರಾಘವನಿಂದ ರಕ್ಷಿಸಲ್ಪಡುತ್ತಿರುವ ಸುಗ್ರೀವನೂ ಜಯಶಾಲಿಯಾಗುತ್ತಾನೆ!'

ವಾನರನಾಯಕರು ಹೀಗೆ ಘೋಷಣೆಮಾಡುತ್ತಾ ಭಯಂಕರವಾಗಿ ಗರ್ಜನೆಮಾಡುತ್ತಾ ಲಂಕಾಪಟ್ಟಣದ ಪ್ರಾಕಾರವನ್ನು ಆಕ್ರಮಿಸಿದರು. ಆ ಸಮಯದಲ್ಲಿ ಕಾಮರೂಪಿಗಳಾದ ವೀರಬಾಹು, ಸುಬಾಹು, ನಲ, ಪನಸ ಇವರೇ ಮುಂತಾದ ವಾನರನಾಯಕರು ಪ್ರಾಕಾರವನ್ನು ಧ್ವಂಸಮಾಡಿ ಅಲ್ಲಿಯೇ ಶಿಬಿರಗಳನ್ನು ಸ್ಥಾಪಿಸಿದರು.

ಬಲಿಷ್ಠನಾದ ಕುಮುದನು ವಿಜಯಶ್ರೀಯಿಂದ ಕಂಗೊಳಿಸುತ್ತಿದ್ದ ಹತ್ತುಕೋಟಿ ವಾನರಸೈನಿಕರೊಡನೆ ಲಂಕಾಪಟ್ಟಣದ ಪೂರ್ವದ್ವಾರವನ್ನು ಆಕ್ರಮಿಸಿ ನಿಂತನು.* ಕುಮುದನ ಸಹಾಯಕ್ಕೆ ಹೆಚ್ಚುಮಂದಿ ವಾನರರೊಡನೆ ಪನಸ ಮತ್ತು ಪ್ರಘಸರೂ ಬಂದು ಸೇರಿದರು. ವೀರನಾದ ಶತಬಲಿಯು ಇಪ್ಪತ್ತುಕೋಟಿ ವಾನರಸೈನಿಕರೊಡನೆ ದಕ್ಷಿಣದ್ವಾರವನ್ನು (ಆಗ್ನೇಯದ್ವಾರ ವನ್ನು) ಆಕ್ರಮಿಸಿದನು.

ತಾರೆಯ ತಂದೆಯಾದ ಬಲಿಷ್ಠನಾದ ಸುಷೇಣನು ಅರುವತ್ತು ಕೋಟಿ

---

* ಇಲ್ಲಿ ಹೇಳಿರುವ ಪೂರ್ವ-ದಕ್ಷಿಣ-ಪಶ್ಚಿಮ ಮತ್ತು ಉತ್ತರದಿಕ್ಕುಗಳಿಗೆ ಕ್ರಮವಾಗಿ ಈಶಾನ್ಯ-ಆಗ್ನೇಯ-ನೈಋತ್ಯ ಮತ್ತು ವಾಯವ್ಯದಿಕ್ಕುಗಳೆಂದು ಅರ್ಥಮಾಡಬೇಕೆಂದು ವ್ಯಾಖ್ಯಾನಕಾರರು ಹೇಳಿದ್ದಾರೆ. ಏಕೆಂದರೆ : ಪೂರ್ವ-ದಕ್ಷಿಣ ಪಶ್ಚಿಮೋತ್ತರ ದಿಕ್ಕುಗಳಲ್ಲಿ ನಲ-ಅಂಗದ- ಹನುಮಂತ-ಶ್ರೀರಾಮರು ಇರುವರೆಂದು ಈ ಮೊದಲೇ ಹೇಳಿದೆ. ಪುನಃ ಅಲ್ಲಿಯೂ ಪೂರ್ವ-ದಕ್ಷಿಣ-ಪಶ್ಚಿಮೋತ್ತರ ದಿಕ್ಕುಗಳನ್ನು ಹೇಳಿರುವುದಕ್ಕೆ ಹೀಗೆ ಅರ್ಥ ಮಾಡಬೇಕಾಗಿದೆ.

ಸೈನಿಕರೊಡನೆ ಲಂಕಾಪಟ್ಟಣದ ಪಶ್ಚಿಮದ್ವಾರವನ್ನು (ನೈಋತ್ಯಕೋನವನ್ನು) ಆಕ್ರಮಿಸಿದನು. ಮಹಾಬಲಿಷ್ಠನಾದ ಶ್ರೀರಾಮನು ಲಕ್ಷ್ಮಣ-ಸುಗ್ರೀವರೊಡನೆ ಉತ್ತರದ್ವಾರವನ್ನು ಆಕ್ರಮಿಸಿದನು.[1] ಗೋಲಾಂಗೂಲ ಜಾತಿಯ ಮಹಾಕಾಯನಾದ ಭಯಂಕರನಾಗಿ ಕಾಣುತ್ತಿದ್ದ ಗವಾಕ್ಷನು ಕೋಟಿಸಂಖ್ಯಾಕರಾದ ತನ್ನ ಅನುಯಾಯಿಗಳಿಂದ ಕೂಡಿಕೊಂಡು ಶ್ರೀರಾಮನ ಪಕ್ಕದಲ್ಲಿ ನಿಂತಿದ್ದನು. ಇದೇ ರೀತಿಯಲ್ಲಿ ಮಹಾಬಲಿಷ್ಠನಾದ ಶತ್ರುಸೂದನನಾದ ಧೂಮ್ರನು ಭಯಂಕರಕೋಪಿಷ್ಠರಾದ ಮಹಾವೀರ್ಯಸಂಪನ್ನರಾದ ಕೋಟಿ-ಕೋಟಿ ಕರಡಿಗಳೊಡನೆ ಶ್ರೀರಾಮನ ಪಾರ್ಶ್ವದಲ್ಲಿ ನಿಂತಿದ್ದನು. ಕವಚವೇ ಮೊದಲಾದುವುಗಳಿಂದ ಸುಸಜ್ಜಿತನಾಗಿದ್ದ ಮಹಾಪರಾಕ್ರಮಿಯಾದ ವಿಭೀಷಣನು ಗದಾಪಾಣಿಯಾಗಿ ಜಾಗರೂಕರಾದ ತನ್ನ ಮಂತ್ರಿಗಳೊಡನೆ ಮಹಾಬಲನಾದ ಶ್ರೀರಾಮನಿದ್ದೆಡೆಯಲ್ಲಿಯೇ ನಿಂತಿದ್ದನು. ಗಜ, ಗವಾಕ್ಷ, ಗವಯ, ಶರಭ, ಗಂಧಮಾದನರು ಸುತ್ತಲೂ ತಿರುಗುತ್ತಾ ವಾನರಸೈನ್ಯವನ್ನು ಸಂರಕ್ಷಿಸುತ್ತಿದ್ದರು.

ಬಳಿಕ ಕೋಪದಿಂದ ಉದ್ರಿಕ್ತವಾದ ಮನಸ್ಸುಳ್ಳ ರಾಕ್ಷಸರಾಜನಾದ ರಾವಣನು ಒಡನೆಯೇ ಮುಂದೆ ಹೋಗಲು ತನ್ನ ಸೈನ್ಯಕ್ಕೆ ಆಜ್ಞಾಪಿಸಿದನು. ರಾವಣನ ಮುಖದಿಂದ ಹೊರಟ ಆ ಆಜ್ಞೆಯನ್ನು ಕೇಳಿದೊಡನೆಯೇ ರಾಕ್ಷಸರು ಅತ್ಯಂತಭಯಂಕರವಾಗಿ ಗರ್ಜನೆಗಳನ್ನು ಮಾಡಿದರು. ಬಳಿಕ ಚಂದ್ರನಂತೆ ಬಿಳುಪಾದ ಮುಖಭಾಗಗಳನ್ನು ಹೊಂದಿದ್ದ ಸುವರ್ಣಮಯವಾದ ದಂಡಗಳಿಂದ ಪ್ರಹರಿಸಲ್ಪಡುತ್ತಿದ್ದ ಭೇರೀವಾದ್ಯಗಳು ರಾಕ್ಷಸರ ಸುತ್ತಲೂ ಬಾರಿಸಲ್ಪಡುತ್ತಿದ್ದುವು. ಭಯಂಕರರಾದ ರಾಕ್ಷಸರ ಮುಖದ ಗಾಳಿಯಿಂದ ಪೂರಿತವಾದ ಮಹಾಘೋರಯುಕ್ತವಾದ ಲಕ್ಷ-ಲಕ್ಷಸಂಖ್ಯೆಯ ಶಂಖದ ಧ್ವನಿಗಳು ಕೇಳಿಬರುತ್ತಿದ್ದುವು. ಆಭರಣಗಳ ಪ್ರಭೆಯಿಂದ ಸುಶೋಭಿತರಾಗಿದ್ದ

---

[1]ಈ ಹಿಂದೆ ಸುಗ್ರೀವನು ವಾಯವ್ಯದಿಕ್ಕನ್ನು ಆಕ್ರಮಿಸಿ ಶ್ರೀರಾಮನಿಗೆ ಸಹಾಯ ಮಾಡುತ್ತಿದ್ದನೆಂದು ಹೇಳಿದೆ. ಈ ಸಂದರ್ಭದಲ್ಲಿ ಉತ್ತರದಿಕ್ಕಿನಲ್ಲಿದ್ದ ಶ್ರೀರಾಮ-ಲಕ್ಷ್ಮಣರನ್ನು ಬಿಟ್ಟು ಉಳಿದ ನಾಯಕರನ್ನು ಬದಲಾಯಿಸಲಾಯಿತೆಂದೂ ಅರ್ಥಮಾಡಬಹುದಾಗಿದೆ. ಸಮಯಾನುಸಾರವಾಗಿ ನಾಯಕರನ್ನು ಬದಲಾಯಿಸುವುದೂ ಕೂಡ ಯುದ್ಧದ ಒಂದು ತಂತ್ರ.

ಕಪ್ಪಾದ ಶರೀರಗಳನ್ನು ಹೊಂದಿದ್ದ ನಿಶಾಚರರು ಶಂಖಧ್ವನಿಮಾಡುವಾಗ ಮಿಂಚಿನ ಪ್ರಭೆಯಿಂದ ಉದ್ಭಾಸಿತವಾದ ಮತ್ತು ಬೆಳ್ಳಕ್ಕಿಗಳಿಂದ ಯುಕ್ತವಾದ ಮೇಘಗಳಂತೆಯೇ ಕಾಣುತ್ತಿದ್ದರು. ಪ್ರಳಯಕಾಲದಲ್ಲಿ ಮಹಾಮೇಘಗಳ ವೃಷ್ಟಿಯಿಂದ ತುಂಬುವ ಮಹಾಸಮುದ್ರದ ವೇಗದಂತೆ ರಾವಣನಿಂದ ಪ್ರೇರಿತರಾದ ರಾಕ್ಷಸಸೈನಿಕರು ಪರಮಹೃಷ್ಟರಾಗಿ ಕೋಟೆಯಿಂದ ಹೊರ ಹೊರಟರು. ಯುದ್ಧಕ್ಕಾಗಿ ರಾಕ್ಷಸಸೈನ್ಯವು ಹೊರಬರುತ್ತಿರುವುದನ್ನು ನೋಡಿ ವಾನರಸೈನಿಕರು ಗಟ್ಟಿಯಾಗಿ ಸಿಂಹನಾದಗಳನ್ನು ಮಾಡಿದರು. ಆ ಮಹಾ ನಿನಾದವು ಶಿಖರಗಳಿಂದಲೂ ಕಂದರಗಳಿಂದಲೂ ಕೂಡಿದ ಮಲಯಪರ್ವತ ದಲ್ಲಿ ಪ್ರತಿಧ್ವನಿಸಿತು. ಆನೆಗಳ ಘೀಳಿಡುವಿಕೆಗಳೊಡನೆಯೂ, ಕುದುರೆಗಳ ಕೆನೆತಗಳ ಧ್ವನಿಗಳಿಂದಲೂ, ರಥಚಕ್ರಗಳ ಗಡ-ಗಡಾಶಬ್ದಗಳೊಡನೆಯೂ, ರಾಕ್ಷಸರ ಹೆಜ್ಜೆಗಳ ಶಬ್ದಗಳೊಡನೆಯೂ ಕೂಡಿದ ಶಂಖ-ದುಂದುಭಿನಿನಾದ ಗಳೂ ವೇಗವಂತರಾದ ವಾನರರ ಸಿಂಹನಾದಗಳೂ ಭೂಮಿಯಲ್ಲಿಯೂ, ಅಂತರಿಕ್ಷದಲ್ಲಿಯೂ, ಸಮುದ್ರದಲ್ಲಿಯೂ ಪ್ರತಿಧ್ವನಿಸಿದುವು. ಈ ಮಧ್ಯದಲ್ಲಿ ದೇವತೆಗಳಿಗೂ ಅಸುರರಿಗೂ ಯುದ್ಧವು ನಡೆದಂತೆ–ರಾಕ್ಷಸರಿಗೂ ವಾನರ ಸೈನಿಕರಿಗೂ ಘೋರವಾದ ಯುದ್ಧವು ಪ್ರಾರಂಭವಾಯಿತು.

ರಾಕ್ಷಸರು ತಮ್ಮ ಪರಾಕ್ರಮಗಳನ್ನು ಉದ್ಘೋಷಿಸುತ್ತಾ ಹೊಳೆಯು ತ್ತಿರುವ ಗದೆಗಳಿಂದಲೂ ಶಕ್ತಿ-ಶೂಲ-ಪರಶ್ವಧಗಳಿಂದಲೂ ಸಮಸ್ತವಾನರ ರನ್ನೂ ಸಂಹರಿಸತೊಡಗಿದರು. ಹಾಗೆಯೇ ವೇಗವಂತರಾದ, ಮಹಾಕಾಯ ರಾದ ವಾನರರು-ವೃಕ್ಷಗಳಿಂದಲೂ, ಪರ್ವತದ ಶಿಖರಗಳಿಂದಲೂ, ಉಗುರು ಗಳಿಂದಲೂ, ಕೋರೆದಾಡೆಗಳಿಂದಲೂ ರಾಕ್ಷಸರನ್ನು ಪ್ರಹರಿಸತೊಡಗಿದರು. ವಾನರಸೈನ್ಯದಲ್ಲಿ 'ರಾಜಾ ಜಯತಿ ಸುಗ್ರೀವಃ' ಎಂಬ ಜಯಕಾರ ಶಬ್ದವು ಗಟ್ಟಿಯಾಗಿ ಕೇಳಿಸುತ್ತಿದ್ದಿತು. ರಾಕ್ಷಸರು ತಮ್ಮ ಸೇನೆಯಲ್ಲಿ 'ರಾವಣ ಮಹಾರಾಜನಿಗೆ ಜಯವಾಗಲಿ' ಎಂದು ಹೇಳುತ್ತಾ ತಮ್ಮ-ತಮ್ಮ ನಾಮ ಧೇಯಗಳನ್ನು ಪ್ರಸಿದ್ಧಪಡಿಸುತ್ತಾ ಯುದ್ಧಮಾಡುತ್ತಿದ್ದರು. ಭಯಂಕರರಾದ, ಪ್ರಾಕಾರಗಳ ಮೇಲೇರಿದ್ದ ಇತರ ರಾಕ್ಷಸರು ನೆಲದ ಮೇಲಿದ್ದ ವಾನರರನ್ನು ಭಿಂದಿಪಾಲಗಳೆಂಬ ಆಯುಧಗಳಿಂದಲೂ, ಕತ್ತಿಗಳಿಂದಲೂ, ಶೂಲ ಗಳಿಂದಲೂ ಸೀಳಿಹಾಕುತ್ತಿದ್ದರು. ಕೋಪಗೊಂಡ ವಾನರರು ನೆಲದ ಮೇಲೆ

ನಿಂತಿದ್ದ ರಾಕ್ಷಸರನ್ನು ತಮ್ಮ ತೋಳ್ಬಲದಿಂದಲೇ ಕೆಳಕ್ಕೆ ಕೆಡುವುತ್ತಿದ್ದರು. ಹೀಗೆ ರಾಕ್ಷಸರಿಗೂ ಮತ್ತು ವಾನರರಿಗೂ ಪರಮಾದ್ಭುತವಾದ ಮತ್ತು ಭಯಂಕರವಾದ ಯುದ್ಧವು ನಡೆಯಿತು. ರಣರಂಗವೆಲ್ಲವೂ ರಕ್ತ-ಮಾಂಸಗಳ ಕೆಸರಿನಿಂದ ತುಂಬಿಹೋಯಿತು.

೪೨ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೪೩ನೆಯ ಸರ್ಗ

ದ್ವಂದ್ವಯುದ್ಧದಲ್ಲಿ ರಾಕ್ಷಸರ ಪರಾಜಯ

ಯುಧ್ಯತಾಂ ತು ತತಸ್ತೇಷಾಂ ವಾನರಾಣಾಂ ಮಹಾತ್ಮನಾಮ್ ।
ರಕ್ಷಸಾಂ ಸಮ್ಬಭೂವಾಥ ಬಲಕೋಪಃ ಸುದಾರುಣಃ ॥೧॥

ಪರಸ್ಪರವಾಗಿ ಯುದ್ಧಮಾಡುತ್ತಿದ್ದ ಮಹಾತ್ಮರಾದ ವಾನರರಿಗೂ ರಾಕ್ಷಸರಿಗೂ ಬಲಕ್ಕೆ ಸಂಬಂಧಿಸಿದ ಸುದಾರುಣವಾದ ರೋಷವುಂಟಾಯಿತು.

ಸುವರ್ಣಮಯವಾದ ಆಭರಣಗಳಿಂದ ಸಮಲಂಕೃತವಾಗಿದ್ದ ಕುದುರೆಗಳ ಮೇಲೂ, ಆನೆಗಳ ಮೇಲೂ, ಅಗ್ನಿಯ ಜ್ವಾಲೆಗಳಂತೆ ಜಾಜ್ವಲ್ಯಮಾನವಾಗಿ ಪ್ರಕಾಶಿಸುತ್ತಿದ್ದ ರಥಗಳಲ್ಲಿಯೂ ಕುಳಿತು–ಸೂರ್ಯಸದೃಶವಾದ ಮತ್ತು ಮನೋಹರವಾದ ಕವಚಗಳನ್ನು ಧರಿಸಿ–ತಮ್ಮ ಗರ್ಜನೆಗಳಿಂದ ಹತ್ತು ದಿಕ್ಕುಗಳಲ್ಲಿಯೂ ಪ್ರತಿಧ್ವನಿಯನ್ನುಂಟುಮಾಡುತ್ತಾ ಭಯಂಕರ ಪರಾಕ್ರಮರಾದ, ರಾವಣನಿಗೆ ವಿಜಯವಾಗಬೇಕೆಂದು ಇಚ್ಛಿಸುತ್ತಿದ್ದ ವೀರರಾದ ರಾಕ್ಷಸರು ನಗರದಿಂದ ಹೊರಕ್ಕೆ ಹೊರಟರು. ಶ್ರೀರಾಮನಿಗೆ ವಿಜಯವನ್ನು ಬಯಸುತ್ತಿದ್ದ ವಾನರರ ಮಹಾಸೈನ್ಯವೂ ಘೋರಕರ್ಮರಾದ ರಾಕ್ಷಸರ ಆ ಸೈನ್ಯವನ್ನು ಆಕ್ರಮಿಸಿತು. ಹೀಗೆ ಒಂದು ಸೈನ್ಯವು ಮತ್ತೊಂದು ಸೈನ್ಯವನ್ನು ಆಕ್ರಮಿಸುತ್ತಿರುವಾಗ ರಾಕ್ಷಸರಿಗೂ ವಾನರರಿಗೂ ದ್ವಂದ್ವ ಯುದ್ಧವು ಪ್ರಾರಂಭವಾಯಿತು.

ಮುಕ್ಕಣ್ಣನಾದ ಮಹಾದೇವನೊಡನೆ ಅಂಧಕಾಸುರನು ಯುದ್ಧಮಾಡಿದಂತೆ–ವಾಲಿಯ ಮಗನಾದ ಅಂಗದನೊಡನೆ ರಾವಣನ ಮಗನಾದ ಮಹಾತೇಜಸ್ವಿಯಾದ ಇಂದ್ರಜಿತುವು ದ್ವಂದ್ವಯುದ್ಧಕ್ಕೆ ತೊಡಗಿದನು. ಯಾವಾಗಲೂ ಯುದ್ಧಗಳಲ್ಲಿ ಜಯಿಸಲು ಅಸಾಧ್ಯನಾದ ಸಂಪಾತಿಯು

ಪ್ರಜಂಘನೆಂಬ ಹೆಸರಿನ ರಾಕ್ಷಸನೊಡನೆ ಯುದ್ಧದಲ್ಲಿ ತೊಡಗಿದನು. ಜಂಬುಮಾಲಿಯೊಡನೆ ವಾನರವೀರನಾದ ಹನುಮಂತನು ಯುದ್ಧದಲ್ಲಿ ತೊಡಗಿದನು. ಅತ್ಯಂತಕ್ರುದ್ಧನಾಗಿದ್ದ ರಾವಣನ ತಮ್ಮನಾದ ವಿಭೀಷಣನು ತೀಕ್ಷ್ಣವೇಗನಾದ ಮಿತ್ರಘ್ನನೆಂಬ ರಾಕ್ಷಸನೊಡನೆಯೂ, ಮಹಾಬಲಿಷ್ಠನಾದ ಗಜನು ತಪನನೆಂಬ ರಾಕ್ಷಸನೊಡನೆಯೂ ಯುದ್ಧಮಾಡುತ್ತಿದ್ದರು. ಮಹಾತೇಜಸ್ವಿಯಾದ ನೀಲನು ನಿಕುಂಭನೆಂಬ ರಾಕ್ಷಸನೊಡನೆಯೂ, ವಾನರರಾಜನಾದ ಸುಗ್ರೀವನು ಪ್ರಘಸನೆಂಬ ರಾಕ್ಷಸನೊಡನೆಯೂ, ಲಕ್ಷ್ಮಣನು ವಿರೂಪಾಕ್ಷನೆಂಬ ರಾಕ್ಷಸನೊಡನೆಯೂ ದ್ವಂದ್ವಯುದ್ಧದಲ್ಲಿ ತೊಡಗಿದರು. ದುರ್ಜಯನಾದ ಅಗ್ನಿಕೇತು, ರಶ್ಮಿಕೇತು, ಸುಪ್ತಘ್ನ ಮತ್ತು ಯಜ್ಞಕೋಪ–ಈ ನಾಲ್ವರೂ ಶ್ರೀರಾಮನೊಡನೆ ಯುದ್ಧಮಾಡತೊಡಗಿದರು. ವಜ್ರಮುಷ್ಟಿ ಎಂಬ ರಾಕ್ಷಸನು ಮೈಂದನೊಡನೆಯೂ ಅಶನಿಪ್ರಭನೆಂಬುವನು ದ್ವಿವಿದನೊಡ ನೆಯೂ ಯುದ್ಧದಲ್ಲಿ ತೊಡಗಿದರು. ಹೀಗೆ ಭಯಂಕರರಾದ ಆ ಇಬ್ಬರು ರಾಕ್ಷಸರೊಡನೆ ಕಪಿಮುಖ್ಯರಾದ ಮೈಂದ-ದ್ವಿವಿದರು ಯುದ್ಧಮಾಡತೊಡ ಗಿದರು. ರಣದುರ್ಧರನಾದ, ಭಯಂಕರನಾದ, ವೀರನಾದ ಪ್ರತಪನನೆಂಬ ರಾಕ್ಷಸನು ತೀಕ್ಷ್ಣವೇಗನಾದ ನಲನೊಡನೆಯೂ–ಧರ್ಮನ ಪುತ್ರನಾದ, ಮಹಾಬಲಿಷ್ಠನಾದ ಸುಷೇಣನೆಂಬ ಹೆಸರಿನಿಂದ ವಿಖ್ಯಾತನಾಗಿದ್ದ ಮಹಾವಾನರನು ವಿದ್ಯುನ್ಮಾಲಿಯೊಡನೆಯೂ ಯುದ್ಧದಲ್ಲಿ ತೊಡಗಿದರು.

ಹೀಗೆ ಭಯಂಕರರಾದ ವಾನರರು ಮೊದಲು ಅನೇಕ ರಾಕ್ಷಸರೊಡನೆ ಸಾಮೂಹಿಕವಾಗಿ ಯುದ್ಧಮಾಡುತ್ತಿದ್ದು ಅನಂತರ ಪರಸ್ಪರವಾಗಿ ದ್ವಂದ್ವ ಯುದ್ಧಮಾಡಲು ಉಪಕ್ರಮಿಸಿದರು. ವಿಜಯವನ್ನು ಬಯಸಿ ಯುದ್ಧ ಮಾಡುತ್ತಿದ್ದ ರಾಕ್ಷಸರಿಗೂ ವಾನರರಿಗೂ ಭಯಂಕರವಾದ ಮತ್ತು ರೋಮಾಂಚಕಾರಿಯಾದ ಮಹಾಯುದ್ಧವು ಪ್ರಾರಂಭವಾಯಿತು. ವಾನರರ ಮತ್ತು ರಾಕ್ಷಸರ ಶರೀರಗಳಿಂದ ದೊಡ್ಡ-ದೊಡ್ಡ ರಕ್ತನದಿಗಳು ಪ್ರವಹಿಸ ತೊಡಗಿದುವು. ಆ ರಕ್ತನದಿಗಳು ದಿಮ್ಮಿಗಳ ರಾಶಿಯಂತಿದ್ದ ವಾನರರ ಮತ್ತು ರಾಕ್ಷಸರ ಮೃತಶರೀರಗಳನ್ನು ಒಯ್ಯುತ್ತಿದ್ದುವು. ವಾನರ-ರಾಕ್ಷಸರ ಶರೀರಗಳ ಮೇಲಿದ್ದ ಕೂದಲುಗಳೇ ರಕ್ತನದಿಯ ಪಾಚಿಯಂತಿದ್ದುವು. ಇಂದ್ರನು ವಜ್ರಾಯುಧದಿಂದ ಶತ್ರುಗಳನ್ನು ಪ್ರಹರಿಸುವಂತೆ–ಕ್ರುದ್ಧನಾಗಿದ್ದ

ಇಂದ್ರಜಿತುವು ಶತ್ರುಸೈನ್ಯವನ್ನು ಧೂಳೀಪಟಮಾಡುತ್ತಿದ್ದ ವೀರನಾದ ಅಂಗದನನ್ನು ಗದೆಯಿಂದ ಪ್ರಹರಿಸಿದನು. ಅದಕ್ಕೆ ಪ್ರತಿಯಾಗಿ ವೇಗವಂತ ನಾದ ತೇಜಸ್ವಿಯಾದ ಅಂಗದನು ಇಂದ್ರಜಿತುವಿನ ಸುವರ್ಣಖಚಿತವಾದ ಮತ್ತು ಚಿತ್ರ-ವಿಚಿತ್ರವಾಗಿದ್ದ ರಥವನ್ನೂ ಕುದುರೆ ಮತ್ತು ಸಾರಥಿಗಳನ್ನೂ ಗದೆಯಿಂದ ಪ್ರಹರಿಸಿ ಧ್ವಂಸಮಾಡಿದನು. ಪ್ರಜಂಘನು ಸಂಪಾತಿಯನ್ನು ಮೂರು ಬಾಣಗಳಿಂದ ಗಾಯಗೊಳಿಸಿದನು. ಅದಕ್ಕೆ ಪ್ರತಿಯಾಗಿ ಸಂಪಾತಿಯು ಸಮರಾಂಗಣದಲ್ಲಿ ಪ್ರಜಂಘನನ್ನು ಅಶ್ವಕರ್ಣವೆಂಬ ವೃಕ್ಷದಿಂದ ಪ್ರಹರಿಸಿ ಸಂಹರಿಸಿದನು. ರಥದಲ್ಲಿ ಕುಳಿತಿದ್ದ ಮಹಾಬಲನಾದ ಜಂಬುಮಾಲಿಯು ಅತಿಕ್ರುದ್ಧನಾಗಿ ರಥಶಕ್ತಿಯಿಂದ ಹನುಮಂತನ ವಕ್ಷಃಸ್ಥಳ ದಲ್ಲಿ ಪ್ರಹರಿಸಿದನು. ಮರುಕ್ಷಣದಲ್ಲಿಯೇ ವಾಯುಪುತ್ರನಾದ ಹನುಮಂತನು ಜಂಬುಮಾಲಿಯ ರಥಕ್ಕೆ ಹಾರಿ ಅಂಗೈಯಿಂದಲೇ ಅಪ್ಪಳಿಸಿ ಆ ರಥವನ್ನೂ ಮತ್ತು ಜಂಬುಮಾಲಿಯನ್ನೂ ವಿನಾಶಗೊಳಿಸಿದನು. ರಣರಂಗದ ಮತ್ತೊಂದು ವಿಭಾಗದಲ್ಲಿ ಪ್ರತಪನನೆಂಬ ರಾಕ್ಷಸನು ಗಟ್ಟಿಯಾಗಿ ಗರ್ಜನೆಮಾಡುತ್ತಾ ನಲನನ್ನು ಎದುರಿಸಿದನು. ಕ್ಷಿಪ್ರಹಸ್ತನಾದ ಆ ರಾಕ್ಷಸನು ತೀಕ್ಷ್ಣವಾದ ಬಾಣಗಳಿಂದ ನಲನನ್ನು ಗಾಯಗೊಳಿಸಿದನು. ಮರುಕ್ಷಣದಲ್ಲಿಯೇ ನಲನು ಪ್ರತಪನನ ಕಣ್ಣುಗಳೆರಡನ್ನೂ ಕಿತ್ತುಹಾಕಿದನು. ಕಪಿಸೈನ್ಯವನ್ನು ತಿಂದು ಹಾಕಿ ಬಿಡುವನೋ ಎಂಬಂತೆ ಕಾಣುತ್ತಿದ್ದ ಪ್ರಘಸನೆಂಬ ರಾಕ್ಷಸನನ್ನು ವಾನರ ರಾಜನಾದ ಸುಗ್ರೀವನು ಏಳೆಲೆ ಬಾಳೇಮರದಿಂದ ವೇಗಪೂರ್ವಕವಾಗಿ ಪ್ರಹರಿಸಿ ಸಂಹರಿಸಿದನು. ಭಯಂಕರನಾಗಿ ಕಾಣುತ್ತಿದ್ದ ವಿರೂಪಾಕ್ಷನೆಂಬ ರಾಕ್ಷಸನನ್ನು ಲಕ್ಷ್ಮಣನು ಬಾಣಗಳ ವರ್ಷದಿಂದ ಪೀಡಿಸುತ್ತಿದ್ದು ಕಡೆಗೆ ಒಂದೇ ಬಾಣದಿಂದ ಅವನನ್ನು ಸಂಹರಿಸಿದನು. ಅಗ್ನಿಕೇತು, ಎದುರಿಸಲು ಅಸಾಧ್ಯನಾದ ರಶ್ಮಿಕೇತು, ಸುತಘ್ನ ಮತ್ತು ಯಜ್ಞಕೋಪ ಈ ನಾಲ್ವರೂ ಬಾಣಗಳಿಂದ ಶ್ರೀರಾಮನನ್ನು ಬಹಳವಾಗಿ ಗಾಯಗೊಳಿಸಿದರು. ಮರುಕ್ಷಣ ದಲ್ಲಿಯೇ ಪರಮಕ್ರುದ್ಧನಾದ ಶ್ರೀರಾಮನು ಭಯಂಕರವಾಗಿದ್ದ ಅಗ್ನಿಯ ಜ್ವಾಲೆಗಳಂತಿದ್ದ ನಾಲ್ಕು ಬಾಣಗಳಿಂದ ಆ ನಾಲ್ವರು ರಾಕ್ಷಸರ ತಲೆಗಳನ್ನೂ ಕತ್ತರಿಸಿದನು. ಮೈಂದನು ವಜ್ರಮುಷ್ಟಿರಾಕ್ಷಸನನ್ನು ಮುಷ್ಟಿಯಿಂದಲೇ ಪ್ರಹರಿಸಿ ಸಂಹರಿಸಿದನು. ವಜ್ರಮುಷ್ಟಿಯು ರಥಾಶ್ವಗಳೊಡನೆ ದೇವತೆಗಳ

ವಿಮಾನವು ಕೆಳಗೆ ಬೀಳುವಂತೆಯೇ ಭೂಮಿಯ ಮೇಲೆ ಬಿದ್ದನು. ನಿಕುಂಭ ರಾಕ್ಷಸನು ಕಾಡಿಗೆಯ ಬೆಟ್ಟದಂತೆ ಕಪ್ಪಾದ ಕಾಂತಿಯಿಂದ ಕೂಡಿದ್ದ ನೀಲ ನನ್ನು ಯುದ್ಧದಲ್ಲಿ ತೀಕ್ಷ್ಣವಾದ ಬಾಣಗಳಿಂದ–ಸೂರ್ಯನು ಕಿರಣಗಳಿಂದ ಮೇಘಗಳನ್ನು ಭೇದಿಸುವಂತೆ–ಭೇದಿಸಿದನು. ಪುನಃ ಕ್ಷಿಪ್ರಹಸ್ತನಾದ ನಿಕುಂಭನು ನೂರು ಬಾಣಗಳಿಂದ ಯುದ್ಧದಲ್ಲಿ ನೀಲನನ್ನು ಪ್ರಹರಿಸಿ ಗಹ-ಗಹಿಸಿ ನಕ್ಕನು. ಮರುಕ್ಷಣದಲ್ಲಿಯೇ ಕ್ರುದ್ಧನಾದ ನೀಲನು ಅವನ ರಥದ ಚಕ್ರವನ್ನೇ ಕಿತ್ತು ವಿಷ್ಣುವು ದೇವಾಸುರರ ಯುದ್ಧದಲ್ಲಿ ಚಕ್ರದಿಂದ ಅಸುರ ರನ್ನು ಸಂಹರಿಸುವಂತೆ–ನಿಕುಂಭನ ಮತ್ತು ಅವನ ಸಾರಥಿಯ ಶಿರಸ್ಸುಗಳನ್ನು ಕತ್ತರಿಸಿದನು. ದ್ವಿವಿದನ ಸ್ಪರ್ಶವೇ ವಜ್ರಾಯುಧದಂತೆ ಅಥವಾ ಸಿಡಿಲಿನಂತೆ ದುಸ್ಸಹವಾಗಿದ್ದಿತು. ಅಶನಿಪ್ರಭನೆಂಬ ರಾಕ್ಷಸನನ್ನು ದ್ವಿವಿದನು ಎಲ್ಲ ರಾಕ್ಷಸರೂ ನೋಡುತ್ತಿದ್ದಂತೆಯೇ ಪರ್ವತಶಿಖರದಿಂದ ಪ್ರಹರಿಸಿದನು. ಮರುಕ್ಷಣದಲ್ಲಿಯೇ ಅಶನಿಪ್ರಭನು ವೃಕ್ಷಯೋಧಿಯಾದ ವಾನರೇಂದ್ರನಾದ ದ್ವಿವಿದನನ್ನು ವಜ್ರಾಯುಧಕ್ಕೆ ಸಮಾನವಾಗಿದ್ದ ಬಾಣಗಳಿಂದ ಪ್ರಹರಿಸಿದನು. ದ್ವಿವಿದನ ಶರೀರವೆಲ್ಲವೂ ರಾಕ್ಷಸನು ಬಿಟ್ಟ ಬಾಣಗಳಿಂದ ಕಡುಗಾಯಗೊಂಡಿ ದ್ದಿತು. ಅದರಿಂದ ಪರಮಕ್ರುದ್ಧನಾದ ದ್ವಿವಿದನು ಸಾಲವೃಕ್ಷದಿಂದ ಸಾರಥಿ ಯನ್ನೂ, ಕುದುರೆಗಳನ್ನೂ ಮತ್ತು ಅಶನಿಪ್ರಭನನ್ನೂ ಸಂಹರಿಸಿದನು.

ರಥದಲ್ಲಿ ಕುಳಿತಿದ್ದ ವಿದ್ಯುನ್ಮಾಲಿಯು ಸುವರ್ಣಭೂಷಿತವಾಗಿದ್ದ ಬಾಣ ಗಳಿಂದ ಸುಷೇಣನನ್ನು ಪುನಃ-ಪುನಃ ಗಾಯಗೊಳಿಸುತ್ತಾ ಸಿಂಹನಾದಗಳನ್ನು ಮಾಡುತ್ತಿದ್ದನು. ವಾನರಶ್ರೇಷ್ಠನಾದ ಸುಷೇಣನು ತನ್ನ ಎದುರಾಳಿಯು ರಥದಲ್ಲಿ ಕುಳಿತಿರುವುದನ್ನು ನೋಡಿ ದೊಡ್ಡದಾದೊಂದು ಪರ್ವತಶಿಖರ ವನ್ನೆತ್ತಿಕೊಂಡು ವಿದ್ಯುನ್ಮಾಲಿಯ ರಥಕ್ಕೆ ಅಪ್ಪಳಿಸಿ ಪುಡಿ-ಪುಡಿಮಾಡಿದನು. ವಿದ್ಯುನ್ಮಾಲಿಯು ಅತ್ಯಂತವೇಗವಾಗಿ ರಥದಿಂದ ಕೆಳಗಿಳಿದು ಗದಾಪಾಣಿ ಯಾಗಿ ನೆಲದ ಮೇಲೆ ನಿಂತನು. ಬಳಿಕ ಕ್ರೋಧವಶನಾಗಿದ್ದ ಹರಿಶ್ರೇಷ್ಠನಾದ ಸುಷೇಣನು ದೊಡ್ಡದಾದ ಬಂಡೆಯೊಂದನ್ನೆತ್ತಿಕೊಂಡು ರಾಕ್ಷಸನ ಕಡೆಗೆ ಧಾವಿಸಿದನು. ವಿದ್ಯುನ್ಮಾಲಿಯು ತನ್ನ ಮೇಲೆ ಬೀಳಲು ರಭಸದಿಂದ ಬರು ತ್ತಿದ್ದ ಸುಷೇಣನನ್ನು ಆಕ್ರಮಿಸಿ ವಕ್ಷಃಸ್ಥಳಕ್ಕೆ ಗುರಿಯಿಟ್ಟು ಗದೆಯಿಂದ ಪ್ರಹರಿ ಸಿದನು. ಭಯಂಕರವಾದ ಆ ಗದಾಪ್ರಹಾರವನ್ನು ಲೆಕ್ಕಿಸದೆಯೇ ಸುಷೇಣನು

ತಾನೆತ್ತಿಕೊಂಡಿದ್ದ ದೊಡ್ಡ ಬಂಡೆಯನ್ನು ರಾಕ್ಷಸನ ಎದೆಯ ಮೇಲೆ ಹಾಕಿದನು. ಬಂಡೆಯ ಪ್ರಹಾರದಿಂದಾಗಿ ರಾಕ್ಷಸನ ವಕ್ಷಃಸ್ಥಳವು ನುಚ್ಚುನೂರಾಗಿ ಹೋಯಿತು. ಪ್ರಾಣಗಳನ್ನು ತೊರೆದು ಭೂಮಿಯ ಮೇಲೆ ಬಿದ್ದನು.

ಹೀಗೆ ಅಲ್ಲಿ ನಡೆಯುತ್ತಿದ್ದ ದ್ವಂದ್ವಯುದ್ಧದಲ್ಲಿ ಶೂರರಾದ ವಾನರ ನಾಯಕರು ಶೂರರಾದ ರಾಕ್ಷಸನಾಯಕರನ್ನು ದೇವತೆಗಳು ದೈತ್ಯರನ್ನು ಸಂಹರಿಸಿದಂತೆಯೇ ಒಬ್ಬೊಬ್ಬರನ್ನಾಗಿ ಸಂಹರಿಸುತ್ತಿದ್ದರು.

ಆ ಸಮಯದಲ್ಲಿ ಆ ರಣಭೂಮಿಯು ಭಲ್ಲಗ್ಗಳಿಂದಲೂ, ಗದೆ ಗಳಿಂದಲೂ, ಶಕ್ತಿ-ತೋಮರಗಳಿಂದಲೂ, ಬಾಣಗಳಿಂದಲೂ, ಮುರಿದು ಹೋಗಿದ್ದ ರಥಗಳಿಂದಲೂ, ಸತ್ತುಹೋದ ಆನೆ-ಕುದುರೆಗಳಿಂದಲೂ, ವಾನರ- ರಾಕ್ಷಸರಿಂದಲೂ, ಚಕ್ರಗಳಿಂದಲೂ, ಅಚ್ಚುಮರಗಳಿಂದಲೂ, ಮೂಕಿಮರ ಗಳಿಂದಲೂ ತುಂಬಿ ಹೋಗಿ ಅತ್ಯಂತಭಯಂಕರವಾಗಿ ಕಾಣುತ್ತಿದ್ದಿತು. ಗುಳ್ಳೇನರಿಗಳು ಎಲ್ಲ ಕಡೆಗಳಲ್ಲಿಯೂ ಸಂಚರಿಸುತ್ತಿದ್ದುವು. ದೇವಾಸುರರ ಯುದ್ಧಕ್ಕೆ ಸಮಾನವಾಗಿದ್ದ ಅತ್ಯಂತಭಯಂಕರವಾಗಿದ್ದ ಆ ಮಹಾಯುದ್ಧ ದಲ್ಲಿ ವಾನರ-ರಾಕ್ಷಸರ ಮುಂಡಗಳು ತೊಪ-ತೊಪನೆ ಕೆಳಗೆ ಬೀಳುತ್ತಿ ದ್ದುವು. ಕಪಿಶ್ರೇಷ್ಠರ ರಕ್ತದಿಂದ ತೋಯ್ದುಹೋಗಿದ್ದ, ಸೂರ್ಯನು ಅಸ್ತಂಗತನಾಗುವುದನ್ನೇ ನಿರೀಕ್ಷಿಸುತ್ತಿದ್ದ ಆ ರಾಕ್ಷಸರು ಶೀಘ್ರವಾಗಿ ಪುನಃ ಯುದ್ಧವನ್ನೇ ಆಶ್ರಯಿಸಿದರು.

ಳ೩ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೪೪ನೆಯ ಸರ್ಗ

ರಾತ್ರಿಯಲ್ಲಿ ವಾನರರಿಗೂ ರಾಕ್ಷಸರಿಗೂ ಘೋರಯುದ್ಧ: ಅಂಗದನಿಂದ ಇಂದ್ರಜಿತುವಿನ ಪರಾಜಯ : ಅದೃಶ್ಯನಾದ ಇಂದ್ರಜಿತುವಿನಿಂದ ರಾಮ-ಲಕ್ಷ್ಮಣರ ಬಂಧನ

ಯುಧ್ಯತಾಮೇವ ತೇಷಾಂ ತು ತದಾ ವಾನರರಕ್ಷಸಾಮ್ ।
ರವಿರಸ್ತಂಗತೋ ರಾತ್ರಿಃ ಪ್ರವೃತ್ತಾ ಪ್ರಾಣಹಾರಿಣೀ ॥೧॥

ಹೀಗೆ ವಾನರರಿಗೂ ರಾಕ್ಷಸರಿಗೂ ಯುದ್ಧವು ನಡೆಯುತ್ತಿರುವಾಗ–

ಸೂರ್ಯನು ಅಸ್ತಮಿಸಿದನು. ಪ್ರಾಣಿಗಳ ಪ್ರಾಣಾಪಹಾರಿಯಾದ ರಾತ್ರಿಯು ಕಾಲಿಟ್ಟಿತು.

ವಾನರ-ರಾಕ್ಷಸರು ಬದ್ಧವೈರಿಗಳಾಗಿದ್ದರು. ಹೆಚ್ಚು ಭಯಂಕರರಾಗಿದ್ದರು. ವಿಜಯಗಳಿಸಬೇಕೆಂಬ ಆಶಯವುಳ್ಳವರಾಗಿದ್ದರು. ಹೀಗಿರುತ್ತಿರಲಾಗಿ ವಾನರ-ರಾಕ್ಷಸರ ನಡುವೆ ರಾತ್ರಿಯುದ್ಧವು ಪ್ರಾರಂಭವಾಯಿತು. ದಾರುಣವಾದ ಅಂಧಕಾರವು ಕವಿದಿದ್ದ ಆ ರಾತ್ರಿಯಲ್ಲಿ ವಾನರರು ಎದುರಾಳಿಗಳನ್ನು ನೀವು ರಾಕ್ಷಸರಲ್ಲವೇ? ಎಂದೆನ್ನುತ್ತಾ ಸಂಹರಿಸುತ್ತಿದ್ದರು. ಅಂತೆಯೇ ರಾಕ್ಷಸರು ಕೂಡ ತಮ್ಮ ಎದುರಾಳಿಗಳನ್ನು ನೀವು ವಾನರರಲ್ಲವೇ? ಎಂದು ಹೇಳಿಕೊಂಡು ಸಂಹರಿಸುತ್ತಿದ್ದರು. ಸೈನ್ಯದ ಎಲ್ಲ ಕಡೆಗಳಲ್ಲಿಯೂ 'ಸಾಯಿಸು; ಅವನನ್ನು ಬಿಡಬೇಡ ; ಕತ್ತರಿಸು ; ಇತ್ತಬಾ, ನನ್ನಿಂದ ತಪ್ಪಿಸಿಕೊಂಡು ನೀನು ಹೇಗೆ ಓಡಿಹೋಗುವೆ?'–ಇಂತಹ ಭಯಂಕರಶಬ್ದಗಳೇ ಕೇಳಿಬರುತ್ತಿದ್ದುವು. ಕತ್ತಲುಕವಿದಿದ್ದ ಆ ರಾತ್ರಿಯಲ್ಲಿ ಸುವರ್ಣಮಯವಾದ ಕವಚಗಳನ್ನು ಧರಿಸಿದ್ದ ಕಪ್ಪುಬಣ್ಣದ ಆ ರಾಕ್ಷಸರು ಜ್ಯೋತಿರ್ಲತೆಗಳಿಂದ ಕೂಡಿದ ಕಪ್ಪಾದ ಪರ್ವತಗಳಂತೆಯೇ ಕಾಣುತ್ತಿದ್ದರು. ಪಾರವೇ ಇಲ್ಲದಿದ್ದ ಕತ್ತಲಿನಿಂದ ಆವೃತವಾಗಿದ್ದ ಆ ಕಾಳರಾತ್ರಿಯಲ್ಲಿ ಕ್ರೋಧವಶರಾಗಿದ್ದ ಮಹಾವೇಗರಾದ ರಾಕ್ಷಸರು ಎದುರಿಗೆ ಸಿಕ್ಕಿದ ವಾನರರನ್ನು ಭಕ್ಷಿಸುತ್ತಲೇ ಆಕ್ರಮಿಸಿದರು. ಅದಕ್ಕೆ ಪ್ರತಿಯಾಗಿ ಭಯಂಕರ ಕೋಪಿಷ್ಠರಾಗಿದ್ದ ವಾನರರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹಾರಿಕೊಂಡು ಹೋಗುತ್ತಾ ಸುವರ್ಣಮಯವಾದ ಆಭರಣಗಳಿಂದ ಸಮಲಂಕೃತವಾಗಿದ್ದ ರಾಕ್ಷಸರ ಕುದುರೆಗಳನ್ನೂ ಅಗ್ನಿಜ್ವಾಲೆಗಳಂತೆ ಹಾರಾಡುತ್ತಿದ್ದ ಧ್ವಜಗಳನ್ನೂ ತೀಕ್ಷ್ಣವಾದ ಹಲ್ಲುಗಳಿಂದಲೇ ಸೀಳಿಹಾಕುತ್ತಿದ್ದರು. ಕ್ರೋಧಾಭಿಭೂತರಾಗಿದ್ದ ವಾನರರು ಆನೆಗಳನ್ನೂ, ಮಾವಟಿಗರನ್ನೂ, ಪತಾಕೆ-ಧ್ವಜಗಳಿಂದ ಸಮಲಂಕೃತವಾಗಿದ್ದ ರಥಗಳನ್ನೂ ಎಳೆದಾಡುತ್ತಿದ್ದರು. ಹಲ್ಲುಗಳಿಂದ ಕಚ್ಚಿ-ಕಚ್ಚಿ ಹಿಂಸಿಸುತ್ತಿದ್ದರು. ಹೀಗೆ ವಾನರಸೈನಿಕರು ರಾಕ್ಷಸರ ಸೈನ್ಯವನ್ನು ಅಲ್ಲೋಲ-ಕಲ್ಲೋಲಗೊಳಿಸಿದರು. ರಾಮ-ಲಕ್ಷ್ಮಣರು ಸರ್ಪಸದೃಶವಾದ ತಮ್ಮ ಬಾಣಗಳಿಂದ ಎದುರಾಗಿ ನಿಂತು ಯುದ್ಧಮಾಡುತ್ತಿದ್ದ ಮತ್ತು ಅದೃಶ್ಯರಾಗಿ ಯುದ್ಧಮಾಡುತ್ತಿದ್ದ ರಾಕ್ಷಸಶ್ರೇಷ್ಠರನ್ನು ಸತತವಾಗಿ ಸಂಹರಿಸುತ್ತಿದ್ದರು. ಕುದುರೆಗಳ

ಗೊರಸುಗಳಿಂದ ಹುಟ್ಟಿದ ಮತ್ತು ರಥಚಕ್ರಗಳ ವೇಗವಾದ ಉರುಳಾಟದಿಂದ ಭೂಮಿಯಿಂದ ಮೇಲೆದ್ದ ಧೂಳಿಯು ಯೋಧರ ಕಣ್ಣು-ಕಿವಿಗಳನ್ನೂ ಮುಚ್ಚಿಬಿಟ್ಟಿತು. ಹೀಗೆ ರೋಮಾಂಚಕರವಾದ ಮತ್ತು ಅತಿಭಯಂಕರವಾದ ಯುದ್ಧವು ನಡೆಯುತ್ತಿರಲಾಗಿ ವಾನರ-ರಾಕ್ಷಸರ ರಕ್ತದಿಂದಲೇ ಹುಟ್ಟಿದ ಹಲವಾರು ನದಿಗಳು ಆ ರಣರಂಗದ ಸುತ್ತಲೂ ಪ್ರವಹಿಸತೊಡಗಿದುವು. ಬಳಿಕ ಭೇರೀ-ಮೃದಂಗ-ಪಣವವಾದ್ಯಗಳ ಧ್ವನಿಯು ಶಂಖಧ್ವನಿಯೊಡನೆಯೂ ರಥಚಕ್ರಗಳ ಗಡ-ಗಡಾ ಶಬ್ದಗಳೊಡನೆಯೂ ಬೆರೆತು ಅದ್ಭುತವಾದ ಶಬ್ದವಾಗುತ್ತಿರುವಂತೆ ಕೇಳಿಬರುತ್ತಿದ್ದಿತು. ವಾನರಸೈನಿಕರ ಕಚ್ಚುವಿಕೆಯಿಂದಲೂ ಪರಚುವಿಕೆಯಿಂದಲೂ ಗಾಯಗೊಂಡ ರಾಕ್ಷಸರ ಆರ್ತನಾದಗಳೂ, ಶಸ್ತ್ರಾಸ್ತ್ರಗಳಿಂದ ತುಂಬಾ ಗಾಯಗೊಂಡ ವಾನರಸೈನಿಕರ ಕಿರುಚಾಟಗಳೂ ಅತ್ಯಂತ ಭಯಂಕರವಾಗಿ ಕೇಳಿಬರುತ್ತಿದ್ದುವು. ಶಕ್ತಿ-ಶೂಲ-ಪರಶ್ವಧಗಳಿಂದ ಹತರಾದ ವಾನರಮುಖ್ಯರಿಂದಲೂ ಶಿಲಾ-ಶೃಂಗ-ವೃಕ್ಷಗಳಿಂದ ಹತರಾದ, ಕಾಮರೂಪಿಗಳಾದ, ಪರ್ವತೋಪಮರಾದ ರಾಕ್ಷಸರಿಂದಲೂ ತುಂಬಿಹೋಗಿದ್ದ ಆ ಯುದ್ಧಭೂಮಿಯು ಶಸ್ತ್ರರೂಪವಾದ ಪುಷ್ಪಗಳಿಂದ ಪೂಜಿಸಲ್ಪಟ್ಟಿರುವಂತೆ ಕಾಣುತ್ತಿದ್ದಿತು. ರಕ್ತಪ್ರವಾಹದ ಕೆಸರಿನಿಂದ ಕೂಡಿದ್ದ ಆ ರಣಭೂಮಿಯಲ್ಲಿ ಯುದ್ಧಮಾಡಲು ಉಳಿದಿರುವ ಸ್ಥಳವು ಯಾವುದೆಂಬುದೇ ತಿಳಿಯುತ್ತಿರಲಿಲ್ಲ. ರಕ್ತದ ಕೆಸರಿನಿಂದ ಕೂಡಿದ್ದ ಆ ಪ್ರದೇಶವು ಯೋಧರ ಪ್ರವೇಶಕ್ಕೆ ಕಷ್ಟಸಾಧ್ಯವಾಗಿದ್ದಿತು. ವಾನರರ ಮತ್ತು ರಾಕ್ಷಸರ ಪ್ರಾಣಗಳನ್ನು ನುಂಗುತ್ತಿದ್ದ ಆ ರಾತ್ರಿಯು ಅತ್ಯಂತಭಯಂಕರವಾಗಿದ್ದಿತು. ಪ್ರಳಯಕಾಲದ ರಾತ್ರಿಯಂತೆ ಎಲ್ಲ ಪ್ರಾಣಿಗಳಿಗೂ ಅತಿಕ್ರಮಿಸಲು ಅಸಾಧ್ಯವಾಗಿದ್ದಿತು. ಅನಂತರ ದಾರುಣವಾಗಿದ್ದ ಆ ಕತ್ತಲಿನಲ್ಲಿ ರಾಕ್ಷಸರು ಹರ್ಷೋತ್ಸಾಹಗಳಿಂದ ಕೂಡಿ ಬಾಣಗಳನ್ನು ಸುರಿಸುತ್ತಾ ಶ್ರೀರಾಮನನ್ನೇ ಆಕ್ರಮಿಸಿದರು. ಕುಪಿತರಾಗಿ ಗರ್ಜನೆಮಾಡುತ್ತಿದ್ದ ಅವರ ಶಬ್ದವು ಪ್ರಳಯಕಾಲ ದಲ್ಲಿ ಏಳು ಸಮುದ್ರಗಳ ಸಂಘರ್ಷಣೆಯಿಂದ ಉಂಟಾಗುವ ಘೋರಶಬ್ದಕ್ಕೆ ಸಮಾನವಾಗಿದ್ದಿತು. ಶ್ರೀರಾಮನು ಹಾಗೆ ತನ್ನನ್ನು ಆಕ್ರಮಿಸಿ ಬರುತ್ತಿದ್ದ ಆರು ರಾಕ್ಷಸರನ್ನು ರೆಪ್ಪೆಮುಚ್ಚಿ ತೆಗೆಯುವಷ್ಟರಲ್ಲಿಯೇ ಅಗ್ನಿಯ ಜ್ವಾಲೆಗಳಿಗೆ ಸಮಾನವಾದ ಆರು ಬಾಣಗಳಿಂದ ಸಂಹರಿಸಿದನು. ಅನಂತರ ದುರ್ಧರ್ಷ

ನಾದ ಯಜ್ಞಶತ್ರು, ಮಹಾಪಾರ್ಶ್ವ, ಮಹೋದರ, ವಜ್ರದಂಷ್ಟ್ರ, ಮಹಾಕಾಯ, ಶುಕ ಮತ್ತು ಸಾರಣರೆಂಬ ರಾಕ್ಷಸರು ಪುನಃ ಶ್ರೀರಾಮನನ್ನು ಆಕ್ರಮಿಸಿದರು. ಶ್ರೀರಾಮನು ಬಾಣಗಳ ಸಮೂಹಗಳಿಂದ ಅವರೆಲ್ಲರನ್ನೂ ಮರ್ಮಸ್ಥಾನಗಳಲ್ಲಿ ಪ್ರಹರಿಸಿದನು. ಒಡನೆಯೇ ಯುದ್ಧದಿಂದ ಹಿಮ್ಮೆಟ್ಟಿದ್ದರಿಂದ ಅವರ ಆಯುಷ್ಯವು ಉಳಿದುಕೊಂಡಿತು. ರೆಪ್ಪೆಯಾಡಿಸುವಷ್ಟು ಸಮಯದಲ್ಲಿಯೇ ಮಹಾರಥನಾದ ಶ್ರೀರಾಮನು ಅಗ್ನಿಯ ಜ್ವಾಲೆಗಳಿಗೆ ಸದೃಶವಾದ ಮತ್ತು ಭಯಂಕರವಾದ ಬಾಣಗಳಿಂದ ತನ್ನೆದುರಾಗಿ ಬಂದ ರಾಕ್ಷಸರೆಲ್ಲರನ್ನೂ ಸಂಹರಿಸಿ ದಿಕ್ಕುಗಳನ್ನೂ ಉಪದಿಕ್ಕುಗಳನ್ನೂ ಬೆಳಗಿದನು. ರಾಮ–ಎಂಬ ಹೆಸರಿನಿಂದ ಅಂಕಿತವಾದ ಬಾಣಗಳಿಂದ ರಣಭೂಮಿಯೇ ತುಂಬಿಹೋಯಿತು. ಶ್ರೀರಾಮನನ್ನು ಎದುರಿಸಿ ಯುದ್ಧಮಾಡಲು ಬಂದ ಇತರ ರಾಕ್ಷಸರೂ ಕೂಡ ಬೆಂಕಿಯ ಬಳಿಗೆ ಹೋಗುವ ಪತಂಗದ ಹುಳು ಗಳಂತೆ ಕ್ಷಣಮಾತ್ರದಲ್ಲಿ ಅವಸಾನಹೊಂದಿದರು. ರಣಭೂಮಿಯ ಸುತ್ತಲೂ ಬೀಳುತ್ತಿದ್ದ ಚಿನ್ನದ ರೆಕ್ಕೆಗಳಿಂದ ಕೂಡಿದ್ದ ರಾಮನ ಬಾಣಗಳಿಂದ ಆ ರಾತ್ರಿಯು ಮಿಣುಕುಹುಳುಗಳಿಂದ ಕೂಡಿದ ಶರತ್ಕಾಲದ ರಾತ್ರಿಯಂತೆ ವಿಚಿತ್ರವಾಗಿ ಕಾಣುತ್ತಿದ್ದಿತು. ರಾಕ್ಷಸರ ಗರ್ಜನೆಗಳಿಂದಲೂ ಭೇರಿಗಳ ನಿನಾದ ಗಳಿಂದಲೂ ಮೊದಲೇ ಭಯಂಕರವಾಗಿ ಕಾಣುತ್ತಿದ್ದ ಆ ರಾತ್ರಿಯು ಮತ್ತೂ ಭಯಂಕರವಾಗಿ ಗೋಚರಿಸಿತು. ಎಲ್ಲ ಕಡೆಗಳಲ್ಲಿಯೂ ವ್ಯಾಪ್ತವಾದ ಆ ಅತಿಭಯಂಕರ ಶಬ್ದದಿಂದ ಪ್ರತಿಧ್ವನಿತವಾದ ಕಂದರಗಳಿಂದ ಕೂಡಿದ ತ್ರಿಕೂಟಪರ್ವತವು ಪ್ರತ್ಯುತ್ತರವನ್ನೇನಾದರೂ ಕೊಡುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ಮಹಾಕಾಯರಾದ, ಅಂಧಕಾರದ ಮುದ್ದೆಯಂತೆಯೇ ಕಾಣುತ್ತಿದ್ದ ಗೋಲಾಂಗೂಲಸೈನಿಕರು ತಮ್ಮೆರಡು ತೋಳುಗಳಿಂದಲೂ ರಾಕ್ಷಸರನ್ನು ತಬ್ಬಿಕೊಂಡು ಹಿಸುಕಿ ಸಂಹರಿಸಿ ಹಾಗೆಯೇ ತಿಂದುಬಿಡುತ್ತಿದ್ದರು.

ರಣರಂಗದ ಮತ್ತೊಂದು ವಿಭಾಗದಲ್ಲಿ ಅಂಗದನು ಶತ್ರುಗಳನ್ನು ಸಂಹರಿಸಲು ಸಿದ್ಧನಾಗಿ ನಿಂತಿದ್ದು ತನಗೆ ಎದುರಾಗಿ ಬಂದ ರಾವಣನ ಮಗನಾದ ಇಂದ್ರಜಿತುವನ್ನು ಗಾಯಗೊಳಿಸಿ ಅವನ ಸಾರಥಿಯನ್ನೂ ಮತ್ತು ಕುದುರೆಗಳನ್ನೂ ಯಮಲೋಕಕ್ಕೆ ಕಳುಹಿಸಿದನು. ಕುದುರೆಗಳೂ ಸಾರಥಿಯೂ ಹತರಾಗಲು ಹತಾಶನಾದ ಇಂದ್ರಜಿತುವು ರಥದಿಂದಿಳಿದನು.

ಅಂಗದನ ಸತತವಾದ ಶಿಲಾಪರ್ವತಶಿಖರಗಳ ಪ್ರಹಾರಗಳಿಂದ ಆಯಾಸಗೊಂಡ ರಾವಣಿಯು ಅಲ್ಲಿಯೇ ಅದೃಶ್ಯನಾದನು. ಪ್ರಶಂಸೆಗೆ ಅರ್ಹನಾದ ವಾಲಿಪುತ್ರನ ಆ ಪರಾಕ್ರಮವನ್ನು ಋಷಿಗಳೊಡನಿದ್ದ ದೇವತೆಗಳೂ ರಾಮ-ಲಕ್ಷ್ಮಣರೂ ಬಹಳವಾಗಿ ಪ್ರಶಂಸಿಸಿದರು. ಎಲ್ಲ ಪ್ರಾಣಿವರ್ಗದವರೂ ಯುದ್ಧದಲ್ಲಿ ಇಂದ್ರಜಿತುವಿನ ಪರಾಕ್ರಮದ ಹಿರಿಮೆಯನ್ನು ತಿಳಿದವರಾಗಿದ್ದರು. ಅಂತಹವನೂ ಅಂಗದನಿಂದ ಪರಾಜಿತನಾಗಿ ಯುದ್ಧದಿಂದ ಹಿಮ್ಮೆಟ್ಟಿ ಅದೃಶ್ಯನಾದುದನ್ನು ನೋಡಿ ದೇವರ್ಷಿಗಳು ಪರಮತುಷ್ಟರಾದರು. ಶತ್ರುವು ಪರಾಜಿತನಾದುದನ್ನು ಕಂಡು ಸುಗ್ರೀವ-ವಿಭೀಷಣಸಹಿತರಾದ ವಾನರರೆಲ್ಲರೂ ಪರಮಹೃಷ್ಟರಾಗಿ 'ಅಂಗದ ಸಾಧು-ವಾಲಿಪುತ್ರ ಸಾಧು' 'ಒಳ್ಳೆಯ ಕಾರ್ಯವನ್ನು ಮಾಡಿದೆ' ಎಂದು ಜಯಕಾರಮಾಡಿದರು.

ಭಯಂಕರವಾದ ಕಾರ್ಯಗಳನ್ನು ಮಾಡುವ ವಾಲಿಪುತ್ರನಾದ ಅಂಗದನಿಂದ ಪರಾಜಿತನಾದ ಇಂದ್ರಜಿತುವಿಗೆ ಭಯಂಕರವಾದ ಕ್ರೋಧವುಂಟಾಯಿತು. ಯುದ್ಧದಲ್ಲಿ ಗಾಯಗೊಂಡಿದ್ದ, ರೋಷಾವೇಷಪೂರಿತನಾಗಿದ್ದ, ಪಾಪಿಷ್ಠನಾದ ಇಂದ್ರಜಿತುವು ಬ್ರಹ್ಮನಿಂದಲೂ ವರವನ್ನು ಪಡೆದುಕೊಂಡಿದ್ದನು. ಅವನು ಅದೃಶ್ಯನಾಗಿಯೇ ಇದ್ದು ವಜ್ರಾಯುಧಕ್ಕೆ ಸಮಾನವಾದ ನಿಶಿತವಾದ ಬಾಣಗಳನ್ನು ಸುರಿಸತೊಡಗಿದನು. ಕ್ರುದ್ಧನಾಗಿದ್ದ ಆ ರಾವಣಿಯು ಭಯಂಕರವಾಗಿದ್ದ ಸರ್ಪಮಯವಾದ ಬಾಣಗಳಿಂದ ರಾಮ-ಲಕ್ಷ್ಮಣರನ್ನು ಅಂಗಾಂಗಗಳಲ್ಲೆಲ್ಲಾ ಪ್ರಹರಿಸಿದನು. ಮಾಯೆಯಿಂದ ಸಮಾವೃತನಾಗಿ ಎಲ್ಲ ಪ್ರಾಣಿಗಳಿಗೂ ಅದೃಶ್ಯನಾಗಿ ಕಪಟಯೋಧಿಯಾದ ಇಂದ್ರಜಿತುವು ರಾಮ-ಲಕ್ಷ್ಮಣರನ್ನು ವಿಮೋಹಗೊಳಿಸುತ್ತಾ ಇಬ್ಬರನ್ನೂ ಬಾಣಗಳ ಬಂಧನದಿಂದ ಬಂಧಿಸಿದನು. ಹೀಗೆ ಕ್ರುದ್ಧನಾಗಿದ್ದ ಇಂದ್ರಜಿತುವು ಪುರುಷಸಿಂಹರಾದ ರಾಮ-ಲಕ್ಷ್ಮಣರನ್ನು ನಾಗಬಾಣಗಳಿಂದ ಬಂಧಿಸಿದುದನ್ನು ವಾನರರೆಲ್ಲರೂ ನೋಡಿದರು.

ಪ್ರತ್ಯಕ್ಷವಾಗಿ ನಿಂತು ಯುದ್ಧಮಾಡಿ ರಾಮ-ಲಕ್ಷ್ಮಣರನ್ನು ಬಂಧಿಸಲು ಸಾಧ್ಯವಾಗದಿರಲು ದುರಾತ್ಮನಾದ ಇಂದ್ರಜಿತುವು ಮಾಯಾಯುದ್ಧವನ್ನು

ಮಾಡಲು ತೊಡಗಿ ಅದೃಶ್ಯನಾಗಿಯೇ ಇಬ್ಬರು ರಾಜಪುತ್ರರನ್ನೂ ನಾಗಬಾಣ ಗಳಿಂದ ಬಂಧಿಸಿದನು.

ನಳನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೪೫ನೆಯ ಸರ್ಗ *

ಇಂದ್ರಜಿತುವಿನ ಬಾಣದಿಂದ ರಾಮ-ಲಕ್ಷ್ಮಣರ ಮೂರ್ಛೆ : ವಾನರರ ದುಃಖ

ಸ ತಸ್ಯ ಗತಿಮನ್ವಿಚ್ಛನ್ರಾಜಪುತ್ರಃ ಪ್ರತಾಪವಾನ್ ।
ದಿದೇಶಾತಿಬಲೋ ರಾಮೋ ದಶ ವಾನರಯೂಥಪಾನ್ ॥೧॥

ಮಹಾಬಲಿಷ್ಠನಾದ, ಪ್ರತಾಪವಂತನಾದ ಶ್ರೀರಾಮನು ಇಂದ್ರಜಿತುವು ಹೋದ ಮಾರ್ಗವನ್ನು ತಿಳಿಯುವ ಸಲುವಾಗಿ ವಾನರನಾಯಕರಿಗೆ ಆಜ್ಞಾಪಿಸಿದನು.

ಸುಷೇಣನ ಇಬ್ಬರು ಮಕ್ಕಳು, ಕಪಿಶ್ರೇಷ್ಠನಾದ ನೀಲ, ವಾಲಿಯ ಮಗನಾದ ಅಂಗದ, ವೇಗಶಾಲಿಯಾದ ಶರಭ, ವಿನತ, ಜಾಂಬವಂತ, ಸಾನು ಪ್ರಸ್ಥ, ಋಷಭ ಮತ್ತು ಋಷಭಸ್ಕಂಧ–ಈ ಹತ್ತು ಮಂದಿಗೆ ಇಂದ್ರಜಿತುವನ್ನು ಹುಡುಕಿಕೊಂಡು ಬರುವಂತೆ ಶ್ರೀರಾಮನು ಆದೇಶವನ್ನಿತ್ತನು. ಶ್ರೀರಾಮನ ಆಜ್ಞೆಯನ್ನು ಕೇಳಿ ಪ್ರಹೃಷ್ಟರಾದ ಕಪಿನಾಯಕರು ದೊಡ್ಡ-ದೊಡ್ಡ ಮರಗಳನ್ನೆತ್ತಿಕೊಂಡು ಹತ್ತು ದಿಕ್ಕುಗಳಲ್ಲಿಯೂ ಇಂದ್ರಜಿತುವನ್ನು ಹುಡುಕುವ ಸಲುವಾಗಿ ಆಕಾಶಕ್ಕೆ ಹಾರಿದರು. ಆದರೆ ಅಸ್ತ್ರಗಳ ಆದಾನ-ಸಂಧಾನ-ಪ್ರಯೋಗಗಳನ್ನು ಚೆನ್ನಾಗಿ ತಿಳಿದಿದ್ದ ರಾವಣಿಯು ವೇಗದಿಂದ ಕೂಡಿದ್ದ ಪರಮಾಸ್ತ್ರಗಳ ಪ್ರಹಾರಗಳಿಂದ ವೇಗವಂತರಾದ ಕಪಿದಳಪತಿಗಳ ವೇಗವನ್ನು ತಡೆದುಬಿಟ್ಟನು. ಭಯಂಕರ ವೇಗಶಾಲಿಗಳಾದ ಕಪಿವೀರರು ಬಾಣಗಳಿಂದ ಕ್ಷತ-ವಿಕ್ಷತರಾಗುತ್ತಿದ್ದರೂ–ಮೇಘಗಳಿಂದ ಆವೃತನಾದ ಸೂರ್ಯನು ಕಾಣದಿರುವಂತೆ–ಗಾಢಾಂಧಕಾರದಲ್ಲಿ ಇಂದ್ರಜಿತುವನ್ನು ಕಾಣಲಿಲ್ಲ.

ಅನಂತರ ಯುದ್ಧದಲ್ಲಿ ಜಯಶೀಲನಾದ ಇಂದ್ರಜಿತುವು ಎಲ್ಲರ ದೇಹಗಳನ್ನೂ ಸೀಳಿಹಾಕಲು ಸಮರ್ಥವಾದ ಬಾಣಗಳನ್ನು ರಾಮ-ಲಕ್ಷ್ಮಣರ

---

* ಹಿಂದೆ ಸೂಕ್ಷ್ಮವಾಗಿ ಹೇಳಿದ ನಾಗಬಾಣಪ್ರಯೋಗದ ಕಥೆಯನ್ನು ಈ ಸರ್ಗದಲ್ಲಿ ವಿಸ್ತರಿಸಿ ಹೇಳಲಾಗಿದೆ.

ಮೇಲೆ ಮಾತ್ರವೇ ಸುರಿಸತೊಡಗಿದನು. ಕ್ರುದ್ಧನಾಗಿದ್ದ ಇಂದ್ರಜಿತುವು ಬಾಣಗಳ ರೂಪವನ್ನು ಧರಿಸಿದ್ದ ಸರ್ಪಗಳಿಂದ ರಾಮ-ಲಕ್ಷ್ಮಣರ ಶರೀರ ಗಳನ್ನು ಸ್ವಲ್ಪವಾದರೂ ಬಾಣಗಳಿಲ್ಲದ ಸ್ಥಳವೇ ಇಲ್ಲದ ರೀತಿಯಲ್ಲಿ ಮುಚ್ಚಿ ಬಿಟ್ಟನು. ಗಾಯಗಳಿಂದ ಬಹಳವಾಗಿ ರಕ್ತವು ಸುರಿಯತೊಡಗಿತು. ಆ ಸಮಯದಲ್ಲಿ ರಕ್ತದಿಂದ ತೋಯ್ದುಹೋಗಿದ್ದ ರಾಮ-ಲಕ್ಷ್ಮಣರಿಬ್ಬರೂ ಹೂವರಳಿದ ಮುತ್ತುಗದ ಮರಗಳಂತೆಯೇ ಕಾಣುತ್ತಿದ್ದರು.

ಕೆಂಪಾದ ಕಡೆಗಣ್ಣುಗಳಿಂದ ಕೂಡಿದ್ದ, ರಾಶಿ-ರಾಶಿಯಾಗಿ ಬಿದ್ದಿರುವ ಕಾಡಿಗೆಯಂತೆ ನೀಲವರ್ಣದವನಾಗಿದ್ದ ರಾವಣಿಯು ಅದೃಶ್ಯನಾಗಿಯೇ ಇದ್ದು ರಾಮ-ಲಕ್ಷ್ಮಣರಿಗೆ ಹೇಳಿದನು :

“ವೀರರೇ! ಯುದ್ಧದ ಸಮಯದಲ್ಲಿ ಅದೃಶ್ಯನಾಗುವ ನನ್ನನ್ನು ನೋಡುವುದಕ್ಕಾಗಲೀ-ನನ್ನ ಬಳಿಗೆ ಬರುವುದಕ್ಕಾಗಲೀ ಇಂದ್ರನೂ ಶಕ್ತನಲ್ಲ. ಹೀಗಿರುವಾಗ ನಿಮ್ಮ ವಿಷಯದಲ್ಲಿ ಹೇಳುವುದೇನಿದೆ? ರಘುವಂಶೀಯರಾದ ನಿಮ್ಮಿಬ್ಬರನ್ನೂ ನಾನೀಗಲೇ ಕಾಗೆಯ ರೆಕ್ಕೆಗಳಿರುವ ತೀಕ್ಷ್ಣವಾದ ಬಾಣ ಗಳಿಂದ ಮುಚ್ಚಿಬಿಟ್ಟಿದ್ದೇನೆ. ನಿಮ್ಮ ವಿಷಯದಲ್ಲಿ ಅತ್ಯಂತರುಷ್ಟನಾಗಿರುವ ನಾನು ಇನ್ನು ಸ್ವಲ್ಪ ಸಮಯದಲ್ಲಿಯೇ ನಿಮ್ಮನ್ನು ಯಮನ ಅರಮನೆಗೆ ಕಳುಹಿಸಿಕೊಡುತ್ತೇನೆ.”

ರಾವಣಿಯು ಧರ್ಮಜ್ಞರಾದ ರಾಮ-ಲಕ್ಷ್ಮಣರಿಗೆ ಹೀಗೆ ಹೇಳಿ ಪುನಃ ಇಬ್ಬರನ್ನೂ ನಿಶಿತವಾದ ಬಾಣಗಳಿಂದ ಪ್ರಹರಿಸಿ ಗಹ-ಗಹಿಸಿ ನಗುತ್ತಾ ಗಟ್ಟಿ ಯಾಗಿ ಗರ್ಜಿಸಿದನು. ಕಾಡಿಗೆಯ ರಾಶಿಯಂತೆ ಶ್ಯಾಮಲವರ್ಣನಾದ ಇಂದ್ರಜಿತುವು ಪುನಃ ಧನುಸ್ಸನ್ನು ಸುದೀರ್ಘವಾಗಿ ಸೆಳೆಯುತ್ತಾ ಭಯಂಕರ ವಾದ ಬಾಣಗಳನ್ನು ರಾಮ-ಲಕ್ಷ್ಮಣರ ಮೇಲೆ ಪ್ರಯೋಗಿಸಿದನು. ಮರ್ಮ ಸ್ಥಾನಗಳನ್ನು ತಿಳಿದಿದ್ದ ಇಂದ್ರಜಿತುವು ರಾಮ-ಲಕ್ಷ್ಮಣರ ಮರ್ಮಸ್ಥಳಗಳಲ್ಲಿ ನಿಶಿತವಾದ ಬಾಣಗಳನ್ನು ಹುದಿಯುತ್ತಾ ಬಾರಿ-ಬಾರಿಗೂ ಗರ್ಜನೆಮಾಡು ತ್ತಿದ್ದನು. ರಣಭೂಮಿಯಲ್ಲಿ ರಾವಣಿಯ ಬಾಣಗಳ ಕಟ್ಟಿಗೆ ಸಿಕ್ಕಿಬಿದ್ದಿದ್ದ ರಾಮ-ಲಕ್ಷ್ಮಣರು ನಿಮಿಷಮಾತ್ರದಲ್ಲಿ ಕಣ್ಣಿಂದ ನೋಡಲೂ ಅಸಮರ್ಥ ರಾದರು. ಬಾಣಗಳು ನಾಟಿದ್ದ ಎಲ್ಲ ಅಂಗಾಂಗಗಳೂ ಭಿನ್ನವಾದುವು. ಹಗ್ಗ ವನ್ನು ಕಳಚಿದ ಎರಡು ಇಂದ್ರಧ್ವಜಗಳಂತೆ ರಾಜಕುಮಾರರು ಓಲಾಡತೊಡ

ಗಿದರು. ಭೂಪಾಲರಾದ, ವೀರರಾದ ಮತ್ತು ಮಹಾಧನುಷ್ಮಂತರಾದ ರಾಮ-ಲಕ್ಷ್ಮಣರು ಮರ್ಮಸ್ಥಳಗಳ ಭೇದನದಿಂದ ವಿಚಲಿತರೂ ಕೃಶರೂ ಆಗಿ ಭೂಮಿಯ ಮೇಲೆ ಬಿದ್ದರು. ರಣರಂಗದಲ್ಲಿ ವೀರಶಯನದಲ್ಲಿ ಮಲಗಿದ್ದ ರಕ್ತದಿಂದ ತೋಯ್ದುಹೋಗಿದ್ದ ರಾಮ-ಲಕ್ಷ್ಮಣರ ಅಂಗಾಂಗಗಳೆಲ್ಲವೂ ಬಾಣರೂಪವಾದ ಸರ್ಪಗಳಿಂದ ಪೀಡಿಸಲ್ಪಡುತ್ತಿದ್ದು ಅತ್ಯಂತವ್ಯಥಿತರಾಗಿದ್ದರು. ಅವರ ಶರೀರದಲ್ಲಿ ಬಾಣಗಳಿಂದ ಚುಚ್ಚಲ್ಪಡದೇ ಇರುವ ಒಂದು ಅಂಗುಲದಷ್ಟು ಸ್ಥಳವಾದರೂ ಇರಲಿಲ್ಲ. ಕೈಗಳ ಅಗ್ರಭಾಗದವರೆಗೂ ಪೀಡಿಸಲ್ಪಡದೇ ಇರುವ ಸ್ಥಳವಾಗಲೀ ನೋಯದೇ ಇರುವ ಸ್ಥಳವಾಗಲೀ ಇರಲಿಲ್ಲ. ಕಾಮರೂಪಿಯಾದ, ಕ್ರೂರಿಯಾದ ರಾಕ್ಷಸನು ಇಬ್ಬರನ್ನೂ ಬಹಳವಾಗಿ ಗಾಯಗೊಳಿಸಿದ್ದ ನು. ಚಿಲುಮೆಯಿಂದ ನೀರು ಸುರಿಯುವಂತೆ–ಇಬ್ಬರ ಶರೀರಗಳಿಂದಲೂ ತೀವ್ರವಾಗಿ ರಕ್ತವು ಸುರಿಯುತ್ತಿದ್ದಿತು. ಹಿಂದೆ ಇಂದ್ರ ನನ್ನೇ ಜಯಿಸಿದ್ದ ಕ್ರುದ್ಧನಾಗಿದ್ದ ಇಂದ್ರಜಿತುವಿನ ಬಾಣಗಳಿಂದ ಮರ್ಮಸ್ಥಳ ಗಳಲ್ಲಿ ಪ್ರಹರಿಸಲ್ಪಟ್ಟ ಶ್ರೀರಾಮನು ಮೊದಲು ನೆಲದ ಮೇಲೆ ಬಿದ್ದನು. ಅನಂತರ ಲಕ್ಷ್ಮಣನು ಬಿದ್ದನು. ಇಂದ್ರಜಿತುವು ರಾಮ-ಲಕ್ಷ್ಮಣರನ್ನು ಸುವರ್ಣಮಯವಾದ ರೆಕ್ಕೆಗಳನ್ನು ಹೊಂದಿದ್ದ, ಸ್ವಚ್ಛವಾದ ಅಗ್ರಭಾಗಗಳಿಂದ ಕೂಡಿದ್ದ, ಅಧೋಮುಖವಾದ* ಗಮನವುಳ್ಳ, ಶೀಘ್ರವಾಗಿ ಹೋಗುವ, ನಾರಾಚ, ಅರ್ಧನಾರಾಚ, ಭಲ್ಲ, ಅಂಜಲಿಕ, ವತ್ಸದಂತ, ಸಿಂಹದಂಷ್ಟ್ರ, ಕ್ಷುರ–ಇವೇ ಮುಂತಾದ ಬಾಣಗಳಿಂದ ಗಾಯಗೊಳಿಸಿದನು. ಶಿಥಿಲವಾದ ಮುಷ್ಟಿಯಿಂದ ಕೂಡಿದ್ದ, ಎರಡು ಪಾರ್ಶ್ವಗಳಲ್ಲಿಯೂ ಮತ್ತು ಮಧ್ಯಭಾಗದಲ್ಲಿಯೂ ಬಗ್ಗಿಕೊಂಡಿದ್ದ, ಸುವರ್ಣಭೂಷಿತವಾಗಿದ್ದ, ಬಿಚ್ಚಲ್ಪಟ್ಟ ನಾಣುಳ್ಳ ಧನುಸ್ಸನ್ನು ತ್ಯಜಿಸಿ ಶ್ರೀರಾಮನು ವೀರಶಯ್ಯೆಯಲ್ಲಿ ಮಲಗಿದನು. ಬಿಟ್ಟ ಒಂದು ಬಾಣವು ಹೋಗಿ ಬೀಳುವಷ್ಟು ದೂರದಲ್ಲಿ ಬಿದ್ದಿದ್ದ ಪುರುಷ ಶ್ರೇಷ್ಠನಾದ ಶ್ರೀರಾಮನನ್ನು ನೋಡಿ ಲಕ್ಷ್ಮಣನು ತನ್ನ ಜೀವಿತದಲ್ಲಿಯೇ ನಿರಾಶ ನಾದನು. ಸರ್ವರಿಗೂ ಶರಣ್ಯನಾದ, ಕಮಲನಯನನಾದ, ಶರಬಂಧನದಿಂದ

---

* ಅಧೋಗತಿಭಿಃ= ಶ್ರೀರಾಮನು ಭೂಮಿಯ ಮೇಲಿದ್ದು ಇಂದ್ರಜಿತುವು ಆಕಾಶದಲ್ಲಿ ಅದೃಶ್ಯನಾಗಿದ್ದುದರಿಂದ ಅವನ ಬಾಣಗಳು ಅಧೋಮುಖವಾಗಿ ಶ್ರೀರಾಮನ ಕಡೆಗೆ ಬರುತ್ತಿದ್ದುವು.

ಬಂಧಿತನಾದ ಅಣ್ಣನಾದ ಶ್ರೀರಾಮನು ನೆಲದಲ್ಲಿ ಬಿದ್ದಿರುವುದನ್ನು ನೋಡಿ ಲಕ್ಷ್ಮಣನು ಬಹಳವಾಗಿ ಶೋಕಿಸಿದನು. ವಾನರರೂ ಕೂಡ ನೆಲದ ಮೇಲೆ ಬಿದ್ದಿದ್ದ ಶ್ರೀರಾಮನನ್ನು ನೋಡಿ ಬಹಳವಾಗಿ ಪರಿತಪಿಸಿದರು. ಕಂಬನಿ ದುಂಬಿದ ಕಣ್ಣುಗಳಿಂದ ಕೂಡಿದ್ದ ಅವರು ಶೋಕಪೀಡಿತರಾಗಿ ಆರ್ತನಾದ ಗಳನ್ನು ಮಾಡಿದರು.

ಸರ್ಪರೂಪವಾದ ಬಾಣಗಳಿಂದ ಬಂಧಿಸಲ್ಪಟ್ಟವರಾಗಿ ವೀರಶಯ್ಯೆ ಯಲ್ಲಿ ಮಲಗಿದ್ದ ಇಬ್ಬರು ಸಹೋದರರನ್ನೂ ವಾನರರು ಸುತ್ತುವರಿದು ನಿಂತರು. ಅನಂತರ ಅಲ್ಲಿಗೆ ಬಂದ ಹನುಮಂತನೇ ಮೊದಲಾದ ವ್ಯಥಿತ ರಾಗಿದ್ದ ವಾನರಪ್ರಮುಖರು ರಾಮ-ಲಕ್ಷ್ಮಣರ ಆ ಸ್ಥಿತಿಯನ್ನು ನೋಡಿ ಬಹಳವಾಗಿ ವಿಷಾದಿಸಿದರು.

ನಲವತ್ತೈದನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೪೬ನೆಯ ಸರ್ಗ

ರಾಮ-ಲಕ್ಷ್ಮಣರು ಮೂರ್ಛಿತರಾಗಿ ಬಿದ್ದಿರುವುದನ್ನು ನೋಡಿ ವಾನರರ ಶೋಕ: ಇಂದ್ರಜಿತುವಿನ ಹರ್ಷೋದ್ಗಾರ: ವಿಭೀಷಣನಿಂದ ಸುಗ್ರೀವನ ಸಮಾಧಾನ: ಇಂದ್ರಜಿತುವಿನಿಂದ ಶತ್ರುವಧೆಯ ವೃತ್ತಾಂತವನ್ನು ತಿಳಿದ ರಾವಣನಿಂದ ಪುತ್ರನಿಗೆ ಅಭಿನಂದನೆ

ತತೋ ದ್ಯಾಂ ಪೃಥಿವೀಂ ಚೈವ ವೀಕ್ಷಮಾಣಾ ವನೌಕಸಃ ।
ದದೃಶುಃ ಸಂತತೌ ಬಾಣೈರ್ಭ್ರಾತರೌ ರಾಮಲಕ್ಷ್ಮಣೌ ॥೧॥

ಶ್ರೀರಾಮನ ಆಜ್ಞಾನುಸಾರವಾಗಿ ಇಂದ್ರಜಿತುವು ಎಲ್ಲಿರುವನೆಂಬು ದನ್ನು ಹುಡುಕಲು ಹೊರಟಿದ್ದ ನೀಲ, ಅಂಗದ–ಮುಂತಾದ ವಾನರರು ಭೂಮಿಯಲ್ಲೂ ಆಕಾಶದಲ್ಲೂ ಸಂಚರಿಸುತ್ತಿದ್ದಾಗ ಬಾಣಗಳಿಂದ ಚುಚ್ಚ ಲ್ಪಟ್ಟು ನೆಲದ ಮೇಲೆ ಬಿದ್ದಿದ್ದ ರಾಮ-ಲಕ್ಷ್ಮಣರನ್ನು ನೋಡಿದರು.

ಮಳೆಗರೆದು ದೇವರಾಜನು ಶಾಂತನಾಗುವಂತೆ–ಇಂದ್ರಜಿತುವು ರಾಮ-ಲಕ್ಷ್ಮಣರನ್ನು ಮೂರ್ಛಿತರನ್ನಾಗಿಸಿ ಶರವರ್ಷವನ್ನೂ ನಿಲ್ಲಿಸಿದ ಆ ಪ್ರದೇಶಕ್ಕೆ ಸುಗ್ರೀವ-ವಿಭೀಷಣರು ಆಗಮಿಸಿದರು.

ಹನುಮಂತನೊಡನೆ ಬಂದ ನೀಲ, ದ್ವಿವಿದ, ಮೈಂದ, ಸುಷೇಣ, ಕುಮುದ, ಅಂಗದರು ರಾಮ-ಲಕ್ಷ್ಮಣರ ಸಲುವಾಗಿ ಶೋಕಿಸತೊಡಗಿದರು. ಆ ಸಮಯದಲ್ಲಿ ರಾಮ-ಲಕ್ಷ್ಮಣರಿಬ್ಬರೂ ನಿಶ್ಚೇಷ್ಟರಾಗಿದ್ದರು. ಅವರ ಉಚ್ಛ್ವಾಸ-ನಿಃಶ್ವಾಸಗಳೂ ಕ್ಷೀಣಿಸಿದ್ದುವು. ರಕ್ತದಿಂದ ತೋಯ್ದುಹೋಗಿದ್ದರು. ಶರೀರವೆಲ್ಲವೂ ಬಾಣಗಳಿಂದ ತುಂಬಿಹೋಗಿದ್ದಿತು. ಸ್ತಬ್ಧರಾಗಿದ್ದರು. ಬಾಣಗಳ ಹಾಸಿಗೆಯಲ್ಲೇ ಮಲಗಿದ್ದರು. ಒಮ್ಮೊಮ್ಮೆ ಹಾವಿನಂತೆ ನಿಟ್ಟುಸಿರುಬಿಡುತ್ತಿದ್ದರು. ನಿಶ್ಚೇಷ್ಟರಾಗಿದ್ದರು. ಅವರ ಪರಾಕ್ರಮವೂ ಉಡುಗಿಹೋಗಿದ್ದಿತು. ಸತತವಾದ ರಕ್ತಸ್ರಾವದಿಂದ ಶರೀರವೆಲ್ಲವೂ ನೆನೆದು ಹೋಗಿದ್ದಿತು. ಮುರಿದು ಕೆಳಕ್ಕೆ ಬಿದ್ದಿರುವ ಎರಡು ಸುವರ್ಣಧ್ವಜ ಗಳಂತೆಯೇ ಕಾಣುತ್ತಿದ್ದರು. ವೀರಶಯ್ಯೆಯಲ್ಲಿ ಮಲಗಿದ್ದ ಮಂದಚೇಷ್ಟರಾದ ಆ ವೀರರು ಕಂಬನಿದುಂಬಿದ ಕಣ್ಣುಗಳಿಂದ ಕೂಡಿದ್ದ ವಾನರದಳಪತಿಗಳಿಂದ ಪರಿವೃತರಾಗಿದ್ದರು. ಬಾಣಗಳ ಸಮೂಹಗಳಿಂದ ಆವೃತರಾಗಿ ನೆಲದ ಮೇಲೆ ಬಿದ್ದಿದ್ದ ರಾಘವರನ್ನು ನೋಡಿ ವಿಭೀಷಣಸಹಿತರಾದ ಸಮಸ್ತ ವಾನರರೂ ವ್ಯಥಿತರಾದರು. ಎಲ್ಲ ವಾನರರೂ ಆಕಾಶದ ಕಡೆಗೂ ಮತ್ತು ಎಲ್ಲ ದಿಕ್ಕುಗಳ ಕಡೆಗೂ ನೋಡುತ್ತಿದ್ದರು. ಆದರೆ ಮಾಯೆಯಿಂದ ಅದೃಶ್ಯನಾಗಿದ್ದ ರಾವಣಿಯನ್ನು ಮಾತ್ರ ಅವರು ಕಾಣಲಿಲ್ಲ.

ಮಾಯೆಯಿಂದ ಅದೃಶ್ಯನಾಗಿದ್ದ ಇಂದ್ರಜಿತುವನ್ನು ವಿಭೀಷಣನು ಮಾಯಾವಿದ್ಯೆಯನ್ನೇ ಆಶ್ರಯಿಸಿ ಹುಡುಕತೊಡಗಿದನು. ಅಪ್ರತಿಮವಾದ ಕಾರ್ಯಗಳನ್ನು ಮಾಡಲು ಸಮರ್ಥನಾಗಿದ್ದ, ಯುದ್ಧದಲ್ಲಿ ಎದುರಾಳಿಗಳೇ ಇಲ್ಲದಿದ್ದ ಅಣ್ಣನ ಮಗನಾದ ಇಂದ್ರಜಿತುವನ್ನು ವಿಭೀಷಣನು ತನ್ನೆದುರಿ ನಲ್ಲಿಯೇ ನಿಂತಿರುವುದನ್ನು ನೋಡಿದನು. ತೇಜಸ್ಸಿನಿಂದಲೂ, ಪರಾಕ್ರಮ ದಿಂದಲೂ ಕೂಡಿದ್ದ ವಿಭೀಷಣನು ಮಾಯೆಯ ಮೂಲಕವಾಗಿಯೇ ವರ ದಾನದ ಪ್ರಭಾವದಿಂದ ಅದೃಶ್ಯನಾಗಿದ್ದ ವೀರನಾದ ಇಂದ್ರಜಿತುವನ್ನು ನೋಡಿದನು.

ಶ್ರೀರಾಮ-ಲಕ್ಷ್ಮಣರು ಯುದ್ಧಭೂಮಿಯಲ್ಲಿ ಮೂರ್ಛಿತರಾಗಿ ಮಲ ಗಿರುವುದನ್ನು ನೋಡಿ ರಾವಣಿಯು ಪರಮಪ್ರೀತನಾಗಿ ತನ್ನ ಕಡೆಯ ರಾಕ್ಷಸ

ರೆಲ್ಲರನ್ನೂ ಹರ್ಷಗೊಳಿಸುತ್ತಾ ತಾನು ಎಂತಹ ಪರಮಾದ್ಭುತವಾದ ಕಾರ್ಯ ಮಾಡಿರುವೆನೆಂಬುದನ್ನು ಹೇಳತೊಡಗಿದನು :

ದೂಷಣಸ್ಯ ಚ ಹನ್ತಾರೌ ಖರಸ್ಯ ಚ ಮಹಾಬಲೌ ।
ಸಾದಿತೌ ಮಾಮಕೈರ್ಬಾಣೈರ್ಭ್ರಾತರೌ ರಾಮಲಕ್ಷ್ಮಣೌ ॥೧೨॥

"ಅದೋ ಅಲ್ಲಿ ನೋಡಿರಿ! ಯಾರು ಖರ-ದೂಷಣರನ್ನು ಸಂಹಾರ ಮಾಡಿದರೋ–ಅಂತಹ ಮಹಾಬಲರಾದ ರಾಮ-ಲಕ್ಷ್ಮಣರನ್ನು ನನ್ನ ಬಾಣಗಳಿಂದ ನಿಶ್ಶೇಷ್ಟರನ್ನಾಗಿ ಮಾಡಿದ್ದೇನೆ.

ನೇಮೌ ಮೋಕ್ಷಯಿತುಂ ಶಕ್ಯಾವೇತಸ್ಮಾದಿಷುಬನ್ಧನಾತ್ ।
ಸರ್ವೈರಪಿ ಸಮಾಗಮ್ಯ ಸರ್ಷಿಸಙ್ಘೈಃ ಸುರಾಸುರೈಃ ॥೧೩॥

ಮುನಿಗಳ ಸಮೂಹದೊಡನೆ ಸಮಸ್ತ ದೇವತೆಗಳೇ ಬಂದರೂ, ಸಮಸ್ತ ದಾನವರೇ ಬಂದರೂ ನಾನು ಕಲ್ಪಿಸಿರುವ ಈ ಬಾಣಗಳ ಬಂಧನದಿಂದ ಇವರನ್ನು ಬಿಡುಗಡೆಮಾಡಲು ಸಾಧ್ಯವಿಲ್ಲ.

ಯತ್ಕೃತೇ ಚಿನ್ತಯಾನಸ್ಯ ಶೋಕಾರ್ತಸ್ಯ ಪಿತುರ್ಮಮ ।
ಅಸ್ಪೃಷ್ಟ್ವಾ ಶಯನಂ ಗಾತ್ರೈಸ್ತ್ರಿಯಾಮಾ ಯಾತಿ ಶರ್ವರೀ ॥೧೪॥

ಕೃತ್ಸ್ನೇಯಂ ಯತ್ಕೃತೇ ಲಙ್ಕಾ
ನದೀ ವರ್ಷಾಸ್ವಿವಾಕುಲಾ ।
ಸೋಽಯಂ ಮೂಲಹರೋಽನರ್ಥಃ
ಸರ್ವೇಷಾಂ ಶಮಿತೋ ಮಯಾ ॥೧೫॥

ಯಾವನ ಸಲುವಾಗಿ ನನ್ನ ತಂದೆಯು ಶೋಕಪೀಡಿತನಾಗಿದ್ದನೋ ಮತ್ತು ಹಾಸಿಗೆಯನ್ನು ಸೇರದೆಯೇ ರಾತ್ರಿಯನ್ನು ಕಳೆಯುತ್ತಿದ್ದನೋ, ಯಾವನ ಸಲುವಾಗಿ ಈ ಲಂಕಾಪಟ್ಟಣವು ವರ್ಷಾಕಾಲದ ನದಿಯಂತೆ ವ್ಯಾಕುಲಗೊಂಡಿದ್ದಿತೋ ಮತ್ತು ಯಾವನು ಬುಡವನ್ನೇ ನಾಶಮಾಡುವ ಅನರ್ಥಕಾರಿಯಾಗಿದ್ದನೋ–ಅಂತಹ ರಾಮನನ್ನು ನಾನಿಂದು ಉಪಶಮನಗೊಳಿಸಿದ್ದೇನೆ.

ಶರತ್ಕಾಲದಲ್ಲಿ ಮೋಡಗಳು ವ್ಯರ್ಥವಾಗುವಂತೆ ರಾಮ-ಲಕ್ಷ್ಮಣರ ಮತ್ತು ಸಮಸ್ತವಾನರಸೈನಿಕರ ಪರಾಕ್ರಮವೂ ನಿಷ್ಫಲವಾಗಿ ಹೋಯಿತು."

ತನ್ನ ಸುತ್ತಲೂ ಇದ್ದ ರಾಕ್ಷಸಯೋಧರಿಗೆ ಇಂದ್ರಜಿತುವು ಹೀಗೆ ಹೇಳಿ ಸುಪ್ರಸಿದ್ಧರಾದ ಸಮಸ್ತವಾನರಮುಖ್ಯರನ್ನೂ ಪ್ರಹರಿಸಲು ಪ್ರಾರಂಭಿಸಿದನು.

ಶತ್ರುಗಳನ್ನು ಧ್ವಂಸಮಾಡುವ ಸಾಮರ್ಥ್ಯವನ್ನು ಹೊಂದಿದ್ದ ರಾವಣಿಯು ನೀಲನನ್ನು ಒಂಬತ್ತು ಬಾಣಗಳಿಂದಲೂ, ಮೈಂದ-ದ್ವಿವಿದರನ್ನು ಮೂರು-ಮೂರು ಬಾಣಗಳಿಂದಲೂ ಪ್ರಹರಿಸಿ ಪರಿತಾಪಗೊಳಿಸಿದನು. ಮಹಾಧನುಷ್ಮಂತನಾದ ರಾವಣಿಯು ಜಾಂಬವಂತನನ್ನು ಒಂದು ಬಾಣದಿಂದ ವಕ್ಷಃಸ್ಥಳದಲ್ಲಿ ಪ್ರಹರಿಸಿ ವೇಗವಂತನಾದ ಹನುಮಂತನ ಮೇಲೆ ಹತ್ತು ಬಾಣಗಳನ್ನು ಬಿಟ್ಟನು. ಮಹಾವೇಗವಂತನಾದ ರಾವಣಿಯು ಅಮಿತಪರಾಕ್ರಮಿಗಳಾದ ಗವಾಕ್ಷ-ಶರಭರನ್ನು ಎರಡೆರಡು ಬಾಣಗಳಿಂದ ಪ್ರಹರಿಸಿದನು. ಅತ್ಯಂತತ್ವರೆಯಿಂದ ಗೋಲಾಂಗೂಲಗಳಿಗೆ ಒಡೆಯನಾದ ಗವಾಕ್ಷನನ್ನೂ, ವಾಲಿಯ ಮಗನಾದ ಅಂಗದನನ್ನೂ ಅನೇಕ ಬಾಣಗಳಿಂದ ಪ್ರಹರಿಸಿ ಗಾಯಗೊಳಿಸಿದನು. ಮಹಾಸತ್ತ್ವನಾದ, ಬಲಿಷ್ಠನಾದ ರಾವಣಿಯು ಆ ಎಲ್ಲ ವಾನರಶ್ರೇಷ್ಠರನ್ನೂ ಅಗ್ನಿಯ ಜ್ವಾಲೆಗಳಿಗೆ ಸಮಾನವಾದ ಬಾಣಗಳಿಂದ ಪ್ರಹರಿಸಿ ಗಟ್ಟಿಯಾಗಿ ಗರ್ಜಿಸಿದನು. ಬಾಣಗಳ ಸಮೂಹಗಳಿಂದ ಆ ಎಲ್ಲ ವಾನರಮುಖ್ಯರನ್ನೂ ಪೀಡಿಸುತ್ತಾ ಮತ್ತು ಭಯಗೊಳಿಸುತ್ತಾ ಗಹ-ಗಹಿಸಿ ನಗುತ್ತಾ ಹೇಳಿದನು :

ಶರಬನ್ಧೇನ ಘೋರೇಣ ಮಯಾ ಬದ್ಧೌ ಚಮೂಮುಖೇ ।
ಸಹಿತೌ ಭ್ರಾತರಾವೇತೌ ನಿಶಾಮಯತ ರಾಕ್ಷಸಾಃ ॥೨೪॥

"ರಾಕ್ಷಸರೇ! ಇಲ್ಲಿ ನೋಡಿರಿ. ರಣರಂಗದಲ್ಲಿ ಭಯಂಕರವಾದ ಶರಬಂಧದಿಂದ ನಾನು ಈ ರಾಮ-ಲಕ್ಷ್ಮಣರಿಬ್ಬರನ್ನೂ ಒಟ್ಟಾಗಿಯೇ ಬಂಧಿಸಿದ್ದೇನೆ."

ರಾವಣಿಯು ಹೀಗೆ ಹೇಳಲು ಕಪಟಯೋಧಿಗಳಾದ ಆ ಎಲ್ಲ ರಾಕ್ಷಸರೂ ಅದ್ಭುತವಾದ ರಾವಣಿಯ ಆ ಕಾರ್ಯದಿಂದ ಹರ್ಷಿತರೂ ವಿಸ್ಮಿತರೂ ಆದರು. ಮೇಘಸದೃಶರಾಗಿದ್ದ ಅವರೆಲ್ಲರೂ ಏಕಕಾಲದಲ್ಲಿ ಗಟ್ಟಿಯಾಗಿ ಸಿಂಹನಾದಗಳನ್ನೂ ಮಾಡಿದರು. ಶ್ರೀರಾಮನು ಹತನಾದನೆಂದೇ ಭಾವಿಸಿ ರಾವಣಕುಮಾರನನ್ನು ಅಭಿನಂದಿಸಿದರು.

ಇಂದ್ರಜಿತುವು ಕೂಡ ಸ್ವಲ್ಪವಾದರೂ ಅಲುಗಾಡದೇ ಉಚ್ಛ್ವಾಸ-ನಿಃಶ್ವಾಸರಹಿತರಾಗಿ ಭೂಮಿಯ ಮೇಲೆ ಬಿದ್ದಿದ್ದ ರಾಮ-ಲಕ್ಷ್ಮಣರನ್ನು ನೋಡಿ ಇಬ್ಬರೂ ಮರಣಹೊಂದಿದರೆಂದೇ ಭಾವಿಸಿದನು.

ಯುದ್ಧದಲ್ಲಿ ಜಯಶೀಲನಾದ ಇಂದ್ರಜಿತುವು ಹರ್ಷೋತ್ಸಾಹಗಳಿಂದ ಕೂಡಿದವನಾಗಿ ಅನುಯಾಯಿಗಳಾದ ಎಲ್ಲ ರಾಕ್ಷಸರನ್ನೂ ಹರ್ಷಗೊಳಿಸುತ್ತಾ ಲಂಕಾಪಟ್ಟಣವನ್ನು ಪ್ರವೇಶಿಸಿದನು.

ರಾಮ-ಲಕ್ಷ್ಮಣರ ಶರೀರದಲ್ಲಿಯೂ ಮತ್ತು ಅಂಗೋಪಾಂಗಗಳಲ್ಲಿಯೂ ಸ್ವಲ್ಪವಾದರೂ ಎಡೆಯೇ ಇಲ್ಲದಂತೆ ಬಾಣಗಳು ಚುಚ್ಚಿಕೊಂಡಿರುವುದನ್ನು ನೋಡಿ ಸುಗ್ರೀವನಿಗೆ ಭಯವುಂಟಾಯಿತು. ಬಹಳವಾಗಿ ಭಯಗೊಂಡಿದ್ದ, ಅತ್ಯಂತದೀನನಾಗಿದ್ದ, ಶೋಕದಿಂದ ವ್ಯಾಕುಲವಾದ ಕಣ್ಣುಗಳನ್ನು ಹೊಂದಿದ್ದ, ಕಣ್ಣೀರಿನಿಂದ ತೋಯ್ದ ಮುಖವುಳ್ಳವನಾಗಿದ್ದ, ವಾನರೇಂದ್ರನಾದ ಸುಗ್ರೀವನಿಗೆ ವಿಭೀಷಣನು ಹೇಳಿದನು :

ಅಲಂ ತ್ರಾಸೇನ ಸುಗ್ರೀವ ಬಾಷ್ಪವೇಗೋ ನಿಗೃಹ್ಯತಾಮ್ ।
ಏವಂಪ್ರಾಯಾಣಿ ಯುದ್ಧಾನಿ ವಿಜಯೋ ನಾಸ್ತಿ ನೈಷ್ಠಿಕಃ ॥೩೧॥

ಸಶೇಷಭಾಗ್ಯತಾಸ್ಮಾಕಂ ಯದಿ ವೀರ ಭವಿಷ್ಯತಿ ।
ಮೋಹಮೇತೌ ಪ್ರಹಾಸ್ಯೇತೇ ಮಹಾತ್ಮಾನೌ ಮಹಾಬಲೌ ॥೩೨॥

ಪರ್ಯವಸ್ಥಾಪಯಾತ್ಮಾನಮನಾಥಂ ಮಾಂ ಚ ವಾನರ ।
ಸತ್ಯಧರ್ಮಾಭಿರಕ್ತಾನಾಂ ನಾಸ್ತಿ ಮೃತ್ಯುಕೃತಂ ಭಯಮ್ ॥೩೩॥

"ಸುಗ್ರೀವ! ಭಯಪಡಬೇಡ. ಕಣ್ಣೀರಿಡಬೇಡ. ಸಾಮಾನ್ಯವಾಗಿ ಎಲ್ಲ ಯುದ್ಧಗಳೂ ಹೀಗೆಯೇ ನಡೆಯುತ್ತವೆ. ವಿಜಯವೆಂಬುದು ಯಾವಾಗಲೂ ನಿಶ್ಚಿತವಲ್ಲ. ನಮ್ಮಲ್ಲೇನಾದರೂ ಭಾಗ್ಯದ ಉಳಿಕೆಯು ಉಳಿದಿರುವುದಾದರೆ–ಮಹಾಬಲಿಷ್ಠರಾದ ಮಹಾತ್ಮರಾದ ಇವರಿಬ್ಬರೂ ಮೂರ್ಛೆಯಿಂದ ಎಚ್ಚರಗೊಳ್ಳುತ್ತಾರೆ. ಕಪೀಶ್ವರನೇ! ಈ ಸಮಯದಲ್ಲಿ ನೀನೂ ಸಮಾಧಾನವನ್ನು ತಂದುಕೋ. ಅನಾಥನಾಗಿರುವ ನನ್ನನ್ನೂ ಸಮಾಧಾನಗೊಳಿಸು. ಇದು ಮಾತ್ರ ನಿಶ್ಚಯ. ಲೋಕದಲ್ಲಿ ಯಾರು ಸತ್ಯ ಮತ್ತು ಧರ್ಮಗಳಲ್ಲಿಯೇ ನಿಷ್ಠೆಯುಳ್ಳವರಾಗಿರುವರೋ ಅವರಿಗೆ ಮೃತ್ಯುವಿನಿಂದ ಭಯವಿರುವುದಿಲ್ಲ."

ವಿಭೀಷಣನು ಹೀಗೆ ಹೇಳುತ್ತಾ ಒದ್ದೆಯಾಗಿದ್ದ ತನ್ನ ಕೈಯಿಂದ ಸುಗ್ರೀವನ ಎರಡು ಕಣ್ಣುಗಳನ್ನೂ ಒರೆಸಿದನು. ಅನಂತರ ವಿಭೀಷಣನು ಪುನಃ ಕೈಯಲ್ಲಿ ನೀರನ್ನು ತುಂಬಿಕೊಂಡು ಮಂತ್ರವಿದ್ಯೆಯನ್ನು ಜಪಿಸಿ ಮಂತ್ರಪೂತವಾದ ಆ ನೀರಿನಿಂದ ಸುಗ್ರೀವನ ಕಣ್ಣುಗಳನ್ನು ತೊಳೆದು ಯಾವ ವಿಧವಾದ ಗಾಬರಿಗೂ ಅವಕಾಶವಿಲ್ಲದಂತಹ ಸಮಯೋಚಿತವಾದ ಮಾತನ್ನು ಹೇಳಿದನು :

ನ ಕಾಲಃ ಕಪಿರಾಜೇನ್ದ್ರ ವೈಕ್ಲವ್ಯಮವಲಮ್ಬಿತುಮ್ ।
ಅತಿಸ್ನೇಹೋಽಪ್ಯಕಾಲೇಽಸ್ಮಿನ್ಮರಣಾಯೋಪಕಲ್ಪತೇ ॥೩೭॥

"ಕಪಿರಾಜೇಂದ್ರನೇ! ಗಾಬರಿಗೊಳ್ಳಲು ಇದು ಸಮಯವಲ್ಲ. ಅಸಮಯದಲ್ಲಿ ಅತಿಸ್ನೇಹವನ್ನು ಪ್ರದರ್ಶಿಸುವುದು ಕೂಡ ಮರಣಕ್ಕೆ ಕಾರಣವಾಗುತ್ತದೆ.

ತಸ್ಮಾದುತ್ಸೃಜ್ಯ ವೈಕ್ಲವ್ಯಂ ಸರ್ವಕಾರ್ಯವಿನಾಶನಮ್ ।
ಹಿತಂ ರಾಮಪುರೋಗಾಣಾಂ ಸೈನ್ಯಾನಾಮನುಚಿನ್ತ್ಯತಾಮ್ ॥೩೮॥

ಆದುದರಿಂದ ಸರ್ವಕಾರ್ಯವಿನಾಶಕವಾದ ಈ ವ್ಯಥೆಯನ್ನು ಪರಿತ್ಯಜಿಸಿ ಶ್ರೀರಾಮಪುರಸ್ಸರರಾದ ಸೈನಿಕರ ಹಿತದ ವಿಷಯವಾಗಿ ಯೋಚಿಸು.

ಅಥ ವಾ ರಕ್ಷ್ಯತಾಂ ರಾಮೋ ಯಾವತ್ಸಂಜ್ಞಾವಿಪರ್ಯಯಃ ।
ಲಬ್ಧಸಂಜ್ಞೌ ಹಿ ಕಾಕುತ್ಸ್ಥೌ ಭಯಂ ನೋ ವ್ಯಪನೇಷ್ಯತಃ ॥೩೯॥

ಅಥವಾ ರಾಮ-ಲಕ್ಷ್ಮಣರು ಮೂರ್ಛೆಯಿಂದ ಎಚ್ಚರಗೊಳ್ಳುವವರೆಗೂ ಇವರನ್ನು ರಕ್ಷಿಸುತ್ತಿರು. ರಾಮ-ಲಕ್ಷ್ಮಣರು ಎಚ್ಚರಗೊಂಡನಂತರ ಅವರು ನಮ್ಮ ಭಯವನ್ನು ದೂರಗೊಳಿಸುತ್ತಾರೆ.

ನೈತತ್ಕಿಂಚನ ರಾಮಸ್ಯ
ನ ಚ ರಾಮೋ ಮುಮೂರ್ಷತಿ ।
ನ ಹ್ಯೇನಂ ಹಾಸ್ಯತೇ ಲಕ್ಷ್ಮೀರ್ದುರ್ಲಭಾ
ಯಾ ಗತಾಯುಷಾಮ್ ॥೪೦॥

ಈ ಶಸ್ತ್ರಬಂಧನವು ಶ್ರೀರಾಮನಿಗೆ ಯಾವ ರೀತಿಯಲ್ಲಿಯೂ ಅಪಾಯಕಾರಿಯಲ್ಲ. ಶ್ರೀರಾಮನು ಖಂಡಿತವಾಗಿಯೂ ಮರಣಹೊಂದತಕ್ಕವನಲ್ಲ.

ಆಯುಷ್ಯವು ಮುಗಿದುಹೋದವರಿಗೆ ಇರಲು ಸಾಧ್ಯವಿಲ್ಲದ ಕಾಂತಿಯು ಇವನನ್ನು ಬಿಟ್ಟುಹೋಗಿಲ್ಲ.

ತಸ್ಮಾದಾಶ್ವಾಸಯಾತ್ಮಾನಂ ಬಲಂ ಚಾಶ್ವಾಸಯ ಸ್ವಕಮ್ ।
ಯಾವತ್ಸೈನ್ಯಾನಿ ಸರ್ವಾಣಿ ಪುನಃ ಸಂಸ್ಥಾಪಯಾಮ್ಯಹಮ್ ॥೪೧॥

ಆದುದರಿಂದ ಸುಗ್ರೀವ! ನೀನು ಮೊದಲು ಸಮಾಧಾನವನ್ನು ತಂದುಕೋ ; ಅನಂತರ ನಿನ್ನ ಸೈನಿಕರಿಗೂ ಸಮಾಧಾನ ಹೇಳು. ಅಲ್ಲಿಯ ವರೆಗೆ ನಾನೂ ಕೂಡ ಗಾಬರಿಗೊಂಡಿರುವ ಸೈನ್ಯವನ್ನು ಹುರಿದುಂಬಿಸಿ ಪುನಃ ವ್ಯವಸ್ಥೆಗೊಳಿಸುತ್ತೇನೆ.

ಅದೋ ನೋಡು ; ಆ ವಾನರರು ಭಯಗೊಂಡವರಾಗಿ ಕಣ್ಣುಗಳನ್ನು ಹಿಗ್ಗಿಸಿಕೊಂಡು ಮಿಕಿ-ಮಿಕಿ ನೋಡುತ್ತಿದ್ದಾರೆ. ಒಬ್ಬರು ಮತ್ತೊಬ್ಬರ ಕಿವಿ ಗಳಲ್ಲಿ ಪಿಸುಗುಟ್ಟುತ್ತಿದ್ದಾರೆ.

ಆದುದರಿಂದ ನಾನು ಈಗಲೇ ಹೋಗಿ ಅವರನ್ನು ಸಮಾಧಾನ ಗೊಳಿಸುತ್ತೇನೆ. ಹರ್ಷವನ್ನುಂಟುಮಾಡುತ್ತಾ ಸೇನೆಯ ಮಧ್ಯದಲ್ಲಿ ಹೋಗುವ ನನ್ನನ್ನು ನೋಡಿ ವಾನರರು–ಉಪಭೋಗಿಸಿದ ಪುಷ್ಪಹಾರವನ್ನು ಪರಿತ್ಯಜಿಸುವಂತೆ–ಉಂಟಾಗಿರುವ ಭಯವನ್ನು ಪರಿತ್ಯಜಿಸಲಿ."

ರಾಕ್ಷಸೇಂದ್ರನಾದ ವಿಭೀಷಣನು ಹೀಗೆ ಸುಗ್ರೀವನನ್ನು ಸಮಾಧಾನ ಗೊಳಿಸಿ ಭಯಗೊಂಡು ಓಡಿಹೋಗುತ್ತಿದ್ದ ವಾನರಸೈನ್ಯವನ್ನು ಸಮಾಧಾನ ಗೊಳಿಸಿದನು.

ಇತ್ತಲಾಗಿ ಮಹಾಮಾಯಾವಿಯಾದ ಇಂದ್ರಜಿತುವು ಸಮಸ್ತರಾಕ್ಷಸ ಸೈನಿಕರಿಂದಲೂ ಸಮಾವೃತನಾಗಿ ಲಂಕೆಗೆ ಹೋದನು. ತಂದೆಯಾದ ರಾವಣನ ಬಳಿಗೆ ಹೋಗಿ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಕೈಮುಗಿದು ಕೊಂಡು ರಾವಣನಿಗೆ ಆ ಸಮಯದಲ್ಲಿ ಅತ್ಯಂತಪ್ರಿಯವಾಗಿದ್ದ '**ನಿಹತೌ ರಾಮಲಕ್ಷ್ಮಣೌ**' 'ರಾಮ-ಲಕ್ಷ್ಮಣರು ಹತರಾದರು'–ಎಂಬ ವಾರ್ತೆಯನ್ನು ಅರುಹಿದನು. ತನ್ನ ಶತ್ರುಗಳು ಹತರಾದರೆಂಬ ವಾರ್ತೆಯನ್ನು ರಾಕ್ಷಸರ ಮಧ್ಯದಲ್ಲಿ ಕೇಳಿದೊಡನೆಯೇ ರಾವಣನು ಇಂದ್ರಜಿತುವಿನ ಬಳಿಗೆ ಜಿಗಿದು ಅವನನ್ನು ಬಾಚಿ ತಬ್ಬಿಕೊಂಡು ಪ್ರಸನ್ನಚಿತ್ತನಾಗಿ ಮಗನ ನೆತ್ತಿಯನ್ನು

ಆಘ್ರಾಣಿಸಿ ಅವರಿಬ್ಬರೂ ಹೇಗೆ ಮರಣಹೊಂದಿದರೆಂದು ಪ್ರಶ್ನಿಸಿದನು. ಹಾಗೆ ಪ್ರಶ್ನಿಸಿದ ತಂದೆಗೆ ರಾವಣಿಯು ರಾಮ-ಲಕ್ಷ್ಮಣರು ಶರಬಂಧದಿಂದ ನಿಶ್ಚೇಷ್ಟರಾಗಿ ಮತ್ತು ಕಾಂತಿಹೀನರಾಗಿ ಬಿದ್ದ ವಿಷಯವನ್ನು ಯಥಾವತ್ತಾಗಿ ವಿವರಿಸಿ ಹೇಳಿದನು.

ಮಹಾರಥನಾದ ಇಂದ್ರಜಿತುವಿನ ಮಾತನ್ನು ಕೇಳಿ ರಾವಣನ ಅಂತ ರಾತ್ಮವು ಅರಳಿತು. ಹರ್ಷಾಧಿಕ್ಯದಿಂದ ಅವನು ದಶರಥನ ಪುತ್ರನಾದ ಶ್ರೀರಾಮನಿಂದ ಉಂಟಾಗಿದ್ದ ಪರಿತಾಪವನ್ನು ಸಂಪೂರ್ಣವಾಗಿ ತೊರೆದನು. ಪ್ರಸನ್ನತಾಪೂರ್ವಕವಾದ ಮಾತಿನಿಂದ ಮಗನನ್ನು ಅಭಿನಂದಿಸಿದನು.

೪೬ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೪೭ನೆಯ ಸರ್ಗ

ವಾನರರಿಂದ ರಾಮ-ಲಕ್ಷ್ಮಣರ ರಕ್ಷಣೆ : ರಾವಣನ ಆಜ್ಞೆಯಂತೆ ರಾಕ್ಷಸಿಯರು ರಣಭೂಮಿಯಲ್ಲಿ ಮೂರ್ಛಿತರಾಗಿದ್ದ ರಾಮ-ಲಕ್ಷ್ಮಣರನ್ನು ಸೀತೆಗೆ ತೋರಿಸಿದುದು : ಸೀತೆಯ ವಿಲಾಪ

ಪ್ರತಿಪ್ರವಿಷ್ಟೇ ಲಙ್ಕಾಂ ತು ಕೃತಾರ್ಥೇ ರಾವಣಾತ್ಮಜೇ ।
ರಾಘವಂ ಪರಿವಾರ್ಯಾರ್ತಾ ರರಕ್ಷುರ್ವಾನರರ್ಷಭಾಃ ॥೧॥

ಕೃತಾರ್ಥನಾದ ರಾವಣಿಯು ಲಂಕೆಯನ್ನು ಪ್ರವೇಶಿಸಿದನಂತರ ವಾನ ರರು ಆರ್ತರಾಗಿ ಶ್ರೀರಾಮನ ಸುತ್ತಲೂ ಕುಳಿತು ಅವನನ್ನು ರಕ್ಷಿಸುತ್ತಿದ್ದರು.

ಹನುಮಂತ, ಅಂಗದ, ನೀಲ, ಸುಷೇಣ, ಕುಮುದ, ನಲ, ಗಜ, ಗವಾಕ್ಷ, ಗವಯ, ಶರಭ, ಗಂಧಮಾದನ, ಜಾಂಬವಂತ, ಋಷಭ, ಸ್ಕಂಧ, ರಂಭ, ಶತಬಲಿ, ಪೃಥು–ಇವರೆಲ್ಲರೂ ಸೇನಾವ್ಯೂಹವನ್ನು ರಚಿಸಿಕೊಂಡು ಕೈಗಳಲ್ಲಿ ವೃಕ್ಷಗಳನ್ನು ಹಿಡಿದುಕೊಂಡು ಪ್ರಯತ್ನಪೂರ್ವಕವಾಗಿ ಪಹರೇ ಕಾಯುತ್ತಿದ್ದರು. ವಾನರರು ಎಲ್ಲ ದಿಕ್ಕುಗಳಲ್ಲಿಯೂ ನೋಡುತ್ತಿದ್ದರು. ಅಡ್ಡಡ್ಡವಾಗಿ, ಉದ್ದುದ್ದವಾಗಿ, ಮೇಲೆ-ಕೆಳಗೆ, ಅಕ್ಕ-ಪಕ್ಕಗಳಲ್ಲಿ ಎಲ್ಲ ಕಡೆ ಗಳಲ್ಲಿಯೂ ಎವೆಯಿಕ್ಕದೇ ನೋಡುತ್ತಾ ಪಹರೇ ಕಾಯುತ್ತಿದ್ದು ಒಂದು ಹುಲ್ಲುಗರಿಕೆಯು ಅಲುಗಾಡಿದರೂ ರಾಕ್ಷಸರೇ ಬಂದರೆಂದು ಭಾವಿಸುತ್ತಿದ್ದರು.

ರಾವಣನು ರಾಮ-ಲಕ್ಷ್ಮಣರ ಮರಣವಾರ್ತೆಯನ್ನು ಕೇಳಿ ಹೆಚ್ಚು ಸಂತೋಷಹೊಂದಿ ಇಂದ್ರಜಿತುವನ್ನು ಆದರ-ಸತ್ಕಾರಗಳೊಡನೆ ಬೀಳ್ಕೊಟ್ಟು ಸೀತಾದೇವಿಯನ್ನು ರಕ್ಷಿಸುತ್ತಿದ್ದ ರಾಕ್ಷಸಿಯರನ್ನು ಕರೆಸಿದನು. ರಾವಣನ ಆಜ್ಞೆಯಂತೆ ತ್ರಿಜಟೆಯೇ ಮೊದಲಾದ ರಾಕ್ಷಸಿಯರು ರಾವಣನ ಬಳಿಗೆ ಬಂದರು. ಹೃಷ್ಟನಾಗಿದ್ದ ರಾಕ್ಷಸಾಧಿಪತಿಯು ರಾಕ್ಷಸಿಯರಿಗೆ ಹೇಳಿದನು :

ಹತಾವಿನ್ದ್ರಜಿತಾಖ್ಯಾತ ವೈದೇಹ್ಯಾ ರಾಮಲಕ್ಷ್ಮಣೌ
ಪುಷ್ಪಕಂ ಚ ಸಮಾರೋಪ್ಯ ದರ್ಶಯಧ್ವಂ ರಣೇ ಹತೌ ॥೭॥

"ನೀವೆಲ್ಲರೂ ಸೀತೆಯ ಬಳಿಗೆ ಹೋಗಿ ಇಂದ್ರಜಿತುವಿನಿಂದ ರಾಮ-ಲಕ್ಷ್ಮಣರು ಹತರಾದರೆಂಬ ವಾರ್ತೆಯನ್ನು ಅವಳಿಗೆ ಹೇಳಿರಿ. ಅನಂತರ ಅವಳನ್ನು ಪುಷ್ಪಕವಿಮಾನದಲ್ಲಿ ಹತ್ತಿಸಿಕೊಂಡು ಯುದ್ಧಭೂಮಿಗೆ ಹೋಗಿ ಅಲ್ಲಿ ಮೃತರಾಗಿ ಬಿದ್ದಿರುವ ಇಬ್ಬರನ್ನೂ ತೋರಿಸಿರಿ.

ಯಾವನ ಆಶ್ರಯದ ನಿರೀಕ್ಷೆಯಿಂದ ಅವಳು ಗರ್ವಿಷ್ಠಳಾಗಿ ನನ್ನನ್ನು ವರಿಸಲು ಒಪ್ಪುತ್ತಿರಲಿಲ್ಲವೋ–ಅವಳ ಆ ಪತಿಯೇ ಈಗ ತನ್ನ ತಮ್ಮನೊಡನೆ ಮೃತನಾಗಿ ರಣಭೂಮಿಯಲ್ಲಿ ಬಿದ್ದಿದ್ದಾನೆ. ಅವಳ ಅಪೇಕ್ಷೆಯಂತೂ ಈಡೇರಲಿಲ್ಲ. ಈಗಲಾದರೂ ಅವಳು ಯಾವ ಶಂಕೆಯಾಗಲೀ ಭಯವಾಗಲೀ ಇಲ್ಲದೇ ಸರ್ವಾಭರಣಭೂಷಿತಳಾಗಿ ನನ್ನನ್ನು ಸೇವಿಸುವಳು. ಇಂದು ರಣಾಂಗಣದಲ್ಲಿ ಕಾಲವಶರಾಗಿ ಬಿದ್ದಿರುವ ರಾಮ-ಲಕ್ಷ್ಮಣರನ್ನು ನೋಡಿದನಂತರ ಅವಳು ರಾಮನಲ್ಲಿಯೇ ನೆಟ್ಟಿದ್ದ ತನ್ನ ಮನಸ್ಸನ್ನು ಹಿಂತೆಗೆದುಕೊಳ್ಳುವಳು. ಭಗ್ನ ಮನೋರಥಳಾಗಿ ಬೇರೇ ಗತಿಯನ್ನೇ ಕಾಣದೇ ವಿಶಾಲಾಕ್ಷಿಯಾದ ಅವಳು ಅನಿವಾರ್ಯವಾಗಿ ತಾನಾಗಿಯೇ ನನ್ನ ಬಳಿಗೆ ಬರುವಳು."

ದುರಾತ್ಮನಾದ ರಾವಣನ ಆ ಮಾತನ್ನು ಕೇಳಿ ರಾಕ್ಷಸಿಯರು ಹಾಗೆಯೇ ಆಗಲೆಂದು ಹೇಳಿ ಪುಷ್ಪಕವಿಮಾನದ ಬಳಿಗೆ ಹೋದರು. ರಾವಣನ ಆಜ್ಞೆಯಂತೆ ಪುಷ್ಪಕವಿಮಾನವನ್ನು ತೆಗೆಸಿಕೊಂಡು ಅಶೋಕವನದಲ್ಲಿದ್ದ ಸೀತಾದೇವಿಯ ಬಳಿಗೆ ಬಂದರು. ಪತಿಯ ವಿರಹಶೋಕದಿಂದ ವ್ಯಾಕುಲಳಾಗಿದ್ದ ಸೀತಾದೇವಿಯನ್ನು ರಾಕ್ಷಸಿಯರು ಪುಷ್ಪಕವಿಮಾನಕ್ಕೆ ಹತ್ತಿಸಿಕೊಂಡರು.

ರಾಕ್ಷಸಿಯರು ತ್ರಿಜಟೆಯೊಡನೆ ಸೀತಾದೇವಿಯನ್ನೂ ಪುಷ್ಪಕವಿಮಾನದಲ್ಲಿ ಕುಳ್ಳಿರಿಸಿಕೊಂಡು ಅವಳಿಗೆ ಯುದ್ಧಭೂಮಿಯಲ್ಲಿ ಮಲಗಿದ್ದ ರಾಮ-ಲಕ್ಷ್ಮಣ ರನ್ನು ತೋರಿಸಲು ಹೊರಟರು.

ಆನಂದತುಂದಿಲನಾಗಿದ್ದ ರಾಕ್ಷಸರಾಜನು ಪತಾಕೆ-ಧ್ವಜಗಳಿಂದ ಸಮಲಂಕೃತವಾದ ಲಂಕಾಪಟ್ಟಣದ ಮೇಲ್ಭಾಗದಲ್ಲಿ ಪುಷ್ಪಕವಿಮಾನವು ಸಂಚರಿಸುವಂತೆ ವ್ಯವಸ್ಥೆಮಾಡಿದ್ದನಲ್ಲದೇ ರಾಮ-ಲಕ್ಷ್ಮಣರಿಬ್ಬರೂ ಇಂದ್ರ ಜಿತುವಿನಿಂದ ಹತರಾದರೆಂದು ಲಂಕೆಯಲ್ಲಿ ಸರ್ವತ್ರ ಡಂಗುರಹೊಡೆಸಿದನು.



ತ್ರಿಜಟೆಯೊಡನೆ ಪುಷ್ಪಕವಿಮಾನದಲ್ಲಿ ಕುಳಿತು ರಣಭೂಮಿಗೆ ಹೋದ ಸೀತಾದೇವಿಯು ವಾನರಸೈನ್ಯವೆಲ್ಲವೂ ತಂಡ-ತಂಡವಾಗಿ ಸತ್ತುಬಿದ್ದಿರುವು ದನ್ನು ನೋಡಿದಳು. ಮಾಂಸಭಕ್ಷಕರಾದ ರಾಕ್ಷಸರು ಸಂತುಷ್ಟರಾಗಿರುವು ದನ್ನೂ, ರಾಮ-ಲಕ್ಷ್ಮಣರ ಪಕ್ಕದಲ್ಲಿ ವಾನರರು ದುಃಖಪೀಡಿತರಾಗಿ ಕುಳಿತಿರುವುದನ್ನೂ ನೋಡಿದಳು. ಬಳಿಕ ಸೀತಾದೇವಿಯು ಬಾಣಗಳಿಂದ

ಪೀಡಿತರಾಗಿ ಮೂರ್ಛಿತರಾಗಿ ಬಾಣಗಳ ಹಾಸಿಗೆಯಲ್ಲಿ ಮಲಗಿರುವ ರಾಮ-ಲಕ್ಷ್ಮಣರನ್ನೂ ನೋಡಿದಳು. ಆ ವೀರರಿಬ್ಬರ ಕವಚಗಳೂ ಹರಿದು ಹೋಗಿದ್ದುವು. ಧನುರ್ಬಾಣಗಳೂ ದೂರದಲ್ಲಿ ಬಿದ್ದಿದ್ದುವು. ಅವರ ಅಂಗಾಂಗಗಳೆಲ್ಲವೂ ಬಾಣಗಳಿಂದ ಛಿನ್ನ-ಭಿನ್ನವಾಗಿದ್ದುವು. ಬಾಣಗಳಿಂದಲೇ ಮಾಡಿದ ಸ್ತಂಭಗಳೋಪಾದಿಯಲ್ಲಿ ಇಬ್ಬರೂ ಭೂಮಿಯಲ್ಲಿ ಮಲಗಿದ್ದರು.

ಪುರುಷಶ್ರೇಷ್ಠರಾದ, ಮಹಾವೀರರಾದ, ಪುಂಡರೀಕಾಕ್ಷರಾದ, ಯಜ್ಞೇಶ್ವರನ ಮಕ್ಕಳಾದ ಶಾಖ ಮತ್ತು ವಿಶಾಖರಂತೆಯೇ ಇದ್ದ, ನರಶ್ರೇಷ್ಠರಾದ ರಾಮ-ಲಕ್ಷ್ಮಣರು ಬಾಣದ ಹಾಸಿಗೆಯಲ್ಲಿ ಮಲಗಿದ್ದುದನ್ನು ಕಂಡು ದುಃಖ ಪೀಡಿತಳಾದ ಸೀತಾದೇವಿಯು ಕರುಣಾಜನಕವಾದ ರೀತಿಯಲ್ಲಿ ಗಟ್ಟಿಯಾಗಿ ರೋದಿಸತೊಡಗಿದಳು.

ನಿರ್ದುಷ್ಟವಾದ ಅಂಗಾಂಗಗಳಿಂದ ಕೂಡಿದ್ದ ಕಪ್ಪಾದ ಕಣ್ಣುಗಳುಳ್ಳವಳಾದ ಸೀತೆಯು ತನ್ನ ಪತಿಯೂ ಮತ್ತು ಲಕ್ಷ್ಮಣನೂ ಧೂಳಿನಲ್ಲಿ ಬಿದ್ದು ಹೊರಳಾಡುತ್ತಿರುವುದನ್ನು ನೋಡಿ ವಿಲಪಿಸಿದಳು. ದೇವಕುಮಾರ ರಂತೆಯೇ ಇದ್ದ ರಾಮ-ಲಕ್ಷ್ಮಣರನ್ನು ನೋಡಿ ಅವಳ ಕಣ್ಣುಗಳಲ್ಲಿ ನೀರು ಸುರಿಯುತ್ತಿದ್ದಿತು. ಹೃದಯವು ಶೋಕದ ಆಘಾತದಿಂದ ಪೀಡಿತವಾಗಿದ್ದಿತು. ಅವರ ನಿಧನವನ್ನೇ ಕುರಿತು ತರ್ಕಿಸುತ್ತಾ ಪರಮದುಃಖಿತೆಯಾಗಿದ್ದ ಸೀತೆಯು ವಿಲಪಿಸತೊಡಗಿದಳು.

ನಲವತ್ತೇಳನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೪೮ನೆಯ ಸರ್ಗ

ಸೀತೆಯ ವಿಲಾಪ : ರಾಮ-ಲಕ್ಷ್ಮಣರು ಜೀವಿಸಿರುವರೆಂದು ತ್ರಿಜಟೆಯು ಸೀತೆಯನ್ನು ಸಂತೈಸುತ್ತಾ ಅಶೋಕವನಕ್ಕೆ ಪುನಃ ಕರೆತಂದುದು

ಭರ್ತಾರಂ ನಿಹತಂ ದೃಷ್ಟ್ವಾ ಲಕ್ಷ್ಮಣಂ ಚ ಮಹಾಬಲಮ್ ।
ವಿಲಲಾಪ ಭೃಶಂ ಸೀತಾ ಕರುಣಂ ಶೋಕಕರ್ಶಿತಾ ॥೧॥

ತನ್ನ ಪತಿಯೂ ಮತ್ತು ಮಹಾಬಲನಾದ ಲಕ್ಷ್ಮಣನೂ ಹತರಾಗಿ ಬಿದ್ದಿರುವುದನ್ನು ಕಂಡು ಶೋಕಪೀಡಿತಳಾದ ಸೀತಾದೇವಿಯು ಕರುಣಾಜನಕವಾದ ರೀತಿಯಲ್ಲಿ ಬಹಳವಾಗಿ ರೋದನಮಾಡಿದಳು.

ಊಚುರ್ಲಕ್ಷಣಿನೋ ಯೇ ಮಾಂ ಪುತ್ರಿಣ್ಯವಿಧವೇತಿ ಚ ।
ತೇಽದ್ಯ ಸರ್ವೇ ಹತೇ ರಾಮೇ ಜ್ಞಾನಿನೋಽನೃತವಾದಿನಃ ॥೨॥

"ಸಾಮುದ್ರಿಕ ಲಕ್ಷಣಗಳನ್ನು ತಿಳಿದ ವಿದ್ವಾಂಸರು ನನ್ನನ್ನು ಪುತ್ರವತಿಯೆಂದೂ–ದೀರ್ಘಸುಮಂಗಲಿಯೆಂದೂ ಹೇಳಿದ್ದರು. ಶ್ರೀರಾಮನು ಹತನಾಗಿದ್ದರೆ ಅಂತಹ ಶಾಸ್ತ್ರಜ್ಞರೆಲ್ಲರೂ ಅನೃತವಾದಿಗಳೇ ಆಗುವರು.

ಯಜ್ವನೋ ಮಹಿಷೀಂ ಯೇ ಮಾ-
ಮೂಚುಃ ಪತ್ನೀಂ ಚ ಸತ್ರಿಣಃ ।
ತೇಽದ್ಯ ಸರ್ವೇ ಹತೇ ರಾಮೇ
ಜ್ಞಾನಿನೋಽನೃತವಾದಿನಃ ॥೩॥

ವಿದ್ವಾಂಸರು ನನ್ನನ್ನು ಯಜ್ಞಶೀಲನ ಮತ್ತು ಸತ್ರಗಳನ್ನು ಮಾಡುವ ರಾಜಾಧಿರಾಜನ ಪತ್ನಿಯೆಂದೂ ಹೇಳಿದ್ದರು. ಶ್ರೀರಾಮನು ಹತನಾಗಿದ್ದರೆ ಅಂತಹ ವಿದ್ವಾಂಸರೆಲ್ಲರೂ ಅನೃತವಾದಿಗಳೇ ಸರಿ.

ವೀರಪಾರ್ಥಿವಪತ್ನೀ ತ್ವಂ ಯೇ ಧನ್ಯೇತಿ ಚ ಮಾಂ ವಿದುಃ ।
ತೇಽದ್ಯ ಸರ್ವೇ ಹತೇ ರಾಮೇ ಜ್ಞಾನಿನೋಽನೃತವಾದಿನಃ ॥೪॥

ಲಕ್ಷಣಶಾಸ್ತ್ರಜ್ಞರು ನನ್ನಲ್ಲಿರುವ ಲಕ್ಷಣಗಳನ್ನು ನೋಡಿ ನನ್ನನ್ನು ವೀರನಾದ ಪಾರ್ಥಿವನ ಪತ್ನಿಯೆಂದೂ ಧನ್ಯಳೆಂದೂ ಹೇಳಿದ್ದರು. ಶ್ರೀರಾಮನು ಹತನಾಗಿದ್ದರೆ ಅಂತಹ ವಿದ್ವಾಂಸರೂ ಸುಳ್ಳುಹೇಳಿದವರೇ ಆಗುವರು.

ಊಚುಃ ಸಂಶ್ರವಣೇ ಯೇ ಮಾಂ
ದ್ವಿಜಾಃ ಕಾರ್ತಾನ್ತಿಕಾಃ ಶುಭಾಮ್ ।
ತೇಽದ್ಯ ಸರ್ವೇ ಹತೇ ರಾಮೇ
ಜ್ಞಾನಿನೋಽನೃತವಾದಿನಃ ॥೫॥

ಜ್ಯೌತಿಷಶಾಸ್ತ್ರದ ಸಿದ್ಧಾಂತಗಳನ್ನು ತಿಳಿದಿದ್ದ ಬ್ರಾಹ್ಮಣರು ನನ್ನೆದುರಿನಲ್ಲಿಯೇ ನನ್ನನ್ನು ದೀರ್ಘಸುಮಂಗಲಿಯೆಂದು ಹೇಳಿದ್ದರು. ಶ್ರೀರಾಮನು ಹತನಾಗಿದ್ದರೆ ಜ್ಞಾನಿಗಳೆನಿಸಿಕೊಂಡಿರುವ ಆ ಬ್ರಾಹ್ಮಣರೆಲ್ಲರೂ ಅಸತ್ಯವಾದಿಗಳೇ ಆಗುವರು.

ಇಮಾನಿ ಖಲು ಪದ್ಮಾನಿ ಪಾದಯೋರ್ಯೈಃ ಕುಲಸ್ತ್ರಿಯಃ ।
ಅಧಿರಾಜ್ಯೇಽಭಿಷಿಚ್ಯನ್ತೇ ನರೇನ್ದ್ರೈಃ ಪತಿಭಿಃ ಸಹ ॥೧॥

ಕಮಲದ ಚಿಹ್ನೆಗಳು ಕಾಲುಗಳಲ್ಲಿದ್ದರೆ ಅಂತಹ ಕುಲಸ್ತ್ರೀಯರನ್ನು ನರೇಂದ್ರರಾದ ಪತಿಗಳೊಡನೆ ಸಾಮ್ರಾಜ್ಞಿಯ ಪದವಿಯಲ್ಲಿ ಕುಳ್ಳಿರಿಸಿ ಸಾಮಂತರಾಜರು ಅಭಿಷೇಕಮಾಡುತ್ತಾರೆ. ಅಂತಹ ಕಮಲದ ಚಿಹ್ನೆಗಳು ನನ್ನ ಕಾಲುಗಳಲ್ಲಿ ಈಗಲೂ ಸ್ಪಷ್ಟವಾಗಿ ಕಾಣುತ್ತಿವೆ.

ವೈಧವ್ಯಂ ಯಾನ್ತಿ ಯೈರ್ನಾರ್ಯೋ ಲಕ್ಷಣೈರ್ಭಾಗ್ಯದುರ್ಲಭಾಃ ।
ನಾತ್ಮನಸ್ತಾನಿ ಪಶ್ಯಾಮಿ ಪಶ್ಯನ್ತೀ ಹತಲಕ್ಷಣಾ ॥೭॥

ಯಾವ ಲಕ್ಷಣಗಳಿಂದ ಸೌಭಾಗ್ಯವು ಲಭಿಸುವುದಿಲ್ಲವೋ ಮತ್ತು ಸ್ತ್ರೀಯರಿಗೆ ವೈಧವ್ಯವೂ ಉಂಟಾಗುವುದೋ–ಅಂತಹ ಅಶುಭಚಿಹ್ನೆಗಳೊಂದೂ ನನ್ನ ಶರೀರದಲ್ಲಿ ಕಂಡುಬರುತ್ತಿಲ್ಲ. ಆದರೆ ನನ್ನಲ್ಲಿರುವ ಶುಭಲಕ್ಷಣಗಳೆಲ್ಲವೂ ನಿಷ್ಫಲಗಳೇ ಆಗಿವೆ. ಶುಭಲಕ್ಷಣಗಳಿದ್ದೂ ಇಲ್ಲದಂತೆಯೇ ಆಗಿವೆ.*

ಸತ್ಯನಾಮಾನಿ ಪದ್ಮಾನಿ ಸ್ತ್ರೀಣಾಮುಕ್ತಾನಿ ಲಕ್ಷಣೈಃ ।
ತಾನ್ಯದ್ಯ ನಿಹತೇ ರಾಮೇ ವಿತಥಾನಿ ಭವನ್ತಿ ಮೇ ॥೮॥

ಸ್ತ್ರೀಯರಿಗೆ ಕೈ-ಕಾಲುಗಳಲ್ಲಿ ಕಮಲದ ಚಿಹ್ನೆಗಳಿದ್ದರೆ ಅವು ಅಮೋಘ ಫಲದಾಯಕಗಳೆಂದು ಸಾಮುದ್ರಿಕಶಾಸ್ತ್ರವನ್ನು ತಿಳಿದ ವಿದ್ವಾಂಸರು ಹೇಳುತ್ತಾರೆ. ಶ್ರೀರಾಮನೇನಾದರೂ ಹತನಾಗಿರುವುದಾದರೆ–ಈ ಚಿಹ್ನೆಗಳೂ ನನ್ನ ವಿಷಯದಲ್ಲಿ ನಿಷ್ಪ್ರಯೋಜಕಗಳೇ ಆಗುತ್ತವೆ.

ಕೇಶಾಃ ಸೂಕ್ಷ್ಮಾಃ ಸಮಾ ನೀಲಾ ಭ್ರುವೌ ಚಾಸಂಗತೇ ಮಮ ।
ವೃತ್ತೇ ಚಾರೋಮಶೇ ಜಙ್ಘೇ ದನ್ತಾಶ್ಚಾವಿರಲಾ ಮಮ ॥೯॥

---

* ವೈಧವ್ಯವುಂಟಾಗುವ ಚಿಹ್ನೆಗಳನ್ನು ಸಾಮುದ್ರಿಕಶಾಸ್ತ್ರದಲ್ಲಿ ವಿವರಿಸಿ ಹೇಳಿದ್ದಾರೆ : ಪರಸ್ಪರಂ ಸಮಾರೂಢಾಃ ಪಾದಾಙ್ಗುಲ್ಯೋ ಭವನ್ತಿ ಚೇತ್ । ಹತ್ವಾ ಬಹೂನಪಿ ಪತೀನ್ಪರಪ್ರೇಷ್ಯಾ ತಥಾ ಭವೇತ್ ॥ ಯಸ್ಯಾಃ ಕನಿಷ್ಠಿಕಾ ಭೂಮಿಂ ನ ಗಚ್ಛನ್ತ್ಯಾಃ ಪರಿಸ್ಪೃಶೇತ್। ಪತಿದ್ವಯಂ ನಿಹನ್ತ್ಯಾದ್ಯಾ ದ್ವಿತೀಯಾ ಚ ಪತಿತ್ರಯಮ್ ॥ ಏಕರೋಮಾ ರಾಜಪತ್ನೀ ದ್ವಿರೋಮಾತಿಸುಖಾನ್ವಿತಾ। ತ್ರಿರೋಮಾ ರೋಮಕೂಪೇಷು ಭವೇದ್ವೈಧವ್ಯದುಃಖಭಾಕ್ ॥

ನನ್ನ ತಲೆಗೂದಲು ಮೃದುವಾಗಿದೆ. ಸಮವಾಗಿದೆ. ಕಪ್ಪಾಗಿದೆ. ನನ್ನ ಹುಬ್ಬುಗಳು ಒಂದಕ್ಕೊಂದು ಸೇರಿಕೊಂಡಿಲ್ಲ. ನನ್ನ ಮೊಣಕಾಲುಗಳು ದುಂಡಾಗಿಯೂ ಕೂದಲುಗಳಿಲ್ಲದೆಯೂ ಇವೆ. ನನ್ನ ಹಲ್ಲುಗಳು ಮಧ್ಯೆ ಸಂದಿಲ್ಲದೇ ಒತ್ತಾಗಿ ಸೇರಿಕೊಂಡಿವೆ.*

ಶಙ್ಖೇ ನೇತ್ರೇ ಕರೌ ಪಾದೌ ಗುಲ್ಫಾವೂರೂ ಸಮೌ ಚಿತೌ ।
ಅನುವೃತ್ತನಖಾಃ ಸ್ನಿಗ್ಧಾಃ ಸಮಾಶ್ಚಾಙ್ಗುಲಯೋ ಮಮ ॥೧೦॥

ಕಣ್ಣುಗಳ ಸಮೀಪದಲ್ಲಿರುವ ಎರಡು ಕಡೆಯ ಲಲಾಟಪ್ರದೇಶಗಳು, ಎರಡು ಕಣ್ಣುಗಳು, ಎರಡು ಕೈಗಳು, ಎರಡು ಪಾದಗಳು, ಕಾಲುಗಳ ಹರಡು ಗಳು, ತೊಡೆಗಳು ನ್ಯೂನಾತಿರೇಕಗಳಿಲ್ಲದೇ ಸಮವಾಗಿವೆ. ವಿಶಾಲವಾಗಿವೆ ಮತ್ತು ಪುಷ್ಟವಾಗಿವೆ. ಎರಡು ಕೈಗಳಲ್ಲಿರುವ ಬೆರಳುಗಳು ಮೃದು ವಾಗಿಯೂ ಸಮವಾಗಿಯೂ ಇವೆ. ಬೆರಳುಗಳಲ್ಲಿರುವ ಉಗುರುಗಳು ದುಂಡಾಗಿಯೂ ನುಣುಪಾಗಿಯೂ ಇವೆ.[1]

ಸ್ತನೌ ಚಾವಿರಲೌ ಪೀನೌ ಮಮೇಮೌ ಮಗ್ನಚೂಚುಕೌ ।
ಮಗ್ನಾ ಚೋತ್ಸಙ್ಗಿನೀ ನಾಭಿಃ ಪಾರ್ಶ್ವೋರಸ್ಕಾಶ್ಚ ಮೇ ಚಿತಾಃ ॥೧೧॥

ನನ್ನ ಎರಡು ಸ್ತನಗಳೂ ಪರಸ್ಪರವಾಗಿ ಸೇರಿಕೊಂಡಿವೆ. ಮತ್ತು ಸ್ಥೂಲವಾಗಿವೆ. ಸ್ತನಗಳ ತೊಟ್ಟುಗಳು ಕೆಳಮುಖವಾಗಿವೆ. ನನ್ನ ನಾಭಿಯು ಆಳವಾಗಿಯೂ ನಾಭಿಯ ಸುತ್ತಲಿನ ಪ್ರದೇಶಗಳು ಎತ್ತರವಾಗಿಯೂ ಇವೆ. ನನ್ನ ಎದೆ ಮತ್ತು ಪಾರ್ಶ್ವಭಾಗಗಳು ಪುಷ್ಟವಾಗಿವೆ.

ಮಮ ವರ್ಣೋ ಮಣಿನಿಭೋ ಮೃದೂನ್ಯಙ್ಗರುಹಾಣಿ ಚ ।
ಪ್ರತಿಷ್ಠಿತಾಂ ದ್ವಾದಶಭಿರ್ಮಾಮೂಚುಃ ಶುಭಲಕ್ಷಣಾಮ್ ॥೧೨॥

ನನ್ನ ಮೈಬಣ್ಣವು ಸಾಣೆಹಿಡಿದ ರತ್ನದಂತೆ ಉಜ್ಜ್ವಲವಾಗಿದೆ. ನನ್ನ

ಸ್ತ್ರೀಯರಿಗೆ ಮೊಣಕಾಲುಗಳ ಪ್ರದೇಶವು ರೋಮರಹಿತವಾಗಿರಬೇಕೆಂದೂ ದುಂಡಾಗಿರಬೇಕೆಂದೂ ಸ್ಕಾಂದಪುರಾಣದಲ್ಲಿ ಹೇಳಿದೆ. ರೋಮಹೀನೇ ಶುಭೇ ಸ್ನಿಗ್ಧೇ ಯಜ್ಜಙ್ಘೇ ಕ್ರಮವರ್ತುಲೇ । ಸಾ ರಾಜಪತ್ನೀ ಭವತಿ ವಿಶಿರೇ ಸುಮನೋಹರೇ ॥

1 ಕಾಲುಗುರುಗಳು ಎತ್ತರವಾಗಿರಬೇಕೆಂದು ಸ್ಕಾಂದದಲ್ಲಿ ಹೇಳಿದ್ದಾರೆ. ಸ್ನಿಗ್ಧಾಃ ಸಮುನ್ನತಾಸ್ತತ್ರ ವೃತ್ತಾಃ ಪಾದನಖಾಃ ಶುಭಾಃ ॥

ಶರೀರದಲ್ಲಿನ ರೋಮಗಳು ಮೃದುವಾಗಿವೆ. ನಾನು ನಡೆಯುವಾಗ ಕಾಲಿನ ಹತ್ತು ಬೆರಳುಗಳೂ ಮತ್ತು ಎರಡು ಪಾದಗಳ ತಳಭಾಗಗಳೂ ಭೂಮಿಯ ಮೇಲೆ ಚೆನ್ನಾಗಿ ಊರಿನಿಲ್ಲುತ್ತವೆ. ಈ ಕಾರಣದಿಂದಲೇ ಸಾಮುದ್ರಿಕರು ನನ್ನನ್ನು ಶುಭಲಕ್ಷಣಗಳಿರುವವಳೆಂದು ಹೇಳುತ್ತಾರೆ.

ಸಮಗ್ರಯವಮಚ್ಛಿದ್ರಂ ಪಾಣಿಪಾದಂ ಚ ವರ್ಣವತ್ ।
ಮನ್ದಸ್ಮಿತೇತ್ಯೇವ ಚ ಮಾಂ ಕನ್ಯಾಲಕ್ಷಣಿನೋ ವಿದುಃ ॥೧೩॥

ನನ್ನ ಕೈ-ಕಾಲುಗಳು ಕೆಂಪಾಗಿಯೂ ಉತ್ತಮಕಾಂತಿಯಿಂದ ಯುಕ್ತ ವಾಗಿಯೂ ಇವೆ. ನನ್ನ ಬೆರಳುಗಳ ಗಿಣ್ಣಿನ ರೇಖೆಗಳು ಗೋಧಿಯ ಆಕಾರ ವನ್ನು ಹೊಂದಿವೆ. ಬೆರಳುಗಳನ್ನು ಜೋಡಿಸಿದರೆ ಮಧ್ಯದಲ್ಲಿ ಸಂದುಗಳು ಕಾಣುವುದಿಲ್ಲ. ಇಂತಹ ಲಕ್ಷಣಗಳಿಂದ ಕೂಡಿರುವ ನನ್ನನ್ನು ಕನ್ಯಾಲಕ್ಷಣ ವನ್ನು ತಿಳಿದ ವಿದ್ವಾಂಸರು–'ಮಂದಸ್ಮಿತೆ'–ಎಂದು ನಿರ್ಣಯಿಸಿದ್ದಾರೆ.

ಆಧಿರಾಜ್ಯೇಽಭಿಷೇಕೋ ಮೇ ಬ್ರಾಹ್ಮಣೈಃ ಪತಿನಾ ಸಹ ।
ಕೃತಾನ್ತಕುಶಲೈರುಕ್ತಂ ತತ್ಸರ್ವಂ ವಿತಥೀಕೃತಮ್ ॥೧೪॥

ಜ್ಯೌತಿಷದಲ್ಲಿ ನಿಪುಣರಾದ ಬ್ರಾಹ್ಮಣರು ಪತಿಯೊಡನೆ ನನಗೆ ರಾಜ್ಯಾಭಿಷೇಕವಾಗುವುದೆಂದು ಹೇಳಿದ್ದರು. ಈಗಲಾದರೋ ಅವರ ಮಾತೆಲ್ಲವೂ ಸುಳ್ಳಾಯಿತು.

ಜನಸ್ಥಾನದಲ್ಲಿದ್ದ ರಾಕ್ಷಸರನ್ನೆಲ್ಲಾ ಶೋಧಿಸಿ ಸಂಹರಿಸಿ, ನಾನೆಲ್ಲಿರುವೆ ನೆಂಬುದನ್ನು ತಿಳಿದು, ಅಕ್ಷೋಭ್ಯವಾದ ಸಮುದ್ರವನ್ನೂ ದಾಟಿ ರಾಮ-ಲಕ್ಷ್ಮಣರಿಬ್ಬರೂ ಹಸುವಿನ ಗೊರಸು ಮುಳುಗುವಷ್ಟು ನೀರಿನಲ್ಲಿ ಮುಳುಗಿ ಸತ್ತುಹೋದರು. ರಾಮ-ಲಕ್ಷ್ಮಣರಿಬ್ಬರೂ ವಾರುಣ, ಆಗ್ನೇಯ, ಐಂದ್ರ, ವಾಯವ್ಯ, ಬ್ರಹ್ಮಶಿರ–ಇವೇ ಮುಂತಾದ ಅಸ್ತ್ರಗಳನ್ನು ತಿಳಿದವರಾಗಿದ್ದರು. ಸಾಯುವ ಮೊದಲು ಆ ಮಹಾಸ್ತ್ರಗಳನ್ನು ಅವರು ಪ್ರಯೋಗಿಸಲೇ ಇಲ್ಲವೇ? ಅನಾಥೆಯಾದ ನನಗೆ ರಕ್ಷಕರಾಗಿದ್ದ ರಾಮ-ಲಕ್ಷ್ಮಣರು ಇಂದ್ರಸದೃಶ ಪರಾಕ್ರಮಿಗಳಾಗಿದ್ದರು. ಆದರೆ ಮಾಯೆಯಿಂದ ಅದೃಶ್ಯನಾಗಿದ್ದ ಇಂದ್ರ ಜಿತುವು ಅವರಿಬ್ಬರನ್ನೂ ರಣಭೂಮಿಯಲ್ಲಿ ಸಂಹರಿಸಿಬಿಟ್ಟನು. ರಾಘವನ ಕಣ್ಣಿಗೆ ಬಿದ್ದ ಶತ್ರುವು ಮನೋವೇಗಕ್ಕೆ ಸಮಾನವಾದ ವೇಗವುಳ್ಳವನಾಗಿದ್ದರೂ ಯುದ್ಧದಲ್ಲಿ ಜೀವಸಹಿತವಾಗಿ ಹಿಂದಿರುಗುವ ಸಾಧ್ಯತೆಯಿರಲಿಲ್ಲ.

ನ ಕಾಲಸ್ಯಾತಿಭಾರೋಽಸ್ತಿ ಕೃತಾನ್ತಶ್ಚ ಸುದುರ್ಜಯಃ ।
ಯತ್ರ ರಾಮಃ ಸಹ ಭ್ರಾತ್ರಾ ಶೇತೇ ಯುಧಿ ನಿಪಾತಿತಃ ॥೧೯॥

ಕಾಲಪುರುಷನಿಗೆ ಯಾವ ಕಾರ್ಯವೂ ಹೆಚ್ಚು ಭಾರವಲ್ಲ. ಕಾಲನು ಜಯಿಸಲು ಅಸಾಧ್ಯನಾದವನು. ಏಕೆಂದರೆ : ರಾಮನು ಕೂಡ ಅಂತಹ ಕಾಲನಿಗೆ ವಶನಾಗಿ ತಮ್ಮನೊಡನೆ ಹತನಾಗಿ ರಣಭೂಮಿಯಲ್ಲಿ ಬಿದ್ದಿರುವ ನಲ್ಲವೇ!

ಈಗ ನಾನು ಶ್ರೀರಾಮನ ವಿಷಯವಾಗಿಯೂ ಶೋಕಪಡುವುದಿಲ್ಲ. ಮಹಾರಥನಾದ ಲಕ್ಷ್ಮಣನ ವಿಷಯದಲ್ಲಿಯೂ ಶೋಕಪಡುವುದಿಲ್ಲ. ನನ್ನ ವಿಷಯವಾಗಿಯೂ ನನಗೆ ದುಃಖವಿಲ್ಲ. ನನ್ನ ತಾಯಿಗಾಗಿಯೂ ನಾನು ವ್ಯಥೆಪಡುವುದಿಲ್ಲ. ಆದರೆ ನಾನು ಕೌಸಲ್ಯೆಗಾಗಿ ದುಃಖಪಡಬೇಕಾಗಿದೆ. ಏಕೆಂದರೆ : ಅವಳು ಯಾವಾಗಲೂ–'ನನ್ನ ಮಗನು ಹದಿನಾಲ್ಕು ವರ್ಷಗಳ ವನವಾಸವ್ರತವನ್ನು ಪೂರೈಸಿ ಸೀತಾ-ಲಕ್ಷ್ಮಣರೊಡನೆ ಯಾವಾಗ ಹಿಂದಿರುಗು ವನು? ನಾನು ಅವನನ್ನು ಯಾವಾಗ ನೋಡುವೆನು?'–ಎಂದು ಚಿಂತಿಸುತ್ತಲೇ ಇರುತ್ತಾಳೆ."

ಹೀಗೆ ವಿಲಪಿಸುತ್ತಿದ್ದ ಸೀತಾದೇವಿಗೆ ತ್ರಿಜಟಾ ರಾಕ್ಷಸಿಯು ಹೇಳಿದಳು:

ಮಾ ವಿಷಾದಂ ಕೃಥಾ ದೇವಿ ಭರ್ತಾಯಂ ತವ ಜೀವತಿ ॥೨೦॥

"ದೇವಿ! ದುಃಖಪಡಬೇಡ. ನಿನ್ನ ಪತಿಯು ಜೀವಿಸಿದ್ದಾನೆ.

ರಾಮ-ಲಕ್ಷ್ಮಣರಿಬ್ಬರೂ ಜೀವಿಸಿರುವರೆಂಬುದಕ್ಕೆ ನಾನು ಮಹತ್ತರ ವಾದ ಮತ್ತು ಉಚಿತವಾದ ಕಾರಣಗಳನ್ನು ಕೊಡುತ್ತೇನೆ.

ನ ಹಿ ಕೋಪಪರೀತಾನಿ ಹರ್ಷಪರ್ಯುತ್ಸುಕಾನಿ ಚ ।
ಭವನ್ತಿ ಯುಧಿ ಯೋಧಾನಾಂ ಮುಖಾನಿ ನಿಹತೇ ಪತೌ ॥೨೪॥

ಯುದ್ಧದಲ್ಲಿ ಪ್ರಭುವು ಹತನಾದನೆಂದರೆ ಯೋಧರ ಮುಖಗಳು ಕ್ರೋಧದಿಂದಾಗಲೀ ಹರ್ಷೋತ್ಸಾಹಗಳಿಂದಾಗಲೀ ಕೂಡಿರುವುದಿಲ್ಲ. ಅವರು ಅಧೀರರಾಗಿ ಅಳುತ್ತಿರುತ್ತಾರೆ. ಆದರೆ ಈಗ ಇಲ್ಲಿ ಹಾಗಿಲ್ಲ.

ಇದಂ ವಿಮಾನಂ ವೈದೇಹಿ ಪುಷ್ಪಕಂ ನಾಮ ನಾಮತಃ ।
ದಿವ್ಯಂ ತ್ವಾಂ ಧಾರಯೇನ್ನೈವಂ ಯದ್ಯೇತೌ ಗತಜೀವಿತೌ ॥೨೫॥

ವೈದೇಹಿ! ನಿನ್ನ ಪತಿಯು ಮರಣಹೊಂದಿಲ್ಲವೆಂಬುದಕ್ಕೆ ಇನ್ನೂ ಒಂದು ಮುಖ್ಯಕಾರಣವನ್ನು ತಿಳಿಸುತ್ತೇನೆ. ನಮ್ಮನ್ನು ಯುದ್ಧಭೂಮಿಗೆ ಕರೆತಂದಿರುವ ಪುಷ್ಪಕವೆಂಬ ಹೆಸರಿನ ಈ ವಿಮಾನವು ದಿವ್ಯವಾದುದು. ಒಂದು ವೇಳೆ ರಾಮ-ಲಕ್ಷ್ಮಣರೇನಾದರೂ ಪ್ರಾಣಗಳನ್ನು ತೊರೆದಿದ್ದರೆ–ಈ ವಿಮಾನವು ನಿನ್ನನ್ನಿಲ್ಲಿಗೆ ಕರೆತರುತ್ತಿರಲಿಲ್ಲ. (ವೈಧವ್ಯವು ನಿನಗೊದಗಿದ್ದರೆ ಅದನ್ನು ಸ್ಪರ್ಶಿಸಲು ಕೂಡ ನಿನಗೆ ಅವಕಾಶವಾಗುತ್ತಿರಲಿಲ್ಲ.)

ಹತವೀರಪ್ರಧಾನಾ ಹಿ ಗತೋತ್ಸಾಹಾ ನಿರುದ್ಯಮಾ ।
ಸೇನಾ ಭ್ರಮತಿ ಸಂಖ್ಯೇಷು ಹತಕರ್ಣೇವ ನೌರ್ಜಲೇ ॥೨೬॥
ಇಯಂ ಪುನರಸಂಭ್ರಾನ್ತಾ ನಿರುದ್ವಿಗ್ನಾ ತರಸ್ವಿನೀ ।
ಸೇನಾ ರಕ್ಷತಿ ಕಾಕುತ್ಸ್ಥೌ ಮಯಾ ಪ್ರೀತ್ಯಾ ನಿವೇದಿತೌ ॥೨೭॥

ಸೈನ್ಯದ ಪ್ರಧಾನಿಯು ಮರಣಹೊಂದಿದನೆಂದರೆ ಸೈನ್ಯವು ಉತ್ಸಾಹವಿಲ್ಲದೇ ಉದ್ಯೋಗವಿಲ್ಲದೇ–ಅಂಬಿಗನನ್ನು ಕಳೆದುಕೊಂಡ ನೌಕೆಯಂತೆ ಯದ್ವಾ-ತದ್ವಾ ಭ್ರಮಿಸುತ್ತಿರುತ್ತದೆ. ಆದರೆ ನಾವು ನೋಡಿದ ವಾನರಸೈನ್ಯಕ್ಕೆ ಅಂತಹ ಗಾಬರಿಯಾಗಲೀ, ಉದ್ವೇಗವಾಗಲೀ ಇರುವಂತೆ ಕಾಣುವುದಿಲ್ಲ. ರಾಜಕುಮಾರರಿಬ್ಬರನ್ನೂ ವಾನರಸೈನ್ಯವು ಸಾವಧಾನದಿಂದ ರಕ್ಷಿಸುತ್ತಿದೆ. ಈ ಕಾರಣಗಳಿಂದ ನಾನು ಪ್ರೇಮಪೂರ್ವಕವಾಗಿ ಮತ್ತು ದೃಢವಾಗಿ ಅವರಿಬ್ಬರೂ ಮೃತರಾಗಿಲ್ಲವೆಂದೂ ಜೀವಿಸಿಯೇ ಇರುವರೆಂದೂ ಒತ್ತಿ ಹೇಳುತ್ತಿದ್ದೇನೆ.

ವೈದೇಹಿ! ಮುಂದಿನ ಸುಖವನ್ನು ಸೂಚಿಸುವ ಈ ಕಾರಣಗಳಿಂದ ನಿಶ್ಚಿಂತಳಾಗಿರು. ರಾಜಕುಮಾರರು ಹತರಾಗಿಲ್ಲವೆಂದೇ ಭಾವಿಸು. ಸ್ನೇಹದ ಕಾರಣದಿಂದ ನಾನು ನಿನಗಿದನ್ನು ಹೇಳುತ್ತಿದ್ದೇನೆ.

ಅನೃತಂ ನೋಕ್ತಪೂರ್ವಂ ಮೇ ನ ಚ ವಕ್ಷ್ಯೇ ಕದಾಚನ ।
ಚಾರಿತ್ರಸುಖಶೀಲತ್ವಾತ್ಪ್ರವಿಷ್ಟಾಸಿ ಮನೋ ಮಮ ॥೨೮॥

ಮಿಥಿಲೇಶಕುಮಾರಿ! ನಾನು ಹಿಂದೆಂದೂ ಸುಳ್ಳು ಹೇಳಿದವಳಲ್ಲ. ಮುಂದೆಯೂ ಸುಳ್ಳು ಹೇಳುವುದಿಲ್ಲ. ಸಚ್ಚಾರಿತ್ರ್ಯವೇ (ಪಾತಿವ್ರತ್ಯವೇ) ಸುಖವೆಂದು ಭಾವಿಸುವ ಸ್ವಭಾವವುಳ್ಳ ನೀನು ನನ್ನ ಮನದಲ್ಲಿ ನೆಲೆಗೊಂಡಿರುವೆ. ಆದುದರಿಂದ ನಾನು ನಿನಗಿದೆಲ್ಲವನ್ನೂ ಹೇಳುತ್ತಿದ್ದೇನೆ.

ನೇಮೌ ಶಕ್ಯೌ ರಣೇ ಜೇತುಂ ಸೇನ್ದ್ರೈರಪಿ ಸುರಾಸುರೈಃ ।
ತಾದೃಶಂ ದರ್ಶನಂ ದೃಷ್ಟ್ವಾ ಮಯಾ ಚಾವೇದಿತಂ ತವ ॥೩೦॥

ಇಂದ್ರಸಹಿತರಾದ ಸುರಾಸುರರಿಂದಲೂ ಯುದ್ಧದಲ್ಲಿ ರಾಮ-ಲಕ್ಷ್ಮಣರನ್ನು ಜಯಿಸಲು ಸಾಧ್ಯವಿಲ್ಲ. ಅಂತಹ ಲಕ್ಷಣಗಳನ್ನು ಅವರಲ್ಲಿ ಕಂಡಿರುವುದರಿಂದಲೇ ನಾನು ಈ ವಿಷಯವನ್ನು ನಿನಗೆ ನಿವೇದಿಸಿದೆನು.

ಇದಂ ಚ ಸುಮಹಚ್ಚಿಹ್ನಂ ಶನೈಃ ಪಶ್ಯಸ್ವ ಮೈಥಿಲಿ ।
ನಿಃಸಂಜ್ಞಾವಪ್ಯುಭಾವೇತೌ ನೈವ ಲಕ್ಷ್ಮೀರ್ವಿಯುಜ್ಯತೇ ॥೩೧॥

ಇವರು ಬದುಕಿರುವರೆಂಬುದಕ್ಕೆ ಇದೊಂದು ಹೆಗ್ಗುರುತು ; ಸೂಕ್ಷ್ಮವಾಗಿ ನೋಡು, ಮೈಥಿಲಿ! ಇವರು ಮೂರ್ಛಿತರಾಗಿ ಬಿದ್ದಿದ್ದರೂ ಮುಖದ ತೇಜಸ್ಸು ಸ್ವಲ್ಪವೂ ಕುಂದಿಲ್ಲ.

ಪ್ರಾಯೇಣ ಗತಸತ್ತ್ವಾನಾಂ ಪುರುಷಾಣಾಂ ಗತಾಯುಷಾಮ್ ।
ದೃಶ್ಯಮಾನೇಷು ವಕ್ತ್ರೇಷು ಪರಂ ಭವತಿ ವೈಕೃತಮ್ ॥೩೨॥

ಯಾರ ಆಯುಷ್ಯವು ಮುಗಿದಿರುವುದೋ ಮತ್ತು ಯಾರ ಪ್ರಾಣಗಳು ಹೋಗಿಬಿಟ್ಟಿರುವುವೋ–ಅಂತಹವರ ಕಡೆಗೆ ನಾವು ದೃಷ್ಟಿಯನ್ನು ಹರಿಸಿದರೆ ಪ್ರಾಯಶಃ ಅಂತಹವರ ಮುಖವು ವಿಕಾರಗೊಂಡಿರುವುದನ್ನು ನಾವು ಕಾಣುತ್ತೇವೆ.

ಜನಕನಂದಿನಿ! ರಾಮ-ಲಕ್ಷ್ಮಣರಿಗಾಗಿ ಶೋಕ-ದುಃಖಗಳನ್ನೂ ಮೋಹವನ್ನೂ ತ್ಯಜಿಸು. ಅವರೀಗ ಬದುಕಿ ಉಳಿಯದಿರಲು ಸಾಧ್ಯವೇ ಇಲ್ಲ.”

ದೇವಕನ್ಯೆಯಂತಿದ್ದ ಸೀತಾದೇವಿಯು ತ್ರಿಜಟೆಯ ಮಾತುಗಳನ್ನು ಕೇಳಿ ಕೈಗಳೆರಡನ್ನೂ ಜೋಡಿಸಿಕೊಂಡು–‘ಭದ್ರೇ! ಹಾಗೆಯೇ ಆಗಲಿ’–ಎಂದಳು.

ಮನೋವೇಗಕ್ಕೆ ಸಮಾನವಾದ ವೇಗದಿಂದ ಕೂಡಿದ್ದ ಪುಷ್ಪಕವಿಮಾನವು ತ್ರಿಜಟಾ-ಸೀತೆಯರೊಡನೆ ರಣಭೂಮಿಯಿಂದ ಹಿಂದಿರುಗಿ ಪುನಃ ಲಂಕಾಪಟ್ಟಣವನ್ನು ಪ್ರವೇಶಿಸಿತು. ತ್ರಿಜಟೆಯೊಡನೆ ವಿಮಾನದಿಂದಿಳಿದ ಸೀತಾದೇವಿಯನ್ನು ರಾಕ್ಷಸಿಯರು ಪುನಃ ಅಶೋಕವನಕ್ಕೇ ಕರೆದೊಯ್ದರು.

ಅನೇಕವೃಕ್ಷಗಳ ಸಮೂಹಗಳಿಂದ ಕೂಡಿದ್ದ, ರಾಕ್ಷಸೇಂದ್ರನಾದ

ರಾವಣನ ವಿಹಾರಭೂಮಿಯಾದ ಅಶೋಕವನವನ್ನು ಸೀತೆಯು ಪ್ರವೇಶಿಸಿ ದಳು. ರಾಜಪುತ್ರರನ್ನು ನೋಡಿ ಬಂದ ಅವಳು ಬಹಳವಾಗಿ ಯೋಚಿಸುತ್ತಾ ಯಾವ ನಿಶ್ಚಯಕ್ಕೂ ಬಾರದೇ ಬಹಳವಾಗಿ ವಿಷಾದಿಸಿದಳು.

ಳಲನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೪೯ನೆಯ ಸರ್ಗ

ಶ್ರೀರಾಮನು ಮೂರ್ಛೆಯಿಂದ ಎಚ್ಚರಗೊಂಡು ಮೂರ್ಛಿತನಾಗಿದ್ದ ಲಕ್ಷ್ಮಣನನ್ನು ನೋಡಿ ವಿಲಪಿಸಿದುದು : ತಾನೂ ಪ್ರಾಣತ್ಯಾಗಮಾಡಲು ನಿಶ್ಚಯಿಸಿ ವಾನರರಿಗೆ ಕಿಷ್ಕಿಂಧೆಗೆ ಹಿಂದಿರುಗಲು ಆಜ್ಞಾಪಿಸಿದುದು

ಘೋರೇಣ ಶರಬನ್ಧೇನ ಬದ್ಧೌ ದಶರಥಾತ್ಮಜೌ ।
ನಿಃಶ್ವಸನ್ತೌ ಯಥಾ ನಾಗೌ ಶಯಾನೌ ರುಧಿರೋಕ್ಷಿತೌ ॥೧॥

ಘೋರವಾದ ಶರಬಂಧದಿಂದ ಬಂಧಿಸಲ್ಪಟ್ಟಿದ್ದ, ರಕ್ತದಲ್ಲಿ ಮುಳುಗಿ ಹೋಗಿದ್ದ, ದಶರಥನ ಮಕ್ಕಳಾದ ರಾಮ-ಲಕ್ಷ್ಮಣರು ಸರ್ಪಗಳಂತೆ ನಿಟ್ಟುಸಿರುಬಿಡುತ್ತಾ ಮಲಗಿದ್ದರು.

ಸುಗ್ರೀವಸಹಿತರಾದ ಮಹಾಬಲರಾದ ಎಲ್ಲ ವಾನರಶ್ರೇಷ್ಠರೂ ಶೋಕ ಮಗ್ನರಾಗಿ ಮಹಾತ್ಮರಾದ ರಾಜಪುತ್ರರ ಸುತ್ತಲೂ ನಿಂತಿದ್ದರು. ಈ ಮಧ್ಯ ದಲ್ಲಿ ಪರಾಕ್ರಮಿಯಾದ ಶ್ರೀರಾಮನು ಬಾಣಗಳ ಬಂಧನದಿಂದ ಬಂಧಿಸಲ್ಪ ಟ್ಟಿದ್ದರೂ ಸ್ಥೈರ್ಯದಿಂದಲೂ, ಶಕ್ತಿಸಂಪನ್ನತೆಯಿಂದಲೂ ಕೂಡಿದವನಾದ್ದ ರಿಂದ ಮೂರ್ಛೆಯಿಂದ ಎಚ್ಚರಗೊಂಡನು. ಆ ಸಮಯದಲ್ಲವನು ಬಾಣ ಗಳಿಂದ ಬಹಳವಾಗಿ ಗಾಯಗೊಂಡಿದ್ದ, ರಕ್ತದಿಂದ ತೋಯ್ದುಹೋಗಿದ್ದ, ದೀನವದನನಾಗಿದ್ದ ಲಕ್ಷ್ಮಣನು ಪಕ್ಕದಲ್ಲೇ ನೆಲದ ಮೇಲೆ ಮಲಗಿರುವುದನ್ನು ನೋಡಿ ತವಕದಿಂದ ಅಳತೊಡಗಿದನು.

ಕಿಂ ನು ಮೇ ಸೀತಯಾ ಕಾರ್ಯಂ ಕಿಂ ಕಾರ್ಯಂ ಜೀವಿತೇನ ವಾ ।
ಶಯಾನಂ ಯೋಽದ್ಯ ಪಶ್ಯಾಮಿ ಭ್ರಾತರಂ ಯುಧಿ ನಿರ್ಜಿತಮ್ ॥

“ಅಯ್ಯೋ! ಯುದ್ಧದಲ್ಲಿ ಪರಾಜಿತನಾಗಿ ಇಲ್ಲಿ ಬಿದ್ದಿರುವ ಲಕ್ಷ್ಮಣ

ನನ್ನು ನಾನೀಗ ನೋಡುತ್ತಿರುವೆನಲ್ಲಾ! ಇನ್ನು ಮುಂದೆ ನನಗೆ ಸೀತೆಯಿಂದ ಏನಾಗಬೇಕಾಗಿದೆ? ಅಥವಾ ಬದುಕಿನಿಂದಾದರೂ ಯಾವ ಪ್ರಯೋಜನ ವಿದೆ?

ಶಕ್ಯಾ ಸೀತಾಸಮಾ ನಾರೀ ಮರ್ತ್ಯಲೋಕೇ ವಿಚಿನ್ವತಾ ।
ನ ಲಕ್ಷ್ಮಣಸಮೋ ಭ್ರಾತಾ ಸಚಿವಃ ಸಾಂಪರಾಯಿಕಃ ॥೬॥

ಮನುಷ್ಯಲೋಕದಲ್ಲಿ ಹುಡುಕುತ್ತಾ ಹೋದರೆ ಸೀತೆಗೆ ಸಮಳಾದ ಬೇರೊಬ್ಬ ಹೆಂಗಸು ದೊರೆಯಬಹುದು. ಆದರೆ ಲಕ್ಷ್ಮಣನಂತೆ ಸಚಿವನೂ ಯುದ್ಧಕುಶಲಿಯೂ ಆದ ಬೇರೊಬ್ಬ ತಮ್ಮನು ಸಿಕ್ಕುವುದಿಲ್ಲ.

ಸುಮಿತ್ರೆಯ ಆನಂದವನ್ನು ಹೆಚ್ಚಿಸುವ ಲಕ್ಷ್ಮಣನೇನಾದರೂ ಅಸು ನೀಗಿದರೆ ವಾನರರ ಕಣ್ಣೆದುರಿನಲ್ಲಿಯೇ ನಾನು ಪ್ರಾಣಗಳನ್ನು ಪರಿತ್ಯಜಿಸು ವೆನು. ಲಕ್ಷ್ಮಣನಿಲ್ಲದೇ ನಾನು ಅಯೋಧ್ಯೆಗೆ ಹೋದಲ್ಲಿ ಲಕ್ಷ್ಮಣನೆಲ್ಲೆಂದು ಕೇಳಿದರೆ ನನ್ನ ತಾಯಿಯಾದ ಕೌಸಲ್ಯೆಗೆ ಏನೆಂದು ಉತ್ತರಿಸಲಿ? ತಾಯಿ ಯಾದ ಕೈಕೇಯಿಗೆ ಏನು ಹೇಳಲಿ? ಮಗನನ್ನು ಕಾಣಬೇಕೆನ್ನುವ ಔತ್ಸುಕ್ಯ ದಿಂದಿರುವ, ಕರುವನ್ನು ಕಳೆದುಕೊಂಡ ಹಸುವಿನಂತೆ ನಡುಗುತ್ತಿರುವ, ಹೆಣ್ಣು ಕುರವಕಪಕ್ಷಿಯಂತೆ ಕೂಗಿಕೊಳ್ಳುವ ಸುಮಿತ್ರಾದೇವಿಯನ್ನು ನಾನು ಹೇಗೆ ಸಮಾಧಾನಪಡಿಸಲಿ? ಭರತನಿಗೂ ಯಶೋವಂತನಾದ ಶತ್ರುಘ್ನನಿಗೂ 'ನನ್ನೊಡನೆ ಲಕ್ಷ್ಮಣನು ಅರಣ್ಯಕ್ಕೆ ಬಂದನು. ನಾನು ಅವನಿಲ್ಲದೆಯೇ ಅಯೋಧ್ಯೆಗೆ ಆಗಮಿಸಿದೆನು'–ಎಂದು ಹೇಗೆ ಹೇಳಲಿ? ಸುಮಿತ್ರೆಯ ನಿಂದನೆ ಯನ್ನು ನಾನು ಖಂಡಿತವಾಗಿಯೂ ಸಹಿಸಿಕೊಳ್ಳಲಾರೆನು. ಆದುದರಿಂದ ನಾನು ಇಲ್ಲಿಯೇ ದೇಹವನ್ನು ತ್ಯಜಿಸುತ್ತೇನೆ. ಬದುಕಿರುವುದರಲ್ಲಿ ನನಗೆ ಉತ್ಸಾಹವೇ ಇಲ್ಲ. ಯಾರ ಸಲುವಾಗಿ ಈ ಲಕ್ಷ್ಮಣನು ಶರತಲ್ಪದಲ್ಲಿ ಪ್ರಾಣ ತೊರೆದವನಂತೆ ಬಿದ್ದಿರುವನೋ–ಅಂತಹ ದುಷ್ಕರ್ಮಿಯಾದ ಅನಾರ್ಯ ನಾದ ನನಗೆ ಧಿಕ್ಕಾರವಿರಲಿ. ಲಕ್ಷ್ಮಣ! ನಾನು ವಿಷಣ್ಣನಾಗಿದ್ದಾಗ ನೀನು ಸಮಾಧಾನಗೊಳಿಸುತ್ತಿದ್ದೆ. ಪ್ರಾಣಗಳನ್ನು ತೊರೆದಿರುವ ನೀನೀಗ ಆರ್ತ ನಾದ ನನ್ನೊಡನೆ ಮಾತನಾಡಲೂ ಸಾಧ್ಯವಿಲ್ಲದಂತಾಗಿದೆ. ಇನ್ನು ಮುಂದೆ ನನ್ನನ್ನು ಸಮಾಧಾನಗೊಳಿಸುವವರು ಯಾರೂ ಇಲ್ಲ. ಯಾವ ರಣಭೂಮಿ ಯಲ್ಲಿ ನೀನು ಈಗ ತಾನೇ ಹಲವಾರು ರಾಕ್ಷಸರನ್ನು ಕೊಂದು ಭೂಮಿಗೆ

ಕೆಡವಿದೆಯೋ ಅದೇ ರಣಭೂಮಿಯಲ್ಲೇ ವೀರನಾದ ನೀನೀಗ ಬಾಣಗಳಿಂದ ಹತನಾಗಿ ಭೂಮಿಯ ಮೇಲೆ ಬಿದ್ದಿರುವೆ. ಶರತಲ್ಪದಲ್ಲಿ ನಿನ್ನ ರಕ್ತದಿಂದಲೇ ತೋಯ್ದು ಬಿದ್ದಿರುವ ನೀನು ಬಾಣಗಳಿಂದಲೂ ಸಮಾವೃತನಾಗಿ ಅಸ್ತಮಿಸುತ್ತಿರುವ ಸೂರ್ಯನಂತೆಯೇ ಪ್ರಕಾಶಿಸುತ್ತಿರುವೆ. ಬಾಣಗಳಿಂದ ನಿನ್ನ ಮರ್ಮಸ್ಥಳಗಳು ಭಿನ್ನವಾಗಿರುವುದರಿಂದ ಮಾತನಾಡಲೂ ನಿನಗೆ ಸಾಧ್ಯವಾಗುತ್ತಿಲ್ಲ. ಒಂದುವೇಳೆ ನೀನು ಮಾತನಾಡದಿದ್ದರೂ ನಿನ್ನ ಕಣ್ಣುಗಳ ಕೆಂಪು ನಿನ್ನ ಮಾರ್ಮಿಕಪೀಡೆಯನ್ನು ಸೂಚಿಸುತ್ತಿದೆ. ಯಾವ ರೀತಿಯಲ್ಲಿ ಮಹಾದ್ಯುತಿಮಂತನಾದ ಲಕ್ಷ್ಮಣನು ಅರಣ್ಯಕ್ಕೆ ನನ್ನ ಜೊತೆಯಲ್ಲಿ ಬಂದನೋ–ಹಾಗೆಯೇ ನಾನೀಗ ಇವನ ಜೊತೆಯಲ್ಲಿ ಯಮಾಲಯಕ್ಕೆ ಹೋಗುತ್ತೇನೆ. ಯಾರು ನನಗೆ ಇಷ್ಟನೂ ಬಂಧುವೂ ಆಗಿದ್ದನೋ ಮತ್ತು ಯಾವಾಗಲೂ ನನ್ನನ್ನೇ ಅನುಸರಿಸಿ ಇರುತ್ತಿದ್ದನೋ ಅಂತಹ ಲಕ್ಷ್ಮಣನೀಗ ಅನಾರ್ಯನಾದ ನನ್ನ ದುರ್ನೀತಿಯ ಕಾರಣದಿಂದಾಗಿ ಇಂತಹ ದುರವಸ್ಥೆಗೆ ಈಡಾಗಿದ್ದಾನೆ. ಯಾವುದಾದರೂ ಸಮಯದಲ್ಲಿ ಯಾವುದಾದರೂ ಕಾರಣದಿಂದ ವೀರನಾದ ಲಕ್ಷ್ಮಣನು ಕುಪಿತನೇ ಆಗಿದ್ದರೂ ಎಂದೂ ಕಟುವಾದ ಮತ್ತು ಅಪ್ರಿಯವಾದ ಮಾತುಗಳನ್ನಾಡಿದುದು ನನ್ನ ಸ್ಮರಣೆಯಲ್ಲೇ ಇಲ್ಲ.

ವಿಸಸರ್ಜೈಕವೇಗೇನ ಪಞ್ಚಬಾಣಶತಾನಿ ಯಃ ।
ಇಷ್ವಸ್ತ್ರೇಷ್ವಧಿಕಸ್ತಸ್ಮಾತ್ಕಾರ್ತವೀರ್ಯಾಚ್ಚ ಲಕ್ಷ್ಮಣಃ ॥೨೦॥

ಲಕ್ಷ್ಮಣನು ಒಂದೇ ರೀತಿಯ ವೇಗದಿಂದ ಐದುನೂರು ಬಾಣಗಳನ್ನು ಏಕಕಾಲದಲ್ಲಿ ಶತ್ರುವಿನ ಮೇಲೆ ಪ್ರಯೋಗಿಸುತ್ತಿದ್ದನು. ಈ ಕಾರಣದಿಂದಲೇ ಅವನು ಧನುರ್ವಿದ್ಯೆಯಲ್ಲಿ ಕಾರ್ತವೀರ್ಯಾರ್ಜುನನನ್ನೂ ಮೀರಿಸಿದ್ದನು.

ಅಸ್ತ್ರೈರಸ್ತ್ರಾಣಿ ಯೋ ಹನ್ಯಾಚ್ಛಕ್ರಸ್ಯಾಪಿ ಮಹಾತ್ಮನಃ ।
ಸೋಽಯಮುರ್ವ್ಯಾಂ ಹತಃ ಶೇತೇ ಮಹಾರ್ಹಶಯನೋಚಿತಃ ॥

ಯಾವನು ಅಸ್ತ್ರಗಳಿಂದ ಮಹಾತ್ಮನಾದ ಇಂದ್ರನ ಅಸ್ತ್ರಗಳನ್ನು ಕೂಡ ಕತ್ತರಿಸಿ ಹಾಕಲು ಸಮರ್ಥನಾಗಿದ್ದನೋ ಮತ್ತು ಬಹಳ ಬೆಲೆಬಾಳುವ ಹಂಸತೂಲಿಕಾತಲ್ಪದಲ್ಲಿ ಮಲಗಲು ಅರ್ಹನಾಗಿದ್ದನೋ–ಅಂತಹ ಶೂರ-ವೀರನಿಂದು ಭೂಮಿಯಲ್ಲಿ ಹತನಾಗಿ ಬಿದ್ದಿದ್ದಾನೆ.

ನಾನು ಪ್ರತಿಜ್ಞೆಮಾಡಿಕೊಟ್ಟಿದ್ದಂತೆ ವಿಭೀಷಣನನ್ನು ರಾಕ್ಷಸರ ರಾಜ ನನ್ನಾಗಿ ಮಾಡಲಿಲ್ಲ. ಆ ನನ್ನ ಮಿಥ್ಯಾಪ್ರಲಾಪವು ನನ್ನನ್ನು ಯಾವಾಗಲೂ ಸುಡುತ್ತಲೇ ಇರುತ್ತದೆ. ಇದರಲ್ಲಿ ಸಂಶಯವೇ ಇಲ್ಲ.

ಸುಗ್ರೀವ! ಈ ಮುಹೂರ್ತದಲ್ಲಿಯೇ ನೀನಿಲ್ಲಿಂದ ಹೊರಟುಬಿಡು. ಏಕೆಂದರೆ : ನನ್ನಿಂದ ನೀನು ವಿಹೀನನಾಗಿರುವೆಯೆಂದು ತಿಳಿದೊಡನೆಯೇ ರಾವಣನು ನಿನ್ನನ್ನು ಅವಮಾನಗೊಳಿಸುತ್ತಾನೆ. ಅಂಗದನನ್ನು ಮುಂದೆ ಮಾಡಿಕೊಂಡು ಸೈನ್ಯದೊಡನೆಯೂ, ಪರಿವಾರದೊಡನೆಯೂ, ನಲ-ನೀಲ ರೊಡನೆಯೂ ಸಾಗರವನ್ನು ದಾಟಿ ಕಿಷ್ಕಿಂಧೆಗೆ ಪ್ರಯಾಣಮಾಡು. ಯಾರಿಂದಲೂ ಮಾಡಲು ಸಾಧ್ಯವಾಗದ ಕಾರ್ಯವನ್ನು ಮಾಡಿರುವ ಹನು ಮಂತನ ವಿಷಯದಲ್ಲಿ ನಾನು ಸುಪ್ರಿತನಾಗಿದ್ದೇನೆ. ಗೋಲಾಂಗೂಲಸೈನಿಕರಿಗೆ ಅಧಿಪತಿಯಾದ ಗವಾಕ್ಷನ ವಿಷಯದಲ್ಲಿಯೂ, ಕರಡಿಗಳಿಗೆ ರಾಜನಾದ ಜಾಂಬವಂತನ ವಿಷಯದಲ್ಲಿಯೂ ಸುಪ್ರೀತನಾಗಿದ್ದೇನೆ. ಅಂಗದ-ಮೈಂದ-ದ್ವಿವಿದರೂ ಯುದ್ಧದಲ್ಲಿ ಮಹಾಪರಾಕ್ರಮವನ್ನು ತೋರಿದ್ದಾರೆ. ಕೇಸರಿ ಮತ್ತು ಸಂಪಾತಿಗಳು ಶತ್ರುಗಳೊಡನೆ ಮಹಾಭಯಂಕರವಾದ ಯುದ್ಧವನ್ನೇ ಮಾಡಿದ್ದಾರೆ. ಗವಯ-ಗವಾಕ್ಷ-ಶರಭ-ಗಜ ಇವರೇ ಮುಂತಾದ ವಾನರ ನಾಯಕರು ಕೂಡ ನನ್ನ ಸಲುವಾಗಿ ಪ್ರಾಣಗಳ ಮೇಲಿನ ಹಂಗನ್ನೇ ತೊರೆದು ಯುದ್ಧಮಾಡಿದ್ದಾರೆ. ಆದರೆ, ಸುಗ್ರೀವ! ವಿಧಿಯನ್ನು ಉಲ್ಲಂಘಿಸಲು ಮನುಷ್ಯರಿಂದ ಶಕ್ಯವಿಲ್ಲ. ಧರ್ಮಭೀರುವಾದ ನೀನು ವಯಸ್ಯನಿಂದ ಅಥವಾ ಉತ್ತಮ ಸುಹೃದನಿಂದ ಯಾವ ಕಾರ್ಯವಾಗಬೇಕಾಗಿದ್ದಿತೋ–ಆ ಎಲ್ಲ ಕಾರ್ಯಗಳನ್ನೂ ನನ್ನ ಸಲುವಾಗಿ ನಿಷ್ಠೆಯಿಂದ ಮಾಡಿರುವೆ. ವಾನರ ಶ್ರೇಷ್ಠರೇ! ನೀವೆಲ್ಲರೂ ಮಿತ್ರಕಾರ್ಯವನ್ನು ಮಾಡಿರುವಿರಿ. ನನ್ನ ಅನುಮತಿಯಂತೆ ನಿಮ್ಮಿಷ್ಟ ಬಂದಲ್ಲಿಗೆ ಹೋಗಬಹುದು."

ಶ್ರೀರಾಮನ ಆ ವಿಲಾಪವನ್ನು ಕೇಳಿದ ಪಿಂಗಲಾಕ್ಷರಾದ ವಾನರ ರೆಲ್ಲರೂ ಕಣ್ಣೀರಿನ ಪ್ರವಾಹವನ್ನೇ ಸುರಿಸತೊಡಗಿದರು.

ಆ ವೇಳೆಗೆ ಗದಾಪಾಣಿಯಾದ ವಿಭೀಷಣನು ಎಲ್ಲ ಸೈನಿಕರನ್ನೂ ಸುವ್ಯವಸ್ಥಿತಗೊಳಿಸಿ ಶ್ರೀರಾಮನಿದ್ದೆಡೆಗೆ ತ್ವರೆಯಿಂದ ಆಗಮಿಸಿದನು.

ಕಾಡಿಗೆಯ ರಾಶಿಯಂತೆ ಕಪ್ಪಾಗಿದ್ದ ಗದಾಪಾಣಿಯಾದ ವಿಭೀಷಣನನ್ನು ನೋಡುತ್ತಲೇ ಎಲ್ಲ ವಾನರರೂ ರಾವಣನ ಮಗನಾದ ಇಂದ್ರಜಿತುವೇ ಬರುತ್ತಿರುವನೆಂದು ಭ್ರಮಿಸಿ ದಿಕ್ಕಾಪಾಲಾಗಿ ಓಡತೊಡಗಿದರು.

೪೯ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೫೦ನೆಯ ಸರ್ಗ

ವಾನರರ ಪಲಾಯನ: ಜಾಂಬವಂತನಿಂದ ಸೈನಿಕರಿಗೆ ಸಾಂತ್ವನ: ವಿಭೀಷಣನ ವಿಲಾಪ: ಸುಗ್ರೀವನ ಸಾಂತ್ವನ: ಗರುಡನ ಆಗಮನ: ನಾಗಪಾಶದಿಂದ ರಾಮ-ಲಕ್ಷ್ಮಣರ ಬಿಡುಗಡೆ: ಗರುಡನ ನಿಷ್ಕ್ರಮಣ

ಅಥೋವಾಚ ಮಹಾತೇಜಾ ಹರಿರಾಜೋ ಮಹಾಬಲಃ ।
ಕಿಮಿಯಂ ವ್ಯಥಿತಾ ಸೇನಾ ಮೂಢವಾತೇವ ನೌರ್ಜಲೇ ॥೧॥

ವಾನರಸೈನಿಕರು ದುಃಖಿತರಾಗಿರುವುದನ್ನು ಕಂಡು ಮಹಾತೇಜಸ್ವಿಯಾದ, ವಾನರರಾಜನಾದ, ಮಹಾಬಲನಾದ ಸುಗ್ರೀವನು–"ಸಮುದ್ರದಲ್ಲಿ ಬಿರುಗಾಳಿಗೆ ಸಿಕ್ಕಿದ ಹಡಗಿನಂತೆ ನಮ್ಮ ಸೈನಿಕರೇಕೆ ವ್ಯಾಕುಲಗೊಂಡಿದ್ದಾರೆ?"–ಎಂದು ಕೇಳಿದನು.

ಸುಗ್ರೀವನ ಆ ಮಾತನ್ನು ಕೇಳಿದ ವಾಲಿಯ ಮಗನಾದ ಅಂಗದನು ಉತ್ತರಿಸಿದನು :

"ಚಿಕ್ಕಪ್ಪ! ರಾಮ-ಲಕ್ಷ್ಮಣರಿಬ್ಬರೂ ಬಾಣಗಳಿಂದ ಕಟ್ಟಲ್ಪಟ್ಟು ಬಿದ್ದಿರುವುದನ್ನು ನೀನು ಕಾಣುತ್ತಿಲ್ಲವೇ? ಮಹಾತ್ಮರಾದ ದಶರಥನ ಮಕ್ಕಳಿಬ್ಬರೂ ಬಾಣಗಳಿಂದ ಚುಚ್ಚಲ್ಪಟ್ಟವರಾಗಿ ರಕ್ತದಿಂದ ತೋಯ್ದು ಹೋಗಿ ಶರತಲ್ಪದಲ್ಲಿ ಮಲಗಿದ್ದಾರೆ."

ಅಂಗದನ ಮಾತುಗಳನ್ನು ಕೇಳಿ ವಾನರೇಂದ್ರನಾದ ಸುಗ್ರೀವನು ಹೇಳಿದನು :

"ವತ್ಸ! ಯಾವ ಕಾರಣವೂ ಇಲ್ಲದೇ ಸೈನ್ಯದಲ್ಲಿ ಇಂತಹ ಪ್ರಕ್ಷುಬ್ಧ ಪರಿಸ್ಥಿತಿಯುಂಟಾಗಿರುವುದೆಂದು ನಾನು ಭಾವಿಸುವುದಿಲ್ಲ. ಸೈನಿಕರೆಲ್ಲರೂ

ಇಷ್ಟೊಂದು ಭಯಭೀತರಾಗಿರಲು ಯಾವುದಾದರೂ ಕಾರಣವಿರಲೇಬೇಕು. ಈ ವಾನರರೆಲ್ಲರೂ ವಿಷಣ್ಣವದನರಾಗಿ, ಆಯುಧಗಳೆಲ್ಲವನ್ನೂ ಬಿಸುಟು, ಭಯದಿಂದ ಎರಡು ಕಣ್ಣುಗಳನ್ನೂ ಅಗಲವಾಗಿ ಹಿಗ್ಗಲಿಸಿಕೊಂಡು ಮಿಕಿ- ಮಿಕಿ ನೋಡುತ್ತಾ ಪಲಾಯನಮಾಡುತ್ತಿದ್ದಾರೆ. ಪಲಾಯನಮಾಡುವಾಗ ಅಕ್ಕ-ಪಕ್ಕದವರು ಏನೆಂದುಕೊಂಡಾರೆಂದು ನಾಚುತ್ತಲೂ ಇಲ್ಲ. ಹಿಂದುಗಡೆ ನೋಡುತ್ತಲೂ ಇಲ್ಲ. ಒಬ್ಬರು ಮತ್ತೊಬ್ಬರನ್ನು ತಳ್ಳಿಕೊಂಡೇ ಓಡಿಹೋಗು ತ್ತಿದ್ದಾರೆ. ಹಾಗೆ ಓಡಿಹೋಗುತ್ತಿರುವಾಗ ಕೆಳಕ್ಕೆ ಬಿದ್ದವನನ್ನು ಮೇಲ ಕ್ಕೆತ್ತಲೂ ಪ್ರಯತ್ನಿಸದೇ ದಾಟಿಕೊಂಡೇ ಮುನ್ನಡೆಯುತ್ತಿದ್ದಾರೆ.”

ಸುಗ್ರೀವನು ಹೀಗೆ ಹೇಳುತ್ತಿರುವ ಸಮಯಕ್ಕೆ ಸರಿಯಾಗಿ ಗದಾಪಾಣಿ ಯಾದ ವಿಭೀಷಣನು ಅಲ್ಲಿಗೆ ಬಂದು ಸುಗ್ರೀವನಿಗೂ, ಶ್ರೀರಾಮನಿಗೂ ಅಭ್ಯುದಯವನ್ನು ಕೋರಿದನು. ವಾನರಭಯಂಕರನಾದ ವಿಭೀಷಣನನ್ನು ನೋಡಿ ಸುಗ್ರೀವನು ಋಕ್ಷರಾಜನಾದ, ಮಹಾತ್ಮನಾದ ಜಾಂಬವಂತನಿಗೆ ಹೇಳಿದನು :

“ಜಾಂಬವಂತ! ವಾನರಸೈನಿಕರು ಓಡುತ್ತಿರುವುದಕ್ಕೆ ಕಾರಣವು ತಿಳಿಯಿತು. ಇಲ್ಲಿಗೆ ಆಗಮಿಸುತ್ತಿರುವ ವಿಭೀಷಣನನ್ನು ನೋಡಿ ವಾನರ ಸೈನಿಕರು–ಇವನು ರಾವಣನ ಮಗನಾದ ಇಂದ್ರಜಿತುವೆಂದೇ ಭ್ರಮಿಸಿ ಬಹಳ ವಾಗಿ ಭಯಪಟ್ಟುಕೊಂಡು ಓಡಿಹೋಗುತ್ತಿದ್ದಾರೆ. ನೀನೀಗಲೇ ಹೋಗಿ ಇಲ್ಲಿಗೆ ಬಂದಿರುವವನು ವಿಭೀಷಣನೆಂದೂ–ಇಂದ್ರಜಿತುವಲ್ಲವೆಂದೂ ಭಯ ಗೊಂಡು ಓಡಿಹೋಗುತ್ತಿರುವ ವಾನರಸೈನಿಕರಿಗೆ ಹೇಳಿ ಅವರನ್ನು ಪುನಃ ಸ್ವಸ್ಥಾನಗಳಲ್ಲಿ ನಿಲ್ಲಿಸು.”

ಜಾಂಬವಂತನು ಹಾಗೆಯೇ ಮಾಡಿದನು. ವಾನರಸೈನಿಕರು ಬಂದಿರು ವವನು ವಿಭೀಷಣನೆಂಬುದನ್ನು ಖಚಿತಪಡಿಸಿಕೊಂಡು ಭಯವನ್ನು ತೊರೆದು ಎಲ್ಲರೂ ತಮ್ಮ-ತಮ್ಮ ಸ್ಥಾನಗಳಿಗೆ ಹಿಂದಿರುಗಿದರು.

ರಾಮ-ಲಕ್ಷ್ಮಣರಿಬ್ಬರೂ ಬಾಣಗಳಿಂದ ಚುಚ್ಚಲ್ಪಟ್ಟಿರುವುದನ್ನು ಕಂಡು ಧರ್ಮಾತ್ಮನಾದ ವಿಭೀಷಣನು ದುಃಖಗೊಂಡನು. ಒದ್ದೆಕೈಯಿಂದ ಇಬ್ಬರ ಕಣ್ಣುಗಳನ್ನೂ ಒರೆಸಿದನು. ಶೋಕಪೀಡಿತವಾದ ಮನಸ್ಸಿನಿಂದ ಕೂಡಿ ಬಿಕ್ಕಿ-ಬಿಕ್ಕಿ ಅಳತೊಡಗಿದನು.

"ಅಯ್ಯೋ! ಇವರಿಬ್ಬರೂ ಸತ್ತ್ವಸಂಪನ್ನರು. ಮಹಾಪರಾಕ್ರಮಿಗಳು. ಯುದ್ಧಪ್ರಿಯರು. ಅಂತಹವರು ಕೂಡ ಕಪಟಯೋಧಿಗಳಾದ ರಾಕ್ಷಸರಿಂದ ಇಂತಹ ದುರವಸ್ಥೆಗೆ ತಳ್ಳಲ್ಪಟ್ಟರು. ಇವರಿಬ್ಬರೂ ಸರಳರು. ಕಪಟಯುದ್ಧವನ್ನು ಮಾಡುವವರಲ್ಲ. ಆದರೆ ನನ್ನ ಅಣ್ಣನ ದುಷ್ಟಪುತ್ರ ನಾದ, ದುರಾತ್ಮನಾದ ಇಂದ್ರಜಿತುವು ಕುಟಿಲವಾದ ರಾಕ್ಷಸೀಬುದ್ಧಿಯನ್ನು ಆಶ್ರಯಿಸಿ ಇವರನ್ನು ವಂಚಿಸಿದ್ದಾನೆ. ಇವರಿಬ್ಬರೂ ಶರೀರಾದ್ಯಂತವಾಗಿ ಬಾಣಗಳಿಂದ ಚುಚ್ಚಲ್ಪಟ್ಟಿದ್ದಾರೆ. ರಕ್ತದಿಂದ ತೋಯ್ದುಹೋಗಿದ್ದಾರೆ. ಈ ಪರಿಸ್ಥಿತಿಯಲ್ಲಿ ಭೂಮಿಯಲ್ಲಿ ಮಲಗಿರುವ ಇವರಿಬ್ಬರೂ ಮಲಗಿರುವ ಮುಳ್ಳುಹಂದಿಗಳಂತೆಯೇ ಕಾಣುತ್ತಿದ್ದಾರೆ. ನಾನು ಯಾರ ಬಲ-ಪರಾ ಕ್ರಮಗಳನ್ನಾಶ್ರಯಿಸಿ ಲಂಕಾಪಟ್ಟಣದ ಸಿಂಹಾಸನದಲ್ಲಿ ಪ್ರತಿಷ್ಠಿತನಾಗಲು ಆಶಿಸಿದ್ದೆನೋ–ಅಂತಹ ಪುರುಷಶ್ರೇಷ್ಠರೇ ಇಂದು ದೇಹತ್ಯಾಗಕ್ಕಾಗಿ ಇಲ್ಲಿ ಮಲಗಿದ್ದಾರೆ. ನಾನಿಂದು ಬದುಕಿದ್ದರೂ ಸತ್ತವನಂತಾಗಿದ್ದೇನೆ. ರಾಜ್ಯಕ್ಕೆ ಸಂಬಂಧಿಸಿದ ನನ್ನ ಮನೋರಥವು ನುಚ್ಚುನೂರಾಗಿಹೋಯಿತು. ಶತ್ರು ವಾದ ರಾವಣನು ಸೀತೆಯನ್ನು ರಾಮನಿಗೆ ಒಪ್ಪಿಸುವುದಿಲ್ಲವೆಂದು ಯಾವ ಪ್ರತಿಜ್ಞೆಯನ್ನು ಮಾಡಿದ್ದನೋ–ಆ ಪ್ರತಿಜ್ಞೆಯೇ ಇಂದು ಸತ್ಯವಾಯಿತು. ಅವನ ಪುತ್ರನೇ ಅವನನ್ನು ಪೂರ್ಣಮನೋರಥನನ್ನಾಗಿ ಮಾಡಿದನು."

ಸತ್ತ್ವಸಂಪನ್ನನಾದ ಹರಿರಾಜನಾದ ಸುಗ್ರೀವನು ಹೀಗೆ ವಿಲಪಿಸುತ್ತಿದ್ದ ವಿಭೀಷಣನನ್ನು ತಬ್ಬಿಕೊಂಡು ಹೇಳಿದನು :

ರಾಜ್ಯಂ ಪ್ರಾಪ್ಸ್ಯಸಿ ಧರ್ಮಜ್ಞ ಲಙ್ಕಾಯಾಂ ನಾತ್ರ ಸಂಶಯಃ ।
ರಾವಣಃ ಸಹ ಪುತ್ರೇಣ ಸ್ವಕಾಮಂ ನೇಹ ಲಪ್ಸ್ಯತೇ ॥೨೧॥

"ಅಧೀರನಾಗಬೇಡ, ವಿಭೀಷಣ! ನೀನು ಲಂಕಾರಾಜ್ಯವನ್ನು ಖಂಡಿತ ವಾಗಿಯೂ ಪಡೆಯುವೆ. ಇದರಲ್ಲಿ ಸಂಶಯವೇ ಇಲ್ಲ. ರಾವಣನು ಪುತ್ರ ಸಹಿತನಾಗಿ ಬಂದರೂ ತನ್ನ ಆಸೆಯನ್ನು ಪೂರೈಸಿಕೊಳ್ಳಲಾರನು.

ನ ರುಜಾ ಪೀಡಿತಾವೇತಾವುಭೌ ರಾಘವಲಕ್ಷ್ಮಣೌ ।
ತ್ಯಕ್ತ್ವಾ ಮೋಹಂ ವಧಿಷ್ಯೇತೇ ಸಗಣಂ ರಾವಣಂ ರಣೇ ॥೨೨॥

ರಾಕ್ಷಸೇಶ್ವರನೇ! ಸಾಯುವಂತಹ ಗಾಯಗಳಿಂದೇನೂ ಇವರು ಪೀಡಿತರಾಗಿರುವುದಿಲ್ಲ. ಮೂರ್ಛಿತರಾಗಿದ್ದಾರೆ. ಮೂರ್ಛೆಯು ಕಳೆದೊಡನೆಯೇ ಇಬ್ಬರೂ ಪರಿವಾರಸಮೇತನಾದ ರಾವಣನನ್ನು ಸಂಹರಿಸುತ್ತಾರೆ."

ಹೀಗೆ ಸುಗ್ರೀವನು ವಿಭೀಷಣನನ್ನು ಸಂತೈಸಿ ಅವನಿಗೆ ಲಂಕಾಧಿಪತಿಯಾಗುವ ಆಶ್ವಾಸನೆಯನ್ನಿತ್ತು ತನ್ನ ಪಕ್ಕದಲ್ಲಿಯೇ ಇದ್ದ ಮಾವನಾದ ಸುಷೇಣನಿಗೆ ಹೇಳಿದನು :

"ಮಾವ! ಶತ್ರುಸಂಹಾರಕರಾದ ಈ ಇಬ್ಬರು ಸಹೋದರರೂ ಎಚ್ಚರಗೊಂಡನಂತರ ಶೂರರಾದ ವಾನರಸೈನಿಕರೊಡನೆ ನೀನು ರಾಮ-ಲಕ್ಷ್ಮಣರನ್ನು ಕರೆದುಕೊಂಡು ಕಿಷ್ಕಿಂಧೆಗೆ ಪ್ರಯಾಣಮಾಡು. ನಾನಾದರೋ ಪುತ್ರರಿಂದಲೂ ಬಂಧು-ಬಾಂಧವರಿಂದಲೂ ಸಹಿತನಾದ ರಾವಣನನ್ನು ಯುದ್ಧದಲ್ಲಿ ಸಂಹರಿಸಿ ದೇವರಾಜನಾದ ಇಂದ್ರನು ನಷ್ಟಳಾಗಿ ಹೋಗಿದ್ದ ರಾಜ್ಯಲಕ್ಷ್ಮಿಯನ್ನು ದೈತ್ಯರಿಂದ ಅಪಹರಿಸಿ ತಂದಂತೆ–ರಾವಣನಿಂದ ಅಪಹೃತಳಾಗಿರುವ ಸೀತಾದೇವಿಯನ್ನು ಅಲ್ಲಿಗೆ ಕರೆತರುತ್ತೇನೆ."

ವಾನರೇಂದ್ರನಾದ ಸುಗ್ರೀವನ ಆ ಮಾತುಗಳನ್ನು ಕೇಳಿ ಸುಷೇಣನು ತನ್ನ ಅನುಭವದ ಈ ಮಾತನ್ನು ಹೇಳಿದನು :

"ಸುಗ್ರೀವ! ಹಿಂದೊಮ್ಮೆ ದೇವತೆಗಳಿಗೂ ಮತ್ತು ಅಸುರರಿಗೂ ನಡೆದ ಯುದ್ಧವನ್ನು ನಾನು ನೋಡಿದ್ದೆನು. ಆ ಸಮಯದಲ್ಲಿ ಶಸ್ತ್ರಾಸ್ತ್ರಗಳನ್ನು ಚೆನ್ನಾಗಿ ತಿಳಿದಿದ್ದ ಮತ್ತು ಲಕ್ಷ್ಯಭೇದನದಲ್ಲಿ ಕೋವಿದರಾಗಿದ್ದ ದೇವತೆಗಳನ್ನು ಶಸ್ತ್ರವಿದ್ಯೆಯನ್ನು ಚೆನ್ನಾಗಿ ಅಭ್ಯಸಿಸಿದ್ದ ದಾನವರು ಬಾಣಗಳ ಜಾಲದಿಂದ ಬಾರಿ-ಬಾರಿಗೂ ಮುಚ್ಚುತ್ತಾ ಪ್ರಹರಿಸುತ್ತಿದ್ದರು. ಆ ಯುದ್ಧದಲ್ಲಿ ಅಸ್ತ್ರ-ಶಸ್ತ್ರಗಳಿಂದ ಪೀಡಿತರಾಗಿ ಗಾಯಗೊಂಡಿದ್ದವರನ್ನೂ, ಮೂರ್ಛೆಹೋಗಿದ್ದವರನ್ನೂ, ಸತ್ತುಹೋಗಿದ್ದವರನ್ನೂ ಬೃಹಸ್ಪತಿಯು ಮಂತ್ರಯುಕ್ತವಾದ ವಿದ್ಯೆಗಳಿಂದಲೂ ಓಷಧಿಗಳಿಂದಲೂ ಚಿಕಿತ್ಸೆಮಾಡುತ್ತಿದ್ದನು. ಅಂತಹ ದಿವ್ಯೌಷಧಗಳು ಈಗಲೂ ಕ್ಷೀರಸಾಗರದ ತೀರದಲ್ಲಿವೆ. ಅವುಗಳನ್ನು ತರಲು ಈಗಲೇ ಸಂಪಾತಿ, ಪನಸ–ಮುಂತಾದ ವಾನರಶ್ರೇಷ್ಠರು ಶೀಘ್ರವಾಗಿ ಕ್ಷೀರಸಮುದ್ರದ ತೀರಕ್ಕೆ ಹೋಗಲಿ. ಅಲ್ಲಿಯೇ ಸಮೀಪದಲ್ಲಿರುವ ಪರ್ವತದಲ್ಲಿ ದೇವನಿರ್ಮಿತ

ವಾದ ಸಂಜೀವಕರಣೀ ಮತ್ತು ವಿಶಲ್ಯಾ–ಎಂಬ ದಿವ್ಯೌಷಧಗಳಿವೆ. ವಾನರರಿಗೂ ಆ ದಿವ್ಯೌಷಧಗಳು ಯಾವುವೆಂಬುದು ಗೊತ್ತಿದೆ.

ಸಮುದ್ರಗಳಲ್ಲಿ ಶ್ರೇಷ್ಠವಾದ ಕ್ಷೀರಸಮುದ್ರದ ತೀರದಲ್ಲಿ ಚಂದ್ರ ಮತ್ತು ದ್ರೋಣಗಳೆಂಬ ಪರ್ವತಗಳಿವೆ. ಹಿಂದೆ ಅಮೃತಕ್ಕಾಗಿ ಸಮುದ್ರವನ್ನು ಕಡೆದಿದ್ದು ಅಲ್ಲಿಯೇ. ಚಂದ್ರ-ದ್ರೋಣಪರ್ವತಗಳಲ್ಲಿಯೇ ಆ ಎರಡು ದಿವ್ಯೌಷಧಗಳೂ ಇವೆ. ದೇವತೆಗಳೇ ಆ ಎರಡು ಪರ್ವತಗಳನ್ನೂ ಮಹೋದಧಿಯ ತೀರದಲ್ಲಿ ಸಮುದ್ರವನ್ನು ಕಡೆಯಲು ಪ್ರತಿಷ್ಠಾಪಿಸಿದ್ದರು. ವಾಯುವಿನ ಮಗನಾದ ಈ ಹನುಮಂತನು ದಿವ್ಯೌಷಧಗಳನ್ನು ತರುವ ಸಲುವಾಗಿ ಈಗಲೇ ಅಲ್ಲಿಗೆ ಹೋಗಲಿ. ಉಳಿದ ವಾನರರಿಗಿಂತಲೂ ಇವನಲ್ಲಿಗೆ ವೇಗವಾಗಿ ಹೋಗಬಲ್ಲನು.”

ಹೀಗೆ ಸುಷೇಣನು ಹೇಳುತ್ತಿರುವಾಗಲೇ ಬಿರುಗಾಳಿಯು ಬೀಸತೊಡಗಿತು. ಮಿಂಚಿನಿಂದ ಕೂಡಿದ ಕಾರ್ಮುಗಿಲು ಕವಿಯಿತು. ಬಿರುಗಾಳಿಯು ಸಾಗರದ ಅಲೆಗಳನ್ನು ಹೊಡೆದೆಬ್ಬಿಸುತ್ತಾ ಪರ್ವತಗಳನ್ನೇ ನಡುಗಿಸುತ್ತಿರುವುದೋ ಎಂಬಂತೆ ಕಾಣುತ್ತಿದ್ದಿತು. ರೆಕ್ಕೆಗಳಿಂದ ಹೊರಬಿದ್ದ ಆ ಬಿರುಗಾಳಿಯು ಸಮಸ್ತದ್ವೀಪಗಳಲ್ಲಿಯೂ ಇದ್ದ ವೃಕ್ಷಗಳೆಲ್ಲವನ್ನೂ ರಭಸದಿಂದ ಬುಡಮೇಲು ಮಾಡಿ ಹಾರಿಸಿಕೊಂಡುಬಂದು ಉಪ್ಪುಸಮುದ್ರದ ನೀರಿನಲ್ಲಿ ಹಾಕಿತು. ಲಂಕೆಯಲ್ಲಿದ್ದ ಮಹಾಸರ್ಪಗಳು ಭಯದಿಂದ ನಡುಗಿಹೋದುವು. ಜಲಜಂತುಗಳೆಲ್ಲವೂ ಬಹಳ ಬೇಗ ಸಮುದ್ರದ ನೀರಿನಲ್ಲಿ ನುಸುಳಿದುವು. ಮುಹೂರ್ತಮಾತ್ರದಲ್ಲಿ ಪ್ರಜ್ವಲಿಸುತ್ತಿರುವ ಯಜ್ಞೇಶ್ವರನಂತೆಯೇ ಇದ್ದ, ಮಹಾಬಲಿಷ್ಠನಾದ, ವಿನತೆಯ ಮಗನಾದ ಗರುಡನನ್ನು ವಾನರರು ನೋಡಿದರು. ಅವನು ಬಂದುದನ್ನು ಕಾಣುತ್ತಲೇ ಆ ಪುರುಷಸಿಂಹರಿಬ್ಬರನ್ನೂ ಬಂಧಿಸಿದ್ದ ಬಾಣಗಳ ರೂಪದಲ್ಲಿದ್ದ ಮಹಾಸರ್ಪಗಳು ದಿಕ್ಕಾಪಾಲಾಗಿ ಓಡಿಹೋದುವು. ಬಳಿಕ ಗರುಡನು ರಾಮ-ಲಕ್ಷ್ಮಣರನ್ನು ಸ್ಪರ್ಶಿಸಿ ಅಭಿನಂದಿಸಿದನು. ಚಂದ್ರನ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕಂಗೊಳಿಸುತ್ತಿದ್ದ ಇಬ್ಬರ ಮುಖಗಳನ್ನೂ ಗರುಡನು ನೇವರಿಸಿದನು. ವೈನತೇಯನು ಹಾಗೆ ಸ್ಪರ್ಶಿಸುತ್ತಿದ್ದಂತೆಯೇ ಅಲ್ಲಿದ್ದ ಗಾಯಗಳೆಲ್ಲವೂ ಮಾಯ್ದುಹೋದುವು.

ಒಡನೆಯೇ ಅವರ ಶರೀರಗಳು ಸುಂದರವಾದ ಕಾಂತಿಯಿಂದ ಕೂಡಿ ಸುಮನೋಹರವಾಗಿ ಕಾಣತೊಡಗಿದುವು.

ತೇಜೋ ವೀರ್ಯಂ ಬಲಂ ಚೌಜ ಉತ್ಸಾಹಶ್ಚ ಮಹಾಗುಣಃ ।
ಪ್ರದರ್ಶನಂ ಚ ಬುದ್ಧಿಶ್ಚ ಸ್ಮೃತಿಶ್ಚ ದ್ವಿಗುಣಂ ತಯೋಃ ॥೪೦॥

ನಾಗಪಾಶದ ವಿಮೋಚನೆಯಿಂದಲೂ ಗರುಡನ ಸ್ಪರ್ಶದಿಂದಲೂ ಆ ಇಬ್ಬರು ರಾಜಕುಮಾರರ ತೇಜಸ್ಸು, ವೀರ್ಯ, ಬಲ, ಓಜಸ್ಸು, ಉತ್ಸಾಹ, ಬುದ್ಧಿ ಮತ್ತು ಸ್ಮರಣಶಕ್ತಿಗಳು ಇಮ್ಮಡಿಯಾದುವು.

ಇಂದ್ರಸದೃಶರಾಗಿದ್ದ ಮತ್ತು ಮಹಾತೇಜಸ್ವಿಗಳಾಗಿದ್ದ ರಾಮ-ಲಕ್ಷ್ಮಣ ರನ್ನು ಗರುಡನು ಹಿಡಿದೆಬ್ಬಿಸಿ ಇಬ್ಬರನ್ನೂ ಆಲಿಂಗನೆಮಾಡಿಕೊಂಡನು. ಅದರಿಂದ ಪರಮಸಂತುಷ್ಟನಾದ ಶ್ರೀರಾಮನು ಗರುಡನಿಗೆ ಹೇಳಿದನು :

"ಉಪಾಯಜ್ಞನಾದ ನಿನ್ನ ಕೃಪೆಯಿಂದಾಗಿ ನಾವು ಇಂದ್ರಜಿತುವಿನಿಂದ ಉಂಟಾಗಿದ್ದ ಮಹಾಭಯದಿಂದ ಪಾರಾದೆವು. ಬಹಳ ಬೇಗ ವಿಪತ್ತನ್ನು ಕಳೆದುಕೊಂಡು ಹಿಂದಿನಂತೆಯೇ ಮಹಾಬಲಿಷ್ಠರೂ ಆದೆವು.

ಯಥಾ ತಾತಂ ದಶರಥಂ ಯಥಾಜಂ ಚ ಪಿತಾಮಹಮ್ ।
ತಥಾ ಭವನ್ತಮಾಸಾದ್ಯ ಹೃದಯಂ ಮೇ ಪ್ರಸೀದತಿ ॥೪೩॥

ತಂದೆಯಾದ ದಶರಥನಲ್ಲಿ, ಅಜ್ಜನಾದ ಅಜನಲ್ಲಿ ನನ್ನ ಮನಸ್ಸು ಎಷ್ಟು ಪ್ರಸನ್ನವಾಗುತ್ತಿದ್ದಿತೋ–ಅಷ್ಟೇ ಮನಃಪ್ರಸನ್ನತೆಯು ನಿನ್ನ ಸಮಾಗಮ ದಿಂದಲೂ ನನಗುಂಟಾಗಿದೆ.

ಕೋ ಭವಾನ್ರೂಪಸಂಪನ್ನೋ ದಿವ್ಯಸ್ರಗನುಲೇಪನಃ ।
ವಸಾನೋ ವಿರಜೇ ವಸ್ತ್ರೇ ದಿವ್ಯಾಭರಣಭೂಷಿತಃ ॥೪೪॥

ರೂಪಸಂಪನ್ನನಾಗಿರುವ, ದಿವ್ಯವಾದ ಮಾಲೆಯನ್ನು ಧರಿಸಿರುವ, ದಿವ್ಯವಾದ ಅಂಗರಾಗದಿಂದ ಸುವಾಸಿತನಾಗಿರುವ, ಶುಭ್ರವಾದ ವಸ್ತ್ರವನ್ನುಟ್ಟಿ ರುವ, ದಿವ್ಯವಾದ ಆಭರಣಗಳಿಂದ ಭೂಷಿತನಾಗಿರುವ ನೀನಾರೆಂಬುದನ್ನು ತಿಳಿಯಬಯಸುತ್ತೇನೆ."

ಆನಂದಬಾಷ್ಪಗಳನ್ನು ಸುರಿಸುತ್ತಾ ಹೀಗೆ ಪ್ರಶ್ನಿಸಿದ ಶ್ರೀರಾಮನಿಗೆ ಮಹಾತೇಜಸ್ವಿಯಾದ, ವಿನತೆಯ ಮಗನಾದ, ಮಹಾಬಲಿಷ್ಠನಾದ, ಪಕ್ಷಿರಾಜನಾದ ಗರುಡನು ಪ್ರೀತಾತ್ಮನಾಗಿ, ಉತ್ತರಿಸಿದನು :

"ಕಾಕುತ್ಥ! ನಾನು ನಿನ್ನ ಪ್ರಿಯಸಖನು. ಹೊರಗೆ ಸಂಚರಿಸುವ ನಿನ್ನ ಪ್ರಾಣಸ್ವರೂಪನಾಗಿದ್ದೇನೆ. ಗರುತ್ಮಂತನೆಂದು ಪ್ರಸಿದ್ಧನಾಗಿರುವ ನಾನು ನಿಮಗೆ ಸಹಾಯಮಾಡಲೆಂದೇ ಇಲ್ಲಿಗೆ ಆಗಮಿಸಿದೆನು.

ಅಸುರಾ ವಾ ಮಹಾವೀರ್ಯಾ ದಾನವಾ ವಾ ಮಹಾಬಲಾಃ ।
ಸುರಾಶ್ಚಾಪಿ ಸಗನ್ಧರ್ವಾಃ ಪುರಸ್ಕೃತ್ಯ ಶತಕ್ರತುಮ್ ।
ನೇಮಂ ಮೋಕ್ಷಯಿತುಂ ಶಕ್ತಾಃ ಶರಬನ್ಧಂ ಸುದಾರುಣಮ್ ॥೪೭॥

ಮಹಾಪರಾಕ್ರಮಿಗಳಾದ ಅಸುರರೇ ಆಗಲೀ, ಮಹಾಬಲರಾದ ದಾನ ವರೇ ಆಗಲೀ, ಇಂದ್ರಪ್ರಮುಖರಾದ ಗಂಧರ್ವರಿಂದೊಡಗೂಡಿದ ದೇವತೆಗಳೇ

ಆಗಲೀ ಸುದಾರುಣವಾದ ಬಾಣರೂಪವಾದ ಈ ಸರ್ಪಬಂಧನವನ್ನು ಬಿಡಿಸಲು ಸಮರ್ಥರಲ್ಲ.

ಕ್ರೂರಕರ್ಮಿಯಾದ ಇಂದ್ರಜಿತುವು ಮಾಯಾಬಲವನ್ನು ಆಶ್ರಯಿಸಿ ನಾಗರೂಪವಾದ ಬಾಣಗಳ ಬಂಧನವನ್ನು ಕಲ್ಪಿಸಿದ್ದನು. ಕದ್ರುವಿನ ಮಕ್ಕಳಾದ ಈ ಸರ್ಪಗಳು ತೀಕ್ಷ್ಣವಾದ ಹಲ್ಲುಗಳನ್ನು ಹೊಂದಿವೆ. ಭಯಂಕರವಾದ ವಿಷದಿಂದ ಕೂಡಿವೆ. ಈ ನಾಗಗಳು ರಾಕ್ಷಸನ ಮಾಯಾಪ್ರಭಾವದಿಂದಾಗಿ ಬಾಣಗಳ ರೂಪವನ್ನು ತಾಳಿ ನಿನ್ನನ್ನು ಆಶ್ರಯಿಸಿದ್ದುವು. ಧರ್ಮಜ್ಞನೇ! ಸತ್ಯಪರಾಕ್ರಮಿಯೇ! ರಾಘವ! ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸುವ, ಲಕ್ಷ್ಮಣನಿಂದ ಕೂಡಿರುವ ನೀನು ನಿಶ್ಚಯವಾಗಿಯೂ ಭಾಗ್ಯ ಶಾಲಿಯೇ ಸರಿ. ಭಾಗ್ಯದ ಕಾರಣದಿಂದಲೇ ನೀವಿಬ್ಬರೂ ನಾಗಪಾಶದಿಂದ ಮುಕ್ತರಾಗಿರುವಿರಿ. ನೀವಿಬ್ಬರೂ ನಾಗಪಾಶದಿಂದ ಬಂಧಿಸಲ್ಪಟ್ಟಿರುವ ವಾರ್ತೆಯನ್ನು ದೇವತೆಗಳಿಂದ ತಿಳಿದು ಬಹಳ ಶೀಘ್ರವಾಗಿಯೇ ಇಲ್ಲಿಗೆ ಬಂದೆನು. ನಮ್ಮಿಬ್ಬರಿಗೂ ಇರುವ ನಿಕಟವಾದ ಸ್ನೇಹದ ಕಾರಣದಿಂದಲೂ ಮತ್ತು ಮಿತ್ರಧರ್ಮವನ್ನು ಪರಿಪಾಲಿಸುವ ಸಲುವಾಗಿಯೂ ನಾನಿಲ್ಲಿಗೆ ಬಂದೆನು. ಮಹಾಘೋರವಾದ ಈ ಬಾಣಬಂಧನದಿಂದ ನೀವಿಬ್ಬರೂ ಬಿಡುಗಡೆ ಹೊಂದಿರುವಿರಿ. ನೀವಿಬ್ಬರೂ ಇನ್ನು ಮುಂದೆ ಸರ್ವಕಾಲದಲ್ಲಿಯೂ ಅಪ್ರಮತ್ತರಾಗಿರಬೇಕು. ಸ್ವಾಭಾವಿಕವಾಗಿಯೇ ಎಲ್ಲ ರಾಕ್ಷಸರೂ ಯುದ್ಧದಲ್ಲಿ ಕಪಟಯೋಧಿಗಳೇ ಸರಿ. ಆದರೆ ಶೂರರಾದ, ಶುದ್ಧಾಂತಃಕರಣವಿರುವ ನಿಮಗೆ ಸರಳತೆಯೇ ಮುಖ್ಯವಾದ ಬಲವಾಗಿರುತ್ತದೆ. ಈಗ ನಿನಗಾಗಿರು ವುದನ್ನೇ ನಿದರ್ಶನವನ್ನಾಗಿಟ್ಟುಕೊಂಡು ರಣರಂಗದಲ್ಲಿ ರಾಕ್ಷಸರನ್ನೆಂದಿಗೂ ನಂಬಬಾರದು. ಏಕೆಂದರೆ : 'ನಿತ್ಯಂ ಜಿಹ್ಮಾ ಹಿ ರಾಕ್ಷಸಾಃ'–ರಾಕ್ಷಸರು ಯಾವಾಗಲೂ ಕುಟಿಲತೆಯಿಂದಲೇ ವರ್ತಿಸತಕ್ಕವರಾಗಿರುತ್ತಾರೆ."

ಮಹಾಬಲಿಷ್ಠನಾದ ಶ್ರೀರಾಮನಿಗೆ ಹೀಗೆ ಹೇಳಿ ಗರುಡನು ಪರಮ ಸ್ನೇಹಿತನಾದ ಅವನನ್ನು ಮತ್ತೊಮ್ಮೆ ಗಾಢವಾಗಿ ಆಲಿಂಗಿಸಿಕೊಂಡು ಹೊರಡಲು ಅನುಮತಿಯನ್ನು ಪ್ರಾರ್ಥಿಸುತ್ತಾ ಹೇಳಿದನು :

ಸಖೇ ರಾಘವ ಧರ್ಮಜ್ಞ ರಿಪೂಣಾಮಪಿ ವತ್ಸಲ ।
ಅಭ್ಯನುಜ್ಞಾತುಮಿಚ್ಛಾಮಿ ಗಮಿಷ್ಯಾಮಿ ಯಥಾಗತಮ್ ॥೫೬॥

"ಶತ್ರುಗಳ ವಿಷಯದಲ್ಲಿಯೂ ವಾತ್ಸಲ್ಯಭಾವದಿಂದ ಕೂಡಿರುವವನೇ! ಧರ್ಮಜ್ಞನೇ! ಸಖನೇ! ರಾಘವ! ನಾನಿನ್ನು ಬಂದಸ್ಥಳಕ್ಕೆ ಪ್ರಯಾಣ ಮಾಡುತ್ತೇನೆ. ಅದಕ್ಕಾಗಿ ನಿನ್ನ ಅನುಮತಿಯನ್ನು ಪ್ರಾರ್ಥಿಸುತ್ತೇನೆ.

ನ ಚ ಕೌತೂಹಲಂ ಕಾರ್ಯಂ ಸಖಿತ್ವಂ ಪ್ರತಿ ರಾಘವ ।
ಕೃತಕರ್ಮಾ ರಣೇ ವೀರ ಸಖಿತ್ವಮನುವೇತ್ಸ್ಯಸಿ ॥೫೭॥

ವೀರನೇ! ರಾಘವ! ನಮ್ಮಿಬ್ಬರ ಪರಸ್ಪರ ಸ್ನೇಹಸಂಬಂಧವು ಹೇಗೆಂಬುದರ ಬಗೆಗೆ ನೀನು ಕುತೂಹಲಪಡಬೇಕಾಗಿಲ್ಲ. ಯುದ್ಧದಲ್ಲಿ ಜಯಗಳಿಸಿದ ನಂತರ ಈ ಮಿತ್ರತ್ವದ ರಹಸ್ಯವನ್ನು ನೀನೇ ತಿಳಿಯುವೆ.

ಅಲೆಗಳಂತೆ ಪುಂಖಾನುಪುಂಖವಾಗಿ ಬರುವ ಬಾಣಗಳ ಸಮುದಾಯ ದಿಂದ ಬಾಲ-ವೃದ್ಧರನ್ನು ಮಾತ್ರ ಉಳಿಸಿ ಲಂಕೆಯಲ್ಲಿರುವ ಎಲ್ಲ ಯೋಧ ರನ್ನೂ ಮತ್ತು ರಾವಣನನ್ನೂ ಸಂಹರಿಸಿ ಸೀತಾದೇವಿಯನ್ನು ನೀನು ಪಡೆದು ಕೊಳ್ಳುವೆ."

ಶೀಘ್ರಪರಾಕ್ರಮಿಯಾದ ಸುಪರ್ಣನು ಹೀಗೆ ಹೇಳಿ ವಾನರರ ಮಧ್ಯ ದಲ್ಲಿದ್ದ ಶ್ರೀರಾಮನನ್ನು ವೇದನಾರಹಿತನನ್ನಾಗಿ ಮಾಡಿ ಶ್ರೀರಾಮನಿಗೆ ಪ್ರದಕ್ಷಿಣೆಯನ್ನು ಮಾಡಿ ಪುನಃ ಗಾಢವಾಗಿ ಆಲಿಂಗಿಸಿಕೊಂಡು ವಾಯುವಿ ನಂತೆ ಆಕಾಶದ ಕಡೆಗೆ ಹಾರಿಹೋದನು.

ರಾಮ-ಲಕ್ಷ್ಮಣರ ಗಾಯಗಳೆಲ್ಲವೂ ಗರುಡನ ಸ್ಪರ್ಶದಿಂದ ವಾಸಿಯಾ ದುದನ್ನು ಕಂಡು ವಾನರದಳಪತಿಗಳು ಗಟ್ಟಿಯಾಗಿ ಸಿಂಹನಾದಮಾಡುತ್ತಾ ಬಾಲಗಳನ್ನು ಮೇಲಕ್ಕೆತ್ತಿ ಅಳ್ಳಾಡಿಸುತ್ತಾ ಆನಂದತುಂದಿಲರಾಗಿ ಭೇರಿಗಳನ್ನೂ ಮೃದಂಗಗಳನ್ನೂ ಬಾರಿಸತೊಡಗಿದರು. ಶಂಖಗಳನ್ನು ಊದತೊಡಗಿದರು. ಹಿಂದಿನಂತೆಯೇ ಗರ್ಜಿಸತೊಡಗಿದರು. ವೃಕ್ಷಗಳನ್ನು ಮುರಿದುಕೊಂಡು ಯುದ್ಧಮಾಡುತ್ತಿದ್ದ ಮಹಾಪರಾಕ್ರಮಿಗಳಾದ ನಗ ಯೋಧಿಗಳಾದ ವಾನರರು ವಿಧ-ವಿಧವಾದ ಮರಗಳನ್ನು ಬುಡಸಹಿತ ಕಿತ್ತು ಕೊಂಡು ಲಕ್ಷ-ಲಕ್ಷ ಸಂಖ್ಯೆಯಲ್ಲಿ ಯುದ್ಧಸನ್ನದ್ಧರಾಗಿ ನಿಂತರು. ಗಟ್ಟಿಯಾಗಿ ಗರ್ಜನೆಗಳನ್ನು ಮಾಡುತ್ತಾ ರಾಕ್ಷಸರನ್ನು ಭಯಗೊಳಿಸುತ್ತಾ ಯುದ್ಧ ಮಾಡುವ ಅಪೇಕ್ಷೆಯಿಂದ ಲಂಕೆಯ ಮಹಾದ್ವಾರದ ಬಳಿಗೆ ಹೋದರು.

ಗ್ರೀಷ್ಮರ್ತುವಿನ ಕೊನೆಯ ಮಧ್ಯರಾತ್ರಿಗಳಲ್ಲಿ ಗರ್ಜಿಸುತ್ತಿರುವ ಮೇಘಗಳ ಭಯಂಕರವಾದ ಗರ್ಜನೆಯು ಎಲ್ಲ ಕಡೆಗಳಲ್ಲಿಯೂ ಪ್ರತಿಧ್ವನಿತವಾಗುವಂತೆ–ಶಾಖಾಮೃಗದಳಪತಿಗಳ ಭಯಂಕರವಾದ ಗರ್ಜನೆಯು ಸರ್ವತ್ರ ಪ್ರತಿಧ್ವನಿಸಿತು.

೫೦ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೫೧ನೆಯ ಸರ್ಗ

ಶ್ರೀರಾಮ-ಲಕ್ಷ್ಮಣರು ಬಂಧಮುಕ್ತರಾದರೆಂಬ ವಾರ್ತೆಯನ್ನು ಕೇಳಿ ಚಿಂತಿತನಾದ ರಾವಣನು ಧೂಮ್ರಾಕ್ಷನನ್ನು ಯುದ್ಧಕ್ಕೆ ಕಳುಹಿಸಿಕೊಟ್ಟುದು

ತೇಷಾಂ ಸುತುಮುಲಂ ಶಬ್ದಂ ವಾನರಾಣಾಂ ತರಸ್ವಿನಾಮ್ ।
ನರ್ದತಾಂ ರಾಕ್ಷಸೈಃ ಸಾರ್ಧಂ ತದಾ ಶುಶ್ರಾವ ರಾವಣಃ ॥೧॥

ಗಟ್ಟಿಯಾಗಿ ಗರ್ಜನೆಮಾಡುತ್ತಿದ್ದ ಮಹಾವೇಗಶಾಲಿಗಳಾದ ವಾನರರ ಕೋಲಾಹಲಶಬ್ದವನ್ನು ರಾಕ್ಷಸರೊಡನಿದ್ದ ರಾವಣನು ಕೇಳಿದನು.

ಒಟ್ಟುಗೂಡಿ ಮಾಡುತ್ತಿದ್ದ, ಗಂಭೀರವಾದ ಘೋಷಣೆಯನ್ನೂ ಮತ್ತು ಸಿಂಹನಾದಗಳನ್ನೂ ಕೇಳಿ ಸಚಿವರ ಮಧ್ಯದಲ್ಲಿದ್ದ ರಾವಣನು ಹೇಳಿದನು :

"ಸಚಿವೋತ್ತಮರೇ! ಗುಡುಗುತ್ತಿರುವ ಮೇಘಗಳಂತೆ ಸಂಪ್ರಹೃಷ್ಟರಾದ ವಾನರರ ಮಹಾನಿನಾದವು ಮುಗಿಲಿಗೇರುತ್ತಿದೆ. ಈ ಗರ್ಜನೆಗಳನ್ನು ಕೇಳಿದರೆ ಇವರಿಗೆ ಮಹಾಸಂತೋಷವುಂಟಾಗಿರುವುದೆಂಬುದರಲ್ಲಿ ಸಂಶಯವೇ ಇಲ್ಲ. ಇವರ ಮಹಾಗರ್ಜನೆಗಳಿಂದ ಸಮುದ್ರವು ಕೂಡ ಅಲ್ಲೋಲ-ಕಲ್ಲೋಲವಾಗಿದೆ. ರಾಮ-ಲಕ್ಷ್ಮಣರಿಬ್ಬರೂ ತೀಕ್ಷ್ಣವಾದ ಬಾಣಗಳಿಂದ ಬಂಧಿಸಲ್ಪಟ್ಟಿದ್ದಾರೆ. ಇತ್ತಲಾಗಿ ವಾನರಸೈನಿಕರ ಹರ್ಷನಿನಾದಗಳು ಕೇಳಿ ಬರುತ್ತಿವೆ. ಇದನ್ನು ಗಮನಿಸಿ ನನ್ನ ಮನಸ್ಸಿನಲ್ಲಿ ಸಂಶಯವುಂಟಾಗಿದೆ."

ರಾವಣನು ಮಂತ್ರಿಗಳಿಗೆ ಹೀಗೆ ಹೇಳಿ ತನ್ನ ಸಮೀಪದಲ್ಲಿ ತಿರುಗಾಡುತ್ತಿದ್ದ ರಾಕ್ಷಸರಿಗೆ ಹೇಳಿದನು :

"ರಾಮ-ಲಕ್ಷ್ಮಣರ ಬಂಧನದಿಂದಾಗಿ ವಾನರರೆಲ್ಲರೂ ಶೋಕಾಕುಲ

ರಾಗಿದ್ದರು. ಈಗಲಾದರೋ ಅವರು ಹರ್ಷೋತ್ಸಾಹಗಳಿಂದ ಗರ್ಜನೆ ಮಾಡುತ್ತಿದ್ದಾರೆ. ಇದಕ್ಕೆ ಕಾರಣವೇನೆಂಬುದನ್ನು ಕೂಡಲೇ ತಿಳಿದುಬನ್ನಿರಿ."

ರಾವಣನ ಆ ಮಾತುಗಳನ್ನು ಕೇಳಿ ರಾಕ್ಷಸರಿಗೂ ಗಾಬರಿಯಾಯಿತು. ಒಡನೆಯೇ ಅವರು ಪ್ರಾಕಾರದ ಮೇಲೇರಿ ಮಹಾತ್ಮನಾದ ಸುಗ್ರೀವನಿಂದ ಪರಿಪಾಲಿತವಾಗಿದ್ದ ವಾನರಸೈನ್ಯವನ್ನು ನೋಡಿದರು. ಅಂತೆಯೇ ಸುಘೋರವಾದ ಶರಬಂಧನದಿಂದ ಮುಕ್ತರಾಗಿ ಮೇಲೆದ್ದು ಕುಳಿತಿದ್ದ ಮಹಾಭಾಗ್ಯಶಾಲಿಗಳಾಗಿದ್ದ ರಾಮ-ಲಕ್ಷ್ಮಣರನ್ನೂ ನೋಡಿದರು. ಅದರಿಂದ ಎಲ್ಲ ರಾಕ್ಷಸರೂ ವಿಷಣ್ಣರಾದರು. ಭಯಗೊಂಡ ಮನಸ್ಸಿನಿಂದ ಕೂಡಿದ್ದ ಅವರೆಲ್ಲರೂ ಪ್ರಾಕಾರದಿಂದಿಳಿದು ದೀನವದನರಾಗಿ ರಾವಣನ ಬಳಿಗೆ ಬಂದರು. ಕಂಗೆಟ್ಟ ಮುಖಭಾವದಿಂದ ಕೂಡಿದ್ದ, ಮಾತನಾಡುವುದರಲ್ಲಿ ಚತುರರಾಗಿದ್ದ ಆ ರಾಕ್ಷಸರು ಅಪ್ರಿಯವಾದ ವಾರ್ತೆಯನ್ನು ಸಮಗ್ರವಾಗಿ ಮತ್ತು ಯಥಾ ವತ್ತಾಗಿ ಹೇಳತೊಡಗಿದರು :

"ಮಹಾಪ್ರಭುವೇ! ಇಂದ್ರಜಿತುವಿನಿಂದ ಯಾವ ರಾಮ-ಲಕ್ಷ್ಮಣರು ಯುದ್ಧರಂಗದಲ್ಲಿ ನಾಗರೂಪವಾದ ಬಾಣಗಳಿಂದ ತೋಳುಗಳನ್ನು ಅಳ್ಳಾಡಿಸಲಾಗದ ರೀತಿಯಲ್ಲಿ ಬಂಧಿಸಲ್ಪಟ್ಟಿದ್ದರೋ–ಅಂತಹ ಗಜರಾಜಸದೃಶ ಪರಾಕ್ರಮಿಗಳಾದ ಇಬ್ಬರು ವೀರರೂ ನಾಗಪಾಶಗಳಿಂದ ಬಿಡುಗಡೆ ಹೊಂದಿ–ಹಗ್ಗವನ್ನು ಕಿತ್ತುಕೊಂಡು ಸ್ವತಂತ್ರವಾದ ಗಜೇಂದ್ರನಂತೆ ಸ್ವತಂತ್ರರಾಗಿರುವಂತೆ ಕಾಣುತ್ತಿದ್ದಾರೆ."

ರಾಕ್ಷಸರ ಆ ಮಾತನ್ನು ಕೇಳಿ ಮಹಾಬಲನಾದ, ರಾಕ್ಷಸೇಂದ್ರನು ಚಿಂತಾಶೋಕಗಳಿಗೆ ಗುರಿಯಾದನು. ಅವನ ಮುಖವೂ ವಿವರ್ಣವಾಯಿತು.

"ಇಂದ್ರಜಿತುವಿಗೆ ವರದಾನದಿಂದ ಪ್ರಾಪ್ತವಾಗಿದ್ದ ಆ ಬಾಣಗಳು ಅತ್ಯಂತಭಯಂಕರವಾಗಿದ್ದುವು. ವಿಷಸರ್ಪಗಳಂತೆಯೇ ಇದ್ದುವು. ಅಮೋಘವಾಗಿದ್ದುವು. ಸೂರ್ಯಸದೃಶವಾಗಿದ್ದುವು. ಅಂತಹ ಅದ್ಭುತವಾದ ಬಾಣಗಳಿಂದ ಯುದ್ಧದಲ್ಲಿ ಇಂದ್ರಜಿತುವು ರಾಮ-ಲಕ್ಷ್ಮಣರನ್ನು ಬಂಧಿಸಿದ್ದನು. ಪ್ರಾಣಾಂತಿಕವಾದ ಅಂತಹ ಅಮೋಘಬಾಣಗಳಿಂದ ಬಂಧಿಸಲ್ಪಟ್ಟಿದ್ದ ರಾಮ-ಲಕ್ಷ್ಮಣರು ಬಿಡುಗಡೆಯನ್ನು ಹೊಂದಿದರೆಂದಮೇಲೆ–ನನ್ನ ಸಮಸ್ತ

ಸೇನೆಯೂ ಪ್ರಾಣಾಪಾಯದ ಅಂಚಿನಲ್ಲೇ ಇರುವುದೆಂದು ನಾನು ಭಾವಿಸುತ್ತೇನೆ. ಅಗ್ನಿಯ ತೇಜಸ್ಸಿನಿಂದ ಕೂಡಿದ್ದ ಯಾವ ನನ್ನ ಬಾಣಗಳು ನಿಶ್ಚಯವಾಗಿಯೂ ಶತ್ರುಗಳ ಪ್ರಾಣಗಳನ್ನೇ ಅಪಹರಿಸುತ್ತಿದ್ದುವೋ–ಅವೀಗ ವ್ಯರ್ಥವಾಗಿಹೋದುವು."

ಕ್ರುದ್ಧನಾಗಿದ್ದ ರಾವಣನು ಹೀಗೆ ಹೇಳುತ್ತಾ ಸರ್ಪದಂತೆ ನೀಳವಾಗಿ ನಿಟ್ಟುಸಿರುಬಿಡುತ್ತಾ ರಾಕ್ಷಸರ ಮಧ್ಯದಲ್ಲಿದ್ದ ಧೂಮ್ರಾಕ್ಷನೆಂಬ ರಾಕ್ಷಸನಿಗೆ ಹೇಳಿದನು :

"ಭೀಮವಿಕ್ರಮನೇ! ಧೂಮ್ರಾಕ್ಷ! ವಾನರರೊಡನೆ ರಾಮನನ್ನು ಸಂಹರಿಸಲು ದೊಡ್ಡದಾದ ರಾಕ್ಷಸರ ಸೈನ್ಯವನ್ನು ತೆಗೆದುಕೊಂಡು ಈಗಲೇ ರಣರಂಗಕ್ಕೆ ಹೋಗು."

ಧೀಮಂತನಾದ ರಾವಣನು ಹೀಗೆ ಹೇಳಲು ಧೂಮ್ರಾಕ್ಷನು ಹಾಗೆಯೇ ಆಗಲೆಂದು ಹೇಳಿ ರಾವಣನಿಗೆ ಪ್ರದಕ್ಷಿಣೆಮಾಡಿ ರಾಜಭವನದಿಂದ ಹೊರಹೊರಟನು. ರಾಜಗೃಹದ ಮಹಾದ್ವಾರದ ಬಳಿಗೆ ಬಂದು ಅಲ್ಲಿದ್ದ ಸೇನಾಪತಿಯೊಡನೆ ಹೇಳಿದನು :

"ಬಲಾಧ್ಯಕ್ಷನೇ! ಸೈನ್ಯವನ್ನು ಬೇಗ ಸಜ್ಜುಗೊಳಿಸು. ಯುದ್ಧ ಮಾಡಲು ಬಯಸುವವನು ಸಾವಕಾಶವನ್ನೇಕೆ ಮಾಡಬೇಕು?"

ಧೂಮ್ರಾಕ್ಷನ ಮಾತನ್ನು ಕೇಳಿ ಅನೇಕ ಸೈನಿಕರಿಂದ ಅನುಸರಿಸಲ್ಪಟ್ಟಿದ್ದ ಬಲಾಧ್ಯಕ್ಷನು ರಾವಣನ ಆಜ್ಞೆಯಂತೆ ಅಪಾರಸಂಖ್ಯೆಯಲ್ಲಿ ರಾಕ್ಷಸಸೈನಿಕ ರನ್ನು ಯುದ್ಧಕ್ಕಾಗಿ ಬಹಳ ಬೇಗ ಸಜ್ಜುಗೊಳಿಸಿದನು. ಬಲಿಷ್ಠರಾಗಿದ್ದ, ಭಯಂಕರರೂಪಿಗಳಾಗಿದ್ದ, ಅತ್ಯಂತಸಂಹೃಷ್ಟರಾಗಿದ್ದ ರಾಕ್ಷಸರು ಸೊಂಟಕ್ಕೆ ಗಂಟೆಗಳನ್ನು ಕಟ್ಟಿಕೊಂಡು ಶೂಲ-ಮುದ್ಗರಗಳೇ ಮೊದಲಾದ ವಿಧ-ವಿಧ ವಾದ ಆಯುಧಗಳನ್ನು ಕೈಗಳಲ್ಲಿ ಹಿಡಿದು ಗರ್ಜನೆಮಾಡುತ್ತಾ ಧೂಮ್ರಾಕ್ಷ ನನ್ನು ಸುತ್ತುವರಿದು ನಿಂತರು.

ಭಯಂಕರರಾದ ರಾಕ್ಷಸರು ಗದಾ-ಪಟ್ಟಿಶ-ಲೋಹದಂಡ-ಮುಸಲ-ಪರಿಘ-ಭಿಂದಿಪಾಲ-ಭಲ್ಲ-ಪಾಶ-ಪರಶ್ವಧ–ಇವೇ ಮುಂತಾದ ಆಯುಧಗಳಿಂದ ಕೂಡಿದವರಾಗಿ ಮೇಘಗಳೋಪಾದಿಯಲ್ಲಿ ಗರ್ಜಿಸುತ್ತಾ ರಣರಂಗಕ್ಕೆ ಹೊರ

ಟರು. ಕೆಲವು ಸೈನಿಕರು ಕವಚಗಳನ್ನು ಧರಿಸಿ, ಧ್ವಜಗಳಿಂದ ಸಮಲಂಕೃತ ವಾಗಿದ್ದ, ಸುವರ್ಣಮಯವಾದ ಬಲೆಗಳಿಂದ ಕೂಡಿದ್ದ ರಥಗಳಲ್ಲಿ ಹೊರ ಟರು. ಕೆಲವರು ಹಲವಾರು ಬಗೆಯ ಮುಖಗಳನ್ನು ಹೊಂದಿದ್ದ ಕತ್ತೆಗಳ ಮೇಲೆ ಕುಳಿತು ಯುದ್ಧಕ್ಕೆ ಹೊರಟರು. ಕೆಲವರು ಶೀಘ್ರಗಾಮಿಗಳಾದ ಕುದುರೆಗಳ ಮೇಲೂ ಮದಿಸಿದ್ದ ಆನೆಗಳ ಮೇಲೂ ಕುಳಿತು ಯುದ್ಧಕ್ಕೆ ಹೊರಟರು. ಹೀಗೆ ಎದುರಿಸಲು ಅಸಾಧ್ಯವಾದ ಸಿಂಹಗಳಂತೆಯೇ ಇದ್ದ ರಾಕ್ಷಸಸಿಂಹರು ಧೂಮ್ರಾಕ್ಷನೊಡನೆ ನಗರದಿಂದ ಹೊರಹೊರಟರು.

ಕತ್ತೆಯ ಧ್ವನಿಯಂತೆಯೇ ಅರಚುತ್ತಾ ಗರ್ಜನೆಮಾಡುತ್ತಿದ್ದ ಧೂಮ್ರಾಕ್ಷನು ತೋಳ-ಸಿಂಹಗಳ ಮುಖಗಳಿರುವ, ಸುವರ್ಣಾಭರಣ ಭೂಷಿತವಾದ ಕತ್ತೆಗಳಿಂದ ಸಜ್ಜಾಗಿದ್ದ ರಥವನ್ನು ಹತ್ತಿದನು. ರಾಕ್ಷಸರಿಂದ ಸಮಾವೃತನಾಗಿದ್ದ ಮಹಾವೀರ್ಯನಾದ ಧೂಮ್ರಾಕ್ಷನು ಅಟ್ಟಹಾಸದಿಂದ ನಗುತ್ತಾ ಹನುಮಂತನು ಆಕ್ರಮಿಸಿದ್ದ ಪಶ್ಚಿಮದಿಕ್ಕಿನ ಹೆಬ್ಬಾಗಿಲಿನ ಮೂಲಕ ವಾಗಿ ಹೊರಹೊರಟನು.

ಕತ್ತೆಗಳಿಂದ ಯುಕ್ತವಾಗಿದ್ದ ಶ್ರೇಷ್ಠವಾದ ರಥದಲ್ಲಿ ಕುಳಿತು ರಣ ರಂಗಕ್ಕೆ ಹೋಗುತ್ತಿದ್ದ, ಕತ್ತೆಯ ಧ್ವನಿಯಂತೆಯೇ ಧ್ವನಿಯುಳ್ಳವನಾಗಿದ್ದ, ಮಹಾಘೋರನಾದ, ಭಯಂಕರನಾಗಿ ಕಾಣುತ್ತಿದ್ದ ಧೂಮ್ರಾಕ್ಷನನ್ನು ಅಂತ ರಿಕ್ಷದಲ್ಲಿದ್ದ ಕ್ರೂರವಾದ ಪಕ್ಷಿಗಳು ಮುಂದೆಹೋಗದಂತೆ ತಡೆದುವು. ಮಹಾ ಭಯಂಕರವಾಗಿ ಕಾಣುತ್ತಿದ್ದ ರಣಹದ್ದು ರಥದ ಮೇಲ್ಭಾಗದಲ್ಲಿ ಬಿದ್ದಿತು. ಹೆಣಗಳನ್ನು ತಿನ್ನುವ ಪಕ್ಷಿಗಳು ಒಂದಕ್ಕೊಂದು ಸೇರಿಕೊಂಡಂತೆ ರಥದ ಧ್ವಜಾಗ್ರದಲ್ಲಿ ಬಿದ್ದುವು. ರಕ್ತದಿಂದ ತೋಯ್ದುಹೋಗಿದ್ದ, ಹೆಚ್ಚು ದೊಡ್ಡ ದಾಗಿದ್ದ, ಬಿಳಿ ಬಣ್ಣದ ಮುಂಡವೊಂದು ರಥದ ಮುಂಭಾಗದಲ್ಲಿ ಭೂಮಿಯ ಮೇಲೆ ಬಿದ್ದಿತು. ಅದು ಅಪಸ್ವರದಲ್ಲಿ ಚೀತ್ಕಾರಮಾಡುತ್ತಾ ಧೂಮ್ರಾಕ್ಷನ ಸಮೀಪದಲ್ಲಿಯೇ ಬಿದ್ದಿತು. ಪರ್ಜನ್ಯನು ರಕ್ತದ ಮಳೆಯನ್ನೇ ಸುರಿಸಿದನು. ಭೂಮಿಯು ನಡುಗತೊಡಗಿತು. ಸಿಡಿಲಿನ ಶಬ್ದಮಾಡುತ್ತಿದ್ದ ವಾಯುವು ರಥಕ್ಕೆ ಎದುರಾಗಿ ಬೀಸುತ್ತಿದ್ದಿತು. ಎಲ್ಲ ದಿಕ್ಕುಗಳೂ ಕತ್ತಲಿನಿಂದ ಕವಿದಿದ್ದ ಕಾರಣ ಯಾವುದೊಂದೂ ಕಾಣಿಸುತ್ತಿರಲಿಲ್ಲ. ರಾಕ್ಷಸರಿಗೆ ಭಯವನ್ನುಂಟು ಮಾಡುವುದಾಗಿದ್ದ ಸುಘೋರವಾದ ಉತ್ಪಾತಗಳು ಕಾಣಿಸಿಕೊಳ್ಳುತ್ತಿರು

ವುದನ್ನು ನೋಡಿ ಧೂಮ್ರಾಕ್ಷನು ದುಃಖಿತನಾದನು. ಅವನೊಡನಿದ್ದ ರಾಕ್ಷಸರೆಲ್ಲರೂ ಮೂರ್ಛಿತರಾದರು.

ಹೀಗೆ ಬಹುಸಂಖ್ಯಾತರಾದ ರಾಕ್ಷಸರಿಂದ ಸಮಾವೃತನಾಗಿದ್ದ, ರಣೋತ್ಸುಕನಾಗಿದ್ದ, ಬಲಶಾಲಿಯಾಗಿದ್ದ, ಮಹಾಭಯಂಕರನಾಗಿದ್ದ ಧೂಮ್ರಾಕ್ಷನು ನಗರದಿಂದ ಹೊರಹೊರಟು ಶ್ರೀರಾಮನ ಬಾಹುಬಲದಿಂದ ರಕ್ಷಿಸಲ್ಪಡುತ್ತಿದ್ದ, ಪ್ರಳಯಕಾಲದ ಸಮುದ್ರದಂತೆ ಅತ್ಯಂತ ವಿಶಾಲವಾಗಿದ್ದ ವಾನರಸೈನ್ಯವನ್ನು ವೀಕ್ಷಿಸಿದನು.

ೞ೧ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೫೨ನೆಯ ಸರ್ಗ

ವಾನರ-ಧೂಮ್ರಾಕ್ಷರ ಯುದ್ಧ: ಹನುಮಂತನಿಂದ ಧೂಮ್ರಾಕ್ಷನ ವಧೆ

ಧೂಮ್ರಾಕ್ಷಂ ಪ್ರೇಕ್ಷ್ಯ ನಿರ್ಯಾಂತಂ
ರಾಕ್ಷಸಂ ಭೀಮವಿಕ್ರಮಮ್ ।
ವಿನೇದುರ್ವಾನರಾಃ ಸರ್ವೇ
ಪ್ರಹೃಷ್ಟಾ ಯುದ್ಧಕಾಂಕ್ಷಿಣಃ ॥೧॥

ಭಯಂಕರಪರಾಕ್ರಮಿಯಾದ ಧೂಮ್ರಾಕ್ಷರಾಕ್ಷಸನು ನಗರದಿಂದ ಹೊರಕ್ಕೆ ಬರುತ್ತಿರುವುದನ್ನು ಕಂಡು ಯುದ್ಧಾಪೇಕ್ಷಿಗಳಾದ ಸರ್ವವಾನರರೂ ಹೆಚ್ಚು ಸಂತೋಷಗೊಂಡು ಸಿಂಹನಾದಗಳನ್ನು ಮಾಡಿದರು.

ಆ ಸಮಯದಲ್ಲಿ ವಾನರರಿಗೂ ರಾಕ್ಷಸರಿಗೂ ಅತಿಭಯಂಕರವಾದ ಯುದ್ಧವು ಪ್ರಾರಂಭವಾಯಿತು. ದೊಡ್ಡದಾದ ವೃಕ್ಷಗಳಿಂದಲೂ, ಭಯಂಕರವಾದ ಶೂಲ-ಮುದ್ಗರಾಯುಧಗಳಿಂದಲೂ ವಾನರ-ರಾಕ್ಷಸರು ಪರಸ್ಪರವಾಗಿ ಪ್ರಹರಿಸಲು ಪ್ರಾರಂಭಿಸಿದರು. ರಾಕ್ಷಸರು ನಾಲ್ಕು ಕಡೆಗಳಿಂದಲೂ ಸುತ್ತುವರಿದು ವಾನರಸೈನಿಕರನ್ನು ತುಂಡರಿಸಲು ಪ್ರಾರಂಭಿಸಿದರು. ಅಂತೆಯೇ ವಾನರರೂ ದೊಡ್ಡ-ದೊಡ್ಡ ವೃಕ್ಷಗಳಿಂದ ರಾಕ್ಷಸರನ್ನು ಬಡಿದು-ಬಡಿದು ಸಂಹರಿಸಿ ಭೂಮಿಯಲ್ಲಿ ಮಲಗಿಸುತ್ತಿದ್ದರು. ಅದರಿಂದ ಪರಮಕ್ರುದ್ಧರಾದ ರಾಕ್ಷಸರು ರಣಹದ್ದಿನ ರೆಕ್ಕೆಗಳುಳ್ಳ, ನೇರವಾಗಿ ಹೋಗುವ, ಘೋರವಾದ ಮತ್ತು ಹರಿತವಾದ ಬಾಣಗಳಿಂದ ವಾನರರನ್ನು ಗಾಯಗೊಳಿಸುತ್ತಿದ್ದರು.

ರಾಕ್ಷಸರ ಭಯಂಕರವಾದ ಗದೆಗಳಿಂದಲೂ, ಪಟ್ಟಿಶ-ಶೂಲ-ಮುದ್ಗರಗಳಿಂದಲೂ, ಭಯಂಕರವಾದ ಪರಿಘಾಯುಧಗಳಿಂದಲೂ, ವಿಚಿತ್ರವಾದ ತ್ರಿಶೂಲಗಳಿಂದಲೂ ಗಾಯಗೊಳಿಸಲ್ಪಡುತ್ತಿದ್ದ ಮಹಾಬಲಿಷ್ಠರಾದ ವಾನರರು ಅಸಹನೆಯಿಂದ ಯುದ್ಧೋತ್ಸಾಹವನ್ನು ಹೊಂದಿ ರಾಕ್ಷಸರ ಪ್ರಹಾರದಿಂದ ಸ್ವಲ್ಪವೂ ಭಯಗೊಳ್ಳದವರಂತೆ ಸಂಹಾರಕ್ರಿಯೆಯನ್ನು ಆರಂಭಿಸಿದರು. ಬಾಣಗಳಿಂದ ಭಿನ್ನವಾದ ಅವಯವಗಳಿಂದ ಕೂಡಿದ್ದ, ಶೂಲಗಳಿಂದ ಭಿನ್ನವಾದ ದೇಹವುಳ್ಳವರಾಗಿದ್ದ ದಳಪತಿಗಳು ರಣಭೂಮಿಯಲ್ಲಿ ಬಂಡೆಗಳನ್ನೂ ವೃಕ್ಷಗಳನ್ನೂ ಹಿಡಿದು ನಿಂತರು. ಭಯಂಕರವಾದ ವೇಗದಿಂದ ಕೂಡಿದ್ದ ವಾನರಸೈನಿಕರು ಗಟ್ಟಿಯಾಗಿ ಗರ್ಜನೆಮಾಡುತ್ತಾ ವೃಕ್ಷಗಳಿಂದಲೂ ಬಂಡೆಗಳಿಂದಲೂ ರಾಕ್ಷಸವೀರರನ್ನು ಜಜ್ಜಿಹಾಕುತ್ತಾ ತಮ್ಮ ನಾಮಧೇಯಗಳನ್ನು ಉದ್ಘೋಷಿಸುತ್ತಿದ್ದರು. ವಿಧ-ವಿಧವಾದ ಬಂಡೆಗಳಿಂದಲೂ ಹಲವಾರು ರೆಂಬೆಗಳುಳ್ಳ ವೃಕ್ಷಗಳಿಂದಲೂ ತುಂಬಿಹೋಗಿದ್ದ ಭಯಂಕರವಾದ ವಾನರ-ರಾಕ್ಷಸರ ಆ ಮಹಾಯುದ್ಧವು ಪರಮಾದ್ಭುತವಾಗಿ ಕಾಣುತ್ತಿದ್ದಿತು. ವಿಜಯೋಲ್ಲಾಸದಿಂದ ಸುಶೋಭಿತರಾಗಿದ್ದ ವಾನರರು ಕೆಲವು ರಾಕ್ಷಸರನ್ನು ಸಂಹರಿಸಿದರು. ರಕ್ತಪಾಯಿಗಳಾದ ಕೆಲವು ರಾಕ್ಷಸರು ಪೆಟ್ಟುತಿಂದು ಮುಖಗಳಿಂದ ರಕ್ತಕಾರುತ್ತಿದ್ದರು. ವಾನರರ ಪ್ರಹಾರದಿಂದಾಗಿ ಕೆಲವು ರಾಕ್ಷಸರ ಪಕ್ಕೆಗಳು ಮುರಿದುಹೋದುವು. ಕೆಲವರನ್ನು ವೃಕ್ಷಗಳಿಂದ ಸಂಹರಿಸಿ ಅವರೆಲ್ಲರನ್ನೂ ರಾಶಿ-ರಾಶಿಯಾಗಿ ಒಂದೆಡೆಯಲ್ಲಿ ಹಾಕಿದರು. ಕೆಲವರನ್ನು ಬಂಡೆಗಳಿಂದಲೇ ನುಚ್ಚುನೂರುಮಾಡಿ ಸಾಯಿಸಿದರು. ಕೆಲವು ರಾಕ್ಷಸರನ್ನು ಹಲ್ಲುಗಳಿಂದಲೇ ಕಚ್ಚಿ ಸೀಳಿಬಿಟ್ಟರು. ಕೆಲವು ರಾಕ್ಷಸರ ರಥದ ಧ್ವಜಗಳು ಮುರಿದು ಚೂರು-ಚೂರುಗಳಾಗಿ ಬಿದ್ದಿದ್ದುವು. ಕತ್ತಿಗಳೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು. ರಾಕ್ಷಸರ ಹಲವಾರು ರಥಗಳನ್ನು ವಾನರಸೈನಿಕರು ಸಂಪೂರ್ಣವಾಗಿ ಧ್ವಂಸಮಾಡಿದ್ದರು. ಅದರಿಂದಾಗಿ ರಾಕ್ಷಸರು ಕಂಗೆಟ್ಟರು. ವಾನರನಾಯಕರಿಂದ ಸತತವಾಗಿ ಎಸೆಯಲ್ಪಡುತ್ತಿದ್ದ ಪರ್ವತಶಿಖರಗಳ ಗುರಿಗೆ ಸಿಕ್ಕಿ ವಿಧ್ವಸ್ತವಾದ ಪರ್ವತಾಕಾರದ ಗಜೇಂದ್ರಗಳಿಂದಲೂ, ಕುದುರೆಗಳಿಂದಲೂ ಮತ್ತು ಕುದುರೆ ಸವಾರರಿಂದಲೂ ರಣಭೂಮಿಯು ತುಂಬಿಹೋಯಿತು.

ವೇಗವಂತರಾದ ಭಯಂಕರಪರಾಕ್ರಮಿಗಳಾದ ವಾನರರು ನೆಗೆದಾ

ಡುತ್ತಾ ತಮ್ಮ ಕೈಗಳಲ್ಲಿದ್ದ ತೀಕ್ಷ್ಣವಾದ ಉಗುರುಗಳಿಂದ ರಾಕ್ಷಸರ ಮುಖಗಳನ್ನು ಸೀಳಿಹಾಕುತ್ತಿದ್ದರು. ಕಪಿಗಳು ಮುಖಗಳನ್ನು ಪರಚುತ್ತಿದ್ದುದರಿಂದ ರಾಕ್ಷಸರ ತಲೆಗೂದಲುಗಳು ಕೆದರಿ ಹೋಗಿದ್ದುವು. ಅವರೆಲ್ಲರೂ ವಿಷಣ್ಣವದನರಾಗಿದ್ದರು. ರಕ್ತದ ವಾಸನೆಯಿಂದ ಮೂರ್ಛಿತರಾಗಿ ನೆಲದ ಮೇಲೆ ಬೀಳುತ್ತಿದ್ದರು. ಪರಮಕ್ರುದ್ಧರಾಗಿದ್ದ ಭಯಂಕರಪರಾಕ್ರಮಿಗಳಾದ ಕೆಲವರು ರಾಕ್ಷಸರು ವಜ್ರಾಯುಧದಂತೆ ಕಠೋರವಾಗಿದ್ದ ಅಂಗೈಗಳನ್ನೇ ಆಯುಧಗಳನ್ನಾಗಿ ಮಾಡಿಕೊಂಡು ವಾನರರನ್ನು ಪ್ರಹರಿಸುವ ಸಲುವಾಗಿ ಅವರ ಕಡೆಗೆ ಧಾವಿಸುತ್ತಿದ್ದರು. ವೇಗಶಾಲಿಗಳಾದ ರಾಕ್ಷಸರಿಂದ ಹೀಗೆ ಪ್ರಹರಿಸಲ್ಪಡುತ್ತಿದ್ದ ವೇಗವಂತರಾದ ವಾನರರು ರಾಕ್ಷಸರನ್ನು ಮುಷ್ಟಿಗಳಿಂದಲೂ, ಕಾಲುಗಳಿಂದಲೂ, ಹಲ್ಲುಗಳಿಂದಲೂ, ವೃಕ್ಷಗಳಿಂದಲೂ ನೆಗ್ಗಿಬಿಟ್ಟರು. ರಾಕ್ಷಸಶ್ರೇಷ್ಠನಾದ ಧೂಮ್ರಾಕ್ಷನು ತನ್ನ ಕಡೆಯ ಸೈನಿಕರು ಓಡಿಹೋಗುತ್ತಿರುವುದನ್ನು ನೋಡಿ ಅತಿರೋಷದಿಂದ ಯುದ್ಧಾಕಾಂಕ್ಷಿಗಳಾಗಿ ಮುನ್ನುಗ್ಗಿ ಬರುತ್ತಿದ್ದ ವಾನರರನ್ನು ಸಂಹರಿಸತೊಡಗಿದನು. ಕೆಲವು ವಾನರರನ್ನು ಪ್ರಾಸಗಳಿಂದ ಪ್ರಹರಿಸಿದನು. ಹಾಗೆ ಪ್ರಹೃತರಾದ ವಾನರರ ಶರೀರಗಳಿಂದ ರಕ್ತವು ಧಾರಾಕಾರವಾಗಿ ಸುರಿಯತೊಡಗಿತು. ಮುದ್ಗರಗಳಿಂದ ಪ್ರಹರಿಸಲ್ಪಟ್ಟ ಕೆಲವು ವಾನರರು ಅಸುನೀಗಿ ಭೂಮಿಯ ಮೇಲೆ ಬಿದ್ದರು. ಧೂಮ್ರಾಕ್ಷನು ಕೆಲವು ವಾನರರನ್ನು ಪರಿಘಾಯುಧಗಳಿಂದ ಸೀಳಿದನು. ಮತ್ತೆ ಕೆಲವರನ್ನು ಭಿಂದಿಪಾಲಗಳಿಂದ ಕತ್ತರಿಸಿದನು. ಪಟ್ಟಿಶಗಳಿಂದ ಪ್ರಹರಿಸಲ್ಪಟ್ಟ ಕೆಲವು ವಾನರರು ಸಂಕಟಪಡುತ್ತಾ ಪ್ರಾಣಗಳನ್ನು ತೊರೆದು ಕೆಳಕ್ಕೆ ಬೀಳುತ್ತಿದ್ದರು. ಕೆಲವು ವಾನರರು ರಾಕ್ಷಸರಿಂದ ಹತರಾಗಿ ರಕ್ತದಿಂದ ತೋಯ್ದು ಭೂಮಿಯಲ್ಲಿ ಬಿದ್ದರು. ಕೆಲವರು ಕ್ರುದ್ಧರಾಗಿದ್ದ ರಾಕ್ಷಸರಿಂದ ಓಡಿಸಲ್ಪಟ್ಟು ಕಣ್ಮರೆಯಾದರು. ಕೆಲವು ವಾನರರ ಹೃದಯಗಳೇ ಸೀಳಿಹೋಗಿದ್ದುವು. ಕೆಲವರು ಪೆಟ್ಟು ತಿಂದು ಒಂದು ಪಕ್ಕಕ್ಕೆ ಮಲಗಿದ್ದರು. ಧೂಮ್ರಾಕ್ಷನು ಕೆಲವರನ್ನು ತ್ರಿಶೂಲಗಳಿಂದ ಇರಿದು ವಾನರರ ಕರುಳುಗಳು ಹೊರಬರುವಂತೆ ಮಾಡಿದನು. ವಾನರ-ರಾಕ್ಷಸರಿಂದ ತುಂಬಿಹೋಗಿದ್ದ ಆ ಸಮರಾಂಗಣವು ಅತ್ಯಂತ ಭೀಕರವಾಗಿ ಕಾಣುತ್ತಿದ್ದಿತು. ರಾಕ್ಷಸರು ಪ್ರಯೋಗಿಸುತ್ತಿದ್ದ ಅಪಾರವಾದ ಶಸ್ತ್ರಗಳಿಂದಲೂ ವಾನರರು ಪ್ರಯೋಗಿಸುತ್ತಿದ್ದ ಬಂಡೆಗಳಿಂದಲೂ

ಮತ್ತು ವೃಕ್ಷಗಳಿಂದಲೂ ತುಂಬಿಹೋಗಿದ್ದ ಆ ಸಮರಾಂಗಣವು ಪ್ರಕಾಶಮಾನವಾಗಿ ಕಾಣುತ್ತಿದ್ದಿತು. ಯುದ್ಧರೂಪವಾದ ಆ ಸಂಗೀತೋತ್ಸವವು ಪರಮಾದ್ಭುತವಾಗಿ ಕಾಣುತ್ತಿದ್ದಿತು. ಧನುಸ್ಸಿನ ನಾಣೆನಿಂದ ಹೊರಡುವ ಟಂಕಾರಧ್ವನಿಯು ಸುಮಧುರವಾದ ವೀಣೆಯ ತಂತಿಯ ನಾದದಂತಿದ್ದಿತು. ಯೋಧರ ಬಿಕ್ಕಳಿಕೆಗಳು ಮತ್ತು ಕುದುರೆಗಳ ಹೇಷಾರವವು ತಾಳರೂಪದಲ್ಲಿದ್ದಿತು. ಯೋಧರು ಮೆಲ್ಲ-ಮೆಲ್ಲನೆ ಆಡುತ್ತಿದ್ದ ಮಾತುಗಳು ಮತ್ತು ಮಂದ ಎಂಬ ಹೆಸರಿನ ಆನೆಗಳ ಘೀಂಕಾರವು ಗಾಯನದ ರೂಪದಲ್ಲಿದ್ದಿತು. ಅಂತಹ ಯುದ್ಧ ಗಾಂಧರ್ವೋತ್ಸವವು ಅಲ್ಲಿ ನಡೆಯುತ್ತಿದ್ದಿತು. ಧನುಸ್ಸನ್ನು ಹಿಡಿದಿದ್ದ ಧೂಮ್ರಾಕ್ಷನು ರಣರಂಗದಲ್ಲಿ ಬಾಣಗಳ ಮಳೆಗರೆಯುತ್ತಾ ಅಟ್ಟಹಾಸದಿಂದ ನಗುತ್ತಾ ವಾನರಸೈನಿಕರನ್ನು ದಿಕ್ಕಾಪಾಲಾಗಿ ಓಡಿಸಿಬಿಟ್ಟನು.

ಹನುಮಂತನು ಧೂಮ್ರಾಕ್ಷನಿಂದ ಪೀಡಿತರಾಗಿ ವ್ಯಥೆಗೊಂಡಿದ್ದ ವಾನರಸೈನ್ಯವನ್ನು ನೋಡಿ ಪರಮಕ್ರುದ್ಧನಾಗಿ ದೊಡ್ಡದಾದೊಂದು ಬಂಡೆಯನ್ನೆತ್ತಿಕೊಂಡು ಧೂಮ್ರಾಕ್ಷನ ಕಡೆಗೆ ಧಾವಿಸಿದನು. ಕೋಪದ ಕಾರಣದಿಂದಾಗಿ ಅವನ ಕಣ್ಣುಗಳು ಇಮ್ಮಡಿಯಾಗಿ ಕೆಂಪಾಗಿದ್ದುವು. ತಂದೆಯಾದ ವಾಯುವಿನಂತೆಯೇ ಅತುಲಪರಾಕ್ರಮಿಯಾಗಿದ್ದ ಹನುಮಂತನು ಎತ್ತಿ ತಂದಿದ್ದ ಬಂಡೆಯನ್ನು ಧೂಮ್ರಾಕ್ಷನ ರಥದ ಮೇಲೆ ಹಾಕಿದನು. ದೊಡ್ಡದಾದೊಂದು ಬಂಡೆಯು ರಥದ ಕಡೆಗೆ ರಭಸದಿಂದ ಬರುತ್ತಿರುವುದನ್ನು ನೋಡಿ ಗಾಬರಿಗೊಂಡ ಧೂಮ್ರಾಕ್ಷನು ಗದೆಯನ್ನೆತ್ತಿಕೊಂಡು ವೇಗವಾಗಿ ರಥದಿಂದ ಹಾರಿ ನೆಲದ ಮೇಲೆ ನಿಂತನು. ಹನುಮಂತನೆಸೆದ ಬಂಡೆಯು ಚಕ್ರಗಳಿಂದಲೂ, ಅಚ್ಚುಮರದಿಂದಲೂ, ಕುದುರೆಗಳಿಂದಲೂ, ಧನುಸ್ಸಿನಿಂದಲೂ, ಧ್ವಜದಿಂದಲೂ ಯುಕ್ತವಾಗಿದ್ದ ಆ ರಥವನ್ನು ನುಚ್ಚುನೂರುಮಾಡಿ ನೆಲದ ಮೇಲೆ ಬಿದ್ದಿತು. ಹೀಗೆ ಮಾರುತಿಯು ಧೂಮ್ರಾಕ್ಷನ ರಥವನ್ನು ಧ್ವಂಸಮಾಡಿ ರೆಂಬೆಗಳಿಂದ ಕೂಡಿದ ವೃಕ್ಷಗಳ ಮೂಲಕವಾಗಿ ರಾಕ್ಷಸರನ್ನು ಸಂಹಾರ ಮಾಡಲು ಉಪಕ್ರಮಿಸಿದನು. ಅನೇಕರಾಕ್ಷಸರ ತಲೆಗಳು ಒಡೆದುಹೋದುವು. ರಕ್ತದಿಂದ ಅವರ ಶರೀರಗಳು ತೋಯ್ದುಹೋದುವು. ವೃಕ್ಷಗಳಿಂದ ಬಡಿಯಲ್ಪಟ್ಟ ಅನೇಕರಾಕ್ಷಸರು ಪ್ರಾಣಗಳನ್ನು ತೊರೆದು ಭೂಮಿಯ ಮೇಲೆ ಬಿದ್ದರು. ವಾಯುಪುತ್ರನಾದ ಹನುಮಂತನು ಹೀಗೆ ರಾಕ್ಷಸಸೈನ್ಯ

ವನ್ನು ದಿಕ್ಕಾಪಾಲಾಗಿ ಓಡಿಸಿ ಪರ್ವತದ ಶಿಖರವನ್ನೆತ್ತಿಕೊಂಡು ಧೂಮ್ರಾಕ್ಷನ ಕಡೆಗೆ ಧಾವಿಸಿದನು. ಹನುಮಂತನು ಶಿಖರಪಾಣಿಯಾಗಿ ಬರುತ್ತಿರುವುದನ್ನು ನೋಡಿ ವೀರ್ಯವಂತನಾದ ಧೂಮ್ರಾಕ್ಷನು ಗದೆಯನ್ನೆತ್ತಿಕೊಂಡು ಹನುಮಂತನಿಗೆ ಎದುರಾಗಿಯೇ ಧಾವಿಸಿದನು. ಧೂಮ್ರಾಕ್ಷನು ಅತ್ಯಂತಕ್ರುದ್ಧನಾಗಿ ತನ್ನ ಬಳಿಗೆ ಬರುತ್ತಿದ್ದ ಹನುಮಂತನ ತಲೆಯನ್ನು ಮುಳ್ಳುಗಳಿರುವ ಗದೆಯಿಂದ ಗಟ್ಟಿಯಾಗಿ ಅಪ್ಪಳಿಸಿದನು. ಭಯಂಕರವಾದ ವೇಗದಿಂದ ಯುಕ್ತ ವಾಗಿದ್ದ ಆ ಗದೆಯಿಂದ ಪ್ರಹರಿಸಲ್ಪಟ್ಟರೂ ವಾಯುವಿನಂತೆ ಬಲಿಷ್ಠನಾಗಿದ್ದ ಹನುಮಂತನು ಗದಾಪ್ರಹಾರವನ್ನು ಸ್ವಲ್ಪವೂ ಲೆಕ್ಕಿಸದೇ ತಾನೆತ್ತಿ ತಂದಿದ್ದ ಪರ್ವತಶಿಖರವನ್ನು ಧೂಮ್ರಾಕ್ಷನ ತಲೆಯ ಮಧ್ಯದಲ್ಲಿ ಅಪ್ಪಳಿಸಿದನು. ಅದರಿಂದಾಗಿ ಧೂಮ್ರಾಕ್ಷನ ಶರೀರವೆಲ್ಲವೂ ಛಿನ್ನ-ಭಿನ್ನವಾಗಿ ಸರ್ವತ್ರ ಚದುರಿ ಬಿದ್ದ ಪರ್ವತದಂತೆ ಪ್ರಾಣತೊರೆದು ಅವನು ಭೂಮಿಯ ಮೇಲೆ ಬಿದ್ದನು. ಧೂಮ್ರಾಕ್ಷನು ಹತನಾದುದನ್ನು ನೋಡಿದೊಡನೆಯೇ ಅಳಿದುಳಿದಿದ್ದ ರಾಕ್ಷಸರು ಭಯಗೊಂಡು ವಾನರರ ಹಿಂಸೆಯನ್ನು ತಾಳಲಾರದೇ ಲಂಕೆಗೆ ಓಡಿಹೋದರು.

ಹೀಗೆ ಹನುಮಂತನು ಶತ್ರುಗಳನ್ನು ಸಂಹರಿಸುತ್ತಾ ರಕ್ತದಿಂದ ಕೂಡಿದ ಹಲವಾರು ನದಿಗಳನ್ನು ಸೃಷ್ಟಿಸಿದನು. ಮಹಾತ್ಮನಾದ ವಾಯುಪುತ್ರನಾದ ಹನುಮಂತನು ಶತ್ರುಗಳನ್ನು ಸಂಹರಿಸಿ ಬಳಲಿದ್ದರೂ ವಾನರ ನಾಯಕರ ಪ್ರಶಂಸೆಗೆ ಪಾತ್ರನಾಗಿ ಸಂತೋಷಭರಿತನಾದನು.

೫೨ನೆಯ ಸರ್ಗವು ಮುಗಿಯಿತು.

ವಜ್ರದಂಷ್ಟ್ರನು ಸೇನಾಸಹಿತನಾಗಿ ಯುದ್ಧಕ್ಕೆ ಹೊರಟುದು : ವಾನರ-ರಾಕ್ಷಸರ ಯುದ್ಧ: ವಜ್ರದಂಷ್ಟ್ರನು ವಾನರರನ್ನೂ ಅಂಗದನು ರಾಕ್ಷಸರನ್ನೂ ಸಂಹರಿಸಿದುದು

ಧೂಮ್ರಾಕ್ಷಂ ನಿಹತಂ ಶ್ರುತ್ವಾ ರಾವಣೋ ರಾಕ್ಷಸೇಶ್ವರಃ ।
ಕ್ರೋಧೇನ ಮಹತಾವಿಷ್ಟೋ ನಿಃಶ್ವಸನ್ನುರಗೋ ಯಥಾ ॥೧॥

ರಾಕ್ಷಸೇಶ್ವರನಾದ ರಾವಣನು – ಧೂಮ್ರಾಕ್ಷನು ಹತನಾದನೆಂಬ

ವಾರ್ತೆಯನ್ನು ಕೇಳಿ ಅತಿಕ್ರುದ್ಧನಾದನು. ಸರ್ಪದಂತೆಯೇ ದೀರ್ಘವಾಗಿ ಬಿಸಿ-ಬಿಸಿಯಾದ ನಿಟ್ಟುಸಿರುಬಿಡುತ್ತಾ ಕ್ರೋಧದಿಂದ ತಲ್ಲಣಗೊಂಡ ಮನಸ್ಸಿನಿಂದ ಕೂಡಿದ್ದ ರಾವಣನು ಕ್ರೂರನಾದ ಮಹಾಬಲನಾದ ವಜ್ರದಂಷ್ಟ್ರನಿಗೆ ಹೇಳಿದನು :

"ವಜ್ರದಂಷ್ಟ್ರ! ರಾಕ್ಷಸಸೈನಿಕರೊಡನೆ ನೀನೀಗಲೇ ಯುದ್ಧಕ್ಕೆ ಹೊರಡು. ದಶರಥನ ಮಗನಾದ ರಾಮನನ್ನೂ, ಸುಗ್ರೀವನನ್ನೂ, ವಾನರ ಸೈನಿಕರನ್ನೂ ಸಂಹರಿಸು."

ಮಾಯಾವಿಯಾದ ವಜ್ರದಂಷ್ಟ್ರನು ರಾಜನಿಗೆ ಹಾಗೆಯೇ ಆಗಲೆಂದು ಹೇಳಿ ಅತ್ಯಂತಶೀಘ್ರವಾಗಿ ದೊಡ್ಡದಾದ ರಾಕ್ಷಸಸೈನ್ಯದೊಡನೆ ಯುದ್ಧಕ್ಕೆ ಹೊರಟನು.

ಶತ್ರುವಿನ ಸಂಹಾರದಲ್ಲಿಯೇ ಏಕಾಗ್ರವಾದ ಬುದ್ಧಿಯಿಂದ ಕೂಡಿದ್ದ ವಜ್ರದಂಷ್ಟ್ರನು ಆನೆ-ಕುದುರೆಗಳಿಂದಲೂ, ಕತ್ತೆ-ಒಂಟೆಗಳಿಂದಲೂ ಪರಿವೃತನಾಗಿದ್ದನು. ಪತಾಕೆಗಳನ್ನೂ ಚಿತ್ರಿತವಾದ ಧ್ವಜಗಳನ್ನೂ ಹೊಂದಿದ್ದ ಅನೇಕ ರಾಕ್ಷಸರಥಯೋಧರಿಂದ ಕೂಡಿ ಶೋಭಾಯಮಾನನಾಗಿ ಕಾಣುತ್ತಿದ್ದನು. ವಿಚಿತ್ರವಾದ ಭುಜಬಂದಿಗಳಿಂದಲೂ, ಕಿರೀಟದಿಂದಲೂ ಸಮಲಂಕೃತನಾಗಿದ್ದನು. ಕವಚವನ್ನು ಧರಿಸಿ ಧನುಷ್ಪಾಣಿಯಾಗಿ ಶೀಘ್ರವಾಗಿಯೇ ನಗರದಿಂದ ಹೊರಟನು. ಸೇನಾಪತಿಯಾದ ವಜ್ರದಂಷ್ಟ್ರನು ಧ್ವಜ-ಪತಾಕೆಗಳಿಂದ ಸಮಲಂಕೃತವಾಗಿದ್ದ, ಪುಟಕ್ಕೆ ಹಾಕಿದ ಚಿನ್ನದ ಆಭರಣಗಳಿಂದ ಭೂಷಿತವಾಗಿದ್ದ, ದೇದೀಪ್ಯಮಾನವಾಗಿ ಬೆಳಗುತ್ತಿದ್ದ ರಥವನ್ನು ಪ್ರದಕ್ಷಿಣೆಮಾಡಿ ಹತ್ತಿದನು. ಆ ರಥವು ಋಷ್ಟಿಗಳಿಂದಲೂ, ವಿಚಿತ್ರವಾದ ತೋಮರಗಳಿಂದಲೂ, ಸುಂದರವಾದ ಮುಸಲಾಯುಧಗಳಿಂದಲೂ, ಭಿಂದಿಪಾಲಗಳಿಂದಲೂ, ಧನುಸ್ಸುಗಳಿಂದಲೂ, ಶಕ್ತ್ಯಾಯುಧಗಳಿಂದಲೂ, ಪಟ್ಟಿಶಗಳಿಂದಲೂ, ಖಡ್ಗಗಳಿಂದಲೂ, ಗದಾ-ಚಕ್ರಗಳಿಂದಲೂ, ನಿಶಿತವಾದ ಗಂಡುಗೊಡಲಿಗಳಿಂದಲೂ ತುಂಬಿದ್ದಿತು. ವಿಧ-ವಿಧವಾದ ಶಸ್ತ್ರಗಳನ್ನು ಕೈಗಳಲ್ಲಿ ಹಿಡಿದಿದ್ದ ಪದಾತಿಸೈನಿಕರು ರಥವನ್ನನುಸರಿಸಿ ಹೊರಟರು. ಆ ರಾಕ್ಷಸಶ್ರೇಷ್ಠರು

ವಿಚಿತ್ರವಾಗಿ ಥಳ-ಥಳಿಸುತ್ತಿದ್ದ ಬಟ್ಟೆಗಳನ್ನುಟ್ಟಿದ್ದರು. ಗಜಸೈನ್ಯದಲ್ಲಿದ್ದ ಮದಿಸಿದ ಆನೆಗಳು ಸಂಚರಿಸುವ ಪರ್ವತಗಳಂತೆಯೇ ಕಾಣುತ್ತಿದ್ದುವು. ಯುದ್ಧಕುಶಲರಾಗಿದ್ದ, ತೋಮರಾಂಕುಶಗಳನ್ನು ಕೈಗಳಲ್ಲಿ ಹಿಡಿದಿದ್ದ ಮಾವಟಿಗರು ಆನೆಗಳ ಮೇಲೆ ಕುಳಿತು ಹೋಗುತ್ತಿದ್ದರು. ಒಳ್ಳೆಯ ಲಕ್ಷಣಗಳಿಂದ ಯುಕ್ತವಾಗಿದ್ದ ಕುದುರೆಗಳ ಮೇಲೆ ಮಹಾಬಲಿಷ್ಠರಾದ ಶೂರ ರಾಕ್ಷಸರು ಕುಳಿತು ಹೋಗುತ್ತಿದ್ದರು. ಶತ್ರುಗಳೊಡನೆ ಯುದ್ಧಮಾಡುವ ಸಲುವಾಗಿ ಹೊರಟಿದ್ದ ಆ ರಾಕ್ಷಸಸೈನಿಕರು ವರ್ಷಾಕಾಲದಲ್ಲಿ ಮಿಂಚುಗಳಿಂದ ಕೂಡಿರುವ ಗರ್ಜಿಸುವ ಮೇಘಗಳಂತೆಯೇ ಕಾಣುತ್ತಿದ್ದರು. ವಜ್ರದಂಷ್ಟ್ರಪ್ರಮುಖರಾದ ರಾಕ್ಷಸರು ಅಂಗದನು ಆಕ್ರಮಿಸಿದ್ದ ದಕ್ಷಿಣದ ಹೆಬ್ಬಾಗಿಲಿನ ಮೂಲಕವಾಗಿ ಹೊರಟರು. ಅವರು ಲಂಕಾಪಟ್ಟಣದಿಂದ ಹೊರಡುತ್ತಿದ್ದಂತೆಯೇ ಅಶುಭಸೂಚನೆಗಳು ಕಾಣತೊಡಗಿದುವು. ಆ ಸಮಯದಲ್ಲಿ ಮೇಘಗಳಿಲ್ಲದ ಆಕಾಶದಿಂದ ದುಃಸಹವಾದ ಉಲ್ಕೆಗಳು ಬೀಳತೊಡಗಿದುವು. ಭಯಂಕರವಾದ ಗುಳ್ಳೇನರಿಗಳು ಅಗ್ನಿಯ ಜ್ವಾಲೆಗಳನ್ನು ಕಾರುತ್ತಾ ಕೆಟ್ಟದಾದ ಧ್ವನಿಯಲ್ಲಿ ಕೂಗಿಕೊಳ್ಳುತ್ತಿದ್ದುವು. ಘೋರವಾದ ಮೃಗ-ಪಕ್ಷಿಗಳು ರಾಕ್ಷಸರ ನಿಧನವಾಗುವುದೆಂಬುದನ್ನು ಧ್ವನಿಗಳ ಮೂಲಕವಾಗಿ ಸೂಚಿಸುತ್ತಿದ್ದುವು. ಯುದ್ಧಕ್ಕಾಗಿ ನಿರ್ಗಮಿಸುತ್ತಿದ್ದ ರಾಕ್ಷಸಯೋಧರು ಇದ್ದಕ್ಕಿದ್ದಂತೆಯೇ ಜಾರಿ ಕೆಳಕ್ಕೆ ಬೀಳುತ್ತಿದ್ದರು. ಆದರಿಂದ ಅವರಿಗೆ ಅತಿದಾರುಣವಾದ ಅವಸ್ಥೆಯುಂಟಾಯಿತು. ಮಹಾಬಲನಾದ, ರಣೋತ್ಸಾಹಿಯಾದ, ತೇಜಸ್ವಿಯಾದ ವಜ್ರದಂಷ್ಟ್ರನು ಅಂತಹ ಉತ್ಪಾತಗಳನ್ನು ನೋಡಿದರೂ ಯಾವುದನ್ನೂ ಲೆಕ್ಕಿಸದೇ ಧೈರ್ಯವನ್ನೇ ಆಶ್ರಯಿಸಿ ಯುದ್ಧಕ್ಕೆ ಹೊರಟನು. ತೀವ್ರಗತಿಯಿಂದ ಯುದ್ಧಕ್ಕೆ ಬರುತ್ತಿದ್ದ ವಜ್ರದಂಷ್ಟ್ರಪ್ರಮುಖರಾದ ರಾಕ್ಷಸರನ್ನು ನೋಡಿ ವಿಜಯಿಗಳಾಗಿ ಸುಶೋಭಿಸುತ್ತಿದ್ದ ವಾನರರು ಹತ್ತುದಿಕ್ಕುಗಳಲ್ಲಿಯೂ ಪ್ರತಿಧ್ವನಿಸುವಂತೆ ಗಟ್ಟಿಯಾಗಿ ಸಿಂಹನಾದಗಳನ್ನು ಮಾಡಿದರು.

ಅನಂತರ ಭಯಂಕರವಾಗಿ ಕಾಣುತ್ತಿದ್ದ ಘೋರರೂಪರಾದ ವಾನರರಿಗೂ ರಾಕ್ಷಸರಿಗೂ ತುಮುಲಯುದ್ಧವು ಪ್ರಾರಂಭವಾಯಿತು. ಪರಸ್ಪರವಾಗಿ ಇಬ್ಬರೂ ತಮ್ಮ ಎದುರಾಳಿಗಳನ್ನು ಸಂಹರಿಸಬೇಕೆಂಬ ಆಕಾಂಕ್ಷೆ

ಯುಳ್ಳವರಾಗಿದ್ದರು. ಧೈರ್ಯೋತ್ಸಾಹಗಳಿಂದ ವಾನರ-ರಾಕ್ಷಸರು ಮುನ್ನುಗ್ಗಿ ಹೋಗುತ್ತಿದ್ದರು. ಮರುಕ್ಷಣದಲ್ಲಿಯೇ ಅವರಲ್ಲನೇಕರು ಭಿನ್ನದೇಹರಾಗಿ, ಶಿರಸ್ಸನ್ನು ಕಳೆದುಕೊಂಡು, ರಕ್ತದಿಂದ ನೆನೆಸಲ್ಪಟ್ಟವರಾಗಿ ನೆಲದ ಮೇಲೆ ಬೀಳುತ್ತಿದ್ದರು. ಯುದ್ಧದಲ್ಲಿ ಎಂದೂ ಹಿಂದಿರುಗದಿದ್ದ, ಪರಿಘಾಯುಧ ಸದೃಶವಾದ ತೋಳುಗಳನ್ನು ಹೊಂದಿದ್ದ, ಶೂರರಾದ ಕೆಲವು ರಾಕ್ಷಸ ಯೋಧರು ವಾನರಸೈನಿಕರನ್ನೆದುರಿಸಿ ವಿಧ-ವಿಧವಾದ ಶಸ್ತ್ರಗಳನ್ನು ಅವರ ಮೇಲೆ ಪ್ರಯೋಗಿಸುತ್ತಿದ್ದರು. ಅದಕ್ಕೆ ಪ್ರತಿಯಾಗಿ ವಾನರಸೈನಿಕರು ವೃಕ್ಷಗಳಿಂದಲೂ ಬಂಡೆಗಳಿಂದಲೂ ರಾಕ್ಷಸರನ್ನು ಪ್ರಹರಿಸುತ್ತಿದ್ದರು. ಆ ರಣರಂಗದಲ್ಲಿ ರಾಕ್ಷಸ-ವಾನರಸೈನಿಕರು ಪರಸ್ಪರವಾಗಿ ರಭಸದಿಂದ ಪ್ರಯೋಗಿ ಸುತ್ತಿದ್ದ ವೃಕ್ಷ-ಶಿಲೆಗಳ ಮತ್ತು ಶಸ್ತ್ರಗಳ ಮಹಾನಿನಾದವು ಕೇಳಿಬರುತ್ತಿದ್ದಿತು. ಆ ಶಬ್ದವು ಅತ್ಯಂತಘೋರವಾಗಿದ್ದು ಹೃದಯಭೇದಕವಾಗಿದ್ದಿತು. ರಥಚಕ್ರಗಳ ಗಡ-ಗಡಾಶಬ್ದಗಳೂ, ಧನುಸ್ಸುಗಳ ಭಯಂಕರವಾದ ಟೇಂಕಾರ ಶಬ್ದಗಳೂ, ಶಂಖ-ಭೇರೀ-ಮೃದಂಗಾದಿ ರಣವಾದ್ಯಗಳ ಶಬ್ದಗಳೂ ಒಂದನ್ನೊಂದು ಸೇರಿಕೊಂಡು ಅತ್ಯಂತಭಯಂಕರಶಬ್ದವಾಗಿ ಕೇಳಿಬರುತ್ತಿದ್ದುವು. ಕೆಲವು ರಾಕ್ಷಸರು ಅಸ್ತ್ರಗಳನ್ನು ತ್ಯಜಿಸಿ ವಾನರರೊಡನೆ ಬಾಹುಯುದ್ಧವನ್ನೇ ಮಾಡುತ್ತಿದ್ದರು. ಯುದ್ಧದುರ್ಮದರಾದ ವಾನರರು ಕೆಲವು ರಾಕ್ಷಸರನ್ನು ಅಂಗೈಗಳಿಂದಲೇ ಪ್ರಹರಿಸಿ ಸಂಹರಿಸುತ್ತಿದ್ದರು. ಕಾಲುಗಳಿಂದ ಒದೆದು ಸಂಹರಿಸುತ್ತಿದ್ದರು. ಮುಷ್ಟಿಗಳಿಂದಲೂ, ವೃಕ್ಷಗಳಿಂದಲೂ, ಮೊಣಕಾಲು ಗಳಿಂದಲೂ ಪ್ರಹರಿಸಿ ಸಂಹರಿಸುತ್ತಿದ್ದರು. ಇಂತಹ ಪ್ರಹಾರಗಳಿಂದ ಹಲ ವಾರು ರಾಕ್ಷಸರ ದೇಹಗಳು ಭಗ್ನವಾಗಿ ಹೋದುವು. ಕೆಲವು ರಾಕ್ಷಸರು ಬಂಡೆಗಳಿಂದಲೇ ಅರೆಯಲ್ಪಟ್ಟರು. ಹೀಗೆ ರಾಕ್ಷಸರ ಸಂಹಾರಕಾರ್ಯವು ಸತತವಾಗಿ ಸಾಗುತ್ತಿದ್ದಿತು.

ಇತ್ತಲಾಗಿ ವಜ್ರದಂಷ್ಟ್ರನು ತೀಕ್ಷ್ಣವಾದ ಬಾಣಗಳಿಂದ ವಾನರರನ್ನು ಭಯಪಡಿಸುತ್ತಾ ಲೋಕಸಂಹಾರಕ್ಕಾಗಿ ಸರ್ವತ್ರ ಸಂಚರಿಸುವ ಪಾಶಹಸ್ತ ನಾದ ಯಮನಂತೆ ರಣಭೂಮಿಯಲ್ಲಿ ಸಂಚರಿಸುತ್ತಿದ್ದನು. ಬಲಿಷ್ಠರಾಗಿದ್ದ, ಅಸ್ತ್ರವಿದ್ಯೆಯಲ್ಲಿ ಪರಿಣತರಾಗಿದ್ದ, ನಾನಾವಿಧವಾದ ಆಯುಧಗಳನ್ನು

ಹೊಂದಿದ್ದ, ಕ್ರೋಧಾಭಿಭೂತರಾಗಿದ್ದ ರಾಕ್ಷಸರು ವಾನರಸೈನಿಕರನ್ನು ಸತತವಾಗಿ ಸಂಹರಿಸುತ್ತಿದ್ದರು.

ಪ್ರಳಯಕಾಲದಲ್ಲಿ ಸಂವರ್ತಕಾಗ್ನಿಯು ಪ್ರಾಣಿಗಳನ್ನು ಸಂಹರಿಸುವಂತೆ ಇಮ್ಮಡಿಯಾದ ಕೋಪದಿಂದ ಕೂಡಿದ್ದ, ಧೈರ್ಯಶಾಲಿಯಾದ ಅಂಗದನು ಆ ಎಲ್ಲ ರಾಕ್ಷಸರನ್ನೂ ಸಂಹರಿಸತೊಡಗಿದನು. ಇಂದ್ರಸದೃಶಪರಾಕ್ರಮಿಯಾದ, ವೀರನಾದ, ಕ್ರೋಧದಿಂದ ಕೆಂಗಣ್ಣನಾಗಿದ್ದ ಅಂಗದನು ವೃಕ್ಷಗಳನ್ನೆತ್ತಿಕೊಂಡು–ಸಿಂಹವು ಕ್ಷುದ್ರಮೃಗಗಳನ್ನು ಸಂಹರಿಸುವಂತೆ–ಬಡಿದು-ಬಡಿದು ಆ ಎಲ್ಲರನ್ನೂ ಯಮಾಲಯಕ್ಕೆ ಕಳುಹಿಸಿದನು.

ಅಂಗದನಿಂದ ಹತರಾದ ಭಯಂಕರವೀರ್ಯರಾದ ಆ ಎಲ್ಲ ರಾಕ್ಷಸರೂ ತಲೆಗಳನ್ನು ಕಳೆದುಕೊಂಡ ಬುಡಕತ್ತರಿಸಿದ ವೃಕ್ಷಗಳು ಕೆಳಕ್ಕೆ ಬೀಳುವಂತೆ ಭೂಮಿಯಲ್ಲಿ ಬಿದ್ದರು.

ಆ ಸಮಯದಲ್ಲಿ ಮುರಿದುಹೋದ ರಥಗಳಿಂದಲೂ, ಚಿತ್ರ-ವಿಚಿತ್ರವಾದ ಧ್ವಜಗಳಿಂದಲೂ, ಸತ್ತುಬಿದ್ದಿದ್ದ ಕುದುರೆಗಳಿಂದಲೂ, ವಾನರ-ರಾಕ್ಷಸರಿಂದಲೂ ಮತ್ತು ರಕ್ತಪ್ರವಾಹದಿಂದಲೂ ವ್ಯಾಪ್ತವಾಗಿದ್ದ ಆ ರಣಾಂಗಣವು ಅತ್ಯಂತಭಯಂಕರವಾಗಿ ಕಾಣುತ್ತಿದ್ದಿತು. ಯೋಧರ ಹಾರ-ಕೇಯೂರ-ವಸ್ತ್ರಗಳಿಂದಲೂ, ಶಸ್ತ್ರಗಳಿಂದಲೂ ಸಮಲಂಕೃತವಾಗಿದ್ದ ಆ ರಣಭೂಮಿಯು ಶರತ್ಕಾಲದ ರಾತ್ರಿಯಂತೆ ಸುಮನೋಹರವಾಗಿ ಕಾಣುತ್ತಿದ್ದಿತು. ವಾಯುವೇಗದಿಂದ ಮೇಘವು ಕಂಪಿಸುವಂತೆ–ಅಂಗದನ ಪ್ರಹಾರವೇಗದಿಂದಾಗಿ ಆ ಮಹಾರಾಕ್ಷಸಸೈನ್ಯವು ನಡುಗಿತು.

೫೩ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೫೪ನೆಯ ಸರ್ಗ

ಅಂಗದ-ವಜ್ರದಂಷ್ಟ್ರರ ಯುದ್ಧ: ವಜ್ರದಂಷ್ಟ್ರನ ಸಂಹಾರ

ಸ್ವಬಲಸ್ಯ ಚ ಘಾತೇನ ಅಙ್ಗದಸ್ಯ ಜಯೇನ ಚ ।
ರಾಕ್ಷಸಃ ಕ್ರೋಧಮಾವಿಷ್ಟೋ ವಜ್ರದಂಷ್ಟ್ರೋ ಮಹಾಬಲಃ ॥೧॥

ತನ್ನ ಕಡೆಯ ಸೈನ್ಯವು ಹತವಾಗುತ್ತಿರುವುದನ್ನೂ, ಅಂಗದನ ಜಯವನ್ನೂ ನೋಡಿ ಮಹಾಬಲಿಷ್ಠನಾದ ವಜ್ರದಂಷ್ಟ್ರನು ಕುಪಿತನಾದನು.

ಬಳಿಕ ಇಂದ್ರನ ವಜ್ರಾಯುಧಕ್ಕೆ ಸಮಾನವಾಗಿದ್ದ ಘೋರವಾದ ಧನುಸ್ಸನ್ನು ಸುದೀರ್ಘವಾಗಿ ಸೆಳೆಯುತ್ತಾ ವಾನರಸೈನ್ಯವನ್ನು ಬಾಣಗಳಿಂದ ಮುಚ್ಚಿಬಿಟ್ಟನು. ನಾನಾವಿಧವಾದ ಆಯುಧಗಳನ್ನು ಹೊಂದಿದ್ದ ಶೂರರಾದ ರಾಕ್ಷಸಮುಖ್ಯರೂ ಅವನೊಡನೆ ರಥಗಳಲ್ಲಿ ಕುಳಿತು ವಾನರನಾಯಕ ರೊಡನೆ ಯುದ್ಧಮಾಡತೊಡಗಿದರು. ವಾನರರಲ್ಲಿಯೂ ಮಹಾಶೂರರೆಂದು ವಿಖ್ಯಾತರಾಗಿದ್ದ ವಾನರಶ್ರೇಷ್ಠರು ಒಂದೆಡೆಯಲ್ಲಿ ಸೇರಿ ದೊಡ್ಡ-ದೊಡ್ಡ ಬಂಡೆ ಗಳನ್ನೇ ಕೈಗಳಲ್ಲಿ ಹಿಡಿದು ರಾಕ್ಷಸರೊಡನೆ ಯುದ್ಧಮಾಡತೊಡಗಿದರು.

ಆ ಸಮಯದಲ್ಲಿ ರಣಭೂಮಿಯಲ್ಲಿದ್ದ ರಾಕ್ಷಸರು ಸಾವಿರಾರು ಆಯುಧಗಳನ್ನು ಕಪಿಮುಖ್ಯರ ಮೇಲೆ ಸುರಿಸಿದರು. ಅದಕ್ಕೆ ಪ್ರತಿಯಾಗಿ ಮದಿಸಿದ ಆನೆಗಳಂತಿದ್ದ ವಾನರಪ್ರಮುಖರು ಪರ್ವತಶಿಖರಗಳನ್ನೂ ವೃಕ್ಷ ಗಳನ್ನೂ ಕಿತ್ತು ರಾಕ್ಷಸರ ಮೇಲೆ ಪ್ರಹರಿಸಿದರು. ಯುದ್ಧದಲ್ಲಿ ಹಿಮ್ಮೆಟ್ಟ ದಂತೆ ಉತ್ಸಾಹದಿಂದ ಯುದ್ಧಮಾಡುತ್ತಿದ್ದ ರಾಕ್ಷಸ-ವಾನರಯೋಧರ ನಡುವೆ ಯುದ್ಧವು ಕ್ಷಣ-ಕ್ಷಣಕ್ಕೂ ಪ್ರಬಲಿಸುತ್ತಿದ್ದಿತು. ಕೆಲವು ಯೋಧರ ತಲೆಗಳು ಒಡೆದುಹೋಗಿದ್ದುವು. ಕೆಲವರ ತೋಳುಗಳೂ ಮತ್ತೆ ಕೆಲವರ ಕಾಲುಗಳೂ ಕತ್ತರಿಸಲ್ಪಟ್ಟಿದ್ದುವು. ಕೆಲವು ಯೋಧರು ಶಸ್ತ್ರಪ್ರಹಾರಗಳಿಂದ ಪೀಡಿಸಲ್ಪಟ್ಟವರಾಗಿ ರಕ್ತದಿಂದ ತೋಯ್ದುಹೋಗಿದ್ದರು. ಹಲವಾರು ವಾನರ-ರಾಕ್ಷಸರು ಅಸುನೀಗಿ ಭೂಮಿಯನ್ನಾಶ್ರಯಿಸಿ ಮಲಗಿದ್ದರು. ಅವರನ್ನು ಹದ್ದು-ರಣಹದ್ದು-ಕಾಗೆಗಳು ಆಕ್ರಮಿಸಿದ್ದುವು. ಭೂಮಿಯಲ್ಲಿ ಬಿದ್ದಿದ್ದ ವಾನರ-ರಾಕ್ಷಸರು ಗುಳ್ಳೇನರಿಗಳ ಹಿಂಡುಗಳಿಂದ ಸಮಾಕುಲರಾಗಿದ್ದರು. ಹತಸೈನಿಕರ ಮುಂಡಗಳು ಭೀರುಗಳಾದ ಸೈನಿಕರಿಗೆ ಭಯ ವನ್ನುಂಟುಮಾಡುತ್ತಿದ್ದು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾರಾಡು ತ್ತಿದ್ದುವು. ಶಸ್ತ್ರಗಳ ಮೂಲಕವಾಗಿ ಕತ್ತರಿಸಲ್ಪಟ್ಟಿದ್ದ ಯೋಧರ ಭುಜಗಳೂ, ಕೈಗಳೂ, ಶಿರಸ್ಸುಗಳೂ, ದೇಹಗಳೂ ಆ ರಣಭೂಮಿಯಲ್ಲಿ ರಾಶಿ-ರಾಶಿ ಯಾಗಿ ಬಿದ್ದಿದ್ದುವು. ಈ ಅವಸ್ಥೆಯಲ್ಲಿ ಎರಡು ಕಡೆಯವರೂ ರಣಾಂಗಣ ದಲ್ಲಿ ಬಿದ್ದಿದ್ದರು.

ಅನಂತರ ಸ್ವಲ್ಪಹೊತ್ತಿನಲ್ಲಿಯೇ ವಾನರಸೈನ್ಯದಿಂದ ಪ್ರಹರಿಸಲ್ಪಡು ತ್ತಿದ್ದ ನಿಶಾಚರಸೈನ್ಯವು ಸೇನಾಪತಿಯಾದ ವಜ್ರದಂಷ್ಟ್ರನು ನೋಡು

ತ್ತಿದ್ದಂತೆಯೇ ಭಗ್ನವಾಗಿ ಹೋಯಿತು. ಕಪಿಸೈನಿಕರಿಂದ ಪೀಡಿಸಲ್ಪಡುತ್ತಿದ್ದ ಭಯಗ್ರಸ್ತರಾದ ರಾಕ್ಷಸಸೈನಿಕರನ್ನು ನೋಡಿ ಪ್ರತಾಪವಂತನಾದ ವಜ್ರ ದಂಷ್ಟ್ರನು ಕೋಪದಿಂದ ಕೆಂಗಣ್ಣನಾದನು. ಧನುಸ್ಸನ್ನು ಕೈಯಲ್ಲಿ ಹಿಡಿದು ವಾನರಸೈನಿಕರನ್ನು ಭಯಪಡಿಸುತ್ತಾ ಸೈನ್ಯದೊಳಕ್ಕೆ ನುಗ್ಗಿದನು. ರಣಹದ್ದಿನ ರೆಕ್ಕೆಗಳಿದ್ದ ನೇರವಾಗಿ ಹೋಗುವ ಬಾಣಗಳಿಂದ ಶತ್ರುಗಳನ್ನು ಭೇದಿಸತೊಡಗಿದನು. ಪರಮಕ್ರುದ್ಧನಾಗಿದ್ದ ಪ್ರತಾಪವಂತನಾದ ಸೇನಾಪತಿಯು ಒಂದೊಂದೇ ಬಾಣಗಳ ಪ್ರಹಾರದಿಂದ ಐದು, ಏಳು, ಎಂಟು, ಒಂಬತ್ತು ಮಂದಿ ವಾನರರನ್ನು ಪ್ರಹರಿಸುತ್ತಿದ್ದನು. ರಾಕ್ಷಸನ ಬಾಣ ಗಳಿಂದ ಛಿನ್ನ-ಭಿನ್ನದೇಹರಾಗಿದ್ದ ವಾನರರು ಭಯಗೊಂಡು–ಪ್ರಜೆಗಳು ರಕ್ಷಣೆಗಾಗಿ ಪ್ರಜಾಪತಿಯ ಬಳಿಗೆ ಹೋಗುವಂತೆ–ಅಂಗದನ ಬಳಿಗೆ ಧಾವಿಸಿ ದರು. ವಾನರಸೈನ್ಯವು ಭಗ್ನವಾದುದನ್ನು ನೋಡಿ ವಾಲಿಯ ಮಗನಾದ ಅಂಗದನು ತನ್ನನ್ನೇ ನೋಡುತ್ತಿದ್ದ ವಜ್ರದಂಷ್ಟ್ರನನ್ನು ಕೋಪದಿಂದ ವೀಕ್ಷಿಸಿ ದನು. ಅಂಗದ-ವಜ್ರದಂಷ್ಟ್ರರು ಪರಸ್ಪರವಾಗಿ ಯುದ್ಧಮಾಡಲು ಪ್ರಾರಂಭಿ ಸಿದರು. ಪರಮಕ್ರುದ್ಧರಾಗಿದ್ದ ಅವರಿಬ್ಬರೂ ಆನೆ ಮತ್ತು ಸಿಂಹಗಳಂತೆ* ಕಾದಾಡುತ್ತಾ ರಣಾಂಗಣದಲ್ಲಿ ಸಂಚರಿಸುತ್ತಿದ್ದರು. ಅನಂತರ ವಜ್ರದಂಷ್ಟ್ರನು ಒಂದು ಸಾವಿರ ಬಾಣಗಳಿಂದ ವಾಲಿಯ ಮಗನಾದ ಅಂಗದನ ಮರ್ಮಸ್ಥಳ ಗಳಲ್ಲಿ ಪ್ರಹರಿಸಿದನು. ಅಂಗದನ ಎಲ್ಲ ಅಂಗಗಳೂ ರಕ್ತದಿಂದ ತೋಯ್ದು ಹೋದುವು. ಮರುಕ್ಷಣದಲ್ಲಿಯೇ ಭಯಂಕರಪರಾಕ್ರಮಿಯಾದ ವಾಲಿ ಪುತ್ರನು ವಜ್ರದಂಷ್ಟ್ರನ ಮೇಲೆ ವೃಕ್ಷವೊಂದನ್ನು ರಭಸದಿಂದೆಸೆದನು. ವೃಕ್ಷವು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ ರಾಕ್ಷಸನು ಸ್ವಲ್ಪವೂ ಗಾಬರಿ ಗೊಳ್ಳದೇ ಆ ವೃಕ್ಷವನ್ನು ಬಾಣಗಳಿಂದ ತುಂಡು-ತುಂಡುಗಳಾಗಿ ಕತ್ತರಿಸಿ ಬಿಟ್ಟನು. ಹೀಗೆ ಕತ್ತರಿಸಲ್ಪಟ್ಟ ಆ ತುಂಡುಗಳು ನೆಲದ ಮೇಲೆ ಹರಡಿಬಿದ್ದುವು. ಪ್ಲವಗಶ್ರೇಷ್ಠನಾದ ಅಂಗದನು ವಜ್ರದಂಷ್ಟ್ರನ ಪರಾಕ್ರಮವನ್ನು ನೋಡಿ

---

* ಆನೆ ಮತ್ತು ಸಿಂಹಗಳು ಪರಸ್ಪರವಾಗಿ ಕಾದಾಡುವುದಿಲ್ಲವೆಂಬುದು ಲೋಕ ಪ್ರಸಿದ್ಧವಾಗಿದೆ. ಸಿಂಹವನ್ನು ಕನಸಿನಲ್ಲಿ ಕಂಡರೇನೇ ಆನೆಯು ಸಾಯುವುದೆಂದು ಹೇಳುತ್ತಾರೆ. ಆದುದರಿಂದ ಇದು ಅಭೂತೋಪಮೆಯೆಂದು ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ.

ಮರುಕ್ಷಣದಲ್ಲಿಯೇ ವಿಶಾಲವಾದೊಂದು ಬಂಡೆಯನ್ನೆತ್ತಿ ವಜ್ರದಂಷ್ಟ್ರನ ಮೇಲೆಸೆದು ಗಟ್ಟಿಯಾಗಿ ಸಿಂಹನಾದಮಾಡಿದನು. ತನ್ನ ಕಡೆಗೆ ರಭಸದಿಂದ ಬರುತ್ತಿದ್ದ ಬಂಡೆಯನ್ನು ನೋಡಿ ವೀರ್ಯವಂತನಾದ ರಾಕ್ಷಸನು ಗಾಬರಿ ಗೊಳ್ಳದೆ ರಥದಿಂದ ಕೆಳಕ್ಕೆ ನೆಗೆದು ಗದಾಪಾಣಿಯಾಗಿ ಭೂಮಿಯಲ್ಲಿ ನಿಂತನು. ಅಂಗದನಿಂದ ಎಸೆಯಲ್ಪಟ್ಟ ಆ ಬಂಡೆಯು ರಾಕ್ಷಸನ ರಥದ ಮೇಲೆ ಬಿದ್ದು ಚಕ್ರಗಳಿಂದಲೂ, ಅಚ್ಚುಮರಗಳಿಂದಲೂ, ಕುದುರೆಗಳಿಂದಲೂ ಕೂಡಿದ್ದ ಆ ರಥವನ್ನು ನುಚ್ಚುನೂರು ಮಾಡಿಬಿಟ್ಟಿತು. ಬಳಿಕ ಅಂಗದನು ದೊಡ್ಡದಾಗಿದ್ದ ವೃಕ್ಷಗಳಿಂದ ಭೂಷಿತವಾಗಿದ್ದ ಪರ್ವತಶಿಖರವನ್ನು ಕೈಯಲ್ಲೆತ್ತಿಕೊಂಡು ವಜ್ರದಂಷ್ಟ್ರನ ತಲೆಯ ಮೇಲೆ ಹಾಕಿದನು. ಪರ್ವತಶಿಖರದ ಪ್ರಹಾರ ದಿಂದಾಗಿ ರಾಕ್ಷಸನು ರಕ್ತವನ್ನು ಕಾರುತ್ತಾ ಮೂರ್ಛಿತನಾಗಿ ಕೆಳಗೆಬಿದ್ದನು. ಗದೆಯನ್ನಾಲಿಂಗಿಸಿಕೊಂಡು ಒಂದು ಮುಹೂರ್ತದವರೆಗೆ ಪ್ರಜ್ಞಾಹೀನಸ್ಥಿತಿ ಯಲ್ಲೇ ಇದ್ದನು. ಉಸಿರಾಟವು ನಿಂತಿರಲಿಲ್ಲ. ಮೂರ್ಛೆಯು ತಿಳಿಯು ತ್ತಲೇ ವಜ್ರದಂಷ್ಟ್ರನು ಪರಮಕ್ರುದ್ಧನಾಗಿ ಗದೆಯಿಂದ ಹತ್ತಿರದಲ್ಲಿಯೇ ನಿಂತಿದ್ದ ವಾಲಿಪುತ್ರನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಅನಂತರ ರಾಕ್ಷಸನು ಗದೆಯನ್ನು ತ್ಯಜಿಸಿ ಅಂಗದನೊಡನೆ ಮುಷ್ಟಿಯುದ್ಧವನ್ನು ಪ್ರಾರಂಭಿ ಸಿದನು. ಆ ಇಬ್ಬರು ವಾನರ-ರಾಕ್ಷಸರೂ ಪರಸ್ಪರವಾಗಿ ಮುಷ್ಟಿಗಳಿಂದ ಗುದ್ದಾಡಿದರು. ಮಹಾಪರಾಕ್ರಮಿಗಳಾಗಿದ್ದ ಇಬ್ಬರೂ ಯುದ್ಧದ ಸಮಯದಲ್ಲಿ ಬುಧಾಂಗಾರಕರಂತೆಯೇ ಕಾಣುತ್ತಿದ್ದರು. ಇಬ್ಬರೂ ರಕ್ತ ದಿಂದ ತೋಯ್ದುಹೋಗಿದ್ದರು. ಪೆಟ್ಟುತಿಂದು ಇಬ್ಬರಿಗೂ ಶ್ರಮವಾಗಿದ್ದಿತು. ಬಳಿಕ ಪರಮತೇಜಸ್ವಿಯಾದ ಪ್ಲವಗಶ್ರೇಷ್ಠನಾದ ಅಂಗದನು ವೃಕ್ಷವೊಂದನ್ನು ಕಿತ್ತು ಕೈಗಳಲ್ಲಿ ಹಿಡಿದುಕೊಂಡನು. ಆ ಸಮಯದಲ್ಲವನು ಪುಷ್ಪ-ಫಲಗಳಿಂದ ಭೂಷಿತನಾದವನಂತೆಯೇ ಕಾಣುತ್ತಿದ್ದನು. ಅತ್ತಕಡೆ ವಜ್ರ ದಂಷ್ಟ್ರನು ಎತ್ತಿನ ಚರ್ಮದಿಂದ ಮಾಡಿದ್ದ ಗುರಾಣಿಯನ್ನೂ–ಚಿಕ್ಕ-ಚಿಕ್ಕ ಗಂಟೆಗಳ ಸಮೂಹದಿಂದ ಆಚ್ಛಾದಿತವಾಗಿ, ಚರ್ಮದ ಒರೆಯಿಂದ ಶೋಭಿ ಸುತ್ತಿದ್ದ, ವಿಶಾಲವಾದ ಮತ್ತು ಶುಭಪ್ರದವಾದ ಕತ್ತಿಯನ್ನೂ ಹಿಡಿದು ಕೊಂಡನು. ಆ ಸಮಯದಲ್ಲಿ ಜಯಾಕಾಂಕ್ಷಿಗಳಾಗಿದ್ದ ಕಪಿ-ರಾಕ್ಷಸರು

ವಿಚಿತ್ರವಾದ ಮತ್ತು ಸುಂದರವಾದ ಹೆಜ್ಜೆಗಳನ್ನಿಡುತ್ತಾ ಒಬ್ಬರು ಮತ್ತೊಬ್ಬರನ್ನು ಪ್ರಹರಿಸುತ್ತಾ ಗರ್ಜನೆಮಾಡುತ್ತಾ ಸುತ್ತಾಡುತ್ತಿದ್ದರು.

ಗಾಯಗಳಿಂದ ಸುರಿಯುತ್ತಿದ್ದ ರಕ್ತದಿಂದ ತೋಯ್ದುಹೋಗಿದ್ದ ವಾನರ-ರಾಕ್ಷಸರು ಹೂಗಳು ತುಂಬಿದ ಮುತ್ತುಗದ ಮರಗಳಂತೆಯೇ ಕಾಣುತ್ತಿದ್ದರು. ಯುದ್ಧಮಾಡಿ ಆಯಾಸಗೊಂಡಿದ್ದ ಅವರು ಮೊಣಕಾಲುಗಳನ್ನೂರಿಕೊಂಡು ನೆಲದ ಮೇಲೆ ಕುಳಿತರು. ಕಣ್ಣುರೆಪ್ಪೆಯನ್ನು ಮುಚ್ಚಿತೆಗೆಯುವಷ್ಟು ಕಾಲದಲ್ಲಿ ಕಪಿಶ್ರೇಷ್ಠನಾದ, ಹೊಳೆಯುತ್ತಿದ್ದ ಕಣ್ಣುಗಳಿಂದ ಕೂಡಿದ್ದ ಅಂಗದನು ದಂಡದಿಂದ ಪ್ರಹರಿಸಲ್ಪಟ್ಟ ಸರ್ಪವು ಹೆಡೆಬಿಟ್ಟುಕೊಂಡು ಎದ್ದು ನಿಲ್ಲುವಂತೆ–ಎದ್ದುನಿಂತನು. ಮರುಕ್ಷಣದಲ್ಲಿಯೇ ನಿರ್ಮಲ ವಾದ ಮತ್ತು ಹರಿತವಾದ ಅಲುಗಿನಿಂದ ಕೂಡಿದ್ದ ಕತ್ತಿಯಿಂದ ವಜ್ರದಂಷ್ಟ್ರನ ತಲೆಯನ್ನು ಕತ್ತರಿಸಿದನು. ರಕ್ತದಿಂದ ತೋಯ್ದುಹೋದ ಶರೀರದಿಂದ ಕೂಡಿದ್ದ, ಕತ್ತಿಯಿಂದ ಕತ್ತರಿಸಲ್ಪಟ್ಟು ತಿರುಗುತ್ತಿದ್ದ ಕಣ್ಣುಗಳಿಂದ ಕೂಡಿದ್ದ ಆ ಮಸ್ತಕವು ಭೂಮಿಯ ಮೇಲೆ ಬಿದ್ದು ಪುನಃ ಎರಡು ಭಾಗವಾಯಿತು.

ಸೇನಾಪತಿಯಾದ ವಜ್ರದಂಷ್ಟ್ರನು ಹತನಾದುದನ್ನು ನೋಡಿ ಭಯದಿಂದ ಭ್ರಾಂತರಾದ ಮತ್ತು ವಾನರರಿಂದ ಪೀಡಿಸಲ್ಪಡುತ್ತಿದ್ದ ರಾಕ್ಷಸರು ಲಂಕೆಗೆ ಓಡಿಹೋದರು. ಅವರೆಲ್ಲರೂ ಅತ್ಯಂತದುಃಖಿತರಾಗಿದ್ದು ನಾಚಿಕೆಯಿಂದ ತಲೆಗಳನ್ನು ತಗ್ಗಿಸಿಕೊಂಡೇ ಹೋಗುತ್ತಿದ್ದರು. ವಜ್ರಧರನಾದ ಇಂದ್ರನಂತೆಯೇ ಪ್ರತಾಪಶಾಲಿಯಾಗಿದ್ದ, ಮಹಾಬಲಿಷ್ಠನಾದ, ವಾಲಿಪುತ್ರನಾದ ಅಂಗದನು ಸೇನಾಪತಿಯಾದ ವಜ್ರದಂಷ್ಟ್ರನನ್ನು ಸಂಹರಿಸಿ ವಾನರ ಸೈನಿಕರಿಂದ ಸಮ್ಮಾನಿತನಾಗಿ–ದೇವತೆಗಳಿಂದ ಪರಿವೃತನಾದ ಸಾವಿರಗಣ್ಣಿನ ಇಂದ್ರನಂತೆ–ಪರಮಹೃಷ್ಟನಾದನು.*

ಐವತ್ತನಾಲ್ಕನೆಯ ಸರ್ಗವು ಮುಗಿಯಿತು.

---

* ವಜ್ರದಂಷ್ಟ್ರ ಮತ್ತು ಅಂಗದರು ಕತ್ತಿಗಳ ಮೂಲಕ ಯುದ್ಧಮಾಡಿದರೇ–ಎಂಬುದನ್ನು ಇಲ್ಲಿ ಜಿಜ್ಞಾಸೆಮಾಡಬೇಕಾಗಿದೆ. ಅಂಗದನ ಬಳಿ ಕತ್ತಿ ಇದ್ದಿತೆಂಬುದಕ್ಕೆ ಎಲ್ಲೂ ವಾಕ್ಯವಿಲ್ಲ. ಅಂಗದನು ಫಲ-ಪುಷ್ಪಯುಕ್ತವಾದ ವೃಕ್ಷವನ್ನು ಕಿತ್ತು ಕೈಯ್ಯಲ್ಲಿಟ್ಟುಕೊಂಡನು. ಆ ಸಮಯದಲ್ಲಿ ರಾಕ್ಷಸನು ಕತ್ತಿ-ಗುರಾಣಿಗಳನ್ನು ಹಿಡಿದನು. ಅದಕ್ಕೆ ಬದಲಾಗಿ ಅಂಗದನೂ ಕತ್ತಿ-ಗುರಾಣಿಗಳನ್ನು ಹಿಡಿದನೆಂಬುದಕ್ಕೆ

ಯುದ್ಧಕಾಂಡ ೫೫ನೆಯ ಸರ್ಗ

ಅಕಂಪನನೇ ಮೊದಲಾದ ರಾಕ್ಷಸರ ಮತ್ತು ವಾನರರ ಭೀಕರಯುದ್ಧ

ವಜ್ರದಂಷ್ಟ್ರಂ ಹತಂ ಶ್ರುತ್ವಾ ವಾಲಿಪುತ್ರೇಣ ರಾವಣಃ ।
ಬಲಾಧ್ಯಕ್ಷಮುವಾಚೇದಂ ಕೃತಾಞ್ಜಲಿಮುಪಸ್ಥಿತಮ್ ॥೧॥

ವಾಲಿಯ ಮಗನಾದ ಅಂಗದನಿಂದ ವಜ್ರದಂಷ್ಟ್ರನು ಹತನಾದನೆಂಬ ವಾರ್ತೆಯನ್ನು ಕೇಳಿ ರಾವಣನು ಸಮೀಪದಲ್ಲಿಯೇ ಕೈಮುಗಿದುಕೊಂಡು ನಿಂತಿದ್ದ ಬಲಾಧ್ಯಕ್ಷನಿಗೆ ಹೇಳಿದನು :

"ಸರ್ವಶಸ್ತ್ರಾಸ್ತ್ರಕೋವಿದನಾದ ಅಕಂಪನನನ್ನು ಮುಂದೆಮಾಡಿ ಕೊಂಡು ಎದುರಿಸಲು ಅಸಾಧ್ಯರಾದ, ಭಯಂಕರಪರಾಕ್ರಮರಾದ ರಾಕ್ಷಸ ಯೋಧರು ಈಗಲೇ ಯುದ್ಧಕ್ಕೆ ಹೊರಡಲಿ. ಅಕಂಪನನು ಯುದ್ಧಪ್ರಿಯನು. ನನ್ನ ಅಭ್ಯುದಯವನ್ನೇ ಸದಾ ಬಯಸುವವನು. ಶತ್ರುಗಳನ್ನು ದಂಡಿಸುವುದ ರಲ್ಲಿಯೂ, ತನ್ನ ಕಡೆಯ ಸೈನಿಕರನ್ನು ರಕ್ಷಿಸುವುದರಲ್ಲಿಯೂ, ಸೈನ್ಯಕ್ಕೆ ಮಾರ್ಗದರ್ಶನವನ್ನು ಮಾಡುವುದರಲ್ಲಿಯೂ ಅಕಂಪನನು ಸಮರ್ಥನಾಗಿ ದ್ದಾನೆ. ಅವನು ಮಹಾಬಲನಾದ ಸುಗ್ರೀವನನ್ನೂ ರಾಮ-ಲಕ್ಷ್ಮಣರನ್ನೂ ಯುದ್ಧದಲ್ಲಿ ಜಯಿಸುತ್ತಾನೆ. ಘೋರರೂಪಿಗಳಾದ ವಾನರರನ್ನು ಸಂಹರಿಸು ತ್ತಾನೆ. ಇದರಲ್ಲಿ ಸಂಶಯವೇ ಇಲ್ಲ."

ರಾವಣನ ಆ ಆಜ್ಞೆಯನ್ನು ಶೀಘ್ರಪರಾಕ್ರಮಿಯಾದ, ಮಹಾಬಲನಾದ ಬಲಾಧ್ಯಕ್ಷನು ಶಿರಸಾ ವಹಿಸಿ ವಾನರರೊಡನೆ ಯುದ್ಧಮಾಡಲು ರಾಕ್ಷಸ ಸೈನಿಕರನ್ನು ಕಳುಹಿಸಿದನು. ಬಲಾಧ್ಯಕ್ಷನ ಪ್ರೇರಣೆಯಂತೆ ಭಯಂಕರವಾದ

ಆಧಾರಶ್ಲೋಕವಿಲ್ಲ. ಆದುದರಿಂದ ಅಂಗದನು ವೃಕ್ಷದಿಂದಲೇ ಪ್ರಹರಿಸುತ್ತಿದ್ದನು. ರಾಕ್ಷಸನು ಕತ್ತಿಯಿಂದ ವೃಕ್ಷವನ್ನು ಕತ್ತರಿಸುತ್ತಿದ್ದನು. ಇಬ್ಬರೂ ಬಳಲಿ ಕುಳಿತರು. ಆ ಸಮಯದಲ್ಲಿ ಅಂಗದನು ರಾಕ್ಷಸನ ಕತ್ತಿಯನ್ನೇ ಎತ್ತಿಕೊಂಡು ಅವನ ತಲೆಯನ್ನು ಕತ್ತರಿಸಿದನು.' ಹೀಗೆ ಅರ್ಥಮಾಡುವುದು ಸಮಂಜಸವಾಗಿ ಕಾಣುತ್ತದೆ.

ಕಣ್ಣುಗಳನ್ನು ಹೊಂದಿ ಭಯಂಕರವಾಗಿ ಕಾಣುತ್ತಿದ್ದ, ನಾನಾವಿಧವಾದ ಆಯುಧಗಳನ್ನು ಧರಿಸಿದ್ದ ರಾಕ್ಷಸಮುಖ್ಯರು ನಗರದಿಂದ ಹೊರಟರು. ಆ ಸಮಯದಲ್ಲಿ ಪುಟಕ್ಕೆ ಹಾಕಿದ ಚಿನ್ನದ ಆಭರಣಗಳಿಂದ ವಿಭೂಷಿತನಾಗಿದ್ದ ವಿಶಾಲವಾಗಿದ್ದ ರಥದಲ್ಲಿ ಕುಳಿತು ಮೇಘದಂತೆ ಸ್ಥೂಲವಾದ ಶರೀರವನ್ನು ಹೊಂದಿದ್ದ, ಮೇಘವರ್ಣನಾಗಿದ್ದ, ಮೇಘದ ಧ್ವನಿಯಂತೆ ಗರ್ಜನೆಮಾಡು ತ್ತಿದ್ದ ಅಕಂಪನನು ಘೋರರಾದ ರಾಕ್ಷಸರಿಂದ ಪರಿವೃತನಾಗಿ ಯುದ್ಧಕ್ಕೆ ಹೊರಟನು. ಮಹಾಸಮರದಲ್ಲಿ ದೇವತೆಗಳು ಕೂಡ ಅವನನ್ನು ಅಳ್ಳಾಡಿಸಲು ಸಾಧ್ಯವಾಗಿರಲಿಲ್ಲ. ಆದುದರಿಂದಲೇ ಅವನು ಅಕಂಪನನೆಂಬ ಅನ್ವರ್ಥ ನಾಮದಿಂದಲೇ ಪ್ರಸಿದ್ಧನಾಗಿದ್ದನು. ತೇಜಸ್ಸಿನಿಂದವನು ಸೂರ್ಯನಂತೆಯೇ ವಿರಾಜಿಸುತ್ತಿದ್ದನು.

ರೋಷಾವೇಷದಿಂದ ಕೂಡಿದವನಾಗಿ ಯುದ್ಧಮಾಡುವ ಇಚ್ಛೆಯಿಂದ ರಣಭೂಮಿಗೆ ಧಾವಿಸುತ್ತಿದ್ದ ಅಕಂಪನನ ರಥದ ಕುದುರೆಗಳು ಕಾರಣವಿಲ್ಲದೇ ದೈನ್ಯಭಾವವನ್ನು ಹೊಂದಿದುವು. ಯುದ್ಧಶ್ಲಾಘಿಯಾದ ಅಕಂಪನನ ಎಡ ಗಣ್ಣು ಮಿಡಿಯತೊಡಗಿತು. ಮುಖವರ್ಣವು ಇದ್ದಕ್ಕಿದ್ದಂತೆಯೇ ವಿವರ್ಣ ವಾಯಿತು. ಕಂಠಧ್ವನಿಯು ಗದ್ಗದವಾಯಿತು. ಅಂದಿನ ದಿನವು ಸೂರ್ಯನಿಗೆ ಮೇಘದ ಆವರಣವಿಲ್ಲದ ಸುದಿನವೇ ಆಗಿದ್ದರೂ ತೇಜೋಹೀನವಾಗಿ ದುರ್ದಿನ ದಂತೆಯೇ ಕಾಣುತ್ತಿದ್ದಿತು. ಸುಂಟರಗಾಳಿಯು ಬೀಸತೊಡಗಿತು. ಪಶು-ಪಕ್ಷಿಗಳು ಭಯಂಕರವಾಗಿ ಕೂಗಿಕೊಳ್ಳುತ್ತಿದ್ದುವು. ಸಿಂಹದ ಹೆಗಲಿಗೆ ಸಮಾನ ವಾದ ಪುಷ್ಟವಾದ ಹೆಗಲುಗಳಿಂದ ಕೂಡಿದ್ದ ಸಿಂಹದಂತೆಯೇ ಪರಾಕ್ರಮಿ ಯಾಗಿದ್ದ ಅಕಂಪನನು ಅಲ್ಲಿ ಕಂಡುಬರುತ್ತಿದ್ದ ಉತ್ಪಾತಗಳನ್ನು ಲೆಕ್ಕಿಸದೆಯೇ ರಣರಂಗಕ್ಕೆ ಧಾವಿಸಿದನು. ಅವನು ರಾಕ್ಷಸರೊಡನೆ ರಣಭೂಮಿಗೆ ಪ್ರಯಾಣ ಮಾಡುತ್ತಿದ್ದಾಗ ಸಮುದ್ರವನ್ನೇ ಕ್ಷೋಭೆಗೊಳಿಸುವಂತಹ ದೊಡ್ಡದಾದೊಂದು ಕೋಲಾಹಲಶಬ್ದವಾಯಿತು. ಆ ಶಬ್ದದಿಂದ ವೃಕ್ಷ-ಪರ್ವತಗಳನ್ನೇ ಆಯುಧ ಗಳನ್ನಾಗಿ ಮಾಡಿಕೊಂಡಿದ್ದ, ಯುದ್ಧಮಾಡಲು ಸನ್ನದ್ಧವಾಗಿ ನಿಂತಿದ್ದ ವಾನರ ಸೈನ್ಯವು ಭಯಗೊಂಡಿತು. ಅನಂತರ ವಾನರರಿಗೂ–ರಾಕ್ಷಸರಿಗೂ ಅತ್ಯಂತ ಭಯಂಕರವಾದ ಯುದ್ಧವು ಪ್ರಾರಂಭವಾಯಿತು. ಯುದ್ಧದಲ್ಲಿ ತೊಡಗಿದ್ದ ಸಮಸ್ತರೂ ಮಹಾಬಲಶಾಲಿಗಳೂ, ಶೂರರೂ, ಪರ್ವತೋಪಮರೂ

ಆಗಿದ್ದರು. ರಾಮ-ರಾವಣರ ಸಲುವಾಗಿ ದೇಹತ್ಯಾಗಮಾಡಲೂ ಸಿದ್ಧರಾಗಿದ್ದರು. ವಾನರರು ಮತ್ತು ರಾಕ್ಷಸರು ಒಬ್ಬರು ಮತ್ತೊಬ್ಬರನ್ನು ಸಂಹರಿಸುವ ಅಪೇಕ್ಷೆಯಿಂದ ಅಲ್ಲಿ ಸೇರಿದ್ದರು. ಯುದ್ಧದಲ್ಲಿ ಅತ್ಯಂತವೇಗಶಾಲಿಗಳಾಗಿದ್ದ ಅವರೆಲ್ಲರೂ ಕೋಪದಿಂದ ಒಬ್ಬರನ್ನೊಬ್ಬರು ನೋಡುತ್ತಾ ಗರ್ಜನೆಮಾಡುತ್ತಿದ್ದರು. ಅವರ ಆ ಗರ್ಜನೆಗಳ ಶಬ್ದವು ಬಹಳ ದೂರದವರೆಗೂ ಕೇಳಿಸುತ್ತಿದ್ದಿತು. ವಾನರ-ರಾಕ್ಷಸರ ಪದಸಂಘಟ್ಟನೆಗಳಿಂದ ಹುಟ್ಟಿದ ಅರುಣವರ್ಣದ ಧೂಳಿಯು ಭಯಂಕರವಾದ ರೀತಿಯಲ್ಲಿ ಸರ್ವತ್ರ ವ್ಯಾಪಿಸುತ್ತಾ ಹತ್ತುದಿಕ್ಕುಗಳನ್ನೂ ಮುಚ್ಚಿಬಿಟ್ಟಿತು. ಪರಸ್ಪರವಾಗಿ ಯುದ್ಧಮಾಡುತ್ತಿದ್ದುದರಿಂದ ಹುಟ್ಟಿದ, ರೇಷ್ಮೆಯಂತೆ ನವಿರಾಗಿದ್ದ ಧೂಳಿನಿಂದ ರಣರಂಗದಲ್ಲಿದ್ದ ಎಲ್ಲ ಪ್ರಾಣಿಗಳೂ ಮುಚ್ಚಿಹೋಗಿದ್ದುವು. ಆದುದರಿಂದ ವಾನರ-ರಾಕ್ಷಸರು ಒಬ್ಬರು ಮತ್ತೊಬ್ಬರನ್ನು ನೋಡಲೂ ಸಾಧ್ಯವಾಗುತ್ತಿರಲಿಲ್ಲ. ಎಲ್ಲ ಕಡೆಗಳಲ್ಲಿಯೂ ಹರಡಿಕೊಂಡಿದ್ದ ಆ ಧೂಳಿನಿಂದಾಗಿ ಧ್ವಜ-ಪತಾಕೆಗಳಾಗಲೀ, ಗುರಾಣಿಗಳಾಗಲೀ, ಕುದುರೆಗಳಾಗಲೀ, ಆಯುಧಗಳಾಗಲೀ, ರಥವಾಗಲೀ ಕಾಣಿಸುತ್ತಿರಲಿಲ್ಲ. ಪ್ರಾಣಿಗಳ ಓಡಾಟದ ಶಬ್ದವೂ ಯೋಧರ ಗರ್ಜನೆಗಳ ಶಬ್ದವೂ ಮಾತ್ರವೇ ಕೇಳಿಸುತ್ತಿದ್ದಿತು. ಆ ಭಯಂಕರವಾದ ಯುದ್ಧದಲ್ಲಿ ಯೋಧರ ಮತ್ತು ಪ್ರಾಣಿಗಳ ರೂಪಗಳೇ ಕಾಣಿಸುತ್ತಿರಲಿಲ್ಲ.

ಹರೀನೇವ ಸುಸಂಕ್ರುದ್ಧಾ ಹರಯೋ ಜಘ್ನುರಾಹವೇ ।
ರಾಕ್ಷಸಾಶ್ಚಾಪಿ ರಕ್ಷಾಂಸಿ ನಿಜಘ್ನುಸ್ತಿಮಿರೇ ತದಾ ॥೨೨॥

ಧೂಳಿನಿಂದುಂಟಾದ ಆ ಕತ್ತಲಿನಲ್ಲಿ ಶತ್ರುಗಳಾರೆಂಬುದನ್ನು ಅರಿಯದೇ ಕುಪಿತರಾದ ವಾನರರು ತಮ್ಮ ಕಡೆಯ ವಾನರರನ್ನೇ ಸಂಹರಿಸುತ್ತಿದ್ದರು. ರಾಕ್ಷಸರು ರಾಕ್ಷಸರನ್ನೇ ಸಂಹರಿಸುತ್ತಿದ್ದರು.

ಹೀಗೆ ಹಲವು ಬಾರಿ ತಮ್ಮಕಡೆಯವರನ್ನೂ–ಕೆಲವು ಬಾರಿ ಶತ್ರುಪಕ್ಷದ ಯೋಧರನ್ನೂ ಸಂಹರಿಸುತ್ತಿದ್ದ ವಾನರ-ರಾಕ್ಷಸರು ರಣಭೂಮಿಯನ್ನು ರಕ್ತದಿಂದ ನೆನೆಸಿಬಿಟ್ಟರು ಮತ್ತು ಕೆಸರಿನಿಂದ ಕೂಡಿದುದನ್ನಾಗಿಯೂ ಮಾಡಿದರು. ರಕ್ತದ ಪ್ರವಾಹದಿಂದಾಗಿ ಧೂಳು ಅಡಗಿತು. ಯುದ್ಧಭೂಮಿಯು ಯೋಧರ ಶವಗಳಿಂದಲೇ ತುಂಬಿಹೋಗಿದ್ದಿತು. ವಾನರ-ರಾಕ್ಷಸರು ವೃಕ್ಷ-

ಶಕ್ತಿ-ಗದಾ-ಪ್ರಾಸಗಳಿಂದಲೂ, ಶಿಲಾ-ಪರಿಘ-ತೋಮರಗಳಿಂದಲೂ ಪರಸ್ಪರವಾಗಿ ಬಡಿದಾಡಿದರು. ಭಯಂಕರವಾದ ಕರ್ಮಗಳನ್ನು ಮಾಡುವ, ಪರಿಘಾಯುಧಕ್ಕೆ ಸಮಾನವಾದ ಭುಜಗಳನ್ನು ಹೊಂದಿದ್ದ ವಾನರರು ಪರ್ವತೋಪಮರಾಗಿದ್ದ ರಾಕ್ಷಸರನ್ನು ಯುದ್ಧದಲ್ಲಿ ಸಂಹರಿಸುತ್ತಿದ್ದರು. ಅಂತೆಯೇ ಪ್ರಾಸ-ತೋಮರಗಳನ್ನು ಹಿಡಿದಿದ್ದ ರಾಕ್ಷಸರು ಪರಮಕ್ರುದ್ಧರಾಗಿ ಪರಮದಾರುಣವಾದ ಶಸ್ತ್ರಗಳಿಂದ ವಾನರರನ್ನು ಸಂಹರಿಸುತ್ತಿದ್ದರು. ರಾಕ್ಷಸರ ದಳಪತಿಯಾದ ಅಕಂಪನನು ಪರಮಕ್ರುದ್ಧನಾಗಿ ಭಯಂಕರಪರಾಕ್ರಮಿಗಳಾಗಿದ್ದ ರಾಕ್ಷಸರನ್ನು ಪ್ರೋತ್ಸಾಹದ ಮಾತುಗಳಿಂದ ಹರ್ಷಗೊಳಿಸುತ್ತಾ ಯುದ್ಧಮಾಡುತ್ತಿದ್ದನು.

ವಾನರಸೈನಿಕರು ಕೂಡ ರಾಕ್ಷಸರನ್ನು ಆಕ್ರಮಿಸಿ ಅವರಲ್ಲಿದ್ದ ಶಸ್ತ್ರಾಸ್ತ್ರಗಳನ್ನು ಬಲಪೂರ್ವಕವಾಗಿ ಕಿತ್ತುಕೊಂಡು ಮಹಾವೃಕ್ಷಗಳಿಂದಲೂ ಮತ್ತು ದೊಡ್ಡ-ದೊಡ್ಡ ಬಂಡೆಗಳಿಂದಲೂ ರಾಕ್ಷಸರನ್ನು ಸೀಳಿಹಾಕುತ್ತಿದ್ದರು. ಆ ಸಮಯದಲ್ಲಿ ವೀರವಾನರರಾದ ಕುಮುದ, ನಲ, ಮೈಂದ, ದ್ವಿವಿದರು ಕುಪಿತರಾಗಿ ತಮ್ಮ ಉತ್ತಮವಾದ ಯುದ್ಧದ ವೇಗವನ್ನು ತೋರತೊಡಗಿದರು. ಮಹಾಪರಾಕ್ರಮಿಗಳಾದ ಆ ವಾನರಶ್ರೇಷ್ಠರು ರಣರಂಗದಲ್ಲಿ ಆಟವಾಡುತ್ತಾ ವೃಕ್ಷಗಳಿಂದಲೇ ಅಪಾರಸಂಖ್ಯೆಯಲ್ಲಿ ರಾಕ್ಷಸರನ್ನು ಸಂಹರಿಸಿದರು. ಮರ-ಬಂಡೆಗಳು, ಪರ್ವತಶಿಖರ–ಇವೇ ಮುಂತಾದ ಆಯುಧಗಳಿಂದ ರಾಕ್ಷಸರನ್ನು ಮಥಿಸಿಬಿಟ್ಟರು.

೫೫ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೫೬ನೆಯ ಸರ್ಗ

ಹನುಮಂತನಿಂದ ಅಕಂಪನನ ಸಂಹಾರ

ತದ್ದೃಷ್ಟ್ವಾ ಸುಮಹತ್ಕರ್ಮ ಕೃತಂ ವಾನರಸತ್ತಮೈಃ ।
ಕ್ರೋಧಮಾಹಾರಯಾಮಾಸ ಯುಧಿ ತೀವ್ರಮಕಮ್ಪನಃ ॥೧॥

ಯುದ್ಧಭೂಮಿಯಲ್ಲಿ ಕುಮುದನೇ ಮೊದಲಾದ ವಾನರಶ್ರೇಷ್ಠರು ಮಾಡಿದ ರಾಕ್ಷಸರ ಮಹಾಸಂಹಾರಕಾರ್ಯವನ್ನು ನೋಡಿದ ಅಕಂಪನನ ಕೋಪವು ಮಿತಿಮೀರಿತು.

ಶತ್ರುಗಳು ಎಸಗಿದ ಸಂಹಾರಕ್ರಿಯೆಯನ್ನು ನೋಡಿ ಅವನ ಶರೀರ ವೆಲ್ಲವೂ ಕೋಪದಿಂದ ಉರಿಯತೊಡಗಿತು. ಉತ್ತಮವಾದ ಧನುಸ್ಸನ್ನು ಅಲ್ಲಾಡಿಸುತ್ತಾ ಸಾರಥಿಗೆ ಹೇಳಿದನು :

"ಸಾರಥಿಯೇ! ಬಲಿಷ್ಠರಾದ ಈ ವಾನರನಾಯಕರು ನಮ್ಮ ಕಡೆಯ ರಾಕ್ಷಸರನ್ನು ಅಪಾರಸಂಖ್ಯೆಯಲ್ಲಿ ಸಂಹರಿಸುತ್ತಿದ್ದಾರೆ. ಅಲ್ಲಿಗೆ ನೀನೀಗ ಬಹಳ ಶೀಘ್ರವಾಗಿ ರಥವನ್ನು ತಲುಪಿಸು. ಈ ವಾನರರು ಮಹಾಬಲಿಷ್ಠರಾಗಿದ್ದಾರೆ. ಭಯಂಕರವಾದ ಕೋಪವುಳ್ಳವರಾಗಿದ್ದಾರೆ. ವೃಕ್ಷ-ಪರ್ವತಗಳೇ ಮುಂತಾದ ಆಯುಧಗಳನ್ನು ಹಿಡಿದು ನನ್ನ ಮುಂದೆ ನಿಂತಿದ್ದಾರೆ. ಸಮರಶ್ಲಾಘಿಗಳಾದ ಈ ಎಲ್ಲರನ್ನೂ ನಾನು ಸಂಹರಿಸಬೇಕೆಂದಿದ್ದೇನೆ. ಇವರು ಸಮಸ್ತರಾಕ್ಷಸ ಸೈನಿಕರನ್ನೂ ಸಂಹಾರಮಾಡುವಂತೆ ಕಾಣುತ್ತಿದೆ."

ಬಳಿಕ ವೇಗವಾಗಿ ಹೋಗುವ ಕುದುರೆಗಳಿಂದ ಸಜ್ಜಾಗಿದ್ದ ರಥದಲ್ಲಿ ಕುಳಿತು ರಥಿಗಳಲ್ಲಿ ಶ್ರೇಷ್ಠನಾದ ಅಕಂಪನನು ಬಹಳ ದೂರದಿಂದಲೇ ವಾನರ ನಾಯಕರನ್ನು ಬಾಣಗಳ ಸಮೂಹಗಳಿಂದ ಆಕ್ರಮಿಸಿದನು. ಅಕಂಪನನ ಬಾಣಗಳಿಂದ ಗಾಯಗೊಂಡ ಎಲ್ಲ ವಾನರರೂ ಪಲಾಯನಮಾಡಿದರು. ವಾನರರಿಗೆ ಅವನ ಎದುರಾಗಿ ನಿಲ್ಲಲೇ ಸಾಧ್ಯವಾಗಲಿಲ್ಲ. ಹೀಗಿರುವಾಗ ಯುದ್ಧಮಾಡಲು ಹೇಗೆ ಸಾಧ್ಯವಾದೀತು? ಅಕಂಪನನ ಬಾಣಗಳ ಪ್ರಹಾರ ಗಳಿಂದ ಮೃತ್ಯುವಶರಾದ ಮತ್ತು ಗಾಯಗೊಂಡು ಭಯದಿಂದ ಓಡುತ್ತಿರುವ ವಾನರಸೈನಿಕರನ್ನು ನೋಡಿ ಮಹಾಬಲನಾದ ಹನುಮಂತನು ತನ್ನ ಜ್ಞಾತಿ-ಬಾಂಧವರ ಸಹಾಯಕ್ಕಾಗಿ ಅಕಂಪನನನ್ನು ಎದುರಿಸಿ ನಿಂತನು. ಮಹಾ ಕಪಿಯಾದ ಹನುಮಂತನು ತಮ್ಮ ನೆರವಿಗೆ ಬಂದುದನ್ನು ನೋಡಿ ಕಪಿಶ್ರೇಷ್ಠ ರೆಲ್ಲರೂ ಒಟ್ಟಾಗಿ ಅತ್ಯಂತಹರ್ಷದಿಂದ ಹನುಮಂತನನ್ನು ಸುತ್ತುವರಿದು ನಿಂತರು. ಹನುಮಂತನು ಅಕಂಪನನೊಡನೆ ಯುದ್ಧಮಾಡಲು ನಿಂತಿರುವು ದನ್ನು ನೋಡಿ ವಾನರಶ್ರೇಷ್ಠರಿಗೆ ವಿಶೇಷವಾದ ಬಲವೇ ಬಂದಂತಾಯಿತು. ಮಹಾಬಲಿಷ್ಠನಾದ ಅವನನ್ನು ಆಶ್ರಯಿಸಿ ಅವರೂ ಬಲಿಷ್ಠರೇ ಆದರು.

ಅಕಂಪನನು ತನ್ನ ಮುಂದೆ ನಿಂತಿರುವ ಪರ್ವತದಂತೆ ವಿಶಾಲಕಾಯ ನಾಗಿದ್ದ ಹನುಮಂತನನ್ನು ನೋಡಿ–ಮಹೇಂದ್ರನು ಪರ್ವತಗಳ ಮೇಲೆ ಮಳೆಗರೆಯುವಂತೆ–ಹನುಮಂತನ ಮೇಲೆ ಬಾಣಗಳ ಮಳೆಯನ್ನೇ ಸುರಿಸಿ

ದನು. ಶರೀರದ ಮೇಲೆ ಸತತವಾಗಿ ಬೀಳುತ್ತಿದ್ದ ಬಾಣಗಳ ವಿಷಯವಾಗಿ ಹನುಮಂತನು ಲೆಕ್ಕಿಸಲೇ ಇಲ್ಲ. ಮಹಾಬಲನಾದ ಹನುಮಂತನು ಅಕಂಪನನನ್ನು ಸಂಹರಿಸಲೇಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿದನು. ಮಹಾತೇಜಸ್ವಿಯಾದ ಹನುಮಂತನು ಗಹ-ಗಹಿಸಿ ನಗುತ್ತಾ ಭೂಮಿಯನ್ನೇ ನಡುಗಿಸಿಬಿಡುವನೋ ಎಂಬಂತೆ ಹೆಜ್ಜೆಗಳನ್ನಿಡುತ್ತಾ ಸೇನಾಪತಿಯ ಕಡೆಗೆ ಧಾವಿಸಿದನು. ಆ ಸಮಯದಲ್ಲಿ ಘೋರವಾಗಿ ಗರ್ಜನೆಮಾಡುತ್ತಿದ್ದ, ತೇಜಸ್ಸಿನಿಂದ ದೇದೀಪ್ಯಮಾನನಾಗಿ ಕಾಣುತ್ತಿದ್ದ ಹನುಮಂತನ ರೂಪವು ಪ್ರಜ್ವಲಿಸುವ ಯಜ್ಞೇಶ್ವರನ ರೂಪದಂತೆಯೇ ಇದ್ದಿತು. ಅಕಂಪನನ ಬಳಿಗೆ ಹೋಗುತ್ತಲೇ ತನ್ನ ಬಳಿಯಲ್ಲಿ ಯಾವ ಆಯುಧವೂ ಇಲ್ಲವೆಂಬುದು ಸ್ಮರಣೆಗೆ ಬಂದಿತು. ಒಡನೆಯೇ ಹನುಮಂತನು ಶೀಘ್ರವಾಗಿ ಅಲ್ಲಿಯೇ ಇದ್ದ ಪರ್ವತವೊಂದನ್ನು ಕಿತ್ತು ಕೈಯಲ್ಲಿ ಹಿಡಿದುಕೊಂಡನು. ಅಂತಹ ದೊಡ್ಡ ಪರ್ವತವನ್ನು ಒಂದೇ ಕೈಯಿಂದ ಹಿಡಿದು ಗಟ್ಟಿಯಾಗಿ ಗರ್ಜನೆಮಾಡುತ್ತಾ ರಭಸದಿಂದ ಎಸೆಯುವ ಸಲುವಾಗಿ ಆ ಪರ್ವತವನ್ನು ಹಿಂದಕ್ಕೂ-ಮುಂದಕ್ಕೂ ಓಲಾಡಿಸುತ್ತಾ ವಜ್ರಾಯುಧವನ್ನು ಹಿಡಿದು ಇಂದ್ರನು ನಮುಚಿಯನ್ನು ಹಿಂಬಾಲಿಸಿದಂತೆ-ರಾಕ್ಷಸೇಂದ್ರನಾದ ಅಕಂಪನನ ಕಡೆಗೆ ಧಾವಿಸಿದನು. ಹನುಮಂತನು ಪರ್ವತಶಿಖರವನ್ನೆತ್ತಿಕೊಂಡು ತನ್ನ ಕಡೆಗೆ ಬರುತ್ತಿರುವು ದನ್ನು ನೋಡಿ ಅಕಂಪನನು ದೂರದಿಂದಲೇ ಅರ್ಧಚಂದ್ರಗಳೆಂಬ ಮಹಾಬಾಣಗಳಿಂದ ಹನುಮಂತನ ಕೈಲಿದ್ದ ಪರ್ವತವನ್ನು ಸೀಳಿಬಿಟ್ಟನು. ಪರ್ವತಶಿಖರವು ರಾಕ್ಷಸನ ಬಾಣಗಳ ಪ್ರಹಾರದಿಂದ ಆಕಾಶದಲ್ಲಿಯೇ ನುಚ್ಚುನೂರಾಗಿ ಕೆಳಕ್ಕೆ ಬಿದ್ದುದನ್ನು ನೋಡಿ ಹನುಮಂತನು ಅತ್ಯಂತಕ್ರುದ್ಧನಾದನು. ರೋಷದಿಂದಲೂ ದರ್ಪದಿಂದಲೂ ಕೂಡಿದ್ದ ಮಹಾದ್ಯುತಿಮಂತನಾದ ಹನುಮಂತನು ಮಹಾಪರ್ವತದಂತೆ ಎತ್ತರವಾಗಿದ್ದ ಅಶ್ವಕರ್ಣವೆಂಬ ವೃಕ್ಷದ ಬಳಿಗೆ ಹೋಗಿ ಬುಡಸಹಿತವಾಗಿ ಕಿತ್ತು ಆ ವೃಕ್ಷವನ್ನು ಕೈಯಲ್ಲಿ ಹಿಡಿದು ಪ್ರಸನ್ನಚಿತ್ತನಾಗಿ ಗರ-ಗರನೆ ತಿರುಗಿಸುತ್ತಾ ಅತ್ಯಂತ ಕ್ರುದ್ಧನಾಗಿ ಬಹಳ ವೇಗವಾಗಿ ಅಕಂಪನನ ಕಡೆಗೆ ಓಡುತ್ತಿದ್ದನು. ಹಾಗೆ ಓಡುತ್ತಿದ್ದಾಗಲೇ ಅವನ ತೊಡೆಯಿಂದ ಹುಟ್ಟಿದ ಗಾಳಿಯು ಸಮೀಪದಲ್ಲಿದ್ದ ಅನೇಕವೃಕ್ಷಗಳನ್ನು ಬುಡಮೇಲು ಮಾಡಿತು. ಅವನ ಕಾಲುಗಳ ಸಂಘಟ್ಟನೆ

ಗಳಿಂದ ಭೂಮಿಯನ್ನೇ ಸೀಳಿಕೊಂಡು ಮುಂದೆ ಹೋಗುತ್ತಿದ್ದನು. ಮಾವಟಿಗರಿಂದ ಕೂಡಿದ ಆನೆಗಳನ್ನೂ, ರಥಿಗಳಿಂದ ಕೂಡಿದ ರಥಗಳನ್ನೂ, ಪದಾತಿಗಳಾದ ರಾಕ್ಷಸರನ್ನೂ ಅಶ್ವಕರ್ಣವೃಕ್ಷದಿಂದ ಪ್ರಹರಿಸಿ ಸಂಹರಿಸಿದನು. ಅಂತಕನಂತೆಯೇ ಮಹಾಕ್ರುದ್ಧನಾಗಿದ್ದ, ವೃಕ್ಷವನ್ನು ಹಿಡಿದಿದ್ದ, ಪ್ರಾಣಾಪ ಹಾರಕನಾದ ಹನುಮಂತನನ್ನು ನೋಡಿ ರಾಕ್ಷಸರು ಓಡಲು ಪ್ರಾರಂಭಿಸಿದರು. ಶತ್ರುಗಳ ಮೇಲೆ ಸತತವಾಗಿ ಆಕ್ರಮಣಮಾಡುತ್ತಿದ್ದ, ಕ್ರುದ್ಧನಾಗಿದ್ದ, ರಾಕ್ಷಸರಿಗೆ ಭಯವನ್ನುಂಟುಮಾಡುತ್ತಿದ್ದ ಹನುಮಂತನನ್ನು ವೀರನಾದ ಅಕಂಪನನು ನೋಡಿ ಕ್ಷೋಭೆಗೊಂಡು ಗಟ್ಟಿಯಾಗಿ ಗರ್ಜನೆಮಾಡಿದನು. ಮರುಕ್ಷಣದಲ್ಲಿಯೇ ರಾಕ್ಷಸಸೇನಾಪತಿಯು ದೇಹವನ್ನೇ ಸೀಳಿಹಾಕುವ ಹರಿತವಾದ ಹದಿನಾಲ್ಕು ಬಾಣಗಳಿಂದ ಮಹಾವೀರ್ಯನಾದ ಹನುಮಂತ ನನ್ನು ಗಾಯಗೊಳಿಸಿದನು.

ಹೀಗೆ ಅಕಂಪನನು ಪ್ರಯೋಗಿಸಿದ ಬಾಣಗಳಿಂದಲೂ ನಿಶಿತವಾದ ಶಕ್ತ್ಯಾಯುಧಗಳಿಂದಲೂ ವ್ಯಾಪ್ತನಾಗಿದ್ದ ಹನುಮಂತನು ವೃಕ್ಷಗಳಿಂದ ತುಂಬಿರುವ ಪರ್ವತದಂತೆಯೇ ಪ್ರಕಾಶಿಸಿದನು. ಅವನ ಶರೀರವೆಲ್ಲವೂ ರಕ್ತ ದಿಂದ ತೋಯ್ದುಹೋಗಿದ್ದಿತು. ಆ ಸಮಯದಲ್ಲಿ ಮಹಾಬಲನಾದ, ಮಹಾ ವೀರ್ಯನಾದ, ಮಹಾಕಾಯನಾದ ಹನುಮಂತನು ಹೂಗಳು ಅರಳಿರುವ ಅಶೋಕವೃಕ್ಷದಂತೆಯೂ–ಹೊಗೆಯಿಲ್ಲದ ಬೆಂಕಿಯಂತೆಯೂ ಪ್ರಕಾಶಿಸಿದನು.

ಅನಂತರ ಹನುಮಂತನು ಮತ್ತೊಂದು ವೃಕ್ಷವನ್ನು ಕಿತ್ತು ಅತ್ಯಂತ ವೇಗವಾಗಿ ತಿರುಗಿಸುತ್ತಾ ರಾಕ್ಷಸೇಂದ್ರನಾದ ಅಕಂಪನನ ತಲೆಯಲ್ಲಿ ಪ್ರಹರಿ ಸಿದನು. ಕೋಪಿಷ್ಠನಾಗಿದ್ದ, ಮಹಾತ್ಮನಾದ, ವಾನರೇಂದ್ರನಾದ ಹನುಮಂತ ನಿಂದ ವೃಕ್ಷಾಯುಧದಿಂದ ಪ್ರಹರಿಸಲ್ಪಟ್ಟ ರಾಕ್ಷಸನು ಸತ್ತು ಕೆಳಗುರುಳಿದನು. ಭೂಕಂಪವಾದಾಗ ಮರಗಳು ನಡುಗುವಂತೆ ರಾಕ್ಷಸೇಂದ್ರನಾದ ಅಕಂಪನನು ಹತನಾಗಿ ಕೆಳಕ್ಕೆ ಬಿದ್ದೊಡನೆಯೇ ಎಲ್ಲ ರಾಕ್ಷಸರೂ ವ್ಯಥಿತರಾದರು.

ವಾನರರಿಂದ ಹಿಮ್ಮೆಟ್ಟಿಸಲ್ಪಟ್ಟು ಪರಾಜಿತರಾದ ಎಲ್ಲ ರಾಕ್ಷಸರೂ ಆಯುಧಗಳನ್ನು ಎಸೆದು ಭಯಗೊಂಡು ಲಂಕೆಗೆ ಪಲಾಯನಮಾಡಿದರು. ಹಾಗೆ ಪಲಾಯನಮಾಡುತ್ತಿದ್ದಾಗ ಅವರ ತಲೆಗೂದಲುಗಳು ಬಿಚ್ಚಿ

ಹೋಗಿದ್ದುವು. ಎಲ್ಲರೂ ಬಹಳವಾಗಿ ಗಾಬರಿಗೊಂಡಿದ್ದರು. ಉತ್ಸಾಹ ಶೂನ್ಯರಾಗಿದ್ದರು. ಭಯದಿಂದಾಗಿ ಅವರ ಶರೀರಗಳಲ್ಲಿ ಬೆವರು ಸುರಿಯು ತ್ತಿದ್ದಿತು. ಒಬ್ಬರ ಮೇಲೆ ಮತ್ತೊಬ್ಬರು ಬೀಳುತ್ತಿದ್ದರು. ದಿಕ್ಕುತೋರದೇ ಅತ್ಯಂತ ಮೂಢರಾಗಿದ್ದ ಆ ರಾಕ್ಷಸಸೈನಿಕರು ಬಾರಿ-ಬಾರಿಗೂ ಹಿಂದಕ್ಕೆ ನೋಡುತ್ತಾ ಭಯದಿಂದಲೇ ಲಂಕಾಪಟ್ಟಣಕ್ಕೆ ತೆರಳಿದರು.

ರಾಕ್ಷಸರು ಪರಾಜಿತರಾಗಿ ಲಂಕೆಯನ್ನು ಸೇರಿದನಂತರ ಮಹಾಬಲ ರಾದ ವಾನರರೆಲ್ಲರೂ ಒಂದೆಡೆಯಲ್ಲಿ ಸೇರಿ ಹನುಮಂತನನ್ನು ಸತ್ಕರಿಸಿದರು. ಸತ್ತ್ವಸಂಪನ್ನನಾದ ಹನುಮಂತನೂ ಉತ್ಸಾಹಿಯಾಗಿ ಯಥಾಯೋಗ್ಯವಾಗಿ ಅನುಕೂಲಕ್ಕೆ ತಕ್ಕಂತೆ ಸಮಸ್ತವಾನರನಾಯಕರನ್ನೂ ಚೆನ್ನಾಗಿ ಆದರಿಸಿದನು.

ವಿಜಯೋಲ್ಲಾಸದಿಂದ ಸುಶೋಭಿತರಾಗಿದ್ದ ವಾನರರು ಬಲವನ್ನೆಲ್ಲಾ ಬಿಟ್ಟು ಗಟ್ಟಿಯಾಗಿ ಗರ್ಜನೆಮಾಡಿದರು. ರಣರಂಗದಲ್ಲಿ ಬದುಕಿ ಉಳಿದಿದ್ದ ರಾಕ್ಷಸರನ್ನು ಎಳೆದಾಡಲು ಪ್ರಾರಂಭಿಸಿದರು. ಮಹಾವಿಷ್ಣುವು ಶತ್ರುನಾಶಕ ನಾದ, ಮಹಾಬಲಿಷ್ಠನಾದ, ಭಯಂಕರನಾದ ಮಹಾಸುರನನ್ನು ಯುದ್ಧದಲ್ಲಿ ಸಂಹರಿಸಿ ವಿಜಯಲಕ್ಷ್ಮಿಯನ್ನು ವರಿಸಿದಂತೆ–ಮಹಾಕಪಿಯಾದ ಹನು ಮಂತನು ರಾಕ್ಷಸರೊಡನೆ ಯುದ್ಧಮಾಡಿ ಅವರೆಲ್ಲರನ್ನೂ ಸಂಹರಿಸಿ ವೀರೋಚಿತವಾದ ತೇಜಸ್ಸನ್ನು ಹೊಂದಿದನು.

ಆ ಸಮಯದಲ್ಲಿ ದೇವತೆಗಳು, ಮಹಾಬಲಿಷ್ಠರಾದ ರಾಮ-ಲಕ್ಷ್ಮಣರು, ಸುಗ್ರೀವನೇ ಮೊದಲಾದ ವಾನರರು, ಮಹಾಬಲನಾದ ವಿಭೀಷಣ– ಇವರೆಲ್ಲರೂ ಯಥೋಚಿತವಾಗಿ ಮಾರುತಿಯನ್ನು ಸತ್ಕರಿಸಿದರು.

೫೮ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೫೭ನೆಯ ಸರ್ಗ

ಪ್ರಹಸ್ತನು ರಾವಣನ ಆಜ್ಞೆಯಂತೆ ವಿಶಾಲವಾದ ಸೈನ್ಯದೊಡನೆ ಯುದ್ಧಕ್ಕೆ ಹೊರಟುದು

ಅಕಮ್ಪನವಧಂ ಶ್ರುತ್ವಾ ಕ್ರುದ್ಧೋ ವೈ ರಾಕ್ಷಸೇಶ್ವರಃ ।
ಕಿಂಚಿದ್ದೀನಮುಖಶ್ಚಾಪಿ ಸಚಿವಾಂಸ್ತಾನುದೈಕ್ಷತ ॥೧॥

ಅಕಂಪನನ ವಧೆಯ ವಾರ್ತೆಯನ್ನು ಕೇಳಿದ ರಾವಣನು ಕ್ರುದ್ಧನಾದನು. ಅವನ ಮುಖದಲ್ಲಿ ಸ್ವಲ್ಪ ದೀನತೆಯೂ ಮೂಡಿದ್ದಿತು. ತನ್ನ ಸುತ್ತಲೂ ಕುಳಿತಿದ್ದ ಸಚಿವರ ಕಡೆಗೆ ನೋಡಿದನು.

ಮುಹೂರ್ತಕಾಲದವರೆಗೆ ರಾವಣನು ಮುಂದೇನು ಮಾಡಬೇಕೆಂಬು ದರ ಬಗೆಗೆ ತನ್ನಲ್ಲಿಯೇ ಯೋಚಿಸುತ್ತಿದ್ದು ಅನಂತರ ಸಚಿವರೊಡನೆಯೂ ವಿಚಾರವಿನಿಮಯ ಮಾಡಿಕೊಂಡನು. ಸೈನಿಕರ ಸ್ಥೈರ್ಯವನ್ನು ತಿಳಿಯುವ ಸಲುವಾಗಿ ಬೆಳಗಿನ ಸಮಯದಲ್ಲಿ ಲಂಕೆಯಲ್ಲಿದ್ದ ಎಲ್ಲ ಸೇನಾ ತುಕಡಿಗಳನ್ನೂ ವೀಕ್ಷಿಸಲು ಹೊರಟನು. ರಾಕ್ಷಸರ ಸಮೂಹಗಳಿಂದ ರಕ್ಷಿಸಲ್ಪಡುತ್ತಿದ್ದ, ಅನೇಕ ಸೇನಾಸಮೂಹಗಳಿಂದ ಸಮಾವೃತವಾಗಿದ್ದ, ಧ್ವಜ-ಪತಾಕೆಗಳ ಮಾಲೆಯಿಂದ ಸಮಲಂಕೃತವಾಗಿದ್ದ ಲಂಕಾಪಟ್ಟಣವನ್ನು ನೋಡುತ್ತಾ ಹೋದನು. ಲಂಕಾಪಟ್ಟಣವು ಶತ್ರುಗಳಿಂದ ಆಕ್ರಮಿಸಲ್ಪಟ್ಟಿರುವುದನ್ನು ನೋಡಿ ಹಿತೈಷಿಯೂ, ಯುದ್ಧತಜ್ಞನೂ ಆಗಿದ್ದ ಪ್ರಹಸ್ತನಿಗೆ ಸಮಯೋಚಿತವಾದ ಈ ಮಾತನ್ನು ಹೇಳಿದನು :

"ಯುದ್ಧವಿಶಾರದನೇ! ಪ್ರಹಸ್ತ! ನಗರಕ್ಕೆ ಅತ್ಯಂತಸಮೀಪದಲ್ಲಿಯೇ ಶತ್ರುಗಳು ಬೀಡುಬಿಟ್ಟಿದ್ದಾರೆ. ಇದರಿಂದ ನಗರದ ಪ್ರಜೆಗಳಿಗೆ ಅತ್ಯಂತಪೀಡೆ ಯುಂಟಾಗಿದೆ. ಶತ್ರುವಿನೊಡನೆ ಯುದ್ಧಮಾಡಲು ಬೇರೆ ಯಾರು ಹೋದರೂ ಲಂಕಾಪಟ್ಟಣದ ಬಿಡುಗಡೆಯಾಗುವುದಿಲ್ಲವೆಂದು ನಾನು ಭಾವಿಸಿದ್ದೇನೆ. ನಾನಾಗಲೀ, ಕುಂಭಕರ್ಣನಾಗಲೀ, ಸೇನಾಪತಿಯಾದ ನೀನಾಗಲೀ, ಇಂದ್ರ ಜಿತುವಾಗಲೀ, ನಿಕುಂಭನಾಗಲೀ ಮಹಾಯುದ್ಧದ ಭಾರವನ್ನು ವಹಿಸ ಬಲ್ಲೆವು. ಆದುದರಿಂದ ನೀನೀಗಲೇ ಸೇನಾಸಮೇತನಾಗಿ ಯುದ್ಧದಲ್ಲಿ ಜಯ

ಗಳಿಸಲು ವಾನರರಿರುವೆಡೆಗೆ ಶೀಘ್ರವೇ ಪ್ರಯಾಣಮಾಡು. ನೀನಿಲ್ಲಿಂದ ಹೊರಡುತ್ತಲೇ ವಾನರಸೈನ್ಯವು ವಿಚಲಿತವಾಗುತ್ತದೆ. ಗರ್ಜನೆಮಾಡುವ ರಾಕ್ಷಸೇಂದ್ರನ ಸಿಂಹದ ಗರ್ಜನೆಯನ್ನು ಕೇಳಿದೊಡನೆಯೇ ಅದು ಓಡಿಯೇ ಹೋಗುತ್ತದೆ. ವಾನರರು ಯಾವಾಗಲೂ ಚಪಲರು. ನೀತಿ-ನಿಯಮಗಳಿಲ್ಲದವರು. ಚಂಚಲಚಿತ್ತರು. ಸಿಂಹಗರ್ಜನೆಯನ್ನು ಆನೆಗಳು ಸಹಿಸಿಕೊಳ್ಳಲು ಶಕ್ಯವಾಗದಿರುವಂತೆಯೇ ನಿನ್ನ ಗರ್ಜನೆಯನ್ನು ವಾನರರು ಸಹಿಸಿಕೊಳ್ಳಲಾರರು. ವಾನರಸೈನಿಕರು ಪಲಾಯನಮಾಡಿದನಂತರ ನಿರಾಶ್ರಯರಾಗುವ ರಾಮ-ಲಕ್ಷ್ಮಣರು ನಿನ್ನ ವಶರಾಗುತ್ತಾರೆ.

ಆಪತ್ಸಂಶಯಿತಾ ಶ್ರೇಯೋ ನಾತ್ರ ನಿಃಸಂಶಯೀಕೃತಾ ।
ಪ್ರತಿಲೋಮಾನುಲೋಮಂ ವಾ ಯದ್ವಾ ನೋ ಮನ್ಯಸೇ ಹಿತಮ್ ॥೧೧॥

ಯುದ್ಧದಲ್ಲಿ ವಿಪತ್ತು ಸಂದಿಗ್ಧವಾಗಿರುತ್ತದೆ. ಯುದ್ಧದಲ್ಲಿ ಮರಣ ಹೊಂದಬಹುದು ; ಹೊಂದದೆಯೂ ಇರಬಹುದು. ಮರಣವು ಸಂದಿಗ್ಧವಾದರೂ ಯುದ್ಧಮಾಡುವುದೇ ಶ್ರೇಯಸ್ಕರ. ಏಕೆಂದರೆ : ಯುದ್ಧದಲ್ಲಿ ಮರಣಹೊಂದುವುದು ಶ್ರೇಯಸ್ಕರವಾದುದು. ಸಂಶಯರಹಿತವಾಗಿ ಮಾಡಲ್ಪಟ್ಟ ಆಪತ್ತು ಶ್ರೇಯಸ್ಕರವಲ್ಲ. ಆಪತ್ತು ಅಥವಾ ಮೃತ್ಯುವು ನಿಸ್ಸಂಶಯವಾಗಬೇಕಾದರೆ ಯುದ್ಧಮಾಡಕೂಡದು. ಯುದ್ಧಮಾಡದಿದ್ದರೆ ತಾತ್ಕಾಲಿಕವಾಗಿ ಮರಣವು ಸಂಭವಿಸುವುದಿಲ್ಲವೆಂಬುದು ನಿಜ. ಆದರೆ ಮರಣವು ಯಾವಾಗಲೂ ತಪ್ಪಿದ್ದಲ್ಲ. ಆದರೆ ವೀರನಾದವನಿಗೆ ಸ್ವಾಭಾವಿಕವಾದ ಮರಣಕ್ಕಿಂತಲೂ ಯುದ್ಧದಲ್ಲಿ ಮರಣಹೊಂದುವುದೇ ಶ್ರೇಯಸ್ಕರ.* ಆದುದರಿಂದ ಯುದ್ಧದಲ್ಲಿ ಮರಣವಾಗಬಹುದಾದರೂ ಯುದ್ಧಮಾಡುವುದೇ ಶ್ರೇಯಸ್ಕರವೆಂಬುದು ನನ್ನ ಅಭಿಮತವಾಗಿದೆ. ಈ ನನ್ನ ಅಭಿಪ್ರಾಯಕ್ಕೆ ನಿನ್ನ ಪ್ರತಿಕೂಲವಾದ ಅಭಿಪ್ರಾಯವಿದ್ದರೂ ಸ್ಪಷ್ಟವಾಗಿ ಹೇಳು. ಸಹಮತವಿದ್ದರೂ

---

* ಹತೋ ವಾ ಪ್ರಾಪ್ಸ್ಯಸೇ ಸ್ವರ್ಗಂ ಜಿತ್ವಾ ವಾ ಮೋಕ್ಷ್ಯಸೇ ಮಹೀಮ್ ॥

(ಗೀತಾ)

ಯತ್ರಾಯುದ್ಧೇ ಧ್ರುವೋ ಮೃತ್ಯುರ್ಯುದ್ಧೇ ಜೀವಿತಸಂಶಯಃ ।
ತಮೇವ ಕಾಲಂ ಯುದ್ಧಸ್ಯ ಪ್ರವದನ್ತಿ ಮನೀಷಿಣಃ ॥

ಹೇಳು. ಒಟ್ಟಿನಲ್ಲೀಗ ನಮಗೆ ಈ ಸಮಯದಲ್ಲಿ ಯಾವುದು ಹಿತವೆಂದು ಭಾವಿಸುವೆಯೋ ಅದನ್ನು ಸ್ಪಷ್ಟಪಡಿಸು."

ರಾವಣನು ಹೀಗೆ ಹೇಳಲು ಅಸುರೇಂದ್ರನಾದ ಬಲಿಚಕ್ರವರ್ತಿಗೆ ಶುಕ್ರಾಚಾರ್ಯನು ಸಲಹೆ ನೀಡಿದಂತೆ–ವಾಹಿನೀಪತಿಯಾದ ಪ್ರಹಸ್ತನು ರಾವಣನಿಗೆ ಹೇಳಿದನು :

"ಮಹಾರಾಜ! ನಾವೆಲ್ಲರೂ ಕುಶಲಿಗಳಾದ ಮಂತ್ರಿಗಳೊಡನೆ ಈ ವಿಚಾರವನ್ನು ಹಿಂದೆಯೇ ಪ್ರಸ್ತಾಪಮಾಡಿದ್ದೇವೆ. ಹಾಗೆ ಸಮಾಲೋಚಿಸಿದಾಗ ನಮ್ಮ ಏಕಾಭಿಪ್ರಾಯವು ಸಿದ್ಧವಾಗಲಿಲ್ಲ. ವಿವಾದವೇ ಉಂಟಾಯಿತು.

ಪ್ರದಾನೇನ ತು ಸೀತಾಯಾಃ ಶ್ರೇಯೋ ವ್ಯವಸಿತಂ ಮಯಾ ।
ಅಪ್ರದಾನೇ ಪುನರ್ಯುದ್ಧಂ ದೃಷ್ಟಮೇತತ್ತಥೈವ ನಃ ॥೧೪॥

ಸೀತೆಯನ್ನು ರಾಮನಿಗೆ ಒಪ್ಪಿಸುವುದರಿಂದ ಶ್ರೇಯಸ್ಸುಂಟಾಗುವುದೆಂದೂ–ಒಪ್ಪಿಸದಿದ್ದರೆ ಯುದ್ಧವು ಅನಿವಾರ್ಯವೆಂದೂ ನಾನು ಈ ಮೊದಲೇ ಹೇಳಿದ್ದೆನು. ಆ ನಿರ್ಣಯದ ಅನುಸಾರವಾಗಿಯೇ ನಾವೀಗ ಯುದ್ಧದ ಸಂಕಟವನ್ನೂ ಕಾಣುತ್ತಿದ್ದೇವೆ.

ನೀನಾದರೋ ಸತತವಾಗಿ ದಾನ, ಮರ್ಯಾದೆ, ಸಾಂತ್ವನ ಇವೇ ಮುಂತಾದ ಕಾಲೋಚಿತವಾದ ಕಾರ್ಯಗಳಿಂದ ನನ್ನನ್ನು ಸತ್ಕರಿಸುತ್ತಲೇ ಇರುವೆ. ಆದುದರಿಂದ ನಿನಗೆ ಹಿತವೆನಿಸುವುದನ್ನು ನಾನೇಕೆ ಮಾಡದಿರಲಿ? ನಿನಗೆ ಹಿತವೆನಿಸುವ ಯಾವುದೇ ಕಾರ್ಯವನ್ನಾದರೂ ನಾನು ಮಾಡಲು ಸಿದ್ಧನಾಗಿದ್ದೇನೆ.

ನ ಹಿ ಮೇ ಜೀವಿತಂ ರಕ್ಷ್ಯಂ ಪುತ್ರದಾರಧನಾನಿ ವಾ ।
ತ್ವಂ ಪಶ್ಯ ಮಾಂ ಜುಹೂಷನ್ತಂ ತ್ವದರ್ಥಂ ಜೀವಿತಂ ಯುಧಿ ॥

ನಾನು ನನ್ನನ್ನಾಗಲೀ, ಪತ್ನೀ-ಪುತ್ರರನ್ನಾಗಲೀ, ಐಶ್ವರ್ಯವನ್ನಾಗಲೀ ರಕ್ಷಿಸಿಕೊಳ್ಳುವ ಅಗತ್ಯವಿಲ್ಲ. ಇವುಗಳ ರಕ್ಷಣೆಯ ವಿಷಯವಾಗಿ ನನಗೆ ಯಾವ ಚಿಂತೆಯೂ ಇಲ್ಲ. ನಾನು ನಿನ್ನ ಸಲುವಾಗಿ ಯುದ್ಧದಲ್ಲಿ ನನ್ನ ಪ್ರಾಣಗಳನ್ನೂ ಆಹುತಿಯನ್ನಾಗಿ ಅರ್ಪಿಸಲಿರುವುದನ್ನು ನೀನೇ ನೋಡುವೆ."

ವಾಹಿನೀಪತಿಯಾದ ಪ್ರಹಸ್ತನು ಒಡೆಯನಾದ ರಾವಣನಿಗೆ ಹೀಗೆ ಹೇಳಿ ತನ್ನ ಮುಂದೆ ನಿಂತಿದ್ದ ಬಲಾಧ್ಯಕ್ಷರಿಗೆ ಹೇಳಿದನು :

"ಬಲಾಧ್ಯಕ್ಷರೇ! ನೀವೀಗಲೇ ಹೋಗಿ ನಮ್ಮೊಡನೆ ಬರಲು ದೊಡ್ಡದಾದ ರಾಕ್ಷಸಸೈನ್ಯವನ್ನು ಸಜ್ಜುಗೊಳಿಸಿರಿ. ಇಂದು ಮಾಂಸಾಹಾರಿಗಳಾದ ಪಕ್ಷಿಗಳು ನನ್ನ ಬಾಣಗಳ ವೇಗದಿಂದ ಹತರಾಗುವ ಅಸಂಖ್ಯಾತ ವಾನರರ ಮಾಂಸಗಳನ್ನು ಭಕ್ಷಿಸಿ ತೃಪ್ತಿಹೊಂದಲಿ."

ಪ್ರಹಸ್ತನ ಆ ಮಾತನ್ನು ಕೇಳಿ ಮಹಾಬಲಿಷ್ಠರಾದ ಬಲಾಧ್ಯಕ್ಷರು ರಾವಣನ ಅರಮನೆಯಲ್ಲಿ ವಿಶಾಲವಾದ ರಾಕ್ಷಸಸೈನ್ಯವನ್ನು ಯುದ್ಧಕ್ಕಾಗಿ ಸಜ್ಜುಗೊಳಿಸಿದರು. ಮುಹೂರ್ತಮಾತ್ರದಲ್ಲಿ ನಾನಾವಿಧವಾದ ಆಯುಧಗಳನ್ನು ಹಿಡಿದಿದ್ದ–ಆನೆಗಳಂತಿದ್ದ ರಾಕ್ಷಸಸೈನಿಕರಿಂದ ಲಂಕಾಪಟ್ಟಣವು ತುಂಬಿಹೋಯಿತು. ಯುದ್ಧಕ್ಕೆ ಹೊರಟಿದ್ದ ಹಲವಾರು ರಾಕ್ಷಸಪ್ರಧಾನರು ಆಜ್ಯಾಹುತಿಗಳನ್ನಿತ್ತು ಯಜ್ಞೇಶ್ವರನನ್ನು ತೃಪ್ತಿಗೊಳಿಸಿದರು. ಬ್ರಾಹ್ಮಣರಿಗ್ಗೆ* ನಮಸ್ಕರಿಸಿ ಆಶೀರ್ವಾದಗಳನ್ನು ಪಡೆಯುತ್ತಿದ್ದರು. ಹೋಮಗಂಧವನ್ನು ಹೊತ್ತಿದ್ದ ವಾಯುವು ಸರ್ವತ್ರ ಬೀಸುತ್ತಿದ್ದಿತು. ರಾಕ್ಷಸಸೈನಿಕರು ಮಂತ್ರ ಗಳಿಂದ ಅಭಿಮಂತ್ರಿತವಾಗಿದ್ದ ವಿಧ-ವಿಧವಾದ ಆಕಾರಗಳಿದ್ದ ಮಾಲೆಗಳನ್ನು ಧರಿಸಿದ್ದರು. ಹರ್ಷೋತ್ಸಾಹಗಳಿಂದ ಕೂಡಿದ್ದ ಅವರು ಯುದ್ಧಕಾಲಕ್ಕೆ ಯೋಗ್ಯವಾದ ಉಡುಪುಗಳನ್ನು ತೊಟ್ಟಿದ್ದರು. ಕವಚಗಳನ್ನು ತೊಟ್ಟು ಧನುಸ್ಸುಗಳನ್ನು ಹಿಡಿದಿದ್ದ ರಾಕ್ಷಸಸೈನಿಕರು ವೇಗದಿಂದ ಜಿಗಿದು ರಾವಣ ನನ್ನು ಸಂದರ್ಶಿಸಿ ಅಲ್ಲಿಯೇ ಇದ್ದ ಸೇನಾನಾಯಕನಾದ ಪ್ರಹಸ್ತನನ್ನು ನಾಲ್ಕು ದಿಕ್ಕುಗಳಿಂದಲೂ ಸುತ್ತುವರಿದು ನಿಂತರು.

ಬಳಿಕ ಪ್ರಹಸ್ತನು ಕವಚವನ್ನು ಧರಿಸಿ ರಾವಣರಾಜನ ಅನುಜ್ಞೆಯನ್ನು ಪಡೆದು ರಣವಾದ್ಯಗಾರರು ಭಯಂಕರವಾದ ಭೇರಿಯನ್ನು ಬಾರಿಸು ತ್ತಿದ್ದಾಗ ಅಸ್ತ್ರ-ಶಸ್ತ್ರಗಳಿಂದಲೂ, ನಾನಾವಿಧವಾದ ಆಯುಧಗಳಿಂದಲೂ ಸಜ್ಜುಗೊಳಿಸಿದ್ದ ರಥವನ್ನು ಹತ್ತಿದನು. ಆ ರಥಕ್ಕೆ ಅತ್ಯಂತವೇಗವಾಗಿ ಹೋಗುವ ಕುದುರೆಗಳನ್ನು ಹೂಡಿದ್ದರು. ಅದು ಕುಶಲನಾದ ಸಾರಥಿಯಿಂದ

---

* ಇವರು ರಾಕ್ಷಸರಿಗೆ ಸಹಾಯಕರಾಗಿ ರಾಕ್ಷಸರೇ ಆಗಿದ್ದ ಬ್ರಾಹ್ಮಣ ರಾಕ್ಷಸರು.

ಯುಕ್ತವಾಗಿದ್ದಿತು. ಪೂರ್ಣವಾಗಿ ಸಾರಥಿಯ ನಿಯಂತ್ರಣದಲ್ಲಿದ್ದಿತು. ಮಹಾಮೇಘದಂತೆ ಶಬ್ದಮಾಡುತ್ತಿದ್ದಿತು. ಸೂರ್ಯ-ಚಂದ್ರರಂತೆ ಪ್ರಕಾಶಮಾನವಾಗಿದ್ದಿತು. ಸರ್ಪದ ಧ್ವಜದಿಂದ ಕೂಡಿದ್ದ ಆ ರಥವು ಶತ್ರುಗಳಿಂದ ಎದುರಿಸಲು ಅಸಾಧ್ಯವಾಗಿದ್ದಿತು. ಅದಕ್ಕೆ ಸುಂದರವಾದ ಚರ್ಮದ ಹೊದ್ದಿಕೆಯಿದ್ದು ಯುದ್ಧೋಪಯೋಗಿಸಾಮಗ್ರಿಗಳಿಂದ ಸಂಪನ್ನ ವಾಗಿದ್ದಿತು. ಸುವರ್ಣದ ಬಲೆಯಿಂದ ಸಮಲಂಕೃತವಾಗಿದ್ದಿತು. ಆ ರಥವು ತನ್ನ ಅಮಿತವಾದ ಕಾಂತಿಯಿಂದ ನಗುತ್ತಿರುವುದೋ ಎಂಬಂತೆ ಕಾಣು ತ್ತಿದ್ದಿತು. ರಾವಣನಿಂದ ಆಜ್ಞಪ್ತನಾಗಿದ್ದ ಪ್ರಹಸ್ತನು ಅಂತಹ ಅಮೋಘ ವಾದ ರಥದಲ್ಲಿ ಕುಳಿತು ಮಹಾಸೈನ್ಯದಿಂದ ಪರಿವೃತನಾಗಿ ಲಂಕೆಯಿಂದ ಬಹಳ ವೇಗವಾಗಿ ಹೊರಟನು.

ಪ್ರಹಸ್ತನು ಯುದ್ಧಕ್ಕಾಗಿ ಹೊರಟ ಸಮಯದಲ್ಲಿ ಮೇಘಗಳ ಗರ್ಜನೆ ಗಳಂತೆ ದುಂದುಭಿಗಳ ಧ್ವನಿಯಾಗುತ್ತಿದ್ದಿತು. ಪೃಥ್ವಿಯನ್ನೇ ಮುಚ್ಚಿಬಿಡುವ ರೀತಿಯಲ್ಲಿ ಇತರ ರಣವಾದ್ಯಗಳ ನಿನಾದವೂ ಕೇಳಿಬರುತ್ತಿದ್ದಿತು. ಸೇನಾಪತಿಯಾದ ಪ್ರಹಸ್ತನು ಹೊರಡುವ ಕಾಲದಲ್ಲಿ ಶಂಖಧ್ವನಿಗಳೂ ಕೇಳಿ ಬರುತ್ತಿದ್ದುವು. ಅವನ ಮುಂದೆ ಹೋಗುತ್ತಿದ್ದ ಭಯಂಕರರೂಪರಾದ ಮಹಾಕಾಯರಾದ ರಾಕ್ಷಸರು ಗಟ್ಟಿಯಾದ ಸ್ವರಗಳಿಂದ ಗರ್ಜನೆಮಾಡುತ್ತಾ ಜಯಕಾರಗಳನ್ನು ಕೂಗುತ್ತಾ ಹೋಗುತ್ತಿದ್ದರು. ಪ್ರಹಸ್ತನ ಸಚಿವರಾದ ನರಾಂತಕ, ಕುಂಭಹನು, ಮಹಾನಾದ ಮತ್ತು ಸಮುನ್ನತರು ಸೇನಾಪತಿ ಯನ್ನು ನಾಲ್ಕು ದಿಕ್ಕುಗಳಿಂದಲೂ ಸುತ್ತುವರಿದು ಹೋಗುತ್ತಿದ್ದರು. ವಿಶಾಲವಾದ ಆ ಸೈನ್ಯವು ಆನೆಗಳ ಸಮೂಹದಂತೆ ಅತ್ಯಂತ ಭಯಂಕರವಾಗಿ ಕಾಣುತ್ತಿದ್ದಿತು. ಘೋರವಾಗಿದ್ದ ಮತ್ತು ವ್ಯೂಹಕ್ರಮದಿಂದ ರಚಿಸಲ್ಪಟ್ಟಿದ್ದ ಸೈನ್ಯದೊಡನೆ ಪ್ರಹಸ್ತನು ಲಂಕಾಪಟ್ಟಣದ ಪೂರ್ವದ ಹೆಬ್ಬಾಗಿಲಿನ ಮೂಲಕವಾಗಿ ಹೊರಹೊರಟನು. ಕ್ರುದ್ಧನಾಗಿದ್ದ ಪ್ರಹಸ್ತನು ಸಮುದ್ರಕ್ಕೆ ಸಮಾನವಾಗಿದ್ದ ಅಪಾರವಾದ ರಾಕ್ಷಸಸೈನ್ಯದೊಡನೆ ಪ್ರಳಯಕಾಲದ ಸರ್ವ ಪ್ರಾಣಿಗಳ ವಿನಾಶಕನಾದ ಯಮನಂತೆ ಹೊರಟನು. ಅವನು ಹೊರಡು ತ್ತಿರುವ ಕಾಲದಲ್ಲಿ ಉಂಟಾದ ಭೇರೀ-ಮೃದಂಗಾದಿ ರಣವಾದ್ಯಗಳ ಶಬ್ದಗಳನ್ನೂ ಗಟ್ಟಿಯಾಗಿ ಗರ್ಜನೆಮಾಡುತ್ತಿದ್ದ ರಾಕ್ಷಸರ ನಿನಾದಗಳನ್ನೂ

ಕೇಳಿ ಲಂಕಾಪಟ್ಟಣದಲ್ಲಿದ್ದ ಸಮಸ್ತಪ್ರಾಣಿಗಳೂ ವಿಕಾರವಾದ ಸ್ವರದಿಂದ ಚೀತ್ಕಾರಮಾಡಿದುವು. ಆ ಸಮಯದಲ್ಲಿ ರಕ್ತಮಾಂಸಾಶಿಗಳಾದ ಪಕ್ಷಿಗಳು ನಿರ್ಮಲವಾಗಿದ್ದ ಆಕಾಶಕ್ಕೆ ಹಾರಿ ಮಂಡಲಾಕಾರವಾಗಿ ಹಾರಾಡುತ್ತಾ ಪ್ರಹಸ್ತನ ರಥವನ್ನು ಅಪ್ರದಕ್ಷಿಣವಾಗಿ ಸುತ್ತುತ್ತಿದ್ದುವು. ಭಯಂಕರವಾಗಿ ಕಾಣುತ್ತಿದ್ದ ಗುಳ್ಳೇನರಿಗಳು ಬೆಂಕಿಯ ಜ್ವಾಲೆಗಳನ್ನು ಉಗುಳುತ್ತಿದ್ದುವು. ಅಂತರಿಕ್ಷದಿಂದ ಉಲ್ಕೆಗಳು ಬೀಳುತ್ತಿದ್ದುವು. ವಾಯುವು ಪ್ರಚಂಡವಾಗಿ ಬೀಸುತ್ತಿದ್ದಿತು. ಆಕಾಶದಲ್ಲಿದ್ದ ಗ್ರಹಗಳು ಮಂದಪ್ರಕಾಶದಿಂದ ಕೂಡಿದ್ದು ವಲ್ಲದೇ ಪರಸ್ಪರವಾಗಿ ಯುದ್ಧಮಾಡುತ್ತಿದ್ದುವು. ಪ್ರಹಸ್ತರಾಕ್ಷಸನ ರಥದ ಮೇಲೆ ಮೇಘಗಳು ಕತ್ತೆಯ ಧ್ವನಿಯಂತೆ ಗುಡುಗುತ್ತಿದ್ದುವು. ರಕ್ತದ ಮಳೆಯನ್ನೇ ಸುರಿಸುತ್ತಿದ್ದುವು. ಮುಂದೆ ಹೋಗುತ್ತಿದ್ದ ರಾಕ್ಷಸಸೈನಿಕರ ಮೇಲೆ ರಕ್ತದ ಮಳೆಯು ಸುರಿಯುತ್ತಿದ್ದಿತು. ಪ್ರಹಸ್ತನ ರಥದ ಮೇಲಿದ್ದ ಧ್ವಜದ ಮೇಲೆ ರಣಹದ್ದು ದಕ್ಷಿಣದಿಕ್ಕಿಗೆ ಮುಖಮಾಡಿ ಕುಳಿತಿದ್ದಿತು. ಎರಡು ಪಾರ್ಶ್ವಗಳಿಗೂ ತಿರುಗಿಕೊಂಡು ಅಶುಭವಾದ ರೀತಿಯಲ್ಲಿ ಕೂಗಿಕೊಳ್ಳುತ್ತಾ ಆ ರಥದ ಕಾಂತಿಯನ್ನೇ ಹಾಳುಮಾಡಿಬಿಟ್ಟಿತು. ರಣಭೂಮಿಗೆ ಪ್ರವೇಶಿಸುತ್ತಿದ್ದ ಸಮಯದಲ್ಲಿ ಕುದುರೆಗಳನ್ನು ಅಂಕೆಯಲ್ಲಿಡುವ ಸಾರಥಿಯ ಚಾವಟಿಯು ಕೆಳಕ್ಕೆ ಬಿದ್ದುಹೋಯಿತು. ಯುದ್ಧಕ್ಕೆ ಹೊರಟ ಸಮಯದಲ್ಲಿ ಪ್ರಹಸ್ತನ ಮುಖದಲ್ಲಿದ್ದ ಸಾಮಾನ್ಯರಿಗೆ ಸುದುರ್ಲಭವಾದ ಕಾಂತಿಯು ಮುಹೂರ್ತಕಾಲದಲ್ಲಿಯೇ ನಾಶವಾಗಿಹೋಯಿತು. ಸಮವಾದ ಸ್ಥಳ ದಲ್ಲಿಯೂ ಕುದುರೆಗಳು ಜಾರಿಬೀಳುತ್ತಿದ್ದುವು. ಗುಣಗಳಿಂದಲೂ ಪೌರುಷ ದಿಂದಲೂ ಪ್ರಖ್ಯಾತನಾಗಿದ್ದ ಪ್ರಹಸ್ತನು ಪೂರ್ವದಿಕ್ಕಿನ ಹೆಬ್ಬಾಗಿಲಿನಿಂದ ಹೊರಹೊರಟೊಡನೆಯೇ ವೃಕ್ಷ-ಪರ್ವತಶಿಖರಗಳೇ ಮೊದಲಾದ ಆಯುಧ ಗಳನ್ನು ಹಿಡಿದಿದ್ದ ವಾನರಸೈನ್ಯವೂ ಮುನ್ನಡೆಯಿತು. ರಾಕ್ಷಸರನ್ನು ಪ್ರಹರಿ ಸಲು ವೃಕ್ಷಗಳನ್ನು ಕೀಳುತ್ತಿದ್ದ ಮತ್ತು ದೊಡ್ಡ-ದೊಡ್ಡ ಬಂಡೆಗಳನ್ನು ಹಿಡಿ ದೆಬ್ಬಿಸುತ್ತಿದ್ದ ವಾನರಸೈನಿಕರ ಅತಿಭೀಕರವಾದ ಕೋಲಾಹಲಶಬ್ದವು ಎಲ್ಲ ಕಡೆಗಳಿಂದಲೂ ಕೇಳಿಬರುತ್ತಿದ್ದಿತು. ಒಂದು ಕಡೆಯಲ್ಲಿ ರಾಕ್ಷಸರು ಸಿಂಹ ನಾದಮಾಡುತ್ತಿದ್ದರೆ ಮತ್ತೊಂದು ಕಡೆಯಲ್ಲಿ ವಾನರರು ಗಟ್ಟಿಯಾಗಿ ಗರ್ಜಿ ಸುತ್ತಿದ್ದರು. ರಾಕ್ಷಸ-ವಾನರಸೈನ್ಯಗಳೆರಡೂ ಸಂತೋಷಭರಿತವಾಗಿದ್ದುವು.

ಅತ್ಯಂತವೇಗಶಾಲಿಗಳಾಗಿದ್ದ, ಸಮರ್ಥರಾಗಿದ್ದ, ಅನ್ಯೋನ್ಯವಾಗಿ ಒಬ್ಬರು ಮತ್ತೊಬ್ಬರನ್ನು ಸಂಹರಿಸಬೇಕೆನ್ನುವ ಆಕಾಂಕ್ಷೆಯಿಂದಿದ್ದ, ಪರಸ್ಪರವಾಗಿ ಯುದ್ಧಕ್ಕೆ ಆಹ್ವಾನಿಸುತ್ತಿದ್ದ ರಾಕ್ಷಸ-ವಾನರಮಹಾಯೋಧರ ನಿನಾದವು ಸರ್ವತ್ರ ಕೇಳಿಬರುತ್ತಿದ್ದಿತು.

ಬಳಿಕ ದುರ್ಮತಿಯಾದ ಪ್ರಹಸ್ತನು ವಿಜಯಗಳಿಸುವ ಸಲುವಾಗಿ ಕಪಿರಾಜನ ಸೈನ್ಯಕ್ಕೆ ನುಗ್ಗಿದನು. ಸಾಯಲಿಚ್ಛಿಸುವ ಪತಂಗದ ಹುಳುವು ಬೆಂಕಿಗೆ ತಾನಾಗಿಯೇ ಬೀಳುವಂತೆ–ಪ್ರಹಸ್ತನು ವೃದ್ಧಿಹೊಂದಿದ ವೇಗದಿಂದ ಕೂಡಿದ್ದ ವಾನರಸೈನ್ಯದೊಳಗೆ ನುಗ್ಗಿದನು.

೫೭ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೫೮ನೆಯ ಸರ್ಗ

ನೀಲನಿಂದ ಪ್ರಹಸ್ತನ ವಧೆ

ತತಃ ಪ್ರಹಸ್ತಂ ನಿರ್ಯಾನ್ತಂ ದೃಷ್ಟ್ವಾ ರಣಕೃತೋದ್ಯಮಮ್ ।
ಉವಾಚ ಸಸ್ಮಿತಂ ರಾಮೋ ವಿಭೀಷಣಮರಿಂದಮಃ ॥೧॥

ಇದಕ್ಕೆ ಮೊದಲು, ಯುದ್ಧಕ್ಕೆ ಸಿದ್ಧತೆಯನ್ನು ಮಾಡಿಕೊಂಡು ಲಂಕೆಯಿಂದ ಹೊರಡುತ್ತಿದ್ದ ಪ್ರಹಸ್ತನನ್ನು ನೋಡಿ ಶತ್ರುಸೂದನನಾದ ಶ್ರೀರಾಮನು ನಸುನಗುತ್ತಾ ವಿಭೀಷಣನಿಗೆ ಹೇಳಿದನು :

"ಮಹಾಬಾಹುವೇ! ವಿಭೀಷಣ! ಮಹಾವೇಗಶಾಲಿಯಂತೆ ಕಾಣುತ್ತಿರುವ, ಮಹಾಕಾಯನಾದ, ದೊಡ್ಡದಾದ ಸೈನ್ಯದಿಂದ ಪರಿವೃತನಾಗಿ ಯುದ್ಧಕ್ಕೆ ಆಗಮಿಸುತ್ತಿರುವ, ವೀರ್ಯವಂತನಾದ ಆ ರಾಕ್ಷಸನು ಯಾರು? ಅವನಿಗೆ ಎಂತಹ ರೂಪವಿದೆ? ಅವನ ಬಲ-ಪೌರುಷಗಳ ಪರಿಮಿತಿ ಯೇನು? ಈ ಎಲ್ಲವನ್ನೂ ವಿಶದವಾಗಿ ಹೇಳು."

ಶ್ರೀರಾಮನ ಆ ಮಾತಿಗೆ ವಿಭೀಷಣನು ಪ್ರತ್ಯುತ್ತರಿಸಿದನು :

"ರಾಘವ! ಅವನು ರಾವಣನ ಸೇನಾಪತಿ. ಪ್ರಹಸ್ತನೆಂಬ ಹೆಸರಿನ ರಾಕ್ಷಸನು. ರಾಕ್ಷಸೇಂದ್ರನಾದ ರಾವಣನ ಮೂರನೆಯ ಒಂದು ಭಾಗದಷ್ಟು ಸೈನ್ಯದಿಂದ ಅವನು ಸಮಾವೃತನಾಗಿದ್ದಾನೆ. ಅವನು ವೀರ್ಯವಂತನು.

ಅಸ್ತ್ರಗಳನ್ನು ತಿಳಿದವನು. ಮಹಾಶೂರನು. ಸುವಿಖ್ಯಾತನಾದ ಪರಾಕ್ರಮಿಯು."

ವಿಭೀಷಣನು ಹೀಗೆ ಹೇಳುತ್ತಿರುವಾಗಲೇ ನಗರದಿಂದ ಹೊರಬರುತ್ತಿದ್ದ, ಭಯಂಕರನಾದ, ಭೀಮಪರಾಕ್ರಮನಾದ, ಮಹಾಕಾಯನಾದ, ರಾಕ್ಷಸರಿಂದ ಪರಿವೃತನಾಗಿದ್ದ, ಬಾರಿ-ಬಾರಿಗೂ ಗರ್ಜಿಸುತ್ತಿದ್ದ ಪ್ರಹಸ್ತನನ್ನು ಬಲಿಷ್ಠವಾದ ರೋಷಾವೇಷದಿಂದಿದ್ದ ವಾನರಮಹಾಸೈನ್ಯವು ವೀಕ್ಷಿಸಿತು. ಅನಂತರ ಅವನಿಗೆ ಅಭಿಮುಖವಾಗಿ ನಿಂತು ಗರ್ಜಿಸತೊಡಗಿತು. ವಾನರಸೈನ್ಯವನ್ನು ಆಕ್ರಮಿಸಲು ಮುಂದೆ-ಮುಂದೆ ಹೋಗುತ್ತಿದ್ದ ವಿಜಯಾಕಾಂಕ್ಷಿಗಳಾಗಿದ್ದ ರಾಕ್ಷಸರು ಖಡ್ಗ-ಶಕ್ತಿ-ಋಷ್ಟಿ-ಶೂಲ-ಬಾಣ-ಮುಸಲ-ಗದಾ-ಪರಿಘ-ಪ್ರಾಸಗಳನ್ನೂ, ವಿಧ-ವಿಧವಾದ ಗಂಡುಗೊಡಲಿಗಳನ್ನೂ, ವಿಚಿತ್ರವಾದ ಧನುಸ್ಸುಗಳನ್ನೂ ಹಿಡಿದು ರಾರಾಜಿಸುತ್ತಿದ್ದರು. ವಾನರರು ಕೂಡ ಯುದ್ಧಮಾಡುವ ಅಪೇಕ್ಷೆಯಿಂದ ಪುಷ್ಪಿತವಾಗಿದ್ದ ವೃಕ್ಷಗಳನ್ನೂ, ಪರ್ವತಗಳನ್ನೂ, ದೊಡ್ಡ-ದೊಡ್ಡ ಬಂಡೆಗಳನ್ನೂ ಹಿಡಿದು ನಿಂತಿದ್ದರು. ಎರಡು ಪಕ್ಷಗಳ ಸೈನಿಕರೂ ಎದುರು-ಬದುರಾಗಿ ನಿಂತನಂತರ ಕಲ್ಲುಬಂಡೆಗಳನ್ನೇ ಜಲಧಾರೆಯೋಪಾದಿಯಲ್ಲಿ ಸುರಿಸುತ್ತಿದ್ದ ವಾನರಸೈನಿಕರಿಗೂ–ಬಾಣಗಳನ್ನು ಪುಂಖಾನುಪುಂಖವಾಗಿ ಬಿಡುತ್ತಿದ್ದ ರಾಕ್ಷಸಸೈನಿಕರಿಗೂ ಮಹಾಯುದ್ಧವು ಪ್ರಾರಂಭವಾಯಿತು. ಯುದ್ಧದಲ್ಲಿ ಅನೇಕರಾಕ್ಷಸರು ಹಲವಾರು ವಾನರಶ್ರೇಷ್ಠರನ್ನು ಸಂಹರಿಸಿದರು. ಅಂತೆಯೇ ಅನೇಕವಾನರಸೈನಿಕರು ಹಲವಾರು ರಾಕ್ಷಸಪುಂಗವರನ್ನು ಸಂಹರಿಸಿದರು. ವಾನರರಲ್ಲಿ ಕೆಲವರು ಶೂಲಗಳಿಂದ ಹತರಾದರು. ಕೆಲವರು ಚಕ್ರಗಳಿಂದ ಹತರಾದರು. ಕೆಲವರು ಪರಿಘಗಳಿಂದಲೂ ಕೆಲವರು ಗಂಡುಗೊಡಲಿಗಳಿಂದಲೂ ಹತರಾದರು. ಕೆಲವು ಯೋಧರು ಪ್ರಾಣರಹಿತರಾಗಿ ಕೆಳಕ್ಕೆ ಬೀಳುತ್ತಿದ್ದರು. ಕೆಲವರಿಗೆ ಹೃದಯಗಳೇ ಸೀಳಿಹೋದುವು. ಕೆಲವು ವಾನರರು ಬಾಣಗಳಿಗೆ ಲಕ್ಷ್ಯರಾಗಿ ಪ್ರಾಣಗಳನ್ನು ತೊರೆದರು. ಕೆಲವರು ಕತ್ತಿಗಳಿಂದ ಎರಡು ಭಾಗಗಳಾಗಿ ಕತ್ತರಿಸಲ್ಪಟ್ಟಿದ್ದರು. ಕೆಳಕ್ಕೆ ಬಿದ್ದನಂತರ ಎರಡು ಭಾಗಗಳೂ ಸ್ವಲ್ಪ ಹೊತ್ತಿನವರೆಗೆ ಕುಣಿದಾಡುತ್ತಿದ್ದುವು. ವೀರರಾದ ರಾಕ್ಷಸರು ಹಲವಾರು ವಾನರಸೈನಿಕರ ಪಾರ್ಶ್ವಭಾಗಗಳನ್ನು ಸೀಳಿದ್ದರು. ಅದೇ ರೀತಿಯಲ್ಲಿ ಕ್ರುದ್ಧರಾಗಿದ್ದ ವಾನರರು ಕೂಡ

ವೃಕ್ಷಗಳಿಂದಲೂ ಪರ್ವತಶಿಖರಗಳಿಂದಲೂ ರಾಕ್ಷಸಸಮೂಹವನ್ನೇ ಜಜ್ಜಿ ಹಾಕಿದರು. ವಜ್ರದಂತೆ ಕಠಿನಸ್ಪರ್ಶವುಳ್ಳ ವಾನರರ ಅಂಗೈಗಳ ಮತ್ತು ಮುಷ್ಟಿಗಳ ಪ್ರಹಾರಗಳಿಂದ ರಾಕ್ಷಸರು ಮುಖಗಳಿಂದ ರಕ್ತವನ್ನು ಕಾರುತ್ತಿದ್ದರು. ಅವರ ಕಣ್ಣುಗಳು ಮತ್ತು ಹಲ್ಲುಗಳು ಭಿನ್ನ-ಭಿನ್ನವಾಗಿ ಹೊರಬಂದಿದ್ದುವು. ಪೆಟ್ಟುತಿಂದು ಆರ್ತನಾದಮಾಡುತ್ತಿದ್ದ ಮತ್ತು ಯುದ್ಧಮಾಡಲು ಗರ್ಜಿಸುತ್ತಿದ್ದ ವಾನರ-ರಾಕ್ಷಸರ ಭಯಂಕರವಾದ ಕೋಲಾಹಲಶಬ್ದವು ಸರ್ವತ್ರ ಕೇಳಿಬರುತ್ತಿದ್ದಿತು. ವೀರೋಚಿತವಾದ ಮಾರ್ಗವನ್ನು ಅನುಸರಿಸುತ್ತಿದ್ದ, ಯುದ್ಧದಲ್ಲಿ ಹಿಮ್ಮೆಟ್ಟದಿದ್ದ, ಕ್ರುದ್ಧರಾಗಿದ್ದ, ಕ್ರೂರಿಗಳಾದ ವಾನರ-ರಾಕ್ಷಸರು ಮುಖಗಳನ್ನರಳಿಸಿಕೊಂಡು ಯಾವ ವಿಧವಾದ ಭಯವೂ ಇಲ್ಲದವರಂತೆ ಪರಸ್ಪರವಾಗಿ ಯುದ್ಧಮಾಡುತ್ತಿದ್ದರು.

ನರಾಂತಕ, ಕುಂಭಹನು, ಮಹಾನಾದ, ಸಮುನ್ನತ–ಈ ನಾಲ್ವರು ಪ್ರಹಸ್ತನ ಸಚಿವರೂ ವಾನರರನ್ನು ಸಂಹರಿಸಲು ಪ್ರಾರಂಭಿಸಿದರು. ಶೀಘ್ರಗತಿಯಲ್ಲಿ ವಾನರರನ್ನು ಆಕ್ರಮಿಸಿ ಸಂಹರಿಸುತ್ತಿದ್ದ ನಾಲ್ವರು ಸಚಿವರಲ್ಲಿ ಒಬ್ಬನಾದ ನರಾಂತಕನನ್ನು ದ್ವಿವಿದನು ಪರ್ವತಶಿಖರದ ಪ್ರಹಾರದಿಂದ ಸಂಹರಿಸಿದನು. ಅನಂತರ ದುರ್ಮುಖನೆಂಬ ವಾನರನು ವಿಶಾಲವಾಗಿದ್ದ ವೃಕ್ಷವೊಂದನ್ನು ಕಿತ್ತು ಬಾಣಗಳನ್ನು ಬಿಡುವುದರಲ್ಲಿ ಕ್ಷಿಪ್ರಹಸ್ತನಾಗಿದ್ದ ಸಮುನ್ನತನೆಂಬ ಸಚಿವನನ್ನು ಆ ವೃಕ್ಷದಿಂದ ಪ್ರಹರಿಸಿ ಸಂಹರಿಸಿದನು. ಅತ್ಯಂತಕ್ರುದ್ಧನಾಗಿದ್ದ ತೇಜಸ್ವಿಯಾದ ಜಾಂಬವಂತನು ದೊಡ್ಡದೊಂದು ಬಂಡೆಯನ್ನೆತ್ತಿ ಮಹಾನಾದನ ವಕ್ಷಃಸ್ಥಳದಲ್ಲಿ ಪ್ರಹರಿಸಿ ಸಂಹರಿಸಿದನು. ಕುಂಭಹನುವೆಂಬ ಪ್ರಹಸ್ತನ ಸಚಿವನು ತಾರನೊಡನೆ ಯುದ್ಧಮಾಡುತ್ತಿದ್ದನು. ತಾರನ ವೃಕ್ಷಪ್ರಹಾರದಿಂದ ಅವನು ಕೂಡ ಪ್ರಾಣಗಳನ್ನು ತೊರೆದು ಕೆಳಗೆ ಬಿದ್ದನು.

ತನ್ನ ಸಚಿವರ ಸಂಹಾರವನ್ನು ಸಹಿಸಿಕೊಳ್ಳಲು ಸಾಧ್ಯವಾಗದೇ ರಥದಲ್ಲಿ ಕುಳಿತಿದ್ದ ಧನುಷ್ಪಾಣಿಯಾದ ಪ್ರಹಸ್ತನು ವಾನರರ ಮಹಾಸಂಹಾರಕ್ಕೆ ಪ್ರಾರಂಭಿಸಿದನು. ಎರಡು ಕಡೆಯ ಸೈನ್ಯಗಳಲ್ಲಿಯೂ ನೀರಿನ ಸುಳಿಯಂತೆ ಸುಳಿಗಳುಂಟಾದುವು. ಅದರಲ್ಲಿ ಸಿಕ್ಕಿದವನು ಬದುಕಿ ಹೊರಬರುವ ಪ್ರಶ್ನೆಯೇ ಇರಲಿಲ್ಲ. ಕ್ಷೋಭೆಗೊಂಡ ಮಹಾಸಾಗರದ

ಭೋರ್ಗರೆಯುವ ಶಬ್ದದಂತೆ ವಾನರ-ರಾಕ್ಷಸರ ಗರ್ಜನೆಗಳ ಶಬ್ದವು ಕೇಳಿ ಬರುತ್ತಿದ್ದಿತು. ಆ ಮಹಾಯುದ್ಧದಲ್ಲಿ ಪರಮಕ್ರುದ್ಧನಾಗಿದ್ದ ರಣದುರ್ಮದನಾದ ಪ್ರಹಸ್ತನು ದೊಡ್ಡದಾದ ಬಾಣಗಳ ಸಮೂಹದಿಂದ ವಾನರಸೈನಿಕರನ್ನು ತೀಡಿಹಾಕಿದನು. ವಾನರರ ಮತ್ತು ರಾಕ್ಷಸರ ಮೃತಶರೀರಗಳು ರಾಶಿ-ರಾಶಿಯಾಗಿ ಬಿದ್ದುವು. ಆ ಸಮಯದಲ್ಲಿ ಭೂಮಿಯು ಭಯಂಕರವಾದ ಪರ್ವತಗಳಿಂದ ವ್ಯಾಪ್ತವಾಗಿರುವುದೋ ಎಂಬಂತೆ ಕಾಣುತ್ತಿದ್ದಿತು. ರಕ್ತದ ಕೋಡಿಯಿಂದ ಮುಚ್ಚಿಹೋಗಿದ್ದ ರಣಭೂಮಿಯು ವಸಂತಕಾಲದಲ್ಲಿ ಪುಷ್ಪಿತವಾದ ಮುತ್ತುಗದ ಮರಗಳಿಂದ ಆಚ್ಛಾದಿತವಾದ ಭೂಮಿಯಂತೆಯೇ ಕಾಣುತ್ತಿದ್ದಿತು.

ರಣಭೂಮಿಯಲ್ಲಿಯೇ ಒಂದು ದುಸ್ತರವಾದ ನದಿಯು ಪ್ರವಹಿಸುತ್ತಿದ್ದಿತು. ಹತರಾದ ವಾನರ-ರಾಕ್ಷಸರ ಶವಗಳೇ ಆ ನದಿಯ ದಡಗಳಾಗಿದ್ದುವು. ಮುರಿದುಹೋಗಿದ್ದ ಆಯುಧಗಳ ರಾಶಿಗಳೇ ನದಿಯ ತೀರದಲ್ಲಿದ್ದ ವೃಕ್ಷಗಳಾಗಿದ್ದುವು. ರಕ್ತದ ಕೋಡಿಯೇ ನದಿಯ ನೀರಾಗಿದ್ದಿತು. ಆ ನದಿಯು ಯಮನ ಸಾಗರವನ್ನು ಸೇರುವುದಾಗಿದ್ದಿತು. ಸೈನಿಕರ ಯಕೃತ್ (ಹೃದಯದ ದಕ್ಷಿಣ ಭಾಗ) ಮತ್ತು ಪ್ಲೀಹಗಳೇ (ಹೃದಯದ ಎಡಭಾಗ) ನದಿಯ ಕೆಸರಾಗಿದ್ದುವು. ಸರ್ವತ್ರ ವ್ಯಾಪ್ತವಾಗಿದ್ದ ವಾನರ-ರಾಕ್ಷಸರ ಕರುಳುಗಳೇ ನದಿಯ ಪಾಚಿಗಳಾಗಿದ್ದುವು. ಭಿನ್ನವಾಗಿದ್ದ ಶರೀರ ಮತ್ತು ಶಿರಸ್ಸುಗಳೇ ಮೀನುಗಳಂತಿದ್ದುವು. ಛಿನ್ನ-ಭಿನ್ನವಾಗಿ ಬಿದ್ದಿದ್ದ ಸೈನಿಕರ ಅವಯವಗಳು ಮತ್ತು ಕೂದಲುಗಳೇ ಗರಿಕೆಹುಲ್ಲಿನಂತಿದ್ದುವು. ರಣಹದ್ದಿನ ರೂಪದ ಹಂಸಗಳೂ ಹದ್ದಿನರೂಪದ ಸಾರಸಪಕ್ಷಿಗಳೂ ಆ ಘೋರ ನದಿಯನ್ನು ಸೇವಿಸುತ್ತಿದ್ದುವು. ಮೇದಸ್ಸು ಆ ನದಿಯ ನೊರೆಯ ರೂಪದಲ್ಲಿದ್ದು ಸರ್ವತ್ರ ವ್ಯಾಪ್ತವಾಗಿದ್ದಿತು. ಯುದ್ಧಪೀಡಿತರಾಗಿದ್ದವರ ಆರ್ತನಾದಗಳೇ ಆ ನದಿಯ ಕಲ-ಕಲ ಧ್ವನಿಯಾಗಿದ್ದಿತು. ವರ್ಷಾಕಾಲದಲ್ಲಿ ತುಂಬಿಹರಿಯುವ ಹಂಸ-ಸಾರಸಪಕ್ಷಿಗಳಿಂದ ಸೇವಿಸಲ್ಪಡುವ ಮಹಾನದಿಯನ್ನು ಹೇಡಿಗಳು ದಾಟಲಾಗದಂತೆ–ಯುದ್ಧಭೂಮಿಯೆಂಬ ಆ ಘೋರನದಿಯನ್ನು ಕಾಪುರುಷರು ದಾಟಲು ಸಾಧ್ಯವಾಗುತ್ತಿರಲಿಲ್ಲ. ಆನೆಗಳ ಹಿಂಡು ಕಮಲದ ಪರಾಗದಿಂದ ಸುವಾಸಿತವಾದ ಸರೋವರವನ್ನು ದಾಟುವಂತೆ–ವಾನರ-ರಾಕ್ಷಸಮುಖ್ಯರು ದುಸ್ತರವಾದ ಆ ಯುದ್ಧನದಿಯನ್ನು ದಾಟುತ್ತಿದ್ದರು.

ಬಳಿಕ ರಥದಲ್ಲಿ ಕುಳಿತು ಬಾಣಗಳ ರಾಶಿಯನ್ನೇ ಸೃಷ್ಟಿಸುತ್ತಾ ವಾನರರನ್ನು ವೇಗಪೂರ್ವಕವಾಗಿ ಧ್ವಂಸಮಾಡುತ್ತಿದ್ದ ಪ್ರಹಸ್ತನನ್ನು ನೀಲನು ನೋಡಿದನು. ಚಂಡಮಾರುತವು ಆಕಾಶದಲ್ಲಿರುವ ಮಹಾಮೇಘ ಮಂಡಲವನ್ನು ಛಿನ್ನ-ಭಿನ್ನಗೊಳಿಸುವಂತೆ–ನೀಲನು ರಾಕ್ಷಸರ ಸೈನ್ಯವನ್ನು ಧ್ವಂಸಮಾಡುತ್ತಿದ್ದನು. ಆಗ ರಾಕ್ಷಸಸೈನ್ಯವು ಹೆದರಿ ಓಡಲಾರಂಭಿಸಿತು. ಪ್ರಹಸ್ತನು ತನ್ನ ಸೈನ್ಯದ ದುರವಸ್ಥೆಯನ್ನು ಗಮನಿಸಿ, ಒಡನೆಯೇ ಸೂರ್ಯ ನಂತೆಯೇ ಪ್ರಕಾಶಮಾನವಾಗಿದ್ದ ರಥದಲ್ಲಿ ಕುಳಿತು ನೀಲನನ್ನೇ ಆಕ್ರಮಿ ಸಿದನು. ಧನುಷ್ಮಂತರಲ್ಲಿ ಶ್ರೇಷ್ಠನಾದ ಸೇನಾಪತಿಯಾದ ಪ್ರಹಸ್ತನು ಧನುಸ್ಸನ್ನು ದೀರ್ಘವಾಗಿ ಸೆಳೆದು ನೀಲನ ಮೇಲೆ ಬಾಣಗಳ ಮಳೆಗರೆದನು. ರೋಷದಿಂದ ಕೂಡಿದ ಸರ್ಪಗಳಂತೆ ಪ್ರಹಸ್ತನು ಬಿಟ್ಟ ಮಹಾ ವೇಗಯುಕ್ತವಾದ ಬಾಣಗಳು ನೀಲನನ್ನು ಸೀಳಿಕೊಂಡು ಹೊರಬಂದು ಭೂಮಿಯ ಮೇಲೆ ಬಿದ್ದುವು. ತೀಕ್ಷ್ಣವಾದ, ಪ್ರಜ್ವಲಿಸುವ ಯಜ್ಞೇಶ್ವರ ನಂತೆಯೇ ಇದ್ದ ಬಾಣಗಳಿಂದ ಪ್ರಹೃತನಾದ ಮಹಾಕಪಿಯಾದ ನೀಲನು ವೃಕ್ಷವೊಂದನ್ನು ಕಿತ್ತುಕೊಂಡು, ಅದರಿಂದ ತನ್ನನ್ನು ಆಕ್ರಮಿಸಿದ್ದ ಎದುರಿ ಸಲು ಅಸಾಧ್ಯನಾದ ಪ್ರಹಸ್ತನನ್ನು ಪ್ರಹರಿಸಿದನು. ವೃಕ್ಷದಿಂದ ಪ್ರಹೃತನಾದ ರಾಕ್ಷಸಶ್ರೇಷ್ಠನಾದ ಪ್ರಹಸ್ತನು ಕ್ರುದ್ಧನಾಗಿ ಗರ್ಜನೆಮಾಡುತ್ತಾ ವಾನರ ಸೇನಾಪತಿಯಾದ ನೀಲನ ಮೇಲೆ ಬಾಣಗಳ ಮಳೆಗರೆದನು. ದುರಾತ್ಮನಾದ ಪ್ರಹಸ್ತನ ಶರವರ್ಷವನ್ನು ತಪ್ಪಿಸಿಕೊಳ್ಳಲು ನೀಲನಿಗೆ ಸಾಧ್ಯವಾಗಲೇ ಇಲ್ಲ. ಕಣ್ಣುಗಳನ್ನು ಮುಚ್ಚಿಕೊಂಡು ಪ್ರಹಸ್ತನ ಬಾಣಗಳೆಲ್ಲವನ್ನೂ ಸಹಿಸಿ ಕೊಳ್ಳುತ್ತಿದ್ದನು. ಯಾವ ರೀತಿಯಲ್ಲಿ ಹೋರಿಯೊಂದು ಶರದೃತುವಿನಲ್ಲಿ ಆಕಸ್ಮಿಕವಾಗಿ ಬರುವ ಮಳೆಯನ್ನು ಸುಮ್ಮನೇ ನಿಂತು ಸಹಿಸಿಕೊಳ್ಳುವುದೋ ಅದೇ ರೀತಿಯಲ್ಲಿ ನೀಲನು ಕಣ್ಣುಗಳನ್ನು ಮುಚ್ಚಿಕೊಂಡು ಪ್ರಹಸ್ತನ ದುರಾಸದವಾದ ಬಾಣಗಳ ಪ್ರಹಾರವನ್ನು ಸಹಿಸಿಕೊಂಡನು. ಸತತವಾದ ಶರವರ್ಷದಿಂದ ಅತ್ಯಂತಕುಪಿತನಾದ ನೀಲನು ದೊಡ್ಡದಾದೊಂದು ಸಾಲವೃಕ್ಷದಿಂದ ಪ್ರಹಸ್ತನ ಕುದುರೆಗಳನ್ನು ಸಂಹರಿಸಿದನು. ಕ್ರುದ್ಧನಾಗಿದ್ದ ನೀಲನು ದುರಾತ್ಮನಾದ ಪ್ರಹಸ್ತನ ಧನುಸ್ಸನ್ನು ಮತ್ತೊಮ್ಮೆ ಮುರಿದು ಪುನಃ ಪುನಃ ಗರ್ಜಿಸುತ್ತಿದ್ದನು. ಧನುಸ್ಸನ್ನು ಕಳೆದುಕೊಂಡ ಸೇನಾಪತಿಯಾದ

ಪ್ರಹಸ್ತನು ಮುಸಲಾಯುಧವನ್ನೆತ್ತಿಕೊಂಡು ರಥದಿಂದ ಕೆಳಗಿಳಿದನು. ಬದ್ಧವೈರಿಗಳಾಗಿದ್ದ, ವೇಗವಂತರಾಗಿದ್ದ, ರಕ್ತದಿಂದ ತೋಯ್ದುಹೋಗಿದ್ದ ವಾನರ-ರಾಕ್ಷಸಸೇನಾಪತಿಗಳು ಮದೋದಕವನ್ನು ಸುರಿಸುತ್ತಿರುವ ಎರಡು ಆನೆಗಳಂತೆಯೇ ಕಾಣುತ್ತಿದ್ದರು. ಅವರಿಬ್ಬರೂ ಪರಸ್ಪರವಾಗಿ ಕೋರೆದಾಡೆ ಗಳಿಂದ ಒಬ್ಬರು ಮತ್ತೊಬ್ಬರನ್ನು ಕಚ್ಚಿ ಗಾಯಗೊಳಿಸುತ್ತಿದ್ದರು. ಸಿಂಹ-ಶಾರ್ದೂಲಗಳಿಗೆ ಸಮಾನರಾಗಿದ್ದ ಅವರಿಬ್ಬರೂ ಸಿಂಹ-ಶಾರ್ದೂಲ ಗಳಂತೆಯೇ ವಿಜಯಕ್ಕಾಗಿ ಪ್ರಯತ್ನಿಸುತ್ತಿದ್ದರು. ಅವರು ಮಹಾಪರಾಕ್ರಮಿ ಗಳೂ ಆಗಿದ್ದರು. ಹಲವಾರು ಯುದ್ಧಗಳಲ್ಲಿ ವಿಜಯಿಗಳೂ ಆಗಿದ್ದರು. ಯುದ್ಧದಿಂದ ಹಿಂದಿರುಗುವ ಸ್ವಭಾವದವರಾಗಿರಲಿಲ್ಲ. ವೃತ್ರ-ವಾಸವರಂತೆ ಇಬ್ಬರೂ ಯುದ್ಧದಲ್ಲಿ ಯಶಸ್ಸನ್ನು ಗಳಿಸುವ ಅಪೇಕ್ಷೆಯಿಂದಿದ್ದರು.

ಅತ್ಯಂತಪ್ರಯತ್ನಶೀಲನಾದ ಪ್ರಹಸ್ತನು ಮುಸಲಾಯುಧದಿಂದ ನೀಲನ ಹಣೆಯಲ್ಲಿ ಪ್ರಹರಿಸಿದನು. ಒಡನೆಯೇ ನೀಲನ ಹಣೆಯಿಂದ ರಕ್ತದ ಕೋಡಿಯೇ ಹರಿಯತೊಡಗಿತು. ಅವನ ಶರೀರವೆಲ್ಲವೂ ರಕ್ತದಿಂದ ತೋಯ್ದುಹೋಯಿತು. ಅದರಿಂದ ಕ್ರುದ್ಧನಾದ ನೀಲನು ದೊಡ್ಡದಾದ ವೃಕ್ಷವೊಂದನ್ನು ಕಿತ್ತು ಪ್ರಹಸ್ತನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಆ ಪ್ರಹಾರವನ್ನು ಲೆಕ್ಕಿಸದೆ ಪ್ರಹಸ್ತನು ದೊಡ್ಡದಾಗಿದ್ದ ಮತ್ತೊಂದು ಮುಸಲಾ ಯುಧವನ್ನು ಹಿಡಿದು ನೀಲನ ಕಡೆಗೆ ಧಾವಿಸಿದನು. ಉಗ್ರವೇಗನಾಗಿದ್ದ, ಕ್ರುದ್ಧನಾಗಿದ್ದ, ತನ್ನ ಮೇಲೆ ಬೀಳುವುದರಲ್ಲಿದ್ದ ಪ್ರಹಸ್ತನನ್ನು ನೋಡಿ ಮಹಾವೇಗನಾದ ಮಹಾಕಪಿಯಾದ ನೀಲನು ದೊಡ್ಡದಾದೊಂದು ಬಂಡೆ ಯನ್ನು ಎತ್ತಿಕೊಂಡನು. ಯುದ್ಧಾಭಿಲಾಷಿಯಾದ ಮುಸಲಯೋಧಿಯಾದ ಪ್ರಹಸ್ತನ ತಲೆಯ ಮೇಲೆ ಆ ಬಂಡೆಯನ್ನು ಬಹಳ ಬೇಗ ಎಸೆದನು. ಕಪಿ ಮುಖ್ಯನಾದ ನೀಲನಿಂದ ಪ್ರಮುಕ್ತವಾದ ದೊಡ್ಡದಾದ ಆ ಬಂಡೆಯು ಪ್ರಹಸ್ತನ ತಲೆಯನ್ನು ನುಚ್ಚುನೂರು ಮಾಡಿಬಿಟ್ಟಿತು. ಅದರೊಂದಿಗೆ ರಾಕ್ಷಸನ ಪ್ರಾಣಪಕ್ಷಿಯೂ ಹಾರಿಹೋಯಿತು. ಅವನ ಕಾಂತಿ, ಬಲ, ಇಂದ್ರಿಯಗಳು—ಎಲ್ಲವೂ ನಾಶವಾದುವು. ಬುಡಕತ್ತರಿಸಿದ ಮರದಂತೆ ಪ್ರಹಸ್ತನು ಭೂಮಿಯ ಮೇಲೆ ಬಿದ್ದನು. ಛಿನ್ನ-ಭಿನ್ನವಾಗಿದ್ದ ಪ್ರಹಸ್ತನ ತಲೆಯಿಂದ ರಕ್ತವು ಸುರಿಯುತ್ತಿದ್ದಿತು. ಅಂತೆಯೇ ಅವನ ಶರೀರದಿಂದಲೂ

ಪರ್ವತದ ಝುರಿಯಂತೆ ರಕ್ತವು ಪ್ರವಹಿಸುತ್ತಿದ್ದಿತು. ನೀಲನು ಪ್ರಹಸ್ತನನ್ನು ಸಂಹರಿಸಿದೊಡನೆಯೇ ದುಃಖತಪ್ತವಾದ ರಾಕ್ಷಸಮಹಾಸೈನ್ಯವು ಲಂಕೆಗೆ ಹಿಂದಿರುಗಿತು. ಅಣೆಕಟ್ಟೆಯು ಒಡೆದುಹೋದನಂತರ ನೀರು ಹರಿದು ಹೋಗುವಂತೆ–ವಾಹಿನೀಪತಿಯಾದ ಪ್ರಹಸ್ತನು ಮರಣಹೊಂದಿದನಂತರ ಅವನ ಸೈನ್ಯವು ಶತ್ರುಗಳನ್ನು ಎದುರಿಸಿ ನಿಲ್ಲಲು ಸಮರ್ಥವಾಗಲಿಲ್ಲ. ಸೇನಾಪತಿಯು ಹತನಾಗಲು ಸೈನಿಕರ ಯುದ್ಧೋತ್ಸಾಹವೇ ಕುಗ್ಗಿ ಹೋಯಿತು. ರಾವಣನ ಅರಮನೆಗೆ ಹೋಗಿ ಅವರೆಲ್ಲರೂ ಯಾವ ಮಾತನ್ನೂ ಆಡದೇ ಮೌನವಾಗಿದ್ದು ಬಿಟ್ಟರು. ದುಃಖಸಾಗರದಲ್ಲಿ ಮುಳುಗಿ ಹೋಗಿದ್ದ ಎಲ್ಲರೂ ಜ್ಞಾನತಪ್ಪಿದವರಂತಿದ್ದರು.

ಇತ್ತಲಾಗಿ ಮಹಾಬಲಿಷ್ಠನಾದ ಸೇನಾಪತಿಯಾದ ನೀಲನು ತಾನು ಮಾಡಿದ ಸಾಹಸಮಯವಾದ ಕಾರ್ಯಕ್ಕೆ ಸಮಸ್ತವಾನರರಿಂದಲೂ ಪ್ರಶಂಸಿತನಾಗಿ ಆನಂದಭರಿತನಾಗಿ ರಾಮ-ಲಕ್ಷ್ಮಣರ ಬಳಿಗೆ ಹೋದನು.

೫೮ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೫೯ನೆಯ ಸರ್ಗ

ಯುದ್ಧಕ್ಕೆ ರಾವಣನ ಪ್ರಸ್ಥಾನ : ಅವನ ಜೊತೆಗಾರರ ಪರಿಚಯ : ರಾವಣನ ಪ್ರಹಾರದಿಂದ ಸುಗ್ರೀವನ ಮೂರ್ಛೆ : ಲಕ್ಷ್ಮಣ-ರಾವಣರ ಯುದ್ಧ: ಹನುಮಂತ-ರಾವಣರ ಮುಷ್ಟಿಯುದ್ಧ: ನೀಲ-ಲಕ್ಷ್ಮಣರ ಮೂರ್ಛೆ : ಶ್ರೀರಾಮನಿಂದ ಪರಾಜಿತನಾದ ರಾವಣನ ಲಂಕಾಭಿಗಮನ :

ತಸ್ಮಿನ್ಹತೇ ರಾವಣಸೈನ್ಯಪಾಲೇ
ಪ್ಲವಂಗಮಾನಾಮೃಷಭೇಣ ಯುದ್ಧೇ ।
ಭೀಮಾಯುಧಂ ಸಾಗರತುಲ್ಯವೇಗಂ
ವಿದುದ್ರುವೇ ರಾಕ್ಷಸರಾಜಸೈನ್ಯಮ್ ॥೧॥

ವಾನರಶ್ರೇಷ್ಠನಾದ ನೀಲನು ಯುದ್ಧಭೂಮಿಯಲ್ಲಿ ರಾಕ್ಷಸರ ಸೇನಾ ಪತಿಯಾದ ಪ್ರಹಸ್ತನನ್ನು ಸಂಹರಿಸಲು-ಸಮುದ್ರದ ವೇಗಕ್ಕೆ ಸಮಾನವಾದ

ವೇಗದಿಂದ ಕೂಡಿದ್ದ ಭಯಂಕರವಾದ ಆಯುಧಗಳನ್ನು ಧರಿಸಿದ್ದ ರಾವಣನ ಸೈನ್ಯವು ಪಲಾಯನಮಾಡಿತು.

ಪರಾಜಿತರಾದ ಆ ಸೈನಿಕರು ರಾವಣನ ಬಳಿಗೆ ಹೋಗಿ ಅಗ್ನಿಯ ಮಗನಾದ ನೀಲನಿಂದ ಪ್ರಹಸ್ತನು ಹತನಾದನೆಂಬ ವಾರ್ತೆಯನ್ನು ನಿವೇದಿಸಿದರು. ಅವರ ಆ ಮಾತನ್ನು ಕೇಳಿದೊಡನೆಯೇ ರಾವಣನು ಕ್ರೋಧವಶನಾದನು. ಯುದ್ಧದಲ್ಲಿ ಪ್ರಹಸ್ತನು ಮೃತನಾದನೆಂಬ ವಾರ್ತೆಯನ್ನು ಕೇಳಿ ಕ್ರೋಧ-ಶೋಕಪೀಡಿತನಾದ ರಾವಣನು-ಇಂದ್ರನು ದೇವಗಣಗಳ ನಾಯಕರಿಗೆ ಹೇಳುವಂತೆ–ರಾಕ್ಷಸದಳನಾಯಕರಿಗೆ ಹೇಳಿದನು :

" **'ನಾವಜ್ಞಾ ರಿಪವೇ ಕಾರ್ಯಾ'**–ಶತ್ರುವಿನ ವಿಷಯದಲ್ಲಿ ನಾವು ಯಾವಾಗಲೂ ಉದಾಸೀನತೆಯಿಂದಿರಬಾರದು. ಅಗಣ್ಯರೆಂದು ಭಾವಿಸಿದ್ದ ಶತ್ರುಗಳೇ ಇಂದು ಇಂದ್ರನ ಸೈನ್ಯವನ್ನು ವಿನಾಶಗೊಳಿಸಿದ್ದ ನಮ್ಮ ಸೇನಾಪತಿಯಾದ ಪ್ರಹಸ್ತನನ್ನು ಅನುಯಾಯಿಗಳ ಸಮೇತವಾಗಿ ಮತ್ತು ಗಜಸೈನ್ಯದ ಸಮೇತವಾಗಿ ಸಂಹರಿಸಿದ್ದಾರೆ. ಆದುದರಿಂದ ಶತ್ರುಗಳ ವಿನಾಶಕ್ಕಾಗಿಯೂ ವಿಜಯದ ಸಲುವಾಗಿಯೂ ಯುಕ್ತಾಯುಕ್ತತೆಗಳನ್ನು ವಿಚಾರಮಾಡದೆಯೇ ನಾನು ಇಂದು ಅದ್ಭುತವಾದ ರಣಭೂಮಿಗೆ ಹೋಗುತ್ತೇನೆ. ಈಗಲೇ ನಾನು ಆ ಅಪಾರವಾದ ವಾನರಸೈನ್ಯವನ್ನೂ ರಾಮ-ಲಕ್ಷ್ಮಣರನ್ನೂ ಕಾಡುಗಿಚ್ಚು ಅರಣ್ಯವನ್ನು ಸುಟ್ಟುಹಾಕುವಂತೆ–ನನ್ನ ಬಾಣಗಳ ಸಮೂಹಗಳಿಂದ ಸುಟ್ಟುಹಾಕುತ್ತೇನೆ. ಕಪಿಗಳ ರಕ್ತದಿಂದ ನಾನಿಂದು ಭೂದೇವಿಯನ್ನು ತೃಪ್ತಿಗೊಳಿಸುತ್ತೇನೆ."

ದೇವೇಂದ್ರನ ಶತ್ರುವಾದ ರಾವಣನು ಮುಖ್ಯಸೇನಾನಾಯಕರಿಗೆ ಹೀಗೆ ಹೇಳಿ ಅಗ್ನಿಯಂತೆ ಜಾಜ್ವಲ್ಯಮಾನವಾಗಿದ್ದ, ಶ್ರೇಷ್ಠವಾದ ಕುದುರೆ ಗಳಿಂದ ಸಜ್ಜಾಗಿದ್ದ, ಪ್ರಕಾಶಮಾನವಾಗಿದ್ದ, ಜಾಜ್ವಲ್ಯಮಾನವಾದ ಚಕ್ರವೇ ಮೊದಲಾದ ಅಂಗಗಳನ್ನು ಹೊಂದಿದ್ದ ರಥವನ್ನು ಹತ್ತಿದನು. ಅವನು ಹೊರಡುತ್ತಿದ್ದಂತೆಯೇ ಶಂಖ-ಭೇರೀ-ಪಣಹ–ಇವೇ ಮೊದಲಾದ ರಣವಾದ್ಯಗಳು ಮೊಳಗಿದುವು. ಯೋಧರು ಚಪ್ಪಾಳೆಗಳನ್ನು ಹೊಡೆಯುತ್ತಾ ಸಿಂಹನಾದಗಳನ್ನು ಮಾಡತೊಡಗಿದರು. ವಂದಿ-ಮಾಗಧರು ಮಂಗಳಕರವಾದ ಸ್ತೋತ್ರಗಳಿಂದ ರಾವಣನನ್ನು ಸ್ತುತಿಸುತ್ತಿದ್ದರು.

ಪರ್ವತ ಮತ್ತು ಮೇಘಗಳಿಗೆ ಸದೃಶರಾದ, ಮಾಂಸಾಶಿಗಳಾದ, ಅಗ್ನಿಯಂತೆ ಬೆಳಗುತ್ತಿರುವ ಕಣ್ಣುಗಳುಳ್ಳವರಾಗಿದ್ದ ರಾಕ್ಷಸರಿಂದ ಸಮಾವೃತನಾಗಿದ್ದ ರಾಕ್ಷಸರಾಜನಾದ ರಾವಣನು ಭೂತಗಣಗಳಿಂದ ಪರಿವೃತನಾದ ರುದ್ರನಂತೆಯೇ ಪ್ರಕಾಶಿಸುತ್ತಿದ್ದನು. ಮಹಾತೇಜಸ್ವಿಯಾದ ರಾವಣನು ಒಡನೆಯೇ ನಗರಿಯಿಂದ ಹೊರಟು ಭಯಂಕರವಾಗಿದ್ದ ವಾನರಸೈನ್ಯವನ್ನು ನೋಡಿದನು. ಆ ಮಹಾಸೈನ್ಯವು ಮಹಾಸಾಗರದಂತೆಯೂ–ಮಹಾಮೇಘದಂತೆಯೂ ಗರ್ಜನೆಮಾಡುತ್ತಿದ್ದಿತು. ವೃಕ್ಷಗಳನ್ನೂ ಬಂಡೆಗಳನ್ನೂ ಕೈಗಳಲ್ಲಿ ಹಿಡಿದು ನಿಂತಿದ್ದಿತು.

ಅತಿಪ್ರಚಂಡವಾಗಿದ್ದ ರಾಕ್ಷಸಸೈನ್ಯವನ್ನು ನೋಡಿ ಭುಜಗೇಂದ್ರನಂತೆ ನೀಳವಾದ ಮತ್ತು ದಪ್ಪವಾದ ತೋಳುಗಳನ್ನು ಹೊಂದಿದ್ದ, ಮಹಾಕಾಂತಿಯಿಂದ ಸಂಪನ್ನನಾಗಿದ್ದ, ವಾನರರಿಂದ ಅನುಸೃತನಾಗಿದ್ದ ಶ್ರೀರಾಮನು ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ವಿಭೀಷಣನನ್ನು ಪ್ರಶ್ನಿಸಿದನು :

"ವಿಭೀಷಣ! ನಾನಾವಿಧವಾದ ಪತಾಕೆಗಳಿಂದಲೂ, ಧ್ವಜಗಳಿಂದಲೂ, ಛತ್ರಗಳಿಂದಲೂ ಸುಶೋಭಿತವಾಗಿರುವ–ಪ್ರಾಸ, ಖಡ್ಗ ಮತ್ತು ಶೂಲ ಇವೇ ಮೊದಲಾದ ಅಸ್ತ್ರ-ಶಸ್ತ್ರಗಳಿಂದ ಸಂಪನ್ನವಾಗಿರುವ–ಅಜೇಯರಾದ ಮತ್ತು ಭಯವೇ ಇಲ್ಲದ ಸೈನಿಕರಿಂದ ಸೇವಿಸಲ್ಪಡುತ್ತಿರುವ–ಮಹೇಂದ್ರಪರ್ವತ ಸದೃಶವಾದ ಆನೆಗಳಿಂದ ಕೂಡಿರುವ ಈ ಸೈನ್ಯವು ಯಾರದು?"

ಶ್ರೀರಾಮನ ಆ ಮಾತನ್ನು ಕೇಳಿ ಇಂದ್ರಸಮಪರಾಕ್ರಮನಾದ ವಿಭೀಷಣನು ಶ್ರೀರಾಮನಿಗೆ ಮಹಾತ್ಮರಾದ ರಾಕ್ಷಸಶ್ರೇಷ್ಠರ ಪರಾಕ್ರಮದ ಹಿರಿಮೆಯನ್ನು ಪರಿಚಯಮಾಡಿಕೊಡುತ್ತಾ ಹೇಳಿದನು :

"ರಾಘವ! ಅದೋ ನೋಡು; ಯಾವ ಮಹಾತ್ಮನು ಆನೆಯ ಹೆಗಲ ಮೇಲೆ ಕುಳಿತಿರುವನೋ, ಆಗತಾನೇ ಹುಟ್ಟಿದ ಸೂರ್ಯನಂತೆ ತಾಮ್ರವರ್ಣದ ಮುಖದಿಂದ ಕೂಡಿರುವನೋ, ತಾನು ಕುಳಿತಿರುವ ಆನೆಯ ಶಿರಸ್ಸನ್ನೇ ತನ್ನ ಭಾರದಿಂದ ಕಂಪನಗೊಳಿಸುತ್ತಿರುವನೋ–ಅವನನ್ನು ನೀನು ಅಕಂಪನನೆಂದು ತಿಳಿ.*

---

* ಇವನು ಹನುಮಂತನು ವಧಿಸಿದ ಅಕಂಪನನಲ್ಲ. ಅವನಿಂದ ಬೇರೆಯವನು.

ಯಾವನು ಧ್ವಜದಲ್ಲಿ ಸಿಂಹದ ಚಿಹ್ನೆಯಿರುವ ರಥದಲ್ಲಿ ಕುಳಿತಿರುವನೋ, ಆನೆಯಂತೆ ಪ್ರಕಾಶಮಾನವಾದ ಕೋರೆದಾಡೆಗಳನ್ನು ಹೊಂದಿರುವನೋ, ಇಂದ್ರನ ಧನುಸ್ಸಿಗೆ ಸಮಾನವಾದ ಧನುಸ್ಸನ್ನು ಹಿಂದಕ್ಕೂ ಮುಂದಕ್ಕೂ ಓಲಾಡಿಸುತ್ತಿರುವನೋ, ವರದಾನದಿಂದ ಅತ್ಯಂತಪ್ರಬಲನಾಗಿರುವನೋ–ಅವನೇ ಇಂದ್ರಜಿತುವು. ಯಾವನು ವಿಂಧ್ಯಾಚಲ-ಅಸ್ತಾಚಲ ಮತ್ತು ಮಹೇಂದ್ರಪರ್ವತಗಳಂತೆ ವಿಶಾಲಕಾಯನಾಗಿರುವನೋ, ಧನುರ್ಧರನಾಗಿ ರಥದಲ್ಲಿ ಕುಳಿತಿರುವನೋ, ಅನುಪಮವಾದ ಧನುಸ್ಸಿನ ನಾಣನ್ನು ಪುನಃ ಪುನಃ ಸೆಳೆದು ಟೇಂಕಾರಮಾಡುತ್ತಿರುವನೋ, ಅತಿದೊಡ್ಡದಾದ ಶರೀರವುಳ್ಳವನಾಗಿರುವನೋ–ಅವನೇ ಅತಿಕಾಯನೆಂಬ ರಾಕ್ಷಸನು. ಅವನು ಅತಿರಥನೂ ಮತ್ತು ಮಹಾರಥನೂ ಆಗಿದ್ದಾನೆ.

ಯಾವನ ಕಣ್ಣುಗಳು ಆಗ ತಾನೇ ಉದಯಿಸಿದ ಸೂರ್ಯನಂತೆ ಎಣ್ಣೆಗೆಂಪಾಗಿರುವುವೋ, ಘಂಟೆಯ ನಿನಾದಕ್ಕಿಂತಲೂ ಉತ್ಕೃಷ್ಟವಾದ ಧ್ವನಿಯುಳ್ಳವನಾಗಿರುವನೋ, ಆನೆಯ ಮೇಲೆ ಕುಳಿತು ಗಟ್ಟಿಯಾಗಿ ಗರ್ಜನೆ ಮಾಡುತ್ತಿರುವನೋ–ಆ ಮಹಾತ್ಮನೇ ಮಹೋದರನೆಂಬ ಹೆಸರಿನ ರಾಕ್ಷಸನು.

ಯಾವನು ಸಾಯಂಕಾಲದಲ್ಲಿ ಮೋಡಕವಿದಿರುವ ಪರ್ವತದ ಕಾಂತಿಯಂತೆ ಬೆಳಗುತ್ತಿರುವನೋ, ಸುವರ್ಣಮಯವಾದ ಆಭರಣಗಳಿಂದ ಸಮಲಂಕೃತವಾದ ಕುದುರೆಯ ಮೇಲೆ ಕುಳಿತು ಥಳ-ಥಳಿಸುತ್ತಿರುವ ಪ್ರಾಸಾಯುಧವನ್ನು ಹಿಡಿದು ಬರುತ್ತಿರುವನೋ–ಅವನೇ ಪಿಶಾಚನೆಂಬ ರಾಕ್ಷಸನು. ಅವನು ವಜ್ರಾಯುಧದ ವೇಗಕ್ಕೆ ಸಮಾನವಾದ ವೇಗವುಳ್ಳ ಯೋಧನಾಗಿದ್ದಾನೆ. ಯಾವನು ವಜ್ರಾಯುಧದ ವೇಗವನ್ನು ತನ್ನ ಅಡಿಯಾಳನ್ನಾಗಿ ಮಾಡಿಕೊಂಡಿರುವನೋ (ವಜ್ರಾಯುಧದ ವೇಗಕ್ಕಿಂತಲೂ ಅಧಿಕವಾದ ವೇಗವುಳ್ಳವನಾಗಿರುವನೋ), ಮಿಂಚಿನಂತೆ ಪ್ರಭೆಯಿಂದ ಕೂಡಿರುವ ನಿಶಿತವಾದ ಶೂಲವನ್ನು ಹಿಡಿದು ಚಂದ್ರನಂತೆ ಪ್ರಕಾಶಮಾನವಾಗಿರುವ ಎತ್ತಿನ ಮೇಲೆ ಕುಳಿತು ಇತ್ತಕಡೆ ಬರುತ್ತಿರುವನೋ–ಅವನೇ ಯಶೋವಂತ ನಾದ ತ್ರಿಶಿರಸನು.*

ಯಾವನ ರೂಪವು ಮೇಘದಂತೆ ಶ್ಯಾಮಲವರ್ಣದ್ದಾಗಿರುವುದೋ,

---

* ಈ ತ್ರಿಶಿರಸನು ಜನಸ್ಥಾನದಲ್ಲಿ ಮೃತನಾದ ತ್ರಿಶಿರಸನಿಗಿಂತಲೂ ಬೇರೆಯವನು.

ವಕ್ಷಃಸ್ಥಳವು ಎತ್ತರವಾಗಿಯೂ ಅಗಲವಾಗಿಯೂ ಸುಂದರವಾಗಿಯೂ ಇರುವುದೋ, ರಥದ ಧ್ವಜದಲ್ಲಿ ನಾಗರಾಜನಾದ ವಾಸುಕಿಯ ಚಿಹ್ನೆಯಿರುವುದೋ, ಏಕಾಗ್ರಚಿತ್ತನಾಗಿ ಧನುಸ್ಸನ್ನು ಟೇಂಕರಿಸುತ್ತಾ ಇತ್ತಕಡೆ ಬರುತ್ತಿರುವನೋ–ಅವನೇ ಕುಂಭನೆಂಬ ಹೆಸರಿನ ರಾಕ್ಷಸಯೋಧನು.

ಯಾವನು ಸುವರ್ಣ-ವಜ್ರಗಳಿಂದ ಖಚಿತವಾಗಿ, ಕಾಂತಿಯುಕ್ತವಾದ ಹಿಡಿಯಿಂದ ಕೂಡಿ, ಧೂಮಸಹಿತವಾದ ಅಗ್ನಿಯಂತೆ ಕಾಣುತ್ತಿರುವ ಪರಿಘಾಯುಧವನ್ನು ಹಿಡಿದು ರಾಕ್ಷಸರ ಸೈನ್ಯಕ್ಕೇ ಕೇತುಪ್ರಾಯನಾಗಿ ಇತ್ತಕಡೆಗೆ ಬರುತ್ತಿರುವನೋ–ಅವನೇ ನಿಕುಂಭನು. ಇವನು ಅದ್ಭುತವಾದ ಮತ್ತು ಅತ್ಯಂತ ಕ್ರೂರವಾದ ಕರ್ಮಗಳನ್ನು ಮಾಡತಕ್ಕವನು.

ಯಾವನು–ಧನುಸ್ಸು, ಕತ್ತಿ ಮತ್ತು ಬಾಣಗಳಿಂದ ತುಂಬಿರುವ–ಅಗ್ನಿಯಂತೆ ಪ್ರಕಾಶಮಾನವಾದ ಪತಾಕೆಯಿಂದ ಕೂಡಿರುವ ರಥದಲ್ಲಿ ಕುಳಿತು ವಿರಾಜಿಸುತ್ತಿರುವನೋ–ಅವನೇ ಎತ್ತರವಾದ ಆಕಾರವುಳ್ಳ ನರಾಂತಕನು. ಅವನು ಪರ್ವತಶಿಖರಗಳನ್ನೇ ಆಯುಧಗಳನ್ನಾಗಿ ಮಾಡಿಕೊಂಡು ಯುದ್ಧ ಮಾಡತಕ್ಕವನು.*

ಯಾವನು–ಹುಲಿ, ಒಂಟೆ, ಆನೆ, ಜಿಂಕೆ ಮತ್ತು ಕುದುರೆಗಳ ಮುಖಗಳನ್ನು ಹೊಂದಿರುವ, ಸುತ್ತುತ್ತಿರುವ ಕಣ್ಣುಗಳಿಂದ ಕೂಡಿರುವ, ನಾನಾ ಪ್ರಕಾರವಾದ ಭಯಂಕರವಾದ ರೂಪಗಳನ್ನು ಧರಿಸಿರುವ ಭೂತಗಣಗಳಿಂದ ಪರಿವೃತನಾಗಿರುವನೋ–ದೇವತೆಗಳ ದರ್ಪವನ್ನೂ ಯಾವನು ಅಡಗಿಸಬಲ್ಲನೋ–ಯಾವನ ತಲೆಯ ಮೇಲೆ ಚಂದ್ರಸದೃಶವಾದ ಬಿಳುಪಿನಿಂದಲೂ, ಸೂಕ್ಷ್ಮವಾದ ಶಲಾಕೆಗಳಿಂದಲೂ ಕೂಡಿದ ಶ್ರೇಷ್ಠವಾದ ಶ್ವೇತಚ್ಛತ್ರವು ವಿರಾಜಿಸುತ್ತಿರುವುದೋ–ಅವನೇ ರಾಕ್ಷಸರೆಲ್ಲರಿಗೂ ರಾಜನಾದ ಮಹಾತ್ಮನಾದ ರಾವಣನು. ಅವನೀಗ ಭೂತಗಣಗಳಿಂದ ಸಮಾವೃತನಾದ ರುದ್ರನಂತೆಯೇ

ಇಲ್ಲಿ ಹೇಳಿರುವ ತ್ರಿಶಿರಸನು ರಾವಣನ ಮಗನು. ಜನಸ್ಥಾನದಲ್ಲಿದ್ದ ತ್ರಿಶಿರಸನು ರಾವಣನ ಸಹೋದರ.

* ಈ ನರಾಂತಕನು ಈ ಹಿಂದೆ ಬಂದಿರುವ ನರಾಂತಕನಿಗಿಂತಲೂ ಭಿನ್ನನು. ರಾವಣನ ಮತ್ತೊಬ್ಬ ಮಗನು.

ಪ್ರಕಾಶಿಸುತ್ತಿರುವನು. ಅವನ ತಲೆಯಲ್ಲಿ ಪ್ರಕಾಶಮಾನವಾದ ಕಿರೀಟವಿದೆ. ಚಂಚಲಿಸುತ್ತಿರುವ ಕುಂಡಲಗಳಿಂದ ಕೂಡಿದ ಮುಖವುಳ್ಳವನಾಗಿದ್ದಾನೆ. ಅವನಿಗೆ ಹಿಮಾಲಯ ಮತ್ತು ವಿಂಧ್ಯಪರ್ವತಗಳಂತೆ ಭಯಂಕರವಾದ ಶರೀರವಿದೆ. ಇಂದ್ರ-ಯಮರ ದರ್ಪವನ್ನೂ ಅಡಗಿಸುವ ಸಾಮರ್ಥ್ಯವನ್ನು ಹೊಂದಿದ್ದಾನೆ. ರಾಕ್ಷಸರಿಗೆ ಅಧಿಪತಿಯಾಗಿರುವ ಇವನು ಅವರ ಮಧ್ಯದಲ್ಲಿ ಸೂರ್ಯನಂತೆಯೇ ಪ್ರಕಾಶಿಸುತ್ತಿದ್ದಾನೆ."

ಬಳಿಕ ಶತ್ರುಸೂದನನಾದ ಶ್ರೀರಾಮನು ವಿಭೀಷಣನಿಗೆ ಹೇಳಿದನು :

ಅಹೋ ದೀಪ್ತೋ ಮಹಾತೇಜಾ ರಾವಣೋ ರಾಕ್ಷಸೇಶ್ವರಃ ॥೨೬॥

"ಅಬ್ಬಾ! ರಾಕ್ಷಸರಾಜನಾದ ರಾವಣೇಶ್ವರನು ಎಷ್ಟು ದೇದೀಪ್ಯಮಾನ ವಾದ ತೇಜಸ್ಸಿನಿಂದ ಬೆಳಗುತ್ತಿದ್ದಾನೆ!

ಆದಿತ್ಯ ಇವ ದುಷ್ಪ್ರೇಕ್ಷ್ಯೋ ರಶ್ಮಿಭಿರ್ಭಾತಿ ರಾವಣಃ ।
ನ ವ್ಯಕ್ತಂ ಲಕ್ಷಯೇ ಹ್ಯಸ್ಯ ರೂಪಂ ತೇಜಃಸಮಾವೃತಮ್ ॥೨೭॥

ಇವನು ತನ್ನ ಪ್ರಭೆಯಿಂದ ಆದಿತ್ಯನಿಗೆ ಸಮಾನನಾಗಿದ್ದಾನೆ. ತೀಕ್ಷ್ಣ ಕಿರಣನಾದ ಸೂರ್ಯನನ್ನು ನೋಡಲಾಗದಿರುವಂತೆ ಇವನನ್ನೂ ದಿಟ್ಟಿಸಿ ನೋಡಲಾಗುವುದಿಲ್ಲ. ಈ ಕಾರಣದಿಂದಲೇ ತೇಜಸ್ಸಿನಿಂದ ಸಮಾವೃತನಾಗಿ ರುವ ಇವನ ರೂಪವನ್ನು ನಾನು ಸ್ಪಷ್ಟವಾಗಿ ಕಾಣುತ್ತಿಲ್ಲ.

ದೇವದಾನವವೀರಾಣಾಂ ವಪುರ್ನೈವಂವಿಧಂ ಭವೇತ್ ।
ಯಾದೃಶಂ ರಾಕ್ಷಸೇನ್ದ್ರಸ್ಯ ವಪುರೇತತ್ಪ್ರಕಾಶತೇ ॥೨೮॥

ರಾಕ್ಷಸೇಂದ್ರನ ಈ ಶರೀರವು ವಿರಾಜಿಸುತ್ತಿರುವಂತೆ–ದೇವ-ದಾನವರ ಶರೀರಗಳೂ ವಿರಾಜಿಸುವುದಿಲ್ಲ. ಇಂತಹ ಅನುಪಮವಾದ ಶರೀರ ಕಾಂತಿಯು ದೇವ-ದಾನವರಿಗೂ ಇರುವುದಿಲ್ಲ.

ಮಹಾತ್ಮನಾದ ಇವನ ಯೋಧರಾದರೋ ಪರ್ವತಸದೃಶರಾದವರು. ಪರ್ವತಗಳಿಂದಲೇ ಯುದ್ಧಮಾಡುವವರು. ಎಲ್ಲರೂ ಪ್ರದೀಪ್ತವಾದ ಆಯುಧ ಗಳನ್ನು ಹೊಂದಿದ್ದಾರೆ. ದೀಪ್ತಿಮಂತರಾದ, ಭಯಂಕರರಾಗಿ ಕಾಣುವ, ತೀಕ್ಷ್ಣವಾದ ಸ್ವಭಾವವುಳ್ಳ ರಾಕ್ಷಸರಿಂದ ಪರಿವೃತನಾಗಿರುವ ಇವನು ದೇಹ ಧಾರಿಗಳಾದ ಭೂತಗಣಗಳಿಂದ ಪರಿವೃತನಾದ ಯಮರಾಜನಂತೆಯೇ ಕಾಣು

ತ್ತಿರುವನು. ಭಾಗ್ಯವಶದಿಂದ ಇಂದು ಈ ಪಾಪಾತ್ಮನು ನನ್ನ ದೃಷ್ಟಿಗೆ ಗೋಚರ ನಾಗಿದ್ದಾನೆ. ಸೀತೆಯನ್ನು ಅಪಹರಿಸಿದ ಕಾರಣದಿಂದ ನನ್ನಲ್ಲಿ ಸಂಚಿತ ವಾಗಿರುವ ಕೋಪವನ್ನು ಈಗಲೇ ಇವನ ಮೇಲೆ ಪ್ರಯೋಗಿಸುವೆನು."

ಶ್ರೀರಾಮನು ವಿಭೀಷಣನಿಗೆ ಹೀಗೆ ಹೇಳಿ ಧನುಸ್ಸನ್ನು ಹಿಡಿದು ಬತ್ತಳಿಕೆಯಿಂದ ಬಾಣವನ್ನು ತೆಗೆದು ಸನ್ನದ್ಧನಾಗಿ ನಿಂತನು. ಆ ಸಮಯದಲ್ಲಿ ಲಕ್ಷ್ಮಣನೂ ಅವನ ಜೊತೆಯಲ್ಲೇ ಇದ್ದನು.

ಬಳಿಕ ಮಹಾಮನಸ್ವಿಯಾದ ರಾಕ್ಷಸರಾಜನಾದ ರಾವಣನು ತನ್ನೊಡನೆ ಬಂದಿದ್ದ ಮಹಾಬಲಿಷ್ಠರಾದ ರಾಕ್ಷಸಯೋಧರಿಗೆ ಹೇಳಿದನು :

"ರಾಕ್ಷಸಶ್ರೇಷ್ಠರೇ! ನೀವೆಲ್ಲರೂ ನಿರ್ಭಯರಾಗಿ ಯಾವ ಆತಂಕವೂ ಇಲ್ಲದೇ ನಗರದ ಮಹಾದ್ವಾರಗಳಲ್ಲಿಯೂ, ರಾಜಮಾರ್ಗಗಳಲ್ಲಿಯೂ, ಗೃಹ-ಗೋಪುರಗಳಲ್ಲಿಯೂ ಸನ್ನದ್ಧರಾಗಿ ನಿಲ್ಲಿರಿ. ಏಕೆಂದರೆ : ನೀವೆಲ್ಲರೂ ನನ್ನೊಡನಿರುವುದನ್ನು ತಿಳಿದು ಇದೇ ಸರಿಯಾದ ಸಮಯವೆಂದು ಭಾವಿಸಿ ಕಪಿಸೈನಿಕರು ಒಂದೆಡೆಯಲ್ಲಿ ಸೇರಿ ಸಾಮಾನ್ಯರಿಂದ ಪ್ರವೇಶಿಸಲು ಅಸಾಧ್ಯ ವಾದ, ರಾಕ್ಷಸಯೋಧರಿಂದ ಶೂನ್ಯವಾಗಿರುವ ಲಂಕಾಪಟ್ಟಣವನ್ನು ಧ್ವಂಸ ಮಾಡಿ ನಮ್ಮನ್ನು ಅವಮಾನಗೊಳಿಸಿಯಾರು."

ರಾವಣನು ಹೀಗೆ ಹೇಳಿ ತನ್ನನ್ನು ಅನುಸರಿಸಿ ಬಂದಿದ್ದ ಮಂತ್ರಿಗಳನ್ನು ಅವರವರ ಸ್ಥಾನಗಳಿಗೆ ಕಳುಹಿಸಿಕೊಟ್ಟನು. ರಾವಣನ ಆಜ್ಞೆಯಂತೆ ಎಲ್ಲರೂ ಹೊರಟುಹೋದನಂತರ–ತಿಮಿಂಗಿಲವು ತುಂಬಿದ ಸಮುದ್ರವನ್ನು ಅಲ್ಲೋಲ-ಕಲ್ಲೋಲಗೊಳಿಸುವಂತೆ–ಸಾಗರರೂಪವಾದ ವಾನರಮಹಾಸೈನ್ಯವನ್ನು ರಾವಣನು ಕ್ಷೋಭೆಗೊಳಿಸಲು ಪ್ರಾರಂಭಿಸಿದನು. ರಾಕ್ಷಸರಾಜನಾದ ರಾವಣನು ಥಳಥಳಿಸುತ್ತಿದ್ದ ಧನುಸ್ಸನ್ನು ಹಿಡಿದುಕೊಂಡು ತ್ವರಿತನಾಗಿ ಯುದ್ಧ ಸ್ಥಳಕ್ಕೆ ಬಂದುದನ್ನು ನೋಡಿ ವಾನರರಾಜನಾದ ಸುಗ್ರೀವನು ದೊಡ್ಡ ದಾದೊಂದು ಪರ್ವತಶಿಖರವನ್ನು ಕಿತ್ತು ಕೈಗೆತ್ತಿಕೊಂಡು ರಾವಣನ ಕಡೆಗೆ ಧಾವಿಸಿದನು. ತಪ್ಪಲುಪ್ರದೇಶದಲ್ಲಿ ಅನೇಕವೃಕ್ಷಗಳನ್ನೊಳಗೊಂಡಿದ್ದ ಆ ಪರ್ವತ ಶಿಖರವನ್ನು ರಾವಣನ ಮೇಲೆಸೆದನು. ಪರ್ವತಶಿಖರವು ತನ್ನ ಮೇಲೆ ಬೀಳಲಿರುವುದನ್ನು ಗಮನಿಸಿದ ರಾವಣನು ಒಡನೆಯೇ ಚಿನ್ನದ ರೆಕ್ಕೆಗಳಿದ್ದ

ಬಾಣಗಳಿಂದ ಪರ್ವತಶಿಖರವನ್ನು ಚೂರು-ಚೂರು ಮಾಡಿದನು. ಸೊಂಪಾಗಿ ಬೆಳೆದಿದ್ದ ವೃಕ್ಷಗಳಿಂದಲೂ ಪ್ರಸ್ಥಭೂಮಿಯಿಂದಲೂ ಕೂಡಿದ್ದ ಆ ಶಿಖರವು ಚೂರು-ಚೂರುಗಳಾಗಿ ಭೂಮಿಯಲ್ಲಿ ಬಿದ್ದನಂತರ ರಾಕ್ಷಸಲೋಕಕ್ಕೆ ನಾಥ ನಾದ ರಾವಣನು ಮಹಾಸರ್ಪದಂತೆಯೇ ಕಾಣುತ್ತಿದ್ದ ಅಂತಕಸದೃಶವಾಗಿದ್ದ ಬಾಣವನ್ನು ಧನುಸ್ಸಿನಲ್ಲಿ ಹೂಡಿದನು. ಆ ಬಾಣವು ವಾಯುವಿನ ವೇಗಕ್ಕೆ ಸಮಾನವಾದ ವೇಗವುಳ್ಳದ್ದಾಗಿದ್ದಿತು. ಕಿಡಿಗಳನ್ನು ಕಾರುತ್ತಾ ಪ್ರಜ್ವಲಿಸುವ ಯಜ್ಞೇಶ್ವರನಂತೆ ಪ್ರಕಾಶಮಾನವಾಗಿದ್ದಿತು. ಮಹೇಂದ್ರನ ವಜ್ರಾಯುಧಕ್ಕೆ ಸಮಾನವಾದ ವೇಗವುಳ್ಳದ್ದಾಗಿದ್ದಿತು. ಕ್ರುದ್ಧನಾಗಿದ್ದ ರಾವಣನು ಅಂತಹ ತೀಕ್ಷ್ಣವಾದ ಬಾಣವನ್ನು ಸುಗ್ರೀವನ ವಧೆಗಾಗಿ ಪ್ರಯೋಗಿಸಿದನು. ರಾವಣನ ಧನುಸ್ಸಿನಿಂದ ಹೊರಬಂದ ಆ ಬಾಣವು-ಗುಹನಿಂದ ಬಿಡಲ್ಪಟ್ಟ ಉಗ್ರವಾದ ಶಕ್ತ್ಯಾಯುಧವು ಕ್ರೌಂಚಪರ್ವತವನ್ನು ಹೊಕ್ಕಂತೆ–ಇಂದ್ರನ ವಜ್ರಾಯುಧ ದಂತೆ ಪ್ರಕಾಶಮಾನವಾದ ಶರೀರವುಳ್ಳವನಾಗಿದ್ದ ಸುಗ್ರೀವನನ್ನು ಭೇದಿಸಿ ಒಳಹೊಕ್ಕಿತು. ಬಾಣದಿಂದ ಪೀಡಿತನಾದ ಸುಗ್ರೀವನು ಭ್ರಾಂತಚಿತ್ತನಾಗಿ ಕೂಗಿಕೊಳ್ಳುತ್ತಾ ಭೂಮಿಯ ಮೇಲೆ ಬಿದ್ದನು. ಭೂಮಿಯಲ್ಲಿ ಬಿದ್ದು ಪ್ರಜ್ಞೆತಪ್ಪಿದ ಸುಗ್ರೀವನನ್ನು ನೋಡಿ ರಾಕ್ಷಸರು ಪ್ರಹೃಷ್ಟರಾಗಿ ಸಿಂಹನಾದ ಗಳನ್ನು ಮಾಡಿದರು. ಬಳಿಕ ವಿಶಾಲಕಾಯರಾದ ಗವಾಕ್ಷ-ಗವಯ-ಸುಷೇಣ-ಋಷಭ-ಜ್ಯೋತಿರ್ಮುಖ-ನಲ ಇವರೇ ಮೊದಲಾದ ವಾನರರು ಪರ್ವತ ಶಿಖರಗಳನ್ನೇ ಕಿತ್ತು ಕೈಗಳಲ್ಲೆತ್ತಿಕೊಂಡು ರಾಕ್ಷಸರಾಜನ ಕಡೆಗೆ ಧಾವಿಸಿದರು. ವಾನರನಾಯಕರು ರಭಸದಿಂದ ತನ್ನ ಮೇಲೆಸೆದ ಆ ಎಲ್ಲ ಪರ್ವತಶಿಖರ ಗಳನ್ನೂ ನಿಶಿತವಾದ ಅಗ್ರಭಾಗಗಳಿಂದ ಕೂಡಿದ್ದ ನೂರಾರು ಬಾಣಗಳಿಂದ ರಾವಣನು ವ್ಯರ್ಥಗೊಳಿಸಿದನು. ಮರುಕ್ಷಣದಲ್ಲಿಯೇ ರಾವಣನು ಸುವರ್ಣ ಮಯವಾದ ಮತ್ತು ಚಿತ್ರಿತವಾದ ರೆಕ್ಕೆಗಳಿರುವ ಬಾಣಗಳ ಸಮೂಹಗಳಿಂದ ಗವಾಕ್ಷ-ಗವಯನೇ ಮೊದಲಾದ ವಾನರೇಂದ್ರರನ್ನು ಪ್ರಹರಿಸಿದನು. ದೇವತೆಗಳ ಶತ್ರುವಾದ ರಾವಣನಿಂದ ಬಿಡಲ್ಪಟ್ಟ ಆ ಬಾಣಗಳಿಂದ ಭೀಮಕಾಯರಾದ ವಾನರನಾಯಕರು ಗಾಯಗೊಂಡು ಭೂಮಿಯಲ್ಲಿ ಬಿದ್ದರು. ಪುನಃ ರಾವಣನು ತನ್ನ ಬಾಣಗಳ ಸಮೂಹಗಳಿಂದ ಭಯಂಕರ ವಾಗಿ ಕಾಣುತ್ತಿದ್ದ ಆ ವಾನರಸೈನ್ಯವನ್ನು ಮುಚ್ಚಿದನು. ಭಯವೆಂಬ ಬಾಣ

ದಿಂದಲೂ ಮತ್ತು ರಾವಣನ ಬಾಣಗಳಿಂದಲೂ ಪೀಡಿಸಲ್ಪಟ್ಟ ಕೆಲವು ವಾನರರು ಚೀತ್ಕಾರಮಾಡುತ್ತಾ ಭೂಮಿಯಲ್ಲಿ ಬಿದ್ದರು. ರಾವಣನ ಬಾಣ ಗಳಿಂದ ಗಾಯಗೊಂಡು ಪೀಡಿತರಾದ ಕೆಲವರು ವಾನರರು ಸರ್ವಲೋಕ ಶರಣ್ಯನಾದ ಶ್ರೀರಾಮನಿಗೆ ಶರಣುಹೋದರು.

ಒಡನೆಯೇ ಮಹಾತ್ಮನಾದ ಧನುಷ್ಮಂತನಾದ ಶ್ರೀರಾಮನು ಧನುಸ್ಸ ನ್ನೆತ್ತಿಕೊಂಡು ಹೊರಟನು. ಆ ಸಮಯಕ್ಕೆ ಸರಿಯಾಗಿ ಲಕ್ಷ್ಮಣನು ಮುಂದೆ ಬಂದು ಕೈಮುಗಿದುಕೊಂಡು ಪರಮಾರ್ಥಯುಕ್ತವಾದ ಈ ಮಾತನ್ನು ಹೇಳಿದನು :

"ಆರ್ಯನೇ! ಆ ದುರಾತ್ಮನನ್ನು ಸಂಹರಿಸಲು ನಾನೊಬ್ಬನೇ ಸಾಕು. ನನಗೆ ಅನುಮತಿಯನ್ನು ನೀಡು. ಅವನನ್ನು ನಾನೀಗಲೇ ಧ್ವಂಸಮಾಡಿ ಬಿಡುವೆನು."

ಲಕ್ಷ್ಮಣನ ಆ ಮಾತನ್ನು ಕೇಳಿ ಮಹಾತೇಜಸ್ವಿಯಾದ ಸತ್ಯಪರಾಕ್ರಮ ನಾದ ಶ್ರೀರಾಮನು ಹೇಳಿದನು :

"ಆಗಲಿ ಲಕ್ಷ್ಮಣ! ನೀನೇ ಹೋಗಿ ಬಾ. ಯುದ್ಧದಲ್ಲಿ ವಿಜಯ ಗಳಿಸಬೇಕಾದರೆ ಸಂಪೂರ್ಣವಾಗಿ ಪ್ರಯತ್ನಶೀಲನಾಗಿರಬೇಕೆಂಬುದು ನೆನ ಪಿರಲಿ. ಏಕೆಂದರೆ : ರಾವಣನಾದರೋ ಸಾಮಾನ್ಯನಲ್ಲ. ಮಹಾವೀರ್ಯನು. ಯುದ್ಧದಲ್ಲಿ ಅದ್ಭುತವಾದ ಪರಾಕ್ರಮವನ್ನು ತೋರತಕ್ಕವನು. ಅವನೇ ನಾದರೂ ಕ್ರುದ್ಧನಾಗಿ ಯುದ್ಧಮಾಡಲು ತೊಡಗಿದರೆ–ಮೂರು ಲೋಕ ಗಳಲ್ಲಿ ಯಾರೂ ಅವನ ವೇಗವನ್ನು ಸಹಿಸಲು ಸಾಧ್ಯವಾಗುವುದಿಲ್ಲವೆಂಬು ದರಲ್ಲಿ ಸಂಶಯವೇ ಇಲ್ಲ. ಅವನಲ್ಲುಂಟಾಗಬಹುದಾದ ಛಿದ್ರವನ್ನು ಹುಡುಕುತ್ತಲೇ ಇರಬೇಕು. ನಿನ್ನಲ್ಲಿಯೂ ಯಾವುದಾದರೂ ಛಿದ್ರವು ಸಂಭವಿಸುವುದೋ ಎಂಬುದನ್ನೂ ಲಕ್ಷಿಸುತ್ತಿರಬೇಕು. ಶತ್ರುವಿನಲ್ಲಿ ಛಿದ್ರವು ಕಂಡೊಡನೆಯೇ ಪ್ರಹರಿಸಬೇಕು. ನಿನ್ನಲ್ಲಿ ಛಿದ್ರವಾಗದಂತೆ ಜಾಗರೂಕತೆಯಿಂದ ನೋಡಿಕೊಳ್ಳಬೇಕು. ಏಕಾಗ್ರಚಿತ್ತನಾಗಿ ಕಣ್ಣುಗಳಿಂದಲೂ ಮತ್ತು ಧನುಸ್ಸಿನಿಂದಲೂ ನಿನ್ನನ್ನು ರಕ್ಷಿಸಿಕೊ."

ರಾಘವನ ಮಾತನ್ನು ಕೇಳಿ ಲಕ್ಷ್ಮಣನು ಅಣ್ಣನನ್ನು ಗಾಢವಾಗಿ

ಆಲಿಂಗಿಸಿಕೊಂಡು ಯಥೋಚಿತವಾಗಿ ಸತ್ಕರಿಸಿದನು. ಶ್ರೀರಾಮನಿಗೆ ಅಭಿವಾದನಮಾಡಿ ರಾವಣನೊಡನೆ ಯುದ್ಧಮಾಡಲು ಹೊರಟನು.

ರಣರಂಗದಲ್ಲಿ ಲಕ್ಷ್ಮಣನು ಆನೆಯ ಸೊಂಡಿಲಿನಂತೆ ತೋಳುಗಳನ್ನು ಹೊಂದಿದ್ದ, ಭಯಂಕರವಾದ ಮತ್ತು ಪ್ರಕಾಶಮಾನವಾದ ಧನುಸ್ಸನ್ನು ಹಿಡಿದು ವಾನರಸೈನಿಕರನ್ನು ಬಾಣಸಮೂಹವೃಷ್ಟಿಯಿಂದ ಮುಚ್ಚುತ್ತಿದ್ದ ರಾವಣನನ್ನೂ–ಭಿನ್ನವಾಗಿ ರಣರಂಗದ ಸುತ್ತಲೂ ಹರಡಿಕೊಂಡು ಬಿದ್ದಿದ್ದ ವಾನರದೇಹಗಳನ್ನೂ ನೋಡಿದನು. ಲಕ್ಷ್ಮಣನು ಯುದ್ಧಸನ್ನದ್ಧನಾಗಿ ಬರುತ್ತಿರುವುದನ್ನು ಕಂಡು ಮಹಾತೇಜಸ್ವಿಯಾದ ಹನುಮಂತನು ರಾವಣನು ಬಿಡುತ್ತಿದ್ದ ಬಾಣಗಳ ಸಮೂಹಗಳನ್ನು ನಿವಾರಿಸಿಕೊಂಡು ಅವನ ಕಡೆಗೆ ಧಾವಿಸಿದನು. ಧೀಮಂತನಾದ ಹನುಮಂತನು ರಾವಣನ ರಥದ ಬಳಿಗೆ ಹೋಗಿ ಬಲದೋಳನ್ನು ಮೇಲೆತ್ತಿ ರಾವಣನನ್ನು ಭಯಪಡಿ ಸುತ್ತಾ ಅವನಿಗೆ ಹೇಳಿದನು :

ದೇವದಾನವಗನ್ಧರ್ವೈರ್ಯಕ್ಷೈಶ್ಚ ಸಹ ರಾಕ್ಷಸೈ: ।
ಅವಧ್ಯತ್ವಂ ತ್ವಯಾ ಪ್ರಾಪ್ತಂ ವಾನರೇಭ್ಯಸ್ತು ತೇ ಭಯಮ್ ॥೫೫॥

"ರಾವಣೇಶ್ವರ! ನೀನು ವರದಾನದ ಮೂಲಕವಾಗಿ ದೇವ-ದಾನವ-ಗಂಧರ್ವರಿಂದಲೂ ಯಕ್ಷ-ರಾಕ್ಷಸರಿಂದಲೂ ಸಾವಿಲ್ಲದಿರುವುದನ್ನು ಪಡೆದಿರುವೆ. ಆದರೆ ನಿನಗೆ ವಾನರರಿಂದ ಭಯವಿದ್ದೇ ಇದೆ.

ಏಷ ಮೇ ದಕ್ಷಿಣೋ ಬಾಹುಃ ಪಞ್ಚಶಾಖಃ ಸಮುದ್ಯತಃ ।
ವಿಧಮಿಷ್ಯತಿ ತೇ ದೇಹಾದ್ಭೂತಾತ್ಮಾನಂ ಚಿರೋಷಿತಮ್ ॥೫೬॥

ಇದು ನನ್ನ ಬಲದೋಳು. ಐದು ಶಾಖೆಗಳಿಂದ (ಬೆರಳುಗಳಿಂದ) ಕೂಡಿರುವ ಈ ನನ್ನ ಬಾಹುವು ಇದೀಗ ಎದ್ದುನಿಂತಿದೆ. ನಿನ್ನ ದೇಹದಲ್ಲಿ ಬಹಳ ಕಾಲದಿಂದ ವಾಸಮಾಡಿಕೊಂಡಿರುವ ಜೀವಾತ್ಮನನ್ನು ಈ ನನ್ನ ಬಾಹುವು ಪ್ರತ್ಯೇಕಿಸುತ್ತದೆ."

ಹನುಮಂತನ ಆ ಮಾತನ್ನು ಕೇಳಿ ಭಯಂಕರಪರಾಕ್ರಮಿಯಾದ ಕೆಂಗಣ್ಣಿನಾದ ರಾವಣನು ಕ್ರೋಧಪೂರ್ವಕವಾಗಿ ಹೇಳಿದನು :

ಕ್ಷಿಪ್ರಂ ಪ್ರಹರ ನಿಃಶಙ್ಕಂ ಸ್ಥಿರಾಂ ಕೀರ್ತಿಮವಾಪ್ನುಹಿ ।
ತತಸ್ತ್ವಾಂ ಜ್ಞಾತವಿಕ್ರಾನ್ತಂ ನಾಶಯಿಷ್ಯಾಮಿ ವಾನರ ॥೫೮॥

"ವಾನರನೇ! ಯಾವ ವಿಧವಾದ ಅಳುಕೂ ಇಲ್ಲದೇ ಬೇಗನೆ ನನ್ನನ್ನು ಪ್ರಹರಿಸು. ಒಂದು ವೇಳೆ ನೀನು ಹೇಳಿದಂತೆ ನನ್ನ ಜೀವಾತ್ಮನನ್ನು ದೇಹದಿಂದ ಪ್ರತ್ಯೇಕಿಸಿಬಿಟ್ಟರೆ–ಶಾಶ್ವತವಾದ ಕೀರ್ತಿಯನ್ನೇ ಪಡೆಯುವೆ. ನಿನ್ನಲ್ಲಿ ಎಷ್ಟು ಪರಾಕ್ರಮವಿರುವುದೆಂದು ತಿಳಿದನಂತರವೇ ನಾನು ನಿನ್ನನ್ನು ವಿನಾಶ ಗೊಳಿಸುವೆನು."

ರಾವಣನ ಮಾತನ್ನು ಕೇಳಿ ಮಾರುತಿಯು ಹೇಳಿದನು :

ಪ್ರಹೃತಂ ಹಿ ಮಯಾ ಪೂರ್ವಮಕ್ಷಂ ಸ್ಮರ ಸುತಂ ತವ ॥೫೯॥

"ನನ್ನ ಪರಾಕ್ರಮವನ್ನು ಈಗ ಪರೀಕ್ಷಿಸುವುದೇನಿದೆ? ರಾವಣೇಶ್ವರ! ಈ ಹಿಂದೆಯೇ ನಾನು ನಿನ್ನ ಮಗನಾದ ಅಕ್ಷನನ್ನು ಸಂಹರಿಸಿದ್ದೇನೆ. ಅದನ್ನೇ ಸ್ಮರಿಸಿಕೊ."

ಮಾರುತಿಯು ಹೀಗೆ ಹೇಳಲು ರಾಕ್ಷಸೇಶ್ವರನಾದ ವೀರನಾದ ರಾವಣನು ಅಂಗೈಯಿಂದ ವಾಯುಪುತ್ರನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ರಾವಣನಿಂದ ಪ್ರಹೃತನಾದ ಮಾರುತಿಯು ಸ್ವಲ್ಪ ಹೊತ್ತು ತತ್ತರಿಸಿದನು. ಮುಹೂರ್ತಕಾಲದನಂತರ ತೇಜಸ್ವಿಯಾದ ಮಹಾಮತಿಯಾದ ಹನುಮಂತನು ಸ್ಥಿರನಾಗಿ ನಿಂತು ಅಂಗೈಯಿಂದಲೇ ದೇವಶತ್ರುವಾದ ರಾವಣ ನನ್ನು ಕೋಪಾವೇಶದಿಂದ ಪ್ರಹರಿಸಿದನು. ಮಹಾತ್ಮನಾದ ಮಾರುತಿಯಿಂದ ಪ್ರಹರಿಸಲ್ಪಟ್ಟ ರಾವಣನು ಭೂಕಂಪವಾದಾಗ ಪರ್ವತವು ನಡುಗುವಂತೆ ತತ್ತರಿಸಿದನು. ರಣಭೂಮಿಯಲ್ಲಿ ಮಾರುತಿಯ ಅಂಗೈಯಿಂದ ಪೆಟ್ಟುತಿಂದ ರಾವಣನನ್ನು ನೋಡಿ ಅಸುರರೊಡನೆ ಋಷಿಗಳೂ, ವಾನರರೂ, ಸಿದ್ಧರೂ, ದೇವತೆಗಳೂ ಹರ್ಷಧ್ವನಿಗಳನ್ನು ಮಾಡಿದರು. ಮಹಾತೇಜಸ್ವಿಯಾದ ರಾವಣನು ಸುಧಾರಿಸಿಕೊಂಡು ಹನುಮಂತನಿಗೆ ಹೇಳಿದನು :

ಸಾಧು ವಾನರ ವೀರ್ಯೇಣ ಶ್ಲಾಘನೀಯೋಽಸಿ ಮೇ ರಿಪುಃ ॥೬೪॥

"ಭಲೇ ವಾನರ! ಪರಾಕ್ರಮದ ದೃಷ್ಟಿಯಿಂದ ನೀನು ನನಗೆ ಪ್ರಶಂಸ ನೀಯನಾದ ಶತ್ರುವಾಗಿರುವೆ."

ರಾವಣನು ಹೀಗೆ ಹೇಳಲು ಮಾರುತಿಯು ಹೇಳಿದನು :

ಧಿಗಸ್ತು ಮಮ ವೀರ್ಯೇಣ ಯಸ್ತ್ವಂ ಜೀವಸಿ ರಾವಣ ॥೬೫॥

“ರಾವಣ! ನನ್ನ ಪರಾಕ್ರಮಕ್ಕೆ ಧಿಕ್ಕಾರವಿರಲಿ. ನಾನು ಪ್ರಹರಿಸಿದ ನಂತರವೂ ನೀನಿನ್ನೂ ಜೀವಿಸಿಯೇ ಇರುವೆಯಲ್ಲವೇ?

ಸಕೃತ್ತು ಪ್ರಹರೇದಾನೀಂ ದುರ್ಬುದ್ಧೇ ಕಿಂ ವಿಕತ್ಥಸೇ ।
ತತಸ್ತ್ವಾಂ ಮಾಮಿಕಾ ಮುಷ್ಟಿರ್ನಯಿಷ್ಯತಿ ಯಮಕ್ಷಯಮ್ ॥೬೬॥

ದುರ್ಬುದ್ಧಿಯವನೇ! ಸುಮ್ಮನೆ ಏಕೆ ಹರಟುತ್ತಿರುವೆ? ನನ್ನನ್ನು ಮತ್ತೊಂದು ಬಾರಿ ಪ್ರಹರಿಸು. ಅನಂತರ ನನ್ನ ಮುಷ್ಟಿಯು ನಿನ್ನನ್ನು ಯಮಲೋಕಕ್ಕೆ ಕಳುಹಿಸಿಬಿಡುತ್ತದೆ.”

ಮಾರುತಿಯ ಆ ಮಾತಿನಿಂದ ರಾವಣನ ಕೋಪವು ಪ್ರಜ್ವಲಿಸಿತು. ಕೆಂಗಣ್ಣನಾಗಿದ್ದ ಅವನು ಬಲಗೈಯಿನ ಬೆರಳುಗಳಿಂದ ಮುಷ್ಟಿಯನ್ನು ಬಿಗಿದು ಪ್ರಯತ್ನಪೂರ್ವಕವಾಗಿ ವೇಗದಿಂದ ಹನುಮಂತನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ವಕ್ಷಃಸ್ಥಳದಲ್ಲಿ ಬಿದ್ದ ಮುಷ್ಟಿಯ ಆ ಪ್ರಹಾರದಿಂದಾಗಿ ಹನುಮಂತನು ಪುನಃ ಪುನಃ ತತ್ತರಿಸುತ್ತಿದ್ದನು. ಮಹಾಬಲನಾದ ಹನುಮಂತನು ಕಳವಳಪಡುತ್ತಿರುವುದನ್ನು ಕಂಡು ಅತಿರಥನಾದ ರಾವಣನು ರಥದ ಮೂಲಕವಾಗಿ ನೀಲನ ಬಳಿಗೆ ತೆರಳಿದನು.

ರಾಕ್ಷಸಾಧಿಪತಿಯಾದ ಪ್ರತಾಪವಂತನಾದ ದಶಕಂಠನು–ಶತ್ರುಗಳ ಮರ್ಮಸ್ಥಳಗಳನ್ನು ಭೇದಿಸಲು ಸಮರ್ಥವಾಗಿದ್ದ, ಸರ್ಪಸದೃಶವಾದ, ಭಯಂಕರವಾದ ಬಾಣಗಳಿಂದ ವಾನರಸೇನಾಪತಿಯಾದ ನೀಲನನ್ನು ಸಂತಾಪಗೊಳಿಸಲು ಪ್ರಾರಂಭಿಸಿದನು. ರಾವಣನ ಬಾಣಗಳ ಸಮೂಹದಿಂದ ಪೀಡಿತನಾದ ವಾನರಸೇನಾಪತಿಯಾದ ನೀಲನು ಒಂದೇ ಕೈಯಿಂದ ಪರ್ವತ ಶಿಖರವೊಂದನ್ನೆತ್ತಿ ರಾವಣನ ಕಡೆಗೆ ರಭಸದಿಂದೆಸೆದನು.

ಆ ವೇಳೆಗೆ ಸುಧಾರಿಸಿಕೊಂಡಿದ್ದ, ಮಹಾತ್ಮನಾದ, ತೇಜಸ್ವಿಯಾದ, ರಾವಣನೊಡನೆ ಯುದ್ಧಮಾಡುವ ಆಕಾಂಕ್ಷೆಯಿಂದ ಕೂಡಿದ್ದ ಮಾರುತಿಯು ರಾಕ್ಷಸರಾಜನ ಕಡೆಗೆ ನೋಡುತ್ತಾ ನೀಲನೊಡನೆ ಯುದ್ಧದಲ್ಲಿ ತೊಡಗಿದ್ದ ರಾವಣನಿಗೆ ರೋಷದಿಂದ ಹೇಳಿದನು :

ಅನ್ಯೇನ ಯುದ್ಧ್ಯಮಾನಸ್ಯ ನ ಯುಕ್ತಮಭಿಧಾವನಮ್ ॥೭೪॥

"ನಿಶಾಚರನೇ! ನೀನು ಈಗ ಬೇರೆಯವರೊಡನೆ ಯುದ್ಧಮಾಡುತ್ತಿರುವೆ. ಆದುದರಿಂದ ಈ ಸಮಯದಲ್ಲಿ ನಿನ್ನ ಮೇಲೆ ಆಕ್ರಮಣಮಾಡುವುದು ಉಚಿತವೆನಿಸುವುದಿಲ್ಲ."

ಇತ್ತಲಾಗಿ ನೀಲನು ಪ್ರಹರಿಸಿದ ಪರ್ವತಶಿಖರವು ತನ್ನ ಮೇಲೆ ಬೀಳಲಿದ್ದಾಗ ರಾವಣನು ಆ ಪರ್ವತಶಿಖರವನ್ನು ಸುತೀಕ್ಷ್ಣವಾದ ಅಗ್ರಭಾಗಗಳಿದ್ದ ಏಳು ಬಾಣಗಳಿಂದ ಪ್ರಹರಿಸಿದನು. ಒಡನೆಯೇ ಆ ಶಿಖರವು ನುಚ್ಚುನೂರಾಗಿ ಚದುರಿ ಭೂಮಿಯ ಮೇಲೆ ಬಿದ್ದಿತು. ತಾನೆಸೆದ ಪರ್ವತಶಿಖರವು ರಾವಣನ ಬಾಣಗಳಿಂದ ನುಚ್ಚುನೂರಾದುದನ್ನು ಕಂಡು ನೀಲನು ಪ್ರಳಯ ಕಾಲದ ಅಗ್ನಿಯಂತೆ ಕೋಪದಿಂದ ಉರಿದುಹೋದನು. ಅನಂತರ ನೀಲನು ಅಶ್ವಕರ್ಣ, ಸಾಲ, ಸುಪುಷ್ಪಿತವಾದ ಮಾವು–ಇವೇ ಮುಂತಾದ ಅನೇಕ ವೃಕ್ಷಗಳನ್ನು ಕಿತ್ತು ಸತತವಾಗಿ ರಾವಣನ ಮೇಲೆಸೆಯುತ್ತಿದ್ದನು. ರಾವಣನು ಆ ಎಲ್ಲ ವೃಕ್ಷಗಳನ್ನೂ ಅವು ತನ್ನ ಬಳಿಗೆ ಬರುವ ಮುನ್ನವೇ ಕತ್ತರಿಸಿಹಾಕುತ್ತಿದ್ದನು. ಅದಕ್ಕೆ ಪ್ರತಿಯಾಗಿ ತಾನೂ ಕೂಡ ಭಯಂಕರವಾದ ಶರವರ್ಷವನ್ನು ಆಗ್ನಿಪುತ್ರನ ಮೇಲೆ ಸುರಿಸುತ್ತಿದ್ದನು. ಮೇಘವು ಮಹಾಪರ್ವತದ ಮೇಲೆ ಮಳೆಗರೆಯುವಂತೆ–ರಾವಣನು ನೀಲನ ಮೇಲೆ ಬಾಣಗಳ ಮಳೆಯನ್ನು ಸುರಿಸುತ್ತಿರಲಾಗಿ–ನೀಲನು ತನ್ನ ರೂಪವನ್ನು ಚಿಕ್ಕದು ಮಾಡಿಕೊಂಡು ರಾವಣನ ಧ್ವಜಾಗ್ರಕ್ಕೆ ಧುಮುಕಿದನು. ಅಲ್ಲಿ ಕುಳಿತ ಪಾವಕಿಯನ್ನು ನೋಡಿ ರಾವಣನು ಕೋಪದಿಂದ ಉರಿದುಹೋದನು. ನೀಲನು ಧ್ವಜಾಗ್ರದಲ್ಲಿ ಕುಳಿತು ಗಟ್ಟಿಯಾಗಿ ಗರ್ಜನೆಮಾಡುತ್ತಿದ್ದನು. ಸೂಕ್ಷ್ಮಾಕಾರವನ್ನು ತಾಳಿದ್ದ ನೀಲನು ಕೆಲವು ವೇಳೆ ಧ್ವಜಾಗ್ರದಲ್ಲಿಯೂ, ಕೆಲವು ವೇಳೆ ರಾವಣನ ಧನುಸ್ಸಿನ ಅಗ್ರಭಾಗದಲ್ಲಿಯೂ, ಮತ್ತೊಮ್ಮೆ ರಾವಣನ ಕಿರೀಟದ ಅಗ್ರಭಾಗದಲ್ಲಿಯೂ ಇರುತ್ತಿದ್ದುದನ್ನು ಕಂಡು ಶ್ರೀರಾಮ-ಲಕ್ಷ್ಮಣ-ಹನುಮಂತರು ಬಹುವಿಸ್ಮಿತರಾದರು. ಮಹಾತೇಜಸ್ವಿ ಯಾದ ರಾವಣನಿಗೂ ನೀಲನ ಲಾಘವವನ್ನು ಕಂಡು ವಿಸ್ಮಯವಾಯಿತು. ಬಳಿಕ ರಾವಣನು ಅದ್ಭುತವಾದ ತೇಜಸ್ಸಿನಿಂದ ಕೂಡಿದ್ದ ಆಗ್ನೇಯಾಸ್ತ್ರವನ್ನು ಹೊರತೆಗೆದನು.

ನೀಲನ ಲಾಘವತ್ವದಿಂದ ರಾವಣನು ಭ್ರಾಂತನಾಗಿರುವುದನ್ನು ಕಂಡು ವಾನರರು ಸಂತೋಷಪಡಲು ಒಂದು ವಿಷಯವು ಸಿಕ್ಕಿದ ಕಾರಣ ಪರಮ ಹೃಷ್ಟರಾಗಿ ಕಲ-ಕಲ ಧ್ವನಿಮಾಡಿದರು. ವಾನರರು ಕೂಗುತ್ತಿರುವುದನ್ನೂ ನಗುತ್ತಿರುವುದನ್ನೂ ಕಂಡು ರಾವಣನು ಕ್ರುದ್ಧನಾದನು. ಅವನ ಹೃದಯವು ಗಾಬರಿಗೊಂಡಿದ್ದಿತು. ಅವನಿಗೆ ತಾನು ಮುಂದೆ ಏನು ಮಾಡಬೇಕೆಂಬುದೇ ತೋಚಲಿಲ್ಲ. ಅನಂತರ ರಾವಣನು ಆಗ್ನೇಯಾಸ್ತ್ರದಿಂದ ಅಭಿಮಂತ್ರಿತವಾದ ಬಾಣವನ್ನು ಹಿಡಿದು ಧ್ವಜಾಗ್ರದಲ್ಲಿ ಕುಳಿತಿದ್ದ ನೀಲನನ್ನು ನೋಡಿ ಹೇಳಿದನು:

"ಕಪಿನಾಯಕನೇ! ನೀನು ಅತ್ಯುತ್ಕೃಷ್ಟವಾದ ಮಾಯೆಯನ್ನಾಶ್ರಯಿಸಿ ಸೂಕ್ಷ್ಮರೂಪವನ್ನು ತಾಳಿರುವೆ. ನೀನು ಸಮರ್ಥನಾಗಿದ್ದರೆ ಈ ಸಮಯದಲ್ಲಿ ನಿನ್ನ ಜೀವವನ್ನುಳಿಸಿಕೊ. ನೀನು ನಿನ್ನದೇ ಆದ ರೂಪಗಳನ್ನು ಮಾಯೆಯ ಆಶ್ರಯದಿಂದ ಅನೇಕಪ್ರಕಾರವಾಗಿ ಸೃಷ್ಟಿಸುತ್ತಿರುವೆ. ಆದರೂ ಕೂಡ ನಾನು ಬಿಡಲಿರುವ ದಿವ್ಯಾಸ್ತ್ರಪ್ರೇರಿತವಾದ ಬಾಣವು–ಜೀವವನ್ನುಳಿಸಿಕೊಳ್ಳಲು ನೀನು ಎಷ್ಟೇ ಪ್ರಯತ್ನಿಸಿದರೂ–ನಿನ್ನನ್ನು ಪ್ರಾಣದಿಂದ ಹೀನನನ್ನಾಗಿ ಮಾಡಿಬಿಡುತ್ತದೆ."

ಮಹಾಬಾಹುವಾದ ರಾವಣನು ಹೀಗೆ ಹೇಳಿ ಆಗ್ನೇಯಾಸ್ತ್ರದಿಂದ ಅಭಿಮಂತ್ರಿತವಾದ ಬಾಣವನ್ನು ಧನುಸ್ಸಿನಲ್ಲಿ ಸಂಧಾನಮಾಡಿ ಸೇನಾಪತಿಯಾದ ನೀಲನ ಮೇಲೆ ಪ್ರಯೋಗಿಸಿದನು. ಧನುಸ್ಸಿನಿಂದ ಹೊರಟ ಆ ಬಾಣವು ನೀಲನ ವಕ್ಷಃಸ್ಥಳದಲ್ಲಿ ಬಿದ್ದಿತು. ಅದರ ಪ್ರಭಾವದಿಂದ ನೀಲನು ದಹಿಸಲ್ಪಡುತ್ತಾ ನೆಲದ ಮೇಲೆ ಬಿದ್ದನು. ಮೊಣಕಾಲೂರಿಕೊಂಡು ಕೆಳಕ್ಕೆ ಬಿದ್ದ ನೀಲನು ತಂದೆಯಾದ ಅಗ್ನಿಯ ಮಹಿಮೆಯ ಸಂಬಂಧದಿಂದಲೂ ಮತ್ತು ತನ್ನ ತೇಜಸ್ಸಿನ ಪ್ರಭಾವದಿಂದಲೂ ಪ್ರಾಣಗಳಿಂದ ವಿಹೀನನಾಗಲಿಲ್ಲ. ರಣೋತ್ಸಾಹಿಯಾದ ರಾವಣನು ನೀಲನು ಜ್ಞಾನಶೂನ್ಯನಾಗಿರುವುದನ್ನು ನೋಡಿ ಮೇಘಧ್ವನಿಗೆ ಸಮಾನವಾದ ಧ್ವನಿಯಿಂದ ಕೂಡಿದ್ದ ರಥದಲ್ಲಿ ಕುಳಿತು ಲಕ್ಷ್ಮಣನನ್ನು ಆಕ್ರಮಿಸಿದನು. ರಣಭೂಮಿಯಲ್ಲಿ ಮುನ್ನುಗ್ಗಿಬರುತ್ತಿದ್ದ ವಾನರಸೈನ್ಯವನ್ನು ತಡೆದು ಲಕ್ಷ್ಮಣನ ಬಳಿಗೆ ಹೋಗಿ ಪ್ರಜ್ವಲಿಸುವ ಅಗ್ನಿಯಂತೆ ಅವನ ಮುಂದೆ ನಿಂತು ಧನುಸ್ಸನ್ನು ಟೇಂಕರಿಸಿದನು.

ಅಪ್ರಮೇಯವಾದ ಧನುಸ್ಸನ್ನು ಟೇಂಕರಿಸುತ್ತಿದ್ದ ರಾವಣನಿಗೆ ಮಹಾ ಸತ್ತ್ವವಂತನಾದ ಲಕ್ಷ್ಮಣನು ಹೇಳಿದನು :

"ರಾಕ್ಷಸರಾಜನೇ! ನಾನೀಗ ನಿನ್ನೊಡನೆ ಯುದ್ಧಕ್ಕೆ ಬರುತ್ತೇನೆ. ಆದುದರಿಂದ ನೀನೀಗ ವಾನರರೊಡನೆ ಯುದ್ಧಮಾಡುವುದು ಯೋಗ್ಯವಾಗಿ ಕಾಣುವುದಿಲ್ಲ."

ಗಂಭೀರಧ್ವನಿಯಿಂದ ಕೂಡಿದ್ದ, ಲಕ್ಷ್ಮಣನ ಮಾತನ್ನೂ ಉಗ್ರವಾದ ನಾಣೆನ ಶಬ್ದವನ್ನೂ ಕೇಳಿ ರಾವಣರಾಜನು ಯುದ್ಧಸನ್ನದ್ಧನಾಗಿ ನಿಂತಿದ್ದ ಲಕ್ಷ್ಮಣನಿಗೆ ಎದುರಾಗಿ ನಿಂತು ರೋಷಯುಕ್ತವಾದ ಈ ಮಾತನ್ನು ಹೇಳಿದನು:

"ರಾಘವನೇ! ಸೌಭಾಗ್ಯವಶದಿಂದ ನೀನು ನನ್ನ ಕಣ್ಣುಗಳಿಗೆ ಗೋಚರ ನಾಗಿರುವೆ. ವಿಪರೀತಬುದ್ಧಿಯವನಾದ ನಿನ್ನ ಅವಸಾನವು ಈಗಲೇ ಸನ್ನಿಹಿತ ವಾಗಿದೆ. ನನ್ನ ಬಾಣಗಳ ಸಮೂಹಗಳಿಂದ ವಿನಾಶಹೊಂದುವ ನೀನು ಈ ಕ್ಷಣದಲ್ಲಿಯೇ ಮೃತ್ಯುಲೋಕವನ್ನು ಸೇರುವೆ."

ಸುಮಿತ್ರೆಯ ಮಗನಾದ ಲಕ್ಷ್ಮಣನಿಗೆ ರಾವಣನ ಮಾತನ್ನು ಕೇಳಿ ವಿಸ್ಮಯವೇನೂ ಉಂಟಾಗಲಿಲ್ಲ. ಬಹಳವಾಗಿ ಗರ್ಜಿಸುತ್ತಿದ್ದ, ಮೇಲಕ್ಕುಕ್ಕಿಬ್ಬಿ ಬಂದ ನಿಶಿತವಾದ ಕೋರೆಹಲ್ಲುಗಳಿಂದ ಕೂಡಿದ್ದ ರಾವಣನಿಗೆ ಲಕ್ಷ್ಮಣನು ಹೇಳಿದನು.

"ಮಹಾರಾಜ! ಅತ್ಯಂತಪ್ರಭಾವಶಾಲಿಗಳಾಗಿರುವವರು ನಿನ್ನಂತೆ ಗರ್ಜಿಸಹೋಗುವುದಿಲ್ಲ. ಪಾಪಿಷ್ಠರಲ್ಲಿ ವರಿಷ್ಠನೇ! ನೀನು ವೃಥಾ ಆತ್ಮ ಶ್ಲಾಘನೆಯನ್ನು ಮಾಡಿಕೊಳ್ಳುತ್ತಿರುವೆ.

ಯಾರೂ ಇಲ್ಲದಿದ್ದ ಸಮಯದಲ್ಲಿ ಯಾವಾಗ ನೀನು ಸೀತೆಯನ್ನು ಅಪಹರಿಸಿಕೊಂಡು ಹೋದೆಯೋ-ಆಗಲೇ ನಾನು ನಿನ್ನ ವೀರ್ಯವನ್ನೂ, ಬಲ-ಪ್ರತಾಪ-ಪರಾಕ್ರಮಗಳನ್ನೂ ತಿಳಿದುಕೊಂಡೆನು. ಧನುರ್ಬಾಣಗಳನ್ನು ಹಿಡಿದು ಈಗ ನಾನು ನಿನ್ನ ಮುಂದೆಯೇ ನಿಂತಿರುವೆನು. ವ್ಯರ್ಥವಾಗಿ ಆತ್ಮ ಶ್ಲಾಘನೆಮಾಡಿಕೊಳ್ಳುವುದರಿಂದ ಪ್ರಯೋಜನವೇನಿದೆ? ಯುದ್ಧವನ್ನಾ ರಂಭಿಸು."

ಲಕ್ಷ್ಮಣನು ಹೀಗೆ ಹೇಳುತ್ತಲೇ ರಾವಣನು ಕುಪಿತನಾಗಿ ಸುಂದರವಾದ ರೆಕ್ಕೆಗಳಿಂದ ಕೂಡಿದ್ದ ಏಳು ಬಾಣಗಳನ್ನು ಲಕ್ಷ್ಮಣನ ಮೇಲೆ ಪ್ರಯೋ ಗಿಸಿದನು. ಸುವರ್ಣಮಯವಾದ ಮತ್ತು ಚಿತ್ರಿತವಾದ ರೆಕ್ಕೆಗಳನ್ನು ಹೊಂದಿದ್ದ ಆ ಬಾಣಗಳನ್ನು ಲಕ್ಷ್ಮಣನು ನಿಶಿತವಾದ ಮುಂಭಾಗಗಳಿಂದ ಕೂಡಿದ್ದ ಬಾಣಗಳಿಂದ ಕತ್ತರಿಸಿದನು. ರಾವಣನು ಬಾಣಗಳನ್ನು ಬಿಡುವುದು ; ಲಕ್ಷ್ಮಣನು ಅವುಗಳನ್ನು ಕತ್ತರಿಸುವುದು–ಇದು ಸತತವಾಗಿ ನಡೆಯುತ್ತಲೇ ಇದ್ದಿತು. ತಾನು ಪ್ರಯೋಗಿಸಿದ ಕ್ಷಣದಲ್ಲಿಯೇ ಲಕ್ಷ್ಮಣನ ಬಾಣಗಳಿಂದ ಕತ್ತರಿಸಲ್ಪಟ್ಟು–ತಲೆಗಳನ್ನು ಕತ್ತರಿಸಿದ ಸರ್ಪಗಳಂತೆ–ಕೆಳಕ್ಕೆ ಬೀಳುತ್ತಿದ್ದ ಬಾಣಗಳನ್ನು ನೋಡಿ ಲಂಕೇಶ್ವರನು ಕುಪಿತನಾಗಿ ಬೇರೆಯ ತೀಕ್ಷ್ಣತಮವಾದ ಬಾಣಗಳನ್ನು ಲಕ್ಷ್ಮಣನ ಮೇಲೆ ಪ್ರಯೋಗಿಸಿದನು.

ಆದರೆ ರಾಮಾನುಜನು ಸ್ವಲ್ಪವೂ ವಿಚಲಿತನಾಗದೇ ಧನುಸ್ಸಿನಿಂದ ತೀವ್ರತರವಾದ ಬಾಣಗಳ ಮಳೆಯನ್ನೇ ರಾವಣನ ಮೇಲೆ ಸುರಿಸಿದನು. ಕ್ಷುರ-ಅರ್ಧಚಂದ್ರ-ಉತ್ತಮಕರ್ಣಿ, ಭಲ್ಲ–ಇವೇ ಮುಂತಾದ ನಾನಾಬಗೆಯ ಬಾಣಗಳಿಂದ ರಾವಣನು ಬಿಡುತ್ತಿದ್ದ ಎಲ್ಲ ಬಾಣಗಳನ್ನೂ ಕತ್ತರಿಸುತ್ತಿದ್ದನು.

ತನ್ನೆಲ್ಲ ಬಾಣಗಳೂ ನಿಷ್ಫಲವಾಗುತ್ತಿರುವುದನ್ನೂ ಲಕ್ಷ್ಮಣನ ಕೈಚಳಕ ವನ್ನೂ ಕಂಡು ದೇವಶತ್ರುವಾದ ರಾವಣನು ಅಚ್ಚರಿಗೊಂಡನು. ಪುನಃ ಅತ್ಯಂತನಿಶಿತವಾದ ಬಾಣಗಳನ್ನು ಲಕ್ಷ್ಮಣನ ಮೇಲೆ ಪ್ರಯೋಗಿಸ ತೊಡಗಿದನು. ಇಂದ್ರಸಮಾನಪರಾಕ್ರಮಿಯಾದ ಲಕ್ಷ್ಮಣನು ಕೂಡ ರಾವಣನನ್ನು ವಧಿಸುವ ಸಲುವಾಗಿ ವಜ್ರಾಯುಧದ ವೇಗಕ್ಕೆ ಸಮಾನವಾದ ವೇಗವುಳ್ಳ, ನಿಶಿತವಾದ ಅಲುಗುಗಳಿಂದ ಕೂಡಿದ್ದ, ಯಜ್ಞೇಶ್ವರನಂತೆ ಪ್ರಕಾಶಮಾನವಾಗಿದ್ದ ಬಾಣಗಳನ್ನು ಧನುಸ್ಸಿನಲ್ಲಿ ಅನುಸಂಧಾನಮಾಡಿ ರಾವಣನ ಮೇಲೆ ಪ್ರಯೋಗಿಸಿದನು. ರಾಕ್ಷಸೇಂದ್ರನಾದ ರಾವಣನು ಲಕ್ಷ್ಮಣನು ಪ್ರಯೋಗಿಸಿದ ಆ ಎಲ್ಲ ಬಾಣಗಳನ್ನೂ ಕತ್ತರಿಸಿ ಪ್ರಳಯಕಾಲದ ಅಗ್ನಿಯಂತೆ ಪ್ರಭೆಯಿಂದ ಕೂಡಿದ್ದ, ಬ್ರಹ್ಮನಿಂದ ವರವಾಗಿ ಕೊಡಲ್ಪಟ್ಟಿದ್ದ ಬಾಣದಿಂದ ಲಕ್ಷ್ಮಣನ ಹಣೆಯಲ್ಲಿ ಪ್ರಹರಿಸಿದನು. ರಾವಣನ ಆ ಅಮೋಘ ವಾದ ಬಾಣದಿಂದ ಪೀಡಿತನಾದ ಲಕ್ಷ್ಮಣನು ತತ್ತರಿಸಿದನು. ಧನುಸ್ಸನ್ನು ಹಿಡಿ ದಿದ್ದ ಅವನ ಮುಷ್ಟಿಯು ಸಡಿಲವಾಯಿತು. ಸ್ವಲ್ಪಹೊತ್ತಿನಲ್ಲಿಯೇ ಲಕ್ಷ್ಮಣನು

ಬಹಳ ಕಷ್ಟದಿಂದ ಮತ್ತೆ ಪ್ರಜ್ಞೆಯನ್ನು ಪಡೆದುಕೊಂಡು ಇಂದ್ರಶತ್ರುವಾದ ರಾವಣನ ಧನುಸ್ಸನ್ನು ಕತ್ತರಿಸಿದನಲ್ಲದೇ ಧನುಸ್ಸನ್ನು ಕಳೆದುಕೊಂಡ ರಾವಣ ನನ್ನೂ ಪುನಃ ತೀಕ್ಷ್ಣವಾದ ಅಗ್ರಭಾಗಗಳಿಂದ ಕೂಡಿದ್ದ ಮೂರು ಬಾಣಗಳಿಂದ ಪ್ರಹರಿಸಿದನು. ಅದರಿಂದ ಪೀಡಿತನಾದ ರಾವಣನು ತತ್ತರಿಸುತ್ತಾ ಪ್ರಜ್ಞೆಯನ್ನು ಕಳೆದುಕೊಂಡನು. ಸ್ವಲ್ಪಹೊತ್ತು ಕಳೆದನಂತರ ಬಹಳ ಕಷ್ಟದಿಂದ ಪುನಃ ಪ್ರಜ್ಞೆಯನ್ನು ಪಡೆದುಕೊಂಡನು. ಧನುಸ್ಸನ್ನು ಕಳೆದುಕೊಂಡು ಬಾಣಗಳಿಂದಲೂ ಪೀಡಿತನಾಗಿದ್ದ ರಾವಣನ ಶರೀರವು ರಕ್ತದಿಂದಲೂ, ಮೇದಸ್ಸಿನಿಂದಲೂ ನೆನೆದುಹೋಗಿದ್ದಿತು. ಭಯಂಕರಶಕ್ತಿಶಾಲಿಯಾದ ದೇವದ್ರೋಹಿಯಾದ ರಾವಣನು ಬ್ರಹ್ಮನಿಂದ ಕೊಡಲ್ಪಟ್ಟಿದ್ದ ಶಕ್ತ್ಯಾಯುಧವನ್ನು ಕೈಗೆತ್ತಿಕೊಂಡನು. ಆ ಶಕ್ತ್ಯಾಯುಧವು ಹೊಗೆಯಿಂದ ಕೂಡಿದ ಅಗ್ನಿಯಂತಿದ್ದಿತು. ಯುದ್ಧದಲ್ಲಿ ವಾನರಸೈನಿಕರಿಗೆ ಭಯವನ್ನುಂಟು ಮಾಡುವುದಾಗಿದ್ದಿತು. ರಾಕ್ಷಸರಾಷ್ಟ್ರಕ್ಕೆ ಸ್ವಾಮಿಯಾದ ರಾವಣನು ಪ್ರಜ್ವಲಿ ಸುತ್ತಿದ್ದ ಅಂತಹ ಶಕ್ತ್ಯಾಯುಧವನ್ನು ಬಹಳ ವೇಗವಾಗಿ ಸೌಮಿತ್ರಿಯ ಮೇಲೆಸೆದನು. ತನ್ನ ಕಡೆಗೆ ರಭಸದಿಂದ ಬರುತ್ತಿದ್ದ ಶಕ್ತ್ಯಾಯುಧವನ್ನು ಭರತಾನುಜನಾದ ಲಕ್ಷ್ಮಣನು ಅಗ್ನಿಸದೃಶವಾದ ಬಾಣಗಳಿಂದ ಪ್ರಹರಿಸಿದನು. ಆದರೂ ಆ ಮಹಾಶಕ್ತ್ಯಾಯುಧವು ಲಕ್ಷ್ಮಣನ ವಿಶಾಲವಾದ ವಕ್ಷಃಸ್ಥಳವನ್ನು ಹೊಕ್ಕಿತು. ರಘುಪ್ರವೀರನಾದ ಲಕ್ಷ್ಮಣನು ಅತ್ಯಂತ ಶಕ್ತಿಶಾಲಿಯೇ ಆಗಿದ್ದರೂ ಶಕ್ತ್ಯಾಯುಧದ ಪ್ರಹಾರದಿಂದ ಭೂಮಿಯಲ್ಲಿ ಬಿದ್ದು ಜ್ವಲಿಸತೊಡಗಿದನು. ಶಕ್ತ್ಯಾಯುಧಪೀಡಿತನಾಗಿ ಸಂಕಟಪಡುತ್ತಿದ್ದ ಲಕ್ಷ್ಮಣನ ಬಳಿಗೆ ರಾವಣರಾಜನು ಬಹಳ ಬೇಗ ಬಂದು ಎರಡು ಭುಜಗಳಿಂದಲೂ ಅವನನ್ನು ಮೇಲೆತ್ತಲು ಪ್ರಯತ್ನಿಸಿದನು.

ಹಿಮವಾನ್ಮನ್ದರೋ ಮೇರುಸ್ತ್ರೈಲೋಕ್ಯಂ ವಾ ಸಹಾಮರೈಃ ।
ಶಕ್ಯಂ ಭುಜಾಭ್ಯಾಮುದ್ಧರ್ತುಂ ನ ಸಂಖ್ಯೇ ಭರತಾನುಜಃ ॥೧೧೧॥

ರಾವಣನಿಗೆ ಹಿಮವಂತ-ಮಂದರ-ಮೇರುಪರ್ವತಗಳನ್ನೂ–ದೇವತೆ ಗಳೊಡನೆ ಮೂರು ಲೋಕಗಳನ್ನೂ ಭುಜಗಳಿಂದ ಎತ್ತಲು ಸಾಧ್ಯವಾಗಿ ದ್ದಿತು. ಆದರೆ ಅಂತಹ ರಾವಣನಿಗೂ ಭರತಾನುಜನಾದ ಲಕ್ಷ್ಮಣನನ್ನು ಯುದ್ಧದಲ್ಲಿ ಮೇಲಕ್ಕೆತ್ತಿ ನಿಲ್ಲಿಸಲು ಸಾಧ್ಯವಾಗಲಿಲ್ಲ.

ಶಕ್ತ್ಯಾ ಬ್ರಾಹ್ಮ್ಯಾಪಿ ಸೌಮಿತ್ರಿಸ್ತಾಡಿತಸ್ತು ಸ್ತನಾನ್ತರೇ ।
ವಿಷ್ಣೋರಚಿನ್ತ್ಯಂ ಸ್ವಂ ಭಾಗಮಾತ್ಮಾನಂ ಪ್ರತ್ಯನುಸ್ಮರತ್ ॥೧೧೨॥

ಬ್ರಹ್ಮನು ದಯಪಾಲಿಸಿದ ಶಕ್ತ್ಯಾಯುಧದಿಂದ ತನ್ನ ವಕ್ಷಃಸ್ಥಳವು ಪ್ರಹರಿಸಲ್ಪಟ್ಟಾಗಲೂ ಸೌಮಿತ್ರಿಯು ತನ್ನ ಸ್ವರೂಪಸ್ಮೃತಿಯನ್ನು ಕಳೆದು ಕೊಳ್ಳದೇ ತಾನು ಚಿಂತಿಸಲು ಅಸಾಧ್ಯನಾದ ವಿಷ್ಣುವಿನ ಅಂಶವೇ ಆಗಿರುವುದನ್ನು ನೆನಪಿಗೆ ತಂದುಕೊಂಡನು.*

ದೇವಕಂಟಕನಾದ ರಾವಣನು ದಾನವರ ದರ್ಪವನ್ನು ಮುರಿಯುವ ಲಕ್ಷ್ಮಣನನ್ನು ಎಷ್ಟೇ ಪೀಡಿಸಿದರೂ ತೋಳುಗಳಿಂದ ಅವನನ್ನು ಅಲ್ಲಾಡಿಸಲು ಕೂಡ ಅವನಿಗೆ ಸಾಧ್ಯವಾಗಲಿಲ್ಲ.

ಅದನ್ನು ನೋಡಿ ಪರಮಕ್ರುದ್ಧನಾದ ಹನುಮಂತನು ರಾವಣನ ಬಳಿಗೆ ಧಾವಿಸಿ ವಜ್ರಸದೃಶವಾದ ಮುಷ್ಟಿಯಿಂದ ಅವನನ್ನು ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಆ ಮುಷ್ಟಿಪ್ರಹಾರದಿಂದ ರಾಕ್ಷಸೇಶ್ವರನಾದ ರಾವಣನು ತತ್ತರಿಸುತ್ತಾ ಮೊಳಕಾಲೂರಿ ಭೂಮಿಯಲ್ಲಿ ಬಿದ್ದನು. ಅವನ ಮುಖಗಳಿಂದಲೂ, ಕಣ್ಣುಗಳಿಂದಲೂ, ಕಿವಿಗಳಿಂದಲೂ ರಕ್ತವು ಹರಿಯತೊಡಗಿತು. ತೂರಾಡುತ್ತಾ ಹೋಗಿ ರಥವನ್ನು ಹತ್ತಿ ನಿಶ್ಚೇಷ್ಟನಾಗಿ ಕುಳಿತನು. ಆ ಸಮಯದಲ್ಲಿ ರಾವಣನು ಸಂಜ್ಞಾಹೀನನೂ ಮೂರ್ಛಿತನೂ ಆಗಿದ್ದನು. ಆದರೂ ಅವನು ಒಂದು ಸ್ಥಳದಲ್ಲಿರಲಾಗದೇ ಚಡಪಡಿಸುತ್ತಾ ಹೊರಳಾಡು

---

* ಈ ಶ್ಲೋಕಕ್ಕೆ ವ್ಯಾಖ್ಯಾನಕಾರರು ವಿಧವಿಧವಾದ ಅರ್ಥಮಾಡಿರುತ್ತಾರೆ. ಇದಕ್ಕೆ ಪಾಠಾಂತರವೂ ಇದೆ. ೧) ವಿಷ್ಣೋರಮೀಮಾಂಸ್ಯಭಾಗಂ ಆತ್ಮಾನಂ ಪ್ರತ್ಯನುಸ್ಮರತ್- ಸೌಮಿತ್ರಿಃ ವಿಷ್ಣೋಃ ಅಮೀಮಾಂಸ್ಯಂ ನಿಃಸಂಶಯವಿಷ್ಣುಭಾಗತ್ವವನ್ತಮಿಯತ್ತಯಾ ಚಿನ್ತಯಿತುಂ ಅಶಕ್ಯಂ ವಾ ವಿಷ್ಣೋಃ ಭಾಗಂ ಆತ್ಮಾನಂ ಪ್ರತ್ಯನುಸ್ಮರತ್ ನಿಃಸಂಶಯವಾಗಿ ತನ್ನನ್ನು ವಿಷ್ಣುವಿನ ಭಾಗವುಳ್ಳವನೆಂತಲೂ ಚಿಂತಿಸಲು ಅಶಕ್ಯನಾದವನೆಂತಲೂ ಸ್ಮರಿಸಿಕೊಂಡನು. ೨) ವಿಷ್ಣೋರಪಿ ಅಮೀಮಾಂಸ್ಯಃ ಇಯತ್ತಯಾ ಚಿನ್ತಯಿತುಂ ಅಶಕ್ಯಃ ಭಾಗಃ ಐಶ್ವರ್ಯಂ ಯಸ್ಯ ತಂ ಆತ್ಮಾನಂ ಸರ್ವನಿಯನ್ತಾರಂ ರಾಮಂ ಪ್ರತ್ಯನುಸ್ಮರತ್-ವಿಷ್ಣುವಿಗೂ ಕೂಡ ಚಿಂತಿಸಲು ಅಶಕ್ಯವಾದ ಐಶ್ವರ್ಯವುಳ್ಳ ಸರ್ವನಿಯಂತೃವಾದ ಶ್ರೀರಾಮನನ್ನು ಧ್ಯಾನಿಸಿದನು ೩) ವಿಷ್ಣೋರ್ಭಾಗಂ ಅಂಶಭೂತಂ ಅಚಿನ್ತ್ಯಂ ಈದೃಕ್ತಯಾ ಇಯತ್ತಯಾ ಚ ಚಿನ್ತಯಿತುಮಶಕ್ಯಂ ಸ್ವಾತ್ಮಾನಂ

ತ್ತಿದ್ದನು. ಯುದ್ಧದಲ್ಲಿ ಭಯಂಕರವೀರ್ಯನಾದ ರಾವಣನು ಸಂಜ್ಞಾಹೀನ ನಾಗಿ ಬಿದ್ದಿರುವುದನ್ನು ಕಂಡು ಋಷಿ-ವಾನರ-ದೇವತೆಗಳೂ ಅಸುರರೂ ಹರ್ಷಧ್ವನಿಗಳನ್ನು ಮಾಡಿದರು. ಅನಂತರ ತೇಜಸ್ವಿಯಾದ ಹನುಮಂತನು ರಾವಣನಿಂದ ಪೀಡಿತನಾದ ಲಕ್ಷ್ಮಣನನ್ನು ತೋಳುಗಳಲ್ಲೆತ್ತಿಕೊಂಡು ಶ್ರೀರಾಮನ ಬಳಿಗೆ ಕರೆತಂದನು. ಹನುಮಂತನ ಸೌಹಾರ್ದದಿಂದಲೂ ಮತ್ತು ಲಕ್ಷ್ಮಣನ ಮೇಲಿದ್ದ ಭಕ್ತಿ-ಗೌರವಗಳಿಂದಲೂ ಶತ್ರುಗಳಿಂದ ಅಳ್ಳಾಡಿ ಸಲೂ ಸಾಧ್ಯವಾಗದಿದ್ದ ಲಕ್ಷ್ಮಣನು ಹನುಮಂತನಿಗೆ ಬಹಳ ಹಗುರವಾಗಿ ಪರಿಣಮಿಸಿದನು. ಯುದ್ಧದಲ್ಲಿ ಅಪರಾಜಿತನಾದ ಲಕ್ಷ್ಮಣನನ್ನು ಕೆಳಕ್ಕೆ ಬೀಳಿಸಿದ ಆ ಮಹಾಶಕ್ತ್ಯಾಯುಧವು ಅವನನ್ನು ಪರಿತ್ಯಜಿಸಿ ಸ್ವಸ್ಥಾನವಾದ ರಾವಣನ ರಥಕ್ಕೆ ಹಿಂದಿರುಗಿತು. ಮಹಾತೇಜಸ್ವಿಯಾದ ರಾವಣನು ಕೂಡ ಪುನಃ ಪ್ರಜ್ಞೆಯನ್ನು ಪಡೆದು ಧನುಸ್ಸನ್ನು ಹಿಡಿದು ತೀಕ್ಷ್ಣವಾದ ಬಾಣ ಗಳನ್ನು ಬತ್ತಳಿಕೆಯಿಂದ ಹೊರತೆಗೆದನು. ಶಕ್ತ್ಯಾಯುಧದಿಂದ ಬಿಡುಗಡೆ

ಸ್ವಸ್ವರೂಪಂ ಪ್ರತ್ಯನುಸ್ಮರನ್ ಸ್ಮೃತವಾನ್–ವಿಷ್ಣುವಿನ ಅಂಶಭೂತವಾದ ಪರಿಮಾಣದಿಂದ ಚಿಂತಿಸಲು ಅಶಕ್ಯವಾದ ಸ್ವಸ್ವರೂಪವನ್ನು ಸ್ಮರಿಸಿದನು. ಅಂತಹ ಸ್ವಸ್ವರೂಪವನ್ನು ಸ್ಮರಿಸಿದ್ದರಿಂದಲೇ ರಾವಣನು ಎತ್ತಲಾಗದಷ್ಟು ಗುರುತ್ವವುಂಟಾಯಿತು–ಎಂದೂ ಇವರು ವ್ಯಾಖ್ಯಾನಿಸಿದ್ದಾರೆ. ಪದಗಳಿಗೆ ಸುಲಭವಾಗಿ ಅರ್ಥಮಾಡಬಹುದಾದರೂ ಸಮನ್ವಯಿಸಿ ಅರ್ಥಮಾಡುವುದು ಕಷ್ಟ. ಪಾಠಾಂತರದಲ್ಲಿಯೂ ಅಮೀಮಾಂಸ್ಯಭಾಗಂ ಎನ್ನುವುದಕ್ಕೆ ಅರ್ಥಹೇಳುವುದು ಕಷ್ಟ. ಮೀಮಾಂಸ ಎಂದರೆ ವಿಚಾರ. ಅಮೀಮಾಂಸ್ಯ ಎಂದರೆ ಅವಿಚಾರಣೀಯಭಾಗ. ವಿಷ್ಣುವಿನ ಅವಿಚಾರಣೀಯ ಭಾಗವೆಂದು ತನ್ನನ್ನು ಸ್ಮರಿಸಿಕೊಂಡನು–ಎಂದು ಅರ್ಥಮಾಡಬಹುದಾಗಿದೆ. ತಾತ್ಪರ್ಯಾರ್ಥ–ವಿಷ್ಣುವನ್ನು ಸ್ಮರಿಸಿದನು ಅಥವಾ ತಾನೇ ವಿಷ್ಣುವೆಂದು ಭಾವಿಸಿಕೊಂಡನು ಎಂದಾಗುತ್ತದೆ. ಈ ಸಂದರ್ಭಕ್ಕೆ ಈ ಶ್ಲೋಕವು ಅಷ್ಟಾಗಿ ಹೊಂದಿಕೊಳ್ಳುವುದಿಲ್ಲ. ಆದರೆ ಈ ಶ್ಲೋಕವು ಎಲ್ಲ ಪಾಠಗಳಲ್ಲಿಯೂ ಇದೆ. ಈ ಶ್ಲೋಕವನ್ನು ವಿವರಿಸಿ ಹೇಳುವ ಒಂದು ಶ್ಲೋಕವು ಓರಿಯಂಟಲ್ ಇನ್‌ಸ್ಟಿಟ್ಯೂಟಿನವರು ಪ್ರಕಟಿಸಿರುವ ಪುಸ್ತಕದಲ್ಲಿದೆ. ಬೇರೆ ಯಾವ ಪಾಠಗಳಲ್ಲಿಯೂ ಈ ಶ್ಲೋಕವು ಕಂಡು ಬರುವುದಿಲ್ಲ. **ಅಥೈವಂ ವೈಷ್ಣವಂ ಭಾಗಂ ಮಾನುಷಂ ದೇಹಮಾಸ್ಥಿತಮ್ । ವಿಸಂಜ್ಞಂ ಲಕ್ಷ್ಮಣಂ ದೃಷ್ಟ್ವಾ, ರಾವಣೋ ವಿಸ್ಮಿತೋಽಭವತ್ ॥** ಹೀಗೆ ವಿಷ್ಣುವಿನ ಅಂಶವನ್ನು ಹೊಂದಿದ್ದ ಮಾನುಷದೇಹದಲ್ಲಿದ್ದ ಲಕ್ಷ್ಮಣನು ಸಂಜ್ಞಾಹೀನನಾಗಿ ಬಿದ್ದಿರುವುದನ್ನು ನೋಡಿ ರಾವಣನು ವಿಸ್ಮಿತನಾದನು–ಇದು ಕಥೆಗೆ ಸರಿಯಾಗಿ ಹೊಂದಿಕೊಳ್ಳುವುದಿಲ್ಲ.

ಯನ್ನು ಹೊಂದಿ ಸ್ವಸ್ಥನಾಗಿದ್ದ ಶತ್ರುಸೂದನನಾದ ಲಕ್ಷ್ಮಣನೂ ತಾನು ವಿಷ್ಣುವಿನ ಅಚಿಂತನೀಯವಾದ ಭಾಗವೆಂಬುದನ್ನು ಸ್ಮರಿಸಿದನು.*

ವಾನರರ ಮಹಾಸೈನ್ಯದಲ್ಲಿ ರಾವಣನಿಂದ ದೊಡ್ಡ-ದೊಡ್ಡ ವಾನರರ ನಾಯಕರು ಹತರಾಗುತ್ತಿರುವುದನ್ನೂ ವಾನರರು ಓಡಿಹೋಗುತ್ತಿರು ವುದನ್ನೂ ಕಂಡು ಶ್ರೀರಾಮನು ರಾವಣನನ್ನು ಆಕ್ರಮಿಸಲು ಮುಂದೆ ಧಾವಿಸಿ ದನು. ಆ ವೇಳೆಗೆ ಹನುಮಂತನೂ ಶ್ರೀರಾಮನ ಬಳಿಗೆ ಹೋಗಿ ಹೇಳಿದನು:

ಮಮ ಪೃಷ್ಠಂ ಸಮಾರುಹ್ಯ ರಾಕ್ಷಸಂ ಶಾಸ್ತುಮರ್ಹಸಿ ।
ವಿಷ್ಣುರ್ಯಥಾ ಗರುತ್ಮನ್ತಂ ಬಲವನ್ತಂ ಸಮಾಹಿತಃ ॥೧೨೪॥

"ಪ್ರಭುವೇ! ಭಗವಂತನಾದ ಮಹಾವಿಷ್ಣುವು ಗರುಡಾರೂಢನಾಗಿ ದೇವಶತ್ರುಗಳನ್ನು ಸಂಹರಿಸಿದಂತೆ–ನೀನು ನನ್ನ ಹೆಗಲ ಮೇಲೆ ಕುಳಿತು ಈ ರಾಕ್ಷಸನನ್ನು ಶಿಕ್ಷಿಸುವುದು ಯುಕ್ತವಾಗಿದೆ."

ರಾಘವನು ಮಾರುತಿಯ ಆ ಮಾತನ್ನು ಕೇಳಿ ಒಡನೆಯೇ ಮಹಾ ಕಾಯನಾದ ಹನುಮಂತನ ಮೇಲೆ ಹತ್ತಿ ಕುಳಿತನು. ಮನುಜಾಧಿಪನಾದ ಶ್ರೀರಾಮನು ಯುದ್ಧಭೂಮಿಯಲ್ಲಿ ರಾವಣನು ರಥದಲ್ಲಿ ಕುಳಿತಿರುವುದನ್ನು ನೋಡಿದನು. ಒಡನೆಯೇ ಅವನ ಬಳಿಗೆ ಶೀಘ್ರವಾಗಿ ಹೋಗುವಂತೆ ಮಾರುತಿಗೆ ಹೇಳಿದನು. ಮಹಾವಿಷ್ಣುವು ಆಯುಧವನ್ನು ಹಿಡಿದು ಬಲಿಚಕ್ರವರ್ತಿಯ ಬಳಿಗೆ ಹೋದಂತೆ–ಶ್ರೀರಾಮನು ಧನುಸ್ಸನ್ನು ಹಿಡಿದು ರಾವಣನ ಬಳಿಗೆ ಧಾವಿಸಿದನು. ರಾವಣನನ್ನು ಸಮೀಪಿಸುತ್ತಲೇ ಶ್ರೀರಾಮನು ಧನುಸ್ಸನ್ನು ಟೇಂಕರಿಸಿದನು. ಆ ಟಂಕಾರಶಬ್ದವು ಸಿಡಿಲಿನ ಶಬ್ದಕ್ಕಿಂತಲೂ ಕಠೋರವಾಗಿದ್ದಿತು. ಬಳಿಕ ಶ್ರೀರಾಮನು ಗಂಭೀರವಾದ ಮಾತಿನಿಂದ ರಾವಣನಿಗೆ ಹೇಳಿದನು :

"ರಾಕ್ಷಸಶ್ರೇಷ್ಠನೇ! ನಿಲ್ಲು ; ನಿಲ್ಲು ; ನನ್ನ ವಿಷಯದಲ್ಲಿ ಇಷ್ಟೊಂದು ಅಪರಾಧವನ್ನೆಸಗಿರುವ ನೀನು ನನ್ನಿಂದ ಹೇಗೆ ತಾನೇ ತಪ್ಪಿಸಿಕೊಂಡು

---

* ಇಲ್ಲಿಯೂ ಕೂಡ ವಿಷ್ಣೋರ್ಭಾಗಮಮೀಮಾಂಸ್ಯಮಾತ್ಮಾನಂ ಪ್ರತ್ಯನುಸ್ಮರತ್ ಎಂಬ ಶ್ಲೋಕಾರ್ಧವು ಬಂದಿರುತ್ತದೆ. ಈ ಶ್ಲೋಕಾರ್ಧವು ಹಿಂದೆ ಮತ್ತು ಮುಂದಿನ ಶ್ಲೋಕಗಳಿಗೆ ಹೊಂದಿಕೊಳ್ಳುವುದಿಲ್ಲ. ಆದರೆ ಎಲ್ಲ ಪುಸ್ತಕಗಳಲ್ಲಿಯೂ ಈ ಶ್ಲೋಕಾರ್ಧವಿದೆ.

ಹೋಗುವೆ? ಈಗ ನೀನು ಇಂದ್ರ-ಯಮ-ಸೂರ್ಯರ ಬಳಿಗೆ ಹೋದರೂ, ಬ್ರಹ್ಮಾಗ್ನಿ-ಶಂಕರರ ಬಳಿಗೆ ಹೋದರೂ, ತಪ್ಪಿಸಿಕೊಳ್ಳಲು ಹತ್ತು ದಿಕ್ಕುಗಳಿಗೂ ಓಡಿಹೋದರೂ–ನನ್ನ ಕೈಗಳಿಂದ ನೀನು ಬಿಡುಗಡೆಯನ್ನು ಹೊಂದಲಾರೆ.



ನೀನು ನಿನ್ನಲ್ಲಿದ್ದ ಶಕ್ತ್ಯಾಯುಧದಿಂದ ಲಕ್ಷ್ಮಣನನ್ನು ಪ್ರಹರಿಸಿದೆ. ಅವನು ಆದರಿಂದಾಗಿ ಒಡನೆಯೇ ಮೂರ್ಛಿತನಾದನು. ಅದಕ್ಕೆ ತಕ್ಕ ಪ್ರತೀಕಾರಮಾಡಲು ನಾನೀಗ ನಿನ್ನೊಡನೆ ಯುದ್ಧಮಾಡಲು ಬಂದಿರುವೆನು. ನನ್ನೊಡನೆ ಮಾಡಲಿರುವ ಈ ಯುದ್ಧದಲ್ಲಿ ನೀನು ಪುತ್ರ-ಪೌತ್ರರಿಂದ ಸಮೇತನಾಗಿ ಮರಣಹೊಂದುವೆ. ನಿನ್ನ ಮುಂದೆ ನಿಂತಿರುವ ರಘು ವಂಶೀಯನಾದ ನನ್ನಿಂದಲೇ ಉತ್ತಮೋತ್ತಮವಾದ ಶಸ್ತ್ರಾಸ್ತ್ರಗಳಿಂದ ಸಂಪನ್ನ ರಾಗಿದ್ದ, ಅದ್ಭುತರಾಗಿ ಕಾಣುತ್ತಿದ್ದ, ಜನಸ್ಥಾನನಿವಾಸಿಗಳಾದ ಹದಿನಾಲ್ಕು ಸಾವಿರ ರಾಕ್ಷಸರು ಹತರಾದರು."

ಶ್ರೀರಾಮನ ಆ ಮಾತನ್ನು ಕೇಳಿ ಮಹಾಬಲನಾದ ರಾವಣನು ಯುದ್ಧದಲ್ಲಿ ರಾಘವನನ್ನು ಹೆಗಲ ಮೇಲೆ ಹೊತ್ತುಕೊಂಡಿದ್ದ, ಮಹಾವೇಗಶಾಲಿಯಾದ ಹನುಮಂತನನ್ನು–ರೋಷಾವೇಶದಿಂದ ಹಿಂದಿನ ಹಗೆತನವನ್ನು ಸ್ಮರಿಸುತ್ತಾ–ಪ್ರಳಯಕಾಲದ ಅಗ್ನಿಯ ಜ್ವಾಲೆಗಳಿಗೆ ಸಮಾನವಾದ ಜ್ವಾಲೆಗಳಿಂದ ಕೂಡಿದ್ದ ಪ್ರದೀಪ್ತವಾದ ಬಾಣಗಳಿಂದ ಪ್ರಹರಿಸಿದನು.

ಯುದ್ಧಸ್ಥಳದಲ್ಲಿ ಹಾಗೆ ರಾಕ್ಷಸನ ಬಾಣಗಳಿಂದ ಪ್ರಹರಿಸಲ್ಪಟ್ಟಾಗ ಸ್ವಾಭಾವಿಕವಾದ ತೇಜಸ್ಸಿನಿಂದ ಸಂಪನ್ನನಾಗಿದ್ದ ಹನುಮಂತನ ತೇಜೋಬಲಗಳು ಮತ್ತಷ್ಟು ವೃದ್ಧಿಹೊಂದಿದುವು.

ಮಹಾತೇಜಸ್ವಿಯಾದ ಶ್ರೀರಾಮನು ರಾವಣನ ಬಾಣಗಳ ಪ್ರಹಾರದಿಂದ ಹನುಮಂತನಿಗೆ ಗಾಯಗಳಾದುದನ್ನು ಕಂಡು ಕೋಪವಶನಾದನು. ಅದರ ಪರಿಣಾಮವಾಗಿ ರಾವಣನನ್ನು ಆಕ್ರಮಿಸುತ್ತಾ–ಚಕ್ರಗಳಿಂದಲೂ ಕುದುರೆಗಳಿಂದಲೂ ಕೂಡಿದ್ದ ರಥವನ್ನೂ, ಧ್ವಜ-ಛತ್ರ-ಮಹಾಪತಾಕೆಗಳನ್ನೂ, ಸಾರಥಿಯನ್ನೂ, ರಥದಲ್ಲಿದ್ದ ವಜ್ರಾಯುಧ-ಶೂಲಾಯುಧ-ಖಡ್ಗಗಳನ್ನೂ ತೀಕ್ಷ್ಣವಾದ ಅಗ್ರಭಾಗಗಳಿಂದ ಕೂಡಿದ್ದ ಬಾಣಗಳಿಂದ ನುಚ್ಚುನೂರು ಮಾಡಿಬಿಟ್ಟನು.

ಅನಂತರ ವಜ್ರಾಯುಧಕ್ಕೂ ಮತ್ತು ಸಿಡಿಲಿಗೂ ಸಮಾನವಾದ ಬಾಣಗಳಿಂದ ಇಂದ್ರನ ಶತ್ರುವಾದ ರಾವಣನ ವಿಶಾಲವಾದ ಮತ್ತು ಸುಂದರವಾದ ವಕ್ಷಃಸ್ಥಳದಲ್ಲಿ–ಇಂದ್ರನು ವಜ್ರಾಯುಧದಿಂದ ಮೇರುಪರ್ವತವನ್ನು ಪ್ರಹರಿಸಿದಂತೆ–ಪ್ರಹರಿಸಿದನು. ಯಾವನು ವಜ್ರಾಯುಧದ ಪ್ರಹಾರದಿಂದಾಗಲೀ ಸಿಡಿಲಿನ ಹೊಡೆತದಿಂದಾಗಲೀ ಯಾವಾಗಲೂ ಕ್ಷೋಭೆಗೊಂಡಿರಲಿಲ್ಲವೋ–ಅಂತಹ ರಾವಣನು ಶ್ರೀರಾಮನ ಬಾಣಗಳಿಂದ ಪ್ರಹರಿಸಲ್ಪಟ್ಟೊಡನೆಯೇ ಆರ್ತನಾಗಿ ತತ್ತರಿಸಿದನು. ಧನುಸ್ಸು ಕೈಯಿಂದ ಜಾರಿ ಕೆಳಗೆ ಬಿದ್ದಿತು.

ಮಹಾತ್ಮನಾದ ಶ್ರೀರಾಮನು ವ್ಯಾಕುಲಗೊಂಡಿದ್ದ ರಾವಣನನ್ನು ನೋಡಿ ಥಳ-ಥಳಿಸುತ್ತಿದ್ದ ಅರ್ಧಚಂದ್ರವೆಂಬ ಬಾಣವನ್ನು ಕೈಗೆ ತೆಗೆದುಕೊಂಡು ಧನುಸ್ಸಿನಲ್ಲಿ ಹೂಡಿ ರಾಕ್ಷಸಾಧಿಪತಿಯ ಸೂರ್ಯವರ್ಣದ ಕಿರೀಟವನ್ನು ಬಹಳ ಶೀಘ್ರವಾಗಿ ಕತ್ತರಿಸಿಬಿಟ್ಟನು. ಆ ಸಮಯದಲ್ಲಿ ರಾವಣನು

ವಿಷವೇ ಇಲ್ಲದ ಸರ್ಪದಂತಾಗಿದ್ದನು. ಆರಿಹೋದ ಜ್ವಾಲೆಯುಳ್ಳ ಅಗ್ನಿಯಂತಿದ್ದನು. ಪ್ರಕಾಶವಿಲ್ಲದ ಸೂರ್ಯನಂತಿದ್ದನು. ಕಿರೀಟವನ್ನು ಕಳೆದುಕೊಂಡು ಕಾಂತಿಹೀನನಾಗಿದ್ದನು. ಅಂತಹ ಸ್ಥಿತಿಯಲ್ಲಿದ್ದ ರಾವಣನಿಗೆ ಶ್ರೀರಾಮನು ಹೇಳಿದನು :

"ರಾವಣೇಶ್ವರ! ಇಂದು ನೀನು ಮಹಾಭಯಂಕರವಾದ ಸಂಹಾರ ಕಾರ್ಯವನ್ನೇ ಮಾಡಿರುವೆ. ನನ್ನ ಸೈನ್ಯದ ಅನೇಕ ಪ್ರಧಾನಿಗಳನ್ನು ಸಂಹರಿಸಿರುವೆ. ಆದುದರಿಂದ ನೀನು ಆಯಾಸಗೊಂಡಿರುವೆಯೆಂದು ಭಾವಿಸಿ ಈಗ ನಿನ್ನನ್ನು ನನ್ನ ಬಾಣಗಳಿಂದ ಮೃತ್ಯುವಶನನ್ನಾಗಿ ಮಾಡುವುದಿಲ್ಲ. ನೀನೀಗ ಹೊರಟುಹೋಗು. ನೀನು ಬಹಳ ಗಾಯಗೊಂಡಿರುವೆಯೆಂಬುದನ್ನೂ ನಾನು ತಿಳಿದಿದ್ದೇನೆ. ಲಂಕೆಗೆ ಹೋಗಿ ಸ್ವಲ್ಪ ಹೊತ್ತು ವಿಶ್ರಮಿಸಿಕೋ. ಅನಂತರ ಧನುಸ್ಸನ್ನು ಹಿಡಿದು ರಥದಲ್ಲಿ ಕುಳಿತು ಯುದ್ಧಭೂಮಿಗೆ ಆಗಮಿಸು. ಹಾಗೆ ರಥಸ್ಥನಾಗಿ ಬಂದ ನೀನು ನನ್ನ ಪರಾಕ್ರಮ ವೆಷ್ಟೆಂಬುದನ್ನೂ ಕಾಣುವೆ."

ಶ್ರೀರಾಮನು ಹೀಗೆ ಹೇಳಲು ಹರ್ಷ-ದರ್ಪಗಳಿಂದ ರಹಿತನಾಗಿದ್ದ–ಧನುಸ್ಸನ್ನೂ, ಕುದುರೆಗಳನ್ನೂ, ಸಾರಥಿಯನ್ನೂ, ಕಿರೀಟವನ್ನೂ ಕಳೆದುಕೊಂಡಿದ್ದ, ಶರಪೀಡಿತನಾಗಿದ್ದ ರಾವಣನು ಒಡನೆಯೇ ಲಂಕಾಪಟ್ಟಣಕ್ಕೆ ಧಾವಿಸಿದನು.

ರಾಕ್ಷಸರಿಗೆ ರಾಜನಾದ, ಮಹಾಬಲನಾದ, ದಾನವ-ದೇವಶತ್ರುವಾದ ರಾವಣನು ಲಂಕಾಪಟ್ಟಣವನ್ನು ಪ್ರವೇಶಿಸಿದನಂತರ ಶ್ರೀರಾಮ-ಲಕ್ಷ್ಮಣರು ಯುದ್ಧಭೂಮಿಯಲ್ಲಿ ವಾನರಸೈನಿಕರ ಶರೀರಗಳಲ್ಲಿ ನೆಟ್ಟುಕೊಂಡಿದ್ದ ಎಲ್ಲ ಬಾಣಗಳನ್ನೂ ಹೊರತೆಗೆದರು. ಹೀಗೆ ದೇವರಾಜನಾದ ಇಂದ್ರನಿಗೆ ಶತ್ರುವಾದ ರಾವಣನು ಪರಾಜಿತನಾಗಲಾಗಿ–ಸುರಾಸುರರೂ, ಭೂತಗಣಗಳೂ, ದಶದಿಕ್ಕುಗಳೂ, ಸಮುದ್ರಗಳೂ, ಋಷಿಗಣಗಳೂ, ಮಹಾಸರ್ಪಗಳೂ, ಹಾಗೆಯೇ ಭೂಚರ-ಜಲಚರಪ್ರಾಣಿಗಳೂ ಸಂತೋಷಗೊಂಡುವು.

೫೯ನೆಯ ಸರ್ಗವು ಮುಗಿಯಿತು.

ಪರಾಜಯದಿಂದ ದುಃಖಿತನಾದ ರಾವಣನು ಕುಂಭಕರ್ಣನನ್ನು ಎಚ್ಚರಗೊಳಿಸಿದುದು : ಅಣ್ಣನನ್ನು ಕಾಣಲು ಹೋಗುತ್ತಿದ್ದ ಕುಂಭಕರ್ಣನನ್ನು ನೋಡಿ ವಾನರಸೈನಿಕರು ಭಯಗೊಂಡುದು

ಸ ಪ್ರವಿಶ್ಯ ಪುರೀಂ ಲಙ್ಕಾಂ ರಾಮಬಾಣಭಯಾರ್ದಿತಃ ।
ಭಗ್ನದರ್ಪಸ್ತದಾ ರಾಜಾ ಬಭೂವ ವ್ಯಥಿತೇನ್ದ್ರಿಯಃ ॥೧॥

ಶ್ರೀರಾಮಬಾಣಗಳ ಭಯದಿಂದ ಪೀಡಿತನಾದ ರಾವಣನು ರಣರಂಗ ದಿಂದ ಲಂಕೆಗೆ ಹೋದನು. ಅವನ ದರ್ಪವೆಲ್ಲವೂ ಉಡುಗಿಹೋಗಿದ್ದಿತು. ಮನಸ್ಸು ವ್ಯಥೆಯಿಂದ ವ್ಯಗ್ರವಾಗಿದ್ದಿತು.

ಸಿಂಹದಿಂದ ಆನೆಯು ಪರಾಜಿತವಾಗುವಂತೆ, ಗರುಡನಿಂದ ಸರ್ಪವು ಪರಾಜಿತವಾಗುವಂತೆ–ಮಹಾತ್ಮನಾದ ಶ್ರೀರಾಮನಿಂದ ರಾವಣನು ಪರಾಜಿತ ನಾಗಿದ್ದನು. ಶ್ರೀರಾಮನ ಬ್ರಹ್ಮದಂಡಸದೃಶವಾದ ಮತ್ತು ಮಿಂಚಿನಂತೆ ತೇಜೋಮಯವಾಗಿದ್ದ ಬಾಣಗಳನ್ನು ನೆನೆದು ರಾವಣನು ಮನಸ್ಸಿನಲ್ಲೇ ದುಃಖಿಸಿದನು. ಸುವರ್ಣಮಯವಾದ ಶ್ರೇಷ್ಠವಾದ ಸಿಂಹಾಸನದಲ್ಲಿ ಕುಳಿತು ರಾಕ್ಷಸರ ಕಡೆಗೆ ನೋಡುತ್ತಾ ಈ ಮಾತುಗಳನ್ನು ಹೇಳಿದನು :

ಸರ್ವಂ ತತ್ಫಲು ಮೇ ಮೋಘಂ ಯತ್ತಪ್ತಂ ಪರಮಂ ತಪಃ ।
ಯತ್ಸಮಾನೋ ಮಹೇನ್ದ್ರೇಣ ಮಾನುಷೇಣಾಸ್ಮಿ ನಿರ್ಜಿತಃ ॥೫॥

"ನಾನು ಎಂತೆಂತಹ ಮಹಾತಪಸ್ಸುಗಳನ್ನು ಮಾಡಿದ್ದೆನೋ– ಅವೆಲ್ಲವೂ ವ್ಯರ್ಥವಾಗಿ ಹೋಯಿತು. ಏಕೆಂದರೆ : ಮಹೇಂದ್ರನ ಪರಾಕ್ರಮಕ್ಕೆ ಸಾಟಿಯಾದ ಪರಾಕ್ರಮವುಳ್ಳವನಾಗಿದ್ದ ನಾನು ಇಂದು ಒಬ್ಬ ಸಾಮಾನ್ಯಮನುಷ್ಯನಿಂದ ಪರಾಜಿತನಾದೆನು.

ಇದಂ ತದ್ಬ್ರಹ್ಮಣೋ ಘೋರಂ ವಾಕ್ಯಂ ಮಾಮಭ್ಯುಪಸ್ಥಿತಮ್ ।
ಮಾನುಷೇಭ್ಯೋ ವಿಜಾನೀಹಿ ಭಯಂ ತ್ವಮಿತಿ ತತ್ತಥಾ ॥೬॥

ಬ್ರಹ್ಮನು ಹೇಳಿದ್ದ ಘೋರವಾದ ವಾಕ್ಯವೊಂದು ಈಗ ಕಾರ್ಯರೂಪ ದಲ್ಲಿ ಸನ್ನಿಹಿತವಾಗಿದೆ. "ನಿನಗೆ ಮನುಷ್ಯರಿಂದ ಭಯವಿದೆ. ಈ ವಿಷಯ ವನ್ನು ನೀನು ಚೆನ್ನಾಗಿ ತಿಳಿದಿರು"–ಎಂಬ ಈ ಘೋರವಾಕ್ಯವನ್ನು ಬ್ರಹ್ಮನು

ಹೇಳಿದ್ದನು. ದೇವ-ದಾನವ-ಗಂಧರ್ವ-ಯಕ್ಷ-ರಾಕ್ಷಸ-ಪನ್ನಗರಿಂದ ನಾನು ಅವಧ್ಯತ್ವವನ್ನು ಪ್ರಾರ್ಥಿಸಿದ್ದೆನು. ಆದರೆ ಮನುಷ್ಯರಿಂದ ಅವಧ್ಯತ್ವವನ್ನು ಯಾಚಿಸಲಿಲ್ಲ. ಹಿಂದೆ ಇಕ್ಷ್ವಾಕುಕುಲದ ರಾಜನಾಗಿದ್ದ ಅನರಣ್ಯನೆಂಬ ರಾಜನು ನನಗೆ ಹೀಗೆ ಶಾಪವನ್ನಿತ್ತಿದ್ದನು :

ಉತ್ಪತ್ಸ್ಯತೇ ಹಿ ಮದ್ವಂಶೇ ಪುರುಷೋ ರಾಕ್ಷಸಾಧಮ ।
ಯಸ್ತ್ವಾಂ ಸಪುತ್ರಂ ಸಾಮಾತ್ಯಂ ಸಬಲಂ ಸಾಶ್ವಸಾರಥಿಮ್ ।
ನಿಹನಿಷ್ಯತಿ ಸಂಗ್ರಾಮೇ ತ್ವಾಂ ಕುಲಾಧಮ ದುರ್ಮತೇ ॥೯॥

"ರಾಕ್ಷಸಾಧಮನೇ! ಕುಲಾಧಮನೇ! ದುರ್ಮತಿಯೇ! ಪುತ್ರ-ಮಂತ್ರಿ-ಸೇನಾಪತಿ-ಅಶ್ವ-ಸಾರಥಿಗಳ ಸಮೇತವಾಗಿ ನಿನ್ನನ್ನು ಸಂಹರಿಸುವ ವೀರಪುರುಷನು ನನ್ನ ವಂಶದಲ್ಲಿಯೇ ಹುಟ್ಟುವನು."

(ಅನರಣ್ಯನು ಹೇಳಿದ್ದ ಆ ಪುರುಷನು ದಶರಥನ ಮಗನಾದ ಮತ್ತು ಇಕ್ಷ್ವಾಕುಕುಲಸಂಭೂತನಾದ ಈ ರಾಮನೆಂದೇ ನಾನು ಭಾವಿಸುತ್ತೇನೆ.)

ಶಪ್ತೋಽಹಂ ವೇದವತ್ಯಾ ಚ ಯದಾ ಸಾ ಧರ್ಷಿತಾ ಪುರಾ ।
ಸೇಯಂ ಸೀತಾ ಮಹಾಭಾಗಾ ಜಾತಾ ಜನಕನನ್ದಿನೀ ॥೧೦॥

ಅದೂ ಅಲ್ಲದೇ ಹಿಂದೆ ನನ್ನನ್ನು ವೇದವತಿಯೂ ಶಪಿಸಿದ್ದಳು. ಅವಳನ್ನು ನನ್ನ ವಶಳಾಗುವಂತೆ ಬಲಾತ್ಕರಿಸಿದ್ದೆನು. ಅವಳೇ ಮಹಾಭಾಗ್ಯ ಶಾಲಿನಿಯಾದ ಜನಕನ ಮಗಳಾಗಿ ಹುಟ್ಟಿರುವ ಈ ಸೀತಾದೇವಿಯಿರಬೇಕು.

ಉಮಾ ನನ್ದೀಶ್ವರಶ್ಚಾಪಿ ರಮ್ಭಾ ವರುಣಕನ್ಯಕಾ ।
ಯಥೋಕ್ತಾಸ್ತಪಸಾ ಪ್ರಾಪ್ತಂ ನ ಮಿಥ್ಯಾ ಋಷಿಭಾಷಿತಮ್ ॥

ಇದೇ ರೀತಿಯಲ್ಲಿ ಪಾರ್ವತಿ, ನಂದೀಶ್ವರ, ರಂಭೆ, ವರುಣನ ಮಗಳು–ಇವರು ಕೂಡ ನನಗೆ ಶಾಪಗಳನ್ನಿತ್ತಿದ್ದರು. ಅವರು ಹೇಳಿದ್ದಂತೆಯೇ ಈಗ ಎಲ್ಲವೂ ನಡೆಯುತ್ತಿದೆ. ನಾನು ಅವರ ಶಾಪಗಳ ಫಲವನ್ನು ಈಗ ಅನುಭವಿಸುತ್ತಿದ್ದೇನೆ. ಋಷಿಗಳ ಮಾತೆಂದಿಗೂ ಸುಳ್ಳಾಗುವುದಿಲ್ಲ.*

---

* ರಾವಣನು ಕೈಲಾಸಪರ್ವತವನ್ನೆತ್ತಿದಾಗ ಭಯಗೊಂಡ ಉಮೆಯು ಹೆಂಗಸಿನ ಕಾರಣದಿಂದ ಮರಣವುಂಟಾಗಲೆಂದು ರಾವಣನಿಗೆ ಶಾಪವನ್ನಿತ್ತಿದ್ದಳು. ಒಮ್ಮೆ

ಆ ಶಾಪಗಳೇ ನನಗಿಂದು ಭಯಕ್ಕೆ ಕಾರಣಗಳಾಗಿವೆ. ಆದರೂ ಈ ಸಂಕಟದ ಪರಿಹಾರಕ್ಕಾಗಿ ನೀವೆಲ್ಲರೂ ಸೇರಿ ಪ್ರಯತ್ನಿಸುವುದು ಯುಕ್ತ ವಾಗಿದೆ. ರಾಜಮಾರ್ಗಗಳಲ್ಲಿಯೂ ಮತ್ತು ಗೋಪುರಗಳ ಶಿಖರಗಳ ಲ್ಲಿಯೂ ರಕ್ಷಣೆಯ ಸಲುವಾಗಿ ರಾಕ್ಷಸರು ಉಪಸ್ಥಿತರಾಗಲಿ. ಹಾಗೆಯೇ ಅಪ್ರತಿಮವಾದ ಗಾಂಭೀರ್ಯವುಳ್ಳ, ದೇವ-ದಾನವರ ದರ್ಪಧ್ವಂಸಕನಾದ, ಬ್ರಹ್ಮನ ಶಾಪದಿಂದಾಗಿ ಸರ್ವದಾ ನಿದ್ರಾವಶನಾಗಿಯೇ ಇರುವ ಕುಂಭಕರ್ಣ ನನ್ನು ಎಬ್ಬಿಸಿರಿ. ಮಹಾದ್ವಾರಗಳಲ್ಲಿ ನಿಂತು ರಕ್ಷಣೆಯನ್ನು ಪ್ರಯತ್ನಪೂರ್ವಕ ವಾಗಿ ಮಾಡಿರಿ. ಪ್ರಾಕಾರಗಳ ಮೇಲೆ ನಿಲ್ಲಿರಿ"–ಎಂಬುದಾಗಿ ರಾವಣನು ಬಲಾಧ್ಯಕ್ಷರಿಗೆ ಆಜ್ಞಾಪಿಸಿದನು. ಯುದ್ಧದಲ್ಲಿ ಪ್ರಹಸ್ತನ ಮರಣ ಮತ್ತು ತನ್ನ ಪರಾಜಯ–ಇವು ರಾವಣನ ಮನಸ್ಸಿನಲ್ಲಿ ಬಹಳವಾಗಿ ನಾಟಿದ್ದಿತು.

ಅವನು ತನ್ನ ಬಲಾಧ್ಯಕ್ಷರಿಗೆ ಪುನಃ ಹೇಳಿದನು :

"ನಾನಾದರೋ ದುಃಖಿಯಾಗಿ, ಚಿಂತಾವಶನಾಗಿ, ಇಷ್ಟಾರ್ಥವು ಕೈಗೂಡದೇ ಸದಾ ಎಚ್ಚರಗೊಂಡೇ ಇರುವೆನು. ಆದರೆ ಈ ನನ್ನ ತಮ್ಮ ಕುಂಭಕರ್ಣನಾದರೋ ಸುಖವಾಗಿ ಮಲಗಿದ್ದಾನೆ. ಅವನಿಗೆ ಚಿಂತೆ ಯೆಂಬುದೇ ಇಲ್ಲ. ಕಾಲನಿಂದ ವಿನಾಶಗೊಳಿಸಲ್ಪಟ್ಟ ಬುದ್ಧಿಯುಳ್ಳವನಾಗಿ ದ್ದಾನೆ. ಅವನು ಕೆಲವು ವೇಳೆ ಒಂಬತ್ತು ತಿಂಗಳು ಮಲಗುತ್ತಾನೆ. ಕೆಲವು ವೇಳೆ ಏಳು ತಿಂಗಳು, ಕೆಲವು ವೇಳೆ ಹತ್ತು, ಕೆಲವು ವೇಳೆ ಎಂಟು ತಿಂಗಳು ಮಲಗುತ್ತಾನೆ. ಇನ್ನೂ ಒಂಬತ್ತು ದಿವಸಗಳ ಹಿಂದೆ ತಾನೇ ಅವನು ನನ್ನೊಡನೆ ಮಂತ್ರಾಲೋಚನೆಮಾಡಿ ಮಲಗಿದನು. ಮಹಾಬಲನಾದ, ಎಲ್ಲ ರಾಕ್ಷಸರಿಗೂ ಶ್ರೇಷ್ಠನಾದ ಕುಂಭಕರ್ಣನನ್ನು ನೀವೀಗಲೇ ಹೋಗಿ ಎಬ್ಬಿಸಿರಿ. ಯುದ್ಧದಲ್ಲಿ ಮಹಾಬಾಹುವಾದ ಅವನು ವಾನರರನ್ನೂ–ರಾಜಪುತ್ರರನ್ನೂ

ರಾವಣನು ನಂದೀಶ್ವರನ ಮುಖವನ್ನು ನೋಡಿ ಹಾಸ್ಯಮಾಡಿ ನಕ್ಕಿದ್ದನು. ಆ ಸಮಯ ದಲ್ಲಿ ನಂದೀಶ್ವರನು 'ನನ್ನಂತೆ ಮುಖ ಮತ್ತು ಪರಾಕ್ರಮಗಳಿರುವವರೇ ನಿನ್ನ ಕುಲವನ್ನು ನಾಶಮಾಡುವರು'–ಎಂದು ಶಾಪವನ್ನಿತ್ತಿದ್ದನು. ರಂಭೆಯ ನಿಮಿತ್ತವಾಗಿ ನಲಕೂಬರನೂ, ವರುಣನ ಮಗಳಾದ ಪುಂಜಿಕಸ್ಥಲೆಯ ನಿಮಿತ್ತವಾಗಿ ಬ್ರಹ್ಮನೂ 'ಇಚ್ಛೆಯಿಲ್ಲದ ಸ್ತ್ರೀ ಯೊಡನೆ ಬಲಾತ್ಕಾರವಾಗಿ ರಮಿಸಲು ಹೋದರೆ ಮರಣವುಂಟಾಗುವುದಾಗಿ ಶಾಪಗಳನ್ನಿತ್ತಿದ್ದರು.'

ಬಹಳ ಬೇಗ ಸಂಹರಿಸುತ್ತಾನೆ. ಸಮಸ್ತರಾಕ್ಷಸರಿಗೂ ಮುಖ್ಯನಾಗಿರುವ ಅವನು ಯುದ್ಧದಲ್ಲಿ ಕೇತುವಿನಂತೆ ಇರುತ್ತಾನೆ. ಆದರೆ ಅವನು ಯಾವಾ ಗಲೂ ಗ್ರಾಮ್ಯಸುಖದಲ್ಲಿಯೇ ಆಸಕ್ತನಾಗಿದ್ದು ಮಲಗಿಯೇ ಇರುತ್ತಾನೆ. ಈಗ ನಾವು ಕುಂಭಕರ್ಣನನ್ನೇನಾದರೂ ಎಚ್ಚರಗೊಳಿಸಿದರೆ ಸುದಾರುಣ ವಾದ ಈ ಯುದ್ಧದಲ್ಲಿ ರಾಮನಿಂದ ಪರಾಜಿತನಾಗಿ ಬಂದಿರುವ ನನಗೆ ಇನ್ನು ಮುಂದೆ ಪರಾಜಯದಿಂದ ಶೋಕವುಂಟಾಗುವುದಿಲ್ಲ. ಅವನೆದ್ದರೆ ನಮಗೆ ಪರಾಜಯವೆಂಬುದೇ ಇಲ್ಲ. ಇಂತಹ ಸಂಕಟದ ಸಮಯ ದಲ್ಲಿಯೂ ಕುಂಭಕರ್ಣನು ನನಗೆ ಸಹಾಯಮಾಡಲು ಅಸಮರ್ಥನಾದರೆ– ಅವನಿಗೆ ಇಂದ್ರನ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವಿದ್ದು ತಾನೇ ಏನು ಪ್ರಯೋಜನ? ಇಂತಹವನನ್ನು ಕಟ್ಟಿಕೊಂಡು ನಾನೇನು ಮಾಡಲಿ?”

ರಾಕ್ಷಸೇಂದ್ರನಾದ ರಾವಣನ ಆ ಮಾತನ್ನು ಕೇಳಿ ರಾಕ್ಷಸರೆಲ್ಲರೂ ಗಾಬರಿಗೊಂಡು ಕುಂಭಕರ್ಣನ ಅರಮನೆಗೆ ಹೋದರು. ರಾವಣನಿಂದ ಆಜ್ಞಪ್ತರಾದ, ರಕ್ತ-ಮಾಂಸಭೋಜಿಗಳಾದ ರಾಕ್ಷಸರು ಗಂಧ-ಮಾಲ್ಯಗಳನ್ನೂ ಭಕ್ಷ-ಭೋಜ್ಯಾದಿಗಳನ್ನೂ ತೆಗೆದುಕೊಂಡು ಕುಂಭಕರ್ಣನ ಬಳಿಗೆ ಹೋದರು.

ಕುಂಭಕರ್ಣನು ಒಂದು ಗುಹೆಯಲ್ಲಿ ಮಲಗಿದ್ದನು. ಅದು ಬಹಳ ರಮ್ಯವಾಗಿದ್ದಿತು. ಪುಷ್ಪಗಂಧವು ಎಲ್ಲ ಕಡೆಗಳಲ್ಲಿಯೂ ಹರಡಿಕೊಂಡಿದ್ದಿತು. ಅದು ಒಂದು ಯೋಜನದಷ್ಟು ಅಗಲವೂ–ಒಂದು ಯೋಜನದಷ್ಟು ಉದ್ದವೂ ಇದ್ದಿತು. ಆ ಗುಹೆಗೆ ದೊಡ್ಡ ಮಹಾದ್ವಾರವಿದ್ದಿತು. ಗುಹೆಯನ್ನು ಪ್ರವೇಶಿಸಲು ಹೋದ ರಾಕ್ಷಸರು ಕುಂಭಕರ್ಣನು ಬಿಟ್ಟ ಉಸಿರಿನ ವೇಗಕ್ಕೆ ಹಿಂದಕ್ಕೆ ತಳ್ಳಲ್ಪಟ್ಟರು. ಅವನು ಒಳಕ್ಕೆ ಎಳೆದುಕೊಳ್ಳುತ್ತಿದ್ದ ಉಸಿರನ್ನು ಆಶ್ರಯಿಸಿ ಬಹಳ ಕಷ್ಟದಿಂದ ಅವರೆಲ್ಲರೂ ಗುಹೆಯೊಳಗೆ ಪ್ರವೇಶಿಸಿದರು. ರತ್ನ ಮತ್ತು ಸುವರ್ಣಗಳಿಂದ ಖಚಿತವಾದ ನೆಲದಿಂದ ಕೂಡಿದ್ದ ಅತ್ಯಂತ ಸುಂದರವಾದ ಗುಹೆಯೊಳಗೆ ಹೋಗಿ ರಾಕ್ಷಸಶ್ರೇಷ್ಠರು ಅಲ್ಲಿ ಮಲಗಿದ್ದ ಭಯಂಕರಪರಾಕ್ರಮನಾದ ಕುಂಭಕರ್ಣನನ್ನು ನೋಡಿದರು. ಹರಡಿಕೊಂಡ ಪರ್ವತದಂತೆ ವಿಕಾರವಾದ ರೀತಿಯಲ್ಲಿ ಬಿದ್ದುಕೊಂಡಿದ್ದ ಮಹಾನಿದ್ರನಾದ ಕುಂಭಕರ್ಣನನ್ನು ಎಲ್ಲರೂ ಸೇರಿ ಎಚ್ಚರಗೊಳಿಸಲು ಪ್ರಾರಂಭಿಸಿದರು.

ಅವನ ಶರೀರವು ನಿಮಿರಿನಿಂತ ರೋಮಕೋಟಿಯಿಂದ ಕೂಡಿದ್ದಿತು.

ಸರ್ಪದಂತೆ ಬಹಳ ದೀರ್ಘವಾಗಿ ಉಸಿರುಬಿಡುತ್ತಿದ್ದನು. ಉಚ್ಛ್ವಾಸ-ನಿಃಶ್ವಾಸಗಳಿಂದ ತನ್ನ ಸಮೀಪದಲ್ಲಿ ನಿಂತಿದ್ದವರನ್ನು ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ಸುತ್ತಾಡಿಸಿಬಿಡುತ್ತಿದ್ದನು. ಅವನ ಮೂಗಿನ ಎರಡು ಹೊಳ್ಳೆಗಳೂ ಭಯಂಕರವಾಗಿದ್ದುವು. ಮುಖವು ಪಾತಾಲದಂತೆ ವಿಶಾಲವಾಗಿದ್ದಿತು. ಸಮಗ್ರವಾದ ಶರೀರವು ಹಾಸಿಗೆಯ ಮೇಲಿದ್ದಿತು. ಅವನ ಶರೀರದಿಂದ ರಕ್ತ ಮತ್ತು ಮೇದಸ್ಸುಗಳ ವಾಸನೆಯು ಹೊರಸೂಸುತ್ತಿದ್ದಿತು. ಭುಜಗಳಲ್ಲಿ ಚಿನ್ನದ ತೋಳ್ಬಳೆಗಳಿದ್ದುವು. ಅವನು ತಲೆಯಲ್ಲಿ ಜಾಜ್ವಲ್ಯಮಾನವಾದ ಕಿರೀಟವನ್ನು ಧರಿಸಿದ್ದು ಸೂರ್ಯದೇವನಂತೆ ಪ್ರಭೆಯಿಂದ ಪ್ರಕಾಶಿಸುತ್ತಿದ್ದನು. ಹಾಗಿದ್ದ ರಾಕ್ಷಸಶ್ರೇಷ್ಠನಾದ ಶತ್ರುಸೂದನನಾದ ಕುಂಭಕರ್ಣನನ್ನು ರಾವಣನ ಸೇವಕರು ನೋಡಿದರು. ಬಳಿಕ ಮಹಾಕಾಯರಾದ ರಾಕ್ಷಸರು ಕುಂಭಕರ್ಣನ ಮುಂದೆ ಮೇರುಪರ್ವತಸದೃಶವಾದ, ಅತ್ಯಂತತೃಪ್ತಿಯನ್ನುಂಟುಮಾಡುವ ಪ್ರಾಣಿಗಳ ರಾಶಿಯನ್ನೇ ಅವನ ಭೋಜನಕ್ಕಾಗಿ ಕಲ್ಪಿಸಿದರು. ಶ್ರೇಷ್ಠರಾದ ಆ ರಾಕ್ಷಸರು ಜಿಂಕೆ-ಎಮ್ಮೆ-ಹಂದಿ ಮುಂತಾದ ಪ್ರಾಣಿಗಳ ರಾಶಿಗಳನ್ನೇ ಅವನ ಮುಂದೆ ಪೇರಿಸಿದರು. ಅದ್ಭುತವಾದ ಅನ್ನದ ರಾಶಿಯನ್ನೂ ಸಿದ್ಧಪಡಿಸಿದರು. ಅನಂತರ ದೇವಶತ್ರುಗಳಾದ ರಾಕ್ಷಸರು ರಕ್ತದಿಂದ ತುಂಬಿದ ಗಡಿಗೆಗಳನ್ನೂ ವಿಧ-ವಿಧವಾದ ಮಾಂಸಗಳನ್ನೂ ಅವನ ಮುಂದಿಟ್ಟರು. ಅನಂತರ ಅವರು ಶತ್ರುತಾಪಕನಾದ ಕುಂಭಕರ್ಣನ ಶರೀರಕ್ಕೆ ಬಹುಮೂಲ್ಯವಾದ ಚಂದನವನ್ನು ಲೇಪಿಸಿದರು. ದಿವ್ಯವಾದ ಸುಗಂಧಿತವಾದ ಪುಷ್ಪಗಳನ್ನೂ, ಗಂಧವನ್ನೂ ಮೂಸಿಸಿದರು. ಧೂಪ-ಗಂಧಗಳನ್ನು ಸರ್ವತ್ರ ಹರಡಿದರು. ಶತ್ರುತಾಪಕನಾದ ಕುಂಭಕರ್ಣನನ್ನು ಬಗೆ-ಬಗೆಯಾಗಿ ಸ್ತೋತ್ರಮಾಡಿದರು. ಆಗಿಂದಾಗ್ಗೆ ಮೇಘಗಳೋಪಾದಿಯಲ್ಲಿ ರಾಕ್ಷಸರು ಕುಂಭಕರ್ಣನನ್ನು ಎಚ್ಚರಗೊಳಿಸುವ ಸಲುವಾಗಿ ಸಿಂಹನಾದಗಳನ್ನು ಮಾಡುತ್ತಿದ್ದರು. ಆದರೂ ಕುಂಭಕರ್ಣನು ಎಚ್ಚರಗೊಳ್ಳಲಿಲ್ಲ. ಅಸಹನೆಯಿಂದಾಗಿ ರಾಕ್ಷಸರು ಚಂದ್ರಸದೃಶವಾದ ಪ್ರಭೆಯಿಂದ ಕೂಡಿದ್ದ ಶಂಖಗಳನ್ನು ಏಕಕಾಲದಲ್ಲಿ ಊದಿದರು. ಭಯಂಕರವಾದ ಧ್ವನಿಯಿಂದ ಒಟ್ಟಿಗೆ ಗರ್ಜನೆಮಾಡಿದರು. ಕುಂಭಕರ್ಣನನ್ನು ಎಚ್ಚರಗೊಳಿಸಲು ರಾಕ್ಷಸರು ಸಿಂಹನಾದಮಾಡುತ್ತಿದ್ದರು. ಭುಜಗಳನ್ನು ಬಲವಾಗಿ ತಟ್ಟಿಕೊಳ್ಳುತ್ತಿದ್ದರು. ಅವನ ಮೇಲೆ ಭಾರ

ವಾದ ಪದಾರ್ಥಗಳನ್ನು ಎಸೆಯುತ್ತಿದ್ದರು. ಕುಂಭಕರ್ಣನನ್ನು ಎಬ್ಬಿಸುವ ಸಲುವಾಗಿ ಆ ರಾಕ್ಷಸರೆಲ್ಲರೂ ಗಟ್ಟಿಯಾಗಿ ಕಿರುಚಾಡುತ್ತಿದ್ದರು. ಶಂಖಧ್ವನಿಗಳಿಂದ ಕೂಡಿದ ಭೇರೀ-ಪಟಹಶಬ್ದಗಳನ್ನೂ, ಭುಜತಟ್ಟುವ ಮತ್ತು ತೊಡೆ ತಟ್ಟುವ ಶಬ್ದಗಳನ್ನೂ, ಗರ್ಜನೆಗಳನ್ನೂ, ಸಿಂಹನಾದಗಳನ್ನೂ ಕೇಳಿ ಭಯಗೊಂಡ ಪಕ್ಷಿಗಳು ದಿಕ್ಕಾಪಾಲಾಗಿ ಹಾರತೊಡಗಿದುವು. ಆಕಾಶಕ್ಕೆ ಹಾರಿದ ಪಕ್ಷಿಗಳು ಸ್ವಲ್ಪಹೊತ್ತಿನಲ್ಲಿಯೇ ಕೆಳಕ್ಕೆ ಬಿದ್ದುಬಿಟ್ಟವು. ಮಹಾಕೋಲಾಹಲ ಧ್ವನಿಗಳಿಂದಲೂ ಕುಂಭಕರ್ಣನು ಎಚ್ಚರಗೊಳ್ಳದಿದ್ದಾಗ–ಎಲ್ಲ ರಾಕ್ಷಸರೂ ಅವನನ್ನು ಎಚ್ಚರಗೊಳಿಸಲು ಭುಷುಂಡೀ-ಮುಸಲ-ಗದಾಯುಧಗಳನ್ನು ತಂದರು. ಭೂಮಿಯಲ್ಲಿ ಮಲಗಿ ನಿದ್ರಿಸುತ್ತಿದ್ದ ಕುಂಭಕರ್ಣನನ್ನು ಪ್ರಚಂಡರಾದ ರಾಕ್ಷಸರು ಪರ್ವತದ ಶಿಖರಗಳಿಂದಲೂ, ಒನಕೆಗಳಿಂದಲೂ, ಗದೆಗಳಿಂದಲೂ, ಮುದ್ಗರಗಳಿಂದಲೂ, ಮುಷ್ಟಿಗಳಿಂದಲೂ ಅವನ ವಕ್ಷಃಸ್ಥಳದಲ್ಲಿ ಪ್ರಹರಿಸಿದರು. ಕ್ಷಣ-ಕ್ಷಣಕ್ಕೂ ವೇಗದಿಂದ ಹೊರಬರುತ್ತಿದ್ದ ಕುಂಭಕರ್ಣನ ನಿಃಶ್ವಾಸದ ಗಾಳಿಗೆ ಎದುರಾಗಿ ನಿಲ್ಲಲು ರಾಕ್ಷಸರಿಗೆ ಸಾಧ್ಯವಾಗಲಿಲ್ಲ. ಆಗ ವಸ್ತ್ರಗಳನ್ನು ಬಿಗಿಯಾಗಿ ಕಟ್ಟಿಕೊಂಡಿದ್ದ ಹತ್ತು ಸಾವಿರ ರಾಕ್ಷಸರು ಏಕಕಾಲದಲ್ಲಿ ಮೃದಂಗ, ಪಣವ-ಭೇರಿಗಳನ್ನು ಬಾರಿಸತೊಡಗಿದರು. ಶಂಖಗಳನ್ನು ಊದತೊಡಗಿದರು. ಕುಂಭವಾದ್ಯಗಳನ್ನು ಬಾರಿಸತೊಡಗಿದರು. ಹೀಗೆ ಕಪ್ಪಾದ ಅಂಜನಪರ್ವತದಂತೆಯೇ ಕಾಣುತ್ತಿದ್ದ ಕುಂಭಕರ್ಣನನ್ನು ರಾಕ್ಷಸರು ಎಚ್ಚರಗೊಳಿಸಲು ಪ್ರಯತ್ನಿಸುತ್ತಿದ್ದರು. ಪರ್ವತಶಿಖರಗಳಿಂದ ಪ್ರಹರಿಸಿದರೂ, ರಣವಾದ್ಯಗಳನ್ನು ನುಡಿಸುತ್ತಿದ್ದರೂ, ಗರ್ಜನೆಗಳನ್ನು ಮಾಡುತ್ತಿದ್ದರೂ ಕುಂಭಕರ್ಣನು ಎಚ್ಚರಗೊಳ್ಳದಿರಲು, ರಾಕ್ಷಸರು ಅವನನ್ನು ಎಬ್ಬಿಸುವ ಸಲುವಾಗಿ ಇನ್ನೂ ಗುರುತರವೂ ಮತ್ತು ದಾರುಣವೂ ಆದ ಪ್ರಯತ್ನಗಳನ್ನು ಮಾಡತೊಡಗಿದರು. ಕುದುರೆಗಳನ್ನೂ, ಒಂಟೆಗಳನ್ನೂ, ಕತ್ತೆಗಳನ್ನೂ, ಆನೆಗಳನ್ನೂ ಅವನ ಸುತ್ತಲೂ ನಿಲ್ಲಿಸಿ ದಂಡಗಳಿಂದಲೂ ಮತ್ತು ಅಂಕುಶಗಳಿಂದಲೂ ಅವನ್ನು ಪ್ರಹರಿಸಿ ಕುಂಭಕರ್ಣನ ಮೇಲೆ ಹತ್ತಿಸಿದರು. ಶಕ್ತಿಮೀರಿ ರಣವಾದ್ಯಗಾರರು ಭೇರೀ-ಶಂಖ-ಮೃದಂಗಗಳನ್ನು ಬಾರಿಸಿದರು. ಮುಳ್ಳಿನಿಂದ ಕೂಡಿದ ದೊಣ್ಣೆಗಳಿಂದಲೂ ಮುದ್ಗರ-ಮುಸಲಗಳಿಂದಲೂ ಅವನ ಶರೀರದ ಎಲ್ಲೆಡೆಗಳಲ್ಲೂ ಪ್ರಹರಿಸಿದರು. ಆ ಶಬ್ದದಿಂದ ಪರ್ವತ-

ವನಗಳಿಂದ ಕೂಡಿದ ಲಂಕೆಯೇ ತುಂಬಿಹೋಯಿತು. ಆದರೆ ಕುಂಭಕರ್ಣನು ಮಾತ್ರ ಎಚ್ಚರಗೊಳ್ಳಲಿಲ್ಲ. ಸುತ್ತಲೂ ಯಥಾಯೋಗ್ಯವಾಗಿ ಇಡಲ್ಪಟ್ಟಿದ್ದ ಸುಂದರವಾದ ಮತ್ತು ಸುವರ್ಣಮಯವಾದ ದಂಡಗಳಿಂದ ಒಂದು ಸಾವಿರ ಭೇರಿಗಳನ್ನು ಏಕಕಾಲದಲ್ಲಿ ಬಾರಿಸಿದರು. ಇಷ್ಟುಮಾಡಿದರೂ ಅತಿನಿದ್ರನಾದ ಶಾಪಾಭಿಭೂತನಾಗಿದ್ದ ಕುಂಭಕರ್ಣನು ಎಚ್ಚರಗೊಳ್ಳದಿರಲು ರಾಕ್ಷಸರಿಗೆ ಬಹಳ ಕೋಪಬಂದಿತು. ಭಯಂಕರಪರಾಕ್ರಮಿಗಳಾದ ಕ್ರೋಧಾಭಿಭೂತ ರಾಗಿದ್ದ ರಾಕ್ಷಸರು ಅವನನ್ನು ಎಚ್ಚರಗೊಳಿಸುವ ಸಲುವಾಗಿ ಮತ್ತೊಂದು ರೀತಿಯಲ್ಲಿ ತಮ್ಮ ಪರಾಕ್ರಮವನ್ನು ಪ್ರಕಟಗೊಳಿಸಿದರು. ಆ ರಾಕ್ಷಸರಲ್ಲಿ ಕೆಲವರು ಭೇರಿಗಳನ್ನು ಬಾರಿಸುತ್ತಿದ್ದರು. ಕೆಲವರು ಗಟ್ಟಿಯಾಗಿ ಗರ್ಜನೆ ಗಳನ್ನು ಮಾಡುತ್ತಿದ್ದರು. ಕೆಲವರು ಅವನ ಕೂದಲುಗಳನ್ನು ಕೀಳುತ್ತಿದ್ದರು. ಕೆಲವರು ಕಿವಿಗಳನ್ನು ಕಚ್ಚುತ್ತಿದ್ದರು. ಕೆಲವರು ನೂರು ಬಿಂದಿಗೆ ನೀರನ್ನು ಎರಡು ಕಿವಿಗಳಲ್ಲಿಯೂ ಸುರಿಯುತ್ತಿದ್ದರು. ಆದರೂ ಮಹಾನಿದ್ರಾವಶ ನಾಗಿದ್ದ ಕುಂಭಕರ್ಣನು ಸ್ವಲ್ಪವಾದರೂ ಅಲುಗಾಡಲೂ ಇಲ್ಲ. ಮುಳ್ಳಿನಿಂದ ಕೂಡಿದ ಮುದ್ಗರಗಳನ್ನು ಹಿಡಿದಿದ್ದ ಬಲಿಷ್ಠರಾಗಿದ್ದ ಕೆಲವರು ರಾಕ್ಷಸರು ಕುಂಭಕರ್ಣನ ತಲೆ, ಎದೆ ಮತ್ತು ಅಂಗಾಂಗಗಳಲ್ಲಿಯೂ ಸತತವಾಗಿ ಪ್ರಹರಿ ಸುತ್ತಿದ್ದರು. ಹಗ್ಗಗಳಿಂದ ಕಟ್ಟಲ್ಪಟ್ಟಿದ್ದ ಶತಘ್ನಿಗಳನ್ನು ಅವನ ಶರೀರದ ಎಲ್ಲ ಕಡೆಗಳಲ್ಲಿಯೂ ಎಳೆದಾಡಿದರು. ಆದರೂ ಮಹಾಕಾಯನಾದ ರಾಕ್ಷಸನು ಎಚ್ಚರಗೊಳ್ಳಲಿಲ್ಲ. ಅನಂತರ ಕಡೆಯದಾಗಿ ಸಾವಿರ ಆನೆಗಳನ್ನು ಅವನ ಶರೀರದ ಮೇಲೆ ಏಕಕಾಲದಲ್ಲಿ ನುಗ್ಗಿಸಿದರು. ಆಗಲೇ ಅವನಿಗೆ ಏನೋ ಮುಟ್ಟಿದಂತಾಗಿ ಎಚ್ಚರಗೊಂಡನು.

ಪರ್ವತದ ಶಿಖರಗಳನ್ನೂ ವೃಕ್ಷಗಳನ್ನೂ ರಾಕ್ಷಸರು ಅವನ ಮೇಲೆ ತಂದುಹಾಕುತ್ತಿದ್ದರೂ ಕುಂಭಕರ್ಣನಿಗೆ ಅವುಗಳ ಮೇಲೆ ಲಕ್ಷ್ಯವೇ ಇರಲಿಲ್ಲ. ಆ ಎಲ್ಲ ಮಹಾಪ್ರಹಾರಗಳನ್ನೂ ಅವನು ಲೆಕ್ಕಿಸಲೇ ಇಲ್ಲ. ಆದರೆ ಸಾವಿರಾರು ಆನೆಗಳು ಅವನ ಮೇಲೆ ಓಡಾಡಿದಾಗ ಅದರಿಂದವನು ಎಚ್ಚರಗೊಂಡು ಕೂಡಲೇ ನಿದ್ರಾಭಂಗದಿಂದಲೂ ಹಸಿವಿನಿಂದಲೂ ಆಕಳಿಸುತ್ತಾ ಮೇಲೆದ್ದು ಕುಳಿತನು. ಅವನ ಎರಡು ತೋಳುಗಳೂ ಆನೆಗಳ ಶರೀರಗಳಂತೆಯೂ ಪರ್ವತಗಳ ಶಿಖರಗಳಂತೆಯೂ ಕಾಣುತ್ತಿದ್ದುವು. ವಜ್ರಾಯುಧವನ್ನು ಗೆದ್ದಿದ್ದ

ಆ ತನ್ನ ಎರಡು ತೋಳುಗಳನ್ನೂ ಮುಂದಕ್ಕೆ ಚಾಚಿಕೊಂಡಿದ್ದ, ಬಡಬಾಗ್ನಿಗೆ ಸಮಾನವಾಗಿ ಕಾಣುತ್ತಿದ್ದ ಮುಖವನ್ನು ತೆರೆದುಕೊಂಡಿದ್ದ ನಿಶಾಚರನು ವಿಕಾರಸ್ವರದಲ್ಲಿ ಆಕಳಿಸಿದನು. ಆಕಳಿಸುತ್ತಿದ್ದಾಗ ಪಾತಾಲಸದೃಶವಾಗಿದ್ದ ಕುಂಭಕರ್ಣನ ಮುಖವು ಮೇರುಶಿಖರದಲ್ಲಿ ಆಗ ತಾನೇ ಉದಯಿಸಿದ ಸೂರ್ಯನಂತೆಯೇ ಕಾಣುತ್ತಿದ್ದಿತು. ಎಚ್ಚರಗೊಂಡ ಮಹಾಬಲಿಷ್ಠನಾದ ಕುಂಭಕರ್ಣನು ಹಾಗೆ ಆಕಳಿಸುತ್ತಿದ್ದಾಗ ಅವನ ನಿಃಶ್ವಾಸದಿಂದ ಹೊರಬಂದ ಗಾಳಿಯು ಪರ್ವತದಲ್ಲಿ ಬೀಸುವ ಗಾಳಿಗೆ ಸಮಾನವಾಗಿದ್ದಿತು. ಆಗತಾನೇ ಎಚ್ಚರಗೊಂಡ ಕುಂಭಕರ್ಣನ ಆ ಘೋರರೂಪವು ಪ್ರಳಯಕಾಲದಲ್ಲಿ ಸರ್ವಪ್ರಾಣಿಗಳನ್ನೂ ಸುಟ್ಟುಹಾಕುವ ಆಕಾಂಕ್ಷೆಯಿಂದ ಕೂಡಿರುವ ಕಾಲ ನಂತೆಯೇ ಇದ್ದಿತು. ಅವನ ದೊಡ್ಡ-ದೊಡ್ಡ ಕಣ್ಣುಗಳು ಪ್ರಜ್ವಲಿಸುವ ಅಗ್ನಿಗೆ ಮತ್ತು ವಿದ್ಯುತ್ತಿಗೆ ಸಮಾನವಾದ ಮಹಾಗ್ರಹಗಳಂತೆಯೇ ಕಾಣುತ್ತಿದ್ದುವು.

ತನ್ನ ಬಳಿಯಲ್ಲಿಯೇ ರಾಕ್ಷಸರು ರಾಶಿಹಾಕಿದ್ದ ವಿಧ-ವಿಧವಾದ ಭಕ್ಷ್ಯ ಗಳನ್ನೂ ವರಾಹ-ಮಹಿಷಗಳನ್ನೂ ನೋಡಿ ಮಹಾಬಲನಾದ ಕುಂಭ ಕರ್ಣನು ಕ್ಷಣಮಾತ್ರದಲ್ಲಿ ಎಲ್ಲವನ್ನೂ ತಿಂದುಮುಗಿಸಿಬಿಟ್ಟನು. ಇಂದ್ರಶತ್ರು ವಾದ, ಬಹಳವಾಗಿ ಹಸಿದಿದ್ದ ಕುಂಭಕರ್ಣನು ಹೊಟ್ಟೆತುಂಬುವಷ್ಟು ಮಾಂಸ ವನ್ನು ಭಕ್ಷಿಸಿದನು. ಬಾಯಾರಿಕೆಯು ತೀರುವಷ್ಟು ರಕ್ತವನ್ನು ಕುಡಿದನು. ರಕ್ತ-ಮಾಂಸಗಳನ್ನು ಯಥೇಚ್ಛವಾಗಿ ತಿಂದುತೇಗಿದ ನಂತರ ಕುಂಭಕರ್ಣನು ತೃಪ್ತನಾಗಿರುವನೆಂದು ರಾಕ್ಷಸರು ಭಾವಿಸಿ ನೆಗೆದುಕೊಂಡು ಅವನ ಮುಂದೆ ಬಂದು ತಲೆಬಾಗಿ ನಮಸ್ಕರಿಸಿ ಅವನನ್ನು ಸುತ್ತುವರಿದು ನಿಂತರು. ಆ ಸಮಯದಲ್ಲಿ ಅವನ ಕಣ್ಣುಗಳು ನಿದ್ರೆಯ ಕಾರಣದಿಂದಾಗಿ ಅಪ್ರಸನ್ನ ವಾಗಿಯೂ ಮತ್ತು ಮಲಿನವಾಗಿಯೂ ಇದ್ದುವು. ಎಲ್ಲ ಕಡೆಗಳಲ್ಲಿ ದೃಷ್ಟಿ ಯನ್ನು ಹಾಯಿಸುತ್ತಾ ಕುಂಭಕರ್ಣನು ಸುತ್ತಲೂ ನಿಂತಿದ್ದ ರಾಕ್ಷಸರನ್ನು ನೋಡಿದನು. ರಾಕ್ಷಸಶ್ರೇಷ್ಠನಾದ ಕುಂಭಕರ್ಣನು ಎಲ್ಲ ರಾಕ್ಷಸರನ್ನೂ ಸಂತೈಸಿದನು. ವಿಸ್ಮಿತನಾಗಿದ್ದ ಅವನು ತನ್ನನ್ನು ಎಚ್ಚರಗೊಳಿಸಲು ಕಾರಣ ವನ್ನು ರಾಕ್ಷಸರನ್ನು ಪ್ರಶ್ನಿಸಿದನು.

“ರಾಕ್ಷಸಶ್ರೇಷ್ಠರೇ! ನೀವೆಲ್ಲರೂ ಸೇರಿ ನನ್ನನ್ನು ಆದರಪೂರ್ವಕವಾಗಿ ಏಕೆ ಎಚ್ಚರಗೊಳಿಸಿದಿರಿ? ರಾಜನು ಕುಶಲನಾಗಿರುವನಲ್ಲವೇ? ನಮಗೆ

ಯಾರಿಂದಲೂ ಯಾವ ವಿಧವಾದ ಭಯವೂ ಇಲ್ಲವಲ್ಲವೇ? ಅಥವಾ ಹೀಗೂ ಇರಬಹುದು. ಬೇರೆಯವರಿಂದ ನಮಗೆ ಮಹತ್ತರವಾದ ಭಯವು ಬಂದೊದಗಿದೆ. ಅದರ ನಿವಾರಣೆಗಾಗಿಯೇ ನೀವೆಲ್ಲರೂ ಸೇರಿ ನನ್ನನ್ನು ಎಚ್ಚರಗೊಳಿಸಿರಬಹುದು, ಅಲ್ಲವೇ? ಈಗಲೇ ನಾನು ರಾಕ್ಷಸರಾಜನಿಗೆ ಸನ್ನಿಹಿತವಾಗಿರುವ ಭಯವನ್ನು ಬುಡಸಹಿತವಾಗಿ ಕಿತ್ತುಹಾಕುತ್ತೇನೆ. ಮಹೇಂದ್ರನನ್ನಾದರೂ ಸೀಳಿಹಾಕುತ್ತೇನೆ. ಅಗ್ನಿಯನ್ನಾದರೂ ಶೀತಲಗೊಳಿಸುತ್ತೇನೆ. ಅಲ್ಪ-ಸ್ವಲ್ಪ ಕಾರಣಗಳಿಗಾಗಿ ಮಲಗಿದ್ದ ನನ್ನನ್ನು ರಾಜನು ಎಚ್ಚರಗೊಳಿಸಲು ಹೇಳುತ್ತಿರಲಿಲ್ಲ. ಪ್ರಬಲವಾದ ಕಾರಣವೇ ಇರಬೇಕು. ಆದುದರಿಂದ ನನ್ನನ್ನು ಎಚ್ಚರಗೊಳಿಸಲು ಕಾರಣವೇನೆಂಬುದನ್ನು ಯಥಾವತ್ತಾಗಿ ಹೇಳಿರಿ."

ಹೀಗೆ ಪ್ರಶ್ನಿಸಿದ, ಶತ್ರುದಮನನಾದ, ಕ್ರುದ್ಧನಾಗಿದ್ದ ಕುಂಭಕರ್ಣನಿಗೆ ರಾವಣನ ಸಚಿವನಾದ ಯೂಪಾಕ್ಷನೆಂಬ ರಾಕ್ಷಸನು ಕೈಮುಗಿದುಕೊಂಡು ಹೇಳಿದನು :

ನ ನೋ ದೈವಕೃತಂ ಕಿಂಚಿದ್ಭಯಮಸ್ತಿ ಕದಾಚನ ।
ಮಾನುಷಾನ್ನೋ ಭಯಂ ರಾಜಂಸ್ತುಮುಲಂ ಸಂಪ್ರಬಾಧತೇ ॥

"ಮಹಾರಾಜ! ದೇವತೆಗಳ ಸಂಬಂಧವಾಗಿ ನಮಗೆ ಯಾವಾಗಲೂ ಭಯವಿಲ್ಲ. ಈ ಸಮಯದಲ್ಲಿ ಒಬ್ಬ ಮನುಷ್ಯನಿಂದ ನಮಗೆ ಭಯವುಂಟಾಗಿ ನಮ್ಮನ್ನು ಬಾಧಿಸುತ್ತಿದೆ.

ಈಗ ಮನುಷ್ಯನೊಬ್ಬನಿಂದ ನಮಗೆ ಭಯವುಂಟಾಗಿರುವಂತೆ–ಈ ಹಿಂದೆ ನಮಗೆ ದೈತ್ಯರಿಂದಾಗಲೀ ದಾನವರಿಂದಾಗಲೀ ಇಂತಹ ಭಯವುಂಟಾಗಿರಲಿಲ್ಲ. ಪರ್ವತಸದೃಶರಾದ ವಾನರಸೈನಿಕರು ಈಗ ಲಂಕಾಪಟ್ಟಣವನ್ನು ಮುತ್ತಿಗೆಹಾಕಿದ್ದಾರೆ. ಸೀತಾಪಹರಣದಿಂದ ಸಂತಪ್ತನಾಗಿರುವ ರಾಮನಿಂದ ನಮಗೆ ಘೋರವಾದ ಭಯವುಂಟಾಗಿದೆ. ಈ ಹಿಂದೆ ಒಬ್ಬನೇ ವಾನರನು ಲಂಕಾಪಟ್ಟಣವನ್ನೇ ಸುಟ್ಟುಹಾಕಿದನು. ಗಜಸೈನಿಕರ ಮತ್ತು ಅನುಯಾಯಿಗಳ ಸಮೇತನಾಗಿ ಅಕ್ಷಕುಮಾರನನ್ನು ಆ ವಾನರನು ಸಂಹರಿಸಿದನು.

ಸೂರ್ಯಸಮಾನತೇಜಸ್ವಿಯಾದ ಶ್ರೀರಾಮನು ದೇವಕಂಟಕನಾದ ರಾಕ್ಷಸರ ಒಡೆಯನಾದ ಪೌಲಸ್ತ್ಯನನ್ನೇ ಪರಾಜಯಗೊಳಿಸಿ ಜೀವಸಹಿತವಾಗಿ ಲಂಕೆಗೆ ಕಳುಹಿಸಿಕೊಟ್ಟಿರುವನು.

ದೇವತೆಗಳಾಗಲೀ ದೈತ್ಯ-ದಾನವರಾಗಲೀ ರಾವಣನ ವಿಷಯದಲ್ಲಿ ಯಾವ ಕಾರ್ಯವನ್ನು ಮಾಡಲು ಸಾಧ್ಯವಾಗಲಿಲ್ಲವೋ ಮನುಷ್ಯಮಾತ್ರನಾದ ರಾಮನು ಆ ಕಾರ್ಯವನ್ನು ಮಾಡಿರುವನು. ಪ್ರಾಣಾಪಹರಣ ಮಾಡದೇ ಬಿಟ್ಟಿರುವನು."

ಅಣ್ಣನು ಯುದ್ಧದಲ್ಲಿ ಪರಾಜಿತನಾದನೆಂಬ ಯೂಪಾಕ್ಷನ ಮಾತನ್ನು ಕೇಳಿ ಕುಂಭಕರ್ಣನ ಕಣ್ಣುಗಳು ತಿರುಗತೊಡಗಿದುವು. ಯೂಪಾಕ್ಷನಿಗೆ ಹೇಳಿದನು :

"ಯೂಪಾಕ್ಷ! ನಾನೀಗಲೇ ವಾನರಸೈನ್ಯವನ್ನೂ, ರಾಮ-ಲಕ್ಷ್ಮಣರನ್ನೂ ಜಯಿಸಿ ಅನಂತರವೇ ರಾವಣನನ್ನು ನೋಡುತ್ತೇನೆ. ವಾನರರ ರಕ್ತ-ಮಾಂಸಗಳಿಂದ ರಾಕ್ಷಸರನ್ನು ತೃಪ್ತಿಗೊಳಿಸುತ್ತೇನೆ. ರಾಮ-ಲಕ್ಷ್ಮಣರ ರಕ್ತವನ್ನು ನಾನೇ ಕುಡಿದುಬಿಡುತ್ತೇನೆ."

ಕುಂಭಕರ್ಣನು ಹೇಳಿದ ರೋಷ-ಕೋಪಗಳಿಂದ ಕೂಡಿದ್ದ ಅಹಂಕಾರ ಪೂರ್ಣವಾಗಿದ್ದ ಮಾತನ್ನು ಕೇಳಿ ರಾಕ್ಷಸಯೋಧರಲ್ಲಿ ಪ್ರಧಾನಭೂತನಾದ ಮಹೋದರನು ಕೈಮುಗಿದುಕೊಂಡು ಹೇಳಿದನು :

"ಮಹಾಬಾಹುವೇ! ಮೊದಲು ನೀನು ರಾವಣನನ್ನು ನೋಡು. ಅವನ ಸಲಹೆಯನ್ನು ಕೇಳಿ ಗುಣ-ದೋಷಗಳನ್ನು ವಿಮರ್ಶಿಸಿ ನಂತರ ಯುದ್ಧಮಾಡಿ ಶತ್ರುಗಳನ್ನು ಪರಾಜಯಗೊಳಿಸು."

ಮಹೋದರನ ಆ ಮಾತನ್ನು ಕೇಳಿ ಮಹಾತೇಜಸ್ವಿಯಾದ, ಮಹಾ ಬಲನಾದ ಕುಂಭಕರ್ಣನು ರಾಕ್ಷಸರಿಂದ ಪರಿವೃತನಾಗಿ ರಾವಣನ ಅರಮನೆಗೆ ಹೋಗಲು ಸಮ್ಮತಿಸಿದನು. ಭಯಂಕರರೂಪನೂ, ಭಯಂಕರಪರಾ ಕ್ರಮಿಯೂ, ಭಯಂಕರವಾದ ಕಣ್ಣುಗಳಿಂದ ಕೂಡಿದವನೂ ಆದ ಕುಂಭ ಕರ್ಣನನ್ನು ಎಚ್ಚರಗೊಳಿಸಿದ ರಾಕ್ಷಸರು ತ್ವರಿತವಾಗಿ ರಾವಣನ ಅರಮನೆಗೆ ತೆರಳಿ ಶ್ರೇಷ್ಠವಾದ ಸಿಂಹಾಸನದಲ್ಲಿ ಕುಳಿತಿದ್ದ ರಾವಣನ ಬಳಿಗೆ ಹೋಗಿ ಎಲ್ಲರೂ ಕೈಮುಗಿದುಕೊಂಡು ಹೇಳಿದರು :

"ರಾಕ್ಷಸೇಶ್ವರನೇ! ನಿನ್ನ ತಮ್ಮನಾದ ಕುಂಭಕರ್ಣನು ನಿದ್ರೆಯಿಂದ

ಎಚ್ಚರಗೊಂಡಿರುವನು. ಅವನು ನೇರವಾಗಿ ಯುದ್ಧಭೂಮಿಗೇ ಹೋಗಲೋ ಅಥವಾ ಇಲ್ಲಿ ಅವನನ್ನು ನೀನು ಕಾಣಬಯಸುವೆಯೋ?"

ರಾವಣನು ಪರಮಹೃಷ್ಟನಾಗಿ ಅಲ್ಲಿದ್ದ ರಾಕ್ಷಸರಿಗೆ ಹೇಳಿದನು :

"ರಾಕ್ಷಸರೇ! ನಾನು ಕುಂಭಕರ್ಣನನ್ನು ನೋಡಲು ಅಪೇಕ್ಷಿಸುತ್ತೇನೆ. ಅವನನ್ನು ಯಥಾಯೋಗ್ಯವಾಗಿ ಸತ್ಕರಿಸಿರಿ."

ರಾವಣಚೋದಿತರಾದ ರಾಕ್ಷಸರು ಹಾಗೆಯೇ ಆಗಲೆಂದು ಹೇಳಿ ಕುಂಭಕರ್ಣನ ಅರಮನೆಗೆ ಬಂದು ಹೇಳಿದರು :

"ಪ್ರಭುವೇ! ಸಮಸ್ತರಾಕ್ಷಸರಿಗೂ ಶ್ರೇಷ್ಠನಾದ ರಾವಣನು ನಿನ್ನನ್ನು ನೋಡಲು ಬಯಸಿದ್ದಾನೆ. ನೀನು ಅವನಲ್ಲಿಗೆ ಹೋಗುವ ಮನಸ್ಸು ಮಾಡು ಮತ್ತು ಅವನನ್ನು ಹರ್ಷಗೊಳಿಸು."

ಶತ್ರುಗಳಿಂದ ಎದುರಿಸಲು ಅಸಾಧ್ಯನಾದ ಕುಂಭಕರ್ಣನು ಅಣ್ಣನ ಆಜ್ಞೆಯನ್ನು ತಿಳಿದು ಹಾಗೆಯೇ ಆಗಲೆಂದು ಹೇಳಿ ಹಾಸಿಗೆಯಿಂದ ಮೇಲೆದ್ದನು.

ಪರಮಹರ್ಷಿತನಾದ ಕುಂಭಕರ್ಣನು ಮುಖವನ್ನು ತೊಳೆದು ಸ್ನಾನ ಮಾಡಿ ಅಲಂಕೃತನಾಗಿ ಬಲವರ್ಧಕವಾದ ಪಾನೀಯವನ್ನು ಶೀಘ್ರವಾಗಿ ತರುವಂತೆ ಸೇವಕರಿಗೆ ಆಜ್ಞಾಪಿಸಿದನು. ರಾವಣನ ಆಜ್ಞೆಯಂತೆ ರಾಕ್ಷಸರು ಹಲವಾರು ಬಗೆಯ ಮದ್ಯದ ಗಡಿಗೆಗಳನ್ನು ಅವಸರದಿಂದ ಕುಂಭಕರ್ಣನಿಗಾಗಿ ತಂದರು. ರಾವಣಾನುಜನು ಬಲವರ್ಧಕವಾದ ಎರಡು ಸಾವಿರ ಗಡಿಗೆಗಳಷ್ಟು ಮದ್ಯವನ್ನು ಕುಡಿದು ರಾವಣನ ಅರಮನೆಗೆ ಹೊರಟನು. ಮದ್ಯಪಾನದಿಂದಾಗಿ ಅವನು ಸ್ವಲ್ಪ ಉತ್ಕಟನೂ, ಮತ್ತನೂ, ತೇಜೋಬಲಸಮಾಯುಕ್ತನೂ ಆದನು. ಕ್ರುದ್ಧನಾಗಿದ್ದ ಕುಂಭಕರ್ಣನು ಪ್ರಳಯಕಾಲದಲ್ಲಿ ಸರ್ವವನ್ನೂ ವಿನಾಶಗೊಳಿಸುವ ಯಮರಾಜನಂತೆಯೇ ಕಾಣುತ್ತಿದ್ದನು. ರಾಕ್ಷಸರ ಸೈನ್ಯದಿಂದ ಪರಿವೃತನಾಗಿದ್ದ ಅವನು ಅಣ್ಣನ ಅರಮನೆಗೆ ಹೋಗುತ್ತಿದ್ದಾಗ ಭೂಮಿಯನ್ನು ತನ್ನ ಪದನ್ಯಾಸಗಳಿಂದ ನಡುಗಿಸುತ್ತಿದ್ದನು. ಸಾವಿರ ಕಿರಣಗಳ ಸೂರ್ಯನು ಕಿರಣಗಳಿಂದ ಭೂಮಿಯನ್ನು ಬೆಳಗುವಂತೆ–ರಾಜಮಾರ್ಗವನ್ನು ತನ್ನ ಶರೀರಕಾಂತಿಯಿಂದ ಬೆಳಗುತ್ತಾ–ಇಂದ್ರನು ಬ್ರಹ್ಮನ ಭವನಕ್ಕೆ ಹೋಗುವಂತೆ–ಕುಂಭಕರ್ಣನು ಕೈಮುಗಿದುಕೊಂಡು ರಾವಣನ

ಅರಮನೆಗೆ ಹೋದನು. ರಾಜಮಾರ್ಗದಲ್ಲಿ ಹೋಗುತ್ತಿದ್ದ, ಪರ್ವತಶೃಂಗಕ್ಕೆ ಸದೃಶನಾದ, ಶತ್ರುಘಾತಿಯಾದ, ಮಹಾಕಾಯನಾದ ಕುಂಭಕರ್ಣನನ್ನು ನೋಡಿ ನಗರದ ಹೊರವಲಯದಲ್ಲಿ ದಳನಾಯಕರೊಡನೆ ನಿಂತಿದ್ದ ವಾನರ ಸೈನಿಕರು ಭಯಗೊಂಡರು. ವಾನರಸೈನಿಕರಲ್ಲಿ ಕೆಲವರು ಕುಂಭಕರ್ಣನನ್ನು ಕಂಡು ಭಯಪೀಡಿತರಾಗಿ ಲೋಕಶರಣ್ಯನಾದ ಶ್ರೀರಾಮನನ್ನು ಶರಣು ಹೊಂದಿದರು. ಕೆಲವರು ವ್ಯಥಿತರಾಗಿ ಕೆಳಕ್ಕೆ ಬಿದ್ದರು. ಕೆಲವರು ಭಯದಿಂದ ಎಲ್ಲ ದಿಕ್ಕುಗಳಿಗೂ ಓಡಿಹೋದರು. ಭಯಪೀಡಿತರಾದ ಕೆಲವರು ನೆಲದ ಮೇಲೆಯೇ ಮಲಗಿಬಿಟ್ಟರು.

ಪರ್ವತಶಿಖರದಂತೆ ಎತ್ತರವಾಗಿದ್ದ, ಕಿರೀಟವನ್ನು ಧರಿಸಿದ್ದ, ತನ್ನದೇ ಆದ ತೇಜಸ್ಸಿನಿಂದ ಸೂರ್ಯನನ್ನೇ ಹೋಲುತ್ತಿದ್ದ, ವಿಶಾಲಕಾಯನಾಗಿದ್ದ, ಅದ್ಭುತರೂಪನಾಗಿದ್ದ ಕುಂಭಕರ್ಣನನ್ನು ನೋಡಿ ವಾನರಸೈನಿಕರು ಭಯ ಪೀಡಿತರಾಗಿ ಚಲ್ಲಾಪಿಲ್ಲಿಯಾಗಿ ಓಡಿಹೋದರು.

೬೦ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೬೧ನೆಯ ಸರ್ಗ

ವಿಭೀಷಣನು ಶ್ರೀರಾಮನಿಗೆ ಕುಂಭಕರ್ಣನ ಪರಿಚಯ ಮಾಡಿಕೊಟ್ಟುದು : ಶ್ರೀರಾಮನ ಆಜ್ಞೆಯಂತೆ ವಾನರಸೈನಿಕರು ಲಂಕಾಪಟ್ಟಣದ ಹೆಬ್ಬಾಗಿಲುಗಳನ್ನು ಆಕ್ರಮಿಸಿದುದು

ತತೋ ರಾಮೋ ಮಹಾತೇಜಾ ಧನುರಾದಾಯ ವೀರ್ಯವಾನ್ ।
ಕಿರೀಟಿನಂ ಮಹಾಕಾಯಂ ಕುಮ್ಭಕರ್ಣಂ ದದರ್ಶ ಹ ॥೧॥

ಬಳಿಕ ವೀರ್ಯವಂತನಾದ ಮಹಾತೇಜಸ್ವಿಯಾದ ಶ್ರೀರಾಮನು ಧನುಸ್ಸನ್ನು ಕೈಯಲ್ಲಿ ಹಿಡಿದು, ಕಿರೀಟವನ್ನು ಧರಿಸಿ ರಾವಣನ ಅರಮನೆಗೆ ಹೋಗುತ್ತಿದ್ದ, ಮಹಾಕಾಯನಾದ ಕುಂಭಕರ್ಣನನ್ನು ನೋಡಿದನು.

ಪರ್ವತದಂತೆಯೇ ಕಾಣುತ್ತಿದ್ದ, ಹಿಂದೆ ತ್ರಿವಿಕ್ರಮಾವತಾರದಲ್ಲಿ ಆಕಾಶವನ್ನೇ ತನ್ನ ಕಾಲಿನಿಂದ ಅಳೆದ ನಾರಾಯಣನಂತಿದ್ದ, ನೀರಿನಿಂದ

ಕೂಡಿದ ಕಾಳಮೇಘದೋಪಾದಿಯಲ್ಲಿದ್ದ, ಸುವರ್ಣಮಯವಾದ ಭುಜ ಕೀರ್ತಿಗಳಿಂದ ಭೂಷಿತನಾಗಿದ್ದ, ರಾಕ್ಷಸಶ್ರೇಷ್ಠನಾದ ಕುಂಭಕರ್ಣನನ್ನು ನೋಡಿ ವಾನರರ ದೊಡ್ಡ ಸೈನ್ಯವು ಪುನಃ ಓಡತೊಡಗಿತು. ಸೇನೆಯು ಹಿಮ್ಮೆಟ್ಟುತ್ತಿರುವುದನ್ನೂ, ಪ್ರವರ್ಧಮಾನನಾದ ಕುಂಭಕರ್ಣನನ್ನೂ ನೋಡಿ ಶ್ರೀರಾಮನು ವಿಸ್ಮಿತನಾಗಿ ವಿಭೀಷಣನನ್ನು ಪ್ರಶ್ನಿಸಿದನು :

"ವಿಭೀಷಣ! ಪರ್ವತದಂತೆ ವಿಶಾಲಕಾಯನಾದ, ಕೆಂಪು ಬೆರೆತ ಹಳದೀ ಬಣ್ಣದ ಕಣ್ಣುಗಳನ್ನು ಹೊಂದಿರುವ, ಸುವರ್ಣಖಚಿತವಾದ ಕಿರೀಟ ವನ್ನು ಧರಿಸಿ ಮಿಂಚಿನಿಂದ ಕೂಡಿದ ಕಾಳಮೇಘದಂತೆಯೇ ಲಂಕೆಯಲ್ಲಿ ಕಾಣುತ್ತಿರುವ ಇವನು ಯಾರು? ಈ ಭೂಮಂಡಲದಲ್ಲಿ ಏಕಮಾತ್ರ ಧ್ವಜಸ್ತಂಭದಂತೆ ಇವನು ಕಾಣುತ್ತಿದ್ದಾನೆ. ಇವನನ್ನು ನೋಡಿದೊಡನೆಯೇ ಎಲ್ಲ ವಾನರಸೈನಿಕರೂ ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದಾರೆ. ಹೇಳು ; ವಿಭೀಷಣ! ಈ ಮಹಾಪುರುಷನಾರು? ಇವನೇನು ರಾಕ್ಷಸನೇ ಅಥವಾ ಅಸುರನೇ? ಇಂತಹ ಒಂದು ಪರಮಾದ್ಭುತವಾದ ಪ್ರಾಣಿಯನ್ನು ನಾನಿದುವರೆಗೂ ನೋಡಿಯೇ ಇಲ್ಲ."

ಅನಾಯಾಸವಾಗಿ ಯಾವುದೇ ಮಹತ್ತರವಾದ ಕಾರ್ಯಗಳನ್ನಾದರೂ ಮಾಡುವ ರಾಜಪುತ್ರನಾದ ಶ್ರೀರಾಮನು ಹೀಗೆ ಪ್ರಶ್ನಿಸಲು ಮಹಾಪ್ರಾಜ್ಞನಾದ ವಿಭೀಷಣನು ಕಾಕುತ್ಸ್ಥನಿಗೆ ಹೇಳಿದನು :

"ರಾಘವ! ಇವನು ವಿಶ್ರವಸನ ಮಗನಾದ ಪ್ರತಾಪವಂತನಾದ ಕುಂಭಕರ್ಣನು. ಯುದ್ಧದಲ್ಲಿ ಇವನು ಇಂದ್ರ-ಯಮರನ್ನೂ ಪರಾಜಯ ಗೊಳಿಸಿರತಕ್ಕವನು. ಇಂತಹ ಪರಮಾದ್ಭುತವಾದ ಶರೀರಪ್ರಮಾಣವಿರು ವವನು ರಾಕ್ಷಸರಲ್ಲಿ ಮತ್ತಾರೂ ಇಲ್ಲ. ಇವನು ಯುದ್ಧದಲ್ಲಿ ದೇವ-ದಾನವ-ಯಕ್ಷ-ರಾಕ್ಷಸ-ನಾಗ-ಗಂಧರ್ವ-ವಿದ್ಯಾಧರ-ಕಿನ್ನರರನ್ನೂ ಸಾವಿರಾರು ಬಾರಿ ಪರಾಜಯಗೊಳಿಸಿದ್ದಾನೆ. ಹಲವುಬಾರಿ ಯುದ್ಧಮಾಡಿದರೂ ಶೂಲಪಾಣಿ ಯಾದ, ವಿರೂಪಾಕ್ಷನಾದ, ಮಹಾಬಲನಾದ ಕುಂಭಕರ್ಣನನ್ನು ಸಂಹರಿ ಸಲು ದೇವತೆಗಳಿಗೆ ಸಾಧ್ಯವಾಗಲಿಲ್ಲ. ಇವನೊಬ್ಬ ಕಾಲನೇ ಇರಬಹುದೆಂದು ಅವರೆಲ್ಲರೂ ವಿಮೋಹಿತರಾಗಿದ್ದಾರೆ. ಇತರ ರಾಕ್ಷಸರಿಗಾದರೋ ವರದಾನದ ಬಲವಿರಬಹುದು. ಆದರೆ ಇವನು ಮಾತ್ರ ಸ್ವಭಾವದಿಂದಲೇ

ಮಹಾತೇಜಸ್ವಿಯೂ ಮಹಾಬಲಿಷ್ಠನೂ ಆಗಿದ್ದಾನೆ. ಮಹಾಕಾಯನಾದ ಈ ರಕ್ಕಸನು ಹುಟ್ಟಿದ ಕೂಡಲೇ ಹಸಿವಿನಿಂದ ಪೀಡಿತನಾಗಿ ಹಸಿವನ್ನು ಹಿಂಗಿಸಿಕೊಳ್ಳಲು ಹಲವಾರು ಸಾವಿರ ಪ್ರಾಣಿಗಳನ್ನು ನುಂಗಿದನು. ಹೀಗೆ ಸಾವಿರಾರು ಪ್ರಜೆಗಳು ವಿನಾಶಹೊಂದಲು ಭಯಪೀಡಿತರಾದ ಉಳಿದ ಪ್ರಜೆಗಳು ದೇವರಾಜನಾದ ಇಂದ್ರನಿಗೆ ಶರಣುಹೋಗಿ ತಮ್ಮ ಕಷ್ಟವನ್ನು ಅವನಲ್ಲಿ ನಿವೇದಿಸಿಕೊಂಡರು. ಅದರಿಂದ ದೇವರಾಜನಿಗೆ ಮಹಾಕ್ರೋಧವುಂಟಾಯಿತು. ಒಡನೆಯೇ ಅವನು ತೀಕ್ಷ್ಣವಾಗಿದ್ದ ವಜ್ರಾಯುಧದಿಂದ ಮಹಾಕಾಯನಾದ ಕುಂಭಕರ್ಣನನ್ನು ಪ್ರಹರಿಸಿದನು. ಇಂದ್ರನ ವಜ್ರಾಯುಧದಿಂದ ಪ್ರಹರಿಸಲ್ಪಟ್ಟ ಮಹಾಕಾಯನಾದ ಕುಂಭಕರ್ಣನು ಕೋಪದಿಂದ ಕಂಪಿಸುತ್ತಾ ಗಟ್ಟಿಯಾಗಿ ಸಿಂಹನಾದಮಾಡಿದನು. ರಾಕ್ಷಸನಾದ ಕುಂಭಕರ್ಣನು ಪುನಃ ಪುನಃ ಗರ್ಜಿಸುತ್ತಿರುವಾಗ ಮೊದಲೇ ಭಯಪೀಡಿತರಾಗಿದ್ದ ಪ್ರಜೆಗಳು ಪುನಃ ಅತಿಯಾಗಿ ಭಯಗೊಂಡರು. ಬಳಿಕ ಪರಮಕ್ರುದ್ಧನಾಗಿದ್ದ ಮಹಾಬಲನಾದ ಕುಂಭಕರ್ಣನು ಇಂದ್ರನ ಐರಾವತದ ಕೊಂಬನ್ನೇ ಕಿತ್ತು ವಜ್ರಿಯ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಕುಂಭಕರ್ಣನ ಪ್ರಹಾರದಿಂದ ಪೀಡಿತನಾದ ವಾಸವನು ಬಹಳವಾಗಿ ಪರಿತಪಿಸಿದನು. ಅದನ್ನು ನೋಡಿ ದೇವ-ಬ್ರಹ್ಮರ್ಷಿ-ದಾನವರು ಬಹಳವಾಗಿ ವಿಷಾದಿಸಿದರು. ಅನಂತರ ಪ್ರಜೆಗಳೊಡನೆ ವಾಸವನೂ ಬ್ರಹ್ಮಲೋಕಕ್ಕೆ ಹೋಗಿ ಕುಂಭಕರ್ಣನ ದೌರ್ಜನ್ಯವನ್ನು ಬ್ರಹ್ಮನಿಗೆ ಹೇಳಿದನು. ಕುಂಭಕರ್ಣನು ಹಸಿವು ತೀರಿಸಿಕೊಳ್ಳುವುದಕ್ಕಾಗಿ ಪ್ರಜೆಗಳನ್ನೇ ಭಕ್ಷಿಸುತ್ತಿರುವುದನ್ನೂ, ದೇವತೆಗಳನ್ನು ತಿರಸ್ಕರಿಸುತ್ತಿರುವುದನ್ನೂ, ಋಷಿಗಳ ಆಶ್ರಮಗಳನ್ನು ಧ್ವಂಸಮಾಡುತ್ತಿರುವುದನ್ನೂ ಮತ್ತು ಪರಸ್ತ್ರೀಯರನ್ನು ಬಾರಿ- ಬಾರಿಗೂ ಅಪಹರಿಸಿಕೊಂಡು ಹೋಗುತ್ತಿರುವುದನ್ನೂ ವಾಸವಪ್ರಮುಖ ರಾದ ಪ್ರಜೆಗಳು ಬ್ರಹ್ಮನಲ್ಲಿ ನಿವೇದಿಸಿಕೊಂಡರು.

"ಬ್ರಹ್ಮದೇವನೇ! ಇವನು ಹೀಗೆಯೇ ಅನುದಿನವೂ ಪ್ರಜೆಗಳನ್ನು ಭಕ್ಷಿಸುತ್ತಲೇ ಇದ್ದರೆ ಅತ್ಯಲ್ಪಸಮಯದಲ್ಲಿಯೇ ಈ ಲೋಕವು ಪ್ರಜೆಗಳಿಂದ ಶೂನ್ಯವಾಗಿ ಹೋಗುತ್ತದೆ."

ಇಂದ್ರನ ಮಾತನ್ನು ಕೇಳಿ ಸಕಲಲೋಕಪಿತಾಮಹನಾದ ಬ್ರಹ್ಮನು

ರಾಕ್ಷಸರೆಲ್ಲರನ್ನೂ ಹತ್ತಿರ ಕರೆದನು. ಅವರೊಡನಿದ್ದ ಕುಂಭಕರ್ಣನನ್ನು ನೋಡಿದೊಡನೆಯೇ ಬ್ರಹ್ಮನು ಕೂಡ ಭಯದಿಂದ ನಡುಗಿದನು. ಬಳಿಕ ಸ್ವಲ್ಪ ಧೈರ್ಯವನ್ನು ತಂದುಕೊಂಡು ಬ್ರಹ್ಮನು ಕುಂಭಕರ್ಣನಿಗೆ ಹೇಳಿದನು:

ಧ್ರುವಂ ಲೋಕವಿನಾಶಾಯ ಪೌಲಸ್ತ್ಯೇನಾಸಿ ನಿರ್ಮಿತಃ ।
ತಸ್ಮಾತ್ತ್ವಮದ್ಯಪ್ರಭೃತಿ ಮೃತಕಲ್ಪಃ ಶಯಿಷ್ಯಸೇ ॥೨೪॥

"ನಿಶ್ಚಯವಾಗಿಯೂ ಲೋಕದ ವಿನಾಶಕ್ಕಾಗಿಯೇ ವಿಶ್ರವಸನಿಂದ ನೀನು ಹುಟ್ಟಿರುವೆ. ಆದುದರಿಂದ ನೀನು ಇಂದು ಮೊದಲಾಗಿ ಸತ್ತವನಂತೆ ಯಾವಾಗಲೂ ನಿದ್ರಾವಶನಾಗಿ ಮಲಗಿಯೇ ಇರುವೆ."

ಬ್ರಹ್ಮನ ಶಾಪದಿಂದ ತಿರಸ್ಕೃತನಾದ ಕುಂಭಕರ್ಣನು ಅಣ್ಣನ ಕಾಲು ಗಳಲ್ಲಿ ಬಿದ್ದನು. ತಮ್ಮನಿಗೆ ಪ್ರಾಪ್ತವಾದ ಬ್ರಹ್ಮನ ಶಾಪದಿಂದಾಗಿ ಹೆಚ್ಚು ಗಾಬರಿಗೊಂಡ ರಾವಣನು ಹೇಳಿದನು :

ವಿವೃದ್ಧಃ ಕಾಞ್ಚನೋ ವೃಕ್ಷಃ ಫಲಕಾಲೇ ನಿಕೃನ್ತ್ಯತೇ ।
ನ ನಪ್ತಾರಂ ಸ್ವಕಂ ನ್ಯಾಯ್ಯಂ ಶಪ್ತುಮೇವಂ ಪ್ರಜಾಪತೇ ॥೨೬॥

"ಪ್ರಜಾಪತಿಯೇ! ಚೆನ್ನಾಗಿ ಬೆಳೆದು ನಿಂತಿರುವ ಸುವರ್ಣಮಯವಾದ ಮರವು ಫಲಕೊಡುವ ಕಾಲದಲ್ಲಿ ಕತ್ತರಿಸಲ್ಪಡುತ್ತಿದೆ. ಇದು ಸರಿಯಲ್ಲ. ಸಾಕ್ಷಾತ್ ನಿನ್ನ ಮೊಮ್ಮಗನಿಗೇ ಇಂತಹ ಶಾಪಕೊಡುವುದು ಉಚಿತವಾಗಿ ಕಾಣುವುದಿಲ್ಲ. ಆದರೆ ನಿನ್ನ ಮಾತೆಂದಿಗೂ ಸುಳ್ಳಾಗುವುದಿಲ್ಲ. ಈ ವಿಷಯದಲ್ಲಿ ಸಂಶಯವೇ ಇಲ್ಲ. ಆದುದರಿಂದ ಇವನು ಮಲಗುವ ಮತ್ತು ಎಚ್ಚರಗೊಳ್ಳುವ ಸಮಯಗಳನ್ನು ನಿರ್ಣಯಿಸಿ ಹೇಳು."

ರಾವಣನ ಆ ಮಾತಿಗೆ ಬ್ರಹ್ಮನು ಹೇಳಿದನು :

ಶಯಿತಾ ಹ್ಯೇಷ ಷಣ್ಮಾಸಾನೇಕಾಹಂ ಜಾಗರಿಷ್ಯತಿ ।

"ಇವನು ಆರು ತಿಂಗಳು ಮಲಗಿದ್ದು ಒಂದು ದಿನ ಮಾತ್ರ ಎಚ್ಚರ ಗೊಂಡಿರುವನು.

ಏಕೇನಾಹ್ನಾ ತ್ವಸೌ ವೀರಶ್ಚರನ್ಭೂಮಿಂ ಬುಭುಕ್ಷಿತಃ ।
ವ್ಯಾತ್ತಾಸ್ಯೋ ಭಕ್ಷಯೇಲ್ಲೋಕಾನ್ಸಂಕ್ರುದ್ಧ ಇವ ಪಾವಕಃ ॥

ಆ ಒಂದು ದಿನದಲ್ಲಿಯೇ ಇವನು ಹಸಿವಿನಿಂದ ಕೂಡಿ ಬಾಯ್ದೆರೆದು ಕೊಂಡು ಭೂಮಿಯಲ್ಲಿ ಸಂಚರಿಸುತ್ತಾ ಕ್ರುದ್ಧನಾದ ಅಗ್ನಿಯಂತೆ ಸಾವಿರಾರು ಪ್ರಜೆಗಳನ್ನು ಭಕ್ಷಿಸುತ್ತಾನೆ."

ಹೀಗೆ ಬ್ರಹ್ಮನು ಕುಂಭಕರ್ಣನಿಗೆ ಪ್ರತಿಶಾಪವನ್ನಿತ್ತು ರಾಕ್ಷಸರನ್ನು ಕಳುಹಿಸಿಕೊಟ್ಟನು. ಬ್ರಹ್ಮನನ್ನು ಹಾಗೆ ಪ್ರಾರ್ಥಿಸಿದ್ದ ರಾವಣನೇ ಈಗ ನಿನ್ನ ಪರಾಕ್ರಮದಿಂದ ಭಯಗೊಂಡು ವ್ಯಸನದಲ್ಲಿ ಮುಳುಗಿ ಕುಂಭಕರ್ಣನನ್ನು ಅಕಾಲದಲ್ಲಿ ಎಚ್ಚರಗೊಳಿಸಿದ್ದಾನೆ. ಭಯಂಕರಪರಾಕ್ರಮನಾದ ಆ ಕುಂಭ ಕರ್ಣನೇ ಈಗ ಶಿಬಿರದಿಂದ ಹೊರಟು ಪರಮಕ್ರುದ್ಧನಾಗಿ ವಾನರರನ್ನು ಭಕ್ಷಿಸುವ ಸಲುವಾಗಿ ರಣರಂಗದಲ್ಲಿ ಓಡಾಡುತ್ತಿದ್ದಾನೆ. ಕುಂಭಕರ್ಣನನ್ನು ನೋಡುತ್ತಲೇ ಕಪಿನಾಯಕರು ಹಿಂದು-ಮುಂದು ನೋಡದೇ ಪಲಾಯನ ಮಾಡುತ್ತಿದ್ದಾರೆ. ಹೀಗಿರುವಾಗ ಕ್ರುದ್ಧನಾದ ಇವನನ್ನು ಯುದ್ಧದಲ್ಲಿ ವಾನರರು ಹೇಗೆ ತಾನೇ ತಡೆಯಬಲ್ಲರು? ಆದುದರಿಂದ ಎಲ್ಲ ವಾನರರಿಗೂ ಅಲ್ಲೊಂದು ಪರ್ವತೋಪಮವಾದ ಯಂತ್ರದ ಸ್ಥಾಪನೆಯಾಗಿರುವುದೆಂದು ಹೇಳಬೇಕು. ಹೀಗೆ ತಿಳಿಯಹೇಳಿದರೆ ಎಲ್ಲ ವಾನರರೂ ನಿರ್ಭಯರಾಗುತ್ತಾರೆ."

ವಿಭೀಷಣನು ಹೇಳಿದ ಯುಕ್ತಿಯುಕ್ತವಾದ ಮಾತನ್ನು ಕೇಳಿ ರಾಘವನು ಸೇನಾಪತಿಯಾದ ನೀಲನಿಗೆ ಹೇಳಿದನು :

"ಸೇನಾಪತಿಯೇ! ಈಗಲೇ ನೀನು ವಾನರಸೈನ್ಯವನ್ನು ಸಂಘಟಿಸಿ ವ್ಯೂಹಕ್ರಮದಲ್ಲಿ ನಿಲ್ಲಿಸು. ಲಂಕೆಯ ಮಹಾದ್ವಾರಗಳನ್ನೂ ಮಾರ್ಗಗಳನ್ನೂ ಸ್ವಾಧೀನಕ್ಕೆ ತೆಗೆದುಕೊಂಡು ಮುಂದೆ ನಾವು ಲಂಕೆಯನ್ನು ಆಕ್ರಮಣಮಾಡ ಬೇಕು. ಪರ್ವತಶಿಖರಗಳನ್ನೂ, ವೃಕ್ಷಗಳನ್ನೂ, ಬಂಡೆಗಳನ್ನೂ ಸಂಗ್ರಹಿ ಸಿಟ್ಟುಕೊಂಡು ನೀವೆಲ್ಲರೂ ಬಂಡೆಗಳನ್ನೆತ್ತಿಕೊಂಡು ಆಯುಧಪಾಣಿಗಳಾಗಿ ಯುದ್ಧಕ್ಕೆ ಸಿದ್ಧರಾಗಿರಬೇಕು."

ರಾಘವನಿಂದ ಆಜ್ಞಪ್ತನಾದ, ಸೇನಾಪತಿಯಾದ, ಕಪಿಶ್ರೇಷ್ಠನಾದ ನೀಲನು ರಾಮನು ಹೇಳಿದಂತೆಯೇ ಕಪಿಗಳಿಗೆ ಆದೇಶವನ್ನಿತ್ತನು. ಬಳಿಕ

ಗವಾಕ್ಷ, ಶರಭ, ಹನುಮಂತ, ಅಂಗದ–ಇವರೇ ಮುಂತಾದ ಪರ್ವತಸದೃಶರಾದ ವಾನರನಾಯಕರು ಪರ್ವತಶಿಖರಗಳನ್ನೇ ಹೊತ್ತುಕೊಂಡು ಲಂಕೆಯ ಮಹಾದ್ವಾರಗಳನ್ನು ಆಕ್ರಮಿಸಿದರು. ವಿಜಯೋತ್ಸಾಹದಿಂದ ರಾರಾಜಿಸುತ್ತಿದ್ದ ವಾನರಸೈನಿಕರು ಶ್ರೀರಾಮನ ಆಜ್ಞೆಯನ್ನು ಕೇಳಿ ವೃಕ್ಷಾಯುಧಗಳಿಂದಲೇ ಶತ್ರುಸೈನ್ಯವನ್ನು ಸದೆಬಡಿಯಲು ಪ್ರಾರಂಭಿಸಿದರು. ದೊಡ್ಡ-ದೊಡ್ಡ ಪರ್ವತಶಿಖರಗಳನ್ನೂ ವೃಕ್ಷಗಳನ್ನೂ ಕೈಗಳಲ್ಲಿ ಎತ್ತಿಕೊಂಡು ನಿಂತಿದ್ದ ವಾನರರ ಉಗ್ರವಾದ ಆ ಮಹಾಸೈನ್ಯವು ಪರ್ವತದ ಸಮೀಪದಲ್ಲಿ ಘೇರಾಯಿಸಿರುವ ಜಲಮೇಘಗಳ ಮಹಾಸಮೂಹದಂತೆ ರಾರಾಜಿಸುತ್ತಿದ್ದಿತು.

೬೧ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೬೨ನೆಯ ಸರ್ಗ

ರಾವಣನು ಅರಮನೆಗೆ ಬಂದ ಕುಂಭಕರ್ಣನಿಗೆ ರಾಮನಿಂದ ಉಂಟಾಗಿರುವ ಭಯವನ್ನು ತಿಳಿಯಪಡಿಸಿ ಶತ್ರುಸೈನ್ಯವನ್ನು ವಿನಾಶಗೊಳಿಸಲು ಪ್ರೇರಿಸಿದುದು

ಸ ತು ರಾಕ್ಷಸಶಾರ್ದೂಲೋ ನಿದ್ರಾಮದಸಮಾಕುಲಃ ।
ರಾಜಮಾರ್ಗಂ ಶ್ರಿಯಾ ಜುಷ್ಟಂ ಯಯೌ ವಿಪುಲವಿಕ್ರಮಃ ॥೧॥

ಅತುಲಪರಾಕ್ರಮಿಯಾದ ರಾಕ್ಷಸಶ್ರೇಷ್ಠನಾದ ಕುಂಭಕರ್ಣನು ನಿದ್ರೆಯಿಂದಲೂ, ಮದದಿಂದಲೂ ಉನ್ಮತ್ತನಾಗಿ ಸಂಪದ್ಯುಕ್ತವಾಗಿದ್ದ ರಾಜಮಾರ್ಗದಲ್ಲಿ ಹೋಗುತ್ತಿದ್ದನು.

ಶತ್ರುಗಳಿಂದ ಜಯಿಸಲು ಅಸಾಧ್ಯನಾಗಿದ್ದ ರಾವಣಾನುಜನು ಸಾವಿರಾರು ರಾಕ್ಷಸರಿಂದ ಪರಿವೃತನಾಗಿ ಹೋಗುತ್ತಿದ್ದನು. ಮನೆಯಲ್ಲಿದ್ದ ಮೇಲ್ಛಾವಣಿಗಳಲ್ಲಿ ಪುರುಷರೂ, ಸ್ತ್ರೀಯರೂ ನಿಂತು ಅವನ ಮೇಲೆ ಪುಷ್ಪಗಳ ಮಳೆಗರೆಯುತ್ತಿದ್ದರು.

ಸುವರ್ಣಮಯವಾದ ಬಲೆಗಳಿಂದ ಸಮಾವೃತವಾಗಿದ್ದು ಸೂರ್ಯನಂತೆ ಪ್ರಭೆಯಿಂದ ಬೆಳಗುತ್ತಿದ್ದ, ವಿಶಾಲವಾಗಿಯೂ ಮತ್ತು ಸುಂದರವಾಗಿಯೂ ಇದ್ದ ರಾಕ್ಷಸರಾಜನಾದ ರಾವಣನ ಅರಮನೆಯನ್ನು ಕುಂಭಕರ್ಣನು ನೋಡಿ

ದನು. ಸೂರ್ಯನು ಮೇಘಮಂಡಲವನ್ನು ಪ್ರವೇಶಿಸುವಂತೆ ಕುಂಭಕರ್ಣನು ರಾವಣನ ಅರಮನೆಯನ್ನು ಪ್ರವೇಶಿಸಿದನು. ದೂರದಲ್ಲಿ ಆಸನದಲ್ಲಿ ಕುಳಿತಿದ್ದ ಅಗ್ರಜನಾದ ರಾವಣನನ್ನು–ಶಕ್ರನು ಪದ್ಮಾಸನದಲ್ಲಿ ಕುಳಿತಿರುವ ಬ್ರಹ್ಮನನ್ನು ಸಂದರ್ಶಿಸುವಂತೆ–ಸಂದರ್ಶಿಸಿದನು. ರಾಕ್ಷಸರ ಗಣಗಳಿಂದ ಕೂಡಿದ್ದ ಅಣ್ಣನ ಅರಮನೆಗೆ ಹೋಗುತ್ತಾ ಕುಂಭಕರ್ಣನು ತನ್ನ ಪಾದನ್ಯಾಸಗಳಿಂದ ಭೂಮಿಯನ್ನೇ ನಡುಗಿಸುತ್ತಾ ಅರಮನೆಯನ್ನು ಪ್ರವೇಶಿಸಿ, ಮುಂದೆ ಒಳಗಿನ ಕಕ್ಷೆಯನ್ನು ಪ್ರವೇಶಿಸಿ, ಉದ್ವಿಗ್ನನಾಗಿ ಪುಷ್ಪಕ ವಿಮಾನದಲ್ಲಿ ಕುಳಿತಿದ್ದ ಅಣ್ಣನಾದ ಮತ್ತು ಗುರುವಾದ ರಾವಣನನ್ನು ನೋಡಿದನು. ತಮ್ಮನು ತನ್ನ ಸಮೀಪದಲ್ಲಿ ನಿಂತಿರುವುದನ್ನು ನೋಡಿದೊಡನೆಯೇ ದಶಗ್ರೀವನು ಪರಮಹೃಷ್ಟನಾಗಿ ಶೀಘ್ರವಾಗಿ ಮೇಲೆದ್ದು ಅವನನ್ನು ತನ್ನ ಸಮೀಪಕ್ಕೆ ಬರುವಂತೆ ಹೇಳಿದನು. ಕುಂಭಕರ್ಣನು ರಾವಣನ ಬಳಿಗೆ ಹೋಗಿ ಪರ್ಯಂಕದಲ್ಲಿ ಕುಳಿತಿದ್ದ ಅಣ್ಣನ ಕಾಲುಗಳಿಗೆ ನಮಸ್ಕರಿಸಿ– "ನನ್ನಿಂದೇನಾಗಬೇಕಾಗಿರುವುದಣ್ಣಾ?" ಎಂದು ಪ್ರಶ್ನಿಸಿದನು.

ರಾವಣನು ನೆಗೆದು ಮುಂದೆ ಬಂದು ಕುಂಭಕರ್ಣನನ್ನು ಬಾಚಿ ತಬ್ಬಿಕೊಂಡನು. ಹಾಗೆ ಆಲಿಂಗಿಸಿದ ರಾವಣನಿಗೆ ಕುಂಭಕರ್ಣನು ಯಥಾನುಕ್ರಮವಾಗಿ ಅಭಿನಂದಿಸಿದನು.

ಅನಂತರ ಕುಂಭಕರ್ಣನು ದಿವ್ಯವಾದ ಮತ್ತು ಮಂಗಳಕರವಾದ ಸಿಂಹಾಸನದಲ್ಲಿ ಕುಳಿತು ಕೋಪದಿಂದ ಕೆಂಗಣ್ಣನಾಗಿ ರಾವಣನಿಗೆ ಹೇಳಿದನು:

ಕಿಮರ್ಥಮಹಮಾದೃತ್ಯ ತ್ವಯಾ ರಾಜನ್ನಿಬೋಧಿತಃ ।
ಶಂಸ ಕಸ್ಮಾದ್ಭಯಂ ತೇಽಸ್ತಿ ಕೋಽದ್ಯ ಪ್ರೇತೋ ಭವಿಷ್ಯತಿ ॥೧೧॥

"ಮಹಾರಾಜ! ಯಾವ ಕಾರಣದಿಂದ ನೀನು ಬಲಾತ್ಕಾರವಾಗಿ ನನ್ನನ್ನು ಎಚ್ಚರಗೊಳಿಸಿದೆ? ನಿನಗೆ ಯಾರಿಂದ ಭಯವುಂಟಾಗಿದೆಯೆಂಬುದನ್ನು ಹೇಳು. ಯಾವನೀಗ ಪ್ರೇತನಾಗಲು ಸಿದ್ಧನಾಗಿದ್ದಾನೆ?"

ಕ್ರುದ್ಧನಾಗಿ ಕುಳಿತಿದ್ದ ತನ್ನ ತಮ್ಮನಾದ ಕುಂಭಕರ್ಣನಿಗೆ ರೋಷದಿಂದ ಎರಡು ಕಣ್ಣುಗಳನ್ನೂ ತಿರುಗಿಸುತ್ತಾ ರಾವಣನು ಹೇಳಿದನು :

"ಮಹಾಬಲನೇ! ನೀನು ಮಲಗಿ ಬಹಳ ಕಾಲವು ಕಳೆದುಹೋಗಿದೆ. ಆದುದರಿಂದ ರಾಮನಿಂದ ನನಗೆ ಪ್ರಾಪ್ತ ವಾಗಿರುವ ಭಯವು ನಿನಗೆ ತಿಳಿದಿಲ್ಲ

ದಶರಥನ ಮಗನಾದ, ಬಲಿಷ್ಠನಾದ ರಾಮನು ಸುಗ್ರೀವನೊಡನೆ ಅಪಾರವಾದ ಸಮುದ್ರವನ್ನು ದಾಟಿ ಇಲ್ಲಿಗೆ ಬಂದು ನಮ್ಮ ಬುಡವನ್ನೇ ಅಲುಗಾಡಿಸುತ್ತಿದ್ದಾನೆ. ನೋಡು; ಕುಂಭಕರ್ಣ! ಸೇತುವಿನ ಮೂಲಕವಾಗಿ ಲಂಕಾಪಟ್ಟಣಕ್ಕೆ ಸುಖವಾಗಿ ಪ್ರವೇಶಿಸಿದ ವಾನರರು ಇಲ್ಲಿರುವ ವನಗಳನ್ನೂ ಉಪವನಗಳನ್ನೂ ಸಮುದ್ರಮಯವನ್ನಾಗಿ ಮಾಡಿಬಿಟ್ಟಿದ್ದಾರೆ. ವಾನರಮಯವಾಗಿರುವ ಈ ಪ್ರದೇಶಗಳಿಗೂ ಸಮುದ್ರಕ್ಕೂ ಯಾವ ವ್ಯತ್ಯಾಸವೂ ಕಾಣುತ್ತಿಲ್ಲ. ನಮ್ಮಲ್ಲಿದ್ದ ಮುಖ್ಯ-ಮುಖ್ಯರಾದ ರಾಕ್ಷಸರೆಲ್ಲರೂ ಯುದ್ಧದಲ್ಲಿ ಮಡಿದು ಹೋಗಿದ್ದಾರೆ. ಆದರೆ ವಾನರರು ಕ್ಷಯಿಸುತ್ತಿರುವುದನ್ನು ನಾನು ಕಾಣುತ್ತಿಲ್ಲ–ಈ ಹಿಂದೆ ವಾನರರು ಯಾವ ಯುದ್ಧದಲ್ಲಿಯೂ ಪರಾಜಿತರೂ ಆಗಿರುವುದಿಲ್ಲ. ಮಹಾಬಲಿಯೇ! ಈ ಸಮಯದಲ್ಲಿ ನಮಗೆ ಈ ವಿಧವಾದ ಭಯವುಂಟಾಗಿದೆ. ನಮ್ಮೆಲ್ಲರನ್ನೂ ನೀನೇ ರಕ್ಷಿಸಬೇಕು. ಇವರೆಲ್ಲರನ್ನೂ ಈಗಲೇ ನೀನು ವಿನಾಶಗೊಳಿಸು. ಈ ಕಾರಣದಿಂದಲೇ ನಿನ್ನನ್ನು ಎಚ್ಚರಗೊಳಿಸಲಾಯಿತು. ತಮ್ಮ! ಈ ಯುದ್ಧದಿಂದಾಗಿ ನಮ್ಮ ಕೋಶವೆಲ್ಲವೂ ಬರಿದಾಗಿ ಹೋಗಿದೆ. ಇದನ್ನು ನೀನು ಗಮನಿಸಿ ಬಾಲಕರು ಮತ್ತು ವೃದ್ಧರೇ ಉಳಿದುಕೊಂಡಿರುವ ಈ ಲಂಕಾಪಟ್ಟಣವನ್ನು ಸಂರಕ್ಷಿಸು. ನಿನ್ನ ಅಣ್ಣನ ಸಲುವಾಗಿ ಸುದುಷ್ಕರವಾದ ಕಾರ್ಯವನ್ನೇ ಈಗ ನೀನು ಮಾಡಬೇಕಾಗಿದೆ. ಈ ಹಿಂದೆ ನಾನು ಯಾವ ಸಹೋದರನಿಗೂ ಇಂತಹ ಬೇಡಿಕೆಯ ಮಾತನ್ನು ಹೇಳಿರಲಿಲ್ಲ. ಕುಂಭಕರ್ಣ! ನಿನ್ನ ವಿಷಯದಲ್ಲಿ ನನಗೆ ಅಪಾರವಾದ ಸ್ನೇಹವಿದೆ. ಕಾರ್ಯವನ್ನು ಸಿದ್ಧಿಸಿಕೊಡುವೆಯೆಂಬ ಒಳ್ಳೆಯ ಭಾವನೆಯೂ ನನಗಿದೆ. ಏಕೆಂದರೆ : ಹಿಂದೆ ನಡೆದ ಹಲವಾರು ದೇವಾಸುರ ಯುದ್ಧಗಳಲ್ಲಿ ನೀನು ದೇವತೆಗಳನ್ನೂ ಮತ್ತು ಅಸುರರನ್ನೂ ಎದುರಿಸಿ ಪರಾಜಯಗೊಳಿಸಿರುವೆ. ಆದುದರಿಂದ, ಭಯಂಕರಪರಾಕ್ರಮನೇ! ನಿನ್ನ ಸಮಗ್ರವಾದ ವೀರ್ಯ-ಪರಾಕ್ರಮಗಳನ್ನು ಅವಲಂಬಿಸಿ ಶತ್ರುಗಳೊಡನೆ ಯುದ್ಧ ಮಾಡು. ಮೂರು ಲೋಕಗಳಲ್ಲಿರುವ ಸಮಸ್ತಪ್ರಾಣಿಗಳಲ್ಲಿಯೂ ನಿನಗೆ ಸದೃಶರಾದ ಬಲಿಷ್ಠರು ಯಾರೂ ಇರುವುದಿಲ್ಲ. ರಣಪ್ರಿಯನೇ! ಬಾಂಧವಪ್ರಿಯನೇ! ಕುಂಭಕರ್ಣ! ನನಗೆ ಪ್ರಿಯವೂ ಮತ್ತು ಹಿತವೂ ಆಗಿರುವ ಈ ಶ್ರೇಷ್ಠವಾದ ಕಾರ್ಯವನ್ನು ಮಾಡಿಕೊಡು. ಶರತ್ಕಾಲದ ಮೇಘವನ್ನು

ಬಿರುಗಾಳಿಯು ಧ್ವಂಸಮಾಡಿಬಿಡುವಂತೆ–ನಿನ್ನ ತೇಜೋಬಲದಿಂದ ಶತ್ರುಗಳ ಸೈನ್ಯವನ್ನು ನಾಶಗೊಳಿಸು.”

ಅ೨ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೬೩ನೆಯ ಸರ್ಗ

ರಾವಣನ ಕುತ್ಸಿತಕಾರ್ಯಕ್ಕಾಗಿ ಕುಂಭಕರ್ಣನ ನಿಂದನೆ : ಆದರೂ ಯುದ್ಧದ ವಿಷಯವಾಗಿ ಪ್ರೋತ್ಸಾಹಿಸಿದುದು

ತಸ್ಯ ರಾಕ್ಷಸರಾಜಸ್ಯ ನಿಶಮ್ಯ ಪರಿದೇವಿತಮ್ ।
ಕುಮ್ಭಕರ್ಣೋ ಬಭಾಷೇಽಥ ವಚನಂ ಪ್ರಜಹಾಸ ಚ ॥೧॥

ರಾಕ್ಷಸರಾಜನಾದ ರಾವಣನ ವಿಲಾಪವನ್ನು ಕೇಳಿ ಕುಂಭಕರ್ಣನು ಗಹ-ಗಹಿಸಿ ನಗುತ್ತಾ ಹೇಳಿದನು :

“ಅಣ್ಣಾ! ಹಿಂದೆ ನಾವು ಮಂತ್ರಾಲೋಚನೆಯನ್ನು ಮಾಡಿದಾಗ ನಿನ್ನ ದೋಷದಿಂದಾಗಿ ಯಾವ ವಿಧವಾದ ಆಪತ್ತು ಸಂಭವಿಸಬಹುದೆಂದು ಕಂಡು ಕೊಂಡಿದ್ದೆವೋ–ಅದೇ ಆಪತ್ತು ಈಗ ಹಿತೈಷಿಗಳ ಹಿತದ ಮಾತಿನಲ್ಲಿ ಆಸಕ್ತಿ ತೋರದ ನಿನಗೆ ಬಂದೊದಗಿದೆ. ನಿನಗೆ ಬಹಳ ಶೀಘ್ರವಾಗಿಯೇ ನೀನು ಮಾಡಿದ ಪಾಪಕರ್ಮಕ್ಕೆ ಫಲವು ಸಿಕ್ಕಿಬಿಟ್ಟಿದೆ. ಕೆಟ್ಟ ಕೆಲಸಗಳನ್ನು ಮಾಡು ವವರಿಗೆ ನರಕದಲ್ಲಿ ವಾಸವು ನಿಶ್ಚಿತವಾಗಿರುವಂತೆ–ನೀನು ಮಾಡಿರುವ ದುಷ್ಕರ್ಮಗಳಿಗೂ ದುಷ್ಫಲವು ಲಭಿಸುವುದೆಂಬುದು ನಿಶ್ಚಿತವಾಗಿಯೇ ಇದ್ದಿತು. ಮೊದಲು ನೀನು ವೀರ್ಯ-ದರ್ಪಗಳಿಂದ ಹಿಂದು-ಮುಂದು ಯೋಚನೆಮಾಡದೇ ಈ ದುಷ್ಕಾರ್ಯವನ್ನು ಮಾಡಿರುವೆ. ಅದರ ಪರಿಣಾಮ ವೇನಾಗುವುದೆಂಬುದನ್ನು ಒಮ್ಮೆಯಾದರೂ ಯೋಚಿಸಲೇ ಇಲ್ಲ.

ಯಃ ಪಶ್ಚಾತ್ಪೂರ್ವಕಾರ್ಯಾಣಿ ಕುರ್ಯಾದೈಶ್ವರ್ಯಮಾಸ್ಥಿತಃ ।
ಪೂರ್ವಂ ಚೋತ್ತರಕಾರ್ಯಾಣಿ ನ ಸ ವೇದ ನಯಾನಯೌ ॥೩॥

ಯಾವನು ಐಶ್ವರ್ಯದ ದುರಭಿಮಾನದಿಂದ ಮೊದಲು ಮಾಡ ಬೇಕಾದ ಕಾರ್ಯವನ್ನು ಕಡೆಯಲ್ಲಿ ಮಾಡುವನೋ ಮತ್ತು ಕಡೆಯಲ್ಲಿ

ಮಾಡಬೇಕಾದ ಕಾರ್ಯವನ್ನು ಮೊದಲು ಮಾಡುವನೋ–ಅಂತಹವನಿಗೆ ನೀತಿ-ಅನೀತಿಗಳ ವ್ಯತ್ಯಾಸವೇ ತಿಳಿದಿರುವುದಿಲ್ಲ.

ದೇಶಕಾಲವಿಹೀನಾನಿ ಕರ್ಮಾಣಿ ವಿಪರೀತವತ್ ।
ಕ್ರಿಯಮಾಣಾನಿ ದುಷ್ಯನ್ತಿ ಹವೀಂಷ್ಯಪ್ರಯತೇಷ್ವಿವ ॥೬॥

ದೇಶ-ಕಾಲಗಳಿಗೆ ತಕ್ಕುದಲ್ಲದ ಮತ್ತು ಪ್ರತಿಕೂಲವಾಗಿರುವಂತೆ ಕಾಣುವ ಕಾರ್ಯಗಳು–ಅಸಂಸ್ಕೃತವಾದ ಅಗ್ನಿಯಲ್ಲಿ ಹೋಮಮಾಡಿದ ಹವಿಸ್ಸಿನಂತೆ–ನಿಷ್ಫಲವಾಗುತ್ತವೆ.

ತ್ರಯಾಣಾಂ ಪಞ್ಚಧಾ ಯೋಗಂ ಕರ್ಮಣಾಂ ಯಃ ಪ್ರಪಶ್ಯತಿ ।
ಸಚಿವೈಃ ಸಮಯಂ ಕೃತ್ವಾ ಸ ಸಭ್ಯೇ ವರ್ತತೇ ಪಥಿ ॥೭॥

ಯಾವ ರಾಜನು ಸಚಿವರೊಡನೆ ವಿಚಾರ ವಿಮರ್ಶೆ ಮಾಡಿ ಕ್ಷಯ, ವೃದ್ಧಿ ಮತ್ತು ಸ್ಥಾನಗಳ ರೂಪದಿಂದ ಉಪಲಕ್ಷಿತವಾದ ಸಾಮ-ದಾನ-ದಂಡ–ಈ ಮೂರು ಕರ್ಮಗಳನ್ನು ಐದು ಪ್ರಕಾರವಾದ ಪ್ರಯೋಗಗಳಿಂದ* ಕಾರ್ಯರೂಪಕ್ಕೆ ತರುವನೋ–ಅಂತಹ ರಾಜನು ಉತ್ತಮವಾದ ನೀತಿ ಮಾರ್ಗದಲ್ಲಿರತಕ್ಕವನೆಂದು ತಿಳಿಯಬೇಕು.

ಯಥಾಗಮಂ ಚ ಯೋ ರಾಜಾ ಸಮಯಂ ವಿಚಿಕೀರ್ಷತಿ ।
ಬುಧ್ಯತೇ ಸಚಿವಾನ್ಬುದ್ಧ್ಯಾ ಸುಹೃದಶ್ಚಾನುಪಶ್ಯತಿ ॥೮॥

ಯಾವ ರಾಜನು ನೀತಿಶಾಸ್ತ್ರಕ್ಕೆ ಅನುಸಾರವಾಗಿ ಕ್ಷಯ-ವೃದ್ಧಿಗಳನ್ನು[1] ಯೋಗ್ಯಸಮಯಗಳಲ್ಲಿ ವಿಚಾರಮಾಡಿ ಅದಕ್ಕೆ ಅನುರೂಪವಾದ ಕಾರ್ಯಗಳನ್ನು ಮಾಡುವನೋ, ಮಂತ್ರಿಗಳ ಸಹಾಯದಿಂದ ಮತ್ತು ಬುದ್ಧಿಯಿಂದ

---

* ಐದು ಪ್ರಕಾರವಾದ ಸಾಧನಗಳು : **ಕರ್ಮಣಾಮಾರಮ್ಭೋಪಾಯಃ** = ಕಾರ್ಯಗಳನ್ನು ಆರಂಭಿಸುವ ಉಪಾಯ. **ಪುರುಷದ್ರವ್ಯಸಂಪತ್** = ಜನರ ಬೆಂಬಲ ಮತ್ತು ಐಶ್ವರ್ಯ. **ದೇಶಕಾಲವಿಭಾಗಃ** = ಯಾವ ಸ್ಥಳದಲ್ಲಿ ಯಾವ ಕಾಲದಲ್ಲಿ ಯಾವ ಕಾರ್ಯವನ್ನು ಮಾಡಬೇಕೆಂಬುದರ ವಿವೇಕ. **ವಿನಿಪಾತಪ್ರತೀಕಾರಃ** = ಒದಗಬಹುದಾದ ವಿಪತ್ತಿಗೆ ನಿವಾರಣೋಪಾಯವನ್ನು ಮೊದಲೇ ಸಿದ್ಧಗೊಳಿಸುವುದು. **ಕಾರ್ಯಸಿದ್ಧಿಃ**= ಕಾರ್ಯವು ಹೇಗೆ ಸಿದ್ಧಿಸುವುದೆಂಬುದರ ಬಗೆಗೆ ನಿಶ್ಚಯಜ್ಞಾನ.

1 ಕ್ಷಯ-ವೃದ್ಧಿ-ಸ್ಥಾನಗಳನ್ನು ಹೀಗೆ ವಿವರಿಸಬಹುದಾಗಿದೆ. ತನಗೆ ವೃದ್ಧಿಯಿದ್ದು ಶತ್ರುವು ಕ್ಷೀಣಸ್ಥಿತಿಯಲ್ಲಿದ್ದರೆ ಆ ಸಮಯದಲ್ಲಿ ಶತ್ರುವಿನೊಡನೆ ಯುದ್ಧಮಾಡ

ತನಗೆ ಸುಹೃದರು ಯಾರೆಂಬುದನ್ನು ತಿಳಿದುಕೊಳ್ಳುವನೋ-ಅಂತಹವನು ಕರ್ತವ್ಯಾಕರ್ತವ್ಯಗಳನ್ನು ತಿಳಿಯುತ್ತಾನೆ.

ಧರ್ಮಮರ್ಥಂ ಚ ಕಾಮಂ ಚ ಸರ್ವಾನ್ವಾ ರಕ್ಷಸಾಂ ಪತೇ ।
ಭಜೇತ ಪುರುಷಃ ಕಾಲೇ ತ್ರೀಣಿ ದ್ವನ್ದ್ವಾನಿ ವಾ ಪುನಃ ॥೯॥

ರಾಕ್ಷಸರಾಜನೇ! ಧರ್ಮಾರ್ಥ-ಕಾಮಗಳನ್ನು ಸಮಯಾನುಸಾರ ವಾಗಿ ಸೇವಿಸಬೇಕು. ಮೂರರ ದ್ವಂದ್ವವನ್ನಾದರೂ ಉಪಯುಕ್ತ ಸಮಯ ಗಳಲ್ಲಿ ಸೇವಿಸಬೇಕು.*

ತ್ರಿಷು ಚೈತೇಷು ಯಚ್ಛ್ರೇಷ್ಠಂ ಶ್ರುತ್ವಾ ತನ್ನಾವಬುಧ್ಯತೇ ।
ರಾಜಾ ವಾ ರಾಜಪುತ್ರೋ ವಾ ವ್ಯರ್ಥಂ ತಸ್ಯ ಬಹುಶ್ರುತಮ್ ॥

ಧರ್ಮಾರ್ಥ-ಕಾಮಗಳೆಂಬ ಮೂರು ಪುರುಷಾರ್ಥಗಳಲ್ಲಿ ಶ್ರೇಷ್ಠ ವಾದುದು ಧರ್ಮ. ಆದುದರಿಂದ ವಿಶೇಷವಾದ ಸಂದರ್ಭಗಳಲ್ಲಿ ಅರ್ಥ-ಕಾಮಗಳನ್ನು ತ್ಯಜಿಸಿಯಾದರೂ ಧರ್ಮವನ್ನೇ ಆಚರಿಸಬೇಕಾಗುತ್ತದೆ. ಈ ಶಾಸ್ತ್ರವಿಚಾರವನ್ನು ವಿಶ್ವಾಸಕ್ಕೆ ಯೋಗ್ಯರಾದವರಿಂದ ತಿಳಿದುಕೊಂಡಿದ್ದರೂ-ರಾಜನಾಗಲೀ, ರಾಜಪುತ್ರನಾಗಲೀ ಅದರಂತೆ ಆಚರಿಸುವುದಿಲ್ಲವೋ-ಅಂತಹವನ ಶಾಸ್ತ್ರಜ್ಞಾನವು ವ್ಯರ್ಥವೇ ಸರಿ.

ಉಪಪ್ರದಾನಂ ಸಾನ್ತ್ವಂ ವಾ ಭೇದಂ ಕಾಲೇ ಚ ವಿಕ್ರಮಮ್ ।
ಯೋಗಂ ಚ ರಕ್ಷಸಾಂ ಶ್ರೇಷ್ಠ ತಾವುಭೌ ಚ ನಯಾನಯೌ ॥೧೧॥

ಕಾಲೇ ಧರ್ಮಾರ್ಥಕಾಮಾನ್ಯಃ ಸಂಮನ್ತ್ರ್ಯ ಸಚಿವೈಃ ಸಹ ।
ನಿಷೇವೇತಾತ್ಮವಾನ್ ಲೋಕೇ ನ ಸ ವ್ಯಸನಮಾಪ್ನುಯಾತ್ ॥೧೨॥

ಬೇಕು. ಶತ್ರುವಿಗೂ ತನಗೂ ಬಲದಲ್ಲಿ ಸಮಾನತೆಯಿದ್ದರೆ ಸಾಮೋಪಾಯವನ್ನನುಸರಿಸಿ ಸಂಧಿಮಾಡಿಕೊಳ್ಳಬೇಕು. ತಾನು ಹೀನಸ್ಥಿತಿಯಲ್ಲಿದ್ದು ಶತ್ರುವು ಉಚ್ಛ್ರಾಯ ಸ್ಥಿತಿಯಲ್ಲಿದ್ದರೆ ಕೆಲವು ಸಮಯದವರೆಗೆ ಶತ್ರುವಿನ ಸಾಮಂತನಾಗಿರಬೇಕು.

* ಶಾಸ್ತ್ರಾನುಸಾರವಾಗಿ ಪ್ರಾತಃಕಾಲದಲ್ಲಿ ಧರ್ಮಕಾರ್ಯಗಳನ್ನೂ, ಮಧ್ಯಾಹ್ನದಲ್ಲಿ ಅರ್ಥಸಂಗ್ರಹವನ್ನೂ, ರಾತ್ರಿಯಲ್ಲಿ ಕಾಮವನ್ನೂ ಸೇವಿಸಬೇಕು. ದ್ವಂದ್ವಗಳೆಂದರೆ ಪ್ರಾತಃಕಾಲದಲ್ಲಿ ಧರ್ಮಾರ್ಥಗಳನ್ನೂ, ಮಧ್ಯಾಹ್ನದಲ್ಲಿ ಅರ್ಥ-ಧರ್ಮಗಳನ್ನೂ, ರಾತ್ರಿಯಲ್ಲಿ ಕಾಮಾರ್ಥಗಳನ್ನೂ ಸೇವಿಸಬೇಕು. ಯಾವನು ಎಲ್ಲ ಸಮಯಗಳಲ್ಲಿಯೂ ಕೇವಲ ಕಾಮಾಸಕ್ತನಾಗಿರುವನೋ ಅಂತಹವನು ಪುರುಷಾಧಮನೆನಿಸಿಕೊಳ್ಳುತ್ತಾನೆ.

ರಾಕ್ಷಸಶಿರೋಮಣಿಯೇ! ಯಾವ ರಾಜನು ಸಚಿವರೊಡನೆ ಚೆನ್ನಾಗಿ ಸಮಾಲೋಚಿಸಿ ಸಮಯಾನುಸಾರವಾಗಿ ದಾನ-ಭೇದ ಮತ್ತು ಪರಾಕ್ರಮಗಳನ್ನು ಶತ್ರುವಿನ ವಿಷಯದಲ್ಲಿ ತೋರುವನೋ, ಐದು ಪ್ರಕಾರವಾದ ಯೋಗಗಳನ್ನೂ ಆಚರಣೆಯಲ್ಲಿಟ್ಟುಕೊಳ್ಳುವನೋ, ನೀತಿ ಮತ್ತು ಅನೀತಿಗಳನ್ನು ತಿಳಿದು ಆಯಾ ಕಾಲಗಳಲ್ಲಿ ಧರ್ಮಾರ್ಥ-ಕಾಮಗಳನ್ನು ಸೇವಿಸುವನೋ–ಅಂತಹ ಮನನಶೀಲನಾದ ರಾಜನು ಯಾವ ಕಾರಣದಿಂದಲೂ ಆಪತ್ತಿಗೊಳಗಾಗುವುದಿಲ್ಲ.

ಹಿತಾನುಬನ್ಧಮಾಲೋಚ್ಯ ಕುರ್ಯಾತ್ಕಾರ್ಯಂ ಮಹಾತ್ಮನಃ ।
ರಾಜಾ ಸಹಾರ್ಥತತ್ತ್ವಜ್ಞೈಃ ಸಚಿವೈರ್ಬುದ್ಧಿಜೀವಿಭಿಃ ॥೧೩॥

ರಾಜನಾದವನು ಅರ್ಥಶಾಸ್ತ್ರದ ತತ್ತ್ವವನ್ನು ತಿಳಿದಿರುವ ಬುದ್ಧಿಜೀವಿಗಳಾದ ಸಚಿವರೊಡನೆ–ಪರಿಣಾಮದಲ್ಲಿ ಹಿತವಾಗುವ ಕಾರ್ಯವು ಯಾವುದೆಂಬುದನ್ನು–ಸಮಾಲೋಚಿಸಿ ಕಾರ್ಯವನ್ನು ಮಾಡಬೇಕು.

ಅನಭಿಜ್ಞಾಯ ಶಾಸ್ತ್ರಾರ್ಥಾನ್ಪುರುಷಾಃ ಪಶುಬುದ್ಧಯಃ ।
ಪ್ರಾಗಲ್ಭ್ಯಾದ್ವಕ್ತುಮಿಚ್ಛನ್ತಿ ಮನ್ತ್ರೇಷ್ವಭ್ಯನ್ತರೀಕೃತಾಃ ॥೧೪॥

ಪಶುವಿಗೆ ಸಮಾನವಾದ ಬುದ್ಧಿಯಿರುವ ಪುರುಷರು ಶಾಸ್ತ್ರಾರ್ಥಗಳನ್ನು ಚೆನ್ನಾಗಿ ತಿಳಿದುಕೊಳ್ಳದೇ ಮಂತ್ರಾಲೋಚನೆಯಲ್ಲಿ ದಿಟ್ಟತನದಿಂದ ನೀತಿಯನ್ನು ಹೇಳಹೋಗುತ್ತಾರೆ.

ಅಶಾಸ್ತ್ರವಿದುಷಾಂ ತೇಷಾಂ ನ ಕಾರ್ಯಮಹಿತಂ ವಚಃ ।
ಅರ್ಥಶಾಸ್ತ್ರಾನಭಿಜ್ಞಾನಾಂ ವಿಪುಲಾಂ ಶ್ರಿಯಮಿಚ್ಛತಾಮ್ ॥೧೫॥

ಶಾಸ್ತ್ರಜ್ಞಾನದಿಂದ ಶೂನ್ಯರಾಗಿದ್ದರೂ ಅರ್ಥಶಾಸ್ತ್ರದ ತಿಳಿವಳಿಕೆಯಿಲ್ಲದಿದ್ದರೂ–ಅಪಾರವಾದ ಐಶ್ವರ್ಯವನ್ನು ಬಯಸುವವರ ಅಹಿತಕರವಾದ ಯಾವುದೇ ಮಾತನ್ನೂ ಮಾನ್ಯಮಾಡಬಾರದು.

ಅಹಿತಂ ಚ ಹಿತಾಕಾರಂ ಧಾರ್ಷ್ಟ್ಯಾಜ್ಜಲ್ಪನ್ತಿ ಯೇ ನರಾಃ ।
ಅವಶ್ಯಂ ಮನ್ತ್ರಬಾಹ್ಯಾಸ್ತೇ ಕರ್ತವ್ಯಾಃ ಕೃತ್ಯದೂಷಣಾಃ ॥೧೬॥

ಯಾರು ಲಜ್ಜೆಯಿಲ್ಲದೇ ಅಹಿತವಾದುದನ್ನು ಹಿತವೆಂಬ ರೀತಿಯಲ್ಲಿ

ಹೇಳುವರೋ-ಅಂತಹವರು ನಿಶ್ಚಯವಾಗಿಯೂ ಸಲಹೆನೀಡಲು ಅಯೋಗ್ಯರೇ ಸರಿ. ಅಂತಹವರನ್ನು ಮಂತ್ರಾಲೋಚನೆಯಲ್ಲಿ ದೂರವಾಗಿಡ ಬೇಕು. ಅಂತಹವರೇ ಕಾರ್ಯವನ್ನು ಹಾಳುಮಾಡತಕ್ಕವರು.

ವಿನಾಶಯನ್ತೋ ಭರ್ತಾರಂ ಸಹಿತಾಃ ಶತ್ರುಭಿರ್ಬುಧೈಃ ।
ವಿಪರೀತಾನಿ ಕೃತ್ಯಾನಿ ಕಾರಯನ್ತೀಹ ಮನ್ತ್ರಿಣಃ ॥೧೭॥

ಕೆಲವು ಮಂತ್ರಿಗಳು ಸಾಮ-ದಾನಾದಿಗಳ ಉಪಾಯಗಳನ್ನು ತಿಳಿದ ವಿದ್ವಾಂಸರಾದ ಶತ್ರುಗಳೊಡನೆ ಸೇರಿಕೊಂಡು ಒಡೆಯನನ್ನು ವಿನಾಶಗೊಳಿ ಸುವ ಸಲುವಾಗಿಯೇ ಅವನಿಂದ ವಿಪರೀತವಾದ ಕಾರ್ಯಗಳನ್ನು ಮಾಡಿಸು ತ್ತಾರೆ.

ತಾನ್ಭರ್ತಾ ಮಿತ್ರಸಂಕಾಶಾನಮಿತ್ರಾನ್ಮನ್ತ್ರನಿರ್ಣಯೇ ।
ವ್ಯವಹಾರೇಣ ಜಾನೀಯಾತ್ಸಚಿವಾನುಪಸಂಹಿತಾನ್ ॥೧೮॥

ಮಿತ್ರರಂತೆ ಕಾಣುವ ಅಂತಹ ಶತ್ರುಗಳೊಡನೆ ಸೇರಿಕೊಂಡಿರುವ ಅಮಿತ್ರರಾದ ಮಂತ್ರಿಗಳನ್ನು ಯಾವುದಾದರೂ ವಿಷಯವನ್ನು ಮಂತ್ರಿ ಮಂಡಲದಲ್ಲಿ ನಿರ್ಣಯಿಸುವ ವೇಳೆಯಲ್ಲಿ ಅವರ ವ್ಯವಹಾರವನ್ನು ಗಮನಿಸುವುದರಿಂದಲೇ ಅವರು ಮಿತ್ರರೋ ಅಥವಾ ಅಮಿತ್ರರೋ ಎಂಬುದನ್ನು ತಿಳಿದುಕೊಳ್ಳಬೇಕು.

ಚಪಲಸ್ಯೇಹ ಕೃತ್ಯಾನಿ ಸಹಸಾನುಪ್ರಧಾವತಃ ।
ಛಿದ್ರಮನ್ಯೇ ಪ್ರಪದ್ಯನ್ತೇ ಕ್ರೌಞ್ಚಸ್ಯ ಖಮಿವ ದ್ವಿಜಾಃ ॥೧೯॥

ಚಂಚಲಚಿತ್ತನಾದ ಯಾವ ರಾಜನು ಆಪಾತರಮಣೀಯವಾದ ಮಾತುಗಳನ್ನು ಕೇಳಿ ಯೋಚಿಸದೇ ಮತ್ತು ವಿಮರ್ಶಿಸದೇ ಯಾವುದಾದರೂ ಕಾರ್ಯಮಾಡಲು ಒಡನೆಯೇ ಪ್ರಾರಂಭಿಸುವನೋ-ಅಂತಹವನ ಛಿದ್ರ ವನ್ನೂ ದುರ್ಬಲತೆಯನ್ನೂ ಶತ್ರುಗಳು-ಸ್ಕಂದನಿಂದ ಸೀಳಲ್ಪಟ್ಟ ಕ್ರೌಂಚ ಪರ್ವತದ ಕಂಡಿಯನ್ನು ಪಕ್ಷಿಗಳು ಉಪಯೋಗಿಸಿಕೊಳ್ಳುವಂತೆ-ಉಪಯೋಗಿಸಿಕೊಳ್ಳುತ್ತಾರೆ.

ಯೋ ಹಿ ಶತ್ರುಮವಜ್ಞಾಯ ಆತ್ಮಾನಂ ನಾಭಿರಕ್ಷತಿ ।
ಅವಾಪ್ನೋತಿ ಹಿ ಸೋಽನರ್ಥಾನ್ ಸ್ಥಾನಾಚ್ಚ ವ್ಯವರೋಪ್ಯತೇ ॥೨೦॥

ಯಾವನು ಶತ್ರುವೆಂದು ತಿಳಿದಮೇಲೆಯೂ ತನ್ನ ರಕ್ಷಣೆಯ ವ್ಯವಸ್ಥೆ

ಯನ್ನು ಮಾಡಿಕೊಳ್ಳುವುದಿಲ್ಲವೋ–ಅಂತಹ ರಾಜನು ಅನೇಕ ಪ್ರಕಾರವಾದ ಅನರ್ಥಗಳಿಗೆ ಗುರಿಯಾಗುತ್ತಾನೆ ಮತ್ತು ಪರಿಣಾಮದಲ್ಲಿ ರಾಜ್ಯಭ್ರಷ್ಟನೂ ಆಗುತ್ತಾನೆ.

ಯದುಕ್ತಮಿಹ ತೇ ಪೂರ್ವಂ ಪ್ರಿಯಯಾ ಮೇಽನುಜೇನ ಚ ।
ತದೇವ ನೋ ಹಿತಂ ಕಾರ್ಯಂ ಯಥೇಚ್ಛಸಿ ತಥಾ ಕುರು ॥೨೧॥

ನಿನ್ನ ಪ್ರೇಯಸಿಯಾದ ಮಂಡೋದರಿ ಮತ್ತು ತಮ್ಮನಾದವಿಭೀಷಣ–ಇವರಿಬ್ಬರೂ ಈ ವಿಷಯದಲ್ಲಿ ಹಿಂದೆ ಯಾವ ಸಲಹೆಯನ್ನು ನೀಡಿದ್ದರೋ ಅದೇ ನಮಗೆ ಹಿತಕರವು. ಈಗ ನೀನು ಹೇಗೆ ಮಾಡಲು ಬಯಸುವೆಯೋ ಹಾಗೆಯೇ ಮಾಡಬಹುದಾಗಿದೆ.”

ದಶಗ್ರೀವನು ಕುಂಭಕರ್ಣನು ಹೇಳಿದ ಮಾತುಗಳನ್ನು ಕೇಳಿ ಹುಬ್ಬುಗಳನ್ನು ಗಂಟಿಕ್ಕಿಕೊಂಡು ಪರಮಕ್ರುದ್ಧನಾಗಿ ಹೇಳಿದನು :

ಮಾನ್ಯೋ ಗುರುರಿವಾಚಾರ್ಯಃ
ಕಿಂ ಮಾಂ ತ್ವಮನುಶಾಸಸಿ ।
ಕಿಮೇವಂ ವಾಕ್ಶ್ರಮಂ ಕೃತ್ವಾ
ಕಾಲೇ ಯುಕ್ತಂ ವಿಧೀಯತಾಮ್ ॥೨೩॥

“ಮಾನ್ಯರಾದ ಗುರುಗಳಂತೆ ಅಥವಾ ಆಚಾರ್ಯರಂತೆ ನೀನು ನನಗೆ ಉಪದೇಶಮಾಡುತ್ತಿರುವೆಯಾ? ಮಾತಿನ ಪರಿಶ್ರಮದಿಂದ ಪ್ರಯೋಜನ ವೇನಿದೆ? ಈ ಸಮಯದಲ್ಲಿ ಯಾವುದು ಉಚಿತವೋ ಮತ್ತು ಯಾವುದು ಆವಶ್ಯಕವೋ ಅಂತಹ ಕಾರ್ಯವನ್ನು ಮಾಡು.

ವಿಭ್ರಮಾಚ್ಚಿತ್ತಮೋಹಾದ್ವಾ ಬಲವೀರ್ಯಾಶ್ರಯೇಣ ವಾ ।
ನಾಭಿಪನ್ನಮಿದಾನೀಂ ಯದ್ವ್ಯರ್ಥಾಸ್ತಸ್ಯ ಪುನಃ ಕಥಾಃ ॥೨೪॥

ನಾನು ಭ್ರಮೆಯಿಂದ, ಮೋಹಪರವಶತೆಯಿಂದ ಅಥವಾ ಬಲ-ವೀರ್ಯಗಳ ಆಶ್ರಯದಿಂದ ನಿಮ್ಮ ಮಾತನ್ನು ಮಾನ್ಯಮಾಡಲಿಲ್ಲವೆಂಬುದು ನಿಜವಾದರೂ ಪುನಃ ಪುನಃ ಅದನ್ನೇ ಹೇಳುವುದು ವ್ಯರ್ಥವೇ ಸರಿ.

ಅಸ್ಮಿನ್ಕಾಲೇ ತು ಯದ್ಯುಕ್ತಂ ತದಿದಾನೀಂ ವಿಧೀಯತಾಮ್ ।

ಗತಂ ನು ನಾನುಶೋಚನ್ತಿ ಗತಂ ತು ಗತಮೇವ ಹಿ ।
ಮಮಾಪನಯಜಂ ದೋಷಂ ವಿಕ್ರಮೇಣ ಸಮೀಕುರು ॥೨೫॥

ಈ ವಿಷಮಕಾಲದಲ್ಲಿ ಯಾವುದು ಯುಕ್ತವಾಗಿರುವುದೋ ಆ ಕಾರ್ಯವನ್ನು ನೀನೀಗ ಮಾಡು. ಬುದ್ಧಿವಂತರಾದವರು ಕಳೆದುಹೋದುದನ್ನು ಯಾವಾಗಲೂ ಚಿಂತಿಸುವುದಿಲ್ಲ. ಕಳೆದುಹೋದದ್ದು ಹೋದ ಹಾಗೆಯೇ ಮತ್ತೆ ಬರುವುದಿಲ್ಲ. ನನ್ನ ಅನೀತಿಯಿಂದ ಉಂಟಾಗಿರುವ ದೋಷವನ್ನು ಪರಾಕ್ರಮವನ್ನು ತೋರಿಸುವುದರ ಮೂಲಕವಾಗಿ ಸರಿಪಡಿಸು.

ಯದಿ ಖಲ್ವಸ್ತಿ ಮೇ ಸ್ನೇಹೋ ವಿಕ್ರಮಂ ವಾವಗಚ್ಛಸಿ ।
ಯದಿ ವಾ ಕಾರ್ಯಮೇತತ್ತೇ ಹೃದಿ ಕಾರ್ಯತಮಂ ಮತಮ್ ॥

ನನ್ನ ಮೇಲೆ ನಿನಗೆ ವಿಶ್ವಾಸವಿರುವುದಾದರೆ–ನನ್ನ ಪರಾಕ್ರಮವನ್ನು ನೀನು ತಿಳಿದಿರುವೆಯಾದರೆ–ಈ ಕಾರ್ಯವು ಅವಶ್ಯವಾಗಿ ಮಾಡಬೇಕಾಗಿರುವ ಅತಿಮುಖ್ಯವಾದ ಕಾರ್ಯವೆಂದು ನೀನು ಭಾವಿಸುವೆಯಾದರೆ–ಯುದ್ಧಕ್ಕೆ ಹೊರಡು.

ಸ ಸುಹೃದ್ಯೋ ವಿಪನ್ನಾರ್ಥಂ ದೀನಮಭ್ಯವಪದ್ಯತೇ ।
ಸ ಬನ್ಧುರ್ಯೋಽಪನೀತೇಷು ಸಾಹಾಯ್ಯಾಯೋಪಕಲ್ಪತೇ ॥೨೭॥

ಸಮಸ್ತಕಾರ್ಯಗಳನ್ನೂ ಹಾಳುಮಾಡಿಕೊಂಡಿರುವ ದೀನನಿಗೆ ಯಾವನು ಅನುಗ್ರಹಬುದ್ಧಿಯಿಂದ ಸಹಾಯಮಾಡುವನೋ–ಅವನೇ ನಿಜವಾದ ಗೆಳೆಯನು. ಅನೀತಿಮಾರ್ಗವನ್ನು ಹಿಡಿದು ಹೋಗಿ ಸಂಕಟಕ್ಕೊಳಗಾಗಿರುವವನಿಗೆ ಯಾವನು ಸಮಯದಲ್ಲಿ ಸಹಾಯಮಾಡುವನೋ– ಅವನೇ ಬಂಧುವು.”

ಗಂಭೀರವೂ ದಾರುಣವೂ ಆದ ರಾವಣನ ಮಾತುಗಳನ್ನು ಕೇಳಿ ಕುಂಭಕರ್ಣನು ಅಣ್ಣನಿಗೆ ಕೋಪಬಂದಿರುವುದನ್ನು ತಿಳಿದು ಬಹಳವಾಗಿ ಅಸಮಾಧಾನಗೊಂಡಿರುವನೆಂಬುದನ್ನೂ ಗಮನಿಸಿ ಅವನನ್ನು ಸಂತೈಸುತ್ತಾ ಮೆಲ್ಲನೆ ಮಧುರವಾದ ಈ ಮಾತನ್ನು ಹೇಳಿದನು :

“ಶತ್ರುಸೂದನನೇ! ಸಾವಧಾನತೆಯಿಂದ ನನ್ನ ಮಾತನ್ನು ಕೇಳು. ಸಂತಾಪಪಡುವುದನ್ನು ನಿಲ್ಲಿಸು. ನಿನ್ನ ಕೋಪವನ್ನು ದೂರಮಾಡಿ ಸ್ವಸ್ಥನಾಗಿರು. ನಾನು ಬದುಕಿರುವಾಗ ನಿನ್ನ ಮನಸ್ಸಿನಲ್ಲಿ ಇಂತಹ ದೀನಭಾವನೆ

ಗಳು ಉಂಟಾಗದಿರಲಿ. ನೀನು ಯಾವನ ಸಲುವಾಗಿ ಪರಿತಪಿಸುತ್ತಿರುವೆಯೋ ಅವನನ್ನು ನಾನು ವಿನಾಶಗೊಳಿಸುತ್ತೇನೆ. ಮಹಾರಾಜ! ಯಾವುದೇ ಅವಸ್ಥೆಯಲ್ಲಾದರೂ ನಿನಗೆ ನಾನು ಹಿತವಾದ ಮಾತನ್ನು ಹೇಳಲೇಬೇಕು. ನಾನು ನಿನಗೆ ಬಂಧು ಎಂಬ ಭಾವದಿಂದಲೂ ಮತ್ತು ಅಣ್ಣನೆಂಬ ಪ್ರೀತಿಯಿಂದಲೂ ನಿನಗೆ ಹಿತಕರವಾದ ಮಾತುಗಳನ್ನು ಹೇಳಿ ದೆನು. ಆದರೆ ಈ ಕಾಲದಲ್ಲಿ ಸ್ನೇಹಪರನಾದ ಬಂಧುವು ಯಾವ ಕಾರ್ಯ ವನ್ನು ಮಾಡಬೇಕಾಗಿರುವುದೋ–ಆ ಕಾರ್ಯವನ್ನು ನಾನು ಅವಶ್ಯವಾಗಿ ಮಾಡುವೆನು. ರಣಭೂಮಿಯಲ್ಲಿ ನಾನು ಮಾಡಲಿರುವ ಶತ್ರುಸಂಹಾರವನ್ನು ನೀನೇ ಕಾಣಲಿರುವೆ. ಇಂದು ರಣರಂಗದಲ್ಲಿ ನಡೆಯಲಿರುವ ಸಂಗ್ರಾಮದಲ್ಲಿ ಲಕ್ಷ್ಮಣನೊಡನೆ ರಾಮನು ಹತನಾದನಂತರ ದಿಕ್ಕಾಪಾಲಾಗಿ ಪಲಾಯನ ಮಾಡಲಿರುವ ವಾನರಸೈನಿಕರನ್ನು ನೀನೇ ನೋಡುವೆಯಂತೆ.

ಮಹಾಬಾಹುವೇ! ಇಂದು ನಾನು ಸಂಗ್ರಾಮಭೂಮಿಯಲ್ಲಿ ರಾಮನ ತಲೆಯನ್ನು ಕತ್ತರಿಸಿ ತರುತ್ತೇನೆ. ಅದನ್ನು ನೋಡಿ ನೀನು ಸುಖಿಯಾಗು. ಸೀತೆಯು ದುಃಖಿತೆಯಾಗಲಿ. ಲಂಕೆಯಲ್ಲಿ ಬಂಧು-ಮಿತ್ರರನ್ನು ಕಳೆದು ಕೊಂಡಿರುವ ರಾಕ್ಷಸರು ತಮಗೆ ಅತ್ಯಂತಪ್ರೀತಿಕರವಾದ ರಾಮನ ನಿಧನ ವನ್ನು ನೋಡಲಿ. ಯುದ್ಧದಲ್ಲಿ ಬಂಧುಗಳನ್ನು ಕಳೆದುಕೊಂಡು ಶೋಕಪಡುತ್ತಾ ಕಣ್ಣೀರು ಸುರಿಸುತ್ತಿರುವ ರಾಕ್ಷಸರ ಕಣ್ಣೀರನ್ನು ಯುದ್ಧದಲ್ಲಿ ಶತ್ರುಗಳನ್ನು ವಿನಾಶಗೊಳಿಸುವುದರ ಮೂಲಕವಾಗಿ ಒರೆಸುತ್ತೇನೆ. ಪರ್ವತಸದೃಶನಾದ ಸುಗ್ರೀವನು ಛಿನ್ನ-ಭಿನ್ನನಾಗಿ ರಣರಂಗದ ಸುತ್ತಲೂ ಎರಚಲ್ಪಟ್ಟು–ಸೂರ್ಯನೊಡಗೂಡಿದ ಮೋಡದಂತೆ–ಕಾಂತಿಹೀನನಾಗಿ ಕಾಣುವುದನ್ನು ನೋಡು. ಅನಘನೇ! ನಾನು ಮತ್ತು ಈ ರಾಕ್ಷಸರು ರಾಮನನ್ನು ಸಂಹರಿಸುವ ಇಚ್ಛೆಯುಳ್ಳವರಾಗಿದ್ದೇವೆ ಮತ್ತು ನಿನಗೆ ಈ ವಿಷಯದಲ್ಲಿ ಆಶ್ವಾಸನೆಯನ್ನೂ ಕೊಡುತ್ತಿದ್ದೇವೆ. ಹೀಗಿದ್ದರೂ ನೀನೇಕೆ ವ್ಯಥೆಪಡುವೆ? ನನ್ನನ್ನು ಸಂಹರಿಸಿದನಂತರವೇ ರಾಮನು ನಿನ್ನನ್ನು ಸಂಹರಿಸುವನು. ಆದರೆ ನಾನು ನನ್ನ ವಿಷಯವಾಗಿ ಎಷ್ಟು ಮಾತ್ರವೂ ದುಃಖಿಸುವುದಿಲ್ಲ. ಆದುದರಿಂದ ಪರಂತಪನೇ! ಈ ಸಮಯದಲ್ಲಿ ನೀನು ನಿನ್ನ ಇಚ್ಛೆಗೆ ಅನುಸಾರವಾಗಿ ಯುದ್ಧಕ್ಕೆ ಹೋಗಲು ಆದೇಶವನ್ನು ನೀಡು. ಶತ್ರುಗಳೊಡನೆ ಯುದ್ಧ

ಮಾಡಲು ನೀನು ಬೇರೆ ಯಾರನ್ನೂ ಕಳುಹಿಸುವ ಅವಶ್ಯಕತೆಯಿಲ್ಲ. ನಾನು ನಿನ್ನ ಬಲಿಷ್ಠರಾದ ಶತ್ರುಗಳನ್ನು ಧ್ವಂಸಮಾಡುತ್ತೇನೆ. ಇಂದ್ರ-ಯಮರೇ ಬಂದರೂ ಅವರೊಡನೆಯೂ ನಾನು ಯುದ್ಧಮಾಡುತ್ತೇನೆ. ಪರ್ವತಕ್ಕೆ ಸಮಾನವಾದ ವಿಶಾಲವಾದ ಶರೀರವುಳ್ಳ, ತೀಕ್ಷ್ಣವಾದ ಅಲಗುಳ್ಳ ತ್ರಿಶೂಲವನ್ನು ಧರಿಸಿರುವ, ತೀಕ್ಷ್ಣವಾದ ಕೋರೆದಾಡೆಗಳನ್ನು ಹೊಂದಿರುವ, ಸಿಂಹಗರ್ಜನೆ ಮಾಡುವ ನನ್ನನ್ನು ನೋಡಿದರೆ ಇಂದ್ರನಾದರೂ ಭಯಪಡುವನು. ಶತ್ರುಗಳನ್ನು ವಿನಾಶಗೊಳಿಸುವ ನಾನು ಶಸ್ತ್ರಹೀನನಾಗಿದ್ದರೂ ಜೀವಿಸಲು ಬಯಸಿರುವ ಯಾವನೂ ನನಗೆದುರಾಗಿ ನಿಲ್ಲಲು ಸಮರ್ಥನಲ್ಲ. ಶಕ್ತ್ಯಾಯುಧವಾಗಲೀ, ಗದೆಯಾಗಲೀ, ಕತ್ತಿಯಾಗಲೀ, ತೀಕ್ಷ್ಣವಾದ ಬಾಣಗಳೇ ಆಗಲೀ ಇಲ್ಲದಿದ್ದರೂ ಕ್ರುದ್ಧನಾದ ನಾನು ನನ್ನೆರಡು ಕೈಗಳಿಂದಲೇ ಇಂದ್ರನನ್ನಾದರೂ ಸಂಹರಿಸುವೆನು. ರಾಘವನೇನಾದರೂ ನನ್ನ ಮುಷ್ಟಿಗಳ ಪ್ರಹಾರವೇಗವನ್ನು ಸಹಿಸಿಕೊಂಡನಾದರೆ–ನನ್ನ ಬಾಣಗಳ ಸಮೂಹಗಳು ಅವನ ರಕ್ತವನ್ನು ಕುಡಿಯುತ್ತವೆ. ಅತುಲಪರಾಕ್ರಮಿಯಾದ ನಾನಿರುವಾಗ ನೀನೇಕೆ ಚಿಂತೆಯಿಂದ ಪರಿತಪಿಸುತ್ತಿರುವೆ? ನಾನು ನಿನ್ನ ಶತ್ರುಗಳ ವಿನಾಶದ ಸಲುವಾಗಿಯೇ ಈಗ ರಣರಂಗಕ್ಕೆ ಹೊರಡುತ್ತಿರುವೆನು. ರಾಮನಿಂದ ಉಂಟಾಗಿರುವ ಭಯಂಕರಭಯವನ್ನು ಈಗಲೇ ನೀನು ಪರಿತ್ಯಜಿಸು. ನಾನು ರಣಭೂಮಿಯಲ್ಲಿ ರಾಮ-ಲಕ್ಷ್ಮಣರನ್ನೂ ಮಹಾಬಲನಾದ ಸುಗ್ರೀವನನ್ನೂ ಅವಶ್ಯವಾಗಿ ಸಂಹರಿಸುತ್ತೇನೆ. ಯುದ್ಧವು ಪ್ರಾರಂಭವಾದೊಡನೆಯೇ ಲಂಕೆಯನ್ನು ಸುಟ್ಟುಹಾಕಿದ ರಾಕ್ಷಸಹಂತಕನಾದ ಹನುಮಂತನನ್ನು ಸಂಹರಿ ಸುವೆನು. ಅವನ ಅನುಯಾಯಿಗಳಾದ ವಾನರರನ್ನು ತಿಂದುಹಾಕುವೆನು. ನಾನು ಇಂದು ನಿನಗೆ ಒಂದು ಅಸಾಧಾರಣವಾದ ಮಹತ್ತಾದ ಯಶಸ್ಸನ್ನು ಕೊಡಲು ಬಯಸಿದ್ದೇನೆ. ನಿನಗೇನಾದರೂ ಇಂದ್ರನಿಂದಾಗಲೀ ಬ್ರಹ್ಮನಿಂದಾಗಲೀ ಭಯವಿದ್ದರೆ ಅವರನ್ನೂ–ರಾತ್ರಿಯ ಕತ್ತಲೆಯನ್ನು ಸೂರ್ಯನು ಹೋಗಲಾಡಿಸುವಂತೆ–ವಿನಾಶಗೊಳಿಸುತ್ತೇನೆ. ನಾನು ಕ್ರುದ್ಧನಾದರೆ ದೇವತೆಗಳೂ ಜೀವತೊರೆದು ಭೂಮಿಯ ಮೇಲೆ ಮಲಗುತ್ತಾರೆ. ಹೀಗಿರುವಾಗ ನರ-ವಾನರರ ವಿಷಯದಲ್ಲಿ ಹೇಳುವುದೇನಿದೆ? ನಾನು ಸರ್ವನಾಶಕನಾದ ಯಮರಾಜನನ್ನೂ ಶಾಂತಗೊಳಿಸುತ್ತೇನೆ. ಸರ್ವಭಕ್ಷನಾದ ಅಗ್ನಿಯನ್ನೂ ಭಕ್ಷಿಸುತ್ತೇನೆ.

ನಕ್ಷತ್ರಗಳಿಂದ ಯುಕ್ತನಾದ ಸೂರ್ಯನನ್ನೂ ಭೂಮಿಯಲ್ಲಿ ಬೀಳಿಸುತ್ತೇನೆ. ಇಂದ್ರನನ್ನೂ ವಧಿಸುತ್ತೇನೆ. ವರುಣನ ಆಲಯವಾದ ಸಮುದ್ರವನ್ನೇ ಕುಡಿದುಬಿಡುತ್ತೇನೆ. ಪರ್ವತಗಳನ್ನು ಚೂರು-ಚೂರುಗಳನ್ನಾಗಿ ಮಾಡಿಬಿಡುತ್ತೇನೆ. ಭೂಮಿಯನ್ನೇ ಸೀಳಿಬಿಡುತ್ತೇನೆ. ನಾನೀಗ ಭಕ್ಷಿಸಲಿರುವ ಸಕಲ ಪ್ರಾಣಿಗಳೂ ದೀರ್ಘಕಾಲ ಮಲಗಿದ್ದ ಕುಂಭಕರ್ಣನ ಪರಾಕ್ರಮವೆಷ್ಟೆಂಬುದನ್ನು ನೋಡಲಿ. ಸಮಗ್ರವಾದ ಈ ಮೂರು ಲೋಕಗಳೂ ನನ್ನ ಆಹಾರಕ್ಕೆ ಸಾಲದಾಗುತ್ತವೆ. ದಶರಥನ ಮಗನಾದ ಶ್ರೀರಾಮನ ವಧೆಯಿಂದ ನಿನಗೆ ಉತ್ತರೋತ್ತರ ಸುಖಾವಹವಾದ ಸುಖ-ಸೌಭಾಗ್ಯಗಳನ್ನು ಹೊಂದಿಸಿ ಕೊಡಲು ಯುದ್ಧಕ್ಕೆ ಹೋಗುತ್ತಿದ್ದೇನೆ. ಲಕ್ಷ್ಮಣನೊಡನೆ ರಾಮನನ್ನೂ ಸಂಹರಿಸಿ ಸಮಸ್ತಕಪಿದಳಮುಖ್ಯರನ್ನೂ ತಿಂದುಹಾಕುತ್ತೇನೆ.

ಮಹಾರಾಜ! ನೀನು ಯಥೇಚ್ಛವಾಗಿ ವಿರಮಿಸು. ವಾರುಣೀಮದ್ಯವನ್ನು ಸೇವಿಸು. ದುಃಖವನ್ನು ದೂರಮಾಡಿ ಎಲ್ಲ ದೈನಂದಿನಕಾರ್ಯಗಳನ್ನೂ ಆಚರಿಸು. ನಾನೀಗ ಯುದ್ಧದಲ್ಲಿ ರಾಮನನ್ನು ಯಮನ ಮನೆಗೆ ಕಳುಹಿಸಿಬಿಟ್ಟರೆ ದೀರ್ಘಕಾಲ ಸೀತೆಯು ನಿನ್ನ ವಶದಲ್ಲಿರುವಳು.”

೬೩ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೬೪ನೆಯ ಸರ್ಗ

ಮಹೋದರನು ಕುಂಭಕರ್ಣನ ಮಾತಿಗೆ ಆಕ್ಷೇಪವನ್ನೆತ್ತಿ ಯುದ್ಧಮಾಡದೆಯೇ ಇಷ್ಟಾರ್ಥವನ್ನು ಪಡೆಯುವ ಉಪಾಯವನ್ನು ಹೇಳಿದುದು

ತದುಕ್ತಮತಿಕಾಯಸ್ಯ ಬಲಿನೋ ಬಾಹುಶಾಲಿನಃ ।
ಕುಮ್ಭಕರ್ಣಸ್ಯ ವಚನಂ ಶ್ರುತ್ವೋವಾಚ ಮಹೋದರಃ ॥೧॥

ಮಹಾಕಾಯನಾದ, ಮಹಾಭುಜನಾದ, ಬಲಿಷ್ಠನಾದ ಕುಂಭಕರ್ಣನ ಮಾತುಗಳನ್ನು ಕೇಳಿ ಮಹೋದರನೆಂಬ ಮಂತ್ರಿಯು ಹೇಳಿದನು :

“ಕುಂಭಕರ್ಣ! ನೀನು ಸತ್ಕುಲಪ್ರಸೂತನಾಗಿದ್ದರೂ–ಧೂರ್ತನೂ, ಕ್ಷುದ್ರಬುದ್ಧಿಯುಳ್ಳವನೂ, ಗರ್ವಿತನೂ ಆಗಿರುವೆ. ಎಲ್ಲ ವಿಷಯಗಳಲ್ಲಿಯೂ ಕರ್ತವ್ಯಾಕರ್ತವ್ಯಗಳನ್ನು ತಿಳಿಯಲು ನೀನು ಸಮರ್ಥನಾಗಿಲ್ಲ. ರಾಜನಾದ

ರಾವಣನು ನೀತಿ-ಅನೀತಿಗಳನ್ನು ತಿಳಿಯದೇ ಇರುವವನಲ್ಲ. ಆದರೆ ನೀನು ಮಾತ್ರ ಬಾಲಭಾವದಿಂದ ಧೂರ್ತನಾಗಿ ಧಾರ್ಷ್ಟ್ಯದ ಮಾತುಗಳನ್ನಾಡುತ್ತಿರುವೆ.

ರಾಕ್ಷಸಶ್ರೇಷ್ಠನಾದ ರಾವಣನು ದೇಶ-ಕಾಲಗಳಲ್ಲಿ ಮಾಡಬೇಕಾದ ಕರ್ತವ್ಯಗಳನ್ನು ತಿಳಿದಿರುವನಲ್ಲದೇ ಶತ್ರುಗಳ ಹಾಗೂ ತನ್ನ ಸ್ಥಾನ, ವೃದ್ಧಿ ಮತ್ತು ಕ್ಷಯಗಳನ್ನು ಚೆನ್ನಾಗಿ ತಿಳಿದಿರುವನು. ಬಲಿಷ್ಠನಾಗಿದ್ದರೂ ವೃದ್ಧರನ್ನು ಸೇವಿಸದಿರುವ ಗ್ರಾಮ್ಯಬುದ್ಧಿಯವನು ಯಾವ ಕಾರ್ಯವನ್ನು ಮಾಡುವನೋ–ಅಂತಹ ಕಾರ್ಯವನ್ನು ವಿದ್ವಾಂಸನಾದವನು ಹೇಗೆ ತಾನೇ ಮಾಡುವನು? ಯಾವ ಧರ್ಮಾರ್ಥ-ಕಾಮಗಳನ್ನು ನೀನು ಬೇರೆ-ಬೇರೆಯಾಗಿರಬೇಕೆಂದು ಹೇಳಿದೆಯೋ–ಆ ಧರ್ಮಾರ್ಥ-ಕಾಮಗಳನ್ನು ಯಥಾವತ್ತಾಗಿ ತಿಳಿಯಲು ನಿನ್ನಲ್ಲಿ ಆ ಲಕ್ಷಣವೇ ಕಂಡುಬರುವುದಿಲ್ಲ.

ಕರ್ಮ ಚೈವ ಹಿ ಸರ್ವೇಷಾಂ ಕಾರಣಾನಾಂ ಪ್ರಯೋಜಕಮ್ ।
ಶ್ರೇಯಃ ಪಾಪೀಯಸಾಂ ಚಾತ್ರ ಫಲಂ ಭವತಿ ಕರ್ಮಣಾಮ್ ॥

ಸ್ವರ್ಗ-ನರಕರೂಪವಾದ, ಸುಖ-ದುಃಖರೂಪವಾದ ಸಮಸ್ತವಾದ ಫಲಗಳಿಗೂ ಕರ್ಮವೇ ಮೂಲಾಧಾರವಾದುದು. ಅಂತಹ ಫಲಸಾಧಕವಾದ ಕರ್ಮದಿಂದಲೇ ಪಾಪಿಷ್ಠರಾದವರಿಗೂ ಶ್ರೇಯಃಫಲವೇ ಲಭಿಸುತ್ತದೆ.

ನಿಃಶ್ರೇಯಸಫಲಾವೇವ ಧರ್ಮಾರ್ಥಾವಿತರಾವಪಿ ।
ಅಧರ್ಮಾನರ್ಥಯೋಃ ಪ್ರಾಪ್ತಿಃ ಫಲಂ ಚ ಪ್ರತ್ಯವಾಯಿಕಮ್ ॥

ನಿಷ್ಕಾಮಭಾವದಿಂದ ಮಾಡಿದ ಧರ್ಮವೂ (ಜಪ-ಧ್ಯಾನಾದಿಗಳೂ) ಅರ್ಥವೂ (ಅರ್ಥಸಾಧ್ಯವಾದ ಯಜ್ಞ-ಯಾಗಾದಿಗಳೂ) ಚಿತ್ತಶುದ್ಧಿಯ ಮೂಲಕವಾಗಿ ಮೋಕ್ಷಫಲವನ್ನೇ ಕೊಡುತ್ತವೆ. ನಿಷ್ಕಾಮಭಾವನೆಯಿಲ್ಲದೇ ಐಹಿಕ-ಆಮುಷ್ಮಿಕಫಲಗಳ ಪ್ರಾಪ್ತಿಗಾಗಿ ಈ ಕರ್ಮಗಳನ್ನು ಮಾಡಿದರೂ ಸ್ವರ್ಗಾದಿಗಳೂ, ಅಭ್ಯುದಯವೂ ಮತ್ತು ಸಂಕಲ್ಪಿಸಿದ ಇತರ ಫಲಗಳೂ ಲಭಿಸುತ್ತವೆ. ಅದೇ ರೀತಿಯಲ್ಲಿ ಅಧರ್ಮಕಾರ್ಯಗಳನ್ನೂ ಅನರ್ಥಕಾರ್ಯಗಳನ್ನೂ ಮಾಡಿದಲ್ಲಿ ವಿಪರೀತವಾದ ಫಲಗಳೇ ಪ್ರಾಪ್ತವಾಗುತ್ತವೆ.

ಐಹಲೌಕಿಕಪಾರತ್ರಂ ಕರ್ಮ ಪುಂಭಿರ್ನಿಷೇವ್ಯತೇ ।
ಕರ್ಮಾಣ್ಯಪಿ ತು ಕಲ್ಯಾನಿ ಲಭತೇ ಕಾಮಮಾಸ್ಥಿತಃ ॥೯॥

ಪುರುಷರು ಇಹಲೋಕಸುಖಾವಹವಾದ ಮತ್ತು ಪರಲೋಕಪ್ರಾಪಕವಾದ ಕರ್ಮಗಳನ್ನು ಮಾಡುತ್ತಾರೆ. ಕಾಮ-ಪುರುಷಾರ್ಥದಲ್ಲಿಯೇ ಆಸಕ್ತನಾಗಿರುವವನು ಅದಕ್ಕೆ ಅನುಗುಣವಾದ ಕಾರ್ಯಗಳನ್ನು ಮಾಡಿ ಶುಭಫಲಗಳನ್ನೇ ಪಡೆಯುತ್ತಾನೆ.

ತತ್ರ ಕ್ಲ್ಪಪ್ತಮಿದಂ ರಾಜ್ಞಾ ಹೃದಿ ಕಾರ್ಯಂ ಮತಂ ಚ ನಃ ।
ಶತ್ರೌ ಹಿ ಸಾಹಸಂ ಯತ್ಸ್ಯಾತ್ಕಿಮಿವಾತ್ರಾಪನೀಯತೇ ॥೧೦॥

ನಮ್ಮ ರಾಜನು ಕಾಮರೂಪವಾದ ಪುರುಷಾರ್ಥವನ್ನು ಬಯಸಿದ್ದಾನೆ. ಇದು ಮಂತ್ರಿಗಳಿಗೂ ಸಮ್ಮತವಾಗಿದೆ. ಶತ್ರುವಿನಲ್ಲಿ ಸಾಹಸವಿದ್ದರೇನಂತೆ? ಅದನ್ನು ಪರಿಹರಿಸುವ ಮಾರ್ಗವು ನಮ್ಮಲ್ಲಿಯೂ ಇದೆ. ನಾವದನ್ನು ಮಾಡುತ್ತೇವೆ.

ನೀನು ರಾಮನೊಡನೆ ಯುದ್ಧಕ್ಕೆ ಒಬ್ಬನೇ ಹೋಗುವುದಾಗಿ ಹೇಳಿದೆ. ಅದಕ್ಕೆ ಕಾರಣವನ್ನು ಸೂಚಿಸುತ್ತಾ ಮಹಾಬಲಿಷ್ಠನೆಂದೂ ಅವರೆಲ್ಲರನ್ನೂ ಏಕಾಕಿಯಾಗಿ ಎದುರಿಸುವುದಾಗಿಯೂ ಹೇಳುತ್ತಿರುವೆ. ಈ ನಿನ್ನ ಮಾತು ಅಸಂಗತವೂ ಅನುಚಿತವೂ ಆಗಿದೆಯೆಂಬುದನ್ನು ಹೇಳುವೆನು ; ಕೇಳು.

ಹಿಂದೆ ಜನಸ್ಥಾನದಲ್ಲಿ ಹದಿನಾಲ್ಕು ಸಾವಿರ ಅತಿಬಲರಾದ ರಾಕ್ಷಸರನ್ನೂ ರಾಮನೊಬ್ಬನೇ ಸಂಹರಿಸಿದನು. ಅಂತಹವನನ್ನು ನೀನೊಬ್ಬನೇ ಹೇಗೆ ಜಯಿಸುವೆ? ಜನಸ್ಥಾನದಲ್ಲಿದ್ದ ಮಹಾಬಲಶಾಲಿಗಳಾದ ರಾಕ್ಷಸರನೇಕರು ಮರಣಹೊಂದಿದರು. ಅಳಿದುಳಿದವರು ಲಂಕಾಪಟ್ಟಣಕ್ಕೆ ಓಡಿ ಬಂದರು. ಅವರೀಗಲೂ ರಾಮನ ವಿಷಯದಲ್ಲಿ ಭಯಗ್ರಸ್ತರೇ ಆಗಿದ್ದಾರೆ. ಆ ರಾಕ್ಷಸರನ್ನು ನೀನೇನು ನೋಡಿಲ್ಲವೇ? ದಶರಥನ ಮಗನಾದ ಶ್ರೀರಾಮನು ಅತ್ಯಂತಕ್ರುದ್ಧನಾಗಿರುವ ಸಿಂಹದಂತೆ ಪರಾಕ್ರಮಿಯೂ ಭಯಂಕರನೂ ಆಗಿದ್ದಾನೆ. ದುರ್ಬುದ್ಧಿಯಿಂದಾಗಿ ಮಲಗಿದ್ದ ಸರ್ಪವನ್ನು ಹೊಡೆದೆಬ್ಬಿಸುವಂತೆ– ನೀನವನನ್ನು ಎಚ್ಚರಗೊಳಿಸಲು ಬಯಸುತ್ತಿರುವೆ. ಸರ್ವಕಾಲದಲ್ಲಿಯೂ ತೇಜಸ್ಸಿನಿಂದ ಜಾಜ್ವಲ್ಯಮಾನನಾಗಿ ಬೆಳಗುವ, ಕ್ರೋಧಾಭಿಭೂತನಾಗಿರುವ,

ಅತ್ಯಂತ ದುರ್ಜಯನಾಗಿರುವ, ಮೃತ್ಯುವಿನಂತೆ ಸಹಿಸಲು ಅಶಕ್ಯನಾದ ರಾಮನನ್ನು ಯಾವ ಯೋಧನು ತಾನೇ ಎದುರಿಸಲು ಹೋಗುವನು? ನಮ್ಮ ಸಮಗ್ರ ಸೈನ್ಯವೂ ಅಜೇಯನಾದ ಆ ನಮ್ಮ ಶತ್ರುವನ್ನು ಎದುರಿಸಲು ಹೋದರೂ ಜೀವವನ್ನುಳಿಸಿಕೊಂಡು ಹಿಂದಿರುಗುವುದರಲ್ಲಿ ನನಗೆ ಸಂಶಯವೇ ಇದೆ. ಆದುದರಿಂದ ನೀನೊಬ್ಬನೇ ಅವನೊಡನೆ ಯುದ್ಧಕ್ಕೆ ಹೋಗುವುದು ನನಗೆ ಉಚಿತವಾಗಿ ಕಾಣುವುದಿಲ್ಲ. ಸಮೃದ್ಧವಾದ ಸೈನ್ಯ ರೂಪವಾದ ಅರ್ಥಸಂಪತ್ತಿಯನ್ನು ಹೊಂದಿರುವ ಮತ್ತು ಪ್ರಾಣಗಳನ್ನಾದರೂ ಒತ್ತೆಯಾಗಿಟ್ಟು ಶತ್ರುವನ್ನು ಸಂಹರಿಸಬೇಕೆಂದು ನಿಶ್ಚಯಿಸಿರುವ ಶತ್ರುವನ್ನು ಸೈನ್ಯರೂಪವಾದ ಸಂಪತ್ತು ಇಲ್ಲದೆಯೇ ಸಾಮಾನ್ಯಶತ್ರುವಿನಂತೆ ವಶಪಡಿಸಿಕೊಳ್ಳಲು ಯಾವನು ತಾನೇ ಬಯಸುತ್ತಾನೆ? ರಾಕ್ಷಸಶ್ರೇಷ್ಠನೇ! ಯಾವನಿಗೆ ಸಮಾನರಾದವರು ಮನುಷ್ಯರಲ್ಲಿಯೇ ಯಾರೂ ಇಲ್ಲವೋ ಮತ್ತು ಯಾವನು ಇಂದ್ರ-ಯಮರಿಗೆ ಸಮಾನನಾಗಿರುವನೋ–ಅಂತಹ ರಾಮನೊಡನೆ ಯುದ್ಧಮಾಡಲು ನೀನು ಹೇಗೆ ತಾನೇ ಬಯಸುವೆ?"

ಮಹೋದರನು ಕುಪಿತನಾಗಿದ್ದ ಕುಂಭಕರ್ಣನಿಗೆ ಹೀಗೆ ಹೇಳಿ–ರಾಕ್ಷಸರ ಮಧ್ಯದಲ್ಲಿದ್ದ, ಲೋಕಗಳನ್ನೇ ಕಿರುಗುಟ್ಟಿಸುವ ರಾವಣನಿಗೆ ಹೇಳಿದನು :

"ರಾವಣೇಶ್ವರ! ನೀನು ಬಹಳ ಹಿಂದೆಯೇ ಸೀತೆಯನ್ನು ಕರೆ ತಂದರೂ ಅವಳನ್ನು ಉಪಭೋಗಿಸಲು ವಿಳಂಬವನ್ನೇಕೆ ಮಾಡುತ್ತಿರುವೆ? ನೀನು ಯಾವಾಗ ಅಪೇಕ್ಷಿಸುವೆಯೋ ಆಗಲೇ ಅವಳು ನಿನ್ನ ವಶಳಾಗುತ್ತಾಳೆ. ಸೀತೆಯು ನಿನ್ನ ಸೇವೆಯಲ್ಲಿ ನಿರತಳಾಗುವಂತೆ ಮಾಡಲು ನನಗೊಂದು ಉಪಾಯವು ಹೊಳೆದಿದೆ. ಅದನ್ನು ನೀನು ಬುದ್ಧಿಯಿಂದ ವಿಚಾರಮಾಡಿ ಉಚಿತವೆನಿಸಿದರೆ ಕಾರ್ಯರೂಪಕ್ಕೆ ತರಬಹುದು. ನಾನು, ದ್ವಿಜಿಹ್ವ, ಸಂಹ್ಲಾದೀ, ಕುಂಭಕರ್ಣ ಮತ್ತು ವಿತರ್ದನ–ಈ ಐವರೂ ರಾಮನೊಡನೆ ಯುದ್ಧಮಾಡಲು ರಣರಂಗಕ್ಕೆ ಹೋಗಿರುವರೆಂದು ನೀನು ನಗರದಲ್ಲಿ ಡಂಗುರಹೊಡೆಸು. ನಾವೈವರೂ ಹೋಗಿ ರಾಮನೊಡನೆ ಪ್ರಯತ್ನಪೂರ್ವಕ ವಾಗಿ ಯುದ್ಧಮಾಡುತ್ತೇವೆ. ನಾವೇನಾದರೂ ಶತ್ರುವನ್ನು ಜಯಿಸಿದರೆ ಸೀತೆ ಯನ್ನು ನಿನ್ನ ವಶಕ್ಕೆ ತೆಗೆದುಕೊಳ್ಳಲು ಬೇರೆ ಯಾವ ಉಪಾಯದ ಅಗತ್ಯವೂ ಇಲ್ಲ. ಒಂದು ವೇಳೆ ಅಜೇಯನಾದ ನಮ್ಮ ಶತ್ರುವು ಬದುಕಿಯೇ ಇದ್ದು

ನಾವು ಅವನಿಂದ ಪರಾಜಿತರಾಗಿ ಹಿಂದಿರುಗಿ ಬಂದೆವಾದರೆ ನಾನೀಗ ಮನಸ್ಸಿನಲ್ಲಿ ಯೋಚಿಸಿರುವ ಉಪಾಯವನ್ನು ಕೈಗೊಳ್ಳಬಹುದಾಗಿದೆ.

ರಾಮನಾಮಾಂಕಿತವಾದ ಬಾಣಗಳಿಂದ ಸೀಳಲ್ಪಟ್ಟವರಾಗಿ ರಕ್ತದಿಂದ ತೋಯ್ದುವರಾಗಿ–"ನಾವು ರಾಮ-ಲಕ್ಷ್ಮಣರನ್ನು ನುಂಗಿಬಿಟ್ಟೆವು"–ಎಂದು ಕೂಗಿಕೊಂಡು ಇಲ್ಲಿಗೆ ಬರುತ್ತೇವೆ. ನಿನಗೆ ಪ್ರಿಯವಾದ ಕಾರ್ಯವನ್ನು ಮುಗಿಸಿದ್ದೇವೆಂದೂ ನಮ್ಮ ಅಭಿಲಾಷೆಯನ್ನು ಪೂರೈಸಿಕೊಡೆಂದೂ ನಿನ್ನ ಕಾಲುಗಳನ್ನು ಹಿಡಿದು ಬೇಡಿಕೊಳ್ಳುತ್ತೇವೆ. ಅನಂತರ ನೀನು ಆನೆಯ ಮೇಲೊಬ್ಬನನ್ನು ಕುಳ್ಳಿರಿಸಿ ರಾಮ-ಲಕ್ಷ್ಮಣರು ಹತರಾದರೆಂದು ನಗರದ ಎಲ್ಲ ಕಡೆಗಳಲ್ಲಿಯೂ ಸಾರಿಸು. ನೀನೂ ಆ ಸಮಯದಲ್ಲಿ ಸುಪ್ರೀತನಾದವನಂತೆ ನಡೆದುಕೊಳ್ಳಬೇಕು. ಆ ಸಂತೋಷಸಮಾರಂಭದಲ್ಲಿ ನೀನು ಸೇವಕರಿಗೆ ಮತ್ತು ಸೈನಿಕರಿಗೆ ಅಭೀಷ್ಟವಾದ ವಸ್ತುಗಳನ್ನೂ, ಭೋಗ ಸಾಮಗ್ರಿಗಳನ್ನೂ, ದಾಸ-ದಾಸಿಯರನ್ನೂ, ಧನ-ಕನಕವಸ್ತುಗಳನ್ನೂ, ಆಭರಣಗಳನ್ನೂ, ವಸ್ತ್ರಗಳನ್ನೂ, ಅನುಲೇಪನಕ್ಕಾಗಿ ಸುಗಂಧದ್ರವ್ಯಗಳನ್ನೂ ಪಾರಿತೋಷಿಕವಾಗಿ ಕೊಡಬೇಕು. ಯೋಧರಿಗೆ ಉತ್ತಮವಾದ ಪಾನೀಯ ಗಳನ್ನು ಕೊಡುವುದಲ್ಲದೇ ನೀನೂ ಆನಂದವನ್ನು ಪ್ರಕಟಿಸುತ್ತಾ ಶ್ರೇಷ್ಠವಾದ ಮದ್ಯಗಳನ್ನು ಪಾನಮಾಡಬೇಕು. ನಗರದಲ್ಲಿ ಎಲ್ಲೆಡೆಗಳಲ್ಲಿಯೂ ಈ ವಾರ್ತೆಯು ಹರಡಿದನಂತರ ಕುಂಭಕರ್ಣನೇ ಮೊದಲಾದ ಐವರು ರಾಕ್ಷಸರು ರಾಮ-ಲಕ್ಷ್ಮಣರನ್ನು ತಿಂದುಹಾಕಿದರೆಂಬ ವಾರ್ತೆಯನ್ನು ಸೀತೆಯು ಕೇಳಿದ ನಂತರ, ನೀನು ಏಕಾಂತದಲ್ಲಿ ಸೀತೆಯಿರುವ ಸ್ಥಳಕ್ಕೆ ಹೋಗಿ ಸಮಾಧಾನಗೊಳಿಸು. ಧನ-ಧಾನ್ಯಗಳಿಂದಲೂ, ಯಥೇಚ್ಛವಾದ ಕಾಮನಾ ವಸ್ತುಗಳಿಂದಲೂ, ರತ್ನಾಭರಣಗಳಿಂದಲೂ ಅವಳನ್ನು ಪ್ರಲೋಭನ ಗೊಳಿಸು. ಹೀಗೆ ಅವಳನ್ನು ವಂಚಿಸುವುದರಿಂದ ಪತಿಯನ್ನು ಕಳೆದುಕೊಂಡು ಅನಾಥೆಯಾದೆನೆಂದು ಭಾವಿಸಿಕೊಳ್ಳುವ ಅವಳು ಇಷ್ಟವಿಲ್ಲದಿದ್ದರೂ ನಿನ್ನ ಅಧೀನಳಾಗುತ್ತಾಳೆ. ಪ್ರಿಯಕರನಾದ ಪತಿಯು ಮೃತನಾದನೆಂದು ಭಾವಿಸಿ ಜೀವಿತದಲ್ಲಿ ನಿರಾಶೆಯಿಂದಲೂ ಮತ್ತು ಸ್ತ್ರೀಚಾಪಲ್ಯದಿಂದಲೂ ನಿನ್ನ ವಶಳಾಗುತ್ತಾಳೆ. ಸೀತೆಯು ಹಿಂದೆ ಸುಖದಲ್ಲಿಯೇ ಬೆಳೆದವಳು. ಸುಖಪಡಲು ಅರ್ಹಳಾದವಳು. ಈಗ ದುಃಖಪೀಡಿತಳಾಗಿರುವ ಅವಳು

ರಾಮನ ಮರಣದಿಂದ ಮುಂದೆ ತನಗೆ ಸುಖವೇ ಇಲ್ಲವೆಂಬುದನ್ನು ಮನಗಂಡು ನಿನ್ನ ಅಧೀನದಲ್ಲಾದರೂ ಇದ್ದರೆ ಸುಖವು ಸಿಕ್ಕುವುದೆಂದು ಭಾವಿಸಿ ಸರ್ವಪ್ರಕಾರದಿಂದಲೂ ನಿನ್ನ ಅಧೀನಳೇ ಆಗುವಳು.

ರಾವಣೇಶ್ವರ! ನನ್ನ ಭಾವನೆಯಲ್ಲಿ ಇದು ಸುಂದರವಾದ ನೀತಿಯಾಗಿದೆ. ಯುದ್ಧದಲ್ಲಿ ನೀನು ರಾಮನನ್ನು ನೋಡಿದೊಡನೆಯೇ ಅನರ್ಥವು ಸಂಭವಿಸುತ್ತದೆ. ಆದುದರಿಂದ ಯುದ್ಧದಲ್ಲಿ ಉತ್ಸುಕನಾಗಬೇಡ. ಇಲ್ಲಿಯೇ ನಿನ್ನ ಮನೋರಥದ ಸಿದ್ಧಿಯಾಗುತ್ತದೆ. ಯುದ್ಧವಿಲ್ಲದೆಯೇ ನಿನಗೆ ಮಹಾಸುಖವು ಲಭಿಸುತ್ತದೆ.

ಅನಷ್ಟಸೈನ್ಯೋ ಹ್ಯನವಾಪ್ತಸಂಶಯೋ
ರಿಪೂನಯುದ್ಧೇನ ಜಯನ್ನರಾಧಿಪಃ ।
ಯಶಶ್ಚ ಪುಣ್ಯಂ ಚ ಮಹನ್ಮಹೀಪತೇ
ಶ್ರಿಯಂ ಚ ಕೀರ್ತಿಂ ಚ ಚಿರಂ ಸಮಶ್ನುತೇ ॥೩೬॥

ಮಹಾರಾಜ! ಯಾವ ರಾಜನು ಸೈನ್ಯವನ್ನು ನಷ್ಟಮಾಡಿಕೊಳ್ಳದೇ ಯುದ್ಧದಲ್ಲಿ ಮರಣವಾಗಬಹುದೆಂಬ ಸಂಶಯಕ್ಕೆ ಎಡೆಗೊಡದೇ ಯುದ್ಧದ ಹೊರತಾಗಿ ಶತ್ರುಗಳನ್ನು ಜಯಿಸುವನೋ–ಅಂತಹ ರಾಜನು ಯಶಸ್ಸನ್ನೂ, ಪುಣ್ಯವನ್ನೂ, ಸಂಪತ್ತನ್ನೂ, ಶಾಶ್ವತವಾದ ಕೀರ್ತಿಯನ್ನೂ ಪಡೆಯುತ್ತಾನೆ."

ಅ೪ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೬೫ನೆಯ ಸರ್ಗ

ಕುಂಭಕರ್ಣನ ರಣಯಾತ್ರೆ

ಸ ತಥೋಕ್ತಸ್ತು ನಿರ್ಭರ್ತ್ಸ್ಯ ಕುಮ್ಭಕರ್ಣೋ ಮಹೋದರಮ್ ।
ಅಬ್ರವೀದ್ರಾಕ್ಷಸಶ್ರೇಷ್ಠಂ ಭ್ರಾತರಂ ರಾವಣಂ ತತಃ ॥೧॥

ಮಹೋದರನು ಹೀಗೆ ಹೇಳಲು ಕುಂಭಕರ್ಣನು ಅವನನ್ನು ಗದರಿಸಿ ರಾಕ್ಷಸಶ್ರೇಷ್ಠನಾದ ಅಣ್ಣನಾದ ರಾವಣನಿಗೆ ಹೇಳಿದನು :

"ಅಣ್ಣ! ನಾನಿಂದು ದುರಾತ್ಮನಾದ ರಾಮನನ್ನು ಸಂಹರಿಸಿ ನಿನಗೆ

ಒದಗಿರುವ ಭೀಕರವಾದ ಭಯವನ್ನು ತೊಡೆದುಹಾಕುತ್ತೇನೆ. ಅನಂತರ ನೀನು ವೈರಿಗಳೇ ಇಲ್ಲದವನಾಗಿ ಸುಖವಾಗಿರು.

ವೀರರಾದವರು ನೀರಿಲ್ಲದ ಮೇಘಗಳಂತೆ ಯಾವಾಗಲೂ ಗರ್ಜಿಸುತ್ತಿರುವುದಿಲ್ಲ. ಆದುದರಿಂದ ರಣರಂಗದಲ್ಲಿ ನನ್ನ ಪರಾಕ್ರಮವನ್ನು ತೋರುವುದರ ಮೂಲಕ ಗರ್ಜಿಸುವುದನ್ನು ನೀನೇ ನೋಡುವೆ.

ನ ಮರ್ಷಯತಿ ಚಾತ್ಮಾನಂ ಸಮ್ಭಾವಯತಿ ನಾತ್ಮನಾ ।
ಅದರ್ಶಯಿತ್ವಾ ಶೂರಾಸ್ತು ಕರ್ಮ ಕುರ್ವನ್ತಿ ದುಷ್ಕರಮ್ ॥೪॥

ಶೂರರು ತಮ್ಮ ಪ್ರತಾಪವನ್ನು ತಾವೇ ಹೊಗಳಿಕೊಳ್ಳಲು ಇಷ್ಟಪಡುವುದಿಲ್ಲ. ಬರೀ ಮಾತಿನ ಮೂಲಕವಾಗಿ ತಮ್ಮ ಸಾಹಸವನ್ನು ಪ್ರಕಟಿಸ ಹೋಗದೇ ದುಷ್ಕರವಾದ ಸಾಹಸಕಾರ್ಯಗಳನ್ನು ಮಾಡುತ್ತಾರೆ.

ಮಹೋದರ! ಸಾಮರ್ಥ್ಯವಿಲ್ಲದ, ಬುದ್ಧಿಯಿಲ್ಲದ, ತಾವೇ ಸರ್ವಜ್ಞರೆಂದು ಭಾವಿಸಿಕೊಂಡಿರುವ ರಾಜರಿಗೆ ನಿನ್ನಂತಹವರು ಸರ್ವಕಾಲಗಳಲ್ಲಿಯೂ ಹೇಳುವ ನಯವಾದ ಮಾತುಗಳು ರುಚಿಸುತ್ತವೆ. ಯುದ್ಧದಲ್ಲಿ ಹೇಡಿಗಳಂತೆ ವರ್ತಿಸುವ, ಯಾವಾಗಲೂ ಪ್ರಿಯವಾಗುವುದನ್ನೇ ಆಡುವ, ರಾಜನ ಅನುಯಾಯಿಗಳಾದ ನಿಮ್ಮಂತಹವರಿಂದಲೇ ಎಲ್ಲ ಕಾರ್ಯಗಳೂ ಹಾಳಾಗಿಹೋಗಿವೆ. ನಿಮ್ಮಂತಹವರ ಸಹವಾಸದ ಪರಿಣಾಮವಾಗಿಯೇ ಇಂದು ಲಂಕೆಯಲ್ಲಿ ರಾಜನು ಮಾತ್ರವೇ ಉಳಿದುಕೊಂಡಿದ್ದಾನೆ. ಕೋಶವು ಬರಿದಾಗಿದೆ. ಸೈನ್ಯಬಲವು ಕ್ಷೀಣಿಸಿದೆ. ರಾಜನ ಬಳಿ ಇರುವ ನೀವು ಮಿತ್ರರ ಸೋಗಿನಲ್ಲಿ ಶತ್ರುವಿನ ಕೆಲಸಮಾಡುತ್ತಿರುವಿರಿ. ಶತ್ರುಗಳನ್ನು ಜಯಿಸಲು ಯುದ್ಧಸನ್ನದ್ಧನಾಗಿರುವ ನಾನು ಇದೋ ಈಗಲೇ ರಣಾಂಗಣಕ್ಕೆ ಹೊರಡುತ್ತೇನೆ. ನೀವು ಇದುವರೆಗೂ ಅನುಸರಿಸಿಕೊಂಡುಬಂದಿರುವ ದುರ್ನೀತಿಯನ್ನು ಸರಿಪಡಿಸುವ ಸಲುವಾಗಿಯೇ ನಾನಲ್ಲಿಗೆ ಹೋಗುತ್ತಿದ್ದೇನೆ.”

ಧೀಮಂತನಾದ ಕುಂಭಕರ್ಣನು ಹೀಗೆ ಹೇಳಲು–ರಾಕ್ಷಸಾಧಿಪನಾದ ರಾವಣನು ನಗುತ್ತಾ ಹೇಳಿದನು :

“ಯುದ್ಧವಿಶಾರದನೇ! ಕುಂಭಕರ್ಣ! ಈ ಮಹೋದರನು ರಾಮನಿಗೆ ಬಹಳವಾಗಿ ಭಯಗೊಂಡಿದ್ದಾನೆ. ಇದರಲ್ಲಿ ಸಂಶಯವೇ ಇಲ್ಲ. ಈ ಕಾರಣ

ದಿಂದಲೇ ಇವನಿಗೆ ರಾಮನೊಡನೆ ಯುದ್ಧಮಾಡುವುದು ಸರಿಕಾಣುತ್ತಿಲ್ಲ. ಸೌಹಾರ್ದದಲ್ಲಾಗಲೀ, ಬಲದಲ್ಲಾಗಲೀ–ನಿನಗೆ ಸಮಾನನಾದವನು ಬೇರೊಬ್ಬನಿಲ್ಲ. ಆದುದರಿಂದ ನೀನೀಗಲೇ ಶತ್ರುವಿನ ಸಂಹಾರಕ್ಕಾಗಿಯೂ ವಿಜಯಗಳಿಸುವ ಸಲುವಾಗಿಯೂ ಯುದ್ಧಕ್ಕೆ ಹೊರಡು. ಶತ್ರುವಿನ ವಿನಾಶದ ಸಲುವಾಗಿಯೇ ನಾನು ನಿನ್ನನ್ನು ಎಚ್ಚರಗೊಳಿಸಿದೆನು. ಯುದ್ಧ ಯಾತ್ರೆಗೆ ಹೋಗಲು ರಾಕ್ಷಸರಿಗೆ ಇದು ಸಕಾಲವಾಗಿದೆ. ಪಾಶಹಸ್ತನಾದ ಯಮನಂತೆ ನೀನು ಶೂಲಪಾಣಿಯಾಗಿ ಯುದ್ಧಕ್ಕೆ ಹೋಗು. ವಾನರರನ್ನೂ ಸೂರ್ಯಸಮಾನತೇಜಸ್ವಿಗಳಾದ ಆ ಇಬ್ಬರು ರಾಜಪುತ್ರರನ್ನೂ ಭಕ್ಷಿಸು. ನಿನ್ನ ಭಯಂಕರವಾದ ರೂಪವನ್ನು ನೋಡಿದೊಡನೆಯೇ ವಾನರಸೈನಿಕರು ಪಲಾಯನಮಾಡುತ್ತಾರೆ. ರಾಮ-ಲಕ್ಷ್ಮಣರ ಎದೆಗಳೂ ಬಿರಿದುಹೋಗುತ್ತವೆ.”

ಅನಂತರ ರಾಕ್ಷಸಶ್ರೇಷ್ಠನಾದ ರಾವಣನು–ಮಹಾಬಲನಾದ ಕುಂಭಕರ್ಣನಿಗೆ ಹೀಗೆ ಹೇಳಿ ತನಗೆ ಮರುಹುಟ್ಟು ಲಭಿಸಿತೆಂದೇ ಭಾವಿಸಿದನು. ರಾವಣನು ಕುಂಭಕರ್ಣನ ಬಲವೆಷ್ಟೆಂಬುದನ್ನು ಚೆನ್ನಾಗಿ ತಿಳಿದಿದ್ದನು. ಅವನ ಪರಾಕ್ರಮದ ಪೂರ್ಣಪರಿಚಯವು ಅವನಿಗಿದ್ದಿತು. ಆ ಕಾರಣದಿಂದಲೇ ಪರಮತುಷ್ಟನಾದ ರಾವಣನು ಚಂದ್ರನಂತೆ ನಿರ್ಮಲವಾದ ಮುಖಭಾವದಿಂದ ಕಾಣುತ್ತಿದ್ದನು. ರಾವಣನು ಹೇಳಿದುದನ್ನು ಕೇಳಿ ಮಹಾಬಲಿಯಾದ ಕುಂಭಕರ್ಣನಿಗೆ ತುಂಬಾ ಸಂತೋಷವಾಯಿತು. ಯುದ್ಧಸನ್ನದ್ಧನಾಗಿ ಲಂಕಾಪಟ್ಟಣದಿಂದ ನಿರ್ಗಮಿಸಿದನು. ಶತ್ರುಸಂಹಾರಕನಾದ ಆ ವೀರನು ಕೂಡಲೇ ಕಬ್ಬಿಣದಿಂದ ಮಾಡಲ್ಪಟ್ಟಿದ್ದ, ಪುಟಕ್ಕೆ ಹಾಕಿದ ಚಿನ್ನದಿಂದ ಸಮಲಂಕೃತವಾಗಿದ್ದ, ತೀಕ್ಷ್ಣವಾದ ಶೂಲವನ್ನೆತ್ತಿಕೊಂಡನು. ಆ ಶೂಲದ ಕಾಂತಿಯು ಇಂದ್ರನ ವಜ್ರಾಯುಧಕ್ಕೆ ಸಮಾನವಾದ ಪ್ರಭೆಯಿಂದ ಕೂಡಿದ್ದಿತು. ವಜ್ರಾಯುಧದಷ್ಟೇ ಭಾರವಾಗಿದ್ದಿತು. ದೇವ-ದಾನವ-ಗಂಧರ್ವ-ಯಕ್ಷ-ಪನ್ನಗರನ್ನು ಸಂಹರಿಸುವ ಸಾಮರ್ಥ್ಯವನ್ನು ಹೊಂದಿದ್ದಿತು. ಕೆಂಪು ಹೂವುಗಳ ದೊಡ್ಡದಾದ ಮಾಲೆಯಿಂದ ಸಮಲಂಕೃತವಾಗಿದ್ದಿತು. ಆ ಶೂಲದಿಂದ ಬೆಂಕಿಯ ಕಿಡಿಗಳು ಹೊರಬರುತ್ತಿದ್ದುವು. ಶತ್ರುಗಳ ರಕ್ತದಿಂದ ಅನುರಂಜಿತವಾದ ದೊಡ್ಡದಾದ ಆ ಶೂಲವನ್ನೆತ್ತಿಕೊಂಡು ಮಹಾತೇಜಸ್ವಿಯಾದ ಕುಂಭಕರ್ಣನು ರಾವಣನಿಗೆ ಹೇಳಿದನು :

ಗಮಿಷ್ಯಾಮ್ಯಹಮೇಕಾಕೀ ತಿಷ್ಠತ್ವಿಹ ಬಲಂ ಮಹತ್ ।
ಅದ್ಯ ತಾನ್ ಕ್ಷುಭಿತಾನು ದ್ಧೋ ಭಕ್ಷಯಿಷ್ಯಾಮಿ ವಾನರಾನ್ ॥

"ನಾನು ಏಕಾಕಿಯಾಗಿಯೇ ಯುದ್ಧಕ್ಕೆ ಹೋಗುತ್ತೇನೆ. ಅಪಾರವಾದ ಸೈನ್ಯವು ಇಲ್ಲಿಯೇ ಇರಲಿ. ಕ್ರುದ್ಧನಾಗಿರುವ ನಾನು ಕ್ಷೋಭೆಗೊಂಡಿರುವ ವಾನರಸೈನಿಕರನ್ನು ನುಂಗಿಹಾಕುತ್ತೇನೆ."

ಕುಂಭಕರ್ಣನ ಮಾತನ್ನು ಕೇಳಿ ರಾವಣನು ಹೇಳಿದನು :

"ಕುಂಭಕರ್ಣ! ಶೂಲ-ಮುದ್ಗರಗಳನ್ನು ಕೈಗಳಲ್ಲಿ ಹಿಡಿದಿರುವ ಸೈನಿಕರಿಂದ ಪರಿವೃತನಾಗಿ ರಣರಂಗಕ್ಕೆ ಹೋಗು. ಮಹಾಕಾಯರಾದ ಮತ್ತು ಶೂರರಾದ ವಾನರರು ಒಳ್ಳೆಯ ಉದ್ಯೋಗಶೀಲರು. ಏಕಾಕಿಯಾಗಿಯೂ ಪ್ರಮತ್ತನಾಗಿಯೂ ಇರುವ ನಿನ್ನನ್ನು ಹಲ್ಲುಗಳಿಂದ ಕಚ್ಚಿಯೇ ಯಮಾ ಲಯಕ್ಕೆ ಕಳುಹಿಸಿಬಿಡುವರು. ಆದುದರಿಂದ ಎದುರಿಸಲು ಅಸಾಧ್ಯರಾದ ಸೈನಿಕರಿಂದ ಪರಿವೃತನಾಗಿ ಯುದ್ಧಕ್ಕೆ ಹೋಗು. ರಾಕ್ಷಸರಿಗೆ ಅಹಿತವನ್ನುಂಟು ಮಾಡುವ ಸಮಸ್ತಶತ್ರುಗಳನ್ನೂ ಸಂಹರಿಸು."

ಮಹಾತೇಜಸ್ವಿಯಾದ ರಾವಣನು ಹೀಗೆ ಹೇಳಿ ಸಿಂಹಾಸನದಿಂದ ಮೇಲೆದ್ದು ರತ್ನಗಳಿಂದ ಖಚಿತವಾಗಿದ್ದ ಸುವರ್ಣಮಾಲೆಯನ್ನು ಕುಂಭಕರ್ಣನ ಕತ್ತಿಗೆ ಹಾಕಿದನು. ಭುಜಕೀರ್ತಿಗಳಿಂದಲೂ, ಉಂಗುರಗಳಿಂದಲೂ, ಶ್ರೇಷ್ಠವಾದ ಆಭರಣಗಳಿಂದಲೂ, ಚಂದ್ರನಂತೆ ಪ್ರಕಾಶಮಾನವಾದ ಹಾರದಿಂದಲೂ, ದಿವ್ಯವಾದ ಸುಗಂಧಯುಕ್ತವಾದ ಮಾಲೆಗಳಿಂದಲೂ, ಕರ್ಣ-ಕುಂಡಲಗಳಿಂದಲೂ ಕುಂಭಕರ್ಣನ ಅಂಗಾಂಗಗಳನ್ನು ಅಲಂಕರಿಸಿದನು.

ಸುವರ್ಣಮಯವಾದ ಅಂಗದ, ಕೇಯೂರ, ಪದಕ–ಇವೇ ಮೊದಲಾದ ಆಭರಣಗಳಿಂದ ಸಮಲಂಕೃತನಾದ ವಿಶಾಲಕರ್ಣನಾದ ಕುಂಭಕರ್ಣನು ಹುತಮಾಡಲ್ಪಟ್ಟ ಯಜ್ಞೇಶ್ವರನಂತೆಯೇ ಪ್ರಕಾಶಿಸಿದನು. ಕುಂಭಕರ್ಣನ ಸೊಂಟದಲ್ಲಿ ದೊಡ್ಡದಾದೊಂದು ಉಡಿದಾರವಿದ್ದಿತು. ಅದರಿಂದ ಯುಕ್ತನಾಗಿದ್ದ ಕುಂಭಕರ್ಣನು ಅಮೃತಮಂಥನಕಾಲದಲ್ಲಿ ವಾಸುಕಿಯಿಂದ ನಿಬದ್ಧವಾಗಿದ್ದ ಮಂದರಪರ್ವತದಂತೆಯೇ ಕಾಣುತ್ತಿದ್ದನು. ಬಳಿಕ ಕುಂಭಕರ್ಣನು ಕವಚವನ್ನು ತೊಟ್ಟುಕೊಂಡನು. ಅದು ಸುವರ್ಣಮಯ

ವಾಗಿದ್ದಿತು. ಶತ್ರುಗಳ ದೊಡ್ಡ-ದೊಡ್ಡ ಆಘಾತಗಳನ್ನು ತಡೆದುಕೊಳ್ಳಲು ಸಮರ್ಥವಾಗಿದ್ದಿತು. ಮಿಂಚಿನ ಕಾಂತಿಯಿಂದ ಪ್ರಕಾಶಿಸುತ್ತಿದ್ದು ತನ್ನದೇ ಆದ ಪ್ರಭೆಯಿಂದ ದೇದೀಪ್ಯಮಾನವಾಗಿರುವಂತೆ ಕಾಣುತ್ತಿದ್ದಿತು. ಅಸ್ತ್ರ-ಶಸ್ತ್ರಗಳಿಂದಲೂ ಅಭೇದ್ಯವಾಗಿದ್ದಿತು. ಅಂತಹ ಅಮೋಘವಾದ ಕವಚವನ್ನು ಧರಿಸಿದ್ದ ಕುಂಭಕರ್ಣನು ಸಂಧ್ಯಾಕಾಲದ ಮೋಡದಿಂದ ಕವಿಯಲ್ಪಟ್ಟ ಪರ್ವತರಾಜನಂತೆಯೇ ಕಾಣುತ್ತಿದ್ದನು. ಸರ್ವಾಂಗಗಳಲ್ಲಿಯೂ ಸಮಸ್ತವಾದ ಆಭರಣಗಳನ್ನೂ ಧರಿಸಿದ್ದ, ಶೂಲಪಾಣಿಯಾಗಿದ್ದ ಆ ರಾಕ್ಷಸನು ಮೂರು ಲೋಕಗಳನ್ನೂ ಅಳೆಯಲು ಉತ್ಸಾಹಿತನಾಗಿದ್ದ ನಾರಾಯಣನಂತೆಯೇ ಕಾಣುತ್ತಿದ್ದನು. ಮಹಾಬಲನಾದ ಕುಂಭಕರ್ಣನು ಅಣ್ಣನನ್ನು ಆಲಿಂಗಿಸಿಕೊಂಡು ಪ್ರದಕ್ಷಿಣೆಮಾಡಿ ತಲೆಬಾಗಿ ನಮಸ್ಕರಿಸಿ ಯುದ್ಧಕ್ಕೆ ಹೊರಟನು. ರಾವಣನು ಪ್ರಶಸ್ತವಾದ ಆಶೀರ್ವಾದಗಳೊಡನೆ ಮತ್ತು ಶಂಖ-ದುಂದುಭಿಘೋಷಗಳೊಡನೆ ತಮ್ಮನನ್ನು ಕಳುಹಿಸಿಕೊಟ್ಟನು. ಶ್ರೇಷ್ಠವಾದ ಆಯುಧಗಳನ್ನು ಧರಿಸಿದ್ದ ಸೈನಿಕರೂ ಅವನೊಡನೆ ಹೊರಟರು. ಮಹಾತ್ಮರಾದ ಆ ಸೈನಿಕರಲ್ಲಿ ಕೆಲವರು ಆನೆಗಳ ಮೇಲೂ, ಕೆಲವರು ಕುದುರೆಗಳ ಮೇಲೂ, ಕೆಲವರು ಮೇಘಗಳಂತೆ ಗಡ-ಗಡಾ ಶಬ್ದಮಾಡುತ್ತಿದ್ದ ರಥಗಳಲ್ಲಿಯೂ ಕುಳಿತು ರಥಿಗಳಲ್ಲಿ ಶ್ರೇಷ್ಠನಾದ ಕುಂಭಕರ್ಣನನ್ನು ಅನುಸರಿಸಿ ಹೊರಟರು.

ಕೆಲವು ರಾಕ್ಷಸರು ಸರ್ಪಗಳ ಮೇಲೂ, ಕೆಲವರು ಒಂಟೆಗಳ ಮೇಲೂ, ಕೆಲವರು ಕತ್ತೆಗಳ ಮೇಲೂ, ಕೆಲವರು ಸಿಂಹ-ಆನೆ-ಜಿಂಕೆ-ಪಕ್ಷಿಗಳ ಮೇಲೂ ಕುಳಿತು ಭಯಂಕರನಾಗಿಯೂ ಮಹಾಬಲಿಷ್ಠನಾಗಿಯೂ ಇದ್ದ ಕುಂಭಕರ್ಣನನ್ನು ಹಿಂಬಾಲಿಸಿದರು. ಆ ಸಮಯದಲ್ಲಿ ಕುಂಭಕರ್ಣನ ಮೇಲೆ ಪುಷ್ಪವೃಷ್ಟಿಯಾಗುತ್ತಿದ್ದಿತು. ತಲೆಯ ಮೇಲೆ ಶ್ವೇತಚ್ಛತ್ರವಿದ್ದಿತು. ತ್ರಿಶೂಲವನ್ನು ಹಿಡಿದಿದ್ದನು. ಮದದಿಂದಲೂ–ರಕ್ತದ ಸೊಗಡಿನಿಂದಲೂ ಉನ್ಮತ್ತನಾಗಿದ್ದ, ದಾನವ-ದೇವತೆಗಳಿಗೆ ಶತ್ರುವಾದ ಕುಂಭಕರ್ಣನು ಯುದ್ಧದ ಸಲುವಾಗಿ ಲಂಕೆಯಿಂದ ಹೊರಟನು. ಅವನ ಜೊತೆಯಲ್ಲಿ ಗಟ್ಟಿಯಾಗಿ ಗರ್ಜನೆಗಳನ್ನು ಮಾಡುತ್ತಿದ್ದ, ಮಹಾಬಲಿಷ್ಠರಾದ, ಭಯಂಕರರಾದ, ಭಯಂಕರವಾದ ಕಣ್ಣುಗಳನ್ನು ಹೊಂದಿದ್ದ, ಶಸ್ತ್ರಧಾರಿಗಳಾಗಿದ್ದ, ಬಹುಸಂಖ್ಯಾತರಾದ ಪದಾತಿ ಸೈನಿಕರು ಹೊರಟರು. ಅವರೆಲ್ಲರ ಕಣ್ಣುಗಳೂ ಕೋಪದಿಂದ ಕೆಂಪಾಗಿದ್ದುವು.

ಅನೇಕ ಮಾರುಗಳಷ್ಟು ಎತ್ತರವಾಗಿದ್ದರು. ಕಾಡಿಗೆಯ ರಾಶಿಯಂತೆ ಕಾಣು ತ್ತಿದ್ದರು. ಕೈಗಳಲ್ಲಿ ಶೂಲ, ಕತ್ತಿ, ನಿಶಿತವಾದ ಗಂಡುಗೊಡಲಿ, ಭಿಂದಿಪಾಲ, ಪರಿಘ, ಗದೆ, ಮುಸಲ, ದೊಡ್ಡ-ದೊಡ್ಡದಾದ ತಾಳೇಮರದ ರೆಂಬೆಗಳು ಇವೇ ಮುಂತಾದ ಎದುರಿಸಲು ಅಸಾಧ್ಯವಾದ ಆಯುಧಗಳನ್ನು ಎತ್ತಿ ಕೊಂಡು ಹೋಗುತ್ತಿದ್ದರು. ಮಹಾತೇಜಸ್ವಿಯೂ ಮಹಾಬಲಿಷ್ಠನೂ ಆದ ಕುಂಭಕರ್ಣನು ದಾರುಣವಾದ ಮತ್ತು ಭಯಂಕರವಾದ ಬೇರೊಂದು ರೂಪವನ್ನು ಧರಿಸಿ ಶತ್ರುಗಳ ಮೇಲೆ ಬಿದ್ದನು. ಆ ಸಮಯದಲ್ಲವನು ಆರು ನೂರು ಧನುಸ್ಸುಗಳ ಪರಿಮಾಣದಷ್ಟು ಎತ್ತರವಾಗಿಯೂ–ಒಂದುನೂರು ಧನುಸ್ಸುಗಳ ಪರಿಮಾಣದಷ್ಟು ಅಗಲವಾಗಿಯೂ ಇದ್ದನು. ಅವನ ಕಣ್ಣು ಗಳು ಗಾಡಿಯ ಚಕ್ರದಂತೆ ವಿಶಾಲವಾಗಿಯೂ ದುಂಡಾಗಿಯೂ ಇದ್ದುವು. ಮಹಾಪರ್ವತದಂತೆಯೇ ಇದ್ದು ಅತ್ಯಂತಭಯಂಕರನಾಗಿ ಕಾಣುತ್ತಿದ್ದನು. ರಾಕ್ಷಸಸೈನಿಕರನ್ನು ವ್ಯೂಹಕ್ರಮದಲ್ಲಿ ನಿಲ್ಲಿಸಿ ಕಾಡುಗಿಚ್ಚಿನಿಂದ ಸುಟ್ಟುಹೋದ ಪರ್ವತದಂತೆಯೇ ಕಾಣುತ್ತಿದ್ದ ವಿಶಾಲಮುಖನಾದ ಕುಂಭಕರ್ಣನು ಗಹ-ಗಹಿಸಿ ನಗುತ್ತಾ ಹೇಳಿದನು :

"ಅಗ್ನಿಯು ಪತಂಗದ ಹುಳುಗಳನ್ನು ಭಸ್ಮಮಾಡುವಂತೆ–ನಾನೀಗಲೇ ವಾನರಮುಖ್ಯರ ದಳಗಳನ್ನು ಒಂದಾದ ಮೇಲೆ ಮತ್ತೊಂದರಂತೆ ಸುಟ್ಟು ಹಾಕುತ್ತೇನೆ. ವನಚಾರಿಗಳಾದ ವಾನರರು ಇಚ್ಛಾಪೂರ್ವಕವಾಗಿ ನನಗೆ ಯಾವ ಅಪರಾಧವನ್ನೂ ಮಾಡಿಲ್ಲ. ವಾನರರ ಜಾತಿಯು ನಮ್ಮಂತಹವರ ಉದ್ಯಾನವನಗಳಿಗೆ ಭೂಷಣಪ್ರಾಯವಾಗಿಯೇ ಇರುತ್ತದೆ. ನಮ್ಮನಗರ ವನ್ನು ಆಕ್ರಮಿಸಲು ಮುಖ್ಯಕಾರಣನಾದವನು ಲಕ್ಷ್ಮಣಸಹಿತನಾದ ರಾಮನು. ಅವನನ್ನು ಸಂಹರಿಸಿದರೆ ಎಲ್ಲರನ್ನೂ ಸಂಹರಿಸಿದಂತೆಯೇ ಆಗುವುದು. ಆದುದರಿಂದ ಯುದ್ಧದಲ್ಲಿ ರಾಮನನ್ನೇ ಮೊದಲು ಸಂಹರಿಸುತ್ತೇನೆ."

ಕುಂಭಕರ್ಣನು ಹೀಗೆ ಹೇಳುತ್ತಿರಲು ರಾಕ್ಷಸರೆಲ್ಲರೂ ಸೇರಿ ಮಹಾ ಸಮುದ್ರವನ್ನೂ ಕ್ಷೋಭೆಗೊಳಿಸುವಂತಹ ಅತ್ಯಂತಘೋರವಾದ ಗರ್ಜನೆ ಗಳನ್ನು ಮಾಡಿದರು. ಕುಂಭಕರ್ಣನು ಯುದ್ಧಭೂಮಿಯನ್ನು ಸೇರುವ ಮೊದಲೇ ನಾಲ್ಕು ಕಡೆಗಳಲ್ಲಿಯೂ ಘೋರತರವಾದ ಅಪಶಕುನಗಳು ಕಾಣ ತೊಡಗಿದುವು. ಉಲ್ಕೆಗಳಿಂದಲೂ ಸಿಡಿಲುಗಳಿಂದಲೂ ಭರಿತವಾಗಿದ್ದ ಮೇಘ

ಗಳು ಕತ್ತೆಯ ಬಣ್ಣದಂತೆ ಬೂದು-ಬೂದಾಗಿ ಕಾಣಿಸತೊಡಗಿದುವು. ಸಮುದ್ರಗಳಿಂದಲೂ ಅರಣ್ಯಗಳಿಂದಲೂ ಸಂಪನ್ನವಾಗಿದ್ದ ಭೂಮಿಯು ನಡುಗತೊಡಗಿತು. ಗುಳ್ಳೇನರಿಗಳು ಜ್ವಾಲೆಗಳಿಂದ ಕೂಡಿದ ಮುಖಗಳಿಂದ ಅಮಂಗಳಕರವಾದ ಧ್ವನಿಯಿಂದ ಕೂಗಿಕೊಳ್ಳುತ್ತಿದ್ದುವು. ಪಕ್ಷಿಗಳು ಮಂಡಲಾಕಾರವಾಗಿ ಹಾರುತ್ತಾ ಕುಂಭಕರ್ಣನನ್ನು ಅಪಸವ್ಯವಾಗಿ ಸುತ್ತು ತ್ತಿದ್ದುವು. ಕುಂಭಕರ್ಣನು ಯುದ್ಧರಂಗದ ಹಾದಿಯನ್ನು ಹಿಡಿದುಹೋಗುತ್ತಿ ದ್ದಾಗ ಒಂದು ರಣಹದ್ದು ಅವನು ಹಿಡಿದಿದ್ದ ಶೂಲದ ಮೇಲೆ ಬಿದ್ದಿತು. ಅವನ ಎಡಗಣ್ಣೂ ಮತ್ತು ಎಡಭುಜವೂ ಅದುರತೊಡಗಿದುವು. ಭಯಂಕರವಾಗಿ ಧ್ವನಿಮಾಡುತ್ತಾ ಧಗ-ಧಗಿಸಿ ಉರಿಯುತ್ತಾ ಉಲ್ಕೆಯು ಆಕಾಶದಿಂದ ಕೆಳಕ್ಕೆ ಬಿದ್ದಿತು. ಸೂರ್ಯನು ಕಾಂತಿಹೀನನಾದನು. ವಾಯುವು ಸುಖಕರವಾಗಿ ಬೀಸುತ್ತಿರಲಿಲ್ಲ. ಯಮನ ಬಲದಿಂದ ಪ್ರೇರಿತನಾದ ರಾಕ್ಷ ಸನು ರೋಮಾಂಚನವಾಗುವ ರೀತಿಯಲ್ಲಿ ಕಾಣಿಸಿಕೊಂಡ ಮಹೋತ್ಪಾತ ಗಳನ್ನು ಲೆಕ್ಕಿಸದೆಯೇ ಯುದ್ಧಮಾಡಲು ರಣರಂಗಕ್ಕೆ ತೆರಳಿದನು. ಪರ್ವತ ಸದೃಶನಾಗಿದ್ದ ಕುಂಭಕರ್ಣನು ಕಾಲುಗಳಿಂದಲೇ ಎತ್ತರವಾಗಿದ್ದ ಲಂಕಾ ಪಟ್ಟಣದ ಪ್ರಾಕಾರವನ್ನು ದಾಟಿ ದಟ್ಟವಾದ ಮೇಘಗಳಂತಿದ್ದ ಪರಮಾದ್ಭುತ ವಾಗಿದ್ದ ವಾನರಸೈನ್ಯವನ್ನು ನೋಡಿದನು. ಪರ್ವತೋಪಮನಾಗಿದ್ದ, ರಾಕ್ಷಸ ಶ್ರೇಷ್ಠನಾದ ಕುಂಭಕರ್ಣನನ್ನು ನೋಡಿ ಬಿರುಗಾಳಿಯಿಂದ ಪ್ರೇರಿತವಾದ ಮೋಡಗಳು ಚೆಲ್ಲಾಪಿಲ್ಲಿಯಾಗುವಂತೆ–ವಾನರಸೈನಿಕರು ದಿಕ್ಕಾಪಾಲಾಗಿ ಓಡಿ ಹೋದರು.

ಅತಿಪ್ರಚಂಡವಾಗಿದ್ದ ವಾನರಸೈನ್ಯವು–ವಾಯುವಿನ ಪ್ರಚೋದನೆಯಿಂದ ಭಿನ್ನವಾಗಿ ಹೋದ ಮೋಡಗಳ ಸಮೂಹದಂತೆ–ದಿಕ್ಕಾಪಾಲಾಗಿ ಓಡುತ್ತಿ ರುವುದನ್ನು ಕಂಡು ಮೇಘಸದೃಶನಾಗಿದ್ದ ರಾಕ್ಷಸನು ಪರಮಸಂತೋಷದಿಂದ ಮೇಘದಂತೆಯೇ ಗರ್ಜನೆಮಾಡಿದನು. ಆಕಾಶದಲ್ಲಿನ ಮೇಘಗಳ ಗರ್ಜನೆ ಯಂತಿದ್ದ ಕುಂಭಕರ್ಣನ ಭಯಂಕರವಾದ ಗರ್ಜನೆಯನ್ನು ಕೇಳಿ ವಾನರರು ಬುಡವನ್ನು ಕಡಿದ ಸಾಲವೃಕ್ಷದಂತೆ ಭೂಮಿಯ ಮೇಲೆ ತೊಪ-ತೊಪನೆ ಬೀಳತೊಡಗಿದರು. ದೊಡ್ಡದಾದ ಪರಿಘವನ್ನು ಹಿಡಿದಿದ್ದ ಮಹಾಕಾಯನಾದ ಕುಂಭಕರ್ಣನು ಶತ್ರುವಿನ ಸಂಹಾರಕ್ಕಾಗಿ ಲಂಕಾಪಟ್ಟಣದಿಂದ ಹೊರಟನು. ಪ್ರಳಯಕಾಲದಲ್ಲಿ ಪ್ರಪಂಚದ ಸಂಹಾರಕ್ಕೆ ಕಾರಣಭೂತವಾದ ಕಾಲದಂಡ

ವನ್ನು ಹಿಡಿದ ಕಾಲಪುರುಷನಂತೆ–ಕಪಿಸೈನಿಕರಿಗೆ ಕುಂಭಕರ್ಣನು ಮಹತ್ತರವಾದ ಭಯವನ್ನುಂಟುಮಾಡಿದನು.

೬೫ನೆಯ ಸರ್ಗವು ಮುಗಿಯಿತು.

ಕುಂಭಕರ್ಣನ ಭಯದಿಂದ ಓಡಿಹೋದ ವಾನರರಿಗೆ ಅಂಗದನಿಂದ ಪ್ರೋತ್ಸಾಹ : ಕುಂಭಕರ್ಣನಿಂದ ವಾನರರ ಸಂಹಾರ : ವಾನರರ ಪಲಾಯನ : ಅಂಗದನ ಪ್ರೋತ್ಸಾಹದಂತೆ ಮತ್ತೆ ವಾನರರ ಆಗಮನ

ಸ ಲಙ್ಘಯಿತ್ವಾ ಪ್ರಾಕಾರಂ ಗಿರಿಕೂಟೋಪಮೋ ಮಹಾನ್ ।
ನಿರ್ಯಯೌ ನಗರಾತ್ತೂರ್ಣಂ ಕುಮ್ಭಕರ್ಣೋ ಮಹಾಬಲಃ ॥೧॥

ಪರ್ವತಶಿಖರದಂತಿದ್ದ ಕುಂಭಕರ್ಣನು ಲಂಕೆಯ ಎತ್ತರವಾಗಿದ್ದ ಪ್ರಾಕಾರ ವನ್ನು ಕಾಲುಗಳಿಂದಲೇ ದಾಟಿ ನಗರದಿಂದ ಬಹಳ ವೇಗವಾಗಿ ಹೊರಟನು.

ಗರ್ಜನೆಗಳಿಂದ ಸಿಡಿಲುಗಳನ್ನೇ ಮೀರಿಸುವನೋ ಎಂಬಂತೆ–ಪರ್ವತಗಳನ್ನೇ ಧ್ವಂಸಮಾಡುವನೋ ಎಂಬಂತೆ–ಸಮುದ್ರದಲ್ಲಿಯೂ ಪ್ರತಿಧ್ವನಿಯನ್ನುಂಟುಮಾಡುತ್ತಾ ಕುಂಭಕರ್ಣನು ಗಟ್ಟಿಯಾಗಿ ಗರ್ಜಿಸಿದನು. ವರುಣೇಂದ್ರ-ಯಮರಿಂದಲೂ ಅವಧ್ಯನಾದ ಭಯಂಕರವಾದ ಕಣ್ಣುಗಳಿರುವ ರಾಕ್ಷಸನು ಬರುತ್ತಿರುವುದನ್ನು ನೋಡಿ ವಾನರಸೈನಿಕರೆಲ್ಲರೂ ಪಲಾಯನಮಾಡಿದರು. ಸೈನಿಕರೂ ಮತ್ತು ದಳಪತಿಗಳೂ ಓಡುತ್ತಿರುವುದನ್ನು ನೋಡಿ ರಾಜಕುಮಾರನಾದ ಅಂಗದನು ನಲ-ನೀಲ-ಗವಾಕ್ಷ ಮತ್ತು ಮಹಾಬಲನಾದ ಕುಮುದ–ಇವರಿಗೆ ಹೇಳಿದನು :

ಆತ್ಮಾನಮತ್ರ ವಿಸ್ಮೃತ್ಯ ವೀರ್ಯಾಣ್ಯಭಿಜನಾನಿ ಚ ।
ಕ್ವ ಗಚ್ಛತ ಭಯತ್ರಸ್ತಾಃ ಪ್ರಾಕೃತಾ ಹರಯೋ ಯಥಾ ॥೫॥

"ವಾನರವೀರರೇ! ನಿಮ್ಮ ಉತ್ತಮಕುಲವನ್ನೂ ಮತ್ತು ಅಲೌಕಿಕವಾದ ಪರಾಕ್ರಮವನ್ನೂ ಮರೆತು ಸಾಧಾರಣಕಪಿಗಳಂತೆ ಏಕೆ ಓಡಿಹೋಗುತ್ತಿರುವಿರಿ?

ಸೌಮ್ಯರೇ! ಈಗಲೇ ಎಲ್ಲರೂ ಹಿಂದಿರುಗಿರಿ. ಪ್ರಾಣಗಳನ್ನು ರಕ್ಷಿಸಿಕೊಳ್ಳಲು ಓಡುತ್ತಿರುವಿರೇನು? ಅದರ ಆವಶ್ಯಕತೆಯು ನಮಗಿಲ್ಲ. ರಾಕ್ಷಸರು ನಮ್ಮೊಡನೆ ಯುದ್ಧಮಾಡಲು ಖಂಡಿತವಾಗಿಯೂ ಸಮರ್ಥ ರಾಗಿಲ್ಲ. ಮಾಯೆಯನ್ನಾಶ್ರಯಿಸಿ ನಮ್ಮನ್ನು ಭಯಪಡಿಸಲು ದೊಡ್ಡ-ದೊಡ್ಡ ರೂಪಗಳನ್ನು ಧರಿಸಿ ಬಂದಿದ್ದಾರೆ. ನಮ್ಮನ್ನು ಭಯಪಡಿಸಲು ಕೃತ್ರಿಮವಾಗಿ ಧರಿಸಿರುವ ರೂಪವಿದು. ಮಹತ್ತರವಾಗಿ ಎದ್ದು ಬಂದಿರುವ ರಾಕ್ಷಸರ ಈ ಬೆದರುಗೊಂಬೆಯನ್ನು ಪರಾಕ್ರಮದಿಂದ ಧ್ವಂಸಮಾಡೋಣ. ಎಲ್ಲರೂ ಕೂಡಲೇ ಹಿಂದಿರುಗಿರಿ."

ಬಹಳ ಕಷ್ಟದಿಂದ ಸಮಾಧಾನಗೊಳಿಸಲ್ಪಟ್ಟ ವಾನರಸೈನಿಕರು ಎಲ್ಲ ಕಡೆಗಳಿಂದಲೂ ಬಂದು ಸೇರಿ ವೃಕ್ಷಗಳನ್ನು ಕೈಗಳಲ್ಲಿ ಹಿಡಿದು ರಣರಂಗದಲ್ಲಿ ಯುದ್ಧಸನ್ನದ್ಧರಾಗಿ ನಿಂತರು. ಅನಂತರ ವಾನರರು ಮದೋದಕವನ್ನು ಸುರಿಸುತ್ತಿರುವ ಆನೆಗಳಂತೆ ಪರಮಕ್ರುದ್ಧರಾಗಿ ಕುಂಭಕರ್ಣನನ್ನು ಎತ್ತರವಾದ ಪರ್ವತಶಿಖರಗಳಿಂದಲೂ, ಬಂಡೆಗಳಿಂದಲೂ, ಪುಷ್ಪಿತವಾದ ಅಗ್ರಭಾಗ

ಗಳಿಂದ ಕೂಡಿದ್ದ ವೃಕ್ಷಗಳಿಂದಲೂ ಪ್ರಹರಿಸಿದರು. ಆದರೆ ಅದರಿಂದ ಕುಂಭ ಕರ್ಣನು ಸ್ವಲ್ಪವೂ ವಿಚಲಿತನಾಗಲಿಲ್ಲ. ಅವನ ಶರೀರದ ಮೇಲೆ ಬೀಳುತ್ತಿದ್ದ ಬಂಡೆಗಳೇ ಒಡೆದುಹೋಗುತ್ತಿದ್ದುವು. ಹೂಗಳಿಂದ ಪರಿಪೂರ್ಣವಾಗಿದ್ದ ವೃಕ್ಷಗಳು ಭಗ್ನವಾಗಿ ನೆಲದ ಮೇಲೆ ಬೀಳುತ್ತಿದ್ದುವು. ಪರಮಕ್ರುದ್ಧನಾದ ಕುಂಭಕರ್ಣನು ಮಹಾಬಲಿಷ್ಠರಾದ ವಾನರಸೈನಿಕರನ್ನು ಹಬ್ಬುತ್ತಿರುವ ಕಾಡುಗಿಚ್ಚು ಅರಣ್ಯಗಳೆಲ್ಲವನ್ನೂ ಸುಟ್ಟುಹಾಕಿಬಿಡುವಂತೆ ಪ್ರಯತ್ನ ಪೂರ್ವಕವಾಗಿ ಧ್ವಂಸಮಾಡುತ್ತಿದ್ದನು. ಪರಾಜಿತರಾದ ಹಲವಾರು ವಾನರಸೈನಿಕರು ರಕ್ತದಿಂದ ತೋಯ್ದು ಕೆಂಪು ಹೂಗಳಿಂದ ತುಂಬಿರುವ ವೃಕ್ಷವು ಕೆಳಕ್ಕೆ ಬೀಳುವಂತೆ–ಭೂಮಿಯಲ್ಲಿ ಬಿದ್ದಿದ್ದರು. ಪ್ರಾಣಭಯ ದಿಂದಾಗಿ ಹಾರಿ ಹೋಗುತ್ತಿದ್ದ ವಾನರಸೈನಿಕರು ಹಿಂದೆ-ಮುಂದೆ-ಪಕ್ಕಗಳಲ್ಲಿ ಏನಿರುವುದೆಂಬುದನ್ನೂ ನೋಡುತ್ತಿರಲಿಲ್ಲ. ಹೀಗಾಗಿ ಕೆಲವು ವಾನರಸೈನಿ ಕರು ಸಮುದ್ರದಲ್ಲಿ ಬಿದ್ದರು. ಕೆಲವರು ಆಕಾಶಕ್ಕೆ ಹಾರಿದರು. ರಾಕ್ಷಸನು ಲೀಲಾಜಾಲವಾಗಿ ವಾನರಸೈನಿಕರನ್ನು ಸಂಹರಿಸುತ್ತಿದ್ದನು. ಪ್ರಾಣಭಯದಿಂದ ಅಳಿದುಳಿದ ವಾನರರು ಯಾವ ಮಾರ್ಗದಿಂದ ಲಂಕೆಗೆ ಬಂದಿದ್ದರೋ ಅದೇ ಮಾರ್ಗವನ್ನು ಹಿಡಿದು ಓಡಿಹೋಗುತ್ತಿದ್ದರು ಖಿನ್ನಮುಖರಾಗಿದ್ದ ವಾನರಸೈನಿಕರು ಭಯದಿಂದ ಹಳ್ಳದ ಸ್ಥಳಗಳಿಗೆ ಓಡಿಹೋಗುತ್ತಿದ್ದರು. ಕರಡಿಸೈನಿಕರು ಮರಗಳನ್ನು ಹತ್ತಿದರು. ಕೆಲವರು ಪರ್ವತಗಳನ್ನು ಆಶ್ರಯಿ ಸಿದರು. ಕೆಲವು ವಾನರಸೈನಿಕರು ಸಮುದ್ರದಲ್ಲಿ ಮುಳುಗಿದರು. ಕೆಲವರು ಪರ್ವತದ ಗುಹೆಗಳಲ್ಲಿ ಅವಿತುಕೊಂಡರು. ಕೆಲವರು ಭಯದಿಂದಲೇ ಕೆಳಕ್ಕೆ ಬಿದ್ದುಬಿಟ್ಟರು. ಕೆಲವರು ಒಂದು ಸ್ಥಳದಲ್ಲಿ ನಿಲ್ಲದೇ ಒಂದೊಂದು ಕಡೆಗೂ ಓಡುತ್ತಲೇ ಇದ್ದರು. ಕೆಲವರು ಭೂಮಿಯ ಮೇಲೆ ಪ್ರಾಣಗಳನ್ನು ತೊರೆದು ಬಿದ್ದರು. ಕೆಲವರು ಸತ್ತವರಂತೆ ಉಸಿರುಹಿಡಿದು ಮಲಗಿದ್ದರು. ವಾನರ ಸೈನ್ಯವು ಹೀಗೆ ಚದುರಿದುದನ್ನು ನೋಡಿ ಅಂಗದನು ಪುನಃ ಹೇಳಿದನು :

"ವಾನರಶಿರೋಮಣಿಗಳೇ! ನಿಲ್ಲಿರಿ! ಓಡಿಹೋಗಬೇಡಿರಿ. ನಾವೆಲ್ಲರೂ ಒಟ್ಟಿಗೆ ಯುದ್ಧಮಾಡೋಣ. ನೀವು ಈ ಭೂಮಂಡಲವನ್ನೇ ಸುತ್ತಾಡಿದರೂ ಓಡುತ್ತಿರುವ ನಿಮಗೆ ಆಶ್ರಯವು ಸಿಕ್ಕುವುದೆಂದು ನಾನು ಭಾವಿಸುವುದಿಲ್ಲ. ಆದುದರಿಂದ ಎಲ್ಲರೂ ಹಿಂದಿರುಗಿರಿ. ಸುಗ್ರೀವನ ಆಜ್ಞೆಯನ್ನು ಮೀರಿ-

ಪಲಾಯನಮಾಡುತ್ತಿರುವ ನೀವು ಎಲ್ಲಿಗೇ ಹೋದರೂ ಪ್ರಾಣಗಳನ್ನು ಉಳಿಸಿಕೊಳ್ಳಲು ಸಾಧ್ಯವಿರುವುದೇ? ಎದುರಿಸಲು ಅಸಾಧ್ಯವಾದ ವೇಗ ಮತ್ತು ಪರಾಕ್ರಮಗಳಿರುವ ನೀವೇನಾದರೂ ಆಯುಧಗಳನ್ನು ತ್ಯಜಿಸಿ ಯುದ್ಧಭೂಮಿಯಿಂದ ಓಡಿಹೋದರೆ–ನಿಮ್ಮ ಪತ್ನಿಯರೇ ನಿಮ್ಮನ್ನು ಪರಿಹಾಸ್ಯಮಾಡುತ್ತಾರೆ. ನೀವು ಬದುಕಿದ್ದರೂ ಮುಂದೆ ಆ ಅಪಹಾಸ್ಯವು ನಿಮಗೆ ಅತ್ಯಂತ ದುಃಖಪ್ರದವಾಗುತ್ತದೆ. ನೀವೆಲ್ಲರೂ ಬಹಳ ದೀರ್ಘಕಾಲ ದಿಂದ ಬೆಳೆದುಬಂದಿರುವ ಮಹತ್ತಾದ ವಂಶದಲ್ಲಿ ಹುಟ್ಟಿರುವಿರಿ. ಸಾಧಾರಣ ಕಪಿಗಳಂತೆ ನೀವೆಲ್ಲಿಗೆ ಓಡಿಹೋಗುವಿರಿ? ನೀವೇನಾದರೂ ಪರಾಕ್ರಮವನ್ನು ತೊರೆದು ಭಯದ ಕಾರಣದಿಂದ ಓಡಿಹೋದರೆ ನೀವೆಲ್ಲರೂ ಅನಾರ್ಯ ರಾಗುವಿರಿ. ಜನಸಮೂಹದಲ್ಲಿ ಕುಳಿತಾಗ ಪ್ರಚಂಡವೀರರೆಂದೂ–ರಾಕ್ಷಸ ರೆಲ್ಲರನ್ನೂ ಕ್ಷಣಮಾತ್ರದಲ್ಲಿ ಧ್ವಂಸಮಾಡಿಬಿಡುವುದಾಗಿಯೂ–ನೀವೆಲ್ಲರೂ ಹೇಳಿಕೊಳ್ಳುತ್ತಿದ್ದಿರಿ. ನಿಮ್ಮ ಉದಾರವಾದ ಮತ್ತು ಹಿತಕರವಾದ ಆ ಆತ್ಮಶ್ಲಾಘನೆಯ ಮಾತುಗಳೆಲ್ಲವೂ ಈಗೆಲ್ಲಿ ಹೋದುವು?

> ಭೀರೋಃ ಪ್ರವಾದಾಃ ಶ್ರೂಯನ್ತೇ
> ಯಸ್ತು ಜೀವತಿ ಧಿಕ್ಕೃತಃ ।
> ಮಾರ್ಗಃ ಸತ್ಪುರುಷೈರ್ಜುಷ್ಟಃ
> ಸೇವ್ಯತಾಂ ತ್ಯಜ್ಯತಾಂ ಭಯಮ್ ॥೨೩॥

ಯಾವನು ಸತ್ಪುರುಷರಿಂದ ತಿರಸ್ಕರಿಸಲ್ಪಟ್ಟವನಾಗಿ ಜೀವಿಸಿರುವನೋ ಅಂತಹವನು ಯುದ್ಧದಲ್ಲಿ ಹೇಡಿಯಂತೆ ಓಡಿಹೋದನೆಂಬ ನಿಂದಾತ್ಮಕವಾದ ಮಾತುಗಳನ್ನು ಯಾವಾಗಲೂ ಕೇಳುತ್ತಲೇ ಇರಬೇಕಾಗುತ್ತದೆ. ಆದುದರಿಂದ ನೀವೆಲ್ಲರೂ ಭಯವನ್ನು ಪರಿತ್ಯಜಿಸಿ ಸತ್ಪುರುಷರು ಅನುಸರಿಸಿದ ಮಾರ್ಗವನ್ನೇ ಆಶ್ರಯಿಸಿರಿ.

> ಶಯಾಮಹೇಽಥ ನಿಹತಾಃ
> ಪೃಥಿವ್ಯಾಮಲ್ಪಜೀವಿತಾಃ ।
> ದುಷ್ಪ್ರಾಪಂ ಬ್ರಹ್ಮಲೋಕಂ ವಾ
> ಪ್ರಾಪ್ನುಮೋ ಯುಧಿ ಸೂದಿತಾಃ ॥೨೪॥

ನಾವು ಯುದ್ಧದಲ್ಲಿ ಹತರಾಗಿ ಅಲ್ಪಾಯುಗಳಾಗಿ ರಣರಂಗದಲ್ಲಿಯೇ ಮಲಗೋಣ. ಸಾಮಾನ್ಯರಿಂದ ಹೊಂದಲು ಅಸಾಧ್ಯವಾದ ಬ್ರಹ್ಮಲೋಕ ವನ್ನು ಪಡೆದುಕೊಳ್ಳೋಣ.

ಅವಾಪ್ನುಯಾಮಃ ಕೀರ್ತಿಂ ವಾ ನಿಹತ್ವಾ ಶತ್ರುಮಾಹವೇ ।
ನಿಹತಾ ವೀರಲೋಕಸ್ಯ ಭೋಕ್ಷ್ಯಾಮೋ ವಸು ವಾನರಾಃ ॥೨೫॥

ಶತ್ರುವನ್ನು ಯುದ್ಧದಲ್ಲಿ ಸಂಹರಿಸಿ ಶಾಶ್ವತವಾದ ಕೀರ್ತಿಯನ್ನಾದರೂ ಪಡೆದುಕೊಳ್ಳೋಣ. ಹಾಗಲ್ಲದೇ ನಾವೇ ಏನಾದರೂ ಯುದ್ಧದಲ್ಲಿ ಮರಣ ಹೊಂದಿದರೆ ವೀರಲೋಕದಲ್ಲಿ ಲಭಿಸುವ ಭೋಗೈಶ್ವರ್ಯಗಳನ್ನು ಅನುಭವಿಸೋಣ.

ಉರಿಯುತ್ತಿರುವ ಬೆಂಕಿಯ ಬಳಿಗೆ ಬಂದ ಪತಂಗದ ಹುಳುವು ಬದುಕಿ ಉಳಿಯದಂತೆ–ಕುಂಭಕರ್ಣನು ರಾಮನನ್ನು ನೋಡಿದನಂತರ ಜೀವಸಹಿತ ಹಿಂದಿರುಗುವುದಿಲ್ಲ.

ಪಲಾಯನೇನ ಚೋದ್ದಿಷ್ಟಾಃ ಪ್ರಾಣಾನ್ರಕ್ಷಾಮಹೇ ವಯಮ್ ।
ಏಕೇನ ಬಹವೋ ಭಗ್ನಾ ಯಶೋ ನಾಶಂ ಗಮಿಷ್ಯತಿ ॥೨೮॥

ಮಹಾವೀರರೆಂದು ಪರಿಗಣಿತರಾಗಿರುವ ನಾವು ಒಬ್ಬ ವ್ಯಕ್ತಿಯಿಂದ ಭಗ್ನರಾಗಿ ಪಲಾಯನಮಾಡಿ ಪ್ರಾಣಗಳನ್ನು ರಕ್ಷಿಸಿಕೊಂಡೆವಾದರೆ ಇದು ವರೆಗೆ ಗಳಿಸಿರುವ ಯಶಸ್ಸೆಲ್ಲವೂ ನಾಶವಾಗಿ ಬಿಡುತ್ತದೆ."

ಸುವರ್ಣಮಯವಾದ ತೋಳ್ಬಳೆಗಳನ್ನು ಧರಿಸಿದ್ದ ಅಂಗದನು ಹೀಗೆ ಸೈನಿಕರನ್ನು ಯುದ್ಧಕ್ಕೆ ಹಿಂದಿರುಗುವಂತೆ ಪ್ರೋತ್ಸಾಹಿಸುತ್ತಿರಲು–ಓಡಿ ಹೋಗುತ್ತಿದ್ದ ವಾನರರು ಶೂರರಿಗೆ ಉಚಿತವಲ್ಲದ ಈ ಮಾತನ್ನು ಹೇಳಿದರು:

"ಯುವರಾಜ! ರಾಕ್ಷಸ ಕುಂಭಕರ್ಣನು ನಮ್ಮನ್ನು ಭಯಂಕರವಾದ ರೀತಿಯಲ್ಲಿ ಸಂಹಾರಮಾಡುತ್ತಿದ್ದಾನೆ. ಆದುದರಿಂದ ಅವನೆದುರಾಗಿ ಯುದ್ಧಕ್ಕೆ ನಿಲ್ಲಲು ಇದು ಸಮಯವಲ್ಲ. ಆದುದರಿಂದಲೇ ಓಡಿಹೋಗುತ್ತಿದ್ದೇವೆ. **ದಯಿತಂ ಜೀವಿತಂ ಹಿ ನಃ** –ನಮಗೆ ಎಲ್ಲ ವಸ್ತುಗಳಿಗಿಂತಲೂ ನಮ್ಮ ಜೀವಿತವೇ ಅತ್ಯಂತಪ್ರಿಯವಾದ ವಸ್ತುವಾಗಿದೆ."

ಹೀಗೆ ಹೇಳಿದ ವಾನರದಳಪತಿಗಳು ಭಯಂಕರನಾದ, ಭಯಂಕರವಾದ

ಕಣ್ಣುಗಳಿಂದ ಕೂಡಿದ್ದ ಕುಂಭಕರ್ಣನು ತಮ್ಮನ್ನು ಬೆನ್ನಟ್ಟಿ ಬರುತ್ತಿರುವುದನ್ನು ಕಂಡು ದಿಕ್ಕಾಪಾಲಾಗಿ ಓಡಿಹೋದರು. ಆದರೂ ಅಂಗದನು ಅವರನ್ನು ಬಿಡಲಿಲ್ಲ. ಯುಕ್ತಿಯುಕ್ತವಾದ ಮತ್ತು ಸಾಂತ್ವನದ ಮಾತುಗಳಿಂದಲೂ ವಾಲಿವಧೆ, ಖರ-ದೂಷಣರ ವಧೆ ಇವೇ ಮುಂತಾದ ನಿದರ್ಶನಗಳಿಂದಲೂ ಅವರೆಲ್ಲರನ್ನೂ ಹಿಂದಕ್ಕೆ ಕರೆಸಿದನು. ಬುದ್ಧಿವಂತನಾದ ವಾಲಿಪುತ್ರನು ವಾನರಸೈನಿಕರೆಲ್ಲರನ್ನೂ ಪ್ರಸನ್ನಗೊಳಿಸಿದನು. ಎಲ್ಲ ವಾನರ ದಳಪತಿಗಳೂ ಸುಗ್ರೀವನ ಆಜ್ಞೆಯನ್ನು ಪ್ರತೀಕ್ಷಿಸುತ್ತಾ ಯುದ್ಧಸನ್ನದ್ಧರಾಗಿ ನಿಂತುಕೊಂಡರು. ಬಳಿಕ ಸುಗ್ರೀವನ ಆಜ್ಞೆಯಂತೆ ಋಷಭ, ಶರಭ, ಮೈಂದ, ಧೂಮ್ರ, ನೀಲ, ಕುಮುದ, ಸುಷೇಣ, ಗವಾಕ್ಷ, ರಂಭ, ತಾರ, ದ್ವಿವಿದ, ಪನಸ, ವಾಯುವಿನ ಮಗನಾದ ಹನುಮಂತ–ಇವರೇ ಮೊದಲಾದ ವಾನರ ಶ್ರೇಷ್ಠರು ಕುಂಭಕರ್ಣನನ್ನು ಎದುರಿಸಿ ಯುದ್ಧಮಾಡುವ ಸಲುವಾಗಿ ಬಹಳ ಬೇಗ ರಣಾಂಗಣಕ್ಕೆ ಹೋದರು.

೬೬ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೬೭ನೆಯ ಸರ್ಗ

ಕುಂಭಕರ್ಣನ ಘೋರಯುದ್ಧ: ಶ್ರೀರಾಮನಿಂದ ಕುಂಭಕರ್ಣನ ವಧೆ

ತೇ ನಿವೃತ್ತಾ ಮಹಾಕಾಯಾಃ ಶ್ರುತ್ವಾಙ್ಗದವಚಸ್ತದಾ ।
ನೈಷ್ಠಿಕೀಂ ಬುದ್ಧಿಮಾಸ್ಥಾಯ ಸರ್ವೇ ಸಂಗ್ರಾಮಕಾಂಕ್ಷಿಣಃ ॥೧॥

ಅಂಗದನು ಹೇಳಿದ ಮಾತನ್ನು ಕೇಳಿ ಮಹಾಕಾಯರಾದ ವಾನರ ದಳಪತಿಗಳು ಗೆಲ್ಲುವುದು ಅಥವಾ ಮಡಿಯುವುದು–ಎಂಬ ನಿಶ್ಚಯಾತ್ಮಕ ವಾದ ನಿರ್ಧಾರವನ್ನು ಕೈಗೊಂಡು ರಣಭೂಮಿಗೆ ಹಿಂದಿರುಗಿದರು.

ಮಹಾಬಲಿಷ್ಠನಾದ ಅಂಗದನು ದಳಪತಿಗಳ ಪರಾಕ್ರಮವನ್ನು ವರ್ಣಿ ಸುತ್ತಾ ಅವರನ್ನು ಯುದ್ಧಸನ್ನದ್ಧರಾಗುವಂತೆ ಹುರಿದುಂಬಿಸಿದನು. ಅನಂತರ ವಾನರಸೈನಿಕರು ಮರಣಹೊಂದಲೇ ನಿಶ್ಚಯಿಸಿ ಪರಮಹರ್ಷದಿಂದ ಮುನ್ನುಗ್ಗಿ

ಹೋಗಿ ಪ್ರಾಣಗಳನ್ನೇ ಪಣವನ್ನಾಗಿಟ್ಟುಕೊಂಡು ಸುಘೋರವಾದ ಯುದ್ಧ ವನ್ನು ಪ್ರಾರಂಭಿಸಿದರು. ಮಹಾಕಾಯರಾದ ವಾನರರು ವೃಕ್ಷಗಳನ್ನೂ ದೊಡ್ಡ-ದೊಡ್ಡ ಪರ್ವತಶಿಖರಗಳನ್ನೂ ಕಿತ್ತುತಂದು ಕುಂಭಕರ್ಣನನ್ನು ಆಕ್ರಮಿಸಿದರು. ಬಳಿಕ ಪರಮಕ್ರುದ್ಧನಾಗಿದ್ದ ಕುಂಭಕರ್ಣನು ಗದೆಯ ನ್ನೆತ್ತಿಕೊಂಡು ಶತ್ರುಗಳನ್ನು ಪ್ರಹರಿಸುತ್ತಾ ರಣಾಂಗಣದ ಸುತ್ತಲೂ ವಾನರರ ಶರೀರಗಳನ್ನು ಚೆಲ್ಲಾಡಿಸಿಬಿಟ್ಟನು. ಕುಂಭಕರ್ಣನಿಂದ ಪ್ರಹರಿಸಲ್ಪಟ್ಟ ಎಂಟು ಸಾವಿರದ ಏಳುನೂರು ವಾನರರು ಅಸುನೀಗಿ ಭೂಮಿಯ ಮೇಲೆ ಬಿದ್ದರು. ಕುಂಭಕರ್ಣನು ತನ್ನೆರಡು ಬಾಹುಗಳಿಂದಲೂ ಒಂದೊಂದು ಬಾರಿಗೆ ಎಂಟು, ಹತ್ತು, ಹದಿನಾರು, ಇಪ್ಪತ್ತು, ಮೂವತ್ತು ಸಂಖ್ಯೆಯ ವಾನರರನ್ನು ಒಟ್ಟುಗೂಡಿಸಿ ಎತ್ತಿಕೊಂಡು ಅವರನ್ನು ಹಾಗೆಯೇ–ಗರುಡಪಕ್ಷಿಯು ಸರ್ಪಗಳನ್ನು ನುಂಗಿಹಾಕುವಂತೆ–ನುಂಗುತ್ತಾ ಮುಂದೆ ಹೋಗುತ್ತಿದ್ದನು. ಅಂತಹ ಭಯಂಕರಸನ್ನಿವೇಶದಲ್ಲಿಯೂ ವಾನರದಳಪತಿಗಳು ಬಹಳ ಕಷ್ಟ ದಿಂದ ಧೈರ್ಯವನ್ನು ತಂದುಕೊಂಡು ಒಗ್ಗೂಡಿ ವೃಕ್ಷ-ಪರ್ವತಗಳನ್ನು ಕೈಗಳಲ್ಲಿ ಹಿಡಿದುಕೊಂಡು ರಣಾಂಗಣದಲ್ಲಿ ನಿಂತಿರುತ್ತಿದ್ದರು. ವಾನರಶ್ರೇಷ್ಠ ನಾದ ಜೋಲಾಡುವ ಮೇಘದಂತೆ ವಿಶಾಲಕಾಯನಾಗಿದ್ದ ದ್ವಿವಿದನು ಪರ್ವತವೊಂದನ್ನು ಕಿತ್ತು ಪರ್ವತಶಿಖರದಂತೆಯೇ ಇದ್ದ ಕುಂಭಕರ್ಣನನ್ನು ಆಕ್ರಮಿಸಿದನು. ದ್ವಿವಿದನು ಪರ್ವತವನ್ನು ಕಿತ್ತು ಕುಂಭಕರ್ಣನ ಮೇಲೆ ಸೆದನು. ಆದರೆ ಆ ಪರ್ವತವು ಮಹಾಕಾಯನಾಗಿದ್ದ ಕುಂಭಕರ್ಣನ ಸಮೀಪಕ್ಕೂ ಹೋಗದೇ ಅವನ ಸೈನಿಕರ ಮೇಲೆ ಬಿದ್ದಿತು. ದ್ವಿವಿದನೆಸೆದ ಆ ಪರ್ವತಶಿಖರವು ಕುಂಭಕರ್ಣನ ಸೈನ್ಯದಲ್ಲಿದ್ದ ಹಲವಾರು ಕುದುರೆಗಳನ್ನೂ, ರಥಗಳನ್ನೂ, ಶ್ರೇಷ್ಠವಾದ ಆನೆಗಳನ್ನೂ ಮತ್ತು ಇತರ ರಾಕ್ಷಸರನ್ನೂ ಸಂಹರಿಸಿತು. ಆ ಪ್ರಹಾರದಿಂದಾಗಿ ಅಸುನೀಗಿ ಕೆಳಗೆ ಬಿದ್ದಿದ್ದ ಕುದುರೆ-ಆನೆ-ಸಾರಥಿ ಮತ್ತು ರಾಕ್ಷಸರ ರಕ್ತದಿಂದ ಮಹತ್ತರವಾದ ಆ ರಣ ರಂಗವು ತೋಯ್ದುಹೋಯಿತು. ಭಯಂಕರವಾಗಿ ಗರ್ಜಿಸುತ್ತಿದ್ದ ರಾಕ್ಷಸ ರಥಸೈನಿಕರು ಪ್ರಳಯಕಾಲದ ಅಂತಕನಿಗೆ ಸಮಾನವಾಗಿದ್ದ ಬಾಣಗಳಿಂದ ನಿನಾದಮಾಡುತ್ತಿದ್ದ ವಾನರಶ್ರೇಷ್ಠರ ಶಿರಸ್ಸುಗಳನ್ನು ಶೀಘ್ರವಾಗಿ ಕತ್ತರಿಸ ತೊಡಗಿದರು. ಮಹಾತ್ಮರಾದ ವಾನರರೂ ಮಹಾವೃಕ್ಷಗಳನ್ನು ಬುಡಸಹಿತ

ಕಿತ್ತು ರಾಕ್ಷಸರ ರಥಗಳನ್ನೂ, ಕುದುರೆಗಳನ್ನೂ, ಆನೆಗಳನ್ನೂ, ಒಂಟೆ ಗಳನ್ನೂ ಮತ್ತು ಪದಾತಿಸೈನಿಕರನ್ನೂ ಧ್ವಂಸಮಾಡಿದರು. ಹನುಮಂತನು ಆಕಾಶದಲ್ಲಿ ನಿಂತು ಕುಂಭಕರ್ಣನ ಮೇಲೆ ಪರ್ವತಶಿಖರಗಳನ್ನೂ, ಬಂಡೆಗಳನ್ನೂ, ವಿಧ-ವಿಧವಾದ ವೃಕ್ಷಗಳನ್ನೂ ಸುರಿಸಿದನು. ಮಹಾಬಲನಾದ ಕುಂಭಕರ್ಣನು ಹಾಗೆ ಸುರಿಸುತ್ತಿದ್ದ ಪರ್ವತಶಿಖರಗಳನ್ನು ಶೂಲದಿಂದ ಭೇದಿಸಿದನು. ಮರಗಳನ್ನು ಚೂರು-ಚೂರುಗಳಾಗಿ ಕತ್ತರಿಸಿ ಹಾಕಿದನು. ಅನಂತರ ಕುಂಭಕರ್ಣನು ತೀಕ್ಷ್ಣವಾದ ಶೂಲವನ್ನು ಹಿಡಿದು ಭಯಂಕರ ವಾದ ಆ ವಾನರಸೈನ್ಯವನ್ನು ಆಕ್ರಮಿಸಲು ಧಾವಿಸಿದನು. ವಾನರಸೈನಿಕರ ಮೇಲೆ ಬೀಳಲಿದ್ದ ಕುಂಭಕರ್ಣನನ್ನು ನೋಡಿ ಹನುಮಂತನು ದೊಡ್ಡದಾದೊಂದು ಪರ್ವತಶಿಖರವನ್ನೆತ್ತಿಕೊಂಡು ಕುಂಭಕರ್ಣನಿಗೆ ಎದುರಾಗಿ ನಿಂತನು. ಅವನು ಹತ್ತಿರಕ್ಕೆ ಬಂದೊಡನೆಯೇ ಕುಪಿತನಾಗಿದ್ದ ಹನುಮಂತನು ಶ್ರೇಷ್ಠವಾದ ಪರ್ವತದಂತೆ ಮಹಾಕಾಯನಾಗಿದ್ದ ಕುಂಭಕರ್ಣನನ್ನು ವೇಗವಾಗಿ ಪರ್ವತಶಿಖರದಿಂದ ಪ್ರಹರಿಸಿದನು. ಆ ಪ್ರಹಾರದಿಂದ ಕುಂಭಕರ್ಣನು ವಿಹ್ವಲನಾದನು. ಅವನ ಶರೀರವೆಲ್ಲವೂ ಮೇದಸ್ಸಿನಿಂದ ನೆನೆದು ರಕ್ತದಿಂದ ತೋಯ್ದುಹೋಯಿತು.

ಅನಂತರ ಕುಂಭಕರ್ಣನು ಮಿಂಚಿನಂತೆ ಬೆಳಗುತ್ತಿದ್ದ ಶೂಲವನ್ನು ಮೇಲೆತ್ತಿ ಪ್ರಜ್ವಲಿಸುವ ಅಗ್ನಿಯಿಂದ ಕೂಡಿದ ಪರ್ವತಶಿಖರರೂಪನಾಗಿದ್ದ ಹನುಮಂತನನ್ನು–ಗುಹನು ಉಗ್ರವಾದ ಶಕ್ತ್ಯಾಯುಧದಿಂದ ಕ್ರೌಂಚಪರ್ವತ ವನ್ನು ಪ್ರಹರಿಸಿದಂತೆ–ಅವನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಶೂಲದಿಂದ ಭಿನ್ನವಾದ ವಕ್ಷಃಸ್ಥಳದಿಂದ ಕೂಡಿದ್ದ ಹನುಮಂತನು ಅತ್ಯಂತ ವ್ಯಾಕುಲನಾಗಿ ರಕ್ತವನ್ನೇ ಕಾರಿದನು. ಆ ಸಮಯದಲ್ಲಿ ಹನುಮಂತನು ಮಾಡಿದ ಭಯಂಕರವಾದ ಆರ್ತನಾದವು ಪ್ರಳಯಕಾಲದ ಮೇಘಗಳ ಗರ್ಜನೆಗೆ ಸಮಾನ ವಾಗಿದ್ದಿತು. ಹನುಮಂತನು ಶೂಲಪ್ರಹಾರದಿಂದ ವ್ಯಥಿತನಾದುದನ್ನು ನೋಡಿ ರಾಕ್ಷಸರು ಸಂತುಷ್ಟರಾಗಿ ಹರ್ಷಧ್ವನಿಗಳನ್ನು ಮಾಡಿದರು. ವಾನರ ಸೈನಿಕರು ವ್ಯಥಿತರಾಗಿ ಮತ್ತು ಭಯಪೀಡಿತರಾಗಿ ಕುಂಭಕರ್ಣನಿದ್ದ ಸ್ಥಳದಿಂದ ಬಹಳ ದೂರದವರೆಗೆ ಓಡಿಹೋದರು. ಅದನ್ನು ನೋಡುತ್ತಿದ್ದ ಬಲಿಷ್ಠ ನಾದ ನೀಲನು ವಾನರರಿಗೆ ಧೈರ್ಯತುಂಬಿ ಅವರನ್ನು ಸಮಸ್ಥಿತಿಗೆ ತರಲು

ಧೀಮಂತನಾದ ಕುಂಭಕರ್ಣನ ಮೇಲೆ ಪರ್ವತಶಿಖರವೊಂದನ್ನು ರಭಸದಿಂದೆಸೆದನು. ಅದು ತನ್ನ ಕಡೆಗೆ ಬರುತ್ತಿದ್ದುದನ್ನು ಕಂಡು ಕುಂಭಕರ್ಣನು ಅದನ್ನು ಮುಷ್ಟಿಯಿಂದಲೇ ಪ್ರಹರಿಸಿದನು. ಮುಷ್ಟಿಯ ಪ್ರಹಾರದಿಂದಾಗಿ ಆ ಪರ್ವತಶಿಖರವು ನುಚ್ಚುನೂರಾಯಿತು. ಜ್ವಾಲೆಯಿಂದ ಕೂಡಿದ್ದ ಆ ಪರ್ವತಶಿಖರವು ಕಿಡಿಗಳನ್ನು ಸುರಿಸುತ್ತಾ ನೆಲದಲ್ಲಿ ಬಿದ್ದಿತು. ಅನಂತರ ಋಷಭ, ಶರಭ, ನೀಲ, ಗವಾಕ್ಷ ಮತ್ತು ಗಂಧಮಾದನರೆಂಬ ಐವರು ವಾನರದಳಪತಿಗಳು ಕುಂಭಕರ್ಣನ ಮೇಲೆ ದಾಳಿಮಾಡಿದರು. ಪರ್ವತಶಿಖರಗಳಿಂದಲೂ, ವೃಕ್ಷಗಳಿಂದಲೂ, ಅಂಗೈಗಳಿಂದಲೂ, ಮುಷ್ಟಿಗಳಿಂದಲೂ ಮಹಾಬಲಿಷ್ಠರಾದ ವಾನರನಾಯಕರು ಮಹಾಕಾಯನಾದ ಕುಂಭಕರ್ಣನನ್ನು ಎಲ್ಲ ಕಡೆಗಳಿಂದಲೂ ಪ್ರಹರಿಸಿದರು. ವಾನರನಾಯಕರು ರಭಸದಿಂದ ಕುಂಭಕರ್ಣನನ್ನು ಪ್ರಹರಿಸುತ್ತಿದ್ದರೂ–ಕುಂಭಕರ್ಣನು ಯಾರೋ ತನ್ನನ್ನು ಮುಟ್ಟುತ್ತಿರುವಂತೆ ಭಾವಿಸಿಕೊಂಡನು. ಅಂತಹ ಪ್ರಹಾರಗಳಿಂದ ಅವನು ಸ್ವಲ್ಪವೂ ವಿಚಲಿತನಾಗಲಿಲ್ಲ. ಅನಂತರ ಕುಂಭಕರ್ಣನು ಋಷಭನನ್ನು ತನ್ನೆರಡು ತೋಳುಗಳಿಂದಲೂ ಬಿಗಿಯಾಗಿ ಅಪ್ಪಿಕೊಂಡನು. ಹಾಗೆ ಹಿಸುಕಲ್ಪಟ್ಟ ವಾನರಶ್ರೇಷ್ಠನಾದ ಭಯಂಕರನಾದ ಋಷಭನು ರಕ್ತವನ್ನು ಕಾರುತ್ತಾ ಭೂಮಿಯ ಮೇಲೆ ಬಿದ್ದನು. ಬಳಿಕ ಇಂದ್ರಶತ್ರುವಾದ ಕುಂಭಕರ್ಣನು ಕ್ರುದ್ಧನಾಗಿ ಮುಷ್ಟಿಯಿಂದ ಶರಭನನ್ನೂ, ಮೊಣಕಾಲಿನಿಂದ ನೀಲನನ್ನೂ, ಅಂಗೈಯಿಂದ ಗವಾಕ್ಷನನ್ನೂ, ಕಾಲಿನಿಂದ ಗಂಧಮಾದನನನ್ನೂ ಪ್ರಹರಿಸಿದನು. ಆ ಪ್ರಹಾರಗಳಿಂದ ವಾನರದಳಪತಿಗಳು ವ್ಯಥಿತರಾದರು. ರಕ್ತದಿಂದ ತೋಯಿಸಲ್ಪಟ್ಟಿದ್ದ ನಾಲ್ವರೂ ಮೂರ್ಛಿತರಾಗಿ–ಬುಡಕಡಿದ ಮುತ್ತುಗದ ಮರಗಳಂತೆ ಭೂಮಿಯ ಮೇಲೆ ಬಿದ್ದರು. ಮಹಾತ್ಮರಾದ ವಾನರಮುಖ್ಯರು ಹೀಗೆ ಮೂರ್ಛಿತರಾಗಿ ನೆಲದ ಮೇಲೆ ಬೀಳಲು ಸಾವಿರಾರು ವಾನರಸೈನಿಕರು ಕುಂಭಕರ್ಣನನ್ನು ಆಕ್ರಮಿಸಿದರು. ಪರ್ವತಸದೃಶರಾಗಿದ್ದ ಆ ಎಲ್ಲ ವಾನರಶ್ರೇಷ್ಠರೂ ಪರ್ವತಾಕಾರನಾಗಿದ್ದ ಕುಂಭಕರ್ಣರಾಕ್ಷಸನ ಮೇಲೇರಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾರುತ್ತಾ ಅವನನ್ನು ಹಲ್ಲುಗಳಿಂದ ಕಂಡ-ಕಂಡ ಕಡೆಗಳಲ್ಲಿ ಕಚ್ಚತೊಡಗಿದರು. ಪ್ಲವಗಶ್ರೇಷ್ಠರಾದ ವಾನರರು ಕುಂಭಕರ್ಣನನ್ನು ಉಗುರುಗಳಿಂದ ಪರಚುತ್ತಾ, ಹಲ್ಲುಗಳಿಂದ ಕಚ್ಚುತ್ತಾ, ಮುಷ್ಟಿ

ಗಳಿಂದಲೂ–ತೋಳುಗಳಿಂದಲೂ ಪ್ರಹರಿಸುತ್ತಾ ಶರೀರಾದ್ಯಂತವಾಗಿ ಗಾಯಗೊಳಿಸಿದರು. ದೊಡ್ಡದಾದೊಂದು ಪರ್ವತವು–ಅದರ ಮೇಲೆ ಹುಟ್ಟಿ ಬೆಳೆದಿರುವ ವೃಕ್ಷಗಳಿಂದ ಶೋಭಾಯಮಾನವಾಗಿ ಕಾಣುವಂತೆ–ಸಾವಿರಾರು ವಾನರರಿಂದ ವ್ಯಾಪ್ತನಾಗಿದ್ದ ಪರ್ವತೋಪಮನಾದ ಕುಂಭಕರ್ಣನು ಪ್ರಕಾಶಿಸಿದನು. ತನ್ನ ಮೇಲೆ ಹತ್ತಿ ಉಪಟಳಕೊಡುತ್ತಿದ್ದ ವಾನರರೆಲ್ಲರನ್ನೂ ಕುಂಭಕರ್ಣನು ತೋಳುಗಳಿಂದ ಬಿಗಿದು ಗರುಡನು ಸರ್ಪಗಳನ್ನು ಭಕ್ಷಿಸುವಂತೆ–ಭಕ್ಷಿಸತೊಡಗಿದನು. ಕುಂಭಕರ್ಣನು ಪಾತಾಳಕ್ಕೆ ಸಮಾನವಾಗಿದ್ದ ತನ್ನ ಬಾಯೊಳಗೆ ವಾನರರನ್ನು ತುರುಕುತ್ತಿದ್ದನು. ಮರುಕ್ಷಣದಲ್ಲಿಯೇ ಅವರೆಲ್ಲರೂ ಅವನ ಮೂಗಿನ ಹೊಳ್ಳೆಗಳಿಂದಲೂ, ಕಿವಿಗಳಿಂದಲೂ ಹೊರಬರುತ್ತಿದ್ದರು. ಅದರಿಂದ ಅತಿಕ್ರುದ್ಧನಾದ ಕುಂಭಕರ್ಣನು ಭಕ್ಷಿಸುತ್ತಿರುವಾಗಲೇ ಎಲ್ಲ ವಾನರರನ್ನೂ ಹಲ್ಲುಗಳಿಂದ ತುಂಡು-ತುಂಡುಗಳನ್ನಾಗಿ ಮಾಡತೊಡ ಗಿದನು. ಹೀಗೆ ರಾಕ್ಷಸನು ಅಪಾರಸಂಖ್ಯೆಯಲ್ಲಿ ವಾನರರನ್ನು ಸಂಹರಿಸಿ ರಣಭೂಮಿಯನ್ನು ಮಾಂಸ-ರಕ್ತಗಳಿಂದ ಕೂಡಿದ ಕೆಸರಿನ ಭೂಮಿಯನ್ನಾಗಿ ಮಾಡಿ ಕಾಲಾಗ್ನಿಯೋಪಾದಿಯಲ್ಲಿ ವಾನರಸೈನ್ಯದ ಮಧ್ಯದಲ್ಲಿ ಸಂಚರಿಸತೊಡಗಿದನು. ವಜ್ರಾಯುಧಧರನಾದ ಇಂದ್ರನಂತೆಯೂ, ಪಾಶಹಸ್ತನಾದ ಯಮರಾಜನಂತೆಯೂ ಇದ್ದ ಶೂಲಹಸ್ತನಾದ ಕುಂಭಕರ್ಣನು ರಣಭೂಮಿಯಲ್ಲಿ ಪ್ರಕಾಶಿಸುತ್ತಿದ್ದನು. ಗ್ರೀಷ್ಮರ್ತುವಿನ ಅಗ್ನಿಯು ಅರಣ್ಯಗಳನ್ನು ಸುಟ್ಟುಹಾಕುವಂತೆ–ಕುಂಭಕರ್ಣನು ವಾನರಸೈನ್ಯವನ್ನು ಸುಟ್ಟುಹಾಕಿದನು. ಹೀಗೆ ಕುಂಭಕರ್ಣನಿಂದ ಅನವರತವಾಗಿ ಪ್ರಹರಿಸಲ್ಪಡುತ್ತಿದ್ದ ವಾನರರು ಭಯದಿಂದ ಉದ್ವಿಗ್ನರಾಗಿ ವಿಕಾರವಾದ ಧ್ವನಿಯಿಂದ ಚೀತ್ಕಾರಮಾಡಿದರು. ಹಲವಾರು ಬಾರಿ ಕುಂಭಕರ್ಣನಿಂದ ಪ್ರಹರಿಸಲ್ಪಟ್ಟ ವಾನರರು ವ್ಯಥಿತರಾಗಿ ಮತ್ತು ಡೋಲಾಯಮಾನವಾದ ಮನಸ್ಸಿನಿಂದ ಕೂಡಿದವರಾಗಿ ಶ್ರೀರಾಮನನ್ನು ಶರಣುಹೊಂದಿದರು.

ವಾನರಸೈನ್ಯವು ಭಗ್ನವಾದುದನ್ನು ನೋಡಿ ಇಂದ್ರನ ಮೊಮ್ಮಗನಾದ ಅಂಗದನು ಕುಂಭಕರ್ಣನ ಬಳಿಗೆ ವೇಗವಾಗಿ ಧಾವಿಸಿದನು. ದೊಡ್ಡದಾದೊಂದು ಪರ್ವತಶಿಖರವನ್ನೆತ್ತಿಕೊಂಡು ಬಾರಿ-ಬಾರಿಗೂ ಗರ್ಜನೆಮಾಡುತ್ತಾ ; ಕುಂಭಕರ್ಣನ ಅನುಯಾಯಿಗಳನ್ನು ಗರ್ಜನೆಯಿಂದಲೇ ಭಯಪಡಿಸುತ್ತಾ;

ಆ ಪರ್ವತಶಿಖರವನ್ನು ಕುಂಭಕರ್ಣನ ತಲೆಯ ಮೇಲೆ ಅಪ್ಪಳಿಸಿದನು. ಹಾಗೆ ಪ್ರಹೃತನಾದ ಇಂದ್ರಶತ್ರುವಾದ ಕುಂಭಕರ್ಣನು ಅಸಹನಶೀಲನಾಗಿ ಕೋಪದಿಂದ ಕಿಡಿ-ಕಿಡಿಯಾಗಿ ವೇಗದಿಂದ ಅಂಗದನ ಬಳಿಗೆ ಧಾವಿಸಿದನು. ಮಹಾಗರ್ಜನೆಮಾಡುತ್ತಿದ್ದ ಕುಂಭಕರ್ಣನು ತನ್ನ ಗರ್ಜನೆಯಿಂದ ಎಲ್ಲ ವಾನರರನ್ನೂ ಭಯಗೊಳಿಸುತ್ತಾ ರೋಷಪೂರ್ವಕವಾಗಿ ಅಂಗದನ ಮೇಲೆ ಶೂಲವನ್ನೆಸೆದನು. ಆದರೆ ಯುದ್ಧದ ರೀತಿ-ನೀತಿಗಳನ್ನು ಚೆನ್ನಾಗಿ ತಿಳಿದಿದ್ದ, ಬಲಿಷ್ಠನಾದ, ವಾನರಶಿರೋಮಣಿಯಾದ ಅಂಗದನು ಅತ್ಯಂತಶೀಘ್ರವಾಗಿ ಹೆಜ್ಜೆಗಳನ್ನಿಟ್ಟು ಶೂಲಪ್ರಹಾರದಿಂದ ತಪ್ಪಿಸಿಕೊಂಡನಲ್ಲದೇ ಒಡನೆಯೇ ಮೇಲಕ್ಕೆ ಹಾರಿ ಅಂಗೈಯಿಂದ ಕುಂಭಕರ್ಣನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಪರ್ವತಾಕಾರನಾಗಿದ್ದ ಕುಂಭಕರ್ಣನು ಕ್ರೋಧಪೂರ್ವಕವಾದ ಆ ಪ್ರಹಾರ ದಿಂದ ಮೂರ್ಛಿತನಾದನು. ಮರುಕ್ಷಣದಲ್ಲಿಯೇ ಎಚ್ಚರಗೊಂಡು ಎಡಗೈ ಯಿಂದ ಮುಷ್ಟಿಯನ್ನು ಬಿಗಿದು ಅಂಗದನನ್ನು ಪ್ರಹರಿಸಿದನು. ಒಡನೆಯೇ ಅಂಗದನು ಮೂರ್ಛಿತನಾಗಿ ಭೂಮಿಯ ಮೇಲೆ ಬಿದ್ದನು.

ಹೀಗೆ ಕಪಿಶ್ರೇಷ್ಠನಾದ ಅಂಗದನು ಎಚ್ಚರದಪ್ಪಿ ನೆಲದ ಮೇಲೆ ಬೀಳ ಲಾಗಿ ಕುಂಭಕರ್ಣನು ಶೂಲವನ್ನೆತ್ತಿಕೊಂಡು ಸುಗ್ರೀವನ ಕಡೆಗೆ ಧಾವಿಸಿದನು. ಮಹಾಬಲನಾದ ಕುಂಭಕರ್ಣನು ತನ್ನ ಕಡೆಗೆ ಬರುತ್ತಿರುವುದನ್ನು ಕಂಡು ವಾನರಾಧಿಪನಾದ ಸುಗ್ರೀವನು ಮೇಲಕ್ಕೆ ಹಾರಿದನು. ಪರ್ವತಶಿಖರ ವೊಂದನ್ನು ಕಿತ್ತು ಅದನ್ನು ಹಿಂದಕ್ಕೂ ಮುಂದಕ್ಕೂ ಆಡಿಸುತ್ತಾ ಕುಂಭ ಕರ್ಣನನ್ನು ಆಕ್ರಮಿಸಿದನು. ಸುಗ್ರೀವನು ತನ್ನ ಮೇಲೆರಗಿ ಬರುತ್ತಿರುವುದನ್ನು ಕಂಡು ಕುಂಭಕರ್ಣನು ತನ್ನ ಎಲ್ಲ ಅಂಗಾಂಗಗಳನ್ನೂ ಉಬ್ಬಿಸಿಕೊಂಡು ಅವನ ಮುಂದೆ ನಿಂತುಕೊಂಡನು.

ಕಪಿಗಳ ರಕ್ತದಿಂದಲೇ ನೆನೆದುಹೋಗಿದ್ದ, ಮಹಾಕಪಿಗಳನ್ನು ನುಂಗಿ ಹಾಕುತ್ತಿದ್ದ ಕುಂಭಕರ್ಣನು ಎದುರಿಗೆ ನಿಂತಿರುವುದನ್ನು ಕಂಡು ಸುಗ್ರೀವನು ಹೇಳಿದನು :

"ರಾಕ್ಷಸನೇ! ನೀನು ನಮ್ಮ ಕಡೆಯ ಅನೇಕ ವೀರರನ್ನು ಸಂಹರಿ ಸಿರುವೆ. ಸೈನಿಕರೆಲ್ಲರನ್ನೂ ಭಕ್ಷಿಸಿರುವೆ. ಇದರಿಂದ ನೀನು ಅತ್ಯಂತದುಷ್ಕರ ವಾದ ಕಾರ್ಯವನ್ನೇ ಮಾಡಿರುವೆ. ಯುದ್ಧದಲ್ಲಿ ನೀನೀಗ ಯಶಸ್ಸನ್ನೂ ಗಳಿ

ಸಿರುವೆ. ಈಗಲಾದರೋ ನೀನು ವಾನರಸೈನ್ಯವನ್ನು ಬಿಟ್ಟುಬಾ. ಸಾಮಾನ್ಯ ವಾನರರನ್ನು ಜಯಿಸಿ ಅಥವಾ ನುಂಗಿ ನೀನೇನನ್ನು ಸಾಧಿಸುವೆ? ಈಗ ನೀನು ಪರ್ವತದ ಈ ಪ್ರಹಾರವೊಂದನ್ನು ಸಹಿಸಿಕೋ."

ಸತ್ತ್ವದಿಂದಲೂ, ಧೈರ್ಯದಿಂದಲೂ ಕೂಡಿದ್ದ ಸುಗ್ರೀವನ ಮಾತನ್ನು ಕೇಳಿ ರಾಕ್ಷಸಶ್ರೇಷ್ಠನಾದ ಕುಂಭಕರ್ಣನು ಹೇಳಿದನು :

"ಸುಗ್ರೀವ! ನೀನು ಪ್ರಜಾಪತಿಯ ಮೊಮ್ಮಗ. ಋಕ್ಷರಜಸನ ಮಗ. ಧೈರ್ಯ ಮತ್ತು ಪೌರುಷಗಳಿಂದಲೂ ಸಂಪನ್ನನಾಗಿರುವೆ. ಆದುದರಿಂದಲೇ ನೀನು ಹೀಗೆ ಗರ್ಜನೆಮಾಡುತ್ತಿರುವೆ."

ಕುಂಭಕರ್ಣನ ಆ ಮಾತನ್ನು ಕೇಳಿ ಸುಗ್ರೀವನು ತಾನು ಹಿಡಿದಿದ್ದ ಪರ್ವತಶಿಖರವನ್ನು ಹಿಂದಕ್ಕೂ ಮುಂದಕ್ಕೂ ಓಲಾಡಿಸುತ್ತಾ ವೇಗವಾಗಿ ರಾಕ್ಷಸನ ಮೇಲೆ ಪ್ರಹರಿಸಿದನು. ವಜ್ರಾಯುಧಕ್ಕೂ ಮತ್ತು ಸಿಡಿಲಿಗೂ ಸಮಾನವಾಗಿದ್ದ ಆ ಪರ್ವತಶಿಖರವು ಕುಂಭಕರ್ಣನ ವಕ್ಷಃಸ್ಥಳದಲ್ಲಿ ಬಿದ್ದು ನುಚ್ಚುನೂರಾಯಿತು. ಅದರಿಂದಾಗಿ ವಾನರರು ವಿಷಣ್ಣರಾದರು. ರಾಕ್ಷಸರು ಮುದಿತರಾಗಿ ಸಿಂಹನಾದಗಳನ್ನು ಮಾಡಿದರು. ಪರ್ವತಶಿಖರದಿಂದ ಪ್ರಹರಿಸಲ್ಪಟ್ಟ ಕುಂಭಕರ್ಣನು ಬಹಳವಾಗಿ ಕೋಪಗೊಂಡು ಬಾಯ್ದೆರೆದು ಗರ್ಜಿಸಿದನು. ಸುಗ್ರೀವನನ್ನು ವಧಿಸುವ ಸಲುವಾಗಿ ಮಿಂಚಿನಂತೆ ಪ್ರಕಾಶಮಾನವಾಗಿದ್ದ ಶೂಲವನ್ನು ಹಿಂದಕ್ಕೂ ಮುಂದಕ್ಕೂ ಆಡಿಸುತ್ತಾ ರಭಸದಿಂದ ಅವನ ಮೇಲೆಸೆದನು.

ಕುಂಭಕರ್ಣನ ಭುಜಗಳಿಂದ ಹೊರಹೊರಟ, ನಿಶಿತವಾದ, ಸುವರ್ಣದ ಕಾಂತಿಯನ್ನು ಹೊಂದಿದ್ದ ಆ ಶೂಲವನ್ನು ವಾಯುವಿನ ಮಗನಾದ ಹನುಮಂತನು ರಭಸದಿಂದ ಮೇಲಕ್ಕೆ ಹಾರಿ ಎರಡು ತೋಳುಗಳಿಂದಲೂ ಹಿಡಿದು ಬಹಳ ಬೇಗ ಮುರಿದುಹಾಕಿದನು. ಒಂದು ಸಾವಿರ ಭಾರ* ತೂಕದ ಕಬ್ಬಿಣ

ಭಾರ = ಎರಡು ಸಾವಿರ ಪಲಗಳ ತೂಕ

೫ ಗುಲಗಂಜಿಗಳ ತೂಕ = ೧ ಆದ್ಯಮಾಷಕ   ೧೬ ಆದ್ಯಮಾಷಕಗಳು = ೧ ಕರ್ಷ
೪ ಕರ್ಷಗಳು = ೧ ಪಲ   ೧೦೦ ಪಲಗಳು = ೧ ತುಲೆ
೨೦ ತುಲೆಗಳು ಅಥವಾ ೨೦೦೦ ಪಲಗಳು = ೧ ಭಾರ

ದಿಂದ ಮಾಡಲ್ಪಟ್ಟಿದ್ದ ಆ ಶೂಲವನ್ನು ಸಂತುಷ್ಟನಾಗಿದ್ದ ಹನುಮಂತನು ತನ್ನ ಮಂಡಿಯ ಮೇಲಿಟ್ಟುಕೊಂಡು ಎರಡು ಭಾಗಗಳಾಗುವಂತೆ ಮುರಿದು ಹಾಕಿದನು. ಅದನ್ನು ನೋಡಿ ವಾನರಸೈನಿಕರು ಪರಮಸಂತುಷ್ಟರಾಗಿ ಹಲವಾರು ಬಾರಿ ಹರ್ಷಧ್ವನಿಗಳನ್ನು ಮಾಡಿದರು. ಆನಂದದಿಂದ ಕುಣಿದಾಡುತ್ತಾ ಎಲ್ಲ ಕಡೆಗಳಿಗೂ ಓಡಿದರು.

ಶೂಲವನ್ನು ಕಳೆದುಕೊಂಡ ಕುಂಭಕರ್ಣನು ಭಯಗ್ರಸ್ತನೂ ಖಿನ್ನ ಮನಸ್ಕನೂ ಆದನು. ಸಂತುಷ್ಟರಾದ ವಾನರಸೈನಿಕರು ಸಿಂಹನಾದಗಳನ್ನು ಮಾಡಿದರು. ಮಹಾಶೂಲವನ್ನು ತುಂಡರಿಸಿದ್ದಕ್ಕಾಗಿ ವಾನರನಾಯಕರು ಹನುಮಂತನನ್ನು ಬಹಳವಾಗಿ ಪ್ರಶಂಸಿಸಿದರು. ತನ್ನ ಶೂಲವು ಮುರಿದು ಹೋದುದನ್ನು ಕಂಡು ರಾಕ್ಷಸಾಧಿಪನಾದ ಮಹಾತ್ಮನಾದ ಕುಂಭಕರ್ಣನು ಪರಮಕ್ರುದ್ಧನಾದನು. ಲಂಕಾಪಟ್ಟಣದ ಸಮೀಪದಲ್ಲಿದ್ದ ಮಲಯಪರ್ವತದ ಶಿಖರವನ್ನೇ ಕಿತ್ತು ಅದರಿಂದ ಸುಗ್ರೀವನನ್ನು ಪ್ರಹರಿಸಿದನು. ಆ ಪ್ರಹಾರ ದಿಂದ ಸುಗ್ರೀವನು ಪ್ರಜ್ಞೆಯನ್ನು ಕಳೆದುಕೊಂಡು ನೆಲದ ಮೇಲೆ ಬಿದ್ದನು. ಸುಗ್ರೀವನು ಎಚ್ಚರದಪ್ಪಿ ನೆಲದ ಮೇಲೆ ಬಿದ್ದುದನ್ನು ಕಂಡು ಪ್ರಹೃಷ್ಟರಾದ ರಾಕ್ಷಸರು ಸಿಂಹನಾದಗಳನ್ನು ಮಾಡಿದರು.

ಬಳಿಕ ಅದ್ಭುತಪರಾಕ್ರಮಿಯಾದ ಮತ್ತು ಭಯಂಕರವೀರ್ಯನಾದ, ವಾನರೇಂದ್ರನಾದ, ಭೂಮಿಯಲ್ಲಿ ಬಿದ್ದಿದ್ದ ಸುಗ್ರೀವನನ್ನು ಚಂಡಮಾರುತವು ಮೇಘವನ್ನು ಹಾರಿಸಿಕೊಂಡು ಹೋಗುವಂತೆ–ಕುಂಭಕರ್ಣನು ಎತ್ತಿಕೊಂಡು ಲಂಕೆಯ ಕಡೆಗೆ ಹೊರಟನು. ಮಹಾಮೇಘಸದೃಶವಾದ ರೂಪವುಳ್ಳ ಸುಗ್ರೀವನನ್ನೆತ್ತಿಕೊಂಡು ಹೋಗುತ್ತಿರುವಾಗ ಕುಂಭಕರ್ಣನು, ಎತ್ತರವಾದ ಮತ್ತು ಭಯಂಕರವಾದ ಶಿಖರದಿಂದ ಮೇರುಪರ್ವತವು ಪ್ರಕಾಶಿಸುವಂತೆ–ಪ್ರಕಾಶಿಸುತ್ತಿದ್ದನು. ಯುದ್ಧಭೂಮಿಯಲ್ಲಿದ್ದ ರಾಕ್ಷಸರೆಲ್ಲರೂ ಕುಂಭಕರ್ಣನನ್ನು ಸ್ತೋತ್ರಮಾಡುತ್ತಿದ್ದರು. ಸುಗ್ರೀವನ ಸೆರೆಯಿಂದ ವಿಸ್ಮಿತರಾದ ದೇವತೆಗಳ ಕಲ-ಕಲಧ್ವನಿಯನ್ನು ಕೇಳುತ್ತಾ ಕುಂಭಕರ್ಣನು ಲಂಕಾಪಟ್ಟಣದ ಕಡೆಗೆ ಹೊರಟನು. ಇಂದ್ರಸಮಾನಪರಾಕ್ರಮಿಯಾದ, ಇಂದ್ರನ ಶತ್ರುವಾದ ಕುಂಭಕರ್ಣನು ಇಂದ್ರನಂತೆ ತೇಜಸ್ವಿಯಾಗಿದ್ದ ಸುಗ್ರೀವನನ್ನು ಎತ್ತಿಕೊಂಡು ಹೋಗುತ್ತಿದ್ದಾಗ–'**ಅಸ್ಮಿನ್ ಹೃತೇ ಸರ್ವಮಿದಂ ಹೃತಂ ಸ್ಯಾತ್**

ಸರಾಘವಂ ಸೈನ್ಯಂ'–ಇವನೊಬ್ಬನನ್ನು ಸೆರೆಹಿಡಿದರೆ ರಾಮನೊಡನಿರುವ ಸಮಸ್ತವಾನರಸೈನ್ಯವನ್ನೂ ಸೆರೆಹಿಡಿದಂತೆಯೇ ಆಗುತ್ತದೆ'–ಎಂದು ಯೋಚಿಸುತ್ತಾ ಕುಂಭಕರ್ಣನು ಸುಗ್ರೀವನನ್ನು ಎತ್ತಿಕೊಂಡು ಹೋಗುತ್ತಿದ್ದನು. ವಾನರಸೈನಿಕರು ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದರು. ಅದನ್ನು ನೋಡಿದ ಬುದ್ಧಿವಂತರಲ್ಲಿ ಉತ್ತಮಬುದ್ಧಿವಂತನಾದ ವಾಯುವಿನ ಮಗನಾದ ಹನುಮಂತನು ತನ್ನ ಆಗಿನ ಕರ್ತವ್ಯವೇನೆಂಬುದನ್ನು ಯೋಚಿಸತೊಡಗಿದನು.

"ಈ ಸಮಯದಲ್ಲಿ ಯಾವುದು ಉಚಿತವೋ ಅದನ್ನು ನಾನು ನಿಸ್ಸಂದೇಹವಾಗಿ ಮಾಡುತ್ತೇನೆ. ಪರ್ವತಸದೃಶವಾದ ರೂಪವನ್ನು ತಾಳಿ ಈ ರಾಕ್ಷಸನನ್ನು ನಾಶಮಾಡುತ್ತೇನೆ.

ಈಗ ಮಾಡಲಿರುವ ಮಹಾಯುದ್ಧದಲ್ಲಿ ಕುಂಭಕರ್ಣನನ್ನು ನಾನು ಮುಷ್ಟಿಪ್ರಹಾರಗಳಿಂದ ಜರ್ಜರಿತನನ್ನಾಗಿ ಮಾಡಿ ಸಂಹರಿಸಿ ವಾನರರಾಜನಾದ ಸುಗ್ರೀವನನ್ನು ವಿಮೋಚನಗೊಳಿಸುತ್ತೇನೆ. ಇದರಿಂದ ಸಮಸ್ತ ವಾನರಸೈನಿಕರೂ ಸಂತುಷ್ಟರಾಗಲಿ.

ಅಥವಾ ದೇವತೆಗಳೂ, ಅಸುರರೂ, ನಾಗಗಳೂ ಒಟ್ಟಾಗಿ ಸೇರಿ ಹಿಡಿದರೂ ಬಿಡಿಸಿಕೊಳ್ಳುವ ಸಾಮರ್ಥ್ಯವಿರುವ ಸುಗ್ರೀವನು ಕುಂಭಕರ್ಣನ ಬಂಧನದಿಂದ ತಪ್ಪಿಸಿಕೊಳ್ಳಲೂಬಹುದು. ಆದರೆ ಪರ್ವತಶಿಖರಪ್ರಹಾರದಿಂದ ಎಚ್ಚರದಪ್ಪಿರುವ ಸುಗ್ರೀವನು, ತನ್ನನ್ನು ಕುಂಭಕರ್ಣನು ಎತ್ತಿಕೊಂಡು ಹೋಗುತ್ತಿರುವನೆಂಬ ವಿಷಯವನ್ನು ತಿಳಿದಿಲ್ಲವೆಂದು ನಾನೀಗ ಭಾವಿಸುತ್ತೇನೆ. ಅದರಿಂದಲೇ ಅವನು ಬಂಧವಿಮೋಚನೆಗಾಗಿ ಪ್ರಯತ್ನಿಸದೇ ಇರಬಹುದು. ಈ ಮುಹೂರ್ತದಲ್ಲಿಯೇ ಸುಗ್ರೀವನು ಎಚ್ಚರಗೊಂಡು ತನಗೂ ಮತ್ತು ವಾನರರಿಗೂ ಯಾವುದು ಹಿತಕರವೋ ಅದನ್ನು ಮಾಡುವನು. ನಾನೇನಾದರೂ ಅವನನ್ನು ಬಿಡಿಸಲು ಹೋದರೆ ಅದರಿಂದ ಸುಗ್ರೀವನಿಗೆ ನನ್ನ ವಿಷಯದಲ್ಲಿ ಪ್ರಬಲವಾದ ಅವಿಶ್ವಾಸವೇ ಉಂಟಾಗಬಹುದು. ಶಾಶ್ವತವಾಗಿ ಅವನ ಕೀರ್ತಿಯೂ ಕುಗ್ಗಬಹುದು. ಆದುದರಿಂದ ಮುಹೂರ್ತಕಾಲದವರೆಗೆ ಅವನು ಬಿಡುಗಡೆಹೊಂದುವುದನ್ನೇ ನಾನು ನಿರೀಕ್ಷಿಸುತ್ತಿರುವೆನು. ಅವನು ಬಿಡುಗಡೆ ಹೊಂದಿದನಂತರ ಅವನ ಪರಾಕ್ರಮವನ್ನು ನಿರೀಕ್ಷಿಸುವೆನು. ಅಲ್ಲಿಯವರೆಗೂ

ಭಗ್ನರಾಗಿರುವ ವಾನರಸೈನಿಕರಿಗೆ ಧೈರ್ಯತುಂಬುವ ಕಾರ್ಯವನ್ನು ಮಾಡು ತ್ತಿರುವೆನು."

ಹೀಗೆ ನಿರ್ಣಯಿಸಿದ ಮಾರುತಿಯು ಪುನಃ ವಾನರಮಹಾಸೈನ್ಯವನ್ನು ಒಟ್ಟುಗೂಡಿಸಿ ಯುದ್ಧಕ್ಕೆ ಸಜ್ಜುಗೊಳಿಸಿದನು.

ಅತ್ತಲಾಗಿ ಕುಂಭಕರ್ಣನು ಕೈಕಾಲುಗಳನ್ನಾಡಿಸಿಕೊಂಡು ಚಡಪಡಿಸು ತ್ತಿದ್ದ ಸುಗ್ರೀವನನ್ನೆತ್ತಿಕೊಂಡು ಲಂಕಾಪಟ್ಟಣಕ್ಕೆ ಹೋದನು. ಆ ಸಮಯ ದಲ್ಲಿ ಉಪ್ಪರಿಗೆಗಳ ಮೇಲೂ, ಮನೆಗಳ ಮೇಲೂ, ಗೋಪುರಗಳ ಮೇಲೂ ಕುಳಿತಿದ್ದ ರಾಕ್ಷಸಸ್ತ್ರೀ-ಪುರುಷರು ಸುವಾಸನೆಯ ಪುಷ್ಪಗಳನ್ನು ಕುಂಭಕರ್ಣನ ಮೇಲೆ ಸುರಿಸುತ್ತಾ ಅವನಿಗೆ ಆದರದ ಸ್ವಾಗತ-ಸತ್ಕಾರಗಳನ್ನು ನೀಡಿದರು. ಅರಳು ಮತ್ತು ಸುಗಂಧಯುಕ್ತವಾದ ನೀರಿನ ಸಿಂಪಡಿಸುವಿಕೆಯಿಂದಲೂ ಮತ್ತು ರಾಜಬೀದಿಯಲ್ಲಿ ಶೀತಲವಾದ ವಾತಾವರಣವಿದ್ದುದರಿಂದಲೂ ಕುಂಭಕರ್ಣನ ತೋಳುಗಳಲ್ಲಡಗಿದ್ದ ಸುಗ್ರೀವನು ಮೆಲ್ಲ-ಮೆಲ್ಲನೆ ಪ್ರಜ್ಞೆಯನ್ನು ಪಡೆದುಕೊಳ್ಳುತ್ತಿದ್ದನು. ಸ್ವಲ್ಪ ಹೊತ್ತಿನಲ್ಲಿಯೇ ಬಲಿಷ್ಠನಾದ ಕುಂಭಕರ್ಣನ ಭುಜಗಳ ಮಧ್ಯದಲ್ಲಿದ್ದ ಮಹಾತ್ಮನಾದ ಸುಗ್ರೀವನು ಬಹಳ ಕಷ್ಟದಿಂದ ಪ್ರಜ್ಞೆಯನ್ನು ಪಡೆದು ಲಂಕಾಪಟ್ಟಣದ ರಾಜಮಾರ್ಗವನ್ನು ನೋಡಿ ಯೋಚಿಸತೊಡಗಿದನು :

"ಕುಂಭಕರ್ಣನು ಹೀಗೆ ನನ್ನನ್ನು ಎತ್ತಿಕೊಂಡು ಹೋಗುತ್ತಿರುವಾಗ ಇದಕ್ಕೆ ಪ್ರತೀಕಾರಮಾಡಲು ನನಗೆ ಹೇಗೆ ಸಾಧ್ಯವಾದೀತು? ಈ ಸಮಯ ದಲ್ಲಿ ನಾನು ವಾನರರಿಗೆ ಇಷ್ಟವಾದ ಮತ್ತು ಹಿತವಾದ ಕಾರ್ಯವನ್ನೇ ಮಾಡುವೆನು."

ಹೀಗೆ ನಿಶ್ಚಯಿಸಿದ ಸುಗ್ರೀವನು ಕೈಗಳ ಅಗ್ರಭಾಗಗಳಲ್ಲಿದ್ದ ತೀಕ್ಷ್ಣ ವಾದ ಉಗುರುಗಳಿಂದ ಇಂದ್ರಶತ್ರುವಾದ ಕುಂಭಕರ್ಣನ ಎರಡು ಕಿವಿ ಗಳನ್ನೂ ಸೀಳಿದನು. ಹಲ್ಲುಗಳಿಂದ ಮೂಗನ್ನು ಕಚ್ಚಿದನು. ಅಂತೆಯೇ ಕಾಲಿನ ಉಗುರುಗಳಿಂದ ಎಡ-ಬಲಗಳ ಪಕ್ಕೆಗಳನ್ನು ಸೀಳಿಹಾಕಿದನು. ಹೀಗೆ ಸುಗ್ರೀ ವನ ಉಗುರು ಮತ್ತು ಹಲ್ಲುಗಳಿಂದ ಕುಂಭಕರ್ಣನ ಕಿವಿ-ಮೂಗು ಮತ್ತು ಪಕ್ಕೆಗಳು ಸೀಳಲ್ಪಡಲಾಗಿ ರಕ್ತದಿಂದ ತೋಯ್ದುಹೋದ ರಾಕ್ಷಸನು ರೋಷಾಭಿ ಭೂತನಾಗಿ ಸುಗ್ರೀವನನ್ನು ರಭಸದಿಂದ ನೆಲಕ್ಕಪ್ಪಳಿಸಿ ತೀಡಿಬಿಟ್ಟನು.

ಭೀಮಬಲನಾದ ಕುಂಭಕರ್ಣನು ಹೀಗೆ ಸುಗ್ರೀವನನ್ನು ಮರ್ದಿಸುತ್ತಿರಲು, ದೇವಶತ್ರುಗಳಾದ ರಾಕ್ಷಸರು ಸುತ್ತಲೂ ನಿಂತು ಪ್ರಹರಿಸುತ್ತಿರಲು, ವಾನರ ರಾಜನು ಒಮ್ಮೆ ಪುಟಕ್ಕೆ ಹಾಕಿದ ಚೆಂಡಿನಂತೆ ಬಹಳ ವೇಗವಾಗಿ ಮೇಲಕ್ಕೆ ಹಾರಿ ಪುನಃ ಶ್ರೀರಾಮನೊಡನೆ ಸೇರಿಕೊಂಡನು.

ಕಿವಿ-ಮೂಗುಗಳಿಂದ ವಿಹೀನನಾಗಿದ್ದ ಕುಂಭಕರ್ಣನು ರಕ್ತಸಿಕ್ತನಾಗಿ ಚಿಲುಮೆಗಳಿಂದ ಶೋಭಾಯಮಾನವಾಗಿ ಕಾಣುವ ಪರ್ವತದಂತೆಯೇ ಕಾಣುತ್ತಿದ್ದನು. ರಕ್ತದಿಂದ ತೋಯ್ದುಹೋಗಿದ್ದ, ಭಯಂಕರನಾಗಿ ಕಾಣು ತ್ತಿದ್ದ, ಮಹಾಕಾಯನಾದ ಕುಂಭಕರ್ಣನು ಪುನಃ ಯುದ್ಧಭೂಮಿಗೆ ಹೋಗಿ ಶತ್ರುವನ್ನೆದುರಿಸಿ ಯುದ್ಧಮಾಡಲು ನಿಶ್ಚಯಿಸಿದನು. ರಕ್ತವನ್ನೇ ಕಾರುತ್ತಿದ್ದ, ಕಾಡಿಗೆಯ ಬೆಟ್ಟದಂತೆ ಕಪ್ಪುಬಣ್ಣದವನಾಗಿದ್ದ ಕುಂಭಕರ್ಣನು–ಸಂಧ್ಯಾ ಕಾಲದ ಮೇಘದಂತೆ ಕಾಣುತ್ತಿದ್ದನು. ಸುಗ್ರೀವನು ತಪ್ಪಿಸಿಕೊಂಡು ಹೊರಟುಹೋದನಂತರ ಇಂದ್ರಶತ್ರುವಾದ ಕುಂಭಕರ್ಣನು ಕ್ರೋಧಾವಿಷ್ಟ ನಾಗಿ ಪುನಃ ಯುದ್ಧಭೂಮಿಗೆ ಧಾವಿಸಿದನು. ಆ ಸಮಯದಲ್ಲಿ ತಾನು ಆಯುಧಹೀನನಾಗಿರುವೆನೆಂಬುದನ್ನು ಗಮನಿಸಿ ಪುನಃ ಹಿಂದಿರುಗಿ ಬಂದು ಭಯಂಕರವಾದ ಒಂದು ಮುದ್ಗರವನ್ನೆತ್ತಿಕೊಂಡನು.

ಅನಂತರ ಮಹಾತೇಜಸ್ವಿಯಾದ ಕುಂಭಕರ್ಣನು ಲಂಕಾಪಟ್ಟಣದಿಂದ ಹೊರಟು ಉಗ್ರವಾದ ವಾನರಸೈನ್ಯವನ್ನು ಆಕ್ರಮಿಸಿ ಧಗ-ಧಗನೆ ಉರಿಯು ತ್ತಿರುವ ಪ್ರಳಯಕಾಲದ ಅಗ್ನಿಯು ಪ್ರಜೆಗಳನ್ನು ನುಂಗಿಹಾಕುವಂತೆ–ವಾನರ ರನ್ನು ಹಿಂಡು-ಹಿಂಡುಗಳಾಗಿ ನುಂಗತೊಡಗಿದನು. ಆ ಸಮಯದಲ್ಲಿ ಕುಂಭ ಕರ್ಣನು ಬಹಳವಾಗಿ ಹಸಿದಿದ್ದನು. ರಕ್ತ-ಮಾಂಸಗಳ ಮೇಲೆ ಅವನಿಗೆ ಬಹಳ ಲಾಲಸೆಯಿದ್ದಿತು. ಭಯಂಕರವಾದ ವಾನರಸೈನ್ಯವನ್ನು ನುಗ್ಗುತ್ತಲೇ–ಪ್ರಳಯಕಾಲದಲ್ಲಿ ಮೃತ್ಯುವು ಯಾವ ತಾರತಮ್ಯವೂ ಇಲ್ಲದೇ ಸಕಲಪ್ರಾಣಿ ಗಳನ್ನೂ ವಿನಾಶಗೊಳಿಸುವಂತೆ–ಹಸಿವಿನಿಂದ ವಿಮೋಹಿತನಾಗಿದ್ದ ಕುಂಭ ಕರ್ಣನು ಯಾವ ವಿಧವಾದ ತಾರತಮ್ಯವೂ ಇಲ್ಲದೇ ರಾಕ್ಷಸರನ್ನೂ, ವಾನರ ರನ್ನೂ, ಪಿಶಾಚರನ್ನೂ, ಕರಡಿಗಳನ್ನೂ, ವಾನರಮುಖ್ಯರನ್ನೂ ನುಂಗುತ್ತಿದ್ದನು. ಬಹಳ ಅವಸರದಿಂದ ಕುಂಭಕರ್ಣನು ಒಂದು ಕೈಯಿಂದ ಒಬ್ಬರು-ಇಬ್ಬರು-ಮೂವರು ವಾನರರನ್ನು ರಾಕ್ಷಸರೊಡನೆ ಹಿಡಿದುಕೊಂಡು

ಬಾಯಲ್ಲಿ ತುರುಕಿಕೊಳ್ಳುತ್ತಿದ್ದನು. ವಾನರರು ಪರ್ವತಶಿಖರಗಳಿಂದಲೂ ವೃಕ್ಷಗಳಿಂದಲೂ ಸತತವಾಗಿ ಪ್ರಹರಿಸುತ್ತಿದ್ದರೂ ಅದನ್ನು ಪರಿಗಣಿಸದೇ ಬಾಯಿಂದ ಮೇದಸ್ಸನ್ನೂ ರಕ್ತವನ್ನೂ ಸುರಿಸುತ್ತಾ ವಾನರರನ್ನು ಸತತವಾಗಿ ಭಕ್ಷಿಸುತ್ತಲೇ ಇದ್ದನು. ತಿಂದುಳಿದ ವಾನರರು ಶ್ರೀರಾಮನನ್ನು ಶರಣು ಹೊಂದಲು ಓಡಿಹೋಗುತ್ತಿದ್ದರು. ಹಾಗೆ ಓಡಿಹೋಗುತ್ತಿದ್ದ ವಾನರರನ್ನೇ ಹಿಡಿದು ನುಂಗುತ್ತಾ ಕುಂಭಕರ್ಣನೂ ಮುಂದೆ-ಮುಂದೆ ಹೋಗುತ್ತಿದ್ದನು. ಏಳು-ಎಂಟು-ಇಪ್ಪತ್ತು-ಮೂವತ್ತು-ನೂರು ಸಂಖ್ಯೆಯ ವಾನರರನ್ನು ಬಗಲಿ ನಲ್ಲಿಟ್ಟುಕೊಂಡು ಒಬ್ಬೊಬ್ಬರನ್ನಾಗಿ ತಿನ್ನುತ್ತಲೇ ಮುಂದೆ ಹೋಗುತ್ತಿದ್ದನು.

ಆ ಸಮಯದಲ್ಲಿ ಶತ್ರುಸೈನ್ಯಸಂಹಾರಕನಾದ, ಸುಮಿತ್ರಾದೇವಿಯ ಪುತ್ರನಾದ ಲಕ್ಷ್ಮಣನು ಪರಮಕ್ರುದ್ಧನಾಗಿ ಕುಂಭಕರ್ಣನೊಡನೆ ಯುದ್ಧದಲ್ಲಿ ತೊಡಗಿದನು. ವೀರ್ಯವಂತನಾದ ಲಕ್ಷ್ಮಣನು ಮೊದಲು ರಾಕ್ಷಸನ ಮೇಲೆ ಏಳು ಬಾಣಗಳನ್ನು ಪ್ರಯೋಗಿಸಿದನು. ಪುನಃ ಇನ್ನೂ ಅನೇಕ ಬಾಣಗಳನ್ನು ಕುಂಭಕರ್ಣನ ಮೇಲೆ ಪ್ರಯೋಗಿಸಿದನು. ಅವುಗಳಿಂದ ಪೀಡಿತನಾದ ರಾಕ್ಷಸನು ಆ ಎಲ್ಲ ಬಾಣಗಳನ್ನೂ ಕ್ಷಣಮಾತ್ರದಲ್ಲಿ ನಿರ್ವೀರ್ಯಗೊಳಿ ಸಿದನು. ಅದನ್ನು ನೋಡಿ ಕೋಪಗೊಂಡ ಲಕ್ಷ್ಮಣನು ಸುವರ್ಣಮಯವೂ, ಶುಭ್ರವೂ, ಸುಂದರವೂ ಆಗಿದ್ದ ಅವನ ಕವಚವನ್ನು–ಚಂಡಮಾರುತವು ಸಂಧ್ಯಾಕಾಲದ ಮೇಘವನ್ನು ಚದುರಿಸುವಂತೆ–ಬಾಣಗಳಿಂದ ಮುಚ್ಚಿಬಿಟ್ಟನು. ಕಾಡಿಗೆಯ ರಾಶಿಯಂತೆ ಕಪ್ಪುಬಣ್ಣದವನಾಗಿದ್ದ ಕುಂಭಕರ್ಣನು ಲಕ್ಷ್ಮಣನು ಬಿಟ್ಟ ಚಿನ್ನದ ಭೂಷಣಗಳುಳ್ಳ ಬಾಣಗಳಿಂದ ಪೀಡಿಸಲ್ಪಡುತ್ತಿದ್ದು, ಮೇಘಗಳಿಂದ ಸಮಾವೃತನಾದ ಸೂರ್ಯನಂತೆಯೇ ಕಾಣುತ್ತಿದ್ದನು. ಅನಂತರ ಭಯಂಕರನಾದ, ಮೇಘದ ಶಬ್ದಕ್ಕೆ ಸಮಾನವಾದ ಗಂಭೀರಧ್ವನಿಯಿಂದ ಕೂಡಿದ್ದ ರಾಕ್ಷಸನು ತಿರಸ್ಕಾರಪೂರ್ವಕವಾಗಿಯೇ ಲಕ್ಷ್ಮಣನಿಗೆ ಹೇಳಿದನು :

"ಲಕ್ಷ್ಮಣ! ನಾನು ಯಮನನ್ನಾದರೂ ಸ್ವಲ್ಪವೂ ಕಷ್ಟವೇ ಇಲ್ಲದೇ ಜಯಿಸುವ ಸಾಮರ್ಥ್ಯವನ್ನು ಹೊಂದಿರುವೆನು. ಅಂತಹ ನನ್ನೊಡನೆ ನಿರ್ಭಯ ವಾಗಿ ಯುದ್ಧಮಾಡುತ್ತಿರುವ ನೀನು ನಿನ್ನ ವೀರತ್ವವನ್ನು ಪ್ರಚುರಗೊಳಿ ಸಿರುವೆ. ನಾನು ಮಹಾಯುದ್ಧದಲ್ಲಿ ಮೃತ್ಯುವಿನಂತೆ ಆಯುಧಪಾಣಿಯಾಗಿ

ನಿಂತಾಗ ನನ್ನ ಮುಂದೆ ನಿಲ್ಲುವವನೇ ಪರಮಸಾಹಸಿಯೆಂಬ ಪ್ರಶಂಸೆಯನ್ನು ಪಡೆಯುತ್ತಾನೆ. ಹೀಗಿರುವಾಗ ನನ್ನೊಡನೆ ಯುದ್ಧವನ್ನೇ ಮಾಡುತ್ತಿರುವ ನಿನ್ನ ವಿಷಯದಲ್ಲಿ ಹೇಳುವುದೇನಿದೆ?

ಸಮಸ್ತದೇವತೆಗಳಿಂದ ಪರಿವೃತನಾದ, ಐರಾವತದಲ್ಲಿ ಕುಳಿತ ಇಂದ್ರನು ಕೂಡ ಈ ಹಿಂದೆ ನನಗೆದುರಾಗಿ ಯುದ್ಧಕ್ಕೆ ನಿಲ್ಲಲಿಲ್ಲ. ಆದರೆ ನೀನು ಬಾಲಕನಾಗಿದ್ದರೂ ನಿನ್ನ ಪರಾಕ್ರಮದಿಂದ ನನ್ನನ್ನು ಸಂತೋಷಗೊಳಿಸಿರುವೆ. ಆದುದರಿಂದ ನಾನು ನಿನ್ನ ಅನುಮತಿಯನ್ನು ಪಡೆದು ಯುದ್ಧಮಾಡಲು ರಾಮನ ಬಳಿಗೆ ಹೋಗುತ್ತೇನೆ. ನೀನು ಬಲೋತ್ಸಾಹಗಳಿಂದ ರಣಭೂಮಿಯಲ್ಲಿ ನನಗೆ ಸಂತೋಷವನ್ನುಂಟುಮಾಡಿರುವೆ. ಆದುದರಿಂದ ನಿನ್ನನ್ನು ನಾನು ಸಂಹರಿಸಲು ಇಷ್ಟಪಡುವುದಿಲ್ಲ. ರಾಮನನ್ನು ಮಾತ್ರವೇ ಸಂಹರಿಸುವೆನು. ಅವನೊಬ್ಬನು ಹತನಾದರೆ ನಿಮ್ಮ ಪಕ್ಷದಲ್ಲಿರುವ ಎಲ್ಲರೂ ಹತರಾದಂತೆಯೇ ಸರಿ. ನಾನು ರಾಮನನ್ನು ಸಂಹರಿಸಿದನಂತರ ಬೇರೆ ಯಾರಾದರೂ ನನ್ನೊಡನೆ ಯುದ್ಧಮಾಡಲು ಸಿದ್ಧರಾಗಿ ನಿಂತರೆ ಅವರೆಲ್ಲರೊಡನೆಯೂ ನಾನು ಶತ್ರುಗಳನ್ನು ಮಥಿಸುವ ನನ್ನ ಬಲದಿಂದ ಯುದ್ಧಮಾಡುತ್ತೇನೆ."

ಆತ್ಮಪ್ರಶಂಸೆಯಿಂದ ಕೂಡಿದ ಕುಂಭಕರ್ಣನ ಮಾತುಗಳನ್ನು ಕೇಳಿ ಲಕ್ಷ್ಮಣನು ಘೋರತರವಾದ ಈ ಮಾತನ್ನು ನಗು-ನಗುತ್ತಲೇ ಹೇಳಿದನು :

"ವೀರನೇ! ನೀನು ಮಹಾಪೌರುಷವನ್ನು ಪಡೆದು ಇಂದ್ರನೇ ಮೊದಲಾದ ದೇವತೆಗಳಿಗೂ ಎದುರಿಸಲು ಅಸಾಧ್ಯನಾಗಿರುವೆಯೆಂಬುದು ಸ್ಪಷ್ಟವೇ ಆಗಿದೆ. ನಿನ್ನ ಮಾತು ಸತ್ಯ. ಏಕೆಂದರೆ : ನಿನ್ನ ಪರಾಕ್ರಮವನ್ನು ನಾನೀಗ ಪ್ರತ್ಯಕ್ಷವಾಗಿಯೇ ನೋಡಿದೆನಲ್ಲವೇ! ನೀನು ಯುದ್ಧಮಾಡಲು ಬಯಸುತ್ತಿರುವ ಶ್ರೀರಾಮನು ಇಲ್ಲಿಯೇ ಪರ್ವತದಂತೆ ಅಚಲನಾಗಿ ಯುದ್ಧ ಸನ್ನದ್ಧನಾಗಿ ನಿಂತಿದ್ದಾನೆ."

ಲಕ್ಷ್ಮಣನ ಮಾತನ್ನು ಕೇಳಿ ಅದನ್ನು ಅನಾದರಣೆಮಾಡಿ ಅವನನ್ನು ಅತಿಕ್ರಮಿಸಿ ಭೂಮಿಯನ್ನೇ ಸೀಳಿಬಿಡುತ್ತಿರುವನೋ ಎಂಬಂತೆ ವೇಗವಾಗಿ ಹೆಜ್ಜೆಗಳನ್ನಿಡುತ್ತಾ ಶ್ರೀರಾಮನ ಬಳಿಗೆ ಹೋದನು.

ಕುಂಭಕರ್ಣನು ತನ್ನೊಡನೆ ಯುದ್ಧಮಾಡಲು ಬಂದುದನ್ನು ನೋಡಿ

ಶ್ರೀರಾಮನು ಅವನ ಮೇಲೆ ರೌದ್ರಾಸ್ತ್ರವನ್ನು ಪ್ರಯೋಗಿಸಿದನು. ಪುನಃ ನಿಶಿತವಾದ ಅನೇಕ ಬಾಣಗಳನ್ನು ಕುಂಭಕರ್ಣನ ವಕ್ಷಃಸ್ಥಳದಲ್ಲಿ ಪ್ರಯೋಗಿಸಿದನು. ಶ್ರೀರಾಮನಿಂದ ಪ್ರಹರಿಸಲ್ಪಟ್ಟು ಅವನ ಮೇಲೆ ಆಕ್ರಮಣ ಮಾಡಲು ಹೊರಟ ಕ್ರುದ್ಧನಾದ ಕುಂಭಕರ್ಣನ ಬಾಯಿಂದ ಕೆಂಡದಿಂದ ಮಿಶ್ರಿತವಾದ ಜ್ವಾಲೆಗಳು ಹೊರಬರುತ್ತಿದ್ದುವು. ರಾಮನ ಅಸ್ತ್ರದಿಂದ ಗಾಯಗೊಂಡ ಕುಂಭಕರ್ಣನು ಗಟ್ಟಿಯಾಗಿ ಗರ್ಜನೆಮಾಡುತ್ತಾ ವಾನರಸೈನಿಕರನ್ನು ಭಯಗೊಳಿಸಿ ಓಡಿಸುತ್ತಾ ಮುಂದೆ ಹೋಗುತ್ತಿದ್ದನು. ಶ್ರೀರಾಮನು ಬಿಟ್ಟ ನವಿಲುಗರಿಗಳಿಂದ ಕೂಡಿದ್ದ ಬಾಣಗಳು ಕುಂಭಕರ್ಣನ ವಕ್ಷಃಸ್ಥಳದಲ್ಲಿ ನಾಟಿದ್ದುವು. ಅದರಿಂದಾಗಿ ಅವನ ಕೈಯಲ್ಲಿದ್ದ ಗದೆಯು ಭೂಮಿಯ ಮೇಲೆ ಬಿದ್ದಿತು. ಹಾಗೆಯೇ ಅವನ ಇತರ ಆಯುಧಗಳೂ ಭೂಮಿಯಲ್ಲಿ ಹರಡಿಕೊಂಡು ಬಿದ್ದುವು. ತಾನು ಆಯುಧಗಳಿಂದ ಹೀನನಾಗಿರುವೆನೆಂದು ತಿಳಿದ ಕುಂಭಕರ್ಣನು ಮುಷ್ಟಿಗಳಿಂದಲೂ ಮತ್ತು ಕಾಲುಗಳಿಂದಲೂ ವಾನರರನ್ನು ಸಂಹರಿಸತೊಡಗಿದನು. ಶ್ರೀರಾಮನ ಬಾಣಗಳಿಂದ ಕುಂಭಕರ್ಣನು ಅಂಗಾಂಗಗಳಲ್ಲಿಯೂ ಪ್ರಹರಿಸಲ್ಪಟ್ಟು ರಕ್ತದಿಂದ ತೋಯ್ದುಹೋಗಿದ್ದನು. ಪರ್ವತದಲ್ಲಿನ ಚಿಲುಮೆಗಳಂತೆ ಕುಂಭಕರ್ಣನ ಶರೀರದಿಂದ ರಕ್ತವು ಹರಿಯುತ್ತಿದ್ದಿತು. ಅವನು ತೀವ್ರವಾದ ಕೋಪದಿಂದಲೂ ರುಧಿರಪ್ರವಾಹದಿಂದಲೂ ಉದ್ವಿಗ್ನನಾಗಿ ವಾನರರನ್ನೂ, ರಾಕ್ಷಸರನ್ನೂ, ಕರಡಿಗಳನ್ನೂ ಭಕ್ಷಿಸುತ್ತಾ ರಣಾಂಗಣದ ಸುತ್ತಲೂ ತಿರುಗಾಡುತ್ತಿದ್ದನು. ಯಮರಾಜನಂತಿದ್ದ, ಭಯಂಕರಪರಾಕ್ರಮನಾದ, ಮಹಾಬಲಿಷ್ಠನಾದ ಕುಂಭಕರ್ಣನು ಭಯಂಕರವಾದ ಪರ್ವತಶಿಖರವೊಂದನ್ನು ಕಿತ್ತು ರಾಮನ ಕಡೆಗೆ ರಭಸದಿಂದೆಸೆದನು. ಅದು ತನ್ನ ಬಳಿಗೆ ಬರುವುದರೊಳಗಾಗಿಯೇ ಶ್ರೀರಾಮನು ಧನುಸ್ಸನ್ನು ಹೂಡಿ ನೇರವಾಗಿ ಹೋಗುವ ಸುವರ್ಣಭೂಷಿತವಾದ ವಿಚಿತ್ರವಾದ ಏಳು ಬಾಣಗಳನ್ನು ಹೆದೆಯಲ್ಲೇರಿಸಿ ಪರ್ವತಶಿಖರವನ್ನು ಚೂರು-ಚೂರುಗಳನ್ನಾಗಿ ಮಾಡಿದನು. ಮೇರುಪರ್ವತದ ಶಿಖರದಂತೆಯೇ ಕಾಣುತ್ತಿದ್ದ ಆ ಪರ್ವತಶಿಖರವು ಶ್ರೀರಾಮನ ಬಾಣಗಳಿಂದ ಕತ್ತರಿಸಲ್ಪಟ್ಟು ಕೆಳಗೆ ಬಿದ್ದಾಗ ಇನ್ನೂರು ವಾನರರನ್ನು ಭೂಗತರನ್ನಾಗಿ ಮಾಡಿತು.

ಆ ಸಮಯದಲ್ಲಿ ಧರ್ಮಾತ್ಮನಾದ, ಕುಂಭಕರ್ಣನ ವಧೆಯಲ್ಲಿಯೇ

ಆಸಕ್ತನಾಗಿದ್ದ ಲಕ್ಷ್ಮಣನು ಅವನ ವಧೆಗಾಗಿ ಹಲವು ಬಗೆಯ ಉಪಾಯ ಗಳನ್ನು ಯೋಚಿಸಿ ಶ್ರೀರಾಮನಿಗೆ ಹೇಳಿದನು :

"ಅಣ್ಣ! ರಕ್ತದ ಸೊಗಡಿನಿಂದ ಪ್ರಮತ್ತನಾಗಿರುವ ಈ ಕುಂಭ ಕರ್ಣನು ರಣರಂಗದಲ್ಲಿ ರಾಕ್ಷಸರಾರು?–ವಾನರರಾರು?–ಎಂಬುದನ್ನೂ ಗುರುತಿಸುತ್ತಿಲ್ಲ. ತನ್ನ ಕಡೆಯವರನ್ನೂ ತಿನ್ನುತ್ತಿದ್ದಾನೆ. ಶತ್ರುಪಕ್ಷದವರನ್ನೂ ಭಕ್ಷಿಸುತ್ತಿದ್ದಾನೆ. ಎಲ್ಲ ಕಡೆಗಳಿಂದಲೂ ವಾನರಶ್ರೇಷ್ಠರೂ ಮತ್ತು ದಳಪತಿ ಗಳೂ ಇವನ ಮೇಲೆ ಹತ್ತಿ ಕುಳಿತುಕೊಳ್ಳಲಿ. ಹೀಗೆ ಮಾಡಿದಲ್ಲಿ ದುರ್ಬುದ್ಧಿ ಯವನಾದ ರಾಕ್ಷಸನು ಗುರುತರವಾದ ಭಾರದಿಂದ ಪೀಡಿತನಾಗಿ ರಣಭೂಮಿ ಯಲ್ಲಿ ಸಂಚರಿಸುವಾಗ ಇತರ ವಾನರರನ್ನು ಸಂಹರಿಸಲಾಗುವುದಿಲ್ಲ."

ರಾಜಪುತ್ರನಾದ ಲಕ್ಷ್ಮಣನ ಆ ಮಾತನ್ನು ಕೇಳಿ ಸಂತುಷ್ಟರಾದ ಮಹಾಬಲರಾದ ವಾನರಸೈನಿಕರು ಕುಂಭಕರ್ಣನ ಮೇಲೆ ಹತ್ತಿ ಕುಳಿತರು. ಬಳಿಕ ಅವನು ಮಹಾಕ್ರುದ್ಧನಾಗಿ–ಕೆರಳಿದ ಆನೆಯು ಮಾವಟಿಗನನ್ನು ಕೊಡವಿ ಕೆಳಕ್ಕೆ ಹಾಕುವಂತೆ–ತನ್ನ ಶರೀರದ ಮೇಲೆ ಕುಳಿತಿದ್ದ ವಾನರರೆಲ್ಲ ರನ್ನೂ ವೇಗವಾಗಿ ಕೊಡವಿ ಕೆಳಕ್ಕೆ ಹಾಕಿದನು. ಹೀಗೆ ವಾನರರೆಲ್ಲರೂ ಕೆಳಗೆ ಬಿದ್ದುದನ್ನು ನೋಡಿ ಕುಂಭಕರ್ಣನು ಕೋಪಗೊಂಡಿರುವನೆಂದು ಭಾವಿಸಿದ ಶ್ರೀರಾಮನು ಧನುಸ್ಸನ್ನೆತ್ತಿಕೊಂಡು ವೇಗವಾಗಿ ರಾಕ್ಷಸನ ಕಡೆಗೆ ಧಾವಿಸಿದನು. ಕ್ರೋಧದಿಂದ ರಕ್ತಾಕ್ಷನಾಗಿದ್ದ ಧೀರನಾದ ಶ್ರೀರಾಮನು ಕಣ್ಣುಗಳಿಂದಲೇ ರಾಕ್ಷಸನನ್ನು ದಹಿಸಿಬಿಡುವನೋ ಎಂಬಂತೆ ಅವನ ಕಡೆಗೆ ನೋಡುತ್ತಾ ಕುಂಭಕರ್ಣನ ಬಲದಿಂದ ಪೀಡಿತರಾಗಿದ್ದ ವಾನರಸೈನಿಕರನ್ನು ಸಂತೋಷ ಗೊಳಿಸುತ್ತಾ ಧಾವಿಸಿದನು.

ಮಹಾಬಲನಾದ ಶ್ರೀರಾಮನು, ದೃಢವಾದ ಮತ್ತು ಭಯಂಕರವಾದ ನಾಣಿನಿಂದ ಕೂಡಿದ್ದ, ಚಿನ್ನದಿಂದ ಚಿತ್ರಿತವಾಗಿದ್ದ ಸರ್ಪಸದೃಶವಾಗಿದ್ದ ಬಿಲ್ಲನ್ನು ಹಿಡಿದುಕೊಂಡು ಬಾಣಗಳಿಂದ ತುಂಬಿದ್ದ ಶ್ರೇಷ್ಠವಾದ ಬತ್ತಳಿಕೆ ಯನ್ನು ಬೆನ್ನಿಗೆ ಕಟ್ಟಿ ವಾನರಸೈನಿಕರನ್ನು ಸಂತೈಸುತ್ತಾ ಕುಂಭಕರ್ಣನೊಡನೆ ಯುದ್ಧಕ್ಕೆ ಧಾವಿಸಿದನು. ಅಲ್ಲಿದ್ದ ಪರಮದುರ್ಜಯರಾದ ವಾನರಸೈನ್ಯ ಸಮೂಹಗಳಿಂದ ಪರಿವೃತನಾಗಿ ಯುದ್ಧಕ್ಕೆ ತೆರಳಿದನು. ಲಕ್ಷ್ಮಣನೂ ಅವ ನನ್ನು ಹಿಂಬಾಲಿಸಿದನು. ಯುದ್ಧಭೂಮಿಯಲ್ಲಿ ಶ್ರೀರಾಮನು ರಾಕ್ಷಸರಿಂದ

ಪರಿವೃತನಾಗಿ ವಾನರಸೈನಿಕರನ್ನು ಹುಡುಕಿಕೊಂಡು ಓಡುತ್ತಿರುವ ಕುಂಭಕರ್ಣನನ್ನು ನೋಡಿದನು. ಆ ಸಮಯದಲ್ಲಿ ಶತ್ರುಮರ್ದನನಾದ ಕುಂಭಕರ್ಣನು ಕಿರೀಟವನ್ನು ಧರಿಸಿದ್ದನು. ರಕ್ತದಿಂದ ತೋಯ್ದುಹೋಗಿದ್ದನು. ಕೆಂಗಣ್ಣನಾಗಿದ್ದನು. ರೋಷಗೊಂಡ ದಿಗ್ಗಜದಂತೆ ಎಲ್ಲ ವಾನರಸೈನಿಕರನ್ನೂ ಅಟ್ಟಿಸಿಕೊಂಡು ಹೋಗುತ್ತಿದ್ದನು. ವಿಂಧ್ಯ ಮತ್ತು ಮಂದರಪರ್ವತಗಳಿಗೆ ಸಮಾನನಾಗಿದ್ದನು. ಸುವರ್ಣಮಯವಾದ ತೋಳ್ಬಳೆಗಳಿಂದ ಭೂಷಿತನಾಗಿದ್ದನು. ಬಾಯಿಂದ ರಕ್ತವನ್ನೇ ಕಕ್ಕುತ್ತಿದ್ದನು. ವರ್ಷಾಕಾಲದಲ್ಲಿ ಹುಟ್ಟಿದ ಮೇಘದಂತೆಯೇ ಕಾಣುತ್ತಿದ್ದನು. ರಕ್ತದಿಂದ ನೆನೆದಿದ್ದ ಕಟವಾಯಿಗಳನ್ನು ನಾಲಿಗೆಯಿಂದ ನೆಕ್ಕಿಕೊಳ್ಳುತ್ತಾ, ಪ್ರಳಯಕಾಲದ ಯಮನಂತೆ ವಾನರಸೈನ್ಯವನ್ನು ಧ್ವಂಸಮಾಡುತ್ತಾ, ಪ್ರದೀಪ್ತವಾದ ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುತ್ತಿದ್ದ ರಾಕ್ಷಸಶ್ರೇಷ್ಠನಾದ ಕುಂಭಕರ್ಣನನ್ನು ನೋಡಿ ಪುರುಷಶ್ರೇಷ್ಠನಾದ ಶ್ರೀರಾಮನು ಧನುಸ್ಸನ್ನು ಟೇಂಕರಿಸಿದನು. ಕುಪಿತನಾದ ಕುಂಭಕರ್ಣನು ಆ ಟಂಕಾರಶಬ್ದವನ್ನು ಸಹಿಸಿಕೊಳ್ಳಲಾರದೇ ಶ್ರೀರಾಮನ ಕಡೆಗೆ ಧಾವಿಸಿದನು.

ಬಳಿಕ ಸರ್ಪರಾಜನಾದ ವಾಸುಕಿಯಂತೆ–ನೀಳವಾದ ಮತ್ತು ದಪ್ಪವಾದ ತೋಳುಗಳುಳ್ಳ ಶ್ರೀರಾಮನು–ತನ್ನ ಮೇಲೆ ಬೀಳಲು ವೇಗವಾಗಿ ಬರುತ್ತಿದ್ದ, ವಾಯುಪ್ರೇರಿತವಾದ ಮೇಘದಂತೆ ಕಾಣುತ್ತಿದ್ದ, ಪರ್ವತೋಪಮನಾಗಿದ್ದ ಕುಂಭಕರ್ಣನಿಗೆ ಹೇಳಿದನು :

"ರಾಕ್ಷಸಶ್ರೇಷ್ಠನೇ! ಇಂದ್ರಶತ್ರುವೇ! ನನ್ನೊಡನೆ ಯುದ್ಧಕ್ಕೆ ಬಾ. ವಿಷಾದಿಸಬೇಡ. ಧನುಸ್ಸನ್ನು ಹಿಡಿದು ನಿನ್ನೊಡನೆ ಯುದ್ಧಮಾಡುವ ಸಲುವಾಗಿಯೇ ನಿಂತಿರುವೆನು. ರಾಕ್ಷಸರ ವಂಶನಾಶಕನಾದ ರಾಮನೇ ನಾನೆಂದು ತಿಳಿ. ಮುಹೂರ್ತಕಾಲದಲ್ಲಿಯೇ ನೀನು ಮೃತನಾಗುವೆ."

ತನ್ನೆದುರಿನಲ್ಲಿ ಬಂದು ನಿಂತಿರುವವನು ರಾಮನೆಂದು ತಿಳಿದು ಕುಂಭಕರ್ಣನು ವಿಕಾರಧ್ವನಿಯಲ್ಲಿ ಗಹ-ಗಹಿಸಿ ನಕ್ಕನು. ಪರಮಕ್ರುದ್ಧನಾಗಿ ರಣಕ್ಷೇತ್ರದಲ್ಲಿ ವಾನರಸೈನಿಕರನ್ನು ಓಡಿಸಿ ರಾಮನ ಕಡೆಗೆ ಧಾವಿಸಿದನು. ಎಲ್ಲ ವಾನರರ ಹೃದಯಗಳನ್ನೂ ಸೀಳಿಬಿಡುವನೋ ಎಂಬಂತೆ ಭಯಂಕರ

ವಾಗಿ ಮತ್ತು ವಿಕಾರವಾಗಿ ಮೇಘದ ಗರ್ಜನೆಯಂತೆ ಅಟ್ಟಹಾಸದಿಂದ ಗಹ-ಗಹಿಸಿ ನಗುತ್ತಾ ಶ್ರೀರಾಮನಿಗೆ ಹೇಳಿದನು :

ನಾಹಂ ವಿರಾಧೋ ವಿಜ್ಞೇಯೋ ನ ಕಬನ್ಧಃ ಖರೋ ನ ಚ ।
ನ ವಾಲೀ ನ ಚ ಮಾರೀಚಃ ಕುಮ್ಭಕರ್ಣೋಽಹಮಾಗತಃ ॥೧೪೫॥

"ರಾಘವ! ನನ್ನನ್ನು ವಿರಾಧನೆಂದು ಭಾವಿಸಬೇಡ. ನಾನು ಕಬಂಧನೂ ಅಲ್ಲ. ಖರನೂ ಅಲ್ಲ. ವಾಲಿಯೂ ಅಲ್ಲ. ಮಾರೀಚನೂ ಅಲ್ಲ. ನಾನು ಕುಂಭಕರ್ಣ. ನಿನ್ನೊಡನೆ ಯುದ್ಧಮಾಡಲು ಬಂದಿರುವೆನು.

ನನ್ನ ಈ ಭಯಂಕರವಾದ ಮುದ್ಗರವನ್ನು ನೋಡು. ಮಹಾಭಾರವಾಗಿರುವ ಇದು ಕಬ್ಬಿಣದಿಂದ ನಿರ್ಮಿತವಾಗಿದೆ. ಇದರಿಂದಲೇ ನಾನು ಹಿಂದೆ ದೇವ-ದಾನವರನ್ನು ಜಯಿಸಿದ್ದೇನೆ.

ಮೂಗು-ಕಿವಿಗಳಿಲ್ಲದವನೆಂದು ನೀನು ನನ್ನನ್ನು ತಿರಸ್ಕರಿಸಬೇಡ. ಕಿವಿ-ಮೂಗುಗಳು ಇಲ್ಲದೇ ಇರುವುದರಿಂದ ನನಗೆ ಯಾವ ವಿಧವಾದ ಪೀಡೆಯೂ ಆಗಿಲ್ಲ. ಇಕ್ಷ್ವಾಕುಕುಲತಿಲಕನೇ! ನನ್ನ ಅಂಗಾಂಗಗಳಲ್ಲಿ ಬಾಣಗಳನ್ನು ಪ್ರಯೋಗಿಸಿ ನಿನ್ನ ಪರಾಕ್ರಮವನ್ನು ತೋರಿಸು. ನಿನ್ನ ಪೌರುಷವನ್ನೂ ಪರಾಕ್ರಮವನ್ನೂ ನೋಡಿದನಂತರ ನಾನು ನಿನ್ನನ್ನು ಭಕ್ಷಿಸುತ್ತೇನೆ."

ಕುಂಭಕರ್ಣನ ಆ ಮಾತುಗಳನ್ನು ಕೇಳಿ ಶ್ರೀರಾಮನು ಸುಂದರವಾದ ರೆಕ್ಕೆಗಳಿದ್ದ ಬಾಣಗಳನ್ನು ಕುಂಭಕರ್ಣನ ಮೇಲೆ ಪ್ರಯೋಗಿಸಿದನು. ವಜ್ರಾಯುಧಕ್ಕೆ ಸಮಾನವಾದ ವೇಗದಿಂದ ಕೂಡಿದ್ದ ಆ ಬಾಣಗಳಿಂದ ಪ್ರಹರಿಸಲ್ಪಟ್ಟರೂ ದೇವಶತ್ರುವಾದ ರಾಕ್ಷಸನು ಅಲ್ಲಾಡಲಿಲ್ಲ ; ವ್ಯಥೆಪಡಲಿಲ್ಲ. ಯಾವ ಬಾಣಗಳು ಏಳು ಸಾಲವೃಕ್ಷಗಳನ್ನೂ ಏಕಕಾಲದಲ್ಲಿ ಕತ್ತರಿಸಿದುವೋ–ಯಾವ ಬಾಣಗಳಿಂದ ವಾನರಶ್ರೇಷ್ಠನಾದ ವಾಲಿಯು ಹತನಾದನೋ–ಅಂತಹ ವಜ್ರಾಯುಧಸದೃಶವಾದ ಶ್ರೀರಾಮನ ಬಾಣಗಳು ಕುಂಭಕರ್ಣನ ಶರೀರದಲ್ಲಿ ಯಾವ ವಿಧವಾದ ವೇದನೆಯನ್ನೂ ಉಂಟುಮಾಡಲಿಲ್ಲ. ಇಂದ್ರಶತ್ರುವಾದ ಕುಂಭಕರ್ಣನು, ಧಾರಾಕಾರವಾಗಿ ಎಡೆಬಿಡದೇ ಬರುತ್ತಿದ್ದ ಶ್ರೀರಾಮನ

ಬಾಣಗಳನ್ನು ಶರೀರದಿಂದಲೇ ನುಂಗಿಹಾಕುತ್ತಿದ್ದನು. ಭಯಂಕರವಾದ ವೇಗ ದಿಂದ ಕೂಡಿದ್ದ ಮುದ್ಗರವನ್ನು ಎಲ್ಲ ಕಡೆಗಳಲ್ಲಿಯೂ ತಿರುಗಿಸುತ್ತಾ ಶ್ರೀರಾಮನ ಬಾಣಗಳ ವೇಗವನ್ನು ನಾಶಗೊಳಿಸಿದನು. ಬಳಿಕ ಆ ರಾಕ್ಷಸನು, ರಕ್ತದಿಂದ ಲೇಪಿತವಾಗಿದ್ದ, ದೇವತೆಗಳ ಸೈನ್ಯವನ್ನು ಭಯಗೊಳಿಸಿದ್ದ, ಭಯಂಕರವಾದ ವೇಗವುಳ್ಳ ಮುದ್ಗರವನ್ನು ಸುತ್ತಲೂ ತಿರುಗಿಸುತ್ತಾ ವಾನರಸೈನ್ಯವನ್ನು ಓಡಿಸಿದನು. ಅನಂತರ ಶ್ರೀರಾಮನು ವಾಯವ್ಯವೆಂಬ ಅಸ್ತ್ರವನ್ನು ತೆಗೆದುಕೊಂಡು ರಾಕ್ಷಸನ ಮೇಲೆ ಪ್ರಯೋಗಿಸಿದನು. ಆ ಮಹಾಸ್ತ್ರವು ಮುದ್ಗರಸಹಿತವಾಗಿದ್ದ ಅವನು ಬಾಹುವನ್ನೇ ಕತ್ತರಿಸಿತು. ತೋಳನ್ನು ಕಳೆದುಕೊಂಡ ರಾಕ್ಷಸನು ಭಯಂಕರವಾಗಿ ಗರ್ಜಿಸಿದನು. ರಾಘವ ನಿಂದ ಕತ್ತರಿಸಲ್ಪಟ್ಟ, ಮುದ್ಗರಾಯುಧವನ್ನು ಹಿಡಿದಿದ್ದ, ಪರ್ವತಶಿಖರ ಸದೃಶವಾಗಿದ್ದ ಆ ರಾಕ್ಷಸನ ತೋಳು ವಾನರರಾಜನ ಸೈನ್ಯದ ಮಧ್ಯದಲ್ಲಿ ಬಿದ್ದು ಅದನ್ನು ಧ್ವಂಸಮಾಡಿತು. ಅಳಿದುಳಿದಿದ್ದ ವಾನರಸೈನಿಕರು ಅತ್ಯಂತ ವಿಷಣ್ಣರಾಗಿ ಯುದ್ಧವಾಗುತ್ತಿದ್ದ ಸ್ಥಳಕ್ಕೆ ಅನತಿದೂರದಲ್ಲಿ ನಿಂತು ನರೇಂದ್ರ ನಿಗೂ ರಾಕ್ಷಸೇಂದ್ರನಿಗೂ ನಡೆಯುತ್ತಿದ್ದ ಭಯಂಕರವಾದ ಯುದ್ಧವನ್ನು ನೋಡುತ್ತಿದ್ದರು.

ಶ್ರೀರಾಮನ ಅಸ್ತ್ರಪ್ರಹಾರದಿಂದ ತೋಳನ್ನು ಕಳೆದುಕೊಂಡ ಕುಂಭ ಕರ್ಣನು ವಜ್ರಾಯುಧಪ್ರಹಾರದಿಂದ ಶಿಖರವನ್ನು ಕಳೆದುಕೊಂಡ ಪರ್ವತ ರಾಜನಂತೆಯೇ ಕಾಣುತ್ತಿದ್ದನು. ಕುಂಭಕರ್ಣನು ಮತ್ತೊಂದು ಕೈಯಿಂದ ವೃಕ್ಷವೊಂದನ್ನು ಕಿತ್ತು ಅದನ್ನೆತ್ತಿಕೊಂಡು ಶ್ರೀರಾಮನ ಬಳಿಗೆ ಧಾವಿಸಿದನು. ಸರ್ಪದ ಹೆಡೆಯಂತೆ ಮೇಲೆದ್ದು ನಿಂತಿದ್ದ ಸಾಲವೃಕ್ಷದಿಂದ ಸಹಿತವಾಗಿದ್ದ ಕುಂಭಕರ್ಣನ ಮತ್ತೊಂದು ತೋಳನ್ನು ಶ್ರೀರಾಮನು ಐಂದ್ರಾಸ್ತ್ರದಿಂದ ಅಭಿಮಂತ್ರಿತವಾದ ಸುವರ್ಣಭೂಷಿತವಾದ ಮತ್ತೊಂದು ಬಾಣದಿಂದ ಪ್ರಹರಿಸಿದನು. ಐಂದ್ರಾಸ್ತ್ರದಿಂದ ಕತ್ತರಿಸಲ್ಪಟ್ಟ ಪರ್ವತಸದೃಶವಾಗಿದ್ದ ಕುಂಭ ಕರ್ಣನ ಮತ್ತೊಂದು ಭುಜವು ಭೂಮಿಯ ಮೇಲೆ ಬಿದ್ದು ಅತ್ತಲಿತ್ತ ಹೊರಳಾ ಡುತ್ತಾ ಅನೇಕವೃಕ್ಷಗಳನ್ನೂ, ಪರ್ವತಶಿಖರಗಳನ್ನೂ, ಬಂಡೆಗಳನ್ನೂ, ವಾನರರನ್ನೂ, ರಾಕ್ಷಸರನ್ನೂ ಧ್ವಂಸಮಾಡಿತು. ಎರಡು ತೋಳುಗಳನ್ನೂ ಕಳೆದುಕೊಂಡ ರಾಕ್ಷಸನು ಆರ್ತನಾದಮಾಡುತ್ತಾ ಶ್ರೀರಾಮನ ಮೇಲೆ

ಬೀಳುವುದರಲ್ಲಿದ್ದನು. ಅದನ್ನು ನೋಡಿ ಒಡನೆಯೇ ಶ್ರೀರಾಮನು ಅರ್ಧ ಚಂದ್ರವೆಂಬ ಎರಡು ಬಾಣಗಳನ್ನು ಪ್ರಯೋಗಿಸಿ ರಾಕ್ಷಸನ ಎರಡು ಕಾಲು ಗಳನ್ನೂ ಕತ್ತರಿಸಿದನು. ಆ ಎರಡು ಪಾದಗಳೂ ದಿಕ್ಕುಗಳಲ್ಲಿಯೂ, ಉಪ ದಿಕ್ಕುಗಳಲ್ಲಿಯೂ, ಪರ್ವತದ ಕಂದರಗಳಲ್ಲಿಯೂ, ಮಹಾಸಮುದ್ರಗಳ ಲ್ಲಿಯೂ, ಲಂಕಾಪಟ್ಟಣದಲ್ಲಿಯೂ, ರಾಕ್ಷಸ-ವಾನರಸೈನ್ಯದಲ್ಲಿಯೂ ಪ್ರತಿಧ್ವನಿಯನ್ನುಂಟುಮಾಡುತ್ತಾ ಭೂಮಿಯ ಮೇಲೆ ಬಿದ್ದುವು. ಶ್ರೀರಾಮನ ಮಹಾಸ್ತ್ರಗಳ ಪ್ರಯೋಗದಿಂದ ಕೈ-ಕಾಲುಗಳನ್ನು ಕಳೆದುಕೊಂಡಿದ್ದ ಕುಂಭ ಕರ್ಣನು ವಡವಾಮುಖಕ್ಕೆ ಸಮಾನವಾಗಿದ್ದ ತನ್ನ ಬಾಯನ್ನು ಅಗಲವಾಗಿ ತೆರೆದುಕೊಂಡು ಗಟ್ಟಿಯಾಗಿ ಗರ್ಜನೆಮಾಡುತ್ತಾ–ಅಂತರಿಕ್ಷದಲ್ಲಿ ಚಂದ್ರನನ್ನು ರಾಹುವು ನುಂಗಲು ಧಾವಿಸುವಂತೆ–ಶ್ರೀರಾಮನನ್ನು ನುಂಗಲು ಧಾವಿಸಿದನು. ಒಡನೆಯೇ ಶ್ರೀರಾಮನು ಸುವರ್ಣಮಯವಾದ ರೆಕ್ಕೆಗಳನ್ನು ಹೊಂದಿದ್ದ ನಿಶಿತವಾದ ಅಗ್ರಭಾಗಗಳುಳ್ಳ ಬಾಣಗಳಿಂದ ಕುಂಭಕರ್ಣನ ಬಾಯನ್ನೇ ತುಂಬಿಬಿಟ್ಟನು. ಬಾಣಗಳಿಂದ ತುಂಬಿಹೋದ ಬಾಯಿಂದ ಕೂಡಿದ್ದ ಕುಂಭ ಕರ್ಣನು ಮಾತನಾಡಲು ಕೂಡ ಸಮರ್ಥನಾಗಲಿಲ್ಲ. ಬಹಳ ಕಷ್ಟದಿಂದ ಆರ್ತನಾದಮಾಡುತ್ತಾ ಹಾಗೆಯೇ ಮೂರ್ಛಿತನಾದನು. ಬಳಿಕ ಶ್ರೀರಾಮನು ಬ್ರಹ್ಮದಂಡ-ಕಾಲದಂಡಗಳಿಗೆ ಸಮಾನವಾಗಿದ್ದ, ಸೂರ್ಯನ ಕಿರಣಗಳಂತೆ ದೇದೀಪ್ಯಮಾನವಾಗಿದ್ದ, ಐಂದ್ರಾಸ್ತ್ರದಿಂದ ಅಭಿಮಂತ್ರಿತವಾಗಿದ್ದ, ಶತ್ರು ನಾಶಕವಾದ, ಸೂರ್ಯಾಗ್ನಿಗಳಂತೆ ಪ್ರಜ್ವಲಿಸುತ್ತಿದ್ದ, ವಜ್ರದಿಂದಲೂ ಸುವರ್ಣದಿಂದಲೂ ಭೂಷಿತವಾಗಿದ್ದ, ಸುಂದರವಾದ ರೆಕ್ಕೆಗಳನ್ನು ಹೊಂದಿದ್ದ, ವಾಯುವಿನ ಮತ್ತು ಇಂದ್ರನ ವಜ್ರಾಯುಧದ ವೇಗಕ್ಕೆ ಸಮಾನವಾದ ವೇಗ ವುಳ್ಳ ಬಾಣವನ್ನು ಕುಂಭಕರ್ಣನ ಮೇಲೆ ಪ್ರಯೋಗಿಸಿದನು. ಹೊಗೆಯಿಲ್ಲದ ಅಗ್ನಿಯಂತೆ ಭಯಂಕರವಾಗಿ ಕಾಣುತ್ತಿದ್ದ, ಇಂದ್ರನ ವಜ್ರಾಯುಧದಂತೆ ಭಯಂಕರವೇಗದಿಂದ ಕೂಡಿದ್ದ, ಶ್ರೀರಾಮನ ಬಾಹುವಿನಿಂದ ಮುಕ್ತವಾದ ಆ ಬಾಣವು ತನ್ನ ಕಾಂತಿಯಿಂದ ಹತ್ತು ದಿಕ್ಕುಗಳನ್ನೂ ಬೆಳಗುತ್ತಾ ವೇಗವಾಗಿ ಕುಂಭಕರ್ಣನ ಕಡೆಗೆ ಧಾವಿಸಿತು. ಹಿಂದೆ ಇಂದ್ರನ ವಜ್ರಾಯುಧವು ವೃತ್ರಾಸುರನ ಕತ್ತನ್ನು ಕತ್ತರಿಸಿದಂತೆ–ಶ್ರೀರಾಮನು ಬಿಟ್ಟ ಆ ಐಂದ್ರಾಸ್ತ್ರವು ಮಹಾಪರ್ವತದ ಶಿಖರದಂತೆ ಎತ್ತರವಾಗಿದ್ದ, ಸುಂದರವಾದ ಮತ್ತು

ದುಂಡಾದ ಕೋರೆದಾಡೆಗಳಿಂದ ಕೂಡಿದ್ದ, ಕಳೆದುಹೋದ ಸುಂದರವಾದ ಕುಂಡಲಗಳುಳ್ಳ, ರಾಕ್ಷಸರ ಅಧಿಪತಿಯಾದ ಕುಂಭಕರ್ಣನ ಕತ್ತನ್ನು ಕತ್ತರಿಸಿತು.

ಕುಮ್ಭಕರ್ಣಶಿರೋ ಭಾತಿ ಕುಣ್ಡಲಾಲಂಕೃತಂ ಮಹತ್ ।
ಆದಿತ್ಯೇಽಭ್ಯುದಿತೇಽರಾತ್ರೌ ಮಧ್ಯಸ್ಥ ಇವ ಚನ್ದ್ರಮಾಃ ॥೧೬೭॥

ಕುಂಡಲಗಳಿಂದ ರಹಿತವಾಗಿದ್ದ ವಿಶಾಲವಾದ ಕುಂಭಕರ್ಣನ ತಲೆಯು ಹಗಲಿನಲ್ಲಿ ಸೂರ್ಯನು ಉದಯಿಸಿರುವಾಗ ಆಕಾಶದ ಮಧ್ಯ ದಲ್ಲಿರುವ ಚಂದ್ರನಂತೆ ಕಾಂತಿಹೀನವಾಗಿದ್ದಿತು.*

ಶ್ರೀರಾಮನಿಂದ ಕತ್ತರಿಸಲ್ಪಟ್ಟ ಪರ್ವತಸದೃಶವಾದ ಆ ತಲೆಯು ಮಾರ್ಗಗಳಲ್ಲಿರುವ ಮನೆಗಳನ್ನೂ, ಗೋಪುರಗಳನ್ನೂ, ಎತ್ತರವಾದ ಪ್ರಾಕಾರಗಳನ್ನೂ ನೆಲಕ್ಕುರುಳಿಸುತ್ತಾ ಲಂಕಾಪಟ್ಟಣದಲ್ಲಿ ಬಿದ್ದಿತು. ಅದೇ ರೀತಿಯಲ್ಲಿ ಹಿಮವತ್ಪರ್ವತದಂತೆ ಪ್ರಕಾಶಮಾನವಾಗಿದ್ದ ಕುಂಭಕರ್ಣನ ಮಹಾಶರೀರವು ಸಮುದ್ರದಲ್ಲಿ ಬಿದ್ದಿತು. ಅದು ಬಿದ್ದೊಡನೆಯೇ ಸಮುದ್ರ ದಲ್ಲಿದ್ದ ದೊಡ್ಡ-ದೊಡ್ಡ ಮೊಸಳೆಗಳನ್ನೂ, ಮೀನುಗಳನ್ನೂ, ಸರ್ಪಗಳನ್ನೂ ಧ್ವಂಸಮಾಡುತ್ತಾ ಸಮುದ್ರತಲದಲ್ಲಿದ್ದ ಭೂಮಿಯೊಳಗೆ ಸೇರಿಕೊಂಡಿತು. ಬ್ರಾಹ್ಮಣರಿಗೂ ಮತ್ತು ದೇವತೆಗಳಿಗೂ ಶತ್ರುವಾಗಿದ್ದ ಮಹಾಬಲಿಷ್ಠನಾದ ಕುಂಭಕರ್ಣನು ಹತನಾಗಲು ಭೂಮಿಯೂ ಪರ್ವತಗಳೂ ಕಂಪಿಸಿದುವು. ಎಲ್ಲ ದೇವತೆಗಳೂ ಆನಂದತುಂದಿಲರಾಗಿ ಕೋಲಾಹಲಧ್ವನಿಮಾಡಿದರು.

ಆ ಸಮಯದಲ್ಲಿ ಆಕಾಶದಲ್ಲಿ ಯುದ್ಧವನ್ನು ನೋಡುತ್ತಾ ನಿಂತಿದ್ದ ದೇವರ್ಷಿ-ಮಹರ್ಷಿಗಳೂ, ಪನ್ನಗರೂ, ದೇವತೆಗಳೂ, ಭೂತಗಣಗಳೂ,

---

* ಈ ಶ್ಲೋಕವು ಪ್ರಕ್ಷಿಪ್ತವೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಕಾರಣ ಕುಂಭಕರ್ಣನ ಸಂಹಾರಕಾಲದಲ್ಲಿ ಅವನಿಗೆ ಕಿವಿ-ಮೂಗುಗಳೇ ಇರಲಿಲ್ಲ. ಈ ವಿಷಯ ವನ್ನು ಕುಂಭಕರ್ಣನೇ ಹೇಳಿಕೊಂಡಿದ್ದಾನೆ. ಆದಿತ್ಯೇಽಭ್ಯುದಿತೇ ರಾತ್ರೌ ರಾತ್ರಿಯಲ್ಲಿ ಸೂರ್ಯನು ಹುಟ್ಟಿದಾಗ ಎಂದು ಅರ್ಥವಾಗುತ್ತದೆ. ಆದುದರಿಂದ **ಆದಿತ್ಯೇಽಭ್ಯುದಿತೇಽರಾತ್ರೌ** 'ಅರಾತ್ರೌ' ಎಂದು ಪದವಿಭಾಗಮಾಡಿ ಹಗಲು–ಎಂದು ಅರ್ಥ ಮಾಡಬೇಕು. ಕುಂಡಲಾಲಂಕೃತಂ ಎಂಬುದಕ್ಕೆ ಕುಂಡಲಾಭ್ಯಾಂ ಅಲಂ = ನಿವಾರಣಂ ಕೃತಂ ಕುಂಡಲಗಳಿಲ್ಲದಿದ್ದ ತಲೆಯು ಹಗಲಿನ ಚಂದ್ರನಂತೆ ನಿಸ್ತೇಜವಾಗಿದ್ದಿತು.

ಗರುಡ-ಗುಹ್ಯಕ-ಯಕ್ಷ-ಗಂಧರ್ವರೂ ಶ್ರೀರಾಮನ ಪರಾಕ್ರಮವನ್ನು ನೋಡಿ ಸಂತುಷ್ಟರಾದರು.

ಕುಂಭಕರ್ಣನ ವಧೆಯಿಂದಾಗಿ ರಾಕ್ಷಸರಾಜನಾದ ರಾವಣನ ಆಪ್ತರಾದ ಬಂಧುಗಳಿಗೆ ಬಹಳ ದುಃಖವಾಯಿತು. ಅವರು ರಘುಕುಲತಿಲಕನಾದ ಶ್ರೀರಾಮನ ಕಡೆ ನೋಡುತ್ತಾ–ಮದಿಸಿದ ಆನೆಗಳು ಸಿಂಹವನ್ನು ನೋಡಿದೊಡನೆಯೇ ಚೀತ್ಕಾರಮಾಡುವಂತೆ–ಗಟ್ಟಿಯಾಗಿ ಕೂಗಿಕೊಂಡರು. ದೇವಲೋಕಕ್ಕೆ ಕತ್ತಲಿನ ರೂಪದಲ್ಲಿದ್ದ ಕುಂಭಕರ್ಣನನ್ನು ಯುದ್ಧದಲ್ಲಿ ಸಂಹರಿಸಿ ವಾನರಸೈನ್ಯದ ಮಧ್ಯದಲ್ಲಿದ್ದ ಶ್ರೀರಾಮನು ರಾಹುವಿನಿಂದ ಮುಕ್ತನಾದ ಸೂರ್ಯದೇವನಂತೆಯೇ ಪ್ರಕಾಶಿಸುತ್ತಿದ್ದನು. ಭಯಂಕರನೂ ಬಲಶಾಲಿಯೂ ಆಗಿದ್ದ ಶತ್ರುವಿನ ಸಂಹಾರದಿಂದ ಸಮಸ್ತವಾನರರೂ ಪ್ರಸನ್ನರಾದರು. ಅವರ ಮುಖಗಳು ಅರಳಿದ ತಾವರೆಗಳಂತೆ ಹರ್ಷದಿಂದ ಅರಳಿದುವು. ಅವರೆಲ್ಲರೂ ಸೇರಿ ಸಫಲಮನೋರಥನಾದ ಶ್ರೀರಾಮನನ್ನು ಪೂಜಿಸಿ ಸತ್ಕರಿಸಿದರು. ದೇವಸೈನ್ಯಧ್ವಂಸಕನಾದ, ಮಹಾಯುದ್ಧಗಳಲ್ಲಿಯೂ ಪರಾಜಿತನಾಗದಿದ್ದ, ಮಹಾಸುರನಾದ ಕುಂಭಕರ್ಣನನ್ನು ಸಂಹರಿಸಿ–ವೃತ್ರಾಸುರನನ್ನು ಕೊಂದು ಇಂದ್ರನು ಸಂತೋಷಿಸಿದಂತೆ–ಭರತಾಗ್ರಜನಾದ ಶ್ರೀರಾಮನು ಆನಂದಪಟ್ಟನು.

೬೭ನೆಯ ಸರ್ಗವು ಮುಗಿಯಿತು.

ಈ ಹಿಂದೆ ೧೬೬ನೇ ಶ್ಲೋಕದಲ್ಲಿ ಬಂದಿರುವ **ಚಲಚಾರುಕುಣ್ಡಲಂ** ಎಂಬುದಕ್ಕೂ **ಚಲೇ = ಚಲಿತೇ = ಗತೇ ಚಾರುಕುಣ್ಡಲೇ** ಕಳೆದುಹೋದ ಕುಂಡಲಗಳುಳ್ಳ–ಎಂದು ಅರ್ಥಮಾಡಬೇಕಾಗುತ್ತದೆ. ಒಬ್ಬ ವ್ಯಾಖ್ಯಾನಕಾರರು ರಾತ್ರಿಯಲ್ಲಿ ಅದಿತಿದೇವತಾತ್ಮಕವಾದ ಎರಡು ತಾರೆಗಳನ್ನೊಳಗೊಂಡ ಪುನರ್ವಸೂನಕ್ಷತ್ರವು ಉದಯಿಸಲಾಗಿ ಅವುಗಳ ಮಧ್ಯದಲ್ಲಿರುವ ಚಂದ್ರನಂತೆ ಕರ್ಣಕುಂಡಲಗಳಿಂದ ಯುಕ್ತವಾದ ಮುಖವು ಪ್ರಕಾಶಿಸುತ್ತಿದ್ದಿತು–ಎಂದು ಅರ್ಥಮಾಡಿರುತ್ತಾರೆ. ಇವರ ಪ್ರಕಾರ ಮುಖವು ನಿಸ್ತೇಜವಾಗಿರುವುದಿಲ್ಲ.

ಕುಂಭಕರ್ಣನ ಮರಣದಿಂದ ರಾವಣನ ದುಃಖ

ಕುಮ್ಭಕರ್ಣಂ ಹತಂ ದೃಷ್ಟ್ವಾ ರಾಘವೇಣ ಮಹಾತ್ಮನಾ ।
ರಾಕ್ಷಸಾ ರಾಕ್ಷಸೇನ್ದ್ರಾಯ ರಾವಣಾಯ ನ್ಯವೇದಯನ್ ॥೧॥

ಕುಂಭಕರ್ಣನು ಮಹಾತ್ಮನಾದ ಶ್ರೀರಾಮನಿಂದ ಹತನಾದುದನ್ನು ಕಂಡು ರಾಕ್ಷಸರೆಲ್ಲರೂ ರಾವಣನ ಬಳಿಗೆ ಹೋಗಿ ಆ ವಾರ್ತೆಯನ್ನರುಹಿದರು.

"ಮಹಾರಾಜ! ಕಾಲಪುರುಷನಂತೆ ಮಹಾಭಯಂಕರಪರಾಕ್ರಮಿಯಾದ ಕುಂಭಕರ್ಣನು ವಾನರಸೈನ್ಯವನ್ನು ಪಲಾಯನಮಾಡಿಸಿ ಹಲವಾರು ವಾನರರನ್ನು ಭಕ್ಷಿಸಿ ಕಡೆಗೆ ತಾನೂ ಕಾಲವಶನಾದನು. ಮುಹೂರ್ತ ಪರ್ಯಂತವೂ ಪ್ರತಾಪದಿಂದ ಪ್ರಜ್ವಲಿಸುತ್ತಿದ್ದ ನಿನ್ನ ತಮ್ಮನು ಕಡೆಯಲ್ಲಿ ರಾಮನ ತೇಜಸ್ಸಿನಿಂದ ಶಾಂತವಾಗಿಹೋದನು. ಅವನ ಅರ್ಧಶರೀರವು ಭಯಂಕರವಾಗಿ ಕಾಣುವ ಸಮುದ್ರದಲ್ಲಿ ಮುಳುಗಿಹೋಯಿತು. ಉಳಿದ ಅರ್ಧಭಾಗವು ಕಿವಿ-ಮೂಗುಗಳನ್ನು ಕಳೆದುಕೊಂಡು ರಕ್ತದಲ್ಲಿ ತೋಯ್ದು ಲಂಕಾಪಟ್ಟಣದ ಮಹಾದ್ವಾರದ ಬಳಿಯಲ್ಲಿ ಬಿದ್ದಿದೆ. ಪರ್ವತೋಪಮನಾಗಿದ್ದ ಆ ನಿನ್ನ ತಮ್ಮನು ಆ ಶರೀರದಿಂದಲೇ ಲಂಕೆಯ ಮಹಾದ್ವಾರವನ್ನು ಮುಚ್ಚಿಬಿಟ್ಟಿದ್ದಾನೆ. ಅಗಂಡಭೂತನಾಗಿ* (ತಲೆ-ಕೈಕಾಲುಗಳನ್ನು ಕಳೆದುಕೊಂಡ) ವಿಕಾರರೂಪನಾಗಿರುವ ಕುಂಭಕರ್ಣನು ಈಗ ಕಾಡುಗಿಚ್ಚಿನಿಂದ ಸುಟ್ಟುಹೋದ ವೃಕ್ಷದಂತೆಯೇ ಕಾಣುತ್ತಿದ್ದಾನೆ."

ಯುದ್ಧದಲ್ಲಿ ಕುಂಭಕರ್ಣನು ಹತನಾದನೆಂಬ ವಾರ್ತೆಯನ್ನು ಕೇಳಿದೊಡನೆಯೇ ಶೋಕತಪ್ತನಾದ ರಾವಣನು ಮೂರ್ಛಿತನಾಗಿ ಕೆಳಗೆ ಬಿದ್ದನು. ಚಿಕ್ಕಪ್ಪನು ಮೃತನಾದುದನ್ನು ಕೇಳಿ ರಾವಣನ ಮಕ್ಕಳಾದ ದೇವಾಂತಕ, ನರಾಂತಕ, ತ್ರಿಶಿರಸ ಮತ್ತು ಅತಿಕಾಯರು ಶೋಕಪೀಡಿತರಾಗಿ ರೋದನ ಮಾಡಿದರು. ಅನಾಯಾಸವಾಗಿ ಮಹಾಕಾರ್ಯಗಳನ್ನಾದರೂ ಮಾಡುವ

---

* ಅಗಂಡಭೂತಃ= ಅಗಂಡಃ- ತಲೆ-ಕೈಕಾಲುಗಳಿಲ್ಲದ ದೇಹಕ್ಕೆ ಅಗಂಡವೆಂದು ಹೆಸರು. ಅಶಿರಃಪಾಣಿಪಾದಸ್ತು ಕಬನ್ಧೋऽಗಣ್ಡ ಉಚ್ಯತೇ ॥

ಶ್ರೀರಾಮನು ಕುಂಭಕರ್ಣನನ್ನು ಸಂಹರಿಸಿದನೆಂಬ ವಾರ್ತೆಯನ್ನು ಕೇಳಿ ಅವನ ಸಹೋದರರಾದ ಮಹೋದರ-ಮಹಾಪಾರ್ಶ್ವರೂ ಶೋಕಾಕ್ರಾಂತರಾದರು.

ಸ್ವಲ್ಪಹೊತ್ತಿನಲ್ಲಿಯೇ ಬಹಳ ಕಷ್ಟದಿಂದ ಪ್ರಜ್ಞೆಯನ್ನು ಪಡೆದ ರಾವಣನು ಕುಂಭಕರ್ಣನ ವಧೆಯಿಂದ ವ್ಯಾಕುಲಿತವಾದ ಇಂದ್ರಿಯಗಳಿಂದ ಕೂಡಿ ದೀನನಾಗಿ ಅಳತೊಡಗಿದನು :

"ಅಯ್ಯೋ! ವೀರನೇ! ಶತ್ರುಗಳ ದರ್ಪವಿಧ್ವಂಸಕನೇ! ಮಹಾಬಲನೇ! ಕುಂಭಕರ್ಣ! ದೈವವಶದಿಂದ ನೀನು ನನ್ನನ್ನು ಪರಿತ್ಯಜಿಸಿ ಯಮಾಲಯಕ್ಕೆ ಹೋಗಿಬಿಟ್ಟಿರುವೆಯಲ್ಲಾ! ನೀನು ಏಕಾಕಿಯಾಗಿ ಶತ್ರುಸೈನ್ಯವನ್ನು ಪರಿತಾಪಗೊಳಿಸಿದೆ. ಆದರೆ ನನ್ನ ಮತ್ತು ಬಂಧುಗಳ ಮುಳ್ಳನ್ನು ತೆಗೆಯದೆಯೇ ನನ್ನನ್ನು ಬಿಟ್ಟು ಹೊರಟುಹೋಗಿರುವೆ.

ನಾನಿಂದು ನಿಶ್ಚಯವಾಗಿಯೂ ಶೂನ್ಯನಾಗಿಬಿಟ್ಟಿದ್ದೇನೆ. ಏಕೆಂದರೆ : ನನ್ನ ಬಲಭುಜದಂತಿದ್ದ ಕುಂಭಕರ್ಣನಿಂದು ಸತ್ತುಬಿದ್ದಿದ್ದಾನೆ. ಇವನನ್ನಾಶ್ರಯಿಸಿಯೇ ನಾನು ಸುರಾಸುರರಿಗೂ ಸೊಪ್ಪುಹಾಕುತ್ತಿರಲಿಲ್ಲ. ದೇವ-ದಾನವರ ದರ್ಪವನ್ನು ಮುರಿಯುತ್ತಿದ್ದ, ಕಾಲಾಗ್ನಿಸದೃಶನಾದ, ವೀರನಾದ ನನ್ನ ತಮ್ಮನು ಹೇಗೆ ರಾಘವನಿಂದ ಹತನಾದನು?

ತಮ್ಮ! ನಿನಗೆ ವಜ್ರಾಯುಧದ ಪ್ರಹಾರವೂ ಯಾವ ವಿಧವಾದ ಪೀಡೆಯನ್ನೂ ಉಂಟುಮಾಡುತ್ತಿರಲಿಲ್ಲ. ಹೀಗಿರುವಾಗ ರಾಮಬಾಣಪೀಡಿತನಾದ ನೀನು ಅಸುನೀಗಿ ಭೂಮಿಯ ಮೇಲೆ ಹೇಗೆ ತಾನೇ ಮಲಗಿರುವೆ? ಆಕಾಶದಲ್ಲಿ ನಿಂತಿರುವ ಈ ದೇವತೆಗಳೂ ಮತ್ತು ಋಷಿಗಳೂ ನೀನು ಯುದ್ಧಭೂಮಿಯಲ್ಲಿ ಹತನಾದುದನ್ನು ನೋಡಿ ಪ್ರಹರ್ಷಿತರಾಗಿ ಹರ್ಷಧ್ವನಿಗಳನ್ನು ಮಾಡುತ್ತಿದ್ದಾರೆ. ಈ ಸಮಯದಲ್ಲಿಯೇ ಇಂತಹುದೇ ಸಮಯವನ್ನು ನಿರೀಕ್ಷಿಸುತ್ತಿದ್ದ ವಾನರಸೈನಿಕರು ಸಂತುಷ್ಟರಾಗಿ ಲಂಕೆಯ ಸಮಸ್ತವಾದ ದುರ್ಗಮದ್ವಾರಗಳನ್ನೂ ಆಕ್ರಮಿಸುತ್ತಾರೆ. ಇದು ನಿಶ್ಚಯ. ಕುಂಭಕರ್ಣನಿಲ್ಲದಿರುವ ನನಗೆ ಈ ರಾಜ್ಯದಿಂದ ಯಾವ ಕಾರ್ಯವೂ ಆಗಬೇಕಾಗಿಲ್ಲ. ಸೀತೆಯನ್ನಿಟ್ಟುಕೊಂಡು ತಾನೇ ನಾನೇನು ಮಾಡಲಿ? ನನಗೆ ಜೀವಿಸಿರಲು ಕೂಡ ಮನಸ್ಸಿಲ್ಲ. ನನ್ನ ತಮ್ಮನನ್ನು ಸಂಹರಿಸಿರುವ ರಾಘವನನ್ನೇನಾದರೂ

ನಾನು ಯುದ್ಧದಲ್ಲಿ ಸಂಹರಿಸದೇ ಹೋದರೆ ನನಗೆ ನಿರರ್ಥಕವಾದ ಈ ಜೀವನಕ್ಕಿಂತಲೂ ಮರಣವೇ ಶ್ರೇಯಸ್ಕರ. ನನ್ನ ತಮ್ಮನು ಎಲ್ಲಿಗೆ ಹೋದನೋ ಅಲ್ಲಿಗೆ ನಾನೀಗಲೇ ಹೊರಟುಹೋಗುವೆನು. ಸಹೋದರನನ್ನು ಪರಿತ್ಯಜಿಸಿ ನಾನು ಕ್ಷಣಕಾಲವಾದರೂ ಜೀವಿಸಿರಲು ಇಚ್ಛಿಸುವುದಿಲ್ಲ. ಹಿಂದೆ ಬಹಳವಾಗಿ ಅಪಕಾರವನ್ನೆಸಗಿರುವ ನನ್ನನ್ನು ನೋಡಿ ದೇವತೆಗಳು ಹಾಸ್ಯಮಾಡುವರು. ಕುಂಭಕರ್ಣ! ನೀನು ಸತ್ತುಹೋಗಿರುವಾಗ ನಾನು ಇಂದ್ರನನ್ನು ಹೇಗೆ ಜಯಿಸುತ್ತೇನೆ?

ತದಿದಂ ಮಾಮನುಪ್ರಾಪ್ತಂ ವಿಭೀಷಣವಚಃ ಶುಭಮ್ ।
ಯದಜ್ಞಾನಾನ್ಮಯಾ ತಸ್ಯ ನ ಗೃಹೀತಂ ಮಹಾತ್ಮನಃ ॥೨೧॥

ನಾನು ಮಹಾತ್ಮನಾದ ವಿಭೀಷಣನು ಹೇಳಿದ ಉತ್ತಮಸಲಹೆಗಳನ್ನು ಅಜ್ಞಾನವಶದಿಂದ ಸ್ವೀಕರಿಸಲಿಲ್ಲ. ಅವನಂದು ಹೇಳಿದ್ದೇ ಇಂದು ನನಗೆ ಬಂದೊದಗಿದೆ.

ಯಾವಾಗ ಪ್ರಹಸ್ತ-ಕುಂಭಕರ್ಣರ ವಿನಾಶವಾಯಿತೋ ಆಗಿನಿಂದಲೇ ವಿಭೀಷಣನ ಮಾತುಗಳು ಸ್ಮರಣೆಗೆ ಬಂದು ದಾರುಣವಾದ ಲಜ್ಜೆಯು ನನ್ನನ್ನು ಕಾಡಿಸುತ್ತಿದೆ.

ತಸ್ಯಾಯಂ ಕರ್ಮಣಃ ಪ್ರಾಪ್ತೋ ವಿಪಾಕೋ ಮಮ ಶೋಕದಃ ।
ಯನ್ಮಯಾ ಧಾರ್ಮಿಕಃ ಶ್ರೀಮಾನ್ಸ ನಿರಸ್ತೋ ವಿಭೀಷಣಃ ॥೨೩॥

ನಾನು ಧಾರ್ಮಿಕನಾದ ಶ್ರೀಮಂತನಾದ ವಿಭೀಷಣನನ್ನು ಲಂಕೆಯಿಂದ ಓಡಿಸಿಬಿಟ್ಟೆನು. ಆ ಕರ್ಮದ ಫಲವಾಗಿ ನನಗಿಂದು ಶೋಕದಾಯಕವಾದ ಫಲವು ದೊರಕಿದೆ.”

ವ್ಯಾಕುಲವಾದ, ಮನಸ್ಸಿನಿಂದ ಕೂಡಿದ್ದ ರಾವಣನು ಹೀಗೆ ನಾನಾ ಪ್ರಕಾರವಾಗಿ ಹೇಳಿಕೊಂಡು ದೈನ್ಯದಿಂದ ಶೋಕಿಸಿದನು. ತಮ್ಮನಾದ, ಇಂದ್ರನ ಶತ್ರುವಾದ ಕುಂಭಕರ್ಣನು ಹತನಾದನೆಂಬ ವಾರ್ತೆಯನ್ನು ಕೇಳಿ ಅತಿದುಃಖದಿಂದ ಪುನಃ ಮೂರ್ಛಿತನಾಗಿ ಕೆಳಗೆ ಬಿದ್ದನು.

೬೮ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೬೯ನೆಯ ಸರ್ಗ

ರಾವಣನ ಮಕ್ಕಳೂ ಮತ್ತು ಸಹೋದರರೂ ಯುದ್ಧಕ್ಕೆ ಹೋದುದು : ಅಂಗದನಿಂದ ನರಾಂತಕನ ಸಂಹಾರ

ಏವಂ ವಿಲಪಮಾನಸ್ಯ ರಾವಣಸ್ಯ ದುರಾತ್ಮನಃ ।
ಶ್ರುತ್ವಾ ಶೋಕಾಭಿಭೂತಸ್ಯ ತ್ರಿಶಿರಾ ವಾಕ್ಯಮಬ್ರವೀತ್ ॥೧॥

ದುರಾತ್ಮನಾದ ರಾವಣನು ಶೋಕಾಭಿಭೂತನಾಗಿ ಅಳುತ್ತಾ ಹೇಳುತ್ತಿರುವ ಮಾತುಗಳನ್ನು ಕೇಳಿ ತ್ರಿಶಿರಸನು ಹೇಳಿದನು :

"ತಂದೆಯೇ! ನಮ್ಮ ಚಿಕ್ಕತಂದೆಯಾದ ಕುಂಭಕರ್ಣನು ಮಹಾವೀರ್ಯವಂತನಾಗಿದ್ದರೂ ನೀನು ಹೇಳಿದಂತೆಯೇ ಯುದ್ಧದಲ್ಲಿ ಹತನಾದನು. ಆದರೆ ಸತ್ಪುರುಷರಾದವರು ನಿನ್ನಂತೆ ಅದಕ್ಕಾಗಿ ದುಃಖಪಡುವುದಿಲ್ಲ. ನಿಶ್ಚಯವಾಗಿ ಮೂರು ಲೋಕಗಳನ್ನಾದರೂ ಎದುರಿಸಿ ನಿಲ್ಲಲು ನೀನೊಬ್ಬನೇ ಸಮರ್ಥನಾಗಿರುವೆ. ಹೀಗಿರುವಾಗ ಸಾಮಾನ್ಯಮನುಷ್ಯನಂತೆ ನಿನ್ನ ವಿಷಯದಲ್ಲಿ ಏಕೆ ಹೀಗೆ ಶೋಕಪಡುತ್ತಿರುವೆ? ನಿನ್ನ ಬಳಿಯಲ್ಲಿ ಬ್ರಹ್ಮನಿಂದ ಕೊಡಲ್ಪಟ್ಟಿರುವ ಶಕ್ತ್ಯಾಯುಧ, ಕವಚ, ಧನುಸ್ಸು ಮತ್ತು ಬಾಣಗಳಿವೆ. ಮೇಘದ ಗರ್ಜನೆಗೆ ಸಮಾನವಾಗಿ ಶಬ್ದಮಾಡುವ ಸಾವಿರ ಕತ್ತೆಗಳಿಂದ ಸಜ್ಜಾಗಿರುವ ಮಹಾರಥವೂ ನಿನ್ನಲ್ಲಿದೆ. ನೀನು ಹಲವಾರು ಬಾರಿ ಶಸ್ತ್ರಗಳ ಪ್ರಯೋಗದಿಂದ ದೇವ-ದಾನವರನ್ನೂ ಪರಾಜಯಗೊಳಿಸಿರುವೆ. ಸರ್ವಾಯುಧಸಂಪನ್ನನಾಗಿರುವ ನೀನು ರಾಘವನನ್ನು ದಂಡಿಸಲು ಸಮರ್ಥನಾಗಿರುವೆ. ಮಹಾರಾಜ! ನೀನಿಲ್ಲಿಯೇ ಇರು. ನಾನು ಯುದ್ಧಕ್ಕೆ ಹೋಗುತ್ತೇನೆ. ಗರುಡನು ಸರ್ಪಗಳನ್ನು ಸಂಹರಿಸುವಂತೆ–ನಾನು ನಿನ್ನೆಲ್ಲ ಶತ್ರು ಗಳನ್ನೂ ಸಂಹರಿಸುತ್ತೇನೆ. ಇಂದ್ರನು ಶಂಬರನನ್ನೂ, ವಿಷ್ಣುವು ನರಕಾಸುರನನ್ನೂ* ಸಂಹರಿಸಿದಂತೆ–ನನ್ನಿಂದ ಸಂಹರಿಸಲ್ಪಡುವ ಆ ರಾಮನು ರಣ ಭೂಮಿಯಲ್ಲಿ ಮಲಗುತ್ತಾನೆ."

ತ್ರಿಶಿರಸನ ಆ ಮಾತನ್ನು ಕೇಳಿ ರಾಕ್ಷಸರ ಅಧಿಪತಿಯಾದ ರಾವಣನು

---

* ನರಕೋ ವಿಷ್ಣುನಾ ಯಥಾ– ಇವನು ಭೂಮಿಪುತ್ರನಾದ ನರಕಾಸುರನಲ್ಲ. ವಿಪ್ರಚಿತ್ತಿ ಎಂಬ ದಾನವನಿಗೆ ಸಿಂಹಿಕೆಯಲ್ಲಿ ಹುಟ್ಟಿದ ಮಕ್ಕಳಲ್ಲಿ ನರಕನೂ ಒಬ್ಬನು.

ಕಾಲಪ್ರೇರಿತನಾಗಿ ತನಗೆ ಪುನರ್ಜನ್ಮವೇ ಬಂತೆಂದು ಭಾವಿಸಿಕೊಂಡನು. ತ್ರಿಶಿರಸನ ಮಾತನ್ನು ಕೇಳಿ ದೇವಾಂತಕ-ನರಾಂತಕರೂ ತೇಜಸ್ವಿಯಾದ ಅತಿ ಕಾಯನೂ ಯುದ್ಧೋತ್ಸಾಹಿಗಳಾದರು. ರಾವಣನ ಮಕ್ಕಳಾದ, ಇಂದ್ರಸದೃಶ ಪರಾಕ್ರಮಿಗಳಾದ, ವೀರರಾದ ದೇವಾಂತಕನೇ ಮೊದಲಾದ ರಾಕ್ಷಸಶ್ರೇಷ್ಠರು ನಾಮುಂದು-ತಾಮುಂದು ಎಂದು ಗರ್ಜಿಸುತ್ತಾ ಯುದ್ಧಸನ್ನದ್ಧರಾದರು.

ಅವರೆಲ್ಲರೂ ಆಕಾಶದಲ್ಲಿ ಸಂಚರಿಸುವವರಾಗಿದ್ದರು. ಮಾಯಾ ಯುದ್ಧದಲ್ಲಿ ವಿಶಾರದರಾಗಿದ್ದರು. ದೇವತೆಗಳ ದರ್ಪವನ್ನು ಮುರಿದವರಾಗಿ ದ್ದರು. ಯುದ್ಧದುರ್ಮದರಾಗಿದ್ದರು. ಎಲ್ಲರೂ ಉತ್ತಮಸೈನ್ಯದಿಂದ ಸಂಪನ್ನ ರಾಗಿದ್ದರು. ಅವರೆಲ್ಲರ ಕೀರ್ತಿಯು ಮೂರು ಲೋಕಗಳಲ್ಲಿಯೂ ಹರಡಿ ದ್ದಿತು. ದೇವ-ಗಂಧರ್ವರೊಡನೆಯೂ ಕಿನ್ನರ-ಮಹಾಸರ್ಪಗಳೊಡನೆಯೂ ಯುದ್ಧಕ್ಕೆ ಹೋದರೆಂದರೆ 'ಅವರು ಪರಾಜಿತರಾಗಿ ಹಿಂದಿರುಗಿದರು'—ಎಂಬ ಮಾತೇ ಕೇಳಿಬರುತ್ತಿರಲಿಲ್ಲ. ಎಲ್ಲರೂ ಎಲ್ಲ ಅಸ್ತ್ರಗಳನ್ನೂ ತಿಳಿದವರಾಗಿದ್ದರು. ಯುದ್ಧವಿಶಾರದರಾಗಿದ್ದರು. ಉತ್ಕೃಷ್ಟವಾದ ಶಾಸ್ತ್ರಜ್ಞಾನವನ್ನು ಪಡೆದಿದ್ದರು. ತಪಸ್ಸುಮಾಡಿ ವರಗಳನ್ನು ಪಡೆದಿದ್ದರು. ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸನ್ನು ಹೊಂದಿದ್ದ, ಶತ್ರುಸೈನ್ಯದ ವಿಜಯಶ್ರೀಯನ್ನು ಧ್ವಂಸಮಾಡುವ ಸಾಮರ್ಥ್ಯವನ್ನು ಹೊಂದಿದ್ದ, ರಾಕ್ಷಸಶ್ರೇಷ್ಠರಿಂದ ಪರಿವೃತನಾಗಿದ್ದ ರಾವಣರಾಜನು—ಮಹಾ-ಮಹಾದಾನವರ ದರ್ಪವನ್ನು ಮುರಿಯುವ ಸಾಮರ್ಥ್ಯವನ್ನು ಹೊಂದಿದ್ದ ದೇವತೆಗಳಿಂದ ಪರಿವೃತನಾದ ಇಂದ್ರನಂತೆಯೇ ವಿರಾಜಿಸುತ್ತಿದ್ದನು. ರಾವಣನು ತನ್ನ ಮಕ್ಕಳನ್ನು ಯುದ್ಧೋಚಿತವಾದ ಭೂಷಣಗಳಿಂದ ಅಲಂಕರಿಸಿ ಆಲಿಂಗಿಸಿಕೊಂಡು ಪ್ರಶಸ್ತವಾದ ವಚನಗಳಿಂದ ಆಶೀರ್ವದಿಸಿ ಯುದ್ಧಕ್ಕೆ ಕಳುಹಿಸಿಕೊಟ್ಟನು.

ರಾವಣನು ಅನುಜರಾದ ಯುದ್ಧೋನ್ಮತ್ತ (ಮಹಾಪಾರ್ಶ್ವ), ಮತ್ತು (ಮಹೋದರ)ರನ್ನು ತನ್ನ ಮಕ್ಕಳ ರಕ್ಷಣೆಗಾಗಿ ಕಳುಹಿಸಿಕೊಟ್ಟನು. ಮಹಾಕಾಯರಾದ ಆ ರಾಕ್ಷಸರು ಮಹಾತ್ಮನಾದ ಲೋಕರಾವಣನಾದ ರಾವಣನಿಗೆ ಅಭಿವಾದನ—ಪ್ರದಕ್ಷಿಣೆಗಳನ್ನು ಮಾಡಿ ರಣಭೂಮಿಗೆ ಹೊರ ಟರು. ಮಹಾಬಲಿಷ್ಠರಾದ ಯುದ್ಧಾಕಾಂಕ್ಷಿಗಳಾದ ತ್ರಿಶಿರಸ, ಅತಿಕಾಯ, ದೇವಾಂತಕ, ನರಾಂತಕ, ಮಹೋದರ, ಮಹಾಪಾರ್ಶ್ವರೆಂಬ ಆರು ಮಂದಿ

ರಾಕ್ಷಸಶ್ರೇಷ್ಠರೂ ಸರ್ವಪ್ರಕಾರವಾದ ಮಂಗಳಕರವಾದ ಔಷಧಿಗಳನ್ನೂ, ಗಂಧಗಳನ್ನೂ ಸ್ಪರ್ಶಿಸಿ ಕಾಲಚೋದಿತರಾಗಿ ಯುದ್ಧಕ್ಕೆ ಹೊರಟರು.

ಬಳಿಕ ಮಹೋದರನು ನೀಲಮೇಘಸದೃಶವಾಗಿದ್ದ, ಐರಾವತದ ಕುಲದಲ್ಲಿ ಹುಟ್ಟಿದ್ದ ಸುದರ್ಶನವೆಂಬ ಆನೆಯ ಮೇಲೆ ಕುಳಿತು ಹೊರಟನು. ಸಮಸ್ತವಾದ ಆಯುಧಗಳಿಂದಲೂ ಸಂಪನ್ನನಾಗಿದ್ದ, ಬತ್ತಳಿಕೆಯಿಂದ ಸಮಲಂಕೃತನಾಗಿದ್ದ, ಆನೆಯ ಮೇಲೆ ಕುಳಿತಿದ್ದ ಮಹೋದರನು–ಅಸ್ತಾಚಲದ ಶಿಖರದ ಮೇಲೆ ವಿರಾಜಿಸುವ ಸೂರ್ಯನಂತೆಯೇ ರಾರಾಜಿಸುತ್ತಿದ್ದನು. ರಾವಣನ ಮಗನಾದ ತ್ರಿಶಿರಸನು ಉತ್ತಮವಾದ ಕುದುರೆಗಳಿಂದ ಯುಕ್ತವಾಗಿದ್ದ, ಸಮಸ್ತವಾದ ಆಯುಧಗಳಿಂದಲೂ ಸಂಪನ್ನವಾಗಿದ್ದ, ಶ್ರೇಷ್ಠವಾದ ರಥದಲ್ಲಿ ಕುಳಿತು ಯುದ್ಧಭೂಮಿಗೆ ತೆರಳಿದನು. ಬಿಲ್ಲನ್ನು ಹಿಡಿದು ರಥದಲ್ಲಿ ಕುಳಿತಿದ್ದ ತ್ರಿಶಿರಸನು ಮಿಂಚಿನಿಂದಲೂ, ಜ್ವಾಲೆಯಿಂದ ಕೂಡಿದ ಉಲ್ಕೆಯಿಂದಲೂ, ಕಾಮನಬಿಲ್ಲಿನಿಂದಲೂ ಕೂಡಿರುವ ಮೇಘದಂತೆಯೇ ಪ್ರಕಾಶಿಸುತ್ತಿದ್ದನು. ಪರ್ವತರಾಜನಾದ ಹಿಮವಂತನು ಸುವರ್ಣಮಯವಾದ ಮೂರು ಶಿಖರಗಳಿಂದ ಪ್ರಕಾಶಿಸುವಂತೆ–ತ್ರಿಶಿರಸನು ಮೂರು ಕಿರೀಟಗಳಿಂದ ವಿಭೂಷಿತನಾಗಿ ಶ್ರೇಷ್ಠವಾದ ರಥದಲ್ಲಿ ಪ್ರಕಾಶಿಸಿದನು. ಮಹಾತೇಜಸ್ವಿಯಾದ, ಸರ್ವಧನುರ್ಧಾರಿಗಳಲ್ಲಿಯೂ ಶ್ರೇಷ್ಠನಾದ, ರಾಕ್ಷಸೇಂದ್ರನ ಮಗನಾದ ಅತಿಕಾಯನೂ ಶ್ರೇಷ್ಠವಾದ ರಥವನ್ನೇರಿ ಕುಳಿತನು. ಅತಿಕಾಯನ ರಥವು ಸುಂದರವಾದ ಚಕ್ರಗಳಿಂದಲೂ, ಅಚ್ಚುಮಣೆಯಿಂದಲೂ, ಉತ್ತಮ ವಾದ ಕುದುರೆಗಳಿಂದಲೂ ಯುಕ್ತವಾಗಿದ್ದಿತು. ತೋರುಮರದಿಂದಲೂ (ನೊಗದ ಕೆಳಗಿನ ಮರ) ಸುಂದರವಾದ ಮೂಕಿಯಿಂದಲೂ ಕೂಡಿದ್ದಿತು. ಆ ರಥದಲ್ಲಿ ಬತ್ತಳಿಕೆ, ಬಾಣ, ಧನುಸ್ಸು, ಪ್ರಾಸ, ಕತ್ತಿ, ಪರಿಘ–ಇವೇ ಮುಂತಾದ ಆಯುಧಗಳಿದ್ದು ಅದು ಪ್ರಕಾಶಮಾನವಾಗಿ ಕಾಣುತ್ತಿದ್ದಿತು. ಅತಿಕಾಯನು ಸುವರ್ಣನಿರ್ಮಿತವಾದ, ವಿಚಿತ್ರವಾದ ಮತ್ತು ಪ್ರದೀಪ್ತವಾದ ಕಿರೀಟದಿಂದಲೂ ಮತ್ತು ಇತರ ಆಭರಣಗಳಿಂದಲೂ ಭೂಷಿತನಾಗಿ–ಮೇರುಪರ್ವತವು ತನ್ನ ಪ್ರಭೆಯಿಂದಲೇ ಎಲ್ಲ ವಸ್ತುಗಳನ್ನೂ ಬೆಳಗುವಂತೆ–ಪ್ರಕಾಶಿಸುತ್ತಿದ್ದನು. ಮಹಾಬಲನಾದ ಅತಿಕಾಯನು ರಥದಲ್ಲಿ ಕುಳಿತು ರಾಕ್ಷಸ

ಸೈನಿಕರಿಂದ ಪರಿವೃತನಾಗಿ–ವಜ್ರಪಾಣಿಯಾದ ಇಂದ್ರನು ದೇವತೆಗಳಿಂದ ಪರಿವೃತನಾಗಿ ಪ್ರಕಾಶಿಸುವಂತೆ–ಪ್ರಕಾಶಿಸುತ್ತಿದ್ದನು.

ರಾವಣನ ಮತ್ತೊಬ್ಬ ಮಗನಾದ ನರಾಂತಕನು ಇಂದ್ರನ ಉಚ್ಚೈಃಶ್ರವಸ್ಸಿಗೆ ಸಮಾನವಾಗಿದ್ದ, ಬಿಳಿಯ ಬಣ್ಣದಿಂದ ಕೂಡಿದ್ದ, ಸುವರ್ಣಭೂಷಿತವಾದ, ದೊಡ್ಡದಾದ ದೇಹವುಳ್ಳ, ಮನೋವೇಗಕ್ಕೆ ಸಮಾನವಾದ ವೇಗವುಳ್ಳ ಕುದುರೆಯ ಮೇಲೆ ಕುಳಿತು ಯುದ್ಧಕ್ಕೆ ಹೊರಟನು. ಶಕ್ತ್ಯಾಯುಧವನ್ನು ಧರಿಸಿ ನವಿಲಿನ ಮೇಲೆ ಕುಳಿತ ತೇಜಸ್ವಿಯಾದ ಗುಹನಂತೆ–ಉಲ್ಕಾರೂಪವಾದ ಪ್ರಾಸವನ್ನು ಹಿಡಿದು ಕುದುರೆಯ ಮೇಲೆ ಕುಳಿತಿದ್ದ ನರಾಂತಕನು ಪ್ರಕಾಶಿಸಿದನು. ಸಮುದ್ರಮಂಥನದ ಸಮಯದಲ್ಲಿ ಮಂದರಪರ್ವತವನ್ನು ಎರಡು ಕೈಗಳಿಂದಲೂ ಎತ್ತಿಹಿಡಿದಿದ್ದ ಮಹಾವಿಷ್ಣುವಿನಂತೆ–ದೇವಾಂತಕನು ಸುವರ್ಣಭೂಷಿತವಾದ ಪರಿಘಾಯುಧವನ್ನು ಹಿಡಿದು ಪ್ರಕಾಶಿಸುತ್ತಿದ್ದನು. ಮಹಾತೇಜಸ್ವಿಯಾದ ವೀರ್ಯವಂತನಾದ ಮಹಾಪಾರ್ಶ್ವನು ಗದೆಯನ್ನು ಹಿಡಿದು-ಯುದ್ಧಸಮಯದಲ್ಲಿ ಗದೆಯನ್ನು ಹಿಡಿದು ನಿಲ್ಲುವ ಕುಬೇರನಂತೆಯೇ–ಪ್ರಕಾಶಿಸಿದನು. ಅಮರಾವತಿಯಿಂದ ಹೊರಟ ದೇವತೆಗಳಂತೆ ಲಂಕಾಪಟ್ಟಣದಿಂದ ಮಹಾತ್ಮರಾದ ರಾಕ್ಷಸರಾಜಕುಮಾರರು ಹೊರಟರು. ಅವರ ಹಿಂದೆ ಅಪಾರಸಂಖ್ಯೆಯಲ್ಲಿ ಶ್ರೇಷ್ಠವಾದ ಆಯುಧಗಳನ್ನು ಧರಿಸಿದ್ದ ರಾಕ್ಷಸಸೈನಿಕರು ಆನೆ-ಕುದುರೆಗಳ ಮೇಲೂ, ಮೇಘಗಳಂತೆ ಶಬ್ದಮಾಡುತ್ತಿದ್ದ ರಥಗಳಲ್ಲಿಯೂ ಕುಳಿತು ಯುದ್ಧಕ್ಕೆ ಹೊರಟರು.

ಸೂರ್ಯನಂತೆ ತೇಜಸ್ವಿಗಳಾಗಿದ್ದ ಮಹಾತ್ಮರಾದ ರಾಕ್ಷಸರಾಜಕುಮಾರರು ಕಿರೀಟಗಳನ್ನು ಧರಿಸಿ ಉತ್ತಮಶೋಭಾಸಂಪನ್ನರಾಗಿ ಆಕಾಶದಲ್ಲಿ ಬೆಳಗುವ ಗ್ರಹಗಳಂತೆಯೇ ಪ್ರಕಾಶಿಸುತ್ತಿದ್ದರು. ಅವರು ಹಿಡಿದಿದ್ದ, ಬಿಳುಪಾಗಿ ಕಾಣುತ್ತಿದ್ದ ಶಸ್ತ್ರಗಳ ಸಾಲು ಶರತ್ಕಾಲದ ಮೇಘಗಳ ಸಾಲಿನಂತೆಯೂ ಮತ್ತು ಹಂಸಗಳ ಸಾಲಿನಂತೆಯೂ ಕಾಣುತ್ತಿದ್ದಿತು. ಯುದ್ಧಾರ್ಥಿಗಳಾಗಿದ್ದ ಆ ರಾಕ್ಷಸವೀರರು 'ಶತ್ರುಗಳ ಪರಾಜಯವಾದರೂ ಆಗಬೇಕು ಅಥವಾ ನಮಗೆ ಮರಣವಾದರೂ ಸಂಭವಿಸಬೇಕು'–ಎಂಬ ದೃಢನಿರ್ಧಾರ'ದಿಂದ ರಣರಂಗಕ್ಕೆ ಹೋಗುತ್ತಿದ್ದರು. ಯುದ್ಧದುರ್ಮದರಾಗಿದ್ದ, ಮಹಾತ್ಮರಾಗಿದ್ದ ಆ ನಿಶಾಚರಸೈನಿಕರು ಗರ್ಜಿಸುತ್ತಿದ್ದರು. ಸಿಂಹನಾದಗಳನ್ನೂ ಮಾಡು

ತ್ತಿದ್ದರು. ಬಾಣಗಳನ್ನು ಬತ್ತಳಿಕೆಗಳಿಂದ ತೆಗೆದು ಶತ್ರುಗಳ ಮೇಲೆ ಬಿಡು ತ್ತಿದ್ದರು. ಅವರ ಗರ್ಜನೆಗಳಿಂದಲೂ, ಚಪ್ಪಾಳೆಗಳಿಂದಲೂ ಭೂಮಿಯೇ ಕಂಪಿಸುವುದೋ ಎಂಬಂತೆಯೂ, ಆಕಾಶವೇ ಸೀಳಿಹೋಗುವುದೋ ಎಂಬಂತೆಯೂ ಕಾಣುತ್ತಿದ್ದಿತು. ಮಹಾಬಲಿಷ್ಠರಾದ ರಾಕ್ಷಸಶಿರೋಮಣಿಗಳು ಪ್ರಸನ್ನಮನಸ್ಕರಾಗಿ ಲಂಕಾಪಟ್ಟಣದಿಂದ ಹೊರಬಂದು ಪರ್ವತಶಿಖರ ಗಳನ್ನೂ ವೃಕ್ಷಗಳನ್ನೂ ಹಿಡಿದು ಯುದ್ಧಸನ್ನದ್ಧರಾಗಿ ನಿಂತಿದ್ದ ವಾನರಸೈನಿಕರನ್ನು ನೋಡಿದರು.

ಅಂತೆಯೇ ಕಪಿಸೈನಿಕರು ಕೂಡ ಆನೆ-ಕುದುರೆ-ರಥಗಳಿಂದ ಸಮಾ ಕುಲವಾಗಿದ್ದ, ನೂರಾರು ಗಂಟೆಗಳಿಂದ ನಿನಾದಿತವಾಗಿದ್ದ, ಕಪ್ಪುಮೋಡ ದಂತಿದ್ದ ಆಯುಧಗಳನ್ನೆತ್ತಿಕೊಂಡು ನಿಂತಿದ್ದ ರಾಕ್ಷಸಸೈನ್ಯವನ್ನು ನೋಡಿದರು. ಆ ಯುದ್ಧಭೂಮಿಯು ಪ್ರದೀಪ್ತವಾದ ಅಗ್ನಿಯ ಮತ್ತು ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುತ್ತಿದ್ದ ರಾಕ್ಷಸರಿಂದ ಎಲ್ಲ ಕಡೆಗಳಲ್ಲಿಯೂ ವ್ಯಾಪ್ತವಾಗಿದ್ದಿತು. ಅಂತಹ ಮಹಾರಾಕ್ಷಸರ ಸೈನ್ಯವು ಬರುತ್ತಿರುವುದನ್ನು ನೋಡಿ ವಾನರರು ಪ್ರಹಾರಕ್ಕೆ ಯೋಗ್ಯವಾದ ಲಕ್ಷ್ಯವನ್ನು ಪಡೆದವರಾಗಿ ದೊಡ್ಡ-ದೊಡ್ಡ ಬಂಡೆಗಳನ್ನೆತ್ತಿಕೊಂಡು ಬಾರಿ-ಬಾರಿಗೂ ಗರ್ಜನೆ ಮಾಡುತ್ತಿದ್ದರು. ಅದಕ್ಕೆ ಪ್ರತಿಯಾಗಿ ರಾಕ್ಷಸರು ಮಾಡುತ್ತಿದ್ದ ಗರ್ಜನೆಗಳನ್ನು ಸಹಿಸಿಕೊಳ್ಳಲಾರದೇ ವಾನರರು ಪುನಃ ಸಿಂಹನಾದಗಳನ್ನು ಮಾಡುತ್ತಿದ್ದರು. ಪರಮಸಂತುಷ್ಟರಾಗಿ ಉಚ್ಚಸ್ವರದಲ್ಲಿ ಮಾಡುತ್ತಿದ್ದ ವಾನರ ದಳಪತಿಗಳ ಭಯಂಕರವಾದ ಗರ್ಜನೆಗಳನ್ನು ಕೇಳಿ ಸಹಿಸಿಕೊಳ್ಳಲಾರದೇ ಮಹಾಬಲರಾದ ರಾಕ್ಷಸರು ಅದಕ್ಕಿಂತಲೂ ಉಚ್ಚತರದ ಸ್ವರದಿಂದ ಭಯಂಕರವಾಗಿ ಸಿಂಹನಾದಗಳನ್ನು ಮಾಡಿದರು.

ಬಂಡೆಗಳನ್ನೆತ್ತಿಕೊಂಡಿದ್ದ ವಾನರರ ದಳಪತಿಗಳು ಭಯಂಕರವಾಗಿದ್ದ ಆ ರಾಕ್ಷಸಸೈನ್ಯವನ್ನು ಹೊಕ್ಕು ಶಿಖರಗಳಿಂದ ಕೂಡಿದ ಪರ್ವತಗಳಂತೆ ರಣಾಂಗಣದಲ್ಲಿ ಸಂಚರಿಸತೊಡಗಿದರು. ರಾಕ್ಷಸರ ವಿಷಯದಲ್ಲಿ ಅತ್ಯಂತ ಕ್ರುದ್ಧರಾಗಿದ್ದ, ವೃಕ್ಷಗಳನ್ನೂ ಬಂಡೆಗಳನ್ನೂ ಆಯುಧರೂಪದಲ್ಲಿ ಹಿಡಿದಿದ್ದ ವಾನರಸೈನಿಕರಲ್ಲಿ ಕೆಲವರು ಆಕಾಶದಲ್ಲಿಯೂ–ಕೆಲವರು ಭೂಮಿಯಲ್ಲಿಯೂ ಸಂಚರಿಸತೊಡಗಿದರು. ವಾನರ-ರಾಕ್ಷಸರಿಂದ ಸಮಾಕುಲವಾಗಿದ್ದ ಆ ರಣರಂಗ

ದಲ್ಲಿ ಪರಸ್ಪರವಾಗಿ ಭಯಂಕರವಾದ ಯುದ್ಧವು ಪ್ರಾರಂಭವಾಯಿತು. ರಾಕ್ಷಸಸೈನಿಕರು ವಾನರಸೈನಿಕರನ್ನು ಬಾಣಗಳ ಪ್ರವಾಹದಿಂದ ಮುಂದೆ ಬರದಂತೆ ತಡೆಯುತ್ತಿದ್ದರು. ಭಯಂಕರಪರಾಕ್ರಮರಾದ ವಾನರಸೈನಿಕರು ವೃಕ್ಷ-ಶಿಲಾ-ಶೈಲಗಳ ಮಳೆಯನ್ನೇ ರಾಕ್ಷಸರ ಮೇಲೆ ಸುರಿಸುತ್ತಿದ್ದರು. ರಾಕ್ಷಸ-ವಾನರರು ಪುನಃ-ಪುನಃ ಸಿಂಹನಾದಗಳನ್ನು ಮಾಡುತ್ತಿದ್ದರು. ಕ್ರುದ್ಧರಾಗಿದ್ದ ವಾನರಸೈನಿಕರು ಬಂಡೆಗಳಿಂದಲೂ ವೃಕ್ಷಗಳಿಂದಲೂ ಕವಚ-ಆಭರಣಗಳಿಂದ ಅಲಂಕೃತರಾಗಿದ್ದ ರಾಕ್ಷಸಸೈನಿಕರನ್ನು ನುಚ್ಚುನೂರುಮಾಡುತ್ತಿದ್ದರು.

ರಥಗಳಲ್ಲಿರುತ್ತಿದ್ದ ಮತ್ತು ಆನೆ-ಕುದುರೆಗಳ ಮೇಲಿರುತ್ತಿದ್ದ ರಾಕ್ಷಸರನ್ನು ಕಪಿಸೈನಿಕರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾರುತ್ತಾ ಧ್ವಂಸಮಾಡುತ್ತಿದ್ದರು. ಹಲವಾರು ರಾಕ್ಷಸಶ್ರೇಷ್ಠರು ವಾನರಸೈನಿಕರು ಸುರಿಸುತ್ತಿದ್ದ ವೃಕ್ಷಗಳಿಂದಲೂ ಬಂಡೆಗಳಿಂದಲೂ ಮುಚ್ಚಿಹೋದರು. ವಾನರರ ಮುಷ್ಟಿಪ್ರಹಾರಗಳಿಂದ ಕೆಲವರು ರಾಕ್ಷಸರ ಕಣ್ಣುಗುಡ್ಡೆಗಳು ಹೊರಬಂದಿದ್ದುವು. ಶಿಲಾ-ಶೈಲ-ವೃಕ್ಷಗಳ ಪ್ರಹಾರಗಳನ್ನು ತಿಂದ ಕೆಲವರು ಪಲಾಯನ ಮಾಡುತ್ತಿದ್ದರು. ಕೆಲವರು ತತ್ತರಿಸಿ ಕೆಳಗೆ ಬೀಳುತ್ತಿದ್ದರು. ಕೆಲವರು ಕೂಗಿಕೊಳ್ಳುತ್ತಿದ್ದರು. ರಾಕ್ಷಸರು ಕೂಡ ಕಪಿಶ್ರೇಷ್ಠರನ್ನು ತೀಕ್ಷ್ಣವಾದ ಬಾಣಗಳಿಂದಲೂ, ಶೂಲ-ಮುದ್ಗರ-ಖಡ್ಗಗಳಿಂದಲೂ, ಪ್ರಾಸ-ಶಕ್ತಿಗಳಿಂದಲೂ ಪ್ರಹರಿಸತೊಡಗಿದರು. ಶತ್ರುಗಳ ರಕ್ತದಿಂದ ನೆನೆದುಹೋಗಿದ್ದ ಮತ್ತು ಒಬ್ಬರು ಮತ್ತೊಬ್ಬರನ್ನು ಜಯಿಸಬೇಕೆಂಬ ಆಕಾಂಕ್ಷೆಯಿಂದ ಕೂಡಿದ್ದ ವಾನರ-ರಾಕ್ಷಸರು ಪರಸ್ಪರವಾಗಿ ಸಂಹರಿಸುತ್ತಿದ್ದರು. ಸ್ವಲ್ಪಹೊತ್ತಿನಲ್ಲಿಯೇ ವಾನರ-ರಾಕ್ಷಸರು ಪರಸ್ಪರವಾಗಿ ಪ್ರಯೋಗಿಸುತ್ತಿದ್ದ ಪರ್ವತ ಮತ್ತು ಖಡ್ಗಗಳಿಂದ ರಣರಂಗವೇ ಮುಚ್ಚಿಹೋಗಿ ರಕ್ತದಿಂದ ನೆನೆದುಹೋಯಿತು. ಯುದ್ಧಮದದಿಂದ ಉನ್ಮತ್ತರಾಗಿದ್ದ, ಪರ್ವತೋಪಮರಾಗಿದ್ದ ಆ ವಾನರಸೈನಿಕರ ಶಿಲಾ-ಶೈಲಪ್ರಹಾರಗಳಿಂದ ಜಜ್ಜಿಹೋಗಿ ಸುತ್ತಲೂ ಬಿದ್ದಿದ್ದ ರಾಕ್ಷಸರಿಂದ ರಣರಂಗವು ಪೂರ್ಣವಾಗಿದ್ದಿತು. ವಾನರರಿಂದ ಎಸೆಯಲ್ಪಟ್ಟ, ಎಸೆಯಲ್ಪಡುವುದರಲ್ಲಿದ್ದ ಶಿಲಾ-ಶೈಲಗಳು ರಾಕ್ಷಸರಿಂದ ಭಗ್ನಗೊಳಿಸಲ್ಪಟ್ಟುವು. ಅನಂತರ ಹತ್ತಿರಕ್ಕೆ ಬಂದ ರಾಕ್ಷಸರೊಡನೆ ವಾನರಸೈನಿಕರು ತಮ್ಮ ನಖ-ದಂತಗಳಿಂದಲೇ ಅದ್ಭುತವಾಗಿ ಯುದ್ಧಮಾಡತೊಡಗಿದರು.

ಆ ಸಮಯದಲ್ಲಿ ರಾಕ್ಷಸರು ವಾನರರನ್ನು ಹಿಡಿದು ಅವರನ್ನೇ ಆಯುಧ ಗಳನ್ನಾಗಿ ಮಾಡಿಕೊಂಡು ಇತರ ವಾನರರನ್ನು ಅಪ್ಪಳಿಸುತ್ತಿದ್ದರು. ಹಾಗೆಯೇ ವಾನರರೂ ರಾಕ್ಷಸರನ್ನು ಹಿಡಿದು ಅವರನ್ನೇ ಆಯುಧಗಳನ್ನಾಗಿ ಮಾಡಿ ಕೊಂಡು ರಾಕ್ಷಸರನ್ನು ಸದೆಬಡಿಯುತ್ತಿದ್ದರು. ರಾಕ್ಷಸರು ವಾನರರ ಕೈಗಳಲ್ಲಿ ರುತ್ತಿದ್ದ ಶಿಲಾ-ಶೈಲ-ವೃಕ್ಷಗಳನ್ನೇ ಕಿತ್ತುಕೊಂಡು ವಾನರರನ್ನು ಸದೆಬಡಿಯು ತ್ತಿದ್ದರು. ಅಂತೆಯೇ ವಾನರರೂ ರಾಕ್ಷಸರಿಂದ ಕತ್ತಿ, ಗಂಡುಗೊಡಲಿ ಇವೇ ಮೊದಲಾದ ಆಯುಧಗಳನ್ನು ಕಿತ್ತುಕೊಂಡು ಅವುಗಳಿಂದಲೇ ರಾಕ್ಷಸರನ್ನು ಸಂಹರಿಸುತ್ತಿದ್ದರು. ಹೀಗೆ ವಾನರ-ರಾಕ್ಷಸರು ಪರ್ವತಶಿಖರಗಳಿಂದಲೂ ಕತ್ತಿ-ಗಂಡುಗೊಡಲಿಯೇ ಮುಂತಾದ ಆಯುಧಗಳಿಂದಲೂ ಪರಸ್ಪರವಾಗಿ ಸಂಹರಿಸುತ್ತಾ ಸಿಂಹನಾದಗಳನ್ನು ಮಾಡುತ್ತಿದ್ದರು. ರಾಕ್ಷಸರ ಶರೀರ ರಕ್ಷಣೆಗೆ ಸಾಧನಭೂತವಾಗಿದ್ದ ಕವಚವೇ ಮೊದಲಾದುವುಗಳು ಛಿನ್ನ-ಭಿನ್ನ ವಾದುವು. ವೃಕ್ಷಗಳಿಂದ ಅಂಟಿನ ರಸವು ಸುರಿಯುವಂತೆ—ವಾನರರಿಂದ ಪ್ರಹ ರಿಸಲ್ಪಟ್ಟ ರಾಕ್ಷಸರ ಶರೀರಗಳಿಂದ ರಕ್ತವು ಹರಿಯತೊಡಗಿತು. ಅನಂತರ ವಾನರಸೈನಿಕರು ರಾಕ್ಷಸರು ಕುಳಿತಿದ್ದ ರಥಗಳನ್ನೇ ಎತ್ತಿಕೊಂಡು ರಥಗಳ ಮೇಲೆ ಅಪ್ಪಳಿಸಿ ಧ್ವಂಸಮಾಡುತ್ತಿದ್ದರು. ಅಂತೆಯೇ ಆನೆ-ಕುದುರೆಗಳನ್ನೆತ್ತಿ ಕೊಂಡು ಗಜಾಶ್ವಗಳನ್ನು ಪ್ರಹರಿಸುತ್ತಾ ರಾಕ್ಷಸಸೈನಿಕರನ್ನು ಧ್ವಂಸಮಾಡು ತ್ತಿದ್ದರು. ವಾನರಸೈನಿಕರು ತಮ್ಮ ಮೇಲೆ ಅನವರತವಾಗಿ ಎಸೆಯುತ್ತಿದ್ದ ಶಿಲಾ-ಶೈಲ-ವೃಕ್ಷಗಳನ್ನು ರಾಕ್ಷಸಸೈನಿಕರು ಕ್ಷುರಪ್ರಗಳಿಂದಲೂ, ಅರ್ಧಚಂದ್ರ ಗಳಿಂದಲೂ, ಭಲ್ಲಗಳಿಂದಲೂ, ನಿಶಿತವಾದ ಬಾಣಗಳಿಂದಲೂ ಧ್ವಂಸ ಮಾಡುತ್ತಿದ್ದರು. ಶಿಲಾ-ಶೈಲ-ಪರ್ವತಗಳಿಂದಲೂ, ಮರಣಹೊಂದಿದ್ದ ವಾನರ-ರಾಕ್ಷಸರಿಂದಲೂ ತುಂಬಿಹೋಗಿದ್ದ ಆ ರಣಭೂಮಿಯು ಅತ್ಯಂತದುರ್ಗಮ ವಾಗಿದ್ದಿತು. ಅಲ್ಲಿ ಓಡಾಡಲು ಕೂಡ ಸಾಧ್ಯವಾಗುತ್ತಿರಲಿಲ್ಲ. ವಾನರರೆಲ್ಲರೂ ಗರ್ವಿಷ್ಠರಾಗಿದ್ದರು. ಸಂತುಷ್ಟರಾಗಿ ಯುದ್ಧಮಾಡುತ್ತಿದ್ದರು. ಹರ್ಷೋತ್ಸಾಹ ಗಳಿಂದ ಕೂಡಿದ್ದರು. ಯುದ್ಧದಲ್ಲಿ ತೊಡಗಿದ್ದ ಅವರಿಗೆ ಭಯವೆಂಬುದೇ ಇರಲಿಲ್ಲ. ವೃಕ್ಷ-ಪರ್ವತಗಳೇ ಮೊದಲಾದ ಆಯುಧಗಳನ್ನು ಹೊಂದಿದ್ದ ಮಹಾಸತ್ತ್ವವಂತರಾಗಿದ್ದ ವಾನರಸೈನಿಕರು ರಾಕ್ಷಸರೊಡನೆ ದೊಡ್ಡ ಯುದ್ಧ ವನ್ನೇ ಮಾಡಿದರು. ಭಯಂಕರವಾಗಿ ನಡೆಯುತ್ತಿದ್ದ ಆ ಮಹಾಯುದ್ಧದಲ್ಲಿ

ವಾನರರ ಕೈಮೇಲಾಗುತ್ತಾ ಬಂದಿತು. ರಾಕ್ಷಸಸೈನಿಕರು ಮರಣಹೊಂದಿ ಕೆಳಕ್ಕೆ ಬೀಳುತ್ತಿದ್ದರು. ಆದರಿಂದ ವಾನರರು ಸಂತೋಷಭರಿತರಾದರು. ಆಕಾಶದಲ್ಲಿ ನಿಂತು ಆ ಮಹಾಸಮರವನ್ನು ನೋಡುತ್ತಿದ್ದ ದೇವತೆಗಳೂ ಮತ್ತು ಮಹರ್ಷಿಗಳೂ ಹರ್ಷಧ್ವನಿಗಳನ್ನು ಮಾಡಿದರು.

ಅನಂತರ ರಾವಣನ ಮಗನಾದ ನರಾಂತಕನು ವಾಯುವಿನಂತೆ ವೇಗ ದಿಂದ ಕೂಡಿದ್ದ ಕುದುರೆಯ ಮೇಲೆ ಕುಳಿತು ತೀಕ್ಷ್ಣವಾದ ಶಕ್ತ್ಯಾಯುಧವನ್ನು ಹಿಡಿದು–ಮೀನೊಂದು ಮಹಾಸಮುದ್ರವನ್ನು ಪ್ರವೇಶಿಸುವಂತೆ–ಭಯಂಕರವಾಗಿದ್ದ ವಾನರಸೈನ್ಯದೊಳಗೆ ನುಗ್ಗಿದನು. ಮಹಾಕಾಯನಾದ, ಇಂದ್ರಶತ್ರುವಾದ ನರಾಂತಕನು ಪ್ರದೀಪ್ತವಾಗಿದ್ದ ಪ್ರಾಸಾಯುಧದಿಂದ ಒಂದೇ ಬಾರಿಗೆ ಏಳು ನೂರು ವಾನರಸೈನಿಕರನ್ನು ಸಂಹರಿಸಿದನು. ಹೀಗೆ ಒಂದೇ ಕ್ಷಣದಲ್ಲಿ ಅವನು ಹರಿಪುಂಗವರ ಸೈನ್ಯವನ್ನು ಧ್ವಂಸಮಾಡತೊಡ ಗಿದನು. ಕುದುರೆಯ ಮೇಲೆ ಕುಳಿತಿದ್ದ, ಮಹಾಕಾಯನಾದ, ಶತ್ರುಸೈನ್ಯದ ಮಧ್ಯದಲ್ಲಿ ಸಂಚರಿಸುತ್ತಿದ್ದ ನರಾಂತಕನನ್ನು ಆಕಾಶದಲ್ಲಿದ್ದ ವಿದ್ಯಾಧರ-ಮಹರ್ಷಿಗಳೂ ವೀಕ್ಷಿಸಿದರು. ಅವನು ಹೋಗುತ್ತಿದ್ದ ಮಾರ್ಗದಲ್ಲಿ ಸತ್ತು ಹೋಗಿದ್ದ ವಾನರರು ರಾಶಿ-ರಾಶಿಯಾಗಿ ಬಿದ್ದಿದ್ದರು. ರಕ್ತ-ಮಾಂಸಗಳಿಂದ ತುಂಬಿದ್ದ ಆ ಮಾರ್ಗದಲ್ಲಿ ಕೆಸರೆದ್ದಿದ್ದಿತು. ವಾನರನಾಯಕರು ಪರಾಕ್ರಮ ದಿಂದ ಅವನನ್ನು ಎದುರಿಸಿ ನಿಲ್ಲಲು ನಿಶ್ಚಯಿಸುವಷ್ಟರಲ್ಲಿಯೇ ನರಾಂತಕನು ರಕ್ತ-ಮಾಂಸಗಳ ಕೆಸರನ್ನೂ ರಾಶಿ-ರಾಶಿಯಾಗಿ ಬಿದ್ದಿದ್ದ ವಾನರರ ಹೆಣ ಗಳನ್ನೂ ದಾಟಿಕೊಂಡು ಹೋಗಿ ಅಳಿದುಳಿದಿದ್ದ ವಾನರಸೈನಿಕರನ್ನು ಸಂಹರಿ ಸುತ್ತಲೇ ಇದ್ದನು. ಪ್ರಜ್ವಲಿಸುತ್ತಿದ್ದ ಪ್ರಾಸಾಯುಧದಿಂದ–ದಳ್ಳುರಿಯು ಕಾಡನ್ನು ಸುಟ್ಟುಹಾಕುವಂತೆ–ವಾನರಸೈನ್ಯವನ್ನು ಸುಟ್ಟುಹಾಕಿದನು. ವಾನರ ಸೈನಿಕರು ಪರ್ವತಶಿಖರಗಳನ್ನೂ ವೃಕ್ಷಗಳನ್ನೂ ಕಿತ್ತು ಯುದ್ಧಸನ್ನದ್ಧರಾಗಿ ಬರುವಷ್ಟರಲ್ಲಿಯೇ ವಾನರಸೈನಿಕರು ನರಾಂತಕನ ಪ್ರಾಸದಿಂದ ಹತರಾಗಿ ವಜ್ರಾಯುಧದಿಂದ ಕತ್ತರಿಸಲ್ಪಟ್ಟ ಪರ್ವತಗಳಂತೆ ಕೆಳಗುರುಳುತ್ತಿದ್ದರು. ವರ್ಷಾಕಾಲದಲ್ಲಿ ಚಂಡಮಾರುತವು ವೃಕ್ಷಗಳನ್ನು ಬುಡಮೇಲು ಮಾಡುತ್ತಾ ಬಿರುಸಾಗಿ ಬೀಸುವಂತೆ–ಬಲಿಷ್ಠನಾದ ನರಾಂತಕನು ಕಪಿಸೈನಿಕರನ್ನು ಧ್ವಂಸ ಮಾಡುತ್ತಾ ಸರ್ವತ್ರ ಸಂಚರಿಸುತ್ತಿದ್ದನು. ವಾನರಸೈನಿಕರಿಗೆ ನರಾಂತಕನ

ಭಯದಿಂದಾಗಿ ಓಡಿಹೋಗಲೂ ಸಾಧ್ಯವಾಗುತ್ತಿರಲಿಲ್ಲ. ಒಂದೆಡೆಯಲ್ಲಿ ನಿಲ್ಲಲೂ ಸಾಧ್ಯವಾಗುತ್ತಿರಲಿಲ್ಲ. ಅಲುಗಾಡಲು ಕೂಡ ಸಾಧ್ಯವಿರಲಿಲ್ಲ. ಹಾರುತ್ತಿದ್ದ, ಒಂದೆಡೆಯಲ್ಲಿ ನಿಂತಿದ್ದ ಮತ್ತು ಓಡಿಹೋಗುತ್ತಿದ್ದ ಎಲ್ಲ ವಾನರಸೈನಿಕರನ್ನೂ ವೀರ್ಯವಂತನಾದ ನರಾಂತಕನು ಸಂಹರಿಸುತ್ತಿದ್ದನು. ಸೂರ್ಯನ ತೇಜಸ್ಸಿನಂತೆ ತೇಜೋಮಯವಾಗಿದ್ದ ಯಮಸದೃಶವಾದ ಪ್ರಾಸಾಯುಧದಿಂದಲೇ ಕಪಿಸೈನ್ಯವು ಭಗ್ನವಾಗಿ ಭೂಮಿಯಲ್ಲಿ ಬಿದ್ದಿತು. ವಜ್ರಾಯುಧಪ್ರಹಾರಕ್ಕೆ ಸಮಾನವಾಗಿದ್ದ ಪ್ರಾಸಾಯುಧದ ಪ್ರಹಾರವನ್ನು ಸಹಿಸಿಕೊಳ್ಳಲಾಗದೇ ವಾನರಸೈನಿಕರು ಗಟ್ಟಿಯಾಗಿ ಚೀತ್ಕಾರಮಾಡತೊಡಗಿದರು. ವಜ್ರಾಯುಧದಿಂದ ಭಿನ್ನವಾಗಿ ಕೆಳಕ್ಕೆ ಬಿದ್ದ ಪರ್ವತಗಳ ಶಿಖರಗಳಂತೆ–ಪ್ರಾಸಾಯುಧ ಪ್ರಹಾರಗಳಿಂದ ಕೆಳಕ್ಕೆ ಬೀಳುತ್ತಿದ್ದ ವಾನರಸೈನಿಕರು ಪ್ರಕಾಶಿಸುತ್ತಿದ್ದರು.

ಹಿಂದೆ ಕುಂಭಕರ್ಣನಿಂದ ಗಾಯಗೊಳಿಸಲ್ಪಟ್ಟು ಮೂರ್ಛಿತರಾಗಿದ್ದ ಮಹಾಕಾಯರಾದ ವಾನರಶ್ರೇಷ್ಠರು ಆ ಸಮಯದಲ್ಲಿ ಎಚ್ಚೆತ್ತು ಸುಗ್ರೀವನ ಸೇವೆಯಲ್ಲಿ ನಿರತರಾಗಿದ್ದರು.

ನರಾಂತಕನ ಭಯದಿಂದ ವಾನರಸೈನ್ಯವು ದಿಕ್ಕಾಪಾಲಾಗಿ ಓಡಿಹೋಗುತ್ತಿರುವುದನ್ನು ಸುಗ್ರೀವನು ನೋಡಿದನು. ಅಂತೆಯೇ ಅವನು ಕುದುರೆಯ ಮೇಲೆ ಕುಳಿತು ಪ್ರಾಸಾಯುಧವನ್ನು ಹಿಡಿದುಕೊಂಡು ಬರುತ್ತಿದ್ದ ನರಾಂತಕನನ್ನೂ ನೋಡಿದನು. ಅವನನ್ನು ನೋಡಿದೊಡನೆಯೇ ಮಹಾತೇಜಸ್ವಿಯಾದ ವಾನರಾಧಿಪನಾದ ಸುಗ್ರೀವನು ಇಂದ್ರಸಮಾನ ಪರಾಕ್ರಮಿಯಾದ ವೀರನಾದ ಅಂಗದಕುಮಾರನಿಗೆ ಹೇಳಿದನು :

"ಅಂಗದ! ಕುದುರೆಯ ಮೇಲೆ ಕುಳಿತು ವಾನರಸೈನ್ಯವನ್ನು ಕ್ಷೋಭೆಗೊಳಿಸುತ್ತಿರುವ ಈ ರಾಕ್ಷಸನನ್ನು ಎದುರಿಸಿ ಇವನನ್ನು ಬಹಳ ಶೀಘ್ರವಾಗಿ ಸಂಹರಿಸು."

ಸ್ವಾಮಿಯಾದ ಸುಗ್ರೀವನ ಮಾತನ್ನು ಕೇಳಿ ಅಂಗದನು ಮೇಘಸದೃಶವಾದ ಸೈನ್ಯಸಮೂಹದಿಂದ–ಸೂರ್ಯನು ಮೇಘಗಳಿಂದ ಹೊರಬರುವಂತೆ ಹೊರಬಂದನು. ಪರ್ವತಗಳ ಸಮೂಹದಂತೆ ವಿಶಾಲಕಾಯನಾಗಿದ್ದ ವಾನರ

ಶ್ರೇಷ್ಠನಾದ ಅಂಗದನು ಸುವರ್ಣಮಯವಾದ ಭುಜಕೀರ್ತಿಗಳಿಂದ ಸಮಲಂಕೃತನಾಗಿ ಗೈರಿಕಾದಿ ಧಾತುಗಳಿಂದ ಕೂಡಿದ ಪರ್ವತದಂತೆಯೇ ಕಾಣುತ್ತಿದ್ದನು. ಇತರ ಆಯುಧಗಳಿಂದ ರಹಿತನಾಗಿ, ಉಗುರು ಮತ್ತು ಹಲ್ಲುಗಳನ್ನೇ ಆಯುಧರೂಪದಲ್ಲಿ ಹೊಂದಿದ್ದ, ಮಹಾತೇಜಸ್ವಿಯಾದ ಅಂಗದನು ನರಾಂತಕನನ್ನು ಆಕ್ರಮಿಸಿ ಹೇಳಿದನು :

"ನಿಶಾಚರನೇ! ನಿಲ್ಲು, ನಿಲ್ಲು. ಸಾಮಾನ್ಯವಾನರರನ್ನು ಸಂಹರಿಸಿ ಸಾಧಿಸುವುದಾದರೂ ಏನಿದೆ? ವಜ್ರಾಯುಧಕ್ಕೆ ಸಮಾನವಾದ ನಿನ್ನ ಪ್ರಾಸವನ್ನು ನನ್ನ ವಕ್ಷಃಸ್ಥಳದಲ್ಲಿ ಪ್ರಹರಿಸು."

ಅಂಗದನ ಮಾತನ್ನು ಕೇಳಿ ನರಾಂತಕನು ಕ್ರುದ್ಧನಾಗಿ ಅವುಡನ್ನು ಕಚ್ಚುತ್ತಾ ಸರ್ಪದಂತೆ ನಿಟ್ಟುಸಿರುಬಿಡುತ್ತಾ ವಾಲಿಯ ಮಗನಾದ ಅಂಗದನಿಗೆ ಎದುರಾಗಿ ಬಂದು ನಿಂತನು. ಪ್ರಜ್ವಲಿಸುತ್ತಿದ್ದ ಆ ಪ್ರಾಸಾಯುಧವನ್ನು ಹಿಂದಕ್ಕೂ-ಮುಂದಕ್ಕೂ ಝಳಪಿಸುತ್ತಾ ಬಹಳ ಬೇಗ ಅಂಗದನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಅಂಗದನ ವಕ್ಷಃಸ್ಥಳದಲ್ಲಿ ಬಿದ್ದ ವಜ್ರಸದೃಶವಾದ ಆ ಪ್ರಾಸಾಯುಧವು ನುಚ್ಚುನೂರಾಗಿ ಕೆಳಕ್ಕೆ ಬಿದ್ದಿತು. ಗರುಡಪಕ್ಷಿಯಿಂದ ಕತ್ತರಿಸಲ್ಪಟ್ಟ ಹಾವಿನಂತೆ ತುಂಡಾಗಿ ಬಿದ್ದಿದ್ದ ಪ್ರಾಸಾಯುಧವನ್ನು ನೋಡಿ ಅಂಗದನು ಅಂಗೈಯನ್ನು ಮೇಲಕ್ಕೆತ್ತಿ ನರಾಂತಕನ ಕುದುರೆಯ ತಲೆಯನ್ನು ಅಪ್ಪಳಿಸಿದನು. ಆ ಅಂಗೈಯಿನ ಪ್ರಹಾರದಿಂದ ಕುದುರೆಯ ತಲೆಯು ಸೀಳಿಹೋಯಿತು. ಕಾಲುಗಳು ಬಗ್ಗಿದುವು. ಕಣ್ಣುಗುಡ್ಡೆಗಳು ಹೊರಬಂದುವು. ಪರ್ವತೋಪಮವಾಗಿದ್ದ ಆ ಕುದುರೆಯು ಪ್ರಾಣತೊರೆದು ನಾಲಿಗೆಯನ್ನು ಹೊರಚಾಚಿ ಭೂಮಿಯ ಮೇಲೆ ಬಿದ್ದಿತು. ಮಹಾಪ್ರಭಾವನಾದ ನರಾಂತಕ ರಾಕ್ಷಸನು ಸತ್ತು ಕೆಳಕ್ಕೆ ಬಿದ್ದ ಕುದುರೆಯನ್ನು ನೋಡಿ ಕ್ರೋಧಮೂರ್ಛಿತ ನಾಗಿ ಮುಷ್ಟಿಯನ್ನೆತ್ತಿ ವಾಲಿಯ ಮಗನಾದ ಅಂಗದನ ತಲೆಯಲ್ಲಿ ಪ್ರಹರಿ ಸಿದನು. ಅಂಗದನ ತಲೆಯೊಡೆದು ಅದರಿಂದ ಬಿಸಿಯಾದ ರಕ್ತವು ತೀವ್ರವಾಗಿ ಸ್ರವಿಸತೊಡಗಿತು. ಆಗ ಅಂಗದನು ಕಿಡಿ-ಕಿಡಿಯಾದನು. ಮರುಕ್ಷಣದಲ್ಲಿಯೇ ಮೂರ್ಛಿತನಾದನು. ಸ್ವಲ್ಪ ಹೊತ್ತಿನಲ್ಲಿಯೇ ಎಚ್ಚರಗೊಂಡು ರಾಕ್ಷಸನ ಅದ್ಭುತಶಕ್ತಿಯನ್ನು ಕಂಡು ಅಚ್ಚರಿಗೊಂಡನು. ಬಳಿಕ ಮಹಾತ್ಮನಾದ ಅಂಗದನು ಮೃತ್ಯುವಿಗೆ ಸಮಾನವಾದ ವೇಗವನ್ನು ಹೊಂದಿದ್ದ ಪರ್ವತ

ಶಿಖರಸದೃಶವಾಗಿದ್ದ ಮುಷ್ಟಿಯನ್ನು ತಿರುಗಿಸುತ್ತಾ ನರಾಂತಕರಾಕ್ಷಸನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಅವನ ಮುಷ್ಟಿಪ್ರಹಾರದಿಂದ ನರಾಂತಕನ ವಕ್ಷಃಸ್ಥಳವು ಒಡೆದುಹೋಯಿತು. ಜ್ವಾಲೆಯ ರೂಪದಲ್ಲಿ ಕಕ್ಕುತ್ತಿದ್ದ ರಕ್ತದಿಂದ ತೋಯ್ದುಹೋದ ಶರೀರದಿಂದ ಕೂಡಿದ್ದ ನರಾಂತಕನು–ವಜ್ರಪ್ರಹಾರದಿಂದ ಭಗ್ನವಾದ ಪರ್ವತದಂತೆ ಭೂಮಿಯಲ್ಲಿ ಬಿದ್ದನು. ವಾಲಿಯ ಮಗನಾದ ಅಂಗದನು ಮಹಾವೀರ್ಯನಾದ ನರಾಂತಕನನ್ನು ಮುಷ್ಟಿಪ್ರಹಾರದಿಂದ ಸಂಹರಿಸಲಾಗಿ ಅಂತರಿಕ್ಷದಲ್ಲಿ ದೇವತೆಗಳ ಮತ್ತು ಭೂಮಿಯಲ್ಲಿ ವಾನರಸೈನಿಕರ ಹರ್ಷಧ್ವನಿಯಾಯಿತು.

ಹೀಗೆ ಅಂಗದನು ಶ್ರೀರಾಮನಿಗೆ ಅತಿಹರ್ಷದಾಯಕವಾದ ಸುದುಷ್ಕರವಾದ ಸಾಹಸಕಾರ್ಯವನ್ನು ಮಾಡಿದನು. ಅದರಿಂದ ಶ್ರೀರಾಮನಿಗೂ ಅಚ್ಚರಿಯಾಯಿತು. ಭಯಂಕರಕರ್ಮನಾದ ಅಂಗದನು ಪುನಃ ಹರ್ಷೋತ್ಸಾಹಗಳಿಂದ ಯುದ್ಧಸನ್ನದ್ಧನಾದನು.

೬೯ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೭೦ನೆಯ ಸರ್ಗ

ದೇವಾಂತಕ-ತ್ರಿಶಿರಸ-ಮಹೋದರ-ಮಹಾಪಾರ್ಶ್ವರ ಸಂಹಾರ

ನರಾನ್ತಕಂ ಹತಂ ದೃಷ್ಟ್ವಾ ಚುಕ್ರುಶುರ್ನೈರ್ಋತರ್ಷಭಾಃ ।
ದೇವಾನ್ತಕಸ್ತ್ರಿಮೂರ್ಧಾ ಚ ಪೌಲಸ್ತ್ಯಶ್ಚ ಮಹೋದರಃ ॥೧॥

ನರಾಂತಕನು ಹತನಾದುದನ್ನು ಕಂಡು ರಾಕ್ಷಸಶ್ರೇಷ್ಠನಾದ ದೇವಾಂತಕನೂ, ಪೌಲಸ್ತ್ಯಕುಲನಂದನರಾದ ತ್ರಿಶಿರಸ ಮತ್ತು ಮಹೋದರರೂ ಗಟ್ಟಿಯಾಗಿ ಆರ್ಭಟಿಸಿದರು.

ಮೇಘಸದೃಶವಾದ ಆನೆಯ ಮೇಲೆ ಕುಳಿತಿದ್ದ ವೇಗವಂತನಾದ ಮಹೋದರನು ವಾಲಿಯ ಮಗನಾದ ಮಹಾವೀರ್ಯನಾದ ಅಂಗದನನ್ನು ಬಹಳ ಶೀಘ್ರವಾಗಿ ಆಕ್ರಮಿಸಿದನು. ಸೋದರನ ವ್ಯಸನದಿಂದ ಪರಿತಪಿಸುತ್ತಿದ್ದ ಬಲಿಷ್ಠನಾದ ದೇವಾಂತಕನು ಭಯಂಕರವಾದ ಪರಿಘಾಯುಧವನ್ನೆತ್ತಿಕೊಂಡು ಅಂಗದನ ಮೇಲೆ ದಾಳಿಮಾಡಿದನು. ಶ್ರೇಷ್ಠವಾದ ಕುದುರೆಗಳಿಂದ

ಸಜ್ಜಾಗಿದ್ದ, ಸೂರ್ಯಸದೃಶವಾಗಿದ್ದ ರಥದಲ್ಲಿ ಕುಳಿತಿದ್ದ ತ್ರಿಶಿರಸನೂ ಅಂಗದನನ್ನು ಆಕ್ರಮಿಸಿದನು. ಹೀಗೆ ದೇವತೆಗಳ ದರ್ಪವನ್ನು ದಮನ ಮಾಡಿದ್ದ ಮೂವರು ರಾಕ್ಷಸಶ್ರೇಷ್ಠರಿಂದ ಮುತ್ತಿಗೆ ಹಾಕಲ್ಪಟ್ಟ ಅಂಗದನು ದೊಡ್ಡ-ದೊಡ್ಡ ರೆಂಬೆಗಳಿರುವ ಮಹಾವೃಕ್ಷವೊಂದನ್ನು ಕಿತ್ತು–ಇಂದ್ರನು ಪ್ರದೀಪ್ತವಾದ ವಜ್ರಾಯುಧದಿಂದ ರಾಕ್ಷಸರನ್ನು ಪ್ರಹರಿಸುವಂತೆ–ದೇವಾಂತಕನನ್ನು ಆ ಮಹಾವೃಕ್ಷದಿಂದ ಪ್ರಹರಿಸಿದನು. ತ್ರಿಶಿರಸನು–ದೇವಾಂತಕನ ಮೇಲೆ ಬೀಳಲಿದ್ದ ಆ ಮಹಾವೃಕ್ಷವನ್ನು ಸರ್ಪಸದೃಶವಾದ ತೀಕ್ಷ್ಣವಾದ ಬಾಣಗಳಿಂದ ಕತ್ತರಿಸಿದನು. ತಾನೆಸೆದ ವೃಕ್ಷವು ಕತ್ತರಿಸಲ್ಪಟ್ಟು ದನ್ನು ಕಂಡು ಅಂಗದನು ಮೇಲಕ್ಕೆ ಹಾರುತ್ತಾ ತ್ರಿಶಿರಸನ ಮೇಲೆ ಶಿಲಾ-ಶೈಲ-ವೃಕ್ಷಗಳ ಮಳೆಯನ್ನೇ ಸುರಿಸಿದನು. ಅವೆಲ್ಲವನ್ನೂ ಕ್ರುದ್ಧನಾಗಿದ್ದ ತ್ರಿಶಿರಸನು ನಿಶಿತವಾದ ಬಾಣಗಳಿಂದ ಕತ್ತರಿಸಿಹಾಕಿದನು. ಮಹೋದರನು ಕೂಡ ಪರಿಘಾಯುಧದ ಅಗ್ರಭಾಗದಿಂದ ಅಂಗದನೆಸೆಯುತ್ತಿದ್ದ ಆ ಎಲ್ಲ ವೃಕ್ಷಗಳನ್ನೂ ಧ್ವಂಸಮಾಡುತ್ತಿದ್ದನು. ತ್ರಿಶಿರಸನೂ ಅಂಗದನ ಮೇಲೆ ಬಾಣಗಳನ್ನು ಸುರಿಸುತ್ತಾ ಅವನನ್ನು ಆಕ್ರಮಿಸಿದನು. ಬಳಿಕ ಆನೆಯ ಮೇಲೆ ಕುಳಿತಿದ್ದ ಮಹೋದರನೂ ವಾಲಿಪುತ್ರನನ್ನು ಆಕ್ರಮಿಸಿ ವಜ್ರಾಯುಧ ಗಳಂತಿದ್ದ ತೋಮರಗಳಿಂದ ಅಂಗದನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಕ್ರುದ್ಧನೂ ವೇಗವಂತನೂ ಆಗಿದ್ದ ದೇವಾಂತಕನೂ ಅಂಗದನನ್ನು ಪರಿಘಾ ಯುಧದಿಂದ ಪ್ರಹರಿಸಿ ವೇಗಪೂರ್ವಕವಾಗಿ ಅಲ್ಲಿಂದ ಹೊರಟುಹೋದನು.

ಮೂವರು ರಾಕ್ಷಸಶ್ರೇಷ್ಠರು ಏಕಕಾಲದಲ್ಲಿ ಮುತ್ತಿಗೆ ಹಾಕಿದರೂ ಮಹಾತೇಜಸ್ವಿಯೂ ಪ್ರತಾಪವಂತನೂ ಆದ ಅಂಗದನು ವ್ಯಥೆಪಡಲಿಲ್ಲ. ಅತ್ಯಂತ ದುರ್ಜಯನಾದ ವೇಗವಂತನಾದ ಅಂಗದನು ಮಹೋದರನ ಮಹಾ ಗಜವನ್ನು ಆಕ್ರಮಿಸಿ ಅಂಗೈಯಿನಿಂದ ಅದರ ತಲೆಯನ್ನು ಅಪ್ಪಳಿಸಿದನು. ಅಂಗದನ ಆ ಪ್ರಹಾರದಿಂದ ಗಜರಾಜನ ಎರಡು ಕಣ್ಣುಗಳೂ ಕಳಚಿ ಕೆಳಕ್ಕೆ ಬಿದ್ದುವಲ್ಲದೇ ಒಡನೆಯೇ ಆ ಮಹಾಗಜವೂ ಸತ್ತುಹೋಯಿತು. ಒಡನೆಯೇ ಮಹಾಬಲನಾದ ವಾಲಿಪುತ್ರನು ಸತ್ತುಬಿದ್ದಿದ್ದ ಆನೆಯ ದಂತ ಗಳನ್ನು ಕಿತ್ತು ದೇವಾಂತಕನನ್ನು ಆಕ್ರಮಿಸಿ ದಂತದಿಂದ ಪ್ರಹರಿಸಿದನು. ತೇಜಸ್ವಿಯಾದ ದೇವಾಂತಕನು ಆ ಪ್ರಹಾರದಿಂದ ವ್ಯಾಕುಲಗೊಂಡವನಾಗಿ

ಚಂಡಮಾರುತದಿಂದ ಅಲ್ಲಾಡಿಸಲ್ಪಟ್ಟ ವೃಕ್ಷದಂತೆ ನಡುಗತೊಡಗಿದನು. ಅವನ ಶರೀರದಿಂದ ಲಾಕ್ಷಾರಸದಂತೆ ಕೆಂಪುಬಣ್ಣದಿಂದ ಕೂಡಿದ್ದ ರಕ್ತವು ಸ್ರವಿಸತೊಡಗಿತು. ಅನಂತರ ಮಹಾತೇಜಸ್ವಿಯಾದ ಬಲಿಷ್ಠನಾದ ದೇವಾಂತಕನು ಬಹಳ ಕಷ್ಟದಿಂದ ಚೇತರಿಸಿಕೊಂಡು ಪರಿಘಾಯುಧವನ್ನೆತ್ತಿಕೊಂಡು ವೇಗವಾಗಿ ಹಿಂದಕ್ಕೂ ಮುಂದಕ್ಕೂ ಆಡಿಸುತ್ತಾ ಅಂಗದನ ಮೇಲೆ ಪ್ರಯೋಗಿಸಿದನು. ಹಾಗೆ ಪರಿಘಾಯುಧದಿಂದ ಪ್ರಹರಿಸಲ್ಪಟ್ಟ ವಾಲಿಯ ಮಗನಾದ ಅಂಗದನು ಮಂಡಿಯೂರಿ ಭೂಮಿಯಲ್ಲಿ ಬಿದ್ದು ಮರುಕ್ಷಣದಲ್ಲಿಯೇ ಆಕಾಶಕ್ಕೆ ಹಾರಿದನು. ಹಾಗೆ ಹಾರಿಹೋಗುತ್ತಿದ್ದ ಅಂಗದನನ್ನು ತ್ರಿಶಿರಸನು ನೇರವಾಗಿ ಹೋಗುವ ಮೂರು ಬಾಣಗಳಿಂದ ಅವನ ಹಣೆಯಲ್ಲಿ ಪ್ರಹರಿಸಿದನು.

ಅಂಗದನನ್ನು ಮೂವರು ರಾಕ್ಷಸರೂ ಆಕ್ರಮಿಸಿ ಏಕಾಕಿಯಾಗಿರುವ ಅವನೊಡನೆ ಯುದ್ಧಮಾಡುತ್ತಿರುವರೆಂಬುದನ್ನು ತಿಳಿದು ಹನುಮಂತ-ನೀಲರಿಬ್ಬರೂ ಅವನ ಸಹಾಯಕ್ಕಾಗಿ ಮುಂದಾದರು. ನೀಲನು ಪರ್ವತಶಿಖರವೊಂದನ್ನು ಕಿತ್ತು ಅದನ್ನು ತ್ರಿಶಿರಸನ ತಲೆಯ ಮೇಲೆ ಹಾಕಿದನು. ಅದು ತನ್ನ ಬಳಿಗೆ ಬರುವುದರೊಳಗಾಗಿಯೇ ರಾವಣನ ಮಗನಾದ ತ್ರಿಶಿರಸನು ಆ ಪರ್ವತಶಿಖರವನ್ನು ಚೂಪಾದ ಬಾಣಗಳಿಂದ ನುಚ್ಚುನೂರು ಮಾಡಿದನು.

ನೂರಾರು ಬಾಣಗಳ ಪ್ರಹಾರಗಳಿಂದ ಆ ಪರ್ವತಶಿಖರವು ಭಿನ್ನವಾಗಿ ಹೋಯಿತು. ಅದರಲ್ಲಿದ್ದ ಬಂಡೆಗಳೆಲ್ಲವೂ ಒಡೆದು ಪುಡಿ-ಪುಡಿಯಾದುವು. ಕಿಡಿಗಳನ್ನು ಹೊರಸೂಸುತ್ತಾ ಅಗ್ನಿಜ್ವಾಲೆಗಳೊಡನೆ ಭಗ್ನವಾಗಿದ್ದ ಆ ಪರ್ವತ ಶಿಖರವು ಕೆಳಕ್ಕೆ ಬಿದ್ದಿತು. ತನ್ನ ಸಹೋದರನ (ತ್ರಿಶಿರಸನ) ಪರಾಕ್ರಮವು ಹೆಚ್ಚುತ್ತಿರುವುದನ್ನು ಕಂಡು ದೇವಾಂತಕನು ಹರ್ಷೋತ್ಸಾಹಗಳಿಂದ ಕೂಡಿದವನಾಗಿ ಪರಿಘವನ್ನು ಹಿಡಿದು ಹನುಮಂತನನ್ನು ಆಕ್ರಮಿಸಿದನು. ದೇವಾಂತಕನು ತನ್ನನ್ನೆದುರಿಸಲು ಬರುತ್ತಿರುವುದನ್ನು ನೋಡಿ ಕಪಿಕುಂಜರನಾದ ಹನುಮಂತನು ಮೇಲಕ್ಕೆ ಹಾರಿ ವಜ್ರಾಯುಧಸದೃಶವಾದ ಮುಷ್ಟಿಯಿಂದ ದೇವಾಂತಕನ ತಲೆಯಲ್ಲಿ ಪ್ರಹರಿಸಿ ಘೋರವಾದ ಗರ್ಜನೆಯಿಂದ ರಾಕ್ಷಸರೆಲ್ಲರನ್ನೂ ಭಯಗೊಳಿಸಿದನು.

ಹನುಮಂತನ ಮುಷ್ಟಿಪ್ರಹಾರದಿಂದಾಗಿ ದೇವಾಂತಕನ ತಲೆಯು

ಒಡೆದು ನುಚ್ಚುನೂರಾಯಿತು. ಅವನ ಹಲ್ಲುಗಳೂ, ಕಣ್ಣುಗಳೂ, ಉದ್ದ ವಾದ ನಾಲಿಗೆಯೂ ಹೊರಬಂದುವು. ಹೀಗೆ ರಾವಣನ ಮಗನಾದ ದೇವಾಂ ತಕನು ಪ್ರಾಣಗಳನ್ನು ತೊರೆದು ನೆಲದ ಮೇಲೆ ಬಿದ್ದನು.

ರಾಕ್ಷಸಯೋಧರಲ್ಲಿ ಮುಖ್ಯನಾದ, ಮಹಾಬಲಿಷ್ಠನಾದ, ದೇವತೆಗಳ ಶತ್ರುವಾದ ದೇವಾಂತಕನು ಹೀಗೆ ಹತನಾಗಲು ಕ್ರುದ್ಧನಾದ ತ್ರಿಶಿರಸನು ತೀಕ್ಷ್ಣವಾದ ಮತ್ತು ಭಯಂಕರವಾದ ಅಸ್ತ್ರವನ್ನು ಬಿಟ್ಟು ನೀಲನ ವಕ್ಷಃಸ್ಥಳದಲ್ಲಿ ಬಾಣಗಳ ಮಳೆಯನ್ನೇ ಸುರಿಸಿದನು.

ಸೂರ್ಯನು ಮಂದರಪರ್ವತವನ್ನೇರಿ ಬರುವಂತೆ–ಕ್ರುದ್ಧನಾಗಿದ್ದ ಮಹೋದರನು ಪರ್ವತದಂತಿದ್ದ ಮತ್ತೊಂದು ಆನೆಯ ಮೇಲೆ ಕುಳಿತು ಯುದ್ಧಕ್ಕೆ ಬಂದನು. ಕಾಮನಬಿಲ್ಲಿನಿಂದಲೂ ಮತ್ತು ಮಿಂಚಿನಿಂದಲೂ ಕೂಡಿರುವ ಮೇಘವು ಪರ್ವತದ ಮೇಲೆ ಮಳೆಗರೆಯುವಂತೆ–ಮಹೋದರನು ನೀಲನ ಮೇಲೆ ಬಾಣಗಳ ವರ್ಷವನ್ನೇ ಸುರಿಸಿದನು.

ಬಾಣಗಳ ಸಮೂಹಗಳನ್ನು ನಿರಂತರವಾಗಿ ಸುರಿಸುತ್ತಿದ್ದರಿಂದ ವಾನರಸೇನಾಪತಿಯಾದ ನೀಲನ ಅಂಗಾಂಗಗಳೆಲ್ಲವೂ ಗಾಯಗೊಂಡುವು. ಶರೀರವು ಶಿಥಿಲವಾಯಿತು. ಮಹಾಬಲನಾದ ಮಹೋದರನು ನೀಲನನ್ನು ಮೂರ್ಛೆಗೊಳಿಸಿ ಅವನ ಪರಾಕ್ರಮವನ್ನು ಕುಂಠಿತಗೊಳಿಸಿದನು. ಸ್ವಲ್ಪ ಹೊತ್ತಿನಲ್ಲಿಯೇ ಎಚ್ಚರಗೊಂಡ ನೀಲನು ವೃಕ್ಷಗಳ ಸಮೂಹಗಳಿಂದ ನಿಬಿಡ ವಾಗಿದ್ದ ಪರ್ವತವನ್ನೇ ಕಿತ್ತು ಆಕಾಶಕ್ಕೆ ಹಾರಿ ಮಹೋದರನ ತಲೆಯನ್ನು ಆ ಪರ್ವತಶಿಖರದಿಂದ ಪ್ರಹರಿಸಿದನು. ಆ ಪ್ರಹಾರದಿಂದ ಮಹೋದರನು ಗಜರಾಜನೊಡನೆ ಛಿನ್ನ-ಭಿನ್ನನಾದನು. ವಜ್ರಾಯುಧದಿಂದ ಪ್ರಹರಿಸಲ್ಪಟ್ಟ ಪರ್ವತದಂತೆ–ಪ್ರಾಣಶೂನ್ಯನಾಗಿ ಕೆಳಕ್ಕೆ ಬಿದ್ದನು.

ಚಿಕ್ಕಪ್ಪನು ಹತನಾದುದನ್ನು ಕಂಡು ತ್ರಿಶಿರಸನು ಕ್ರುದ್ಧನಾಗಿ ಧನುಸ್ಸನ್ನೆತ್ತಿಕೊಂಡು ಹನುಮಂತನನ್ನು ನಿಶಿತವಾದ ಬಾಣಗಳಿಂದ ಪ್ರಹರಿಸಿ ದನು. ಹನುಮಂತನು ಕುಪಿತನಾಗಿ ರಾಕ್ಷಸನ ಮೇಲೆ ಪರ್ವತಶಿಖರವನ್ನೆಸೆ ದನು. ತ್ರಿಶಿರಸನು ತನ್ನ ಮೇಲೆ ಬೀಳಲಿದ್ದ ಆ ಪರ್ವತಶಿಖರವನ್ನು ತೀಕ್ಷ್ಣ ವಾದ ಬಾಣಗಳಿಂದ ಚೂರು-ಚೂರುಗಳನ್ನಾಗಿ ಮಾಡಿಬಿಟ್ಟನು. ತಾನೆಸೆದ ಪರ್ವತಶಿಖರವು ವ್ಯರ್ಥವಾದುದನ್ನು ಕಂಡು ಕ್ರುದ್ಧನಾದ ಹನುಮಂತನು

ರಾವಣನ ಮಗನ ಮೇಲೆ ಮರಗಳ ಮಳೆಯನ್ನೇ ಸುರಿಸಲು ಪ್ರಾರಂಭಿಸಿದನು. ಆಕಾಶದ ಕಡೆಯಿಂದ ವೃಕ್ಷಗಳ ಮಳೆಯು ತನ್ನ ಮೇಲೆ ಬೀಳುತ್ತಿರುವುದನ್ನು ಕಂಡು ಪ್ರತಾಪವಂತನಾದ ತ್ರಿಶಿರಸನು ಆ ಎಲ್ಲ ವೃಕ್ಷಗಳನ್ನೂ ತೀಕ್ಷ್ಣವಾದ ಬಾಣಗಳಿಂದ ಕತ್ತರಿಸಿ ಗಟ್ಟಿಯಾಗಿ ಗರ್ಜಿಸಿದನು. ಅದರಿಂದ ಕ್ರುದ್ಧನಾದ ಹನುಮಂತನು ತ್ರಿಶಿರಸನ ಸಮೀಪಕ್ಕೆ ಹಾರಿ–ಸಿಂಹವು ಆನೆಯನ್ನು ಪಂಜದಿಂದ ಸೀಳಿಹಾಕುವಂತೆ–ತ್ರಿಶಿರಸನ ಕುದುರೆಯನ್ನು ಉಗುರುಗಳಿಂದಲೇ ಸೀಳಿದನು. ಯಮನಂತಿದ್ದ ತ್ರಿಶಿರಸನು ಕಾಳರಾತ್ರಿಗೆ ಸಮಾನವಾಗಿದ್ದ ಶಕ್ತ್ಯಾಯುಧದಿಂದ ವಾಯುಪುತ್ರನನ್ನು ಪ್ರಹರಿಸಿದನು. ಆಕಾಶದಲ್ಲುಂಟಾಗುವ ಉಲ್ಕಾಪಾತದಂತೆ ಯಾವ ವಿಧವಾದ ತಡೆಯೂ ಇಲ್ಲದಿದ್ದ ಆ ಶಕ್ತ್ಯಾಯುಧವನ್ನು ಹನುಮಂತನು ತನ್ನ ಕಡೆಗೆ ಬರುತ್ತಿರುವಾಗಲೇ ಹಿಡಿದು ಮುರಿದು ಹಾಕಿ ಗಟ್ಟಿಯಾಗಿ ಗರ್ಜಿಸಿದನು. ಭಯಂಕರವಾಗಿ ಕಾಣುತ್ತಿದ್ದ ಆ ಶಕ್ತ್ಯಾಯುಧವು ಹನುಮಂತನಿಂದ ಭಗ್ನವಾದುದನ್ನು ನೋಡಿ ಸಂತುಷ್ಟರಾದ ವಾನರಸೈನಿಕರು ಮೇಘಗಳಂತೆ ಗರ್ಜಿಸಿದರು. ಬಳಿಕ ತ್ರಿಶಿರಸನು ಖಡ್ಗವನ್ನು ಹಿಡಿದು ವಾನರೇಂದ್ರನಾದ ಹನುಮಂತನ ವಕ್ಷಃಸ್ಥಳದಲ್ಲಿ ನೆಟ್ಟನು. ಖಡ್ಗಪ್ರಹಾರದಿಂದ ಗಾಯಗೊಂಡ ವಾಯುಪುತ್ರನು ತ್ರಿಶಿರಸನ ವಕ್ಷಃಸ್ಥಳವನ್ನು ಅಂಗೈಯಿಂದಲೇ ಅಪ್ಪಳಿಸಿದನು. ಹೀಗೆ ಅಪ್ಪಳಿಸಿದೊಡನೆಯೇ ತ್ರಿಶಿರಸನ ಕೈಯಿಂದ ಆಯುಧವು ಜಾರಿಬಿದ್ದಿತು. ಮರುಕ್ಷಣದಲ್ಲಿಯೇ ಅವನು ಮೂರ್ಛಿತನಾಗಿ ಭೂಮಿಯಲ್ಲಿ ಬಿದ್ದನು. ಅನಂತರ ಪರ್ವತೋಪಮನಾದ ಹನುಮಂತನು ಕೆಳಗೆ ಬೀಳುತ್ತಿದ್ದ ತ್ರಿಶಿರಸನ ಕತ್ತಿಯನ್ನು ಕಿತ್ತುಕೊಂಡು ಸಮಸ್ತರಾಕ್ಷಸರನ್ನೂ ಭಯಗೊಳಿಸುತ್ತಾ ಗಟ್ಟಿಯಾಗಿ ಗರ್ಜಿಸಿದನು. ಅಂತಹ ವಿಜಯದ ಗರ್ಜನೆಯನ್ನು ಸಹಿಸಿಕೊಳ್ಳಲಾರದೇ ಮೇಲೆದ್ದು ನಿಂತ ತ್ರಿಶಿರಸನು ಹನುಮಂತನನ್ನು ಮುಷ್ಟಿಯಿಂದ ಪ್ರಹರಿಸಿದನು. ಅವನ ಆ ಮುಷ್ಟಿಪ್ರಹಾರದಿಂದ ಹನುಮಂತನು ಕುಪಿತನಾಗಿ ಕಿರೀಟದಿಂದ ಶೋಭಿತವಾಗಿದ್ದ ರಾಕ್ಷಸನ ಮಸ್ತಕವನ್ನು ಹಿಡಿದುಕೊಂಡನು. ಹಿಂದೆ ಇಂದ್ರನು ತ್ವಷ್ಟೃವಿನ ಮಗನಾದ ವಿಶ್ವರೂಪನ ಮೂರು ತಲೆಗಳನ್ನೂ ವಜ್ರಾಯುಧದಿಂದ ಕತ್ತರಿಸಿದಂತೆ–ಹನುಮಂತನು ತ್ರಿಶಿರಸನ ಮೂರು ತಲೆಗಳನ್ನೂ ಹರಿತವಾಗಿದ್ದ ತ್ರಿಶಿರಸನ ಕತ್ತಿಯಿಂದಲೇ ಕತ್ತರಿಸಿದನು.

ವಿಶಾಲವಾದ ಇಂದ್ರಿಯಗಳಿಂದ ಕೂಡಿ ಪ್ರದೀಪ್ತವಾದ ಕಣ್ಣುಗಳನ್ನು ಹೊಂದಿದ್ದ, ಇಂದ್ರನ ಶತ್ರುವಾದ ತ್ರಿಶಿರಸನ ತಲೆಗಳು ಆಕಾಶದಿಂದ ತಾರೆಗಳು ಕೆಳಗೆ ಬೀಳುವಂತೆ ಭೂಮಿಯ ಮೇಲೆ ಬಿದ್ದುವು. ಇಂದ್ರತುಲ್ಯಪರಾಕ್ರಮಿಯಾದ ಹನುಮಂತನು ಇಂದ್ರನ ಶತ್ರುವಾದ ತ್ರಿಶಿರಸನನ್ನು ಸಂಹರಿಸಿದನಂತರ ವಾನರಸೈನಿಕರು ಹರ್ಷಧ್ವನಿಗಳನ್ನು ಮಾಡಿದರು. ಭೂಮಿಯು ಕಂಪಿಸಿತು. ರಾಕ್ಷಸರು ದಿಕ್ಕಾಪಾಲಾಗಿ ಓಡಿಹೋದರು.

ತ್ರಿಶಿರಸನೂ, ಮಹೋದರನೂ, ದೇವಾಂತಕ-ನರಾಂತಕರೂ ಹತರಾದುದನ್ನು ಕಂಡು ಸಹಿಸಲಾರದೇ ಮತ್ತನಾದ, ರಾಕ್ಷಸಶ್ರೇಷ್ಠನಾದ ಮಹಾಪಾರ್ಶ್ವನು ಕ್ರುದ್ಧನಾಗಿ ಲೋಹನಿರ್ಮಿತವಾಗಿದ್ದ ಮತ್ತು ಕಾಂತಿಯಿಂದ ಕೂಡಿದ್ದ ಗದೆಯನ್ನೆತ್ತಿಕೊಂಡನು. ಆ ಗದೆಯ ಚಿನ್ನದ ತಗಡಿನಿಂದ ಹೊದ್ದಿಸಲ್ಪಟ್ಟಿದ್ದಿತು. ಮಾಂಸದಿಂದಲೂ ರಕ್ತದ ನೊರೆಯಿಂದಲೂ ಕೂಡಿದ್ದಿತು. ಶತ್ರುಗಳ ರಕ್ತದಿಂದ ರಂಜಿತವಾಗಿದ್ದಿತು. ವಿಶಾಲವಾದ ಆಕಾರದಿಂದ ವಿರಾಜಿಸುತ್ತಿದ್ದಿತು. ಅಗ್ರಭಾಗವು ತೇಜಸ್ಸಿನಿಂದ ಪ್ರಜ್ವಲಿತವಾಗಿದ್ದಿತು. ಕೆಂಪು ಹೂವಿನ ಮಾಲೆಯಿಂದ ಸಮಲಂಕೃತವಾಗಿದ್ದಿತು. ಐರಾವತ, ಮಹಾಪದ್ಮಕ, ಸಾರ್ವಭೌಮ–ಮುಂತಾದ ಅಷ್ಟದಿಗ್ಗಜಗಳಿಗೂ ಭಯವನ್ನುಂಟುಮಾಡುವುದಾಗಿದ್ದಿತು. ಕ್ರುದ್ಧನಾಗಿದ್ದ ಮತ್ತು ಮತ್ತನಾಗಿದ್ದ ರಾಕ್ಷಸಶ್ರೇಷ್ಠನು ಅಂತಹ ಭಯಂಕರವಾದ ಗದೆಯನ್ನೆತ್ತಿಕೊಂಡು ಪ್ರಳಯಕಾಲದ ಅಗ್ನಿಯಂತೆ ಪ್ರಜ್ವಲಿಸುತ್ತಾ ವಾನರಸೈನಿಕರನ್ನು ಅಟ್ಟಿಸಿಕೊಂಡು ಹೋದನು. ಆ ಸಮಯದಲ್ಲಿ ಋಷಭನೆಂಬ ಮಹಾಬಲಿಷ್ಠನಾದ ವಾನರನು ಹಾರಿ ರಾವಣಾನುಜನ ಬಳಿಗೆ ಬಂದು ಯುದ್ಧಮಾಡಲು ಅವನೆದುರಿನಲ್ಲಿ ನಿಂತನು. ಪರ್ವತೋಪಮನಾದ ವಾನರನು ತನ್ನ ಮುಂದೆ ನಿಂತಿರುವುದನ್ನು ನೋಡಿ ಕ್ರುದ್ಧನಾದ ಮಹಾಪಾರ್ಶ್ವನು ವಜ್ರಾಯುಧದಂತಿದ್ದ ಗದೆಯಿಂದ ಋಷಭನ ವಕ್ಷಃಸ್ಥಳದಲ್ಲಿ ಪ್ರಹರಿಸಿದನು. ಅದರಿಂದ ಋಷಭನ ವಕ್ಷಃಸ್ಥಳವು ಛಿನ್ನ-ಭಿನ್ನವಾಯಿತು. ವಕ್ಷಃಸ್ಥಳದಿಂದ ರಕ್ತವು ಬಹಳವಾಗಿ ಸೋರುತ್ತಿದ್ದಿತು. ಒಡನೆಯೇ ಅವನು ಓಲಾಡುತ್ತಾ ಕೆಳಗೆ ಬಿದ್ದು ಮೂರ್ಛಿತನಾದನು. ಬಹಳ ಹೊತ್ತು ಕಳೆದನಂತರ ವಾನರೇಶ್ವರನಾದ ಋಷಭನು ಎಚ್ಚರಗೊಂಡು ಕ್ರುದ್ಧನಾಗಿ ಅವುಡನ್ನು ಕಚ್ಚುತ್ತಾ ಮಹಾಪಾರ್ಶ್ವನ ಕಡೆಗೆ ನೋಡಿದನು.

ವೇಗವಂತನಾದ, ಪರ್ವತೋಪಮನಾದ, ವಾನರವೀರರ ಮುಖ್ಯಸ್ಥನಾದ ಋಷಭನು ವೇಗವಾಗಿ ಮಹಾಪಾರ್ಶ್ವನ ಸಮೀಪಕ್ಕೆ ಹೋಗಿ ಮುಷ್ಟಿಯನ್ನು ತಿರುಗಿಸುತ್ತಾ ರಾಕ್ಷಸನ ವಕ್ಷಃಸ್ಥಳದಲ್ಲಿ ಅತಿಶೀಘ್ರವಾಗಿ ಪ್ರಹರಿಸಿದನು. ರಕ್ತದಿಂದ ತೋಯ್ದುಹೋಗಿದ್ದ ಶರೀರವುಳ್ಳ ಮಹಾಪಾರ್ಶ್ವನು ಬುಡವನ್ನು ಕತ್ತರಿಸಿದ ವೃಕ್ಷದಂತೆ–ಒಡನೆಯೇ ನೆಲದ ಮೇಲೆ ಬಿದ್ದನು. ಋಷಭನು ಅವನ ಕೈಯಲ್ಲಿದ್ದ ಯಮದಂಡಸದೃಶವಾದ, ಭಯಂಕರವಾದ ಗದೆಯನ್ನು ಕಿತ್ತುಕೊಂಡು ಗಟ್ಟಿಯಾಗಿ ಗರ್ಜನೆಮಾಡಿದನು.

ದೇವಶತ್ರುವಾದ ಮಹಾಪಾರ್ಶ್ವನು ಮುಹೂರ್ತಕಾಲದವರೆಗೆ ಸತ್ತವನಂತೆಯೇ ಬಿದ್ದಿದ್ದು ಅನಂತರ ಎಚ್ಚರಗೊಂಡನು. ರಕ್ತಸಿಕ್ತನಾಗಿದ್ದ ಆ ರಾಕ್ಷಸನು ಸಂಧ್ಯಾಕಾಲದ ಮೇಘದಂತೆಯೇ ಕಾಣುತ್ತಿದ್ದನು. ಎಚ್ಚರಗೊಂಡೊಡನೆಯೇ ಮೇಲೆದ್ದು ವರುಣನ ಮಗನಾದ ಋಷಭನನ್ನು ಮುಷ್ಟಿಯಿಂದ ಗಟ್ಟಿಯಾಗಿ ಪ್ರಹರಿಸಿದನು. ಋಷಭನು ಒಡನೆಯೇ ಮೂರ್ಛಿತನಾಗಿ ಕೆಳಗೆ ಬಿದ್ದನು. ಮುಹೂರ್ತಕಾಲವು ಕಳೆದನಂತರ ಪುನಃ ಎಚ್ಚರಗೊಂಡು ಅಲ್ಲಿಂದ ಹಾರಿ ಮಹಾಪಾರ್ಶ್ವನ ಮುಂದೆ ನಿಂತು ಮಹಾಪರ್ವತದ ಕೋಡುಗಲ್ಲಿನಂತಿದ್ದ ಆ ರಾಕ್ಷಸನ ಗದೆಯನ್ನೇ ತಿರುಗಿಸುತ್ತಾ ಮಹಾಪಾರ್ಶ್ವನನ್ನು ಪ್ರಹರಿಸಿದನು. ಅತ್ಯಂತಭಯಂಕರವಾಗಿದ್ದ ಆ ಗದೆಯು ದೇವತೆ ಗಳಿಗೂ, ಯಜ್ಞಕ್ಕೂ ಮತ್ತು ಬ್ರಾಹ್ಮಣರಿಗೂ ಶತ್ರುವಾಗಿದ್ದ ಭಯಂಕರಾ ಕಾರನಾದ ಮಹಾಪಾರ್ಶ್ವನ ದೇಹವನ್ನು ಹೊಕ್ಕು ವಕ್ಷಃಸ್ಥಳವನ್ನೇ ಭೇದಿಸಿ ಬಿಟ್ಟಿತು. ಪರ್ವತದಿಂದ ಗೈರಿಕಾದಿಧಾತುಗಳಿಂದ ಮಿಶ್ರವಾದ ನೀರು ಹರಿಯು ವಂತೆ–ಮಹಾಪಾರ್ಶ್ವನ ವಕ್ಷಃಸ್ಥಳದಿಂದ ರಕ್ತವು ಸ್ರವಿಸತೊಡಗಿತು. ಆ ಸಮಯದಲ್ಲಿ ಮಹಾತ್ಮನಾದ ಋಷಭನ ಕೈಯಲ್ಲಿದ್ದ ಗದೆಯನ್ನು ಹಿಂದಕ್ಕೆ ಪಡೆದುಕೊಳ್ಳುವ ಸಲುವಾಗಿ ಮಹಾಪಾರ್ಶ್ವನು ಋಷಭನ ಕಡೆಗೆ ಶೀಘ್ರವಾಗಿ ಓಡಿದನು. ಆದರೆ ಋಷಭನು ಗದೆಯನ್ನು ಕೈಬಿಡದೇ ಭಯಂಕರವಾಗಿ ತಿರುಗಿಸುತ್ತಾ ಆ ಮತ್ತಾನೀಕನನ್ನು (ಮಹಾಪಾರ್ಶ್ವನನ್ನು) ಅದೇ ಗದೆಯಿಂದ ಪುನಃ ಪುನಃ ಪ್ರಹರಿಸಿ ಸಂಹರಿಸಿದನು.

ತನ್ನದೇ ಆದ ಗದೆಯಿಂದ ಪ್ರಹರಿಸಲ್ಪಟ್ಟ ಮಹಾಪಾರ್ಶ್ವನ ಹಲ್ಲು ಗಳೂ ಮತ್ತು ಕಣ್ಣುಗಳೂ ಹೊರಬಂದುವು. ವಜ್ರಾಯುಧದಿಂದ ಪ್ರಹರಿಸ

ಲ್ಪಟ್ಟ ಪರ್ವತವು ಕೆಳಕ್ಕೆ ಬೀಳುವಂತೆ–ಮತ್ತಾನೀಕನು ಕೆಳಗುರುಳಿದನು. ಕಣ್ಣುಗಳನ್ನೂ ಪ್ರಾಣಗಳನ್ನೂ ಕಳೆದುಕೊಂಡಿದ್ದ ಮಹಾಪಾರ್ಶ್ವನು ಭೂಮಿಯಲ್ಲಿ ಬೀಳಲು ರಾಕ್ಷಸಸೈನ್ಯವು ದಿಕ್ಕಾಪಾಲಾಗಿ ಓಡಿಹೋಯಿತು.

ಹೀಗೆ ರಾವಣನ ತಮ್ಮನು ಋಷಭನಿಂದ ಹತನಾಗಲು–ಸಮುದ್ರಪ್ರಾಯವಾಗಿದ್ದ ರಾಕ್ಷಸಸೈನ್ಯವು ಆಯುಧಗಳನ್ನು ತ್ಯಜಿಸಿ ಪ್ರಾಣಗಳನ್ನುಳಿಸಿಕೊಳ್ಳುವ ಸಲುವಾಗಿ ಪಲಾಯನಮಾಡುತ್ತಿದ್ದಾಗ ಸಮುದ್ರವೇ ಒಡೆದು ಹೋಗಿರುವುದೋ ಎಂಬಂತೇ ಕಾಣುತ್ತಿದ್ದಿತು.

೭೦ನೆಯ ಸರ್ಗವು ಮುಗಿಯಿತು.

ಯುದ್ಧಕಾಂಡ ೭೧ನೆಯ ಸರ್ಗ

ಲಕ್ಷ್ಮಣನಿಂದ ಅತಿಕಾಯನ ಸಂಹಾರ

ಸ್ವಬಲಂ ವ್ಯಥಿತಂ ದೃಷ್ಟ್ವಾ ತುಮುಲಂ ರೋಮಹರ್ಷಣಮ್ ।
ಭ್ರಾತೄಂಶ್ಚ ನಿಹತಾನ್ದೃಷ್ಟ್ವಾ ಶಕ್ರತುಲ್ಯಪರಾಕ್ರಮಾನ್ ॥೧॥

ಪಿತೃವ್ಯೌ ಚಾಪಿ ಸಂದೃಶ್ಯ ಸಮರೇ ಸಂನಿಷೂದಿತೌ ।
ಯುದ್ಧೋನ್ಮತ್ತಂ ಚ ಮತ್ತಂ ಚ ಭ್ರಾತರೌ ರಾಕ್ಷಸರ್ಷಭೌ ॥೨॥

ಚುಕೋಪ ಚ ಮಹಾತೇಜಾ ಬ್ರಹ್ಮದತ್ತವರೋ ಯುಧಿ ।
ಅತಿಕಾಯೋಽದ್ರಿಸಂಕಾಶೋ ದೇವದಾನವದರ್ಪಹಾ ॥೩॥

ಭಯಂಕರವೂ ರೋಮಾಂಚಕಾರಿಯೂ ಆಗಿದ್ದ ತನ್ನ ಸೈನ್ಯವು ವ್ಯಥಿತವಾಗಿರುವುದನ್ನೂ, ಇಂದ್ರತುಲ್ಯಪರಾಕ್ರಮಿಗಳಾದ ತನ್ನ ಸಹೋದರರು ಹತರಾಗಿರುವುದನ್ನೂ, ಚಿಕ್ಕಪ್ಪಂದಿರಾದ ರಾಕ್ಷಸಶ್ರೇಷ್ಠರಾದ ಮಹೋದರ, ಮಹಾಪಾರ್ಶ್ವರು ಹತರಾಗಿರುವುದನ್ನೂ ನೋಡಿ ಮಹಾತೇಜಸ್ವಿಯಾದ, ಬ್ರಹ್ಮನಿಂದ ವರಗಳನ್ನು ಪಡೆದಿದ್ದ, ಪರ್ವತಸದೃಶನಾದ, ದೇವತೆಗಳ ಮತ್ತು ದಾನವರ ದರ್ಪಧ್ವಂಸಕನಾದ ಅತಿಕಾಯನು ಕ್ರುದ್ಧನಾದನು.

ದೇವೇಂದ್ರಶತ್ರುವಾದ ಅವನು ಒಟ್ಟಿಗೆ ಉದಯಿಸಿದ ಸಾವಿರ ಸೂರ್ಯರ ಪ್ರಕಾಶದಂತೆ ಪ್ರಕಾಶಮಾನವಾಗಿದ್ದ ರಥದಲ್ಲಿ ಕುಳಿತು ವಾನರರನ್ನು ಆಕ್ರಮಿಸಿದನು. ಕಿರೀಟವನ್ನು ಧರಿಸಿದ್ದ, ಅಪರಂಜಿಯ ಕುಂಡಲ

ಗಳನ್ನು ಧರಿಸಿದ್ದ ಅತಿಕಾಯನು ಧನುಸ್ಸನ್ನು ಟೇಂಕರಿಸಿ ತನ್ನ ಹೆಸರನ್ನು ಘೋಷಿಸುತ್ತಾ ಗಟ್ಟಿಯಾಗಿ ಗರ್ಜಿಸಿದನು. ಅಂತಹ ಸಿಂಹನಾದದಿಂದಲೂ, ನಾಮಧೇಯದ ಘೋಷಣೆಯಿಂದಲೂ, ಭಯಂಕರವಾದ ನಾಣೆನ ಶಬ್ದ ದಿಂದಲೂ ಅತಿಕಾಯನು ವಾನರರನ್ನು ಬಹಳವಾಗಿ ಭಯಪಡಿಸಿದನು. ವಾನರರು ಅತಿಕಾಯನ ಶರೀರದ ಅಗಾಧತ್ವವನ್ನು ನೋಡಿ ಕುಂಭಕರ್ಣನೇ ಪುನಃ ಎದ್ದುಬಂದಿರುವನೆಂದು ಭಾವಿಸಿ ಭಯಪೀಡಿತರಾಗಿ ಒಬ್ಬರು ಮತ್ತೊಬ್ಬರನ್ನು ಆಶ್ರಯಿಸುತ್ತಿದ್ದರು. ಮಹಾವಿಷ್ಣುವಿನ ತ್ರಿವಿಕ್ರಮಾವತಾರ ದಂತಿದ್ದ ಆ ಮಹಾರೂಪವನ್ನು ನೋಡಿ ವಾನರಯೋಧರು ಭಯದಿಂದ ಅತ್ತಲಿತ್ತ ಪಲಾಯನಮಾಡತೊಡಗಿದರು. ಅತಿಕಾಯನು ಹತ್ತಿರಕ್ಕೆ ಬರು ತ್ತಲೇ ಮೋಹವಶರಾದ ಕೆಲವು ವಾನರರು ಲೋಕಶರಣ್ಯನಾದ, ಲಕ್ಷ್ಮಣನ ಅಣ್ಣನಾದ ಶ್ರೀರಾಮನನ್ನು ಶರಣುಹೊಂದಿದರು. ರಥದಲ್ಲಿ ಕುಳಿತಿದ್ದ, ಪರ್ವತೋಪಮನಾಗಿದ್ದ, ಕಾಳಮೇಘದಂತೆ ಗರ್ಜನೆಮಾಡುತ್ತಿದ್ದ ಅತಿ ಕಾಯನನ್ನು ಧನುಷ್ಪಾಣಿಯಾಗಿದ್ದ ಶ್ರೀರಾಮನು ಬಹಳ ದೂರದಿಂದಲೇ ನೋಡಿದನು. ಆ ಮಹಾಕಾಯನನ್ನು ನೋಡಿ ರಾಘವನು ಅಚ್ಚರಿಗೊಂಡನು. ವಾನರರನ್ನು ಸಂತೈಸುತ್ತಾ ವಿಭೀಷಣನನ್ನು ಪ್ರಶ್ನಿಸಿದನು :

"ವಿಭೀಷಣ! ಪರ್ವತಸದೃಶನಾಗಿರುವ, ಧನುಷ್ಪಾಣಿಯಾಗಿರುವ, ಸಿಂಹದ ಕಣ್ಣುಗಳಂತೆ ಕಣ್ಣುಗಳಿರುವ, ಸಾವಿರ ಕುದುರೆಗಳನ್ನು ಹೂಡಿರುವ ವಿಶಾಲವಾದ ರಥದಲ್ಲಿ ಕುಳಿತಿರುವ ಇವನು ಯಾರು? ಭೂತಗಣಗಳಿಂದ ಪರಿವೃತನಾದ ಪರಮೇಶ್ವರನಂತೆ ಇವನು ನಿಶಿತವಾದ ಶೂಲಗಳಿಂದಲೂ, ಅತ್ಯಂತತೀಕ್ಷ್ಣವಾದ ಮತ್ತು ತೇಜೋವಿಶಿಷ್ಟವಾಗಿರುವ ಪ್ರಾಸ-ತೋಮರ ಗಳಿಂದಲೂ ಪರಿವೃತನಾಗಿ ರಾರಾಜಿಸುತ್ತಿರುವನು. ಮಹಾಕಾಲನ ನಾಲಿಗೆ ಯಂತೆ ಪ್ರಕಾಶಮಾನವಾಗಿರುವ ರಥಶಕ್ತಿಗಳಿಂದಲೂ ಪರಿವೃತನಾಗಿರುವ ಇವನು ಮಿಂಚಿನಿಂದ ಕೂಡಿರುವ ಮೇಘದಂತೆಯೇ ಪ್ರಕಾಶಿಸುತ್ತಿದ್ದಾನೆ. ಕಾಮನಬಿಲ್ಲು ಆಕಾಶವನ್ನು ಶೋಭಾಯಮಾನಗೊಳಿಸುವಂತೆ–ಸುವರ್ಣ ಮಯವಾದ ಹಿಂಭಾಗದಿಂದ ಕೂಡಿರುವ, ಸಜ್ಜುಗೊಳಿಸಿದ ಧನುಸ್ಸುಗಳು ಶ್ರೇಷ್ಠವಾದ ಇವನ ರಥವನ್ನು ಶೋಭಾಯಮಾನಗೊಳಿಸುತ್ತಿವೆ. ಸಿಂಹ ಸಮಾನಪರಾಕ್ರಮಿಯಾದ, ರಥಿಗಳಲ್ಲಿ ಶ್ರೇಷ್ಠನಾದ ಈ ರಾಕ್ಷಸನು ಸೂರ್ಯನ

ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿರುವ ರಥದಲ್ಲಿ ಕುಳಿತು ಯುದ್ಧಭೂಮಿಗೇ ಶೋಭೆಯನ್ನುಂಟುಮಾಡುತ್ತಾ ಇತ್ತಕಡೆಗೆ ಬರುತ್ತಿದ್ದಾನೆ. ಧ್ವಜದಂಡದ ಅಗ್ರಭಾಗದಲ್ಲಿ ರಾಹುವಿನ ಚಿಹ್ನೆಯಿರುವ ಪತಾಕೆಯಿಂದಲೂ, ಸೂರ್ಯಕಿರಣಗಳಿಗೆ ಸಮಾನವಾದ ಬಾಣಗಳಿಂದಲೂ ಹತ್ತು ದಿಕ್ಕುಗಳನ್ನೂ ಬೆಳಗುತ್ತಾ ವಿರಾಜಿಸುತ್ತಿದ್ದಾನೆ. ಇವನ ಧನುಸ್ಸು ಸುವರ್ಣಮಯವಾದ ಹಿಂಭಾಗದಿಂದ ಸಮಲಂಕೃತವಾಗಿದೆ. ಎರಡು ತುದಿಗಳಲ್ಲಿಯೂ ಮತ್ತು ಮಧ್ಯದಲ್ಲಿಯೂ ಬಗ್ಗಿಕೊಂಡಿದೆ. ಅದರ ಟಂಕಾರವು ಮೇಘದ ಗರ್ಜನೆಗೆ ಅನುರೂಪವಾಗಿದೆ. ಇಂದ್ರನ ಧನುಸ್ಸಿನಂತೆಯೇ ಇವನ ಧನುಸ್ಸೂ ವಿರಾಜಿಸುತ್ತಿದೆ. ಧ್ವಜ-ಪತಾಕೆಗಳಿಂದಲೂ, ಮೂಕೀಮರದಿಂದಲೂ ಕೂಡಿರುವ ಈ ಮಹಾರಥವು ನಾಲ್ವರು ಸಾರಥಿಗಳಿಂದ ನಿಯಂತ್ರಿತವಾಗಿದೆ. ಇದರ ಗಡ-ಗಡಾಶಬ್ದವು ಮೇಘಗಳ ಗುಡುಗಿನ ಶಬ್ದಕ್ಕೆ ಅನುರೂಪವಾಗಿದೆ. ಈತನ ರಥದಲ್ಲಿ ಮೂವತ್ತೆರಡು ಬಗೆಯ ಬತ್ತಳಿಕೆಗಳು ಶೋಭಿಸುತ್ತಿವೆ. ಅಂತೆಯೇ ಭಯಂಕರವಾದ ಹಲವಾರು ಧನುಸ್ಸುಗಳೂ, ಚಿನ್ನದ ಬಣ್ಣದಂತಿರುವ ನಾಣುಗಳೂ ಇವೆ.

ರಥದ ಎರಡು ಕಡೆಗಳಲ್ಲಿಯೂ ಥಳಥಳಿಸುತ್ತಿರುವ ಕತ್ತಿಗಳಿದ್ದು ರಥದ ಪಾರ್ಶ್ವಭಾಗಗಳನ್ನು ಶೋಭೆಗೊಳಿಸುತ್ತಿವೆ. ಕತ್ತಿಗಳ ಒರೆಗಳು ನಾಲ್ಕು ಗೇಣುಗಳಷ್ಟು ಅಗಲವಾಗಿಯೂ ಹತ್ತು ಗೇಣುಗಳಷ್ಟು ಉದ್ದವಾಗಿಯೂ ಇವೆ. ಕುತ್ತಿಗೆಯಲ್ಲಿ ಕೆಂಪುಮಾಲೆಯನ್ನು ಧರಿಸಿರುವ, ಮಹಾಪರ್ವತಸದೃಶನಾದ, ಧೀರನಾದ ಈ ರಾಕ್ಷಸನು ಕಪ್ಪುಬಣ್ಣದವನಾಗಿದ್ದು ಮೇಘಗಳ ಮಧ್ಯದಲ್ಲಿರುವ ಸೂರ್ಯನಂತೆಯೇ ಕಾಣುತ್ತಿದ್ದಾನೆ. ಇವನ ವಿಶಾಲವಾದ ಮುಖವು ಮಹಾಕಾಲನ ಮುಖದಂತೆಯೇ ಇದ್ದು ಅತಿಭಯಂಕರವಾಗಿ ಕಾಣುತ್ತಿದೆ. ಭುಜಗಳಲ್ಲಿ ಸುವರ್ಣದ ತೋಳ್ಬಳೆಗಳಿಂದ ಭೂಷಿತನಾಗಿರುವ ಈ ರಾಕ್ಷಸನು ಎತ್ತರವಾದ ಎರಡು ಶಿಖರಗಳಿಂದ ಕೂಡಿರುವ ಹಿಮವತ್ಪರ್ವತದಂತೆಯೇ ಶೋಭಿಸುತ್ತಿರುವನು. ಇವನ ಭಯಂಕರವಾದ ಮುಖಮಂಡಲವು ಕುಂಡಲಗಳಿಂದ ಸಮಲಂಕೃತವಾಗಿದ್ದು ಪುನರ್ವಸೂನಕ್ಷತ್ರಗಳ ಮಧ್ಯದಲ್ಲಿರುವ ಪೂರ್ಣಚಂದ್ರನಂತೆಯೇ ಕಾಣುತ್ತಿದೆ.

ಮಹಾಬಾಹುವೇ! ವಿಭೀಷಣ! ನನಗೆ ಈ ರಾಕ್ಷಸನ ಪರಿಚಯವನ್ನು

ಮಾಡಿಕೊಡು. ಇವನನ್ನು ನೋಡುತ್ತಲೇ ಎಲ್ಲ ವಾನರಸೈನಿಕರೂ ಭಯದಿಂದ ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದಾರೆ.”

ಮಹಾತೇಜಸ್ವಿಯಾದ ಶ್ರೀರಾಮನು ಹೀಗೆ ಪ್ರಶ್ನಿಸಲು ಮಹಾತೇಜಸ್ವಿಯಾದ ವಿಭೀಷಣನು ಹೇಳಿದನು :

“ರಾಘವ! ಮಹಾತೇಜಸ್ವಿಯಾದ ದಶಕಂಠನು ಕುಬೇರನ ತಮ್ಮನು. ಅವನು ಭಯಂಕರವಾದ ಕಾರ್ಯಗಳನ್ನು ಮಾಡತಕ್ಕವನು. ರಾಕ್ಷಸರೆಲ್ಲರಿಗೂ ಸ್ವಾಮಿಯು. ಅವನಿಗೆ ವೀರ್ಯವಂತನಾದ ಮಗನೊಬ್ಬನು ಹುಟ್ಟಿದನು. ಅವನು ತಂದೆಯಂತೆಯೇ ಮಹಾಪರಾಕ್ರಮಿಯು. ವೃದ್ಧರನ್ನು ಸೇವಿಸತಕ್ಕವನು. ವೇದ-ಶಾಸ್ತ್ರಗಳನ್ನು ತಿಳಿದವನು. ಸಮಸ್ತವಾದ ಅಸ್ತ್ರಗಳನ್ನು ತಿಳಿದವರಲ್ಲಿ ಶ್ರೇಷ್ಠನಾದವನು. ಆನೆ-ಕುದುರೆಗಳ ಸವಾರಿಯಲ್ಲಿ, ಕತ್ತಿ ವರಸೆಯಲ್ಲಿ, ಧನುರ್ವಿದ್ಯೆಯಲ್ಲಿ, ಸಾಮ-ದಾನ-ಭೇದೋಪಾಯಗಳಲ್ಲಿ, ನೀತಿಶಾಸ್ತ್ರ-ಮಂತ್ರಶಾಸ್ತ್ರಗಳಲ್ಲಿ ನಿಷ್ಣಾತನಾದವನು ಮತ್ತು ಎಲ್ಲರಿಂದಲೂ ಸಮ್ಮಾನಿತನಾದವನು. ಅವನ ಬಾಹುಬಲದ ಆಶ್ರಯದಿಂದಲೇ ಲಂಕಾ ಪಟ್ಟಣವು ನಿರ್ಭಯವಾಗಿದೆ. ರಾವಣನ ಪತ್ನಿಯಾದ ಧಾನ್ಯಮಾಲಿನೀ ಎಂಬುವಳಲ್ಲಿ ಹುಟ್ಟಿರುವ ಇವನು ಅತಿಕಾಯನೆಂದು ಲೋಕದಲ್ಲಿ ಪ್ರಸಿದ್ಧನಾಗಿರುವನು. ವಿಶುದ್ಧವಾದ ಅಂತಃಕರಣದಿಂದ ಕೂಡಿರುವ ಇವನು ತಪಶ್ಚರಣೆಯಿಂದ ಬ್ರಹ್ಮನನ್ನು ಆರಾಧಿಸಿ ಅಮೋಘವಾದ ಅನೇಕಾಸ್ತ್ರಗಳನ್ನು ಪಡೆದಿರುವನು. ಶತ್ರುಗಳನ್ನೂ ಹಲವಾರು ಬಾರಿ ಪರಾಜಯಗೊಳಿಸಿರುವನು. ಬ್ರಹ್ಮನು ಇವನಿಗೆ ಸುರಾಸುರರಿಂದ ವಧಿಸಲ್ಪಡದಿರುವ ವರವನ್ನೂ, ಇವನು ತೊಟ್ಟಿರುವ ಕವಚವನ್ನೂ, ಸೂರ್ಯನಂತೆ ಪ್ರಕಾಶಮಾನವಾಗಿರುವ ಈ ರಥವನ್ನೂ ದಯಪಾಲಿಸಿದ್ದಾನೆ. ಇವನು ನೂರಾರು ಬಾರಿ ದೇವ-ದಾನವರನ್ನು ಪರಾಜಯಗೊಳಿಸಿ ರಾಕ್ಷಸರನ್ನು ರಕ್ಷಿಸಿದ್ದಾನೆ. ಯಕ್ಷರನ್ನು ಸಂಹರಿಸಿದ್ದಾನೆ. ಬುದ್ಧಿವಂತನಾದ ಈ ರಾಕ್ಷಸನು ಯುದ್ಧದಲ್ಲಿ ಬಾಣಗಳ ಮೂಲಕವಾಗಿ ಇಂದ್ರನ ವಜ್ರಾಯುಧದ ಶಕ್ತಿಯನ್ನೂ ಕುಂಠಿತಗೊಳಿಸಿರುವನು. ಯುದ್ಧದಲ್ಲಿ ಜಲಾಧಿಪತಿಯಾದ ವರುಣನ ಪಾಶವನ್ನೂ ಹಿಮ್ಮೆಟ್ಟಿಸಿರುವನು. ರಾಕ್ಷಸಶ್ರೇಷ್ಠನಾದ ರಾವಣನ ಮಗನಾದ ಈ ಅತಿಕಾಯನು ಬುದ್ಧಿವಂತನು. ದೇವ-ದಾನವರ ದರ್ಪವಿನಾಶಕನು. ಪುರುಷೋತ್ತಮನೇ!

ಈ ರಾಕ್ಷಸನು ಎಲ್ಲ ವಾನರಸೈನಿಕರನ್ನೂ ತೀಕ್ಷ್ಣವಾದ ಬಾಣಗಳಿಂದ ವಿನಾಶಗೊಳಿಸುವ ಮೊದಲೇ ನೀನು ಇವನನ್ನು ಸಂಹರಿಸಲು ಪ್ರಯತ್ನಿಸು."

ವಿಭೀಷಣನು ಹೀಗೆ ಹೇಳುತ್ತಿರುವ ಸಮಯಕ್ಕೆ ಸರಿಯಾಗಿ ಬಲಿಷ್ಠನಾದ ಅತಿಕಾಯನು ವಾನರಸೈನ್ಯದೊಳಕ್ಕೆ ನುಗ್ಗಿ ಧನುಷ್ಟೇಂಕಾರಮಾಡುತ್ತಾ ಗಟ್ಟಿಯಾಗಿ ಬಾರಿ-ಬಾರಿಗೂ ಗರ್ಜಿಸತೊಡಗಿದನು.

ರಥಿಗಳಲ್ಲಿ ಶ್ರೇಷ್ಠನಾದ, ರಥದಲ್ಲಿ ಕುಳಿತಿದ್ದ, ಭಯಂಕರಶರೀರನಾದ ಅತಿಕಾಯನನ್ನು ನೋಡಿದೊಡನೆಯೇ ಪ್ರಧಾನಭೂತರಾಗಿದ್ದ ವಾನರಸೇನಾಪತಿಗಳು ಅವನನ್ನು ಆಕ್ರಮಿಸಿದರು. ಕುಮುದ, ದ್ವಿವಿದ, ಮೈಂದ, ನೀಲ, ಶರಭ—ಇವರೇ ಮೊದಲಾದ ವಾನರನಾಯಕರು ಶಿಲಾ-ಶೈಲ-ವೃಕ್ಷಗಳನ್ನು ಹಿಡಿದು ಒಟ್ಟಾಗಿ ಸೇರಿ ಅತಿಕಾಯನನ್ನು ಆಕ್ರಮಿಸಿದರು. ಮಹಾತೇಜಸ್ವಿಯಾದ, ಅಸ್ತ್ರವಿದ್ಯೆಯನ್ನು ತಿಳಿದವರಲ್ಲಿ ಶ್ರೇಷ್ಠನಾದ ಅತಿಕಾಯನು ವಾನರಸೈನಿಕರು ಹೊತ್ತುತಂದಿದ್ದ ವೃಕ್ಷಗಳನ್ನೂ, ಪರ್ವತಶಿಖರಗಳನ್ನೂ ಸುವರ್ಣಭೂಷಿತವಾದ ಬಾಣಗಳಿಂದ ಕತ್ತರಿಸಿ ಹಾಕಿದನು. ಮರುಕ್ಷಣದಲ್ಲಿಯೇ ಅತಿಕಾಯನು ತನ್ನೆದುರಾಗಿ ನಿಂತಿದ್ದ ಸಮಸ್ತವಾನರರನ್ನೂ ಲೋಹಮಯವಾದ ಬಾಣಗಳಿಂದ ಪ್ರಹರಿಸಿದನು. ಬಾಣಗಳ ವರ್ಷದಿಂದ ಪೀಡಿತರಾದ ವಾನರರು ಬಹಳವಾಗಿ ಗಾಯಗೊಂಡು ಪರಾಜಿತರಾದರು. ಅತಿಕಾಯನಿಗೆ ಎದುರಾಗಿ ನಿಂತು ಯುದ್ಧಮಾಡಲು ಅಸಮರ್ಥರಾದರು. ಯೌವನದಿಂದ ಗರ್ವಿತವಾದ ಸಿಂಹವು ಮೃಗಗಳನ್ನು ಪೀಡಿಸುವಂತೆ—ರಾಕ್ಷಸನು ವಾನರವೀರರನ್ನು ಬಹಳವಾಗಿ ಪೀಡಿಸತೊಡಗಿದನು. ವಾನರಸೈನ್ಯದ ಮಧ್ಯದಲ್ಲಿದ್ದ ಅತಿಕಾಯನು ತನ್ನೊಡನೆ ಯುದ್ಧಮಾಡದೇ ಇರುವವರನ್ನು ಸಂಹರಿಸುತ್ತಿರಲಿಲ್ಲ. ಧನುಸ್ಸನ್ನು ಹಿಡಿದು ಬತ್ತಳಿಕೆಯನ್ನು ಬಿಗಿದುಕೊಂಡು ಶ್ರೀರಾಮನ ಬಳಿಗೆ ಹೋಗಿ ಗರ್ವದಿಂದ ಯುಕ್ತವಾದ ಈ ಮಾತನ್ನು ಹೇಳಿದನು :

"ಧನುರ್ಬಾಣಗಳನ್ನು ಹಿಡಿದು ರಥದಲ್ಲಿ ಕುಳಿತಿರುವ ನಾನು ಸಾಮಾನ್ಯಮನುಷ್ಯರೊಡನೆ ಯಾವಾಗಲೂ ಯುದ್ಧಮಾಡುವುದಿಲ್ಲ. ಯಾವನಿಗೆ ನನ್ನೊಡನೆ ಯುದ್ಧಮಾಡುವ ಶಕ್ತಿಯಿರುವುದೋ—ಅವನು ಪ್ರಯತ್ನಪೂರ್ವಕವಾಗಿ ಈಗಲೇ ಬಂದು ನನ್ನೊಡನೆ ಯುದ್ಧಮಾಡಲಿ."

ರಾಕ್ಷಸನ ಆ ಮಾತನ್ನು ಕೇಳಿ ಶತ್ರುಹಂತಕನಾದ ಲಕ್ಷ್ಮಣನು ಕುಪಿತನಾಗಿ ಅವನ ಗರ್ವದ ಮಾತನ್ನು ಸಹಿಸದವನಾಗಿ ನಗು-ನಗುತ್ತಲೇ ಧನುಸ್ಸನ್ನು ಹಿಡಿದು ಮುಂದೆ ಬಂದನು. ಅತಿಕಾಯನ ಮುಂದೆ ನಿಂತು ಬತ್ತಳಿಕೆಯಿಂದ ಬಾಣವನ್ನು ತೆಗೆದು ಹೆದೆಯೇರಿಸಿ ನಾಣನ್ನು ಸೆಳೆದನು. ಲಕ್ಷ್ಮಣನ ಧನುಸ್ಸಿನ ಟೇಂಕಾರಶಬ್ದವು ಅತ್ಯಂತಭಯಂಕರವಾಗಿದ್ದಿತು. ಆ ಶಬ್ದವು ಭೂಮ್ಯಾಕಾಶಗಳನ್ನೂ, ಹತ್ತು ದಿಕ್ಕುಗಳನ್ನೂ, ಸಮುದ್ರವನ್ನೂ ತುಂಬಿತಲ್ಲದೇ, ರಾಕ್ಷಸರಿಗೆ ಭಯವನ್ನೂ ಉಂಟುಮಾಡಿತು. ಸೌಮಿತ್ರಿಯ ಧನುಸ್ಸಿನ ಭಯಂಕರವಾದ ಟೇಂಕಾರಶಬ್ದವನ್ನು ಕೇಳಿ ಮಹಾತೇಜಸ್ವಿಯಾದ ಅತಿಕಾಯನು ವಿಸ್ಮಿತನಾದನು. ಲಕ್ಷ್ಮಣನು ತನ್ನ ಮುಂದೆ ಬಂದು ನಿಂತಿರುವುದನ್ನು ನೋಡಿ ಕ್ರುದ್ಧನಾಗಿ ನಿಶಿತವಾದ ಬಾಣವನ್ನು ಬತ್ತಳಿಕೆಯಿಂದ ತೆಗೆದು ಹೇಳಿದನು :

"ಲಕ್ಷ್ಮಣ! ನೀನಿನ್ನೂ ಬಾಲಕನು. ಪರಾಕ್ರಮವನ್ನು ತೋರುವುದರಲ್ಲಿ ನಿನಗಿನ್ನೂ ಸರಿಯಾದ ಪರಿಶ್ರಮವಿಲ್ಲ. ಕಾಲಸದೃಶನಾಗಿರುವ ನನ್ನೊಡನೆ ಯುದ್ಧಮಾಡಲು ಇಚ್ಛಿಸುವೆಯೇನು? ಬೇಡ, ಹೊರಟುಹೋಗು, ನನ್ನ ಬಾಹುಗಳಿಂದ ಹೊರಬೀಳುವ ಬಾಣಗಳ ವೇಗವನ್ನು ಭೂಮಿಯಾಗಲೀ, ಆಕಾಶವಾಗಲೀ, ಹಿಮವಂತನಾಗಲೀ ಸಹಿಸಿಕೊಳ್ಳಲು ಸಮರ್ಥರಲ್ಲ. ಸುಖವಾಗಿ ಮಲಗಿರುವ ಕಾಲಾಗ್ನಿಯನ್ನು ಎಚ್ಚರಗೊಳಿಸಲು ನೀನು ಪ್ರಯತ್ನಿಸುತ್ತಿರುವೆ. ಧನುಸ್ಸನ್ನಿಟ್ಟು ಹೊರಟುಹೋಗು. ನನ್ನೊಡನೆ ಯುದ್ಧಕ್ಕೆ ಬಂದು ಪ್ರಾಣಗಳನ್ನು ಕಳೆದುಕೊಳ್ಳಬೇಡ. ಅಥವಾ ನೀನು ಅಹಂಕಾರದಿಂದ ತುಂಬಿದವನಾಗಿ ಹಿಂದಿರುಗಲು ಇಷ್ಟಪಡದಿದ್ದರೆ ಇಲ್ಲಿಯೇ ನಿಲ್ಲು. ಪ್ರಾಣಗಳನ್ನು ಪರಿತ್ಯಜಿಸಿ ಯಮನ ಮನೆಗಾದರೂ ಹೋಗುವೆ. ಈ ನನ್ನ ಬಾಣಗಳನ್ನಾದರೂ ನೋಡು. ಶತ್ರುಗಳ ದರ್ಪವನ್ನು ಇವು ಅಡಗಿಸುತ್ತವೆ. ಪುಟಕ್ಕೆ ಹಾಕಿದ ಚಿನ್ನದಿಂದ ವಿಭೂಷಿತವಾಗಿರುವ ಈ ನನ್ನ ಬಾಣಗಳು ಈಶ್ವರನ ತ್ರಿಶೂಲದಂತೆಯೇ ಇವೆ. ಇದೋ ನೋಡು! ನಾನೀಗ ಬಿಡಲಿರುವ ಸರ್ಪಸದೃಶವಾದ ಬಾಣವು–ಕೋಪಗೊಂಡ ಸಿಂಹವು ಆನೆಯ ರಕ್ತವನ್ನು ಹೀರುವಂತೆ–ನಿನ್ನ ರಕ್ತವನ್ನು ಹೀರಿಬಿಡುತ್ತದೆ."

ಹೀಗೆ ಹೇಳುತ್ತಾ ಅತಿಕಾಯನು ಬಾಣವನ್ನು ಧನುಸ್ಸಿನಲ್ಲಿ ಅನು ಸಂಧಾನ ಮಾಡಿದನು.

ಅತಿಕಾಯನ ರೋಷಯುಕ್ತವೂ ಗರ್ವಯುಕ್ತವೂ ಆದ ಮಾತನ್ನು ಕೇಳಿ ಮನನಶೀಲನಾದ ಅತಿಬಲನಾದ ಲಕ್ಷ್ಮಣನು ಕುಪಿತನಾಗಿ ಮಹಾರ್ಥ ಯುಕ್ತವಾದ ಈ ಮಾತನ್ನು ಹೇಳಿದನು :

"ದುರಾತ್ಮನೇ! ಗರ್ವದ ಮಾತನಾಡುವುದರಿಂದಲೇ ನೀನು ಪ್ರಧಾನ ನಾಗಿ ಬಿಡುವುದಿಲ್ಲ. ಹೊಗಳಿಕೆಯ ಮಾತುಗಳನ್ನು ಹೇಳುವುದರಿಂದ ಜನರು ಸತ್ಪುರುಷರೂ ಆಗುವುದಿಲ್ಲ. ನಾನೀಗ ಧನುರ್ಬಾಣಗಳನ್ನು ಹಿಡಿದು ನಿನ ಗೆದುರಾಗಿ ಯುದ್ಧಕ್ಕೆ ನಿಂತಿದ್ದೇನೆ. ನಿನ್ನಲ್ಲಿ ಎಷ್ಟು ಬಲವಿರುವುದೆಂಬುದನ್ನು ತೋರು. ಪರಾಕ್ರಮದ ಮೂಲಕವಾಗಿ ನಿನ್ನ ವೀರತ್ವವನ್ನು ಪ್ರದರ್ಶಿಸು. ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುವುದು ಉಚಿತವಲ್ಲ. **ಪೌರುಷೇಣ ತು ಯೋ ಯುಕ್ತಃ ಸ ತು ಶೂರ ಇತಿ ಸ್ಮೃತಃ ||೫೮||** ಪೌರುಷದಿಂದ ಯಾವನು ಸಂಪನ್ನನಾಗಿರುವನೋ-ಅವನೇ ಶೂರನೆಂದು ನಿರ್ದೇಶಿಸಲ್ಪಡು ತ್ತಾನೆ. ಸರ್ವಾಯುಧಸಂಪನ್ನನಾಗಿ ಧನುಸ್ಸನ್ನು ಹಿಡಿದು ರಥದಲ್ಲಿ ಕುಳಿತಿ ರುವೆ. ಬಾಣಗಳಿಂದಾಗಲೀ ಅಸ್ತ್ರಗಳಿಂದಾಗಲೀ ನಿನ್ನ ಪರಾಕ್ರಮವನ್ನು ತೋರಿಸು. ಅನಂತರ ನಾನು ನನ್ನ ನಿಶಿತವಾದ ಬಾಣಗಳಿಂದ-ಗಾಳಿಯು ಕಾಲಾನುಗುಣವಾಗಿ ಮಾಗಿರುವ ತಾಳಫಲವನ್ನು ಕೆಳಕ್ಕೆ ಬೀಳಿಸುವಂತೆ-ನಿನ್ನ ತಲೆಯನ್ನು ಕತ್ತರಿಸಿ ಹಾಕುತ್ತೇನೆ. ಈಗ ಪುಟಕ್ಕೆ ಹಾಕಿದ ಚಿನ್ನದಿಂದ ಭೂಷಿತವಾದ ನನ್ನ ಈ ಬಾಣಗಳು-ನಿನ್ನ ಶರೀರದಲ್ಲಿ ಬಾಣಗಳ ಮೊನೆ ಯಿಂದುಂಟಾದ ಛಿದ್ರದಿಂದ ಹೊರಬರುವ ರಕ್ತವನ್ನು ಹೀರುತ್ತವೆ. ಬಾಲಕ ನೆಂದು ಭಾವಿಸಿ ನನ್ನನ್ನು ಅವಹೇಳನಮಾಡುವುದು ನಿನಗೆ ಯೋಗ್ಯವಾಗಿ ಕಾಣುವುದಿಲ್ಲ. ನಾನು ಬಾಲಕನೋ-ವೃದ್ಧನೋ? ಯುದ್ಧದಲ್ಲಂತೂ ನೀನು ನನ್ನನ್ನು ಮೃತ್ಯುವೆಂದು ತಿಳಿಯುವೆ. ವಾಮನನ ರೂಪವನ್ನು ಧರಿಸಿದ ವಿಷ್ಣುವೂ ಬಾಲಕನೇ ಆಗಿದ್ದನು. ಆದರೆ ಅವನು ತನ್ನ ಮೂರು ಹೆಜ್ಜೆ ಗಳಿಂದಲೇ ಮೂರು ಲೋಕಗಳನ್ನೂ ಅಳೆದನು."

ಅತಿಕಾಯನು ಲಕ್ಷ್ಮಣನ ಯುಕ್ತಿಯುಕ್ತವಾದ ಮತ್ತು ಅರ್ಥವತ್ತಾದ ಮಾತನ್ನು ಕೇಳಿ ಕ್ರುದ್ಧನಾಗಿ ಉತ್ತಮವಾದ ಬಾಣವೊಂದನ್ನು ಬತ್ತಳಿಕೆಯಿಂದ

ತೆಗೆದನು. ಹೀಗೆ ಇಬ್ಬರೂ ಯುದ್ಧಸನ್ನದ್ಧರಾಗಿ ನಿಂತಿರಲು ಅವರಿಬ್ಬರ ಮಹಾಯುದ್ಧವನ್ನು ನೋಡಲು ವಿದ್ಯಾಧರರೂ, ಭೂತಗಣಗಳೂ, ದೇವತೆಗಳೂ, ದೈತ್ಯರೂ, ಮಹರ್ಷಿಗಳೂ, ಮಹಾತ್ಮರಾದ ಗುಹ್ಯಕರೂ ಆಗಮಿಸಿದರು.

ಅನಂತರ ಅತಿಕಾಯನು ಬಾಣವನ್ನು ಹೆದೆಗೇರಿಸಿ ಆಕಾಶವನ್ನೇ ನುಂಗಿ ಹಾಕುವನೋ ಎಂಬಂತೆ ಕ್ರುದ್ಧನಾಗಿ ಲಕ್ಷ್ಮಣನ ಮೇಲೆ ಪ್ರಯೋಗಿಸಿದನು. ಶತ್ರುವೀರಹಂತಕನಾದ ಲಕ್ಷ್ಮಣನು ತನ್ನ ಮೇಲೆ ಬೀಳುವುದರಲ್ಲಿದ್ದ ಸರ್ಪ ಸದೃಶವಾದ ನಿಶಿತವಾದ ಬಾಣವನ್ನು ಅರ್ಧಚಂದ್ರವೆಂಬ ಬಾಣದಿಂದ ಕತ್ತ ರಿಸಿದನು. ಕತ್ತರಿಸಲ್ಪಟ್ಟ ಸರ್ಪದ ಹೆಡೆಯಂತಿದ್ದ ತಾನು ಬಿಟ್ಟ ಬಾಣವನ್ನು ಲಕ್ಷ್ಮಣನು ಕತ್ತರಿಸಿದುದನ್ನು ಕಂಡು ಅತಿಕಾಯನು ಮತ್ತಷ್ಟು ಕ್ರುದ್ಧನಾಗಿ ಐದು ಬಾಣಗಳನ್ನು ಬತ್ತಳಿಕೆಯಿಂದ ಹೊರತೆಗೆದು ಧನುಸ್ಸಿನಲ್ಲಿ ಅನು ಸಂಧಾನಮಾಡಿ ಲಕ್ಷ್ಮಣನ ಮೇಲೆ ಪ್ರಯೋಗಿಸಿದನು. ಅವಿನ್ನೂ ತನ್ನ ಬಳಿಗೆ ಬರುವ ಮೊದಲೇ ಲಕ್ಷ್ಮಣನು ನಿಶಿತವಾದ ಬಾಣಗಳಿಂದ ಕತ್ತರಿಸಿದನು. ಅನಂತರ ಲಕ್ಷ್ಮಣನು ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ನಿಶಿತವಾದ ಬಾಣ ವೊಂದನ್ನು ಬತ್ತಳಿಕೆಯಿಂದ ತೆಗೆದು ಧನುಸ್ಸಿನಲ್ಲಿ ಯೋಜಿಸಿ, ವೇಗವಾಗಿ ನಾಣನ್ನು ಸೆಳೆದು ರಾಕ್ಷಸನ ಮೇಲೆ ಪ್ರಯೋಗಿಸಿದನು. ದೀರ್ಘವಾಗಿ ಸೆಳೆದು ಬಿಟ್ಟ ಗಿಣ್ಣೆನಿಂದ ಕೂಡಿದ್ದ ಆ ಬಾಣದಿಂದ ರಾಕ್ಷಸಶ್ರೇಷ್ಠನ ನೆತ್ತಿಯನ್ನು ಗಾಯಗೊಳಿಸಿದನು. ಭಯಂಕರವಾದ, ಆ ರಾಕ್ಷಸನ ಹಣೆಯಲ್ಲಿ ನೆಟ್ಟು ಕೊಂಡಿದ್ದ, ರಕ್ತಸಿಕ್ತವಾಗಿದ್ದ ಆ ಬಾಣವು ಪರ್ವತದ ಮೇಲೆ ಹೆಡೆಬಿಚ್ಚಿ ನಿಂತಿ ರುವ ಸರ್ಪದಂತೆ ಕಾಣುತ್ತಿದ್ದಿತು. ರುದ್ರನ ಭಯಂಕರವಾದ ಬಾಣದಿಂದ ಪ್ರಹೃತವಾದ ತ್ರಿಪುರದ ಗೋಪುರವು ಕಂಪಿಸಿದಂತೆ–ಲಕ್ಷ್ಮಣನ ಬಾಣದಿಂದ ಪೀಡಿತನಾದ ರಾಕ್ಷಸನು ನಡುಗಿದನು. ಸ್ವಲ್ಪಹೊತ್ತಿನಲ್ಲಿಯೇ ಚೇತರಿಸಿ ಕೊಂಡು ಚಿಂತಿಸತೊಡಗಿದನು. ಸ್ವಲ್ಪಹೊತ್ತು ವಿಚಾರಮಾಡುತ್ತಿದ್ದು ಲಕ್ಷ್ಮಣನಿಗೆ ಹೇಳಿದನು :

"ಭಲೇ ಲಕ್ಷ್ಮಣ! ಇಂತಹ ಅಮೋಘಬಾಣಗಳನ್ನು ಪ್ರಯೋಗ ಮಾಡಲು ಸಮರ್ಥನಾಗಿರುವುದರಿಂದ ನಿಶ್ಚಯವಾಗಿಯೂ ನೀನು ಶ್ಲಾಘ ನೀಯವಾದ ಶತ್ರುವೇ ಆಗಿರುವೆ."

ಲಕ್ಷ್ಮಣನಿಗೆ ಹೀಗೆ ಹೇಳಿ ಮುಖವನ್ನು ತಗ್ಗಿಸಿಕೊಂಡು ಭುಜಗಳನ್ನು ಕೆಳಗೆ ಬಿಟ್ಟು ರಥದ ಹಿಂಭಾಗದಲ್ಲಿ ಕುಳಿತು ಸ್ವಲ್ಪ ಮುಂದೆ ಹೋದನು. ಅನಂತರ ರಾಕ್ಷಸನು ಪುನಃ ಯುದ್ಧವನ್ನು ಪ್ರಾರಂಭಿಸಿ ಒಂದು-ಮೂರು-ಐದು-ಏಳು ಬಾಣಗಳನ್ನು ಸಮಯವರಿತು ಬತ್ತಳಿಕೆಯಿಂದ ತೆಗೆದು ಧನುಸ್ಸಿನಲ್ಲಿ ಹೂಡಿ ದೀರ್ಘವಾಗಿ ಸೆಳೆದು ಲಕ್ಷ್ಮಣನ ಮೇಲೆ ಬಿಡುತ್ತಿದ್ದನು. ರಾಕ್ಷಸೇಂದ್ರನ ಧನುಸ್ಸಿನಿಂದ ಹೊರಬಂದ ಆ ಬಾಣಗಳು ಕಾಲಸದೃಶವಾಗಿದ್ದುವು. ಸುವರ್ಣಮಯವಾದ ರೆಕ್ಕೆಗಳನ್ನು ಹೊಂದಿದ್ದು ಸೂರ್ಯನಂತೆ ಪ್ರಕಾಶಮಾನವಾಗಿ ಆಕಾಶವನ್ನೇ ಬೆಳಗುತ್ತಿರುವಂತೆ ಕಾಣುತ್ತಿದ್ದುವು. ಲಕ್ಷ್ಮಣನು ಸ್ವಲ್ಪವಾದರೂ ಗಾಬರಿಗೊಳ್ಳದೇ ರಾಕ್ಷಸನು ಬಿಟ್ಟ ಎಲ್ಲ ಬಾಣಗಳನ್ನೂ ತೀಕ್ಷ್ಣವಾದ ಹಲವಾರು ಬಾಣಗಳಿಂದ ಕತ್ತರಿಸಿ ಹಾಕಿದನು. ತಾನು ಬಿಟ್ಟ ಬಾಣಗಳೆಲ್ಲವೂ ಲಕ್ಷ್ಮಣನಿಂದ ಕತ್ತರಿಸಲ್ಪಡುತ್ತಿರುವುದನ್ನು ನೋಡಿ ಇಂದ್ರಶತ್ರುವಾದ ಅತಿಕಾಯನು ಕೋಪಗೊಂಡು ನಿಶಿತವಾದ ಮತ್ತೊಂದು ಬಾಣವನ್ನು ಬತ್ತಳಿಕೆಯಿಂದ ತೆಗೆದು ಧನುಸ್ಸಿನಲ್ಲಿ ಹೂಡಿ ಲಕ್ಷ್ಮಣನ ಮೇಲೆ ಪ್ರಯೋಗಿಸಿದನು. ಆ ಬಾಣವು ಮುನ್ನುಗ್ಗಿಬರುತ್ತಿದ್ದ ಲಕ್ಷ್ಮಣನ ವಕ್ಷಃಸ್ಥಳದಲ್ಲಿ ಗಾಯಗೊಳಿಸಿತು. ಅದರಿಂದ ಉಂಟಾದ ಗಾಯದಿಂದ–ಮದಿಸಿದ ಆನೆಯ ಕಪೋಲದಿಂದ ಮದೋದಕವು ಸ್ರವಿಸುವಂತೆ–ರಕ್ತವು ಹರಿಯತೊಡಗಿತು. ಸಮರ್ಥನಾದ ಲಕ್ಷ್ಮಣನು ವಕ್ಷಃಸ್ಥಳದಲ್ಲಿ ನೆಟ್ಟುಕೊಂಡಿದ್ದ ಬಾಣವನ್ನು ಒಡನೆಯೇ ಕಿತ್ತುಹಾಕಿದನು. ಅನಂತರ ತೀಕ್ಷ್ಣವಾದ ಒಂದು ಬಾಣವನ್ನು ಬತ್ತಳಿಕೆಯಿಂದ ತೆಗೆದು ಅದನ್ನು ಮಂತ್ರಪೂರ್ವಕವಾಗಿ ಆಗ್ನೇಯವೆಂಬ ದಿವ್ಯಾಸ್ತ್ರದೊಡನೆ ಸಂಯೋಜಿಸಿದನು. ಆಗ್ನೇಯಾಸ್ತ್ರವನ್ನು ಧನುಸ್ಸಿನಲ್ಲಿ ಹೂಡಿದೊಡನೆಯೇ ಅದು ಪ್ರಜ್ವಲಿಸತೊಡಗಿತು. ಮಹಾತೇಜಸ್ವಿಯಾದ ಅತಿಕಾಯನೂ ಚಿನ್ನದ ರೆಕ್ಕೆಗಳಿಂದ ಕೂಡಿದ್ದ, ಸರ್ಪಸದೃಶವಾದ, ಭಯಂಕರವಾದ ಬಾಣವನ್ನು ಬತ್ತಳಿಕೆಯಿಂದ ತೆಗೆದು ಧನುಸ್ಸಿನಲ್ಲಿ ಹೂಡಿದನು. ಅಷ್ಟರಲ್ಲಿಯೇ ಲಕ್ಷ್ಮಣನು ದಿವ್ಯಾಸ್ತ್ರದ ಶಕ್ತಿಯಿಂದ ಸಂಪನ್ನವಾಗಿದ್ದ, ಪ್ರಜ್ವಲಿಸುತ್ತಿದ್ದ, ಭಯಂಕರವಾಗಿದ್ದ ಆಗ್ನೇಯಾಸ್ತ್ರವನ್ನು–ಯಮನು ಕಾಲದಂಡವನ್ನು ಪ್ರಯೋಗಿಸುವಂತೆ–ಅತಿಕಾಯನ ಮೇಲೆ ಪ್ರಯೋಗಿಸಿದನು. ಆಗ್ನೇಯಾಸ್ತ್ರದಿಂದ ಅಭಿಮಂತ್ರಿತವಾಗಿದ್ದ

ಬಾಣವು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ ಅತಿಕಾಯನು ಒಡನೆಯೇ ತಾನು ಹೂಡಿದ್ದ ಬಾಣವನ್ನು ಸೂರ್ಯಾಸ್ತ್ರದೊಡನೆ ಸಂಯೋಜಿಸಿ ಲಕ್ಷ್ಮಣನ ಮೇಲೆ ಪ್ರಯೋಗಿಸಿದನು. ಆ ಎರಡು ಬಾಣಗಳ ಅಗ್ರಭಾಗಗಳೂ ತೇಜೋವಿಶಿಷ್ಟವಾಗಿದ್ದುವು. ಆಕಾಶದ ಮಧ್ಯದಲ್ಲಿ ಎದುರು-ಬದುರಾಗಿ ಬಂದ ಆ ಎರಡು ಬಾಣಗಳೂ ಎರಡು ಕಾಳಸರ್ಪಗಳಂತೆ ಪರಸ್ಪರವಾಗಿ ಸಂಘರ್ಷಿಸಿದುವು. ಸ್ವಲ್ಪಹೊತ್ತಿನಲ್ಲಿಯೇ ಎರಡೂ ಸುಟ್ಟುಹೋಗಿ ಕೆಳಕ್ಕೆ ಬಿದ್ದುವು. ಪ್ರಯೋಗಿಸಿದ ಸಮಯದಲ್ಲಿ ಎರಡು ಅಸ್ತ್ರಗಳೂ ದೇದೀಪ್ಯಮಾನವಾಗಿದ್ದುವು. ಪರಸ್ಪರವಾಗಿ ಸಂಘರ್ಷಿಸಿದನಂತರ ಎರಡೂ ಭಸ್ಮೀಭೂತವಾಗಿ ತಮ್ಮ ತೇಜಸ್ಸನ್ನು ಕಳೆದುಕೊಂಡುವು. ಭೂಮಿಯಲ್ಲಿ ಬಿದ್ದನಂತರ ಅವುಗಳಲ್ಲಿ ಕಾಂತಿಯೇ ಇರಲಿಲ್ಲ.

ಅತಿಕಾಯನು ಅತ್ಯಂತ ಕುಪಿತನಾಗಿ ತ್ವಷ್ಟ್ರದೇವತೆಯ ಮಂತ್ರವನ್ನು ಅಭಿಮಂತ್ರಿಸಿ ಐಷೀಕಾಸ್ತ್ರವನ್ನು ಲಕ್ಷ್ಮಣನ ಮೇಲೆ ಪ್ರಯೋಗಿಸಿದನು. ಆ ಮಹಾಸ್ತ್ರವನ್ನು ಲಕ್ಷ್ಮಣನು ಐಂದ್ರಾಸ್ತ್ರದ ಪ್ರಯೋಗದಿಂದ ಕತ್ತರಿಸಿದನು. ಐಷೀಕಾಸ್ತ್ರವು ನಷ್ಟವಾಗಲಾಗಿ ಕ್ರುದ್ಧನಾದ ಅತಿಕಾಯನು ಯಾಮ್ಯಾಸ್ತ್ರವನ್ನು ಬಾಣದಲ್ಲಿ ಅಭಿಮಂತ್ರಿಸಿ ಲಕ್ಷ್ಮಣನ ಮೇಲೆ ಪ್ರಯೋಗಿಸಿದನು. ಲಕ್ಷ್ಮಣನು ಆ ಮಹಾಸ್ತ್ರವನ್ನು ವಾಯವ್ಯಾಸ್ತ್ರದ ಮೂಲಕವಾಗಿ ಧ್ವಂಸಮಾಡಿದನು. ಪುನಃ ಲಕ್ಷ್ಮಣನು ಮೇಘವು ಮಳೆಗರೆಯುವಂತೆ ಅತಿಕಾಯನ ಮೇಲೆ ಬಾಣಗಳ ಮಳೆಗರೆದನು. ವಜ್ರಖಚಿತವಾಗಿದ್ದ ಅತಿಕಾಯನ ಕವಚದ ಮೇಲೆ ಬಿದ್ದ ವರ್ಷಧಾರಾರೂಪವಾಗಿದ್ದ ಆ ಬಾಣಗಳು ಅಗ್ರಭಾಗಗಳನ್ನು ಕಳೆದು ಕೊಂಡು ಕೆಳಗೆ ಬಿದ್ದುವು. ತಾನು ಬಿಟ್ಟ ಬಾಣಗಳು ವ್ಯರ್ಥವಾದುದನ್ನು ಕಂಡು ಲಕ್ಷ್ಮಣನು ಸಾವಿರಾರು ಬಾಣಗಳನ್ನು ಪುನಃ ಅತಿಕಾಯನ ಮೇಲೆ ಸುರಿಸಿದನು. ಅತಿಕಾಯನು ಧರಿಸಿದ್ದ ಕವಚವು ಅಭೇದ್ಯವಾಗಿದ್ದುದರಿಂದ ಅಷ್ಟು ಬಾಣಗಳ ಪ್ರಹಾರದಿಂದಲೂ ರಾಕ್ಷಸನಿಗೆ ಸ್ವಲ್ಪವೂ ವ್ಯಥೆಯಾಗಲಿಲ್ಲ. ಅನಂತರ ಅತಿಕಾಯನು ಸರ್ಪಸದೃಶವಾದ ಭಯಂಕರ ವಾದ ಬಾಣವೊಂದನ್ನು ಲಕ್ಷ್ಮಣನ ಮೇಲೆ ಪ್ರಯೋಗಿಸಿದನು. ಆ ಬಾಣವು ಮರ್ಮಸ್ಥಳದಲ್ಲಿ ಬಿದ್ದು ಲಕ್ಷ್ಮಣನನ್ನು ಗಾಯಗೊಳಿಸಿತು. ಶತ್ರುತಾಪನ ನಾದ ಲಕ್ಷ್ಮಣನು ಮುಹೂರ್ತಕಾಲ ಎಚ್ಚರದಪ್ಪಿದನು. ಅನಂತರ ಚೇತರಿಸಿ

ಕೊಂಡು ಶ್ರೇಷ್ಠವಾದ ನಾಲ್ಕು ಬಾಣಗಳಿಂದ ಅತಿಕಾಯನ ರಥದ ಕುದುರೆಗಳನ್ನೂ ಸಾರಥಿಯನ್ನೂ ಸಂಹರಿಸಿದನು. ಬಾಣಗಳ ವರ್ಷದಿಂದ ಧ್ವಜವನ್ನು ಧ್ವಂಸಮಾಡಿದನು. ಬಳಿಕ ಗಾಬರಿಗೊಳ್ಳದಿದ್ದ ಲಕ್ಷ್ಮಣನು ಅತಿಕಾಯನ ವಧಾರ್ಥವಾಗಿ ಅಮೋಘವಾದ ಬಾಣಗಳನ್ನು ಅತಿಕಾಯನ ಮೇಲೆ ಪ್ರಯೋಗಿಸಿದನು. ಅಷ್ಟು ಬಾಣಗಳನ್ನು ಪ್ರಯೋಗಿಸಿಯೂ ಲಕ್ಷ್ಮಣನಿಗೆ ಅತಿಕಾಯನ ಶರೀರದಲ್ಲಿ ಒಂದು ಗಾಯವನ್ನು ಕೂಡ ಮಾಡಲು ಸಾಧ್ಯವಾಗಲಿಲ್ಲ. ಆ ವೇಳೆಗೆ ಸರಿಯಾಗಿ ವಾಯುದೇವನು ಲಕ್ಷ್ಮಣನ ಬಳಿಗೆ ಬಂದು ಹೇಳಿದನು :

"ಲಕ್ಷ್ಮಣ! ಇವನು ಬ್ರಹ್ಮನು ಕೊಟ್ಟಿರುವ ವರದ ಪ್ರಭಾವದಿಂದಾಗಿ ಅಭೇದ್ಯವಾದ ಕವಚದಿಂದ ಸಮಾವೃತನಾಗಿರುವನು. ಆದುದರಿಂದ ಇವನನ್ನು ಬ್ರಹ್ಮಾಸ್ತ್ರದಿಂದ ಪ್ರಹರಿಸು. ಅದೊಂದರಿಂದಲೇ ಇವನು ವಧಿಸಲ್ಪಡತಕ್ಕವನು. ಬೇರೆ ಯಾವ ಅಸ್ತ್ರದಿಂದಲೂ ಇವನನ್ನು ವಧಿಸಲು ಸಾಧ್ಯವಾಗುವುದಿಲ್ಲ."

ವಾಯುದೇವನು ಹೇಳಿದ ಮಾತನ್ನು ಕೇಳಿ ಇಂದ್ರಸಮಾನಪರಾಕ್ರಮಿಯಾದ ಲಕ್ಷ್ಮಣನು ಭಯಂಕರವಾದ ವೇಗದಿಂದ ಕೂಡಿದ್ದ ಬಾಣವನ್ನು ಬತ್ತಳಿಕೆಯಿಂದ ಹೊರತೆಗೆದು ಬ್ರಹ್ಮಾಸ್ತ್ರದಿಂದ ಅಭಿಮಂತ್ರಿಸಿ ಧನುಸ್ಸಿನಲ್ಲಿ ಹೂಡಿದನು. ಸೌಮಿತ್ರಿಯು ಹರಿತವಾದ ಅಲುಗಿನಿಂದ ಕೂಡಿದ್ದ ಶ್ರೇಷ್ಠವಾದ ಆ ಬ್ರಹ್ಮಾಸ್ತ್ರವನ್ನು ಧನುಸ್ಸಿನಲ್ಲಿ ಹೂಡಲು–ದಶದಿಕ್ಕುಗಳೂ, ಸೂರ್ಯ-ಚಂದ್ರ-ಮಹಾಗ್ರಹಗಳೂ, ಭೂಮ್ಯಂತರಿಕ್ಷಗಳೂ ಅಳ್ಳಾಡಿಹೋದುವು. ಯಮದೂತಸದೃಶವಾದ, ವಜ್ರಾಯುಧಕ್ಕೆ ಸಮಾನವಾದ, ಸುಂದರವಾದ ರೆಕ್ಕೆಗಳಿಂದ ಕೂಡಿದ್ದ ಬಾಣವನ್ನು ಬ್ರಹ್ಮಾಸ್ತ್ರದಿಂದ ಸಂಯೋಜಿಸಿ ಧನುಸ್ಸಿನಲ್ಲಿ ಹೂಡಿ ಲಕ್ಷ್ಮಣನು ಇಂದ್ರನ ಶತ್ರುವಾದ ರಾವಣನ ಮಗನ ಮೇಲೆ ಪ್ರಯೋಗಿಸಿದನು. ಲಕ್ಷ್ಮಣನಿಂದ ಬಿಡಲ್ಪಟ್ಟ, ವಾಯುವಿನ ವೇಗಕ್ಕೆ ಸಮಾನವಾದ ಉಗ್ರವೇಗದಿಂದ ಕೂಡಿದ್ದ, ಗರುಡನ ರೆಕ್ಕೆಗಳನ್ನು ಹೊಂದಿದ್ದ, ಶ್ರೇಷ್ಠವಾದ ವಜ್ರದಿಂದ ಚಿತ್ರಿತವಾಗಿದ್ದ, ತನ್ನ ಮೇಲೆ ಬೀಳಲು ರಭಸದಿಂದ ಬರುತ್ತಿದ್ದ ಬ್ರಹ್ಮಾಸ್ತ್ರವನ್ನು ಅತಿಕಾಯನು ನೋಡಿದನು. ಒಡನೆಯೇ ಅತಿಕಾಯನು ನಿಶಿತವಾದ ಅನೇಕ ಬಾಣಗಳಿಂದ ಅದನ್ನು ಪ್ರಹರಿಸಿದನು. ಆದರೂ

ಗರುಡನ ವೇಗದಂತೆ ವೇಗವುಳ್ಳ ಆ ಬಾಣವು ಬಹಳ ವೇಗವಾಗಿ ಅತಿ ಕಾಯನ ಬಳಿಗೆ ಬಂದೇ ಬಿಟ್ಟಿತು. ಸಮೀಪಕ್ಕೆ ಬಂದ ಪ್ರಜ್ವಲಿಸುವ ಅಂತಕನಂತೆಯೂ ಮತ್ತು ಕಾಲನಂತೆಯೂ ಇದ್ದ ಆ ಬ್ರಹ್ಮಾಸ್ತ್ರವನ್ನು ನೋಡಿಯೂ ಅತಿಕಾಯನು ಮೂರ್ಛಿತನಾಗದೇ ಶಕ್ತಿ, ಋಷ್ಟಿ, ಗದೆ, ಕುಠಾರ, ಶೂಲ– ಇವೇ ಮುಂತಾದ ಆಯುಧಗಳಿಂದಲೂ ಬಾಣಗಳಿಂದಲೂ ಪ್ರಹರಿಸಿದನು. ಆದರೆ ಅಗ್ನಿಯಂತೆ ಪ್ರಜ್ವಲಿಸುತ್ತಿದ್ದ ಆ ಬ್ರಹ್ಮಾಸ್ತ್ರವು ಅತಿಕಾಯನು ಪ್ರಯೋಗಿಸಿದ ಅದ್ಭುತವಾದ ಅಸ್ತ್ರಗಳೆಲ್ಲವನ್ನೂ ವ್ಯರ್ಥಗೊಳಿಸಿ ಕಿರೀಟದಿಂದ ಸಮಲಂಕೃತವಾಗಿದ್ದ ಅತಿಕಾಯನ ಶಿರಸ್ಸನ್ನು ತುಂಡರಿಸಿತು. ಲಕ್ಷ್ಮಣನ ಬಾಣ ದಿಂದ ಕತ್ತರಿಸಲ್ಪಟ್ಟ ಕಿರೀಟದಿಂದ ಕೂಡಿದ್ದ ಆ ತಲೆಯು ಹಿಮಾಲಯದ ಶಿಖರದಂತೆ ಭೂಮಿಯ ಮೇಲೆ ಬಿದ್ದಿತು. ಅತಿಕಾಯನು ತೊಟ್ಟಿದ್ದ ವಸ್ತ್ರಾಭರಣಗಳೆಲ್ಲವೂ ಚೆಲ್ಲಾಪಿಲ್ಲಿಯಾಗಿ ಬಿದ್ದುವು. ಅವನು ಭೂಮಿಯಲ್ಲಿ ಬಿದ್ದುದನ್ನು ಕಂಡು ಅಳಿದುಳಿದಿದ್ದ ಎಲ್ಲ ರಾಕ್ಷಸರೂ ದುಃಖಗೊಂಡರು. ಅವರೆಲ್ಲರೂ ವಿಷಣ್ಣವದನರಾಗಿದ್ದರು. ದೀನರಾಗಿದ್ದರು. ವಾನರರಿಂದ ಪೆಟ್ಟು ತಿಂದು ಆಯಾಸಗೊಂಡಿದ್ದರು. ಬಹುಸಂಖ್ಯಾತರಾದ ರಾಕ್ಷಸರು ಒಡನೆಯೇ ವಿಕಾರವಾದ ಧ್ವನಿಯಿಂದ ಕೂಗಿಕೊಳ್ಳಲು ಪ್ರಾರಂಭಿಸಿದರು. ಸೇನಾ ನಾಯಕನು ಸತ್ತುಹೋಗಲಾಗಿ ರಾಕ್ಷಸರಿಗೆ ಯುದ್ಧಮಾಡುವುದರಲ್ಲಿ ಉತ್ಸಾಹವೇ ಉಳಿಯಲಿಲ್ಲ. ಎಲ್ಲರೂ ಭಯಭೀತರಾಗಿ ಒಡನೆಯೇ ಲಂಕಾ ಪಟ್ಟಣದ ಕಡೆಗೆ ಧಾವಿಸಿದರು.

ಭಯಂಕರನಾದ, ಬಲಿಷ್ಠನಾದ ಮತ್ತು ದುರ್ಜಯನಾದ ಶತ್ರುವು ಹತನಾಗಲು-ವಾನರಸೈನಿಕರು ಹರ್ಷೋತ್ಸಾಹಗಳಿಂದ ಉಬ್ಬಿಹೋದರು. ಅವರ ಮುಖಗಳು ಅರಳಿದ ಕಮಲಗಳಂತೆ ಶೋಭಾಯಮಾನವಾಗಿ ಕಾಣು ತ್ತಿದ್ದುವು. ಅಭೀಷ್ಟವಾದ ವಿಜಯಕ್ಕೆ ಕಾರಣನಾದ ವೀರಲಕ್ಷ್ಮಣನನ್ನು ವಾನರರೆಲ್ಲರೂ ಬಹಳವಾಗಿ ಪ್ರಶಂಸೆಮಾಡಿದರು.

ಅತಿಬಲನಾದ, ಮೇಘಸದೃಶನಾದ ಅತಿಕಾಯನನ್ನು ಲಕ್ಷ್ಮಣನು ಯುದ್ಧದಲ್ಲಿ ಸಂಹರಿಸಿ ಸಂತುಷ್ಟನಾಗಿ ವಾನರಸಮೂಹದಿಂದಲೂ ಪೂಜಿಸ ಲ್ಪಟ್ಟವನಾಗಿ ತ್ವರೆಯಿಂದ ಶ್ರೀರಾಮನ ಬಳಿಗೆ ಹೋದನು.

ಳ೧ನೆಯ ಸರ್ಗವು ಮುಗಿಯಿತು.

ರಾವಣನ ಚಿಂತೆ : ಲಂಕಾಪಟ್ಟಣವನ್ನು ಸುರಕ್ಷಿತವಾಗಿಡಲು ಆದೇಶ

ಅತಿಕಾಯಂ ಹತಂ ಶ್ರುತ್ವಾ ಲಕ್ಷ್ಮಣೇನ ಮಹೌಜಸಾ ।
ಉದ್ವೇಗಮಗಮದ್ರಾಜಾ ವಚನಂ ಚೇದಮಬ್ರವೀತ್ ॥೧॥

ಮಹಾವೀರನಾದ ಲಕ್ಷ್ಮಣನಿಂದ ಅತಿಕಾಯನು ಸಂಹೃತನಾದ ವಾರ್ತೆಯನ್ನು ಕೇಳಿ ರಾವಣನು ಉದ್ವಿಗ್ನನಾಗಿ ಹೇಳಿದನು :

"ಮಹಾಕೋಪಿಷ್ಠನಾದ ಧೂಮ್ರಾಕ್ಷ, ಸರ್ವಶಸ್ತ್ರಧಾರಿಗಳಲ್ಲಿಯೂ ಶ್ರೇಷ್ಠನಾದ ಅಕಂಪನ, ಪ್ರಹಸ್ತ, ಕುಂಭಕರ್ಣ–ಮಹಾಬಲರಾದ ಇವರೆಲ್ಲರೂ ಯುದ್ಧಾಕಾಂಕ್ಷಿಗಳಾಗಿಯೇ ಇದ್ದರು. ಹಲವಾರು ಬಾರಿ ಶತ್ರುಸೈನಿಕರನ್ನು ಜಯಿಸಿದ್ದರು. ಶತ್ರುಗಳಿಂದ ಯಾವಾಗಲೂ ಪರಾಜಿತರಾಗಿರಲಿಲ್ಲ. ನಾನಾಶಸ್ತ್ರವಿಶಾರದರಾದ, ಮಹಾಕಾಯರಾದ, ವೀರರಾದ ಆ ಎಲ್ಲ ರಾಕ್ಷಸರೂ ಅನಾಯಾಸವಾಗಿ ಮಹಾಕಾರ್ಯಗಳನ್ನು ಮಾಡುವ ರಾಮನಿಂದ ಹತರಾದರು. ಅವರೇ ಅಲ್ಲದೇ ಇನ್ನೂ ಶೂರರಾದ ಅನೇಕ ರಾಕ್ಷಸರನ್ನೂ ರಾಮನು ಸಂಹರಿಸಿದನು. ವಿಖ್ಯಾತಪರಾಕ್ರಮನಾದ ನನ್ನ ಮಗ ಇಂದ್ರ ಜಿತುವು ವರದಾನದಿಂದ ಪ್ರಾಪ್ತವಾಗಿದ್ದ ನಾಗಸ್ವರೂಪವಾದ ಬಾಣಗಳಿಂದ ಆ ಇಬ್ಬರು ರಾಜಕುಮಾರರನ್ನೂ ಬಂಧಿಸಿದ್ದನು. ಆ ಘೋರಬಂಧನದಿಂದ ಅವರನ್ನು ಮುಕ್ತರನ್ನಾಗಿ ಮಾಡಲು ಮಹಾಬಲರಾದ ಸುರಾಸುರರಿಂದಲೂ, ಯಕ್ಷ-ಗಂಧರ್ವ-ಪನ್ನಗರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಆದರೂ ಶರಬಂಧನದಿಂದ ಸಹೋದರರಾದ ರಾಮ-ಲಕ್ಷ್ಮಣರು ಮುಕ್ತರಾದರು. ಯಾರದ್ದಾದರೂ ಪ್ರಭಾವದಿಂದ ಅವರು ಮುಕ್ತರಾದರೋ? ಮಾಯಾವಿದ್ಯೆಯಿಂದ ಮುಕ್ತರಾದರೋ? ಅಥವಾ ಮೋಹಗೊಳಿಸುವ ವಿದ್ಯೆಯಿಂದೇನಾದರೂ ಬಿಡುಗಡೆ ಹೊಂದಿದರೋ?–ಎಂಬುದು ನನಗೆ ತಿಳಿಯದು. ನನ್ನ ಆಜ್ಞೆಯಂತೆ ಯಾವ ಯಾವ ಶೂರರು ಯುದ್ಧಕ್ಕೆ ಹೋದರೋ–ಅವರೆಲ್ಲರೂ ಮಹಾಬಲಿಷ್ಠರಾದ ವಾನರಸೈನಿಕರಿಂದ ಹತರಾದರು. ರಾಮ-ಲಕ್ಷ್ಮಣರನ್ನೂ,

ಸುಗ್ರೀವ, ವಿಭೀಷಣರನ್ನೂ ಯುದ್ಧದಲ್ಲಿ ಸಂಹರಿಸುವ ಸಾಮರ್ಥ್ಯವಿರುವ ಒಬ್ಬ ವೀರನನ್ನೂ ನಾನೀಗ ನಮ್ಮ ಪಕ್ಷದಲ್ಲಿ ಕಾಣುತ್ತಿಲ್ಲ.

ಅಹೋ ನು ಬಲವಾನ್ರಾಮೋ ಮಹದಸ್ತ್ರಬಲಂ ಚ ವೈ ।
ಯಸ್ಯ ವಿಕ್ರಮಮಾಸಾದ್ಯ ರಾಕ್ಷಸಾ ನಿಧನಂ ಗತಾಃ ॥೧೦॥

ನಿಶ್ಚಯವಾಗಿಯೂ ರಾಮನು ಬಲಿಷ್ಠನೇ ಸರಿ. ಅವನಿಗೆ ಮಹಾಸ್ತ್ರಗಳ ಬಲವೂ ಇದೆ. ಅವನ ಅತುಲಪರಾಕ್ರಮದಿಂದಾಗಿ ರಾಕ್ಷಸರೆಲ್ಲರೂ ನಿಧನರಾದರು.

ತಂ ಮನ್ಯೇ ರಾಘವಂ ವೀರಂ ನಾರಾಯಣಮನಾಮಯಮ್ ।
ತದ್ಭಯಾದ್ಧಿ ಪುರೀ ಲಙ್ಕಾ ಪಿಹಿತದ್ವಾರತೋರಣಾ ॥೧೧॥

ನಾನು ಆ ರಾಘವನನ್ನು ರೋಗ-ಶೋಕಗಳಿಂದ ರಹಿತನಾದ ಶ್ರೀಮನ್ನಾರಾಯಣನೆಂದೇ ಭಾವಿಸುತ್ತೇನೆ. ಅವನ ಭಯದಿಂದಲೇ ಲಂಕಾ ಪಟ್ಟಣದ ಹೊರಬಾಗಿಲುಗಳೂ ಹೆಬ್ಬಾಗಿಲುಗಳೂ ಮುಚ್ಚಲ್ಪಟ್ಟಿವೆ.

ನೀವೆಲ್ಲರೂ ಶಿಬಿರಗಳಲ್ಲಿ ಜಾಗರೂಕರಾಗಿದ್ದುಕೊಂಡು ಪಟ್ಟಣವನ್ನು ರಕ್ಷಿಸಬೇಕು. ಅದರಲ್ಲಿಯೂ ವಿಶೇಷವಾಗಿ ಸೀತೆಯಿರುವ ಅಶೋಕವನ ವನ್ನಂತೂ ಜಾಗರೂಕತೆಯಿಂದ ರಕ್ಷಿಸಬೇಕು. ಅಶೋಕವನಕ್ಕೆ ಯಾರು ಯಾವಾಗ ಪ್ರವೇಶ ಮಾಡುತ್ತಾರೆ? ಯಾರು ಯಾವಾಗ ಅಲ್ಲಿಂದ ಹೋಗು ತ್ತಾರೆ?–ಎಂಬುದೆಲ್ಲವೂ ನನಗೆ ತಿಳಿದಿರಬೇಕು. ಸೈನಿಕರ ಶಿಬಿರಗಳಿರುವ ಕಡೆಗಳಲ್ಲಿ ನಿಮ್ಮೆಲ್ಲರ ಲಕ್ಷ್ಯವೂ ಇರಬೇಕು. ನೀವೆಲ್ಲರೂ ನಿಮ್ಮ ಸೈನಿಕರೊಡನೆ ಲಂಕೆಯ ಎಲ್ಲ ಕಡೆಗಳಲ್ಲಿಯೂ ಇರಬೇಕು. ಪ್ರದೋಷಕಾಲ- ಅರ್ಧರಾತ್ರಿ ಮತ್ತು ಪ್ರಾತಃಕಾಲಗಳಲ್ಲಿ ವಾನರರ ಚಲನ-ವಲನಗಳನ್ನು ಲಕ್ಷಿಸುತ್ತಲೇ ಇರಬೇಕು. ವಾನರರ ವಿಷಯದಲ್ಲಿ ಯಾವಾಗಲೂ ಉಪೇಕ್ಷೆ ಯಿಂದಿರಬಾರದು. ಶತ್ರುಗಳ ಸೈನ್ಯವು ಯುದ್ಧಕ್ಕೆ ಸಿದ್ಧತೆಯನ್ನು ನಡೆಸುತ್ತಿರು ವುದೇ? ನಮ್ಮ ಮಹಾದ್ವಾರಗಳನ್ನು ಆಕ್ರಮಿಸಿರುವುದೇ? ಯುದ್ಧಮಾಡಲು ಆಸಕ್ತಿಯಿಲ್ಲದೇ ಅಸ್ತವ್ಯಸ್ತವಾಗಿ ನಿಂತಿರುವುದೇ?–ಈ ಎಲ್ಲ ವಿಷಯಗಳನ್ನೂ ಪದೇ-ಪದೇ ಗಮನಿಸುತ್ತಲೇ ಇರಬೇಕು.”

ಮಹಾಬಲರಾದ ರಾಕ್ಷಸರು ಲಂಕೆಗೆ ಅಧಿಪತಿಯಾದ ರಾವಣನ ಮಾತನ್ನು ಕೇಳಿ ಅವನ ಆಜ್ಞೆಯನ್ನು ಯಥಾವತ್ತಾಗಿ ಪಾಲಿಸುತ್ತಿದ್ದರು.

ರಾವಣನು ರಾಕ್ಷಸನಾಯಕರೆಲ್ಲರಿಗೂ ಹೀಗೆ ಆದೇಶವನ್ನಿತ್ತು ಹೃದಯದಲ್ಲಡಗಿದ್ದ ಕೋಪವೆಂಬ ಮುಳ್ಳಿನಿಂದ ಬಾಧೆಪಡುತ್ತಾ ದೀನನಾಗಿ ತನ್ನ ಅರಮನೆಯನ್ನು ಪ್ರವೇಶಿಸಿದನು. ರಾಕ್ಷಸರ ಅಧಿಪತಿಯಾಗಿದ್ದ, ಮಹಾ ಬಲನಾದ, ಪ್ರದೀಪ್ತವಾಗಿದ್ದ ಕೋಪವೆಂಬ ಅಗ್ನಿಯಿಂದ ಉರಿದುಹೋಗು ತ್ತಿದ್ದ ರಾವಣನು ಪುತ್ರನ ಮರಣದ ವಿಷಯವನ್ನೇ ಚಿಂತಿಸುತ್ತಾ ಬಾರಿ-ಬಾರಿಗೂ ನಿಟ್ಟುಸಿರುಗಳನ್ನು ಬಿಡುತ್ತಿದ್ದನು.

೭೨ನೆಯ ಸರ್ಗವು ಮುಗಿಯಿತು.

ಎಂಟನೆಯ ಸಂಪುಟವು ಮುಗಿಯಿತು.

ಶ್ರೀಕೃಷ್ಣಾರ್ಪಣಮಸ್ತು ಶ್ರೀ ಸದ್ಗುರುಚರಣಾರವಿನ್ದಾರ್ಪಣಮಸ್ತು.
ಓಂ ತತ್ಸತ್

ಪರಿಶಿಷ್ಟ

ನಲಸೇತು

ನಲನು ಸೇತುವೆಯನ್ನು ಕಟ್ಟಿದ ವಿಷಯವು ಲೋಕಪ್ರಸಿದ್ಧವಾಗಿದೆ. ಅವನು ಹೇಗೆ ಕಟ್ಟಿದನೆಂಬ ವಿಷಯವು ವಾಲ್ಮೀಕಿರಾಮಾಯಣದಲ್ಲಿ ಸ್ಪಷ್ಟವಾಗಿಯೇ ಇದೆ. ವಾನರರು ಮೊದಲು ಮರಗಳನ್ನು ಕಿತ್ತುತರುತ್ತಾರೆ. ಅನಂತರ ಕಲ್ಲುಬಂಡೆಗಳನ್ನು ತರುತ್ತಾರೆ. ಮರಗಳು ತೇಲುತ್ತವೆ. ಅದರ ಮೇಲೆ ಕಲ್ಲುಬಂಡೆಗಳನ್ನು ಯಥೋಕ್ತವಾದ ಪ್ರಮಾಣದಲ್ಲಿ ಹಾಕಿದರೆ ಸೇತುವೆಯು ಭದ್ರವಾಗಿ ನಿಲ್ಲುತ್ತದೆ. ನೂರು ಯೋಜನಗಳ ಉದ್ದಕ್ಕೆ ಬಳಸಿದ ವೃಕ್ಷಗಳೆಷ್ಟು? ಬಂಡೆಗಳೆಷ್ಟು?—ಎಂಬುದನ್ನು ನಾವೀಗ ಊಹಿಸಲೂ ಸಾಧ್ಯವಾಗುವುದಿಲ್ಲ. ಆದರೂ ನಲನು ಶಿಲ್ಪಶಾಸ್ತ್ರದಲ್ಲಿ ಪ್ರವೀಣನಾಗಿದ್ದನು. ವೃಕ್ಷಗಳನ್ನೂ ಬಂಡೆಗಳನ್ನೂ ಉಪಯೋಗಿಸಿಕೊಂಡು ಸೇತುವೆಯನ್ನು ಕಟ್ಟಿದನು. ಇದು ವಾಲ್ಮೀಕಿರಾಮಾಯಣ, ತುಲಸೀರಾಮಾಯಣ, ಅಧ್ಯಾತ್ಮ ರಾಮಾಯಣಗಳಲ್ಲಿರುವ ಉಲ್ಲೇಖ.

ತತೋಽತಿಹೃಷ್ಟಃ ಪ್ಲವಗೇನ್ದ್ರಯೂಥಪೈ-
ರ್ಮಹಾನಗೇನ್ದ್ರಪ್ರತಿಮೈರ್ಯುತೋ ನಲಃ ।
ಬಬನ್ಧಸೇತುಂ ಶತಯೋಜನಾಯುತಂ
ಸುವಿಸ್ತೃತಂ ಪರ್ವತಪಾದಪೈರ್ದೃಢಮ್ ॥೮೬॥

ಅಧ್ಯಾತ್ಮರಾಮಾಯಣ-ಯುದ್ಧಕಾಂಡ ಸರ್ಗ ೩

ಅತಿ ಉತಂಗ ಗಿರಿಪಾದಪ ಲೀಲಹಿಂ ಲೇಹಿಂ ಉತಾಇ ।
ಆನಿ ದೇಹಿಂ ನಲ ನೀಲ ಹಿ ರಚಹಿಂ ತೇ ಸೇತು ಬನಾಇ ॥೧॥

ತುಲಸೀರಾಮಾಯಣ-ಲಂಕಾಕಾಂಡ

'ನಲನು ಮುಟ್ಟಿದ ಬಂಡೆಗಳು ಸಮುದ್ರದಲ್ಲಿ ತೇಲುತ್ತಿದ್ದುವು. ಅದರಿಂದ ನಲನಿಗೆ ಅಷ್ಟು ದೂರದ ಸೇತುವೆಯನ್ನು ಕಟ್ಟಲು ಸಾಧ್ಯವಾಯಿತು'—ಎಂಬ ಕಥೆಯೂ ಪ್ರಚಲಿತವಾಗಿದೆ.

ಇದಕ್ಕೆ ಆಧಾರ ನಾವು ಅನುವಾದಕ್ಕೆ ಇಟ್ಟುಕೊಂಡಿರುವ ರಾಮಾಯಣದ ಪ್ರತಿಗಳಲ್ಲಿಲ್ಲ. ಗೋವಿಂದರಾಜೀಯ, ಶಿರೋಮಣಿ ಮತ್ತು ತಿಲಕ ವ್ಯಾಖ್ಯಾನಗಳಲ್ಲಿಯೂ ಇದರ ಬಗೆಗೆ ಪ್ರಸ್ತಾಪವಿಲ್ಲ. ಓರಿಯಂಟಲ್

ಇನ್‌ಸ್ಟಿಟ್ಯೂಟ್ ಬರೋಡ–ಇವರು ಪ್ರಕಟಿಸಿರುವ ರಾಮಾಯಣದಲ್ಲೂ ಇದರ ಪ್ರಸ್ತಾಪವಿಲ್ಲ. ದಕ್ಷಿಣದೇಶದಲ್ಲಿ ಪ್ರಕಟಿಸಿರುವ ಒಂದು ಪುಸ್ತಕದಲ್ಲಿ ಮಾತ್ರ ಇದರ ಪ್ರಸ್ತಾಪವಿದೆ. ಈ ಪ್ರಕರಣವು ವಿಚಾರವಂತರ ವಿಮರ್ಶೆಗೂ ಯೋಗ್ಯವಾದ ಭಾಗವಾಗಿದೆ.

ನಲನು ಶ್ರೀರಾಮನಿಗೆ ಹೇಳುತ್ತಾನೆ :

ಮಮ ಮಾತುರ್ವರೋ ದತ್ತೋ ಮನ್ದರೇ ವಿಶ್ವಕರ್ಮಣಾ ।
ಔರಸಸ್ತಸ್ಯ ಪುತ್ರೋಽಹಂ ಸದೃಶೋ ವಿಶ್ವಕರ್ಮಣಾ ॥

ಮಂದರಪರ್ವತದಲ್ಲಿ ವಿಶ್ವಕರ್ಮನು ನನ್ನ ತಾಯಿಗೆ ವರವನ್ನಿತ್ತನು. ಅದರ ಫಲವಾಗಿ ನಾನು ಅವನಿಗೆ ಔರಸಪುತ್ರನಾಗಿ ಹುಟ್ಟಿದೆನು ಮತ್ತು ಅವನಿಗೆ (ಶಿಲ್ಪವಿದ್ಯೆಯಲ್ಲಿ) ಸಮಾನನೂ ಆಗಿದ್ದೇನೆ. ಇದು ಶ್ಲೋಕದ ಅರ್ಥ.

ಇದು ಶಿರೋಮಣಿ ಮತ್ತು ತಿಲಕವ್ಯಾಖ್ಯಾನಕಾರರೂ ಮತ್ತು ಓರಿಯಂಟಲ್ ಇನ್‌ಸ್ಟಿಟ್ಯೂಟಿನವರೂ ಅಂಗೀಕರಿಸಿರುವ ಪಾಠ.

ಗೋವಿಂದರಾಜೀಯ ವ್ಯಾಖ್ಯಾನಕಾರರ ಪಾಠದಲ್ಲಿ ಮಧ್ಯದಲ್ಲಿ ಒಂದು ಸಾಲು ಸೇರಿದೆ.

ಮಯಾ ತು ಸದೃಶಃ ಪುತ್ರಸ್ತವ ದೇವಿ ಭವಿಷ್ಯತಿ ।

ದೇವಿ! ನನಗೆ ಸದೃಶನಾದ ಮಗನು ನಿನಗೆ ಹುಟ್ಟುತ್ತಾನೆ.

ಎಂತಹ ವರವೆಂಬುದು ಈ ಪಾಠದಿಂದ ಸ್ಪಷ್ಟವಾಗಿದೆ. ಈ ವರದ ಪ್ರಕರಣವನ್ನೇ ಆಧರಿಸಿ ಮತ್ತೊಂದು ಪಾಠವು ಹೀಗಿದೆ :

ಮಮ ಮಾತುರ್ವರೋ ದತ್ತೋ ಮನ್ದರೇ ವಿಶ್ವಕರ್ಮಣಾ ।
ಔರಸಸ್ತಸ್ಯ ಪುತ್ರೋಽಹಂ ಸದೃಶೋ ವಿಶ್ವಕರ್ಮಣಾ ॥

ಮಂದರಪರ್ವತದಲ್ಲಿ ನನ್ನ ತಾಯಿಗೆ ವಿಶ್ವಕರ್ಮನು ವರವೊಂದನ್ನು ದಯಪಾಲಿಸಿದನು. ನಾನು ವಿಶ್ವಕರ್ಮನ ಔರಸಪುತ್ರನಾಗಿದ್ದೇನೆ. ಶಿಲ್ಪ ವಿದ್ಯೆಯಲ್ಲಿ ಅವನಿಗೆ ಸಮಾನನೂ ಆಗಿದ್ದೇನೆ.

ಪಿತ್ರೋಃ ಪ್ರಸಾದಾತ್ಕಾಕುತ್ಸ್ಥ ತತಃ ಸೇತುಂ ಕರೋಮ್ಯಹಮ್ ॥

ನನ್ನ ತಂದೆಯ ಅನುಗ್ರಹದಿಂದ ನಾನು ಸೇತುವೆಯನ್ನು ಕಟ್ಟುತ್ತೇನೆ.

ಗೋವಿಂದರಾಜೀಯ ಪಾಠದಲ್ಲಿ ಬಂದಿರುವ ಮಯಾ ತು ಸದೃಶಃ ಪುತ್ರಸ್ತವ ದೇವಿ ಭವಿಷ್ಯತಿ ॥ ಎಂಬ ಶ್ಲೋಕಾರ್ಧವು ಇಲ್ಲಿ ಇಲ್ಲದಿರುವುದನ್ನು ಗಮನಿಸಬೇಕು. ಇದನ್ನು ಬಿಟ್ಟಿರುವುದರಿಂದ ಯಾವ ವರವೆಂಬುದು ಹಾಗೆಯೇ ಉಳಿಯಿತು.

ನಲಸ್ಯ ವಚನಂ ಶ್ರುತ್ವಾ ರಾಘವೋ ರಘುನನ್ದನಃ ।
ಮಾತ್ರೇ ಕಿಮರ್ಥಂ ತೇ ತಾತೋ ವರಂ ತಸ್ಯೈ ದದೌ ಪುರಾ ॥

ನಲನ ಮಾತನ್ನು ಕೇಳಿ ಶ್ರೀರಾಮನು ಪ್ರಶ್ನಿಸುತ್ತಾನೆ. 'ನಿಮ್ಮ ತಾಯಿಗೆ ನಿಮ್ಮ ತಂದೆಯು ವರವನ್ನೇಕೆ ಕೊಟ್ಟನು? ಈ ವಿಷಯವನ್ನು ನನಗೆ ಹೇಳು.'

ಶ್ರೀರಾಮನ ಮಾತನ್ನು ಕೇಳಿ ನಲನು ಹೇಳುತ್ತಾನೆ :

ಪಿತಾ ಮೇ ಮನ್ದರಪ್ರಸ್ಥೇ ವಿಶ್ವಕರ್ಮಾ ತಪಶ್ಚರನ್ ।
ಅಹಂ ಬಾಲತಯಾ ಕ್ರೀಡನ್ನೇಕದಾ ರಘುಸತ್ತಮ ॥

ತಪಸ್ವಿನಾಪಿ ತಾತೇನ ಪೂಜಿತಂ ತೇನ ದೈವತಮ್ ।
ಅಜ್ಞಾನಾತ್ಸಾಗರೇ ಮಗ್ನಂ ಪುನಃ ಪುನರವಾಕಿರಮ್ ॥

ಮಾತಾ ವಿಚಿನ್ತ್ಯ ಪಿತ್ರೇ ಮೇ ದದೌ ದೈವಮತನ್ದ್ರಿತಾ ।
ಧ್ಯಾನಾವಸಾನೇ ಜನಕೋ ಮಾಮುವೋಚದ್ರುಷಾನ್ವಿತಃ ॥

ಇತಃ ಪ್ರಭೃತಿ ಯತ್ಕ್ಷಿಪ್ತಂ ತನ್ಮಗ್ನಂ ನ ಭವಿಷ್ಯತಿ ।
ತತಸ್ತದನು ಮಾಂ ತೂರ್ಣಮಿತ್ಯವೋಚತ್ಪಿತಾ ಮಮ ॥

"ನನ್ನ ತಂದೆಯಾದ ವಿಶ್ವಕರ್ಮನು ಮಂದರಪರ್ವತದಲ್ಲಿ ತಪಸ್ಸು ಮಾಡುತ್ತಿದ್ದನು. ನಮ್ಮ ತಂದೆಯು ತಪಸ್ವಿಯಾಗಿದ್ದರೂ ವಿಗ್ರಹವನ್ನಿಟ್ಟು ಕೊಂಡು ಪೂಜೆಮಾಡುತ್ತಿದ್ದನು. ನಾನು ಬಾಲ್ಯಚಾಪಲ್ಯದಿಂದ ಆ ವಿಗ್ರಹ ವನ್ನೆತ್ತಿ ನೀರಿನಲ್ಲಿ ಮುಳುಗಿಸಿದೆನು. ನನ್ನ ತಾಯಿಯು ಅದನ್ನೆತ್ತಿಕೊಂಡು ಬಂದು ನನ್ನ ತಂದೆಗೆ ಪೂಜೆಮಾಡಲು ಕೊಡುತ್ತಿದ್ದಳು. ನಾನು ಪುನಃ ಪುನಃ ಹಾಗೆಯೇ ಮಾಡುತ್ತಿದ್ದೆನು. ಧ್ಯಾನಕಾರ್ಯವು ಮುಗಿದನಂತರ ನನ್ನ ತಂದೆಯು ಕುಪಿತನಾಗಿ–'ಇನ್ನು ಮುಂದೆ ನೀನು ಯಾವುದನ್ನೇ ನೀರಿನಲ್ಲಿ ಹಾಕಿದರೂ ಅದು ಮುಳುಗುವುದಿಲ್ಲ"–ಎಂದು ಹೇಳಿದನು.

ಇಷ್ಟು ಕಥಾಭಾಗವು ಮಧ್ಯದಲ್ಲಿ ಸೇರಿಕೊಂಡಿದೆ. ವಿಶ್ವಕರ್ಮನು ಕೋಪದಿಂದ ಮಗನಿಗೆ ಹೇಳಿದ ಪ್ರಕರಣವಿದು. ತಾಯಿಗೆ ವರಕೊಟ್ಟ ಪ್ರಸ್ತಾಪವಿಲ್ಲ. ಆದುದರಿಂದ ಈ ಪ್ರಕರಣವು ಪ್ರಚಲಿತವಾಗಿರುವ ಕಥೆಗೆ ಆಧಾರವೆನಿಸಿದರೂ ಇದನ್ನು ನಾವು ಪ್ರಕ್ಷಿಪ್ತವೆಂದೇ ನಿರ್ಧರಿಸಿ ನಮ್ಮ ಪಾಠದಲ್ಲಿ ಸೇರಿಸಿರುವುದಿಲ್ಲ.

---

೬೯ ಮತ್ತು ೭೦ನೇ ಸರ್ಗಗಳಲ್ಲಿ ಬರುವ ರಾಕ್ಷಸಯೋಧರ ವಿಶ್ಲೇಷಣೆ

ಈ ಸರ್ಗಗಳಲ್ಲಿ ಬಂದಿರುವ ಯುದ್ಧೋನ್ಮತ್ತ, ಮತ್ತ, ಮತ್ತಾನೀಕ– ಇವರು ಯಾರೆಂಬ ಬಗೆಗೆ ನಿರ್ಧರಿಸಬೇಕಾಗಿದೆ.

ಯುದ್ಧೋನ್ಮತ್ತಂ ಚ ಮತ್ತಂ ಚ ಭ್ರಾತರೌ ಚಾಪಿ ರಾವಣಃ ।
ರಕ್ಷಣಾರ್ಥಂ ಕುಮಾರಾಣಾಂ ಪ್ರೇಷಯಾಮಾಸ ಸಂಯುಗೇ ॥

೬೯ನೆಯ ಸರ್ಗದಲ್ಲಿ ಈ ಶ್ಲೋಕದ ಪ್ರಕಾರ ಯುದ್ಧೋನ್ಮತ್ತ, ಮತ್ತ ಎಂಬ ಇಬ್ಬರು ಸಹೋದರರನ್ನು ರಾವಣನು ತನ್ನ ಮಕ್ಕಳ ರಕ್ಷಣೆಗಾಗಿ ಕಳುಹಿಸಿದನು. ಯುದ್ಧೋನ್ಮತ್ತ-ಮತ್ತರು ಸಹೋದರರಾಗಿರಬಹುದು. ರಾವಣನ ಸಹೋದರರೂ ಆಗಬಹುದು. ಎರಡು ವಿಧವಾಗಿ ಅರ್ಥ ಮಾಡಲೂ ಇಲ್ಲಿ ಅವಕಾಶವಿದೆ.

ವ್ಯಾಖ್ಯಾನಕಾರರು :

೧. **ಯುದ್ಧೋನ್ಮತ್ತ–ಮತ್ತಶಬ್ದೌ ಮಹೋದರ – ಮಹಾಪಾರ್ಶ್ವಯೋಃ ಪರ್ಯಾಯನಾಮನೀ** = ಯುದ್ಧೋನ್ಮತ್ತ - ಮತ್ತ ಶಬ್ದಗಳು ಮಹೋದರ-ಮಹಾಪಾರ್ಶ್ವರ ಪರ್ಯಾಯನಾಮಗಳು.

೨. **ಯುದ್ಧೋನ್ಮತ್ತಂ :– ಮಹೋದರಂ ಮತ್ತಂ ಮಹಾಪಾರ್ಶ್ವಂ ಚ ಭ್ರಾತರೌ ಕುಮಾರಾಣಾಂ ರಕ್ಷಣಾರ್ಥಂ ಪ್ರೇಷಯಾಮಾಸ**– ಯುದ್ಧೋನ್ಮತ್ತ ಎಂದರೆ ಮಹೋದರನನ್ನೂ ಮತ್ತ ಎಂದರೆ ಮಹಾಪಾರ್ಶ್ವನನ್ನೂ ಕುಮಾರರ ರಕ್ಷಣೆಗಾಗಿ ಕಳುಹಿಸಿದನು.

೩. **ಯುದ್ಧೋನ್ಮತ್ತೌ = ಮಹೋದರ – ಮಹಾಪಾರ್ಶ್ವ ಪರ್ಯಾಯನಾಮಾನೌ ರಾವಣಭ್ರಾತರೌ. ಏತೌ ಏಕತ್ರ ಪ್ರಕಾಶ**

ಯಿಷ್ಯೇತೇ =ಯುದ್ಧೋನ್ಮತ್ತರಾದ ಮಹೋದರ-ಮಹಾಪಾರ್ಶ್ವರೆಂಬ ಹೆಸರಿನ ರಾವಣನ ಸಹೋದರರು. ಇವರಿಬ್ಬರೂ ಯಾವಾಗಲೂ ಒಟ್ಟಾಗಿಯೇ ಕಾಣಿಸಿಕೊಳ್ಳುತ್ತಾರೆ. ಇದು ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ. ಈ ಇಬ್ಬರು ಮಹೋದರ - ಮಹಾಪಾರ್ಶ್ವರೆಂದು ಅರ್ಥಮಾಡಿದರೆ ಈ ಮುಂದೆ ಬರುವ **ಷಡೇತೇ ಯುದ್ಧಕಾಂಕ್ಷಿಣಃ ನಿರ್ಜಗ್ಮುಃ** – ಎಂಬ ಶ್ಲೋಕಕ್ಕೆ ಸರಿಹೊಂದುತ್ತದೆ. ಆರು ಜನರ ಹೆಸರನ್ನು ಹೇಳುವಾಗ **ತ್ರಿಶಿರಾಶ್ಚಾತಿ – ಕಾಯಶ್ಚ ದೇವಾನ್ತಕನರಾನ್ತಕೌ । ಮಹೋದರಮಹಾಪಾರ್ಶ್ವೌ ನಿರ್ಜಗ್ಮುಃ ಕಾಲಚೋದಿತಾಃ ॥** ಎಂದು ಸ್ಪಷ್ಟವಾಗಿಯೇ ಇದೆ.

ಮುಂದೆ ೭೦ನೆಯ ಸರ್ಗ ೩೨ನೆಯ ಶ್ಲೋಕ : ಮಹೋದರನು ಸತ್ತುಹೋಗುತ್ತಾನೆ. ಅರ್ಥಾತ್ ಯುದ್ಧೋನ್ಮತ್ತನು ಸತ್ತುಹೋಗುತ್ತಾನೆ. ವ್ಯಾಖ್ಯಾನಕಾರರ ಅಭಿಪ್ರಾಯದಂತೆ ಮಹೋದರನ ಉಪನಾಮ ಯುದ್ಧೋನ್ಮತ್ತ. ಮಹಾಪಾರ್ಶ್ವನ ಉಪನಾಮ ಮತ್ತ. ಮಹೋದರನ ಸಹೋದರ ನಾದ ಮತ್ತ ಅಥವಾ ಮಹಾಪಾರ್ಶ್ವನು ಉಳಿದುಕೊಂಡಿದ್ದಾನೆ. ೭೦ನೆಯ ಸರ್ಗದ ೫೧ನೆಯ ಶ್ಲೋಕದಲ್ಲಿ ಮತ್ತನ ಪರಾಕ್ರಮಕಥನವು ಪ್ರಾರಂಭವಾಗುತ್ತದೆ. ಮುಂದೆ ೫೫ನೆಯ ಶ್ಲೋಕದಲ್ಲಿ ರಾವಣನ ತಮ್ಮನಾದ ಮತ್ತಾನೀಕನನ್ನು ಋಷಭನೆಂಬ ಕಪೀಶ್ವರನು ಆಕ್ರಮಿಸಿದನು.

ಅಥರ್ಷಭಃ ಸಮುತ್ಪತ್ಯ ವಾನರೋ ರಾವಣಾನುಜಮ್ ।
ಮತ್ತಾನೀಕಮುಪಾಗಮ್ಯ ತಸ್ಥೌ ತಸ್ಯಾಗ್ರತೋ ಬಲೀ ॥೫೫॥

ಈ ಮತ್ತಾನೀಕನು ಯಾರು? ಇದುವರೆಗೆ ಇವನು ಯುದ್ಧಕ್ಕೆ ಬಂದ ಪ್ರಶಂಸೆಯಿಲ್ಲ. ರಾವಣಾನುಜಂ–ಎಂದು ಸ್ಪಷ್ಟವಾಗಿ ಹೇಳಿರುವುದರಿಂದ ಇದು ಮಹಾಪಾರ್ಶ್ವನ ಮತ್ತೊಂದು ಹೆಸರೆಂದು ಭಾವಿಸಬೇಕಾಗಿದೆ. ಮಹಾಪಾರ್ಶ್ವನ ಅವಸಾನವನ್ನು ಹೇಳುವಾಗ ಮತ್ತಾನೀಕ-ಮತ್ತ ಎಂಬ ಹೆಸರುಗಳು ಹೇಳಲ್ಪಟ್ಟಿವೆಯೇ ಹೊರತು ಮಹಾಪಾರ್ಶ್ವನ ಹೆಸರು ಬಂದಿರುವುದಿಲ್ಲ.

ಮತ್ತಾನೀಕಂ ಮಹಾತ್ಮಾ ಸ ಜಘಾನ ರಣಮೂರ್ಧನಿ ।
ನಿಪಪಾತ ತದಾ ಮತ್ತೋ ವಜ್ರಾಹತ ಇವಾಚಲಃ ॥

ಇಷ್ಟು ಪ್ರಕರಣದಿಂದ ಮಹಾಪಾರ್ಶ್ವನಿಗೆ ಮತ್ತಾನೀಕ ಮತ್ತು ಮತ್ತ ಎಂಬ ಎರಡು ಹೆಸರುಗಳೂ ಇದ್ದುವೆಂದು ಭಾವಿಸಬೇಕು.

ಮುಂದೆ ೭೧ನೆಯ ಸರ್ಗದಲ್ಲಿ ಯುದ್ಧೋನ್ಮತ್ತ ಮತ್ತು ಮತ್ತರ ಹೆಸರುಗಳು ಪುನಃ ಬರುತ್ತವೆ.

ಪಿತೃವ್ಯೌ ಚಾಪಿ ಸಂದೃಶ್ಯ ಸಮರೇ ಸಂನಿಷೂದಿತೌ ।
ಯುದ್ಧೋನ್ಮತ್ತಂ ಚ ಮತ್ತಂ ಚ ಭ್ರಾತರೌ ರಾಕ್ಷಸರ್ಷಭೌ ॥೨॥

ರಾವಣನ ಮಗನಾದ ಅತಿಕಾಯನಿಗೆ ಸಂಬಂಧಿಸಿದ ಶ್ಲೋಕವಿದು. ಪಿತೃವ್ಯೌ ಎಂದರೆ ಅತಿಕಾಯನ ಚಿಕ್ಕಪ್ಪಂದಿರು ಮಹೋದರ-ಮಹಾಪಾರ್ಶ್ವರು. ಯುದ್ಧೋನ್ಮತ್ತ ಮತ್ತು ಮತ್ತ ಎಂಬ ಇಬ್ಬರು ಸಹೋದರರು–ಎಂದರೆ ಮಹೋದರ-ಮಹಾಪಾರ್ಶ್ವರಿಗಿಂತಲೂ ಬೇರೆಯಾದವರು–ಎಂಬ ಅರ್ಥವು ಈ ಶ್ಲೋಕದಿಂದ ಮೂಡಿಬರುತ್ತದೆ. ಯುದ್ಧೋನ್ಮತ್ತ-ಮತ್ತರು ಬೇರೆಯವರೆಂದು ನಿಶ್ಚಯಿಸಿರುವ ಪಾಠಾಂತರವೂ ಇದೆ. ಆ ಪಾಠದ ಆನುಪೂರ್ವಿಯು ಹೀಗಿದೆ.

ಸ ಸಂಪ್ರಾಪ್ಯ ಚಿರಾತ್ಸಂಜ್ಞಾಮೃಷಭೋ ವಾನರರ್ಷಭಃ ।
ಅಭಿಜಗ್ರಾಹ ವೇಗೇನ ಗದಾಂ ತಸ್ಯ ಮಹಾತ್ಮನಃ ॥೫೮॥

ಗೃಹೀತ್ವಾ ತಾಂ ಗದಾಂ ಭೀಮಾಮಾವಿಧ್ಯ ಚ ಪುನಃ ಪುನಃ ।
ಮತ್ತಾನೀಕಂ ಮಹಾತ್ಮಾನಂ ಜಘಾನ ರಣಮೂರ್ಧನಿ ॥೫೯॥

ಸ ಸ್ವಯಾ ಗದಯಾ ಭಗ್ನೋ ವಿಶೀರ್ಣದಶನೇಕ್ಷಣಃ ।
ನಿಪಪಾತ ತದಾ ಮತ್ತೋ ವಜ್ರಾಹತ ಇವಾಚಲಃ ॥೬೦॥

ಮತ್ತಾನೀಕನೂ (ಮಹಾಪಾರ್ಶ್ವನೂ) ಸತ್ತುಹೋಗುತ್ತಾನೆ. ಮತ್ತನೂ ಸತ್ತುಹೋಗುತ್ತಾನೆ.

ಉನ್ಮತ್ತಸ್ತು ತದಾ ದೃಷ್ಟ್ವಾ ಗತಾಸುಂ ಭ್ರಾತರಂ ರಣೇ ।
ಚುಕೋಪ ಪರಮಕ್ರುದ್ಧಃ ಪ್ರಲಯಾಗ್ನಿಸಮದ್ಯುತಿಃ ॥೬೨॥

ಇಲ್ಲಿ ಉನ್ಮತ್ತ ಎಂದರೆ ಯುದ್ಧೋನ್ಮತ್ತ ಎಂದು ಅರ್ಥಮಾಡಬೇಕು. ತನ್ನ ಸಹೋದರನಾದ ಮತ್ತನು ಮರಣಹೊಂದಿದ ಕಾರಣ ಪರಮಕ್ರುದ್ಧನಾದನು. ಇವನನ್ನು ಗವಾಕ್ಷನು ಎದುರಿಸುತ್ತಾನೆ.

ಆಪತನ್ತಂ ತದಾ ದೃಷ್ಟ್ವಾ ರಾಕ್ಷಸಂ ಭೀಮವಿಕ್ರಮಮ್ ।
ಶೈಲಮಾದಾಯ ದುದ್ರಾವ ಗವಾಕ್ಷಃ ಪರ್ವತೋಪಮಃ ॥೬೪॥

ಉನ್ಮತ್ತನು ಗವಾಕ್ಷನು ತಂದ ಪರ್ವತವನ್ನು ಚೂರು-ಚೂರು ಮಾಡುತ್ತಾನೆ. ಅದರಿಂದ ಗವಾಕ್ಷನಿಗೆ ಅಚ್ಚರಿಯಾಗುತ್ತದೆ. ಗಟ್ಟಿಯಾಗಿ ಬಾರಿ-ಬಾರಿಗೂ ಗರ್ಜನೆಮಾಡುತ್ತಾನೆ. ಪುನಃ ಉನ್ಮತ್ತನು ಗದೆಯಿಂದ ಗವಾಕ್ಷನ ವಕ್ಷಃಸ್ಥಳವನ್ನು ಪ್ರಹರಿಸುತ್ತಾನೆ. ಗವಾಕ್ಷನು ಮೂರ್ಛಿತನಾಗಿ ಕೆಳಗೆ ಬೀಳುತ್ತಾನೆ. ಸ್ವಲ್ಪಹೊತ್ತಿನಲ್ಲಿಯೇ ಎಚ್ಚರಗೊಂಡು ಅಂಗೈಯಿನಿಂದ ಉನ್ಮತ್ತನ ತಲೆಗೆ ಪ್ರಹರಿಸುತ್ತಾನೆ. ಈ ಪ್ರಹಾರದಿಂದ ಉನ್ಮತ್ತನು ಅಸುನೀಗುತ್ತಾನೆ.

ಆದರೆ ಕಡೆಯ ಶ್ಲೋಕವು ನಾವು ಕೊಟ್ಟಿರುವ ಪಾಠದಂತೆಯೇ ಇದೆ. ಉನ್ಮತ್ತನು ರಾವಣನ ಸಹೋದರ ಹೇಗಾದ?—ಎಂಬುದಕ್ಕೆ ಇಲ್ಲಿ ಸಮಾಧಾನವು ಸಿಕ್ಕುವುದಿಲ್ಲ.

ಎರಡು ಪಾಠಗಳಲ್ಲಿಯೂ ಇರುವ ನ್ಯೂನತೆಗಳಿವು. ಓರಿಯಂಟಲ್ ಇನ್‌ಸ್ಟಿಟ್ಯೂಟ್, ಬರೋಡ ಇವರು ಕೊಟ್ಟಿರುವ ಪಾಠದಲ್ಲಿ ಯುದ್ಧೋನ್ಮತ್ತ-ಮತ್ತ ಇವರ ಹೆಸರುಗಳಿರುವ ಶ್ಲೋಕಗಳೇ ಇಲ್ಲ. ಒಂದು ಕಡೆಯಲ್ಲಿ ಮಾತ್ರ ಮತ್ತಾನೀಕಪದವು ಮಹಾಪಾರ್ಶ್ವನಿಗೆ ಗುಣವಾಚಕವಾಗಿ ಬಂದಿದೆ.

ಯುದ್ಧೋನ್ಮತ್ತಂ ಚ ಮತ್ತಂ ಚ ಭ್ರಾತರೌ ಚಾಪಿ ರಾವಣಃ ।
ರಕ್ಷಣಾರ್ಥಂ ಕುಮಾರಾಣಾಂ ಪ್ರೇಷಯಾಮಾಸ ಸಂಯುಗೇ ॥

ವಾ. ರಾ. ಸರ್ಗ - ೬೯ ಶ್ಲೋಕ ೧೬

ಮಹೋದರ ಮಹಾಪಾರ್ಶ್ವೌ ಭ್ರಾತರೌ ಚಾಪಿ ರಾವಣಃ ।
ರಕ್ಷಣಾರ್ಥಂ ಕುಮಾರಾಣಾಂ ಪ್ರೇಷಯಾಮಾಸ ಸಂಯುಗೇ ॥

ಓ.ಇ. ಸರ್ಗ - ೫೭ ಶ್ಲೋಕ ೧೬

ಚುಕೋಪ ಪರಮಾಮರ್ಷೀ ಮತ್ತೋ ರಾಕ್ಷಸಪುಂಗವಃ ।

ವಾ.ರಾ. ಸರ್ಗ-೭೦ ಶ್ಲೋಕ ೫೧

ಚುಕೋಪ ಪರಮಾಮರ್ಷೀ ಮಹಾಪಾರ್ಶ್ವೋ ಮಹಾಬಲಃ ।

ಓ. ಇ. ಸರ್ಗ - ೫೮ ಶ್ಲೋಕ ೪೪

ಗದಾಮಾದಾಯ ಸಂಕ್ರುದ್ಧೋ ಮತ್ತೋ ರಾಕ್ಷಸಪುಂಗವಃ ।

ವಾ.ರಾ. ಸರ್ಗ - ೭೦ ಶ್ಲೋಕ ೫೪

ಗದಾಮಾದಾಯ ಸಂಕ್ರುದ್ಧೋ ಮಹಾಪಾರ್ಶ್ವೋ ಮಹಾಬಲಃ ।

ಓ.ಇ. ಸರ್ಗ - ೫೮ ಶ್ಲೋಕ ೪೭

ಮತ್ತಾನೀಕಮುಪಾಗಮ್ಯ ತಸ್ಥೌ ತಸ್ಯಾಗ್ರತೋ ಬಲೀ ॥೫೫॥

ವಾ.ರಾ.ಸರ್ಗ - ೭೦

ಮಹಾಪಾರ್ಶ್ವಮುಪಾಗಮ್ಯ ತಸ್ಥೌ ತಸ್ಯಾಗ್ರತೋ ಬಲೀ ॥೪೮॥

ಓ.ಇ. ಸರ್ಗ-೫೮

ಕ್ರುದ್ಧೋ ವಿಸ್ಫುರಮಾಣೌಷ್ಠೋ ಮಹಾಪಾರ್ಶ್ವಮುದೈಕ್ಷತ ॥

ವಾ. ರಾ. ಸರ್ಗ-೭೦ ಶ್ಲೋಕ ೫೮

ಓ.ಇ. ಸರ್ಗ-೫೮ ಶ್ಲೋಕ ೫೧

(ಎರಡು ಕಡೆಗಳಲ್ಲಿಯೂ ಒಂದೇ ಪಾಠವಿದೆ.)

ಮತ್ತಾನೀಕಂ ಮಹಾತ್ಮಾ ಸ ಜಘಾನ ರಣಮೂರ್ಧನಿ ॥೬೪॥

ವಾ. ರಾ. ಸರ್ಗ-೭೦

ಮತ್ತಾನೀಕಂ ಮಹಾಪಾರ್ಶ್ವಂ ಜಘಾನ ರಣಮೂರ್ಧನಿ ॥೫೨॥

ಓ.ಇ. ಸರ್ಗ-೫೮

ನಿಪಪಾತ ತದಾ ಮತ್ತೋ ವಜ್ರಾಹತ ಇವಾಚಲಃ ॥೬೫॥

ವಾ.ರಾ. ಸರ್ಗ-೭೦

ನಿಪಪಾತ ಮಹಾಪಾರ್ಶ್ವೋ ವಜ್ರಾಹತ ಇವಾಚಲಃ ॥೫೩॥

ಓ.ಇ. ಸರ್ಗ-೫೮

ಮುಂದಿನ ಸರ್ಗದಲ್ಲಿಯೂ ಇಲ್ಲಿರುವ ಶ್ಲೋಕಕ್ಕೆ ಬದಲಾಗಿ ನಿಸ್ಸಂದಿಗ್ಧವಾಗಿರುವ ಶ್ಲೋಕವಿದೆ.

ಪಿತೃವ್ಯೌ ಚಾಪಿ ಸಂದೃಶ್ಯ ಸಮರೇ ಸಂನಿಷೂದಿತೌ ।
ಯುದ್ಧೋನ್ಮತ್ತಂ ಚ ಮತ್ತಂ ಚ ಭ್ರಾತರೌ ರಾಕ್ಷಸರ್ಷಭೌ ॥೨॥

ವಾ.ರಾ. ಸರ್ಗ-೭೧

ಪಿತೃವ್ಯೌ ಚಾಪಿ ಸಂದೃಶ್ಯ ಸಮರೇ ಸಂನಿಷೂದಿತೌ ।
ಮಹೋದರಮಹಾಪಾರ್ಶ್ವೌ ಭ್ರಾತರೌ ರಾಕ್ಷಸರ್ಷಭೌ ॥೨॥

ಓ.ಇ. ಸರ್ಗ-೫೯

ಈ ಪಾಠವು ಸಂಪಾದಿಸಿದಾಗ ತಿದ್ದುಪಡಿಯಾಗಿ ಮೂಡಿಬಂತೋ, ಮೂಲಪಾಠವೇ ಹೀಗಿದ್ದಿತೋ ಎಂಬುದು ತಿಳಿಯದು. ಅಂತೂ ಓರಿಯಂಟಲ್ ಇನ್‌ಸ್ಟಿಟ್ಯೂಟಿನವರು ಕೊಟ್ಟಿರುವ ಪಾಠವು ನಿಸ್ಸಂದಿಗ್ಧವಾಗಿದೆ.

॥ ಶ್ರೀರಂಗಸದ್ಗುರವೇ ನಮಃ ॥

ವಿಭೀಷಣ ಶರಣಾಗತಿ

ಶ್ರೀಮದ್ರಾಮಾಯಣವು ಸರ್ವತೋಮುಖವಾದ ಕಾಂತಿಯಿಂದ ಕಂಗೊಳಿಸುತ್ತಿರುವ ಅನುಪಮವಜ್ರಸದೃಶವಾದ ಗ್ರಂಥ. ಕೆಲವರು ಅಮರ ಕಾವ್ಯವೆಂದು ಅದರ ಸೊಬಗನ್ನು ಅನುಭವಿಸುತ್ತಾರೆ. ಅನವದ್ಯವಾದ ಧರ್ಮ ಗ್ರಂಥವೆಂದು ಅದರ ಸೌಂದರ್ಯವನ್ನು ಅನುಭವಿಸುವವರೂ ಉಂಟು. ಕಥಾರೂಪದಲ್ಲಿರುವ ಸರಿಸಾಟಿಯಿಲ್ಲದ ಸಮಾಜಶಾಸ್ತ್ರ ಅದು ಎಂದು ಹಲವರು ಅದನ್ನು ಕೊಂಡಾಡುತ್ತಾರೆ. ಅದು ಇತಿಹಾಸ ಪುರಾವೃತ್ತ ಆಖ್ಯಾನ ಗಳಲ್ಲಿ ಅದ್ವಿತೀಯವಾದುದು ಎಂದು ಅದರ ಬಗೆಗೆ ಮೆಚ್ಚುಗೆಯನ್ನು ಹೇಳು ವವರೂ ಇದ್ದಾರೆ. ಹಾಗೆಯೇ ಅದು '**ಅಧ್ಯಾತ್ಮವಿದ್ಯಾ ವಿದ್ಯಾನಾಂ**' ಎಂದು ಶ್ರೀ ಗೀತಾಚಾರ್ಯನು ಘೋಷಿಸಿರುವಂತೆ ವಿದ್ಯೆಗಳ ಸಾರ್ವಭೌಮಿಯಾಗಿ ರುವ ಅಧ್ಯಾತ್ಮವಿದ್ಯೆಯಲ್ಲಿ ಅಗ್ಗಳಿಕೆ ಹೊಂದಿರುವ ಗ್ರಂಥ ಎಂದು ಅದನ್ನು ಅನುಭವಿಸಿ ವ್ಯಾಖ್ಯಾನಿಸುವ ಸಹೃದಯ ವಿದ್ವಾಂಸರೂ ಉಂಟು. ಈ ಎಲ್ಲ ದೃಷ್ಟಿಗಳಿಂದಲೂ ಅದರ ಸೊಬಗು-ಸೌಂದರ್ಯಗಳನ್ನು ಅನುಭವಿಸಿ ಗುಣ ಗಾನಮಾಡುವುದು ಉಚಿತವೇ ಆಗಿದೆ.

ಅದನ್ನು ಅಧ್ಯಾತ್ಮಗ್ರಂಥವೆಂದು ಅನುಭವಿಸುವ ಕೆಲವು ಸಜ್ಜನರು ಅದು ಸರ್ವಪುರುಷಾರ್ಥಸಾಧನವಾದ '**ಶರಣಾಗತಿಶಾಸ್ತ್ರ**' ಎಂದೂ ಗಮನಿಸುತ್ತಾರೆ. ಪರಮಾತ್ಮನಲ್ಲಿ ಶರಣಾಗತಿ ಮಾಡುವುದರಿಂದ ಧರ್ಮ ವನ್ನು ಗಳಿಸಬಹುದು. ಅದರಿಂದ ಧರ್ಮಕ್ಕೆ ವಿರೋಧವಲ್ಲದ ಅರ್ಥ-ಕಾಮ ಗಳನ್ನೂ ಸಂಪಾದಿಸಬಹುದು ಮತ್ತು ಕೊನೆಯದಾಗಿ–'**ಸಂಸಾರಂ ಸ ವಿಹಾಯ ಗಚ್ಛತಿ ಪುಮಾನ್ ವಿಷ್ಣೋಃ ಪದಂ ಶಾಶ್ವತಮ್**'– ಎಂಬಂತೆ ಹುಟ್ಟು-ಸಾವು ಮುಂತಾದ ಭಾವವಿಕಾರಗಳಿಂದ ರಹಿತವಾಗಿ ಶಾಂತಿ- ಸಮೃದ್ಧಿ, ಆನಂದನಿಧಿ ಮತ್ತು ಅಮೃತತತ್ವಗಳ ನೆಲೆಯಾದ ಮುಕ್ತಿಯನ್ನೂ ಪಡೆಯಬಹುದು ಎಂದು ಅವರು ಶಾಸ್ತ್ರ, ಯುಕ್ತಿ ಮತ್ತು ಅನುಭವಗಳ ಆಧಾರದಿಂದ ಪ್ರತಿಪಾದನೆಮಾಡುತ್ತಾರೆ.

ರಾಮಾಯಣದ ಪ್ರತಿಯೊಂದು ಕಾಂಡದಲ್ಲಿಯೂ ಶರಣಾಗತಿಯ

ವೈಭವ ಎದ್ದು ಕಾಣುತ್ತಿದೆ. ಬಾಲಕಾಂಡದಲ್ಲಿ ದೇವತೆಗಳು 'ಓ ದೇವನೇ! ಪರಂತಪನೇ! ನೀನೇ ನಮಗೆ ಪರಮಗತಿಯು. ದೇವತೆಗಳಿಗೂ ಅಜಯ್ಯನಾಗಿರುವ ರಾಕ್ಷಸಾಧಿಪತಿ ರಾವಣನ ಸಂಹಾರಕ್ಕಾಗಿ ನಿನ್ನನ್ನೇ ಶರಣು ಹೊಂದುತ್ತೇವೆ.' **ತತಸ್ತ್ವಾಂ ಶರಣಂ ಗತಾಃ । ತ್ವಂ ಗತಿಃ ಪರಮಾ ದೇವ ಸರ್ವೇಷಾಂ ನಃ ಪರಂತಪ ।** ಎಂದು ರಾವಣಸಂಹಾರಾರ್ಥವಾಗಿ ಮಹಾವಿಷ್ಣುವಿನಲ್ಲಿ ಶರಣಾಗತಿಮಾಡುತ್ತಾರೆ. ಅಯೋಧ್ಯಾಕಾಂಡದಲ್ಲಿ ಮಹಾತ್ಮನಾದ ಭರತನು "ದಾಸಭೂತನಾದ ನನ್ನ ಮೇಲೆ ಅನುಗ್ರಹ ಮಾಡು. ರಾಜ್ಯಾಭಿಷೇಕವನ್ನು ಸ್ವೀಕರಿಸುವ ಕೃಪೆಮಾಡು." **ತಸ್ಯ ಮೇ ದಾಸಭೂತಸ್ಯ ಪ್ರಸಾದಂ ಕರ್ತುಮರ್ಹಸಿ । ಅಭಿಷಿಞ್ಚಸ್ವ ಚಾದ್ಯೈವ ರಾಜ್ಯೇನ ಮಘವಾನಿವ ।** ಎಂದು ನಾರಾಯಣಸ್ವರೂಪಿಯಾದ ಶ್ರೀರಾಮನಲ್ಲಿ ಶರಣಾಗತಿಮಾಡುತ್ತಾನೆ. ಅರಣ್ಯಕಾಂಡದಲ್ಲಿ ದಂಡಕಾರಣ್ಯದ ಋಷಿಗಳು ರಾಕ್ಷಸರ ಉಪದ್ರವದಿಂದ ತಮ್ಮನ್ನು ರಕ್ಷಿಸಬೇಕೆಂದು ಆ ಶ್ರೀರಾಮದೇವರಲ್ಲಿ ಶರಣವರಣ ಮಾಡುತ್ತಾರೆ. **ತತಸ್ತ್ವಾಂ ಶರಣಾರ್ಥಂ ಚ ಶರಣ್ಯಂ ಸಮುಪಸ್ಥಿತಾಃ। ಪರಿಪಾಲಯ ನೋ ರಾಮ ವಧ್ಯಮಾನಾನ್ನಿಶಾಚರೈಃ ।** ಕಿಷ್ಕಿಂಧಾಕಾಂಡವು ವಾಲಿಯ ಉಪದ್ರವದಿಂದ ಪೀಡಿತನಾದ ಸುಗ್ರೀವನು ಶ್ರೀರಾಮನಲ್ಲಿ ಶರಣಾಗತನಾಗಿ ಅಭಯಯಾಚನೆ ಮಾಡುವುದನ್ನು ಉಲ್ಲೇಖಿಸುತ್ತದೆ. **ವಾಲಿನೋ ಮೇ ಮಹಾಭಾಗ ಭಯಾರ್ತಸ್ಯಾಭಯಂ ಕುರು ।** ಸುಂದರಕಾಂಡದಲ್ಲಿ ಕಾಕಾಸುರನು ಶ್ರೀರಾಮನಲ್ಲಿ ಮಹಾಪಚಾರವನ್ನು ಮಾಡಿ, ಮೂರು ಲೋಕಗಳಲ್ಲೂ ಅಲೆದಾಡಿದರೂ ಎಲ್ಲಿಯೂ ಬೇರೆ ಗತಿ ಕಾಣದೆ ಶರಣಾಗತವತ್ಸಲನಾದ ಆ ಶ್ರೀರಾಮಚಂದ್ರಪ್ರಭುವನ್ನೇ ಮರೆಹೊಕ್ಕ ಪ್ರಕರಣವನ್ನು ಸೀತಾದೇವಿಯು ಕಥನಮಾಡುತ್ತಾಳೆ.

ತ್ರಾಣಕಾಮ ಇಮಂ ಲೋಕಂ ಸರ್ವಂ ವೈ ವಿಚಚಾರ ಹ ।
ಸ ಪಿತ್ರಾ ಚ ಪರಿತ್ಯಕ್ತಃ ಸರ್ವೈಃ ಸುರಮಹರ್ಷಿಭಿಃ ।
ತ್ರೀನ್ ಲೋಕಾನ್ಸಂಪರಿಕ್ರಮ್ಯ ತಮೇವ ಶರಣಂ ಗತಃ ॥

ತ್ರಿಜಟೆಯ ಸ್ವಪ್ನವೃತ್ತಾಂತವನ್ನು ಕೇಳಿ ಭಯಗೊಂಡ ರಾಕ್ಷಸಿಯರಿಗೆ, 'ಕರುಣಾಳುವಾದ ಈ ಸೀತಾಮಾತೆಯಲ್ಲಿ ಶರಣುಹೊಂದುವುದರಿಂದಲೇ

ನಿಮಗೆ ಅಭಯ. **ಅಭಿಯಾಚಾಮ ವೈದೇಹೀಂ ಏತದ್ಧಿ ಮಮ ರೋಚತೇ। ಪ್ರಣಿಪಾತಪ್ರಸನ್ನಾ ಹಿ ಮೈಥಿಲೀ ಜನಕಾತ್ಮಜಾ ।** ಎಂದು ತ್ರಿಜಟೆಯು ಸಲಹೆ ನೀಡುತ್ತಾಳೆ. ಯುದ್ಧಕಾಂಡದಲ್ಲಿ ರಾಕ್ಷಸಸಾರ್ವಭೌಮನ ತಮ್ಮನಾದ, ಧರ್ಮಾತ್ಮನೂ, ಭಾಗವತಶಿರೋಮಣಿಯೂ ಆದ ವಿಭೀಷಣನು ಸರ್ವಲೋಕಶರಣ್ಯನಾದ ಸ್ವಾಮಿ ಶ್ರೀರಾಮಚಂದ್ರನಲ್ಲಿ ಶರಣಾಗತಿ ಮಾಡುತ್ತಾನೆ. **ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ರಾಘವಂ ಶರಣಂ ಗತಃ । ಸರ್ವಲೋಕಶರಣ್ಯಾಯ ರಾಘವಾಯ ಮಹಾತ್ಮನೇ ಥ ನಿವೇದಯತ ಮಾಂ ಕ್ಷಿಪ್ರಂ ।** ಉತ್ತರಕಾಂಡದಲ್ಲಿ ಲವಣಾಸುರನಿಂದ ಪೀಡಿತರಾದ ಯಮುನಾತೀರವಾಸಿ ಮಹರ್ಷಿಗಳು ಶ್ರೀರಾಮನಲ್ಲಿ ಶರಣು ಬಂದು ರಕ್ಷಣೆಯನ್ನು ಯಾಚಿಸುತ್ತಾರೆ.

ತತಶ್ಚ ಕರ್ತಾ ಹ್ಯಸಿ ನಾತ್ರ ಸಂಶಯೋ ಮಹಾಭಯಾತ್ । ತ್ರಾತುಮೃಷೀಂಸ್ತ್ವಮರ್ಹಸಿ । ಶರಣಾಗತರಾದ ಸರ್ವರಿಗೂ ಶ್ರೀರಾಮ ದೇವರು ಅಭಯಪ್ರದಾನಮಾಡಿ ಯಥೋಚಿತವಾಗಿ ಅವರ ಇಷ್ಟಾರ್ಥವನ್ನು ಈಡೇರಿಸುತ್ತಾರೆ. ಹೀಗೆ ರಾಮಾಯಣದ ಸಮಸ್ತಕಾಂಡಗಳಲ್ಲೂ ಶರಣಾಗತಿ ಪ್ರಸಂಗಗಳ ವೈಭವವನ್ನು ನಾವು ಸ್ಪಷ್ಟವಾಗಿ ನೋಡುತ್ತೇವೆ. ಇದಕ್ಕೆ ಆಕರವಾಗಿರುವ ಶ್ರೀಮದ್ರಾಮಾಯಣವನ್ನು 'ಶರಣಾಗತಿಶಾಸ್ತ್ರ' ವೆಂದು ಭಕ್ತರು ಕರೆಯುವುದು ಸಹಜವೇ ಆಗಿದೆ.

ಶರಣಾಗತಿ ಎಂದರೆ ಏನು? ಅದನ್ನು ಯಾರು ಮಾಡಬೇಕು? ಯಾರನ್ನು ಕುರಿತು ಮಾಡಬೇಕು? ಏತಕ್ಕೆ ಮಾಡಬೇಕು? ಅದಕ್ಕೆ ಪರಿಕರ ಗಳೇನು? ಅದರ ಸಾಧನೆ-ಸಿದ್ಧಿಗಳ ಲಕ್ಷಣಗಳೇನು? –ಇತ್ಯಾದಿ ವಿಚಾರ ಗಳನ್ನು ಭಾಗವತಧರ್ಮವು 'ನಿಕ್ಷೇಪರಕ್ಷೆ' 'ರಹಸ್ಯತ್ರಯಸಾರ' ಇತ್ಯಾದಿ ಗ್ರಂಥಗಳಲ್ಲಿ ವಿಸ್ತಾರವಾಗಿ ಪ್ರತಿಪಾದಿಸುತ್ತದೆ. ಪ್ರಕೃತದಲ್ಲಿ ಅದನ್ನು ಅತಿಸಂಕ್ಷೇಪವಾಗಿ ಹೀಗೆ ನಿರೂಪಿಸಬಹುದು.

'ಶರಣಾಗತಿ' ಎಂದರೆ ರಕ್ಷಿಸಲು ಸಮರ್ಥನೂ ಕರುಣಾಳುವೂ ಆದವ ನನ್ನು ಮಹಾವಿಶ್ವಾಸಪೂರ್ವಕವಾಗಿ ಆಶ್ರಯಿಸುವುದು ಮತ್ತು ಆ ಉಪಾಯ ದಲ್ಲಿಯೇ ನಿಷ್ಠೆ ಹೊಂದಿರುವುದು ; ತನ್ನ ಇಷ್ಟಾರ್ಥಸಿದ್ಧಿಯು ಬೇರೆ ಯಾವ ರೀತಿಯಲ್ಲೂ ಸಾಧ್ಯವಿಲ್ಲವೆಂದು ನಿಶ್ಚಯಿಸಿ ಮೇಲ್ಕಂಡಂತೆ ಆಶ್ರಯಿಸುವುದು.

XII

ಅನನ್ಯಸಾಧ್ಯೇ ಸ್ವಾಭೀಷ್ಟೇ ಮಹಾವಿಶ್ವಾಸಪೂರ್ವಕಮ್ ।
ತದೇಕೋಪಾಯತಾ ನಿಷ್ಠಾ ಪ್ರಪತ್ತಿಃ ಶರಣಾಗತಿಃ ॥

ಇದನ್ನು ಪ್ರಪತ್ತಿ, ಪ್ರಪದನ, ನಿಕ್ಷೇಪ, ತ್ಯಾಗ, ಭರನ್ಯಾಸ, ಭರ ಸಮರ್ಪಣ, ನ್ಯಾಸ, ಸಂನ್ಯಾಸ ಇತ್ಯಾದಿ ನಾಮಧೇಯಗಳಿಂದಲೂ ಕರೆಯುತ್ತಾರೆ.

ಇದು ಇಷ್ಟಸಿದ್ಧಿಗೆ ಒಂದು ಉಪಾಯ. ಬೇರೆ ಯಾವ ಉಪಾಯದಿಂದಲೂ ಇಷ್ಟಾರ್ಥವು ಕೈಗೂಡುವುದಿಲ್ಲ. ಆದರೆ ಈ ಉಪಾಯದಿಂದ ನಿಸ್ಸಂಶಯವಾಗಿಯೂ ಅದು ಸಿದ್ಧಿಸುತ್ತದೆ–ಎಂಬ ದೃಢವಾದ ನಂಬಿಕೆ ಇರುವವನು ಇದನ್ನು ಆಶ್ರಯಿಸಬೇಕು. ಯಾರಲ್ಲಿ ಶರಣಾಗತಿ ಮಾಡಬೇಕು? ಎಂದರೆ ಶರಣುನೀಡುವ ಸಾಮರ್ಥ್ಯವನ್ನೂ ಮತ್ತು ಶರಣಾಗತನನ್ನು ರಕ್ಷಿಸುವ ನಿಷ್ಠೆಯನ್ನೂ ಹೊಂದಿರುವ ದಯಾಳುವಿನಲ್ಲಿ ಧರ್ಮ-ಅರ್ಥ-ಕಾಮ- ಮೋಕ್ಷ ಎಂಬ ಯಾವುದೇ ಪುರುಷಾರ್ಥವು ಸಿದ್ಧಿಸುವುದಕ್ಕೋಸ್ಕರವಾದರೂ ಶರಣಾಗತಿಯನ್ನು ಮಾಡಬಹುದು. ಲೌಕಿಕವಾದ ಕಷ್ಟಪರಿಹಾರಕ್ಕಾಗಿ, ಕಳೆದುಹೋದ ಸಂಪತ್ತಿನ ಲಾಭಕ್ಕಾಗಿ ಅಥವಾ ಹೊಸ ಸಂಪತ್ತಿನ ಲಾಭಕ್ಕಾಗಿ ಪ್ರಪತ್ತಿಮಾಡುವವರೂ ಉಂಟು. ಉದಾಹರಣೆಗೆ–ದುರ್ಯೋಧನನ ಸಭೆಯಲ್ಲಿ ತನ್ನ ಮಾನಹರಣದ ಪ್ರಸಂಗ ಬಂದಾಗ ಆ ಸಂಕಷ್ಟದ ಪರಿಹಾರಕ್ಕಾಗಿ ದ್ರೌಪದಿಯು ಶ್ರೀಕೃಷ್ಣನಲ್ಲಿ ಶರಣವರಣ ಮಾಡಿದಳು. ಮೊಸಳೆಯ ಪ್ರಾಣಾಂತಕವಾದ ಆಕ್ರಮಣದಿಂದ ತನ್ನನ್ನು ಕಾಪಾಡಿಕೊಳ್ಳಲು ಗಜರಾಜನು ಭಗವಂತನನ್ನು ಶರಣುಹೊಂದಿದ. ತನ್ನ ರಾಜ್ಯವನ್ನೂ ಮತ್ತು ಪತ್ನಿಯನ್ನೂ ಹಿಂದಕ್ಕೆ ಪಡೆಯಲು ಸುಗ್ರೀವನು ಶ್ರೀರಾಮನಲ್ಲಿ ಶರಣಾಗತಿ ಮಾಡಿದ. ರಾಕ್ಷಸರ ಸರ್ವನಾಶವನ್ನು ತಪ್ಪಿಸಿ ತಾನು ಲಂಕಾರಾಜ್ಯವನ್ನು ಪಡೆಯುವುದಕ್ಕಾಗಿ ವಿಭೀಷಣನು ಶ್ರೀರಾಮಚಂದ್ರಪ್ರಭುವಿನಲ್ಲಿ ಶರಣಾಗತಿ ಮಾಡಿದ. ಶರಣಾಗತನನ್ನು ಸ್ವೀಕರಿಸಿದ ಶ್ರೀರಾಮದೇವರಿಗೆ ಆ ಆಶ್ರಿತರ ಪೀಡೆಯನ್ನು ಪರಿಹರಿಸಿ ಇಷ್ಟಾರ್ಥವನ್ನು ಈಡೇರಿಸುವ ಶಕ್ತಿ-ಸಾಮರ್ಥ್ಯಗಳೂ ಇದ್ದುವು. ಶರಣಾಗತನನ್ನು ರಕ್ಷಿಸುವ ದಯಾಪೂರ್ವಕವಾದ ಸತ್ಯಸಂಕಲ್ಪವೂ ಇದ್ದಿತು. ಶರಣ್ಯನಾದ ಸ್ವಾಮಿಯಲ್ಲಿ ಶರಣಾಗತರಿಗೆ ಪೂರ್ಣವಾದ ಭರವಸೆಯೂ ಇದ್ದಿತು. ಈ ಎಲ್ಲ ಕಾರಣಗಳಿಂದ ಆ ಶರಣಾಗತಿಯು ಸಫಲವಾಯಿತು.

ಹೀಗೆ ಯಾವುದೇ ಇಷ್ಟಸಿದ್ಧಿ ಮತ್ತು (ಅಥವಾ) ಅನಿಷ್ಟಪರಿಹಾರಗಳಿಗಾಗಿ ಶರಣಾಗತಿಮಾಡಬಹುದಾದರೂ ಸಂಸಾರಸಂತಾಪನಿವೃತ್ತಿಕರವಾಗಿ, ಶಾಶ್ವತಸುಖ-ಶಾಂತಿ, ಸಮೃದ್ಧಿರೂಪವಾದ ಮೋಕ್ಷವೆಂಬ ಪುರುಷಾರ್ಥಕ್ಕಾಗಿ ಪರಮಾತ್ಮನನ್ನು ಶರಣುಹೊಂದುವುದೇ ಅತ್ಯಂತ ಉತ್ತಮವಾದ ಶರಣಾಗತಿ. ಮೋಕ್ಷವನ್ನು ಹೊಂದುವುದಕ್ಕೆ ಜ್ಞಾನಯೋಗ, ಭಕ್ತಿಯೋಗ, ಕರ್ಮಯೋಗ ಎಂಬ ಮುಖ್ಯವಾದ ಮೂರು ಉಪಾಯಗಳಿದ್ದರೂ ಭಗವಂತನನ್ನು ಶರಣುಹೊಂದುವುದು ಎಲ್ಲರಿಗೂ ಅತ್ಯಾವಶ್ಯಕ. **ಪ್ರಪನ್ನಾದನ್ಯೇಷಾಂ ನ ದಿಶತಿ ಮುಕುಂದೋ ನಿಜಪದಂ** ಆದರೆ ಯಾವುದೇ ಒಳ್ಳೆಯ ಕಾರಣದಿಂದ ಭಗವಂತನಲ್ಲಿ ಶರಣಾಗತಿಮಾಡಿದರೂ ಅದು ಶ್ರೇಷ್ಠವೇ.

ಈ ಪ್ರಪತ್ತಿಯು ಭಕ್ತಿಯೋಗದ ಒಂದು ಆವಶ್ಯಕವಾದ ಅಂಗ ಎಂದು ಕೆಲವರು ಹೇಳುತ್ತಾರೆ. ಭಕ್ತಿಯಂತೆಯೇ ಇದೂ ಒಂದು ಸ್ವತಂತ್ರವಾದ ಮೋಕ್ಷೋಪಾಯ ಅಥವಾ ಭಕ್ತಿಯ ಒಂದು ಪ್ರಕಾರ ಎಂದೂ ಕೆಲವು ಭಾಗವತಾಚಾರ್ಯರು ಪ್ರತಿಪಾದಿಸುತ್ತಾರೆ. ಇಂತಹ ಪ್ರಪತ್ತಿಯನ್ನು ಭಗವಂತನಲ್ಲಿ ಮಹಾವಿಶ್ವಾಸಪೂರ್ವಕವಾಗಿ ಒಮ್ಮೆ ಮಾಡಿದರೆ ಸಾಕು. ಪರಮಾತ್ಮನು ಆ ಪ್ರಪನ್ನನನ್ನು ರಕ್ಷಿಸುವ ಹೊಣೆಯನ್ನು ಹೊತ್ತು ನಿರ್ವಹಿಸುತ್ತಾನೆ. ಕಪಿಯ ಮರಿಯು ತನ್ನ ತಾಯಿಯನ್ನು ನಿಶ್ಚಲವಿಶ್ವಾಸದಿಂದ ಭದ್ರವಾಗಿ ಹಿಡಿದುಕೊಳ್ಳುವಂತೆ ಪರಮಾತ್ಮನನ್ನು ಪ್ರಪನ್ನನು ಹಿಡಿದುಕೊಳ್ಳಬೇಕು. (ಇದಕ್ಕೆ 'ಮರ್ಕಟಕಿಶೋರನ್ಯಾಯ' ಎಂದು ಹೆಸರು.) ಇದಲ್ಲದೇ ವಾಸ್ತವವಾಗಿ ನೋಡಿದರೆ ತಾಯಿಬೆಕ್ಕು ತನ್ನ ಮರಿಯನ್ನು ಹಿಡಿದುಕೊಳ್ಳುವಂತೆ ಭಗವಂತನು ಪ್ರಪನ್ನರನ್ನು ಭದ್ರವಾಗಿ ತಾನೇ ಹಿಡಿದುಕೊಂಡು ಅವರನ್ನು ಪಾರುಮಾಡಿಸುತ್ತಾನೆ–ಎಂಬ ತಿಳಿವಳಿಕೆಯನ್ನೂ ಪ್ರಪನ್ನನು ಹೊಂದಿರಬೇಕು. ತಾಯಿಯ ಸ್ತನ್ಯವು ಶಿಶುವಿಗೆ ಹೇಗೆ ಸಹಜವೋ ಹಾಗೆ ಭಗವಂತನ ಕೃಪೆಯು ಸಹಜವಾಗಿ ಪ್ರಪನ್ನರ ಮೇಲೆ ಹರಿಯುತ್ತದೆ ಎಂಬ ವಿಶ್ವಾಸ ಅವನಿಗೆ ಇರಬೇಕು. ಇದನ್ನು 'ಮಾರ್ಜಾರಕಿಶೋರನ್ಯಾಯ' ಎಂದು ಕರೆಯುತ್ತಾರೆ. ತಾಯಿಮೀನು ತನ್ನ ಮರಿಯು ತನ್ನನ್ನು ಸ್ಮರಿಸಿದ ಮಾತ್ರದಿಂದಲೇ ಅದರ ಬಳಿಗೆ ಮಿಂಚಿನ ವೇಗದಲ್ಲಿ ಧಾವಿಸುವ ಉದಾಹರಣೆಯನ್ನು 'ಮತ್ಸ್ಯಕಿಶೋರನ್ಯಾಯ' ಎನ್ನುತ್ತಾರೆ. ಈ

ಎಲ್ಲ ನ್ಯಾಯಗಳೂ ಶರಣಾಗತರಲ್ಲಿ ಕಾಲವಿಶೇಷ–ಅವಸ್ಥಾವಿಶೇಷಗಳಲ್ಲಿ ಅನ್ವಯಿಸುತ್ತವೆ. ಇವು ಪರಸ್ಪರ ಪೂರಕ-ಪೋಷಕಗಳೇ ಹೊರತು ಬಾಧಕಗಳಲ್ಲ–ಎಂಬುದನ್ನು ವಿವೇಕಿಗಳು ಮನಗಾಣಬೇಕು.

ಯೋಗಕ್ಕೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ–ಎಂಬ ಎಂಟು ಅಂಗಗಳಿರುವಂತೆ ಪ್ರಪತ್ತಿಗೆ ಐದು ಅಥವಾ ಆರು ಅಂಗಗಳುಂಟು–ಎಂದು ಶರಣಾಗತಿನಿಷ್ಠರಾದ ಆಚಾರ್ಯರು ಹೇಳುತ್ತಾರೆ.

ನಿಕ್ಷೇಪಾಪರಪರ್ಯಾಯಃ ನ್ಯಾಸಃ ಪಂಚಾಂಗಸಂಯುತಃ ।
ಸಂನ್ಯಾಸಸ್ತ್ಯಾಗ ಇತ್ಯುಕ್ತಃ ಶರಣಾಗತಿರಿತ್ಯಪಿ ॥

ಆನುಕೂಲ್ಯಸ್ಯ ಸಂಕಲ್ಪಃ ಪ್ರಾತಿಕೂಲ್ಯಸ್ಯ ವರ್ಜನಮ್ ।
ರಕ್ಷಿಷ್ಯತೀತಿ ವಿಶ್ವಾಸಃ ಗೋಪ್ತೃತ್ವವರಣಂ ತಥಾ ।
ಆತ್ಮನಿಕ್ಷೇಪಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ ॥

1) ಪ್ರಪನ್ನನು ತಾನು ಪರಮಾತ್ಮನಿಗೆ ಅನುಕೂಲವಾಗಿ ಅಂದರೆ ಅವನ ಆಜ್ಞೆ ಮತ್ತು ಅನುಜ್ಞೆಯ ರೂಪವಾದ ಶಾಸ್ತ್ರೀಯವಾದ ಮಾರ್ಗದಲ್ಲಿ ನಡೆದುಕೊಳ್ಳುತ್ತೇನೆ–ಎಂದು ಸಂಕಲ್ಪಮಾಡಬೇಕು. 2) ಅವನಿಗೆ ಪ್ರತಿಕೂಲ ವಾಗಿ ನಡೆಯುವುದಿಲ್ಲ ಎಂದು ಪ್ರತಿಜ್ಞೆಮಾಡಬೇಕು. 3) ಅವನು ತನ್ನನ್ನು ನಿಶ್ಚಯವಾಗಿಯೂ ರಕ್ಷಿಸುತ್ತಾನೆ ಎಂಬ ದೃಢನಂಬಿಕೆ ಹೊಂದಿರಬೇಕು. 4) ನೀನೇ ನನ್ನನ್ನು ರಕ್ಷಿಸಬೇಕು–ಎಂದು ಸ್ವಾಮಿಯಲ್ಲಿ ಅರಿಕೆಮಾಡಿಕೊಳ್ಳ ಬೇಕು. **'ಗೋಪ್ತೃತ್ವವರಣಂ ನಾಮ ಸ್ವಾಭಿಪ್ರಾಯನಿವೇದನಂ' 'ಅಪ್ರಾರ್ಥಿತೋ ನ ಗೋಪಾಯೇತ್'** 5) ತನ್ನ ರಕ್ಷಣೆಮಾಡಿ ಕೊಳ್ಳಲು ತಾನು ಅಸಮರ್ಥ, ಅಕಿಂಚನ ಎಂಬ ಭಾವನೆ ಹೊಂದಿರ ಬೇಕು–ಇವೇ ಪ್ರಪತ್ತಿಯ ಐದು ಅಂಗಗಳು. ಭಗವಂತನಲ್ಲಿ ತನ್ನನ್ನು ಸಮರ್ಪಿಸಿಕೊಳ್ಳಬೇಕು ಎನ್ನುವುದು ಆರನೆಯ ಅಂಗ. ಇದು ಪರಮಾರ್ಥದಲ್ಲಿ ಅಂಗಿಯೇ ಆಗುತ್ತದೆ. ಅಷ್ಟಾಂಗಯೋಗದಲ್ಲಿ ಸಮಾಧಿಯು ಎಂಟನೆಯ ಅಂಗ ಮತ್ತು ಪರಮಾರ್ಥದಲ್ಲಿ ಅಂಗಿಯಾದ ಯೋಗವೂ ಆಗಿದೆ–ಎಂಬ ಉದಾಹರಣೆಯನ್ನು ಇಲ್ಲಿ ಸ್ಮರಿಸಬಹುದು.

ಈ ಅಂಗಗಳು ಎಷ್ಟು ಸಂಖ್ಯೆಯಲ್ಲಿರಬೇಕು? ಎಷ್ಟು ಪ್ರಮಾಣದಲ್ಲಿರಬೇಕು? ಒಂದೆರಡು ಪಾರಿಭಾಷಿಕವಾದ ಅಂಗಗಳು ಇಲ್ಲದಿದ್ದರೂ ಪ್ರಪತ್ತಿಯು ಸಿದ್ಧಿಸುವುದಿಲ್ಲವೇ? ಇತ್ಯಾದಿ ಪ್ರಶ್ನೆಗಳನ್ನು ಏಳಿಸಿಕೊಂಡು ಗಡಿಬಿಡಿಮಾಡಿಕೊಳ್ಳಬೇಕಾಗಿಲ್ಲ. ಮಹಾವಿಶ್ವಾಸದಿಂದ ಭಗವಂತನಿಗೆ ತನ್ನನ್ನು ಅರ್ಪಿಸಿಕೊಳ್ಳಬೇಕು. ಅಗ್ನಿಯಲ್ಲಿ ಕೊನೆಯಲ್ಲಿ ಪೂರ್ಣಾಹುತಿ ಯನ್ನು ಸಮರ್ಪಿಸುವಂತೆ ತನ್ನನ್ನು ದೇವರಲ್ಲಿ ಶ್ರದ್ಧಾ-ವಿಶ್ವಾಸಪೂರ್ವಕವಾಗಿ ಸಮರ್ಪಿಸಿಕೊಂಡು ಅವನಿಗೆ ಪ್ರಿಯವಾದ ರೀತಿಯಲ್ಲಿ ಅಂದರೆ ಸನ್ಮಾರ್ಗದಲ್ಲಿ ನಡೆದುಕೊಳ್ಳಬೇಕು. ಅವನಿಗೆ ವಿರುದ್ಧವಾದ ರೀತಿಯಲ್ಲಿ ಅಂದರೆ ದುರ್ಮಾರ್ಗದಲ್ಲಿ ನಡೆಯಬಾರದು. ಪ್ರಪನ್ನನಾದವನು ಮಾಡಬೇಕಾದ ನಡೆ, ನುಡಿ, ಆಚಾರಗಳನ್ನು "ಉತ್ತರಕೃತ್ಯ" ಎಂದು ಪಾರಿಭಾಷಿಕವಾಗಿ ಕರೆಯುತ್ತಾರೆ.

ಪರಮಾತ್ಮನು ಸರ್ವಜ್ಞ, ಸರ್ವಶಕ್ತ ಮತ್ತು ಪರಮಕಾರುಣಿಕ. ಆದ್ದರಿಂದ ತನ್ನನ್ನು ರಕ್ಷಿಸಬೇಕೆಂದು ಪ್ರಾರ್ಥನೆ ಮಾಡದಿದ್ದರೂ ಜೀವಗಳನ್ನು ಅವನು ರಕ್ಷಿಸುತ್ತಾನೆ. ಹೀಗಿರುವಾಗ ಅವನಲ್ಲಿ ರಕ್ಷಣೆಗಾಗಿ ಮೊರೆ ಯಿಡುವುದೇಕೆ? ಹಾಗೆ ಮೊರೆಯಿಟ್ಟರೆ ದೇವರ ಸರ್ವಜ್ಞತ್ವದಲ್ಲಿ ಮತ್ತು ದಯೆಯಲ್ಲಿ ಅವಿಶ್ವಾಸ ತೋರಿದಂತಾಗುವುದಿಲ್ಲವೇ?–ಎಂದು ಚೋದ್ಯ ಮಾಡಬಾರದು. ತಾಯಿ ತನ್ನ ಮಗುವಿನ ರಕ್ಷಣೆಯಲ್ಲಿ ಸದಾ ನಿರತಳಾಗಿ ದ್ದರೂ ಅಳುವಿನ ಮೂಲಕ ತನ್ನ ತೊಂದರೆಯನ್ನು ತೋಡಿಕೊಳ್ಳುವುದು ಶಿಶುವಿನ ಸ್ವಭಾವ. ಹಾಗೆಯೇ ನಾವು ದೇವರಲ್ಲಿ ಶರಣವರಣ ಮಾಡುವುದು. ಸಂಸಾರತಂತ್ರವನ್ನು ನಿರ್ವಹಿಸುವುದಕ್ಕಾಗಿ ಭಗವಂತನು ಜೀವಗಳ ಪ್ರಪತ್ತಿಯ ಪ್ರಾರ್ಥನೆಯನ್ನು ಒಂದು ನೆಪವಾಗಿ ಅಪೇಕ್ಷಿಸುತ್ತಾನೆ–ಎಂದು ಜ್ಞಾನಿಗಳು ಹೇಳುತ್ತಾರೆ.

ಸರ್ವಜ್ಞೋಽಪಿ ಹಿ ವಿಶ್ವೇಶಃ ಮಹಾಕಾರುಣಿಕೋಽಪಿ ಸನ್ ।
ಸಂಸಾರತಂತ್ರವಾಹಿತ್ವಾತ್ ರಕ್ಷಾಪೇಕ್ಷಾಮಪೇಕ್ಷತೇ ॥

ಇಂತಹ ಪ್ರಪತ್ತಿಯನ್ನು ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ತಾನೇ ನೇರವಾಗಿ ಭಗವಂತನಲ್ಲಿ ಮಾಡಿಕೊಳ್ಳಬಹುದು. ಜ್ಞಾನಿಗಳಾದ ಆಚಾರ್ಯ ರಿಂದ ತಿಳಿದು ಅವರು ಉಪದೇಶಿಸಿದ ರೀತಿಯಲ್ಲಿ ಭಗವಂತನಲ್ಲಿ ಶರಣಾಗತಿ

ಮಾಡಬಹುದು ಅಥವಾ ಆಚಾರ್ಯನೇ ಇವನ ಪರವಾಗಿ ಪರಮಾತ್ಮನಲ್ಲಿ ಪ್ರಪತ್ತಿಮಾಡಿರಲು ಈತನು ಆಚಾರ್ಯನಲ್ಲಿ ಸಂಪೂರ್ಣನಿಷ್ಠೆ ಇಟ್ಟುಕೊಂಡಿದ್ದರೂ ಪ್ರಪತ್ತಿ ಕೈಗೂಡುವುದು. ಈ ಮೂರು ವಿಧಾನಗಳನ್ನು ಕ್ರಮವಾಗಿ ಆತ್ಮ (ಸ್ವ)ನಿಷ್ಠೆ, ಉಕ್ತನಿಷ್ಠೆ, ಆಚಾರ್ಯನಿಷ್ಠೆ–ಎಂದು ಪಾರಿಭಾಷಿಕವಾಗಿ ಭಾಗವತರು ಕರೆಯುತ್ತಾರೆ. ಪ್ರಪನ್ನನು ತನಗೋಸ್ಕರವಾಗಿ ಮಾತ್ರವಲ್ಲದೇ ತನಗೆ ಸೇರಿದವರಿಗೋಸ್ಕರವಾಗಿಯೂ ಪರಮಾತ್ಮನನ್ನು ಪ್ರಾರ್ಥಿಸಬಹುದು. ತನಗೋಸ್ಕರ ಮಾಡಿಕೊಂಡ ಪ್ರಪತ್ತಿಯು ತನ್ನವರ ರಕ್ಷಣೆಯನ್ನೂ ಮಾಡುವ ಸನ್ನಿವೇಶವುಂಟು.

ಭಾಗವತಧರ್ಮದ ಆಚಾರ್ಯರು ಮೇಲ್ಕಂಡ ಪ್ರಪತ್ತಿಯ ವಿವರಣೆಯನ್ನು ಮಹಾಭಾಗವತಶಿರೋಮಣಿಯಾದ ವಿಭೀಷಣನ ಶರಣಾಗತಿಯಲ್ಲಿ ಹೀಗೆ ಸಮನ್ವಯ ಮಾಡುತ್ತಾರೆ.

ವಿಭೀಷಣನು ಶ್ರೀರಾಮದೇವರಿಗೆ ಪೂರ್ಣಪ್ರತಿಕೂಲನಾಗಿದ್ದ ರಾವಣನಿಗೂ "ಆತನಿಗೆ ಸೀತೆಯನ್ನು ಸಮರ್ಪಣೆಮಾಡಿ ಸುಖವಾಗಿರು" **ಪ್ರದೀಯತಾಂ ದಾಶರಥಾಯ ಮೈಥಿಲೀ । ಸೀತಾಂ ಚ ರಾಮಾಯ ನಿವೇದ್ಯ ದೇವೀಂ ವಸೇಮ ರಾಜನ್ನಿಹ ವೀತಶೋಕಾಃ ।** ಎಂದು ಹಿತವನ್ನು ಉಪದೇಶಿಸಿ ಸರ್ವಭೂತಹಿತೈಷಿಯಾದ ಶ್ರೀರಾಮನಿಗೆ ಅನುಕೂಲವಾಗಿ ನಡೆದುಕೊಂಡ. ಆದರೆ ನಾಲಿಗೆಯಲ್ಲಿ ಪಿತ್ತದೋಷ ಇರುವವನಿಗೆ ಹಾಲು ಕಹಿಯಾಗುವಂತೆ ರಾವಣನಿಗೆ ಇದು ಅರುಚಿಕರವಾಯಿತು. ಅವನು ತನ್ನನ್ನು 'ಧಿಕ್, ಕುಲಪಾಂಸನ, ತೊಲಗು' ಎಂದು ಧಿಕ್ಕರಿಸಿದಾಗ ಅವನ ಸಹವಾಸವನ್ನು ಸಂಪೂರ್ಣವಾಗಿ ತೊರೆದು ಅವನ ಸಹವಾಸದಿಂದ ದುಷ್ಟವಾಗಿದ್ದ ರಾಜ್ಯ-ಕೋಶ-ಬಂಧು-ಮಿತ್ರರನ್ನೂ ತೊರೆದು '**ಪರಿತ್ಯಕ್ತಾ ಮಯಾ ಲಂಕಾ ಮಿತ್ರಾಣಿ ಚ ಧನಾನಿ ಚ । ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ। ರಾವಣೋ ನಾಮ ದುರ್ವೃತ್ತಃ ॥** ಎಂದು ಶ್ರೀರಾಮ ದೇವರಲ್ಲಿ ಅರಿಕೆಮಾಡಿಕೊಂಡವನಾಗಿ ಭಗವಂತನಿಗೆ ಪ್ರತಿಕೂಲವಾದ ಪದಾರ್ಥಗಳನ್ನು ವರ್ಜಿಸಿದ. "ನಾನು ರಾವಣನಿಂದ ಅವಮಾನಿತನಾಗಿ ದ್ದೇನೆ. ಅವನ ತಮ್ಮನಾಗಿದ್ದರೂ ಅವನಿಂದ ತೊರೆಯಲ್ಪಟ್ಟಿದ್ದೇನೆ. ಸರ್ವಭೂತಶರಣ್ಯನಾದ ನಿನ್ನನ್ನು ಬಿಟ್ಟು ನನಗೆ ಬೇರೆ ಗತಿಯಿಲ್ಲ."

ಅನುಜೋ ರಾವಣಸ್ಯಾಹಂ ತೇನ ಚಾಸ್ಮ್ಯವಮಾನಿತಃ ।
ಭವನ್ತಂ ಸರ್ವಭೂತಾನಾಂ ಶರಣ್ಯಂ ಶರಣಂ ಗತಃ ॥

ಎಂದು ತನ್ನ ಕಾರ್ಪಣ್ಯವನ್ನು (ಅಕಿಂಚನತೆಯನ್ನು) ತೋಡಿಕೊಳ್ಳು ತ್ತಾನೆ. ಶ್ರೀರಾಮನು ಸರ್ವಲೋಕಶರಣ್ಯ, ಮಹಾತ್ಮಾ ಎಂದು ಭಾವಿಸಿ ನುಡಿದು **ಸರ್ವಲೋಕಶರಣ್ಯಾಯ ರಾಘವಾಯ ಮಹಾತ್ಮನೇ । ವಿಭೀಷಣೋ ಮಹಾಪ್ರಾಜ್ಞಃ ।** ಶ್ರೀರಾಮದೇವರು ತನ್ನನ್ನು ರಕ್ಷಿಸುವ ಬಗೆಗೆ ಮಹಾವಿಶ್ವಾಸವನ್ನು ಪ್ರಕಟಿಸುತ್ತಾನೆ. **ರಾಘವಂ ಶರಣಂ ಗತಃ** (ಶ್ರೀರಾಘವನು ನನ್ನ ಗೋಪ್ತಾ, ರಕ್ಷಕ) ಎಂದು ಅವನನ್ನು ತನ್ನ ರಕ್ಷಕನೆಂದು ವರಿಸುತ್ತಾನೆ. "ವಿಭೀಷಣ ಎಂಬ ಹೆಸರಿನ ನಾನು ಬಂದಿರುವ ವಿಷಯವನ್ನು ಶೀಘ್ರವಾಗಿ ಅರಿಕೆಮಾಡಿಕೊಳ್ಳಿ." **ನಿವೇದಯತ ಮಾಂ ಕ್ಷಿಪ್ರಂ ವಿಭೀಷಣಮುಪಸ್ಥಿತಂ।** ಎಂದು ಶ್ರೀರಾಮಭಕ್ತರಾದ ವಾನರರ ಮೂಲಕ ಶ್ರೀರಾಮದೇವರಲ್ಲಿ ಆತ್ಮನಿಕ್ಷೇಪ ಮಾಡಿಕೊಳ್ಳುತ್ತಾನೆ. ವಿಭೀಷಣನು ಮಾಡಿಕೊಂಡ ಶರಣಾಗತಿಯ ಫಲ ಅವನೊಡನೆ ಅವನ ಆಶ್ರಿತರಾಗಿ ಬಂದಿದ್ದ ನಾಲ್ಕು ಮಂದಿ ರಾಕ್ಷಸರಿಗೂ ಫಲಿಸಿತು.

ಸ್ನಾನ, ಮಡಿ ಮುಂತಾದ ಹೊರಗಿನ ಆಚಾರಶುದ್ಧಿಯನ್ನು ಅನುಸರಿ ಸಲು ಸಾಧ್ಯವಿಲ್ಲದಿದ್ದಾಗ ಮಾನಸಿಕಶುದ್ಧಿಯಿಂದ ಭಗವಂತನಲ್ಲಿ ಶರಣಾಗತಿ ಮಾಡಿದರೂ ಅದು ಸಿದ್ಧಿಸುತ್ತದೆ ಎಂಬುದು ವಿಭೀಷಣ ಶರಣಾಗತಿಯ ಉದಾಹರಣೆಯಿಂದ ಸೂಚಿತವಾಗುತ್ತದೆ.

ವಿಭೀಷಣನು ಪ್ರಪತ್ತಿಗೆ ಅಧಿಕಾರಿಯೇ?–ಎಂದರೆ ದುರಾಚಾರಿಯೇ ಆಗಿದ್ದರೂ ಭಗವಂತನನ್ನು ಆಶ್ರಯಿಸಿದರೆ ಅವನು ಕಾಲಕ್ರಮದಲ್ಲಾದರೂ ಶುದ್ಧನಾಗಿ ಆತ್ಮೋದ್ಧಾರ ಹೊಂದುತ್ತಾನೆ.

ಅಪಿ ಚೇತ್ಸುದುರಾಚಾರಃ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ ವ್ಯವಸಿತೋ ಹಿ ಸಃ ॥

ಹೀಗಿರುವಾಗ ಧರ್ಮಾತ್ಮನೂ ಸಹಜವಾಗಿಯೇ ಭಗವದ್ಭಕ್ತನೂ ಆದ ವಿಭೀಷಣನ ವಿಷಯದಲ್ಲಿ ಹೇಳತಕ್ಕದ್ದೇನು! **ವಿಭೀಷಣಸ್ತು ಧರ್ಮಾತ್ಮಾ ನ ತು ರಾಕ್ಷಸಚೇಷ್ಟಿತಃ । ವಿಭೀಷಣೋ ವಿಷ್ಣುಭಕ್ತಿಂ ವವ್ರೇ ಸತ್ವಗುಣಾನ್ವಿತಃ॥** "ಪ್ರಪತ್ತಿಗೆ ಅವನಿಗಿಂತಲೂ ಹೆಚ್ಚು ಮಟ್ಟದ ಅಧಿ

ಕಾರಿಯನ್ನು ಏಕೆ ಹುಡುಕಿಕೊಂಡು ಹೋಗಬೇಕು? ಪ್ರಪತ್ತಿಯ ಅನಂತರ ಅವನು ಶ್ರೀರಾಮದೇವರ ವಿಷಯದಲ್ಲಿ ಹೇಗೆ ನಿಷ್ಕಪಟವಾಗಿ ನಡೆದು ಕೊಂಡ? ಸದಾಚಾರದಿಂದ ನಡೆದುಕೊಂಡ? ಅವನ 'ಉತ್ತರಕೃತ್ಯ' ಹೇಗಿತ್ತು?–ಎಂಬುದನ್ನು ಶ್ರೀಮದ್ರಾಮಾಯಣವು ಸ್ಪಷ್ಟವಾಗಿ ತಿಳಿಸುತ್ತದೆ.

ಈಶ್ವರಾನುಗ್ರಹ ಬೇಕು, ಗುರುನಿಷ್ಠೆ ಬೇಕು–ಎಂದು ಒಪ್ಪುವ ಎಲ್ಲ ಪಂಥಗಳೂ ಶರಣಾಗತಿಯ ತತ್ತ್ವವನ್ನು ಒಪ್ಪುತ್ತವೆ. ಈಶ್ವರನನ್ನು ಒಪ್ಪದೇ ಇರುವ ಬೌದ್ಧಭಕ್ತರೂ ಕೂಡ ಬುದ್ಧದೇವನನ್ನೂ, ಧರ್ಮವನ್ನೂ, ಸಂಘವನ್ನೂ ಶರಣುಹೊಂದುವುದಾಗಿ ಘೋಷಿಸುತ್ತಾರೆ.

ಬುದ್ಧಂ ಶರಣಂ ಗಚ್ಛಾಮಿ । ಧರ್ಮಂ ಶರಣಂ ಗಚ್ಛಾಮಿ ।
ಸಂಘಂ ಶರಣಂ ಗಚ್ಛಾಮಿ ।

ಹೀಗಿರುವಾಗ ಈಶ್ವರನ ಅಸ್ತಿತ್ವವನ್ನೂ ಶರಣ್ಯತ್ವವನ್ನೂ ಒಪ್ಪುವ ವೈದಿಕಪಂಥಗಳ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ.

ಶರಣಾಗತತತ್ತ್ವವನ್ನು ಅವೈದಿಕ, ಆಧುನಿಕ, ಯಾವುದೋ ಕೆಲವು ಧರ್ಮವರ್ಗಗಳಿಗೆ ಮೀಸಲು–ಎಂದು ಕೆಲವು ಆಧುನಿಕರು ಕರೆಯುವುದು ವಿವೇಕವಲ್ಲ.

'ಯಾವನು ಮೊದಲು ಬ್ರಹ್ಮದೇವರನ್ನು ಸೃಷ್ಟಿಸಿ ಅವರಿಗೆ ವೇದಗಳನ್ನು ಉಪದೇಶಮಾಡುತ್ತಾನೆಯೋ ಅಂತಹ ಆತ್ಮಬುದ್ಧಿಪ್ರಕಾಶನಾದ ದೇವನನ್ನು ಮೋಕ್ಷಾಪೇಕ್ಷೆಯಿಂದ ನಾನು ಶರಣುಹೊಂದುತ್ತೇನೆ.'

ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ। ತಗ್ಂಹ ದೇವಮಾತ್ಮಬುದ್ಧಿಪ್ರಕಾಶಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ॥ ಎಂದು ಶ್ರುತಿಯು ಸ್ಪಷ್ಟ ವಾಗಿ ಶರಣಾಗತಿಯನ್ನು ಘೋಷಿಸುತ್ತದೆ. 'ಅವನನ್ನೇ ಸರ್ವಭಾವ ದಿಂದಲೂ ಶರಣುಹೊಂದು–**ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ**' ಎಂದು ಶ್ರೀಗೀತಾಸ್ಮೃತಿಯು ಸಾರುತ್ತದೆ. 'ಒಂದು ಬಾರಿ ನನ್ನಲ್ಲಿ ಶರಣಾಗತಿಮಾಡಿ ನಾನು ನಿನ್ನವನು ಎಂದು ಬೇಡಿದವನು ಯಾರೇ ಆದರೂ ಅವನಿಗೆ ಎಲ್ಲ ಭೂತಗಳ ದೆಸೆಯಿಂದಲೂ ಅಭಯ ನೀಡುತ್ತೇನೆ.'

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್‌ವ್ರತಂ ಮಮ ॥

ಎಂದು ಶ್ರೀರಾಮದೇವರು ಕಡಲದಡದಲ್ಲಿ ಪ್ರತಿಜ್ಞೆಮಾಡಿದ ಶರಣಾಗತರಕ್ಷಣೆಯ ಘೋಷಣೆ ಸುಪ್ರಸಿದ್ಧವಾಗಿದೆ. ಶ್ರೀಕೃಷ್ಣನು ರಥದಲ್ಲಿ ಕುಳಿತು ಅರ್ಜುನನಿಗೆ ಹೇಳಿದ **ಮಾಮೇಕಂ ಶರಣಂ ವ್ರಜ** (ನನ್ನೊಬ್ಬನನ್ನೇ ಶರಣು ಹೊಂದು) ಎಂಬ ಇದೇ ಅರ್ಥದ ದಿವ್ಯೋಕ್ತಿಯನ್ನು ಸ್ಮರಿಸಬಹುದು.

ಶರಣಾಗತಿತತ್ತ್ವವು ಶ್ರುತಿ-ಸ್ಮೃತಿ-ಇತಿಹಾಸಗಳಲ್ಲಿ ಸಾರಲ್ಪಟ್ಟಿದೆ ಎಂಬುದರಲ್ಲಿ ಸಂದೇಹವಿಲ್ಲ. ಅದರ ವಿಶ್ಲೇಷಣೆಯನ್ನು ಮಾಡಿ ಅದರ ಅಗ್ಗಳಿಕೆಯನ್ನು ಅನಂತರಕಾಲದ ಭಾಗವತಾಚಾರ್ಯರು ಒತ್ತಿ ಹೇಳಿದರೂ ಅದರ ತತ್ತ್ವ ಅತ್ಯಂತಸನಾತನವೆಂಬುದರಲ್ಲಿ ಸಂಶಯವಿಲ್ಲ.

ಶರಣಾಗತಿಯು ಶ್ರೀ ಶಂಕರಭಗವತ್ಪಾದರ ಅದ್ವೈತಸಿದ್ಧಾಂತಕ್ಕೆ ವಿರುದ್ಧ ಎಂದು ಕೆಲವರು ವಾದಿಸುವುದೂ ಸರಿಯಲ್ಲ. ಏಕೆಂದರೆ : ಶ್ರೀ ಶಂಕರರು ಹೇಗೆ ಜ್ಞಾನಿಶ್ರೇಷ್ಠರಾಗಿದ್ದರೋ ಹಾಗೆಯೇ ಭಕ್ತಿಯ ಭಂಡಾರವೂ ಆಗಿದ್ದರು–ಎಂಬುದನ್ನು ಮರೆಯಬಾರದು. "ಈಶ್ವರಾನುಗ್ರಹದಿಂದಲೇ ಅದ್ವೈತವಾಸನೆ ಉಂಟಾಗುತ್ತದೆ." **ಈಶ್ವರಾನುಗ್ರಹಾದೇವ ಪುಂಸಾ-ಮದ್ವೈತವಾಸನಾ**–ಎಂದು ಅವರು ಸಾರಿದ್ದಾರೆ. 'ಓ ಕರುಣಾಮಯನಾದ ನಾರಾಯಣನೇ! ನಿನ್ನ ಚರಣಗಳನ್ನು ನಾನು ಶರಣುಹೊಂದುತ್ತೇನೆ.' **ನಾರಾಯಣ ಕರುಣಾಮಯ ಶರಣಂ ಕರವಾಣಿ ತಾವಕೌ ಚರಣೌ** ಎಂದು ಷಟ್ಪದೀಸ್ತೋತ್ರದಲ್ಲಿ ಆತ್ಮನಿವೇದನ ಮಾಡಿಕೊಂಡಿರುವ ಪರಾ ಭಕ್ತಿಯ ಪೂರ್ಣಾವತಾರ ಅವರು. ಅದ್ವೈತಾಚಾರ್ಯರಾದ ಮಧುಸೂದನ ಸರಸ್ವತಿಗಳು 'ಅಹಂ ಬ್ರಹ್ಮಾಸ್ಮಿ' 'ನಾನು ಬ್ರಹ್ಮನೇ ಆಗಿದ್ದೇನೆ' ಎಂಬುದೂ ಕೂಡ ಶರಣಾಗತಿಯ ಪರಿಪಾಕವೇ ಆಗಿದೆ ಎಂದು ಸಾರುತ್ತಾರೆ ಎಂಬುದನ್ನು ಗಮನಿಸಬೇಕು.

'ಅವನಿಗೇ ನಾನು ಸೇರಿದವನು, ನನ್ನವನೇ ಅವನು, ಅವನೇ ನಾನು' ಎಂಬುದು ಭಗವಂತನಲ್ಲಿ ಮಾಡುವ ಶರಣಾಗತಿಯಲ್ಲಿ ಮೂರು ಬಗೆಗಳು. ಸಾಧನಾಭ್ಯಾಸದ ಪಾಕದಿಂದ ಇವು ಉಂಟಾಗುತ್ತವೆ.

ತಸ್ಯೈವಾಹಂ ಮಮೈವಾಸೌ ಸ ಏವಾಹಮಿತಿ ತ್ರಿಧಾ ।
ಭಗವಚ್ಛರಣತ್ವಂ ಸ್ಯಾತ್ ಸಾಧನಾಭ್ಯಾಸಪಾಕತಃ ॥

ಎನ್ನುತ್ತಾರೆ ಅವರು.

ವಿಶಿಷ್ಟಾದ್ವೈತ ಮತ್ತು ದ್ವೈತಮತಗಳ ಆಚಾರ್ಯರು ಭಕ್ತಿಪ್ರಧಾನರಾಗಿರುವುದರಿಂದ ಭಕ್ತಿಯ ಪ್ರಕಾರಭೇದವಾಗಿರುವ ಅಥವಾ ಅಂಗವಾಗಿರುವ ಶರಣಾಗತಿಯ ಹಿರಿಮೆಯನ್ನು ಅವರು ಒಪ್ಪಿರುವುದು ಸಹಜವೇ ಆಗಿದೆ. **ಪ್ರಪನ್ನಾದನ್ಯೇಷಾಂ ನ ದಿಶತಿ ಮುಕುಂದೋ ನಿಜಪದಂ** ಶರಣಾಗತರಲ್ಲದವರಿಗೆ ಭಗವಂತನು ಪರಮಪದವನ್ನು ಕೊಡುವುದೇ ಇಲ್ಲ–ಎಂಬುದು ಅವರ ಸಿದ್ಧಾಂತವೇ ಆಗಿದೆ.

ಅಂತಹ ಪ್ರಪನ್ನರಿಗೆ ಒಬ್ಬ ಶ್ರೇಷ್ಠ ಉದಾಹರಣೆ ವಿಭೀಷಣ. ಅವನು ತತ್ಕಾಲದಲ್ಲಿ ಶ್ರೀರಾಮದೇವರನ್ನು ಲಂಕಾರಾಜ್ಯಲಾಭಕ್ಕಾಗಿ ಶರಣುಹೊಂದಿದರೂ ಅದು ಕಾಲಕ್ರಮದಲ್ಲಿ ಅವನ ಆತ್ಮೋದ್ಧಾರಕ್ಕೆ ಕಾರಣವಾಯಿತೆಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ : ಅವನು ಧರ್ಮಾತ್ಮ ಮತ್ತು ಬ್ರಹ್ಮದೇವರಿಂದ ಭಗವದ್ಭಕ್ತಿಯನ್ನು ವರವನ್ನಾಗಿ ಪಡೆದಿದ್ದವನು. "ಅರ್ಥಾರ್ಥೀ" ಭಕ್ತರನ್ನೂ ಭಗವಂತನು ಉದಾರಿಗಳೆಂದೇ ಪರಿಗಣಿಸುತ್ತಾನಲ್ಲವೇ?

ಹೊರಗಿನ ದುಷ್ಟಶತ್ರುಗಳಿಗೆ ಹೇಗೋ ಹಾಗೆ ಒಳಗಿನ ದುಷ್ಟಶತ್ರುಗಳಾದ ಕಾಮ-ಕ್ರೋಧಾದಿಗಳಿಗೂ ಅತ್ಯಂತ 'ಭೀಷಣ' (ಭಯಂಕರ)ನಾಗಿದ್ದುದರಿಂದಲೇ ಅವನು ವಿಭೀಷಣ ಎಂಬ ಅನ್ವರ್ಥನಾಮಧೇಯದಿಂದ ಅಲಂಕೃತನಾಗಿದ್ದನು. ಅವನ ಸ್ಮರಣೆಯು ಪ್ರಹ್ಲಾದನ ಸ್ಮರಣೆಯಂತೆ ಅತ್ಯಂತ ಪವಿತ್ರವಾದುದು. ಅವನು ಶರಣಾಗತರಲ್ಲಿ ಶ್ರೇಷ್ಠನು. ಪರಮಭಾಗವತೋತ್ತಮನು–ಎಂಬುದನ್ನು ಈ ಕೆಳಗಿನ ಪ್ರಸಿದ್ಧಶ್ಲೋಕವು ಪ್ರಮಾಣಿಸುತ್ತದೆ.

ಪ್ರಹ್ಲಾದನಾರದಪರಾಶರಪುಂಡರೀಕ–
ವ್ಯಾಸಾಂಬರೀಷಶುಕಶೌನಕಭೀಷ್ಮದಾಲ್ಭ್ಯಾನ್ ।
ರುಕ್ಮಾಂಗದಾರ್ಜುನವಸಿಷ್ಠವಿಭೀಷಣಾದೀನ್
ಧನ್ಯಾನಿಮಾನ್ ಪರಮಭಾಗವತಾನ್ ಸ್ಮರಾಮಿ ॥

–ಹೆಚ್. ಎಸ್. ವರದದೇಶಿಕಾಚಾರ್ಯರಂಗಪ್ರಿಯ
ಅಷ್ಟಾಂಗಯೋಗವಿಜ್ಞಾನ ಮಂದಿರಂ, ಬೆಂಗಳೂರು.

XXI

ರಣರಂಗದಲ್ಲಿ ವಿಭೀಷಣ-ಕುಂಭಕರ್ಣರ ಸಮಾಗಮ

೬೭ನೆಯ ಸರ್ಗದಲ್ಲಿ ೧೪೨ನೆಯ ಶ್ಲೋಕಾನಂತರ ಈ ಪ್ರಕರಣವು ಒಂದು ಪುಸ್ತಕದಲ್ಲಿ ಬಂದಿರುತ್ತದೆ. ನಾವು ಅನುವಾದಿಸುತ್ತಿರುವ ಪುಸ್ತಕ ದಲ್ಲಾಗಲೀ, ಓರಿಯಂಟಲ್ ಇನ್ಸ್ಟಿಟ್ಯೂಟಿನವರು ಪ್ರಕಟಿಸಿರುವ ಪುಸ್ತಕ ದಲ್ಲಾಗಲೀ ಈ ಪ್ರಸಂಗವಿಲ್ಲ. ಗೋವಿಂದರಾಜೀಯ, ತಿಲಕ, ಶಿರೋಮಣಿ ವ್ಯಾಖ್ಯಾನಗಳಲ್ಲಿಯೂ ಈ ಪ್ರಕರಣವು ಪ್ರಸ್ತಾಪಿತವಾಗಿಲ್ಲ. ಆ ಶ್ಲೋಕಗಳ ಅನುವಾದವನ್ನಿಲ್ಲಿ ಓದುಗರ ಅವಗಾಹನೆಗಾಗಿ ಕೊಡಲಾಗಿದೆ.

ಕುಂಭಕರ್ಣನು ಶ್ರೀರಾಮನ ಧನುಷ್ಟಂಕಾರವನ್ನು ಸಹಿಸಿಕೊಳ್ಳಲಾರದೆ ಶ್ರೀರಾಮನ ಕಡೆಗೆ ಧಾವಿಸುತ್ತಾನೆ.

ಪುರಸ್ತಾದ್ರಾಘವಸ್ಯಾರ್ಥೇ ಗದಾಯುಕ್ತೋ ವಿಭೀಷಣಃ ।
ಅಭಿದುದ್ರಾವ ವೇಗೇನ ಭ್ರಾತಾ ಭ್ರಾತರಮಾಹವೇ ।
ವಿಭೀಷಣಂ ಪುರೋ ದೃಷ್ಟ್ವಾ ಕುಮ್ಭಕರ್ಣೋಽಬ್ರವೀದಿದಮ್ ॥

ಆ ಸಮಯದಲ್ಲಿ ಶ್ರೀರಾಮನ ಸಲುವಾಗಿ ಗದಾಪಾಣಿಯಾದ ವಿಭೀಷಣನು ಬಹಳ ವೇಗವಾಗಿ ಮುಂದೆ ಹೋಗಿ ಕುಂಭಕರ್ಣನನ್ನು ಎದುರಿಸುತ್ತಾನೆ. ಹೀಗೆ ಅಣ್ಣ-ತಮ್ಮಂದಿರು ಪರಸ್ಪರವಾಗಿ ಯುದ್ಧಮಾಡಲು ಸನ್ನದ್ಧರಾಗಿ ನಿಲ್ಲುತ್ತಾರೆ. ಆ ಸಮಯದಲ್ಲಿ ಕುಂಭಕರ್ಣನು ವಿಭೀಷಣನಿಗೆ ಹೇಳುತ್ತಾನೆ :

ಪ್ರಹರಸ್ವ ರಣೇ ಶೀಘ್ರಂ ಕ್ಷತ್ರಧರ್ಮೇ ಸ್ಥಿರೋ ಭವ ।
ಭ್ರಾತೃಸ್ನೇಹಂ ಪರಿತ್ಯಜ್ಯ ರಾಘವಸ್ಯ ಪ್ರಿಯಂ ಕುರು ॥

"ವತ್ಸ! ಕ್ಷತ್ರಧರ್ಮದಲ್ಲಿ ಸ್ಥಿರವಾಗಿ ನಿಲ್ಲು. ನನ್ನನ್ನು ಶೀಘ್ರವಾಗಿ ಪ್ರಹರಿಸು. ಭ್ರಾತೃಸ್ನೇಹವನ್ನು ಪರಿತ್ಯಜಿಸಿ ರಾಘವನಿಗೆ ಪ್ರಿಯವಾದುದನ್ನು ಮಾಡು.

ನೀನು ಶ್ರೀರಾಮನಿಗೆ ಶರಣಾಗತನಾಗಿರುವುದರಿಂದ ನಾವೆಲ್ಲರೂ ಮಾಡಬೇಕಾಗಿದ್ದ ಕಾರ್ಯವನ್ನು ನೀನೊಬ್ಬನೇ ಮಾಡಿರುವೆ. ರಾಕ್ಷಸರಲ್ಲಿ ನೀನೊಬ್ಬನೇ ಸತ್ಯ-ಧರ್ಮಗಳ ಪರಿಪಾಲಕನಾಗಿರುವೆ.

ನಾಸ್ತಿ ಧರ್ಮಾಭಿರಕ್ತಾನಾಂ ವ್ಯಸನಂ ತು ಕದಾಚನ ।

ಧರ್ಮದಲ್ಲಿಯೇ ಆಸಕ್ತರಾಗಿರುವವರಿಗೆ ಯಾವಾಗಲೂ ವ್ಯಸನವು ಪ್ರಾಪ್ತವಾಗುವುದಿಲ್ಲ.

ನಮ್ಮ ವಂಶದ ಅಭಿವೃದ್ಧಿಗೆ ನೀನೊಬ್ಬನೇ ಕಾರಣನಾಗುವೆ. ಶ್ರೀರಾಮನ ಅನುಗ್ರಹದಿಂದ ನೀನು ರಾಕ್ಷಸರ ರಾಜ್ಯವನ್ನು ಪಡೆಯುವೆ.

ನಾನು ಸ್ವಭಾವದಿಂದ ಮಹಾಕ್ರೂರನು. ಈ ವಿಷಯವು ನಿನಗೂ ತಿಳಿದಿದೆ. ಆದುದರಿಂದ ನನ್ನ ಹಾದಿಯನ್ನು ಬಿಟ್ಟು ದೂರ ಸರಿ. ಬುದ್ಧಿ ಗೆಟ್ಟಿರುವ ನನ್ನ ಮುಂದೆ ನಿಲ್ಲಬೇಡ. ನಾನು ಯುದ್ಧದಲ್ಲಿ ತೊಡಗಿರುವಾಗ ನಮ್ಮವರಾರು? ಶತ್ರುಗಳಾರು?–ಎಂಬ ವಿವೇಚನೆಯೇ ನನಗಿರುವುದಿಲ್ಲ. ಈ ಸಂದರ್ಭದಲ್ಲಿ ನಿನ್ನನ್ನು ನಾನು ರಕ್ಷಿಸಬೇಕಾಗಿದೆ. ಸತ್ಯವಾದ ಈ ಮಾತನ್ನು ನಾನು ನಿನ್ನೊಡನೆ ಹೇಳುತ್ತಿದ್ದೇನೆ.”

ಧೀಮಂತನಾದ ಕುಂಭಕರ್ಣನು ಹೀಗೆ ಹೇಳಲು ಮಹಾಬಾಹುವಾದ ವಿಭೀಷಣನು ಉತ್ತರಿಸುತ್ತಾನೆ.

ಗದಿತಂ ಮೇ ಕುಲಸ್ಯಾಸ್ಯ ರಕ್ಷಣಾರ್ಥಮರಿಂದಮ ।
ನ ಶ್ರುತಂ ಸರ್ವರಕ್ಷೋಭಿಸ್ತತೋಽಹಂ ರಾಮಮಾಗತಃ ।
ಕೃತಂ ತು ತನ್ಮಹಾಭಾಗ ಸುಕೃತಂ ದುಷ್ಕೃತಂ ತು ವಾ ॥

“ಅರಿಂದಮನೇ! ನಾನು ನಮ್ಮ ಕುಲದ ರಕ್ಷಣೆಗಾಗಿ ಬೇಕಾದಷ್ಟು ಹೇಳಿದೆನು. ಆದರೆ ರಾಕ್ಷಸರಾರೂ ನನ್ನ ಮಾತನ್ನು ಕೇಳಲೇ ಇಲ್ಲ. ಆದುದ ರಿಂದ ನಾನು ಶ್ರೀರಾಮನನ್ನು ಶರಣುಹೊಂದಿದೆನು. ನಾನು ಹೀಗೆ ಮಾಡಿದ್ದು ಒಳ್ಳೆಯದೋ ಅಥವಾ ಕೆಟ್ಟುದೋ ತಿಳಿಯದು. ಶ್ರೀರಾಮ ನನ್ನಂತೂ ನಾನೀಗ ಆಶ್ರಯಿಸಿಬಿಟ್ಟಿದ್ದೇನೆ.”

ಹೀಗೆ ಹೇಳಿ ಕಂಬನಿಗರೆಯುತ್ತಾ ಗದಾಪಾಣಿಯಾದ ವಿಭೀಷಣನು ಏಕಾಂತವಾದ ಸ್ಥಳಕ್ಕೆ ಹೋಗಿ ಚಿಂತೆಯಲ್ಲಿ ಮಗ್ನನಾದನು.

❖

ಶ್ರೀಮಹಾದೇವಕೃತ ಶ್ರೀರಾಮಸ್ತೋತ್ರಮ್ (ಪದ್ಮಪುರಾಣ)

ನಮೋ ಮೂಲಪ್ರಕೃತಯೇ ನಿತ್ಯಾಯ ಪರಮಾತ್ಮನೇ ।
ಸಚ್ಚಿದಾನಂದರೂಪಾಯ ವಿಶ್ವರೂಪಾಯ ವೇಧಸೇ ॥೧॥
ನಮೋ ನಿರಂತರಾನಂದಕಂದಮೂಲಾಯ ವಿಷ್ಣವೇ ।
ಜಗತ್ತ್ರಯಕೃತಾನಂತಮೂರ್ತಯೇ ದಿವ್ಯಮೂರ್ತಯೇ ॥೨॥
ನಮೋ ಮಹೇಂದ್ರಪೂಜ್ಯಾಯ ಶಂಕರಾಯ ಹರಾಯ ಚ ।
ನಮೋ ವಿಷ್ಣುಸ್ವರೂಪಾಯ ಸರ್ವರೂಪ ನಮೋ ನಮಃ ॥೩॥
ಉತ್ಪತ್ತಿಸ್ಥಿತಿಸಂಹಾರಕಾರಿಣೇ ತ್ರಿಗುಣಾತ್ಮನೇ ।
ನಮೋಽಸ್ತು ನಿರ್ಗತೋಪಾಧಿಸ್ವರೂಪಾಯ ಮಹಾತ್ಮನೇ ॥೪॥
ಅನಯಾ ವಿದ್ಯಯಾ ದೇವ್ಯಾ ಸೀತಯೋಪಾಧಿಕಾರಿಣೇ ।
ನಮಃ ಪುಂಪ್ರಕೃತಿಭ್ಯಾಂ ಚ ಯುವಾಭ್ಯಾಂ ಜಗತಾಂ ಕೃತೇ ॥೫॥
ಜಗನ್ಮಾತಾಪಿತೃಭ್ಯಾಂ ಚ ಜನನ್ಯೈ ರಾಘವಾಯ ಚ ।
ನಮಃ ಪ್ರಪಂಚರೂಪಿಣ್ಯೈ ನಿಷ್ಪ್ರಪಂಚಸ್ವರೂಪಿಣೇ ॥೬॥
ನಮೋ ಧ್ಯಾನಸ್ವರೂಪಿಣ್ಯೈ ಯೋಗಿಧ್ಯೇಯಾತ್ಮಮೂರ್ತಯೇ ।
ಪರಿಣಾಮಾಪರೀಣಾಮನಿತ್ಯಾಭ್ಯಾಂ ಚ ನಮೋ ನಮಃ ॥೭॥
ಕೂಟಸ್ಥಬೀಜರೂಪಿಣ್ಯೈ ಸೀತಾಯೈ ರಾಘವಾಯ ಚ ।
ಸೀತಾ ಲಕ್ಷ್ಮೀಃ ಭವಾನ್ ವಿಷ್ಣುಃ ಸೀತಾ ಗೌರೀ ಭವಾನ್ ಶಿವಃ ॥೮॥
ಸೀತಾ ಸ್ವಯಂ ಹಿ ಸಾವಿತ್ರೀ ಭವಾನ್ ಬ್ರಹ್ಮಾ ಚತುರ್ಮುಖಃ ।
ಸೀತಾ ಶಚೀ ಭವಾನ್ ಶಕ್ರಃ ಸೀತಾ ಸ್ವಾಹಾನಲೋ ಭವಾನ್ ॥೯॥
ಸೀತಾ ಸಂಹಾರಿಣೀ ದೇವೀ ಯಮರೂಪಧರೋ ಭವಾನ್ ।
ಸೀತಾ ಹಿ ಸರ್ವಸಂಪತ್ತಿಃ ಕುಬೇರಸ್ತ್ವಂ ರಘೂತ್ತಮ ॥೧೦॥
ಸೀತಾ ದೇವೀ ಚ ರುದ್ರಾಣಿ ಭವಾನ್ ರುದ್ರೋ ಮಹಾಬಲಃ ।
ಸೀತಾ ತು ರೋಹಿಣೀ ದೇವೀ ಚಂದ್ರಸ್ತ್ವಂ ಲೋಕಸೌಖ್ಯದಃ ॥೧೧॥
ಸೀತಾ ಸಂಜ್ಞಾ ಭವಾನ್ ಸೂರ್ಯಃ
ಸೀತಾ ರಾತ್ರಿರ್ದಿವಾ ಭವಾನ್ ।
ಸೀತಾ ದೇವೀ ಮಹಾಕಾಳೀ
ಮಹಾಕಾಲೋ ಭವಾನ್ ಸದಾ ॥೧೨॥

ಸ್ತ್ರೀಲಿಂಗಂ ತು ತ್ರಿಲೋಕೇಷು ಯತ್ತತ್ಸರ್ವಂ ಹಿ ಜಾನಕೀ ।
ಪುನ್ನಾಮಲಾಂಛಿತಂ ಯತ್ತು ತತ್ಸರ್ವಂ ಹಿ ಭವಾನ್ ಪ್ರಭೋ ॥೧೩॥
ಸರ್ವತ್ರ ಸರ್ವದೇವೇಶ ಸೀತಾ ಸರ್ವತ್ರ ಧಾರಿಣೀ ।
ತದಾ ತ್ವಮಪಿ ಚ ತ್ರಾತುಂ ತಚ್ಛಕ್ತಿರ್ವಿಶ್ವಧಾರಿಣೀ ॥೧೪॥
ತಸ್ಮಾತ್ಕೋಟಿಗುಣಂ ಪುಣ್ಯಂ ಯುವಾಭ್ಯಾಂ ಪರಿಚಿಹ್ನಿತಮ್ ।
ಚಿಹ್ನಿತಂ ಶಿವಶಕ್ತಿಭ್ಯಾಂ ಚರಿತಂ ಶಾನ್ತಿದಂ ಪ್ರಭೋ ॥೧೫॥
ಆವಾಂ ರಾಮ ಜಗತ್ಪೂಜ್ಯೌ ಮಮ ಪೂಜ್ಯೌ ಸದಾ ಯುವಾಮ್ ।
ತ್ವನ್ನಾಮ ಜಾಪಿನೀ ಗೌರೀ ತ್ವನ್ಮಂತ್ರಜಾಪವಾನಹಮ್ ॥೧೬॥
ಮುಮೂರ್ಷೋರ್ಮಣಿಕರ್ಣ್ಯಾಂ ತು ಅರ್ಧೋದಕನಿವಾಸಿನಃ ।
ಅಹಂ ದಿಶಾಮಿ ತೇ ಮಂತ್ರಂ ತಾರಕಂ ಬ್ರಹ್ಮದಾಯಕಮ್ ॥೧೭॥
ಅತಸ್ತ್ವಂ ಜಾನಕೀನಾಥ ಪರಂ ಬ್ರಹ್ಮಾಸಿ ನಿಶ್ಚಿತಮ್ ।
ತ್ವನ್ಮಯಾಮೋಹಿತಾಸ್ಸರ್ವೇ ನ ತ್ವಾಂ ಜಾನಂತಿ ತತ್ತ್ವತಃ ॥೧೮॥

ಶ್ರೀರಾಮನೇ ಹೇಳುವ ಫಲಶ್ರುತಿ :

ಶೃಣುಧ್ವಂ ದೇವತಾ ಯೋ ಮಾಂ ಪ್ರತ್ಯಹಂ ಸಂಸ್ತುವಿಷ್ಯತಿ ।
ಸ್ತವೇನ ಶಂಭುನೋಕ್ತೇನ ದೇವತುಲ್ಯೋ ಭವೇನ್ನರಃ ॥೧೯॥
ವಿಮುಕ್ತಸ್ಸರ್ವಪಾಪೇಭ್ಯೋ ಮತ್ಸ್ವರೂಪಂ ಸಮಶ್ನುತೇ ।
ರಣೇ ಜಯಮವಾಪ್ನೋತಿ ನ ಕ್ವಚಿತ್ಪ್ರತಿಹನ್ಯತೇ ॥೨೦॥
ಭೂತವೇತಾಳಕೃತ್ಯಾಭಿರ್ಗ್ರಹೈಶ್ಚಾಪಿ ನ ಬಾಧ್ಯತೇ ।
ಅಪುತ್ರೋ ಲಭತೇ ಪುತ್ರಂ ಪತಿಂ ವಿಂದತಿ ಕನ್ಯಕಾ ॥೨೧॥
ದರಿದ್ರಃ ಶ್ರಿಯಮಾಪ್ನೋತಿ ಸತ್ಯವಾನ್ ಶೀಲವಾನ್ ಭವೇತ್ ।
ಆತ್ಮತುಲ್ಯಸುತಃ ಶ್ರೀಮಾನ್ ಜಾಯತೇ ನಾತ್ರ ಸಂಶಯಃ ॥೨೨॥
ನಿರ್ವಿಘ್ನಂ ಸರ್ವಕಾರ್ಯೇಷು ಸರ್ವಾರಂಭೇಷು ವೈ ನೃಣಾಂ ।
ಯಂ ಯಂ ಕಾಮಯತೇ ಮರ್ತ್ಯಃ ತಂ ಲಭೇತ ಮನೋರಥಂ ॥
ಷಣ್ಮಾಸಾನ್ಮುಕ್ತಿಮಾಪ್ನೋತಿ ಸ್ತವಸ್ಯಾಸ್ಯ ಪ್ರಸಾದತಃ ।
ಯತ್ಪುಣ್ಯಂ ಸರ್ವತೀರ್ಥೇಷು ಸರ್ವಯಜ್ಞೇಷು ಯತ್ಫಲಂ ।
ತತ್ಫಲಂ ಕೋಟಿಗುಣಿತಂ ಸ್ತವೇನಾನೇನ ಲಭ್ಯತೇ ॥೨೪॥

⌘

License No. WPP-13 Licensed to Post without pre-payment of postage
Posted at Thayagaraja Nagar Post Office
Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.